ಕರ್ನಾಟಕ ಸರ್ಕಾರ

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು ಸಂಪುಟ-೭

ಲೇಖಕರು

## ಪಂ. ದೀನ್ ದಯಾಳ್ ಉಪಾಧ್ಯಾಯ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಬೆಂಗಳೂರು, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು-೫೬೦ ೦೫೬

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೯೭

ವಿಚಾರ ಸಾಹಿತ್ಯಮಾಲೆ – ೯೫

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೭

**ಸಂಪಾದಕ ಮಂಡಳಿ**

ಡಾ. ಪ್ರಧಾನ್ ಗುರುದತ್ತ (ಅಧ್ಯಕ್ಷ)

ಶ್ರೀ ಎಸ್.ಆರ್. ರಾಮಸ್ವಾಮಿ (ಸದಸ್ಯರು)

ಡಾ. ಜಿ.ಬಿ. ಹರೀಶ್ (ಸದಸ್ಯರು)

ಶ್ರೀ ವಾದೀರಾಜ್ (ಸದಸ್ಯರು)

ಶ್ರೀ ಪಿ.ಎಂ. ರಮೇಶ್ (ಸದಸ್ಯರು)

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು

## ಸಂಪುಟ ೭

ಪಂ॥ ದೀನ್ ದಯಾಳ್ ಉಪಾಧ್ಯಾಯ

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**DĪN DAYĀL UPĀDHYĀYA AVARA SAMAGRA BAREHAGAḶU**
**(Samputa 7) (Complete Works of Pandit Deendayal Upadhaya, Vol. 7)**
Published by **Sri P. Narayana Swamy, Registrar, Kuvempu Bhasha Bharathi Pradhikara;** Kalagrama, Jnanabharathi, Behind Bangalore University Campus, Mallattahalli, Bangalore - 560 056 ; 2015 ; Pp. viii + 245 ; Price : Rs. 125/-

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಪ್ರಥಮ ಮುದ್ರಣ : ೨೦೧೫
ಪುಟಗಳು : viii + ೨೪೫
ಬೆಲೆ : ರೂ. ೧೨೫/–
ಪ್ರತಿಗಳು : ೧೦೦೦

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬

ಮುಖಪುಟ ವಿನ್ಯಾಸ ಮತ್ತು ಚಿತ್ರ : **ವಿಶ್ವನಾಥ್ ಶೆಟ್ಟಿಗಾರ್**

**ISBN : 978-93-80415-19-2**

ಮುದ್ರಕರು :
**ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಅಡ್ಡರಸ್ತೆ,
ಲಾಲ್‌ಬಾಗ್ ರೋಡ್, ಕೆ.ಎಸ್. ಗಾರ್ಡನ್,
ಬೆಂಗಳೂರು – ೫೬೦೦೨೭. ದೂ : ೨೨೨೩೪೦೬೬

# ಪರಿವಿಡಿ

## ಸಂಪುಟ ೭


೧. ಆಧುನಿಕ ಸಮಾಜದಲ್ಲಿ ೧

೨. ಒಂದು ಸ್ಮರಣೀಯ ಪತ್ರ ೧೬

೩. ಯಾಂತ್ರೀಕರಣಕ್ಕೆ ಹೊರತಾದ ಬೇಸಾಯಪದ್ಧತಿ ೨೨

೪. ಆದರ್ಶವಾದ, ತಾಂತ್ರಿಕ ವಿಜ್ಞಾನ ಮತ್ತು ಅಧಿಕಾರ ವಿಕೇಂದ್ರೀಕರಣ ೨೯

೫. ನಮ್ಮ ರಾಷ್ಟ್ರೀಯ ಜೀವನದಲ್ಲಿ ಶ್ರೀಕೃಷ್ಣನ ಸ್ಥಾನ ೩೧

**ಅನು : ಬಿ.ಎಸ್. ವಿಜಯಲಕ್ಷ್ಮಿ**

೬. ಒಂದು ಹೊಸ ಜಲಿಯವಾಲಾ ೮೭

**ಅನು : ಮೀರಾಮೂರ್ತಿ**

೭. ಆಹಾರ ಮತ್ತು ರೈತ : ಸರ್ಕಾರದಿಂದ ಕಡೆಗಣನೆಗೆ ಒಳಗಾಗುತ್ತಿರುವ ಬೇಸಾಯ ೧೬೭

೮. ಆಹಾರ ಮತ್ತು ರೈತ : ಸರ್ಕಾರದಿಂದ ಕಡೆಗಣನೆಗೆ ಒಳಗಾಗುತ್ತಿರುವ ಬೇಸಾಯ ೧೭೫

೯. ಯೋಜನೆಯತ್ತ ಭಾರತೀಯ ಜನಸಂಘದ ವಿಭಿನ್ನ ನಡೆ ೧೯೮

೧೦. ಭಾರತೀಯ ಜನಸಂಘ : ಯೋಜನೆಗೆ ವಾಸ್ತವಿಕ ಮಾರ್ಗ ೨೦೪

೧೧. ಪ್ರತಿ ಮತದಾರನೂ ನಿರ್ವಹಿಸಬೇಕಾದ ಪಾತ್ರವೊಂದಿದೆ ೨೦೫

೧೨. ಅವರು ಹೇಗೆ ಬದುಕಬೇಕು ಎನ್ನುವುದನ್ನು ಜನರಿಗೆ ಕಲಿಸಿಕೊಟ್ಟರು ೨೧೩

೧೩. ಸಂಯುಕ್ತ ರಾಷ್ಟ್ರೀಯತೆ ಪರಿಕಲ್ಪನೆಯ ಬಂಜೆತನ ೨೧೬

೧೪. ಗೋವಾದಲ್ಲಿನ ಚಟುವಟಿಕೆಗಳು ವಿಶ್ವಸಂಸ್ಥೆಯನ್ನು ಬಲಪಡಿಸುತ್ತವೆ, ದುರ್ಬಲಗೊಳಿಸುವುದಿಲ್ಲ ೨೧೮

೧೫. ಇದು ರಾಷ್ಟ್ರೀಯತೆಯೇ? ೨೧೯

೧೬. ಸರ್ಕಾರದ ಆರ್ಥಿಕ ನೀತಿಯ ಸ್ವಯಂ–ಸೋಲು ೨೨೫

೧೭. ಮುಸ್ಲಿಮರು ಮತ್ತು ಮುಸ್ಲಿಮೇತರರ ಆಧಾರದಲ್ಲಿ
ಜಿನ್ನಾ ವಿಭಜನೆ ಬಯಸಿದ್ದರು ೨೨೭

೧೮. ಬೃಹತ್ ಪ್ರಮಾಣದ ವಿದೇಶಿ ನೆರವಿನ ವಿರುದ್ಧ
ಉಪಾಧ್ಯಾಯರ ಎಚ್ಚರಿಕೆ ೨೩೨

೧೯. ಮುಖರ್ಜಿ ಮತ್ತು ಟಂಡನ್ ೨೩೪

೨೦. ಕಾನ್ಪುರದಲ್ಲಿ ಭಾರತೀಯ ಜನಸಂಘದ ನಾಯಕರಿಗೆ ಸ್ವಾಗತ ೨೩೮


**ಅನು : ಹೇಮಲತಾ**

# ದೀನ್ ದಯಾಳ್ ಉಪಾಧ್ಯಾಯ
# ಅವರ ಸಮಗ್ರ ಬರೆಹಗಳು
## ಸಂಪುಟ ೭

# ಆಧುನಿಕ ಸಮಾಜದಲ್ಲಿ

ಆಧುನಿಕ ಸಮಾಜದಲ್ಲಿ ಕೃಷಿಗಾಗಿ ತೊಡಗಿಸುತ್ತಿರುವ ಶ್ರಮ, ಶ್ರದ್ಧೆ, ಹಣಗಳ ಉಪಯುಕ್ತತೆಯನ್ನಾಗಲೀ ಅಪೇಕ್ಷೆಯನ್ನಾಗಲೀ ನಾವು ನಿರಾಕರಿಸುತ್ತಿಲ್ಲ. ಆದರೆ ನಾವು ಸಂಪೂರ್ಣವಾಗಿ ಅವುಗಳನ್ನೇ ಅವಲಂಬಿಸಬಾರದು. ಸ್ವದೇಶೀ ಹಾಗೂ ಪಾರಂಪರಿಕ ಪದ್ಧತಿಗಳನ್ನು ಬೆಳೆಸಿಕೊಳ್ಳೋಣ. ಅಂದರೆ ಕಾಂಪೋಸ್ಟ್ ಮತ್ತು ಎಲೆಗೊಬ್ಬರ, ಪರ್ಯಾಯ ಬೆಳೆ ಬೇಸಾಯ, ಸಣ್ಣ ನೀರಾವರಿ ಮತ್ತು ಒಣ ಬೇಸಾಯ ಪದ್ಧತಿಗಳು ನಮ್ಮನ್ನು ಮುಂದಕ್ಕೆ ಕರೆದೊಯ್ಯುತ್ತವೆ ಮಾತ್ರವಲ್ಲ ಶೀಘ್ರವಾಗಿಯೂ ಕರೆದೊಯ್ಯುತ್ತವೆ. ಪ್ರಸ್ತುತದಲ್ಲಿ ಯೋಜನಾ ಆಯೋಗವು ಅಮೆರಿಕಾದಿಂದ ಬರುವ ರಸಗೊಬ್ಬರಗಳನ್ನು ನಂಬಿ ನಿಂತಿದೆ. ವಾರ್ಷಿಕ ಯೋಜನೆಯ ೩೩ನೇ ಪುಟದಲ್ಲಿ ಬೇರೆಲ್ಲಾ ಸಂಗತಿಗಳಿಗೂ ಗರಿಷ್ಠ ಧ್ಯೇಯ ಮಿತಿಯನ್ನು ನಿಗದಿಸಲಾಗಿದೆಯಾದರೂ, ರಸಗೊಬ್ಬರಗಳ ವಿಷಯದಲ್ಲಿ ಅಂದಾಜು ಲೆಕ್ಕಮಾಡಿರುವ ಅಗತ್ಯ ಪ್ರಮಾಣವನ್ನು ನಮೂದಿಸಲಾಗಿದೆ. ೧೯೬೫-೬೬ರ ಸಾಲಿನಲ್ಲಿ ನೈಟ್ರೋಜನಸ್ ಫರ್ಟಿಲೈಸರ್ಸ್ ಸಸಾರ ಜನಕ ರಸಗೊಬ್ಬರಗಳ ಉತ್ಪಾದನೆಯನ್ನು ೬ ಲಕ್ಷ ಟನ್‌ಗಳಷ್ಟೆಂದು ಅಂದಾಜು ಮಾಡಲಾಗಿದೆ. ಆದರೆ ಬರುವ ಮುಂದಿನ ವರ್ಷಕ್ಕೆ ಅಗತ್ಯದ ಪ್ರಮಾಣ ೧೦ ಲಕ್ಷ ಟನ್‌ಗಳೆಂದು ಅಂದಾಜು ಮಾಡಲಾಗಿದೆ. ಒಂದು ವರ್ಷದಲ್ಲಿ ಅಗತ್ಯ ಪ್ರಮಾಣದಷ್ಟನ್ನೂ ಭಾರತದಲ್ಲೇ ಉತ್ಪಾದಿಸಬೇಕೆಂದೇನಿಲ್ಲ. ಅಮೆರಿಕದ ಮೇಲಿನ ಅವಲಂಬನೆ ಪಿಎಲ್ ೪೮೦ರ ಆಮದಿನ ವ್ಯಥೆಯ ಕಥೆಯನ್ನೇ ಪುನರಾವರ್ತನೆ ಮಾಡುತ್ತದೆ.

೧೯೫೧ರಲ್ಲಿ ನಾವು ಗೋಧಿಯನ್ನು ಕೇವಲ ಅಭಾವದ ಆಪತ್ತನ್ನು ನಿರ್ವಹಿಸುವಂಥ ದಾಸ್ತಾನಿಗಾಗಿ ಆಮದು ಮಾಡಿಕೊಂಡಿದ್ದೆವು. ಆದರೆ ಆತ್ಯಂತಿಕವಾಗಿ ಪಿಎಲ್ ೪೮೦ ಆಮದು ನಮ್ಮ ಆಹಾರ ನೀತಿಯ ಅಪರಿಹಾರ್ಯ ಅಂಶವಾಗಿ ಪರಿಣಮಿಸಿಬಿಟ್ಟಿತು.

ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳನ್ನು ಕೃಷಿ ಕಾರ್ಯಕ್ರಮಗಳಲ್ಲಿ ಸೇರ್ಪಡೆ ಮಾಡಲಾಗಿದೆಯಾದರೂ ಬೃಹತ್ ಪ್ರಮಾಣದ ಭಾರೀ ನೀರಾವರಿ ಯೋಜನೆಗಳನ್ನು ವಿದ್ಯುಚ್ಛಕ್ತಿ ಕಾರ್ಯಕ್ರಮಗಳೊಂದಿಗೆ ಗುರುತಿಸಲಾಗಿದೆ. ಸಣ್ಣ ನೀರಾವರಿ ಯೋಜನಾ ಕಾರ್ಯಕ್ರಮಗಳ ಉಪಯುಕ್ತತೆಯನ್ನು ವ್ಯಾಪಕವಾಗಿ

ಗುರುತಿಸಲಾಗಿರುವುದು ಸಂತಸದ ವಿಷಯ ೧೯೬೫–೬೬ನೇ ಸಾಲಿನಲ್ಲಿ ೮೭–೯೪ ಕೋಟಿ ರೂ.ಗಳ ಮೊತ್ತವನ್ನು ಸಣ್ಣ ನೀರಾವರಿ ಕಾಮಗಾರಿಗಳಿಗೆಂದು ಮೀಸಲಿಡಲಾಗಿದೆ. ಒಂದು ಲಕ್ಷ ಪಂಪ್ ಸೆಟ್‌ಗಳು ಹಾಗೂ ಕೊಳವೆಬಾವಿಗಳನ್ನು ಕಾರ್ಯ ಪ್ರವೃತ್ತಗೊಳಿಸಲು ಅಂದಾಜು ಮಾಡಲಾಗಿದೆ. ಆದರೆ ಪಂಪ್‌ಗಳ ಹಾಗೂ ವಿದ್ಯುಚ್ಛಕ್ತಿ ಸಂಪರ್ಕಗಳ ಕೊರತೆ ಶೋಚನೀಯವಾಗಿದೆ. ಸರ್ಕಾರದ ಅಪೇಕ್ಷೆ, ಯೋಜನೆ ಇದ್ದರೂ ಸುಲಭ ಲಭ್ಯವಲ್ಲ. ಸರ್ಕಾರವು ಈ ನಿಟ್ಟಿನಲ್ಲಿ ದೀರ್ಘ ಕಾಲೀನ ನಿರ್ಣಯಗಳನ್ನು ತೆಗೆದುಕೊಂಡ ಹೊರತು, ಪಂಪ್‌ಸೆಟ್‌ಗಳು ಮತ್ತು ಇಂಜಿನ್‌ಗಳ ಉತ್ಪಾದಕರು ಈ ಕಾರ್ಯಕ್ರಮ ವಿಸ್ತರಣೆಗೆ ಅಗತ್ಯವಾದ ಬಂಡವಾಳ ತೊಡಗಿಸುವುದು ಸಾಧ್ಯವಾಗಲಾರದು ಇವುಗಳ ಬೇಡಿಕೆಯಲ್ಲಿನ ಹಠಾತ್ ಏರಿಕೆಗೆ ಬರಗಾಲದ ಪರಿಸ್ಥಿತಿ ಮತ್ತು ಸರ್ಕಾರದ ತತ್ಕಾಲೀನ ನಿರ್ಣಯಗಳು ಕಾರಣವೆಂಬ ಭಾವನೆಯೂ ಇದೆ. ಅಧಿಕಾರಿಗಳ, ಪ್ರಾಧಿಕಾರ ವರ್ಗದವರ ಅಭಿಪ್ರಾಯ ಚಿಂತನೆಗಳ ಪ್ರಕಾರ ಭಾರೀ ನೀರಾವರಿ ಯೋಜನೆಗಳಿಗೆ ಇನ್ನೂ ಮಹತ್ವದ ಮನ್ನಣೆ ಇದೆ.

ನೀರಾವರಿಯ ಶಕ್ತಿ ಸಂಚಯ ಮತ್ತು ಅದರ ಬಳಕೆಗಳಲ್ಲಿ ಅಂತರ ಹೆಚ್ಚುತ್ತಲೇ ಹೋಗುವುದು ಮುಂದುವರೆದಿದೆ. ಭಾರೀ ನೀರಾವರಿ ಕಾಮಗಾರಿಗಳಲ್ಲಿ ಸಾಕಷ್ಟು ಕೊರತೆಗಳಿರುವುದಲ್ಲದೆ, ಸಣ್ಣ ನೀರಾವರಿ ಕೆಲಸಗಳ ವಿಷಯದಲ್ಲಿ ನಿಗದಿತ ಧ್ಯೇಯಗಳನ್ನು ಮೀರಿಯೂ ಸಾಧನೆ ಆಗಿದೆ. ಸಣ್ಣ ನೀರಾವರಿಗಳಿಗೆ ಮೂರನೇ ಯೋಜನೆಯಲ್ಲಿ ನಿಗದಿತ ಭೂಮಿಯ ೧೨.೮ಮಿಲಿಯನ್‌ನ ಎಕರೆಗಳಷ್ಟು, ಹೆಚ್ಚುವರಿ ಪ್ರದೇಶವು ಪ್ರಯೋಜನ ಪಡೆಯುವುದೆಂದು ಅಂದಾಜು ಮಾಡಲಾಗಿತ್ತು. ಆದರೆ ೧೩.೧ ಮಿಲಿಯನ್ ಎಕರೆಗಳಷ್ಟು ಭೂಮಿಯಲ್ಲಿ ಪ್ರಯೋಜನ–ಸಾಧನೆಗಳಾದುವು! ಭಾರೀ ನೀರಾವರಿಗಳಿಗೆ ಒಲವು ತೋರುವುದನ್ನು ಮುಂದುವರಿಸುವುದನ್ನು ಬಿಟ್ಟು ಬಿಡುವುದೇ ಅಪೇಕ್ಷಣೀಯ.

ಆಯೋಗವು ವಿದ್ಯುತ್ ಶಕ್ತಿ ಅಭಾವವು ಕಡಿಮೆಯಾಗುತ್ತಾ ಮುಂಬರುವ ತಿಂಗಳುಗಳಲ್ಲಿ ಜಟಿಲ ಸಮಸ್ಯೆ ಸರಳವಾಗುವುದೆಂದು ಆಶಿಸುತ್ತದೆ. ಈ ವರ್ಷ ಮಳೆ ಬೀಳುವುದು ಮಾಮೂಲಿನಂತಿದ್ದಲ್ಲಿ ಈ ಆಶಾವಾದವು ಸಕಾರಣದ್ದಾಗುತ್ತದೆ. ಲಭ್ಯವಿರುವ ವಿದ್ಯುತ್ ಶಕ್ತಿಯ ಉತ್ತಮ ಬಳಕೆಗಾಗಿ ಪ್ರಾದೇಶಿಕ ಗ್ರಿಡ್‌ಗಳನ್ನು ನಿರ್ಮಿಸಲು ದಿ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ನಿರ್ಧರಿಸಿದೆ. ಇದು ಸಾಧ್ಯವಾಗುವುದಿದ್ದಲ್ಲಿ ಒಳ್ಳೆಯದೇ ಸರಿ. ಆದರೆ ವಿವಿಧ ನಮೂನೆಯ ಶಕ್ತಿ ಮೂಲಗಳ ಸಂತುಲಿತ (ಸಮತೋಲನ ಸಹಿತ)ವಾದ ಅಭಿವೃದ್ಧಿಯ ಅಗತ್ಯವಿದೆ. ಹೈಡೆಲ್ ವಿದ್ಯುಚ್ಛಕ್ತಿಯ ಮೇಲಿನ ನಮ್ಮ ಅತಿಯಾದ ಅವಲಂಬನೆಯು ಈ ವರ್ಷದಲ್ಲಿ ಅನುಭವಕ್ಕೆ ಬಂದ ಮೊತ್ತರೂಪದ ತೀವ್ರ ಕೊರತೆಗೆ ಕಾರಣವಾಯಿತು.

೪೭೮ ಕೋಟಿ ರೂ.ಗಳ ಅಂದಾಜು ವೆಚ್ಚವನ್ನು ೧೯೬೬–೬೭ನೇ ಸಾಲಿಗೆ

ಸೂಚಿಸಲಾಗಿದೆ. ೧೯೬೫–೬೬ನೇ ಸಾಲಿನಲ್ಲಿ ನಿರೀಕ್ಷಿತ ವೆಚ್ಚದ ಮೊತ್ತಕ್ಕಿಂತ ೨೩ ಕೋಟಿ ರೂ.ಗಳ ಹೆಚ್ಚುವರಿ ಮೊತ್ತ ಇದಾಗಿದೆ. ಉಕ್ಕು ಕೈಗಾರಿಕೆಗೆ ಸರ್ವ ಪ್ರಥಮ ಆದ್ಯತೆ ನೀಡಲಾಗಿದೆ. (೧೧೨ ಕೋಟಿ ರೂ.ಗಳನ್ನು ಕೊಡಮಾಡಲಾಗಿದೆ) ಭಾರೀ ಲೋಕೋಪಯೋಗಿ ಮತ್ತು ಯಂತ್ರ ನಿರ್ಮಾಣ ಕೈಗಾರಿಕೋದ್ಯಮಗಳಿಗೆ (೯೮ ಕೋಟಿರೂ.ಗಳು), ಗಣಿ ಖನಿಜಗಳ ಅಭಿವೃದ್ಧಿಗೆ, ಕಬ್ಬಿಣವಲ್ಲದ ಲೋಹಗಳಿಗೆ (೫೪ ಕೋಟಿ ರೂ.ಗಳು), ತೈಲ ನಿಕ್ಷೇಪಗಳಿಂದ ತೈಲ ತೆಗೆಯುವುದು, ಶುದ್ಧೀಕರಣ (೭೨ ಕೋಟಿಗಳು) ಮತ್ತು ರಸಗೊಬ್ಬರಗಳು. (೧೭ ಕೋಟಿಗಳು) ಈ ಆದ್ಯತೆಗಳ್ನು ಒಪ್ಪಿಕೊಳ್ಳುತ್ತೇವೆ ಹೌದಾದರೂ ಅವುಗಳನ್ನು ಸಣ್ಣ ಪ್ರಮಾಣದ ಉದ್ಯಮಗಳ ವೆಚ್ಚದ ಪ್ರಮಾಣದೊಳಗೆ ಬೆಳೆಸಬೇಕಾಗುತ್ತದೆಂಬುದನ್ನು ಆಲೋಚಿಸುವುದಿಲ್ಲ. ಸಣ್ಣ ಪ್ರಮಾಣದ ಹಾಗೂ ಗ್ರಾಮೀಣ ಕೈಗಾರಿಕೆಗಳಿಗೆ ೧೯೬೫–೬೬ರಲ್ಲಿದ್ದ ೫೪.೨೦ ಕೋಟಿ ರೂ.ಗಳಿಂದ ೬೬–೬೭ನೇ ಸಾಲಿಗೆ ೪೭.೦೪ ಕೋಟಿಗಳನ್ನು ಮಾತ್ರ ತೆಗೆದಿರಿಸಲಾಗಿದೆ. ಇದು ನಿರುದ್ಯೋಗ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ ಹಾಗೂ ಕೃಷಿಯ ಮೇಲೆ ನೀಡುವ ಉತ್ತೇಜನದ ಪ್ರಯೋಜನಗಳೂ ಇಲ್ಲವಾಗುತ್ತವೆ.

**ಶಿಕ್ಷಣ ವೆಚ್ಚ ಕಡಿತ!**

ಪಾಕಿಸ್ತಾನದೊಡನೆ ಸಂಘರ್ಷ ಸಂಭವಿಸಿದ ಹೊಸತರಲ್ಲಿ (ನಮಗೆ) ತಾಂತ್ರಿಕ ಸ್ವ(ದೇಶೀ) ಸಾಮರ್ಥ್ಯ ಮತ್ತು ಆಮದು ಇಳಿಕೆಯ ಅಗತ್ಯ ಮನವರಿಕೆಯಾಗಿತ್ತು. ಆದರೂ ವಿದೇಶೀ ನೆರವು ಪುನರಾರಂಭವಾಗ ತೊಡಗಿದನಂತರ ನಮ್ಮ ಯೋಜಕರು (ಆರ್ಥಿಕ ಚಿಂತಕರು) ಪ್ರಸನ್ನ ಚಿತ್ತರಾಗಿಬಿಟ್ಟರು. ನಾವು ಪುನಃ ಅತೀ ದುಬಾರಿಯೂ ಆದಾಗ್ಯೂ ತುಂಬ ಸೂಕ್ತವಲ್ಲದುದೂ ಆದ ಪಾಶ್ಚಾತ್ಯ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳಲು ಉತ್ಸುಕತೆಯಿಂದ ಧಾವಿಸುತ್ತಿದ್ದೇವೆ. ಕೈಗಾರಿಕೆಗೆ ಬೇಕಾದ ಕಚ್ಚಾ ವಸ್ತುಗಳ ವಿಪರೀತ ಕೊರತೆ ಮತ್ತು ವಿದೇಶೀ ವಿನಿಮಯದ ಕಷ್ಟಗಳಿಂದಾಗಿ ಹಲವಾರು ಕೈಗಾರಿಕೋದ್ಯಮಗಳಲ್ಲಿ ಉತ್ಪಾದನೆಯು ಕುಸಿದಿದೆ. ಆದರೆ ಮೊದಲೆಲ್ಲ ಜನ ಪರ್ಯಾಯ ಉಪ ವಿಧಾನಗಳನ್ನೂ ವೃದ್ಧಿಪಡಿಸುತ್ತಿದ್ದರು, ೧೯೬೬–೬೭ರ ಉತ್ಪಾದನಾ ಗುರಿಗಳು ಈ ಅಂಶಗಳನ್ನು ಆಧರಿಸಿದಂತೆ ತೋರುವುದಿಲ್ಲ. ಬದಲಿಗೆ ತೀರಾ ಹೆಚ್ಚಿನ ಪ್ರಮಾಣದಲ್ಲಿ ನಿರೀಕ್ಷಿತ ಗುರಿಗಳನ್ನು ನಿಗದಿಸಲಾಗಿದೆ ಹಾಗೂ ಈ ಹಿಂದಿನಂತೇ ಅವುಗಳನ್ನು ಸಾಧಿಸಲಾಗುವುದಿಲ್ಲವೆಂದೇ ತೋರುತ್ತಿದೆ.

ಹೊಸ ಯೋಜನೆಯಂತೂ ಶಿಕ್ಷಣ ಕ್ಷೇತ್ರಕ್ಕೆ ಭಾರೀ ಹೊಡೆತವನ್ನೇ ಕೊಟ್ಟಿದೆ. ಕಳೆದ ವರ್ಷದ ಬಜೆಟ್‌ನಲ್ಲಿದ್ದರೂ ೧೮೦.೧೩ ಕೋಟಿಗಳಿಗೆ ಪ್ರತಿಯಾಗಿ ಕೇವಲ ೯೮.೮೩ ಕೋಟಿ ರೂ.ಗಳನ್ನು ಮಾತ್ರವೇ ಶಿಕ್ಷಣಕ್ಕೆ ವೆಚ್ಚ ಮೊತ್ತವೆಂದು ಕೊಡಮಾಡಲಾಗಿದೆ. ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ೨೨.೬೭ ಕೋಟಿ ರೂ.ಗಳಿಂದ

೨೫.೭೭ ಕೋಟಿ ರೂ.ಗಳಿಗೆ ಏರಿಸಲಾಗಿದ್ದರೆ, ಪ್ರಾಥಮಿಕ ಶಿಕ್ಷಣಕ್ಕೆ ೬೦.೩೫ ಕೋಟಿ ರೂ.ಗಳಿಂದ ೧೮.೬೪ ಕೋಟಿ ರೂ.ಗಳಿಗೆ ಮಾಧ್ಯಮಿಕ ಶಿಕ್ಷಣಕ್ಕೆ ೩೩.೩೮ ಕೋಟಿ ರೂ.ಗಳಿಂದ ೧೩.೦೨ ಕೋಟಿ ರೂ.ಗಳಿಗೆ ಇಳಿಸಲಾಗಿದೆ. ಯೋಜನಕಾರರು ಶಿಕ್ಷಣವು ಒಂದು ನಿರಂತರ ಪ್ರಕ್ರಿಯಾ ಪರಂಪರೆ ಎಂಬುದನ್ನು ಮರೆತಿದ್ದಾರೆ. ಮೂರನೇ ಯೋಜನೆಯಲ್ಲಿ ಗುರಿ ನಿಗದೀಕರಣಕ್ಕಿಂತ ಹೆಚ್ಚಿನ ಗಮನ ಹರಿಸಲಾಗಿತ್ತೇನೋ ನಿಜ. ಆದರೂ ಆ ಸಂಗತಿಯೊಂದನ್ನೇ ಆಧರಿಸಿ ಶೈಕ್ಷಣಿಕ ಸೌಲಭ್ಯಗಳ ಮಾಮೂಲು ಮಾದರಿಯ ವಿಸ್ತರಣಾ ಪ್ರಕ್ರಿಯೆಗೆ ನಿಲುಗಡೆ ನೀಡಬೇಕಾದ ಅಗತ್ಯವೇನೂ ಇಲ್ಲ. ಒಂದು ವಿರಾಮ ನೀಡಿದರೆ ಹಿಂದಿನ ಪ್ರಯತ್ನಗಳು ವ್ಯರ್ಥವಾದಂತೇ ಸರಿ. ಯೋಜನಾ ಆಯೋಗವೇ ಒಪ್ಪಿಕೊಂಡಿರುವಂತೆ ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಳು ಲಭ್ಯವಿರುವ ಜನ ಹಾಗೂ ಸಾಧನೋಪಕರಣಗಳನ್ನು ದುಡಿಸಿಕೊಂಡುದುದರಿಂದ ಮಾಡಿದವು ಮತ್ತು ಶಿಕ್ಷಣದ ಪ್ರಮಾಣವನ್ನು ಸ್ವಲ್ಪಮಟ್ಟಿಗೆ ಕಡಿಮೆಗೊಳಿಸಿದೆ. ಆದರೆ ಈ ಕೊರತೆ/ನ್ಯೂನತೆಯನ್ನು ಸರಿದೂಗಿಸಲು ಯಾವುದೇ ಪ್ರಯತ್ನವನ್ನು ಮಾಡಿದಂತೆ ಕಂಡುಬರುವುದಿಲ್ಲ.

### ಯಾಂತ್ರಿಕ ವಿಧಾನದ ಕುಟುಂಬ ಯೋಜನೆಯ ದೋಷ

ಒಂದು ಗಣನೀಯ ಪ್ರಮಾಣದಲ್ಲಿ ಕಾರ್ಯಕ್ರಮ, ವೆಚ್ಚ ನಿಗದಿ ಧ್ಯೇಯಗಳಲ್ಲಿ ಏರಿಕೆ ಇರುವುದೆಂದರೆ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಮಾತ್ರ. ೧೯೬೫–೬೬ರಲ್ಲಿದ್ದ ೮ ಕೋಟಿಗಳಿಂದ ೧೯೬೬–೬೭ರಲ್ಲಿ ೧೫ ಕೋಟಿ ರೂ.ಗಳಿಗೆ ಮಂಜೂರಾತಿ ನೀಡಲಾಗಿದೆ. ಸರ್ಕಾರವು ಈ ಕಾರ್ಯಕ್ರಮದ ಬಗೆಗೆ ಮರು ಚಿಂತನೆ ನಡೆಸುವುದು ಅಗತ್ಯವಾಗಿದೆ. ಅದರಲ್ಲೂ ಸಂತಾನ ಹರಣ ಚಿಕಿತ್ಸಾ ವಿಭಾಗಕ್ಕೆ ಸಂಬಂಧಿಸಿದಂತೆ ಪುನರ್ವಿಮರ್ಶೆ ಅಗತ್ಯವಾಗಿದೆ. ಯೋಜನಾ ಆಯೋಗವು ಐಯುಸಿಡಿಯು ಜನಪ್ರಿಯವಾಗಿದೆ ಎಂದು ಹೇಳಿಕೊಳ್ಳುತ್ತಿದೆ. ಹಾಗಿದ್ದಲ್ಲಿ ಇದೊಂದೇ ಕಾರ್ಯಕ್ರಮಕ್ಕೆ ಅವರು ಸೀಮಿತಗೊಳಿಸಿಕೊಳ್ಳಬಾರದೇಕೆ? ರಾಷ್ಟ್ರೀಯ ಮಾದರಿ ಸಮೀಕ್ಷೆಯು (ನ್ಯಾಷನಲ್ ಸ್ಯಾಂಪಲ್ ಸರ್ವೆ) ನಿರೂಪಿಸಿರುವ ಅಂಕಿ ಅಂಶಗಳು ಹೀಗಿವೆ: ಇಂಟರ್ ಮೀಡಿಯೇಟ್ ಮತ್ತು ಅದಕ್ಕಿಂತ ಮೇಲ್ಪಟ್ಟ ಶಿಕ್ಷಣ ಹೊಂದಿದ ಮಹಿಳೆಯರಿಗೆ ಸಂತಾನ ಸಂಖ್ಯಾ ಪ್ರಮಾಣ ೨.೬, ಮೆಟ್ರಿಕ್ಯುಲೇಷನ್ ಶಿಕ್ಷಣ ಪಡೆದವರಿಗಾದರೆ ೪.೨, ಮಾಧ್ಯಮಿಕ ಶಾಲಾಮಟ್ಟದ ಶಿಕ್ಷಿತ ಮಹಿಳೆಯಾದರೆ ೪.೫, ಅನಕ್ಷರಸ್ಥರಾದರೆ ೬ಕ್ಕಿಂತಲೂ ಹೆಚ್ಚಿನ ಮಕ್ಕಳಾಗುತ್ತಿರುವುದು ಕಂಡುಬಂದಿದೆ. ಆದ್ದರಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅತೀ ಹೆಚ್ಚಿನ ಗಮನ ಕೊಡುವುದು ಅಪೇಕ್ಷಣೀಯವಾಗಿದೆ. ಅದು ಸಹಜವಾಗಿಯೇ ಕುಟುಂಬದ ಗಾತ್ರವನ್ನು ಕಡಿಮೆ ಮಾಡುತ್ತದೆ.

ಸಂಪನ್ಮೂಲಗಳನ್ನು ಸಂಚಯ ಮಾಡುವಾಗ ಹೆಚ್ಚುವರಿ ತೆರಿಗೆಗಳು, ಸಾರ್ವಜನಿಕ ಉದ್ಯಮಗಳಿಂದ ಬರುವ ಆದಾಯಗಳು ಮತ್ತು ಹೊರಗಿನಿಂದ ನೆರವು–ಇವುಗಳ ಮೇಲೆ ಹೆಚ್ಚಿನ ಅವಲಂಬನೆ ಮಾಡಲಾಗಿದೆ. ವಿದೇಶಿ ನೆರವು ಸುಮಾರು ೫೮೧ ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದೆ. ಅದು ಒಟ್ಟಾರೆ ಅಂದಾಜು ವೆಚ್ಚದ ಶೇ ೨೮ ರಷ್ಟಾಗುತ್ತದೆ. ಇದು ಯೋಜನಾ ಆಯೋಗದವರ ಚಿಂತನೆಯಲ್ಲಿ ಯಾವುದೇ ಗಣನೀಯ ಬದಲಾವಣೆ ಎನ್ನಿಸುವುದಿಲ್ಲ. ಕಳೆದ ಸೆಪ್ಟೆಂಬರ್‌ನಲ್ಲಿ, ೪ನೇ ಯೋಜನೆಯಲ್ಲಿ ವಿದೇಶಿ ನೆರವು ೨೭೫೦ ಕೋಟಿ ರೂ.ಗಳಾಗಿತ್ತು. ಇದರ ಐದನೇ ಒಂದು ಭಾಗದಷ್ಟು ಮೊತ್ತವನ್ನು ಮಾತ್ರವೇ ೧೯೬೬–೬೭ನೇ ಸಾಲಿಗೆಂದು ತೆಗೆದುಕೊಂಡರೂ ಅದು ಕೇವಲ ೫೫೦ ಕೋಟಿ ರೂ.ಗಳಷ್ಟಾಗಬಹುದು. ಅಂದರೆ ಅಂದಾಜು ವ್ಯಯದ ೫೮೧ ಕೋಟಿ ರೂ.ಗಳಿಗಿಂತಲೂ ೩೧ ಕೋಟಿ ರೂ.ಗಳಷ್ಟು ಕಡಿಮೆ ಮೊತ್ತವೇ ಆಗಲಿದೆ. ನಾವು ನಮ್ಮ ಹಿಂದಿನ ಅನುಭವಗಳಿಂದ ಯಾವುದೇ ಪಾಠ ಕಲಿತಂತೆ ಕಾಣುತ್ತಿಲ್ಲ. ೧೯೬೫ರ ಸೆಪ್ಟೆಂಬರ್‌ನಲ್ಲಿ ಅಂದರೆ ಪಾಕಿಸ್ತಾನದೊಂದಿಗೆ ಸಂಘರ್ಷ ಸ್ಫೋಟಗೊಳ್ಳುವ ಮೊದಲು ಮತ್ತು ವಿದೇಶಿ ಆರ್ಥಿಕ ನೆರವು ಹರಿದು ಬರುವುದು ನಿಲ್ಲುವ ಮೊದಲಿಗಿಂತಲೂ ಹೆಚ್ಚಿಗೆ ಪ್ರಮಾಣದಲ್ಲಿ ನಾವೀಗ ವಿದೇಶಿ ನೆರವನ್ನು ಅವಲಂಬಿಸುತ್ತಿದ್ದೇವೆ.

ಆಂತರಿಕ ಸಂಪನ್ಮೂಲಗಳ ಬಳಕೆಯ ವಿಧಾನವೂ ಕೂಡಾ ನಮ್ಮ ಆರ್ಥಿಕ ನೀತಿ ವ್ಯವಸ್ಥೆಗಳಿಗೆ ಹಾನಿಯನ್ನೇ ಮಾಡಿದೆ ಸರ್ಕಾರವು ಯಾವಾಗಲೂ ತೆರಿಗೆದಾರರ ಹಣದ ದೊಡ್ಡ ಪಾಲು ಕೇಳಿ ಪ್ರಸ್ತಾಪ ಮುಂದಿಡುತ್ತದೆ ಅಥವಾ ಕೊರತೆಯ ಆಯವ್ಯಯ ವಿಧಾನಕ್ಕೆ ಮೊರೆ ಹೋಗುತ್ತದೆ; ಇವೆರಡೂ ವಿಧಾನಗಳೂ ಹಣದುಬ್ಬರದ ಪರಿಣಾಮಕ್ಕೆ ದಾರಿ ಮಾಡಿವೆ. ವಾರ್ಷಿಕ ಯೋಜನೆಯು ಈ ವಿಚಾರದಲ್ಲಿ ಏನೂ ಬದಲಾವಣೆಯನ್ನೂ ಮಾಡಿಲ್ಲ. ಪರಿಣಾಮವೆಂದರೆ ಬೆಲೆಗಳು ಸ್ಥಿರವಾಗಿರುವುದಿಲ್ಲ. ಹಲವು ಸರ್ಕಾರಗಳು ಆರ್ಥಿಕ ನೀತಿಯನ್ನು ಪರಿಣಾಮಕಾರಿಯಾಗಿ ಬದಲಿಸಲಾಗಲೀ, ಅಮುಖ್ಯ ವೆಚ್ಚ ಬಾಬ್ತುಗಳಲ್ಲಿ ಕಡಿತ ಮಾಡಲಾಗಲೀ ಸಿದ್ಧವಿದ್ದಂತಿಲ್ಲ. ಕೇಂದ್ರ ಸರ್ಕಾರದ ರೆವಿನ್ಯೂ ವೆಚ್ಚವೇ ಒಂದು ವರ್ಷದಲ್ಲಿ ೨೪೬೯.೫೦ ಕೋಟಿ ರೂ.ಗಳಿಂದ ೨೭೧೮.೬೨ ಕೋಟಿರೂ.ಗಳಿಗೆ ಏರಿದೆ. ಅಂಥವೇ ಏರಿಕೆಗಳು ರಾಜ್ಯ ಸರ್ಕಾರಗಳ ವಿಷಯದಲ್ಲೂ ಕಂಡು ಬರುತ್ತವೆ. ಅನುತ್ಪಾದಕ ವೆಚ್ಚ ಬಾಬ್ತು ಏರಿಕೆ ಮುಂದುವರಿದಲ್ಲಿ ರೂಪಾಯಿಯ ಅಪಮೌಲ್ಯದ ಪರಿಣಾಮ ಸಂಭಾವಿಸಬಹುದು. ಆಯವ್ಯಯ ಸಮತೋಲನವನ್ನು ಹೆಚ್ಚುವರಿ ಕರಭಾರಗಳಿಂದ ಸಾಧಿಸುವುದಿರಬಹುದಾದರೂ ರೂಪಾಯಿ ಮೌಲ್ಯ ಇಳಿಕೆ ತಪ್ಪಲಾರದು.

ಒಟ್ಟಾರೆಯಾಗಿ ಹೇಳುವುದಾದರೆ ಯೋಜನೆಯ ಹೊಸತಾದ ನೆಲೆಯನ್ನೇನೂ

ಭೇದಿಸಿಲ್ಲ. ಅದು ಸರ್ಕಾರದ ದೋಷ ಪೂರ್ಣ ನೀತಿಗಳನ್ನೇ ಮುಂದುವರೆಸುತ್ತದೆ. ಯೋಜನಾ ವಿಧಾನ ಹಾಗೂ ಯೋಜನೆಗಳಲ್ಲಿನ ದೋಷಗಳು ಹಾಗೂ ಅರೆಕೊರೆಗಳ ಅರಿವು ಇಲ್ಲ. ನಾಲ್ಕನೆಯ ಯೋಜನೆಯನ್ನು ಇದೇ ಮಾದರಿ/ ನಮೂನೆಯನ್ನಾಧರಿಸಿ ತಯಾರಿಸುವುದೇ ಆದಲ್ಲಿ, ನಮ್ಮ ಹಣಕಾಸು ಪರಿಸ್ಥಿತಿಯ ಭವಿಷ್ಯವೂ ಕೂಡಾ ಈ ಹಿಂದೆ ಎಷ್ಟು ಸಮಸ್ಯಾತ್ಮಕವಾಗಿತ್ತೋ ಅಷ್ಟೇ ಸಮಸ್ಯಾತ್ಮಕವಾಗಿ ಮುಂದುವರೆಯುತ್ತದೆ.

### ೧೯೬೭ರಲ್ಲಿ ಚುನಾವಣಾ ಆಶೋತ್ತರಗಳು

೧೯೬೭ರ ಫೆಬ್ರುವರಿ ಮಾಹೆಯ ಉತ್ತರಾರ್ಧದಲ್ಲಿ ನಾಲ್ಕನೇ ಲೋಕಸಭಾ ಚುನಾವಣೆಗಳು ನಡೆಯಬೇಕಾಗಿದೆ. ಚುನಾವಣಾ ಆಯೋಗವು ತಾತ್ಕಾಲಿಕ ವೇಳಾಪಟ್ಟಿಯನ್ನು ನಿಗದಿಸಿದ್ದು ಅದರಂತೆ ಫೆಬ್ರುವರಿ ೧೯ ರಿಂದ ೨೮ರವರೆಗೆ ದಿನಾಂಕ ನಿಗದಿ ಮಾಡಿದೆ. ಕಾಲಕಾಲಕ್ಕೆ ಕಾಂಗ್ರೆಸಿಗರ ಕೆಲವು ವರ್ಗಗಳು ಲೋಕಸಭಾ ಚುನಾವಣೆಗಳನ್ನು ಒಂದುವರ್ಷ ಮುಂದಕ್ಕೆ ಹಾಕುವಂತೆ ಸಲಹೆ ಮಾಡುತ್ತಿರುವ ವರದಿಗಳು ಕಾಣಿಸಿಕೊಳ್ಳುತ್ತಿವೆ. ಅವಿಶ್ವಾಸ ಅಥವಾ ಅಪನಂಬಿಕೆ ಹಾಗೂ ಚುನಾವಣೆಯನ್ನು ಎದುರಿಸುವಲ್ಲಿನ ಭೀತಿಯನ್ನು ಸೂಚಿಸುತ್ತವೆ. ಅಂದರೆ ಅವುಗಳ ಭ್ರಮನಿರಸನ ಹಾಗೂ ನಿರಾಶೆಗಳು ಅಷ್ಟು ಬೃಹತ್ತಾಗಿವೆ. ಆದಾಗ್ಯೂ ಸರ್ಕಾರದಲ್ಲಿರುವ ನಾಯಕರುಗಳು, ನೇತಾರರು ಈ ವರದಿಗಳನ್ನು ಅಲ್ಲಗಳೆಯುತ್ತಾರೆ. ಅವರುಗಳು ಈಗಾಗಲೇ ನಿಗದಿತ ವೇಳಾಪಟ್ಟಿಗೆ ಅನುಗುಣವಾಗಿಯೇ ಚುನಾವಣೆಗಳನ್ನು ನಡೆಸಲು ಸೂಚಿಸುತ್ತಿದ್ದಾರೆ. ಪ್ರಾಯಃ ಒಂದು ವರ್ಷದ ನಂತರವೂ ಪರಿಸ್ಥಿತಿ ಇದಕ್ಕಿಂತ ಉತ್ತಮವಾಗೇನೂ ಇರುವುದಿಲ್ಲವೆಂದು ಅವರಿಗೆ ತಿಳಿದಿರಬಹುದು.

### ಒಡಂಬಡಿಕೆಗಳೇ ಸರ್ವಸ್ವವಲ್ಲ

ರಾಜಕೀಯ ಪಕ್ಷಗಳು ಲೋಕಸಭಾ ಚುನಾವಣೆಗೆ ಸಜ್ಜುಗೊಳ್ಳುವುದರಲ್ಲಿ ತರಾತುರಿಯಿಂದ ನಿರತವಾಗಿವೆ. ಆದಾಗ್ಯೂ ಇದಕ್ಕಿಂತಲೂ ಹೆಚ್ಚಿನ ತುರುಸಿನ, ಬಿರುಸಿನ ಚಟುವಟಿಕೆ ಎಂದರೆ ತಮ್ಮದೇ ಪಕ್ಷಗಳನ್ನು ವ್ಯವಸ್ಥಿತವಾಗಿಟ್ಟು ಕೊಳ್ಳುವುದಕ್ಕಿಂತಲೂ ಹೆಚ್ಚಿನ ಗಮನವನ್ನು ಅನೇಕ ಬಗೆಯ ಒಡಂಬಡಿಕೆಗಳನ್ನೂ, ರಾಷ್ಟ್ರೀಯ ಒಕ್ಕೂಟಗಳನ್ನು ರೂಪಿಸುವುದರಲ್ಲಿ ನೀಡಿವೆ. ಈ ಒಡಂಬಡಿಕೆಗಳ, ಚುನಾವಣಾ ಮೈತ್ರಿಕೂಟಗಳ ಮಾತುಕತೆಗಳು ಯಾವ ಮಟ್ಟ ಮುಟ್ಟಿವೆ ಎಂದರೆ, ಯಾವ ರಾಜಕೀಯ ಪಕ್ಷವು ತನ್ನ ಸಮಯವನ್ನು ಈ ಅಪ್ರಯೋಜಕವಾದ ಕಪ್ಪೆಗಳನ್ನು ತಕ್ಕಡಿಗೆ ಹಾಕಿ ತೂಗಲು ಸಿದ್ಧವಿಲ್ಲದ ಪಕ್ಷವನ್ನು ಪ್ರತ್ಯೇಕತಾವಾದಿ, ವ್ಯರ್ಥ, ಕಾಂಗ್ರೆಸ್ ಪರನಿಲುವು ತಾಳಿದೆ ಎಂದೂ ವಿಶ್ವಾಸಘಾತುಕವೆಂದೂ

ಕರೆಸಿಕೊಳ್ಳಬೇಕಾಗುತ್ತದೆ ಕಾಂಗ್ರೆಸ್ಸೇತರ ಅಭ್ಯರ್ಥಿಗಳು ನೇರ ಹಣಾಹಣೆಯಲ್ಲಿ ವಿಜೇತರಾಗುವ ಬಗೆಗೆ ಈ ಮಂದಿಯ ವಿಶ್ವಾಸ ಎಷ್ಟಿದೆ ಎಂದರೆ ಅವರು ಪ್ರತ್ಯೇಕವಾಗಿ ಕಾಂಗ್ರೆಸ್ಸನ್ನು ಎದುರಿಸಲಾರವೆಂಬ ಅಪನಂಬುಗೆಯಷ್ಟೇ ದೊಡ್ಡ ಪ್ರಮಾಣದಲ್ಲಿದೆ. ಈ ಭಾವನೆಯು ಯಾವುದೇ ಚುನಾವಣಾ ಫಲಿತಾಂಶದ ನಿಕಟ ವಿಮರ್ಶೆಯನ್ನಾಗಲೀ, ಸಮಾಜದ ವಿಭಿನ್ನ ವರ್ಗಗಳವರ ಚುನಾವಣಾ ವರ್ತನೆಗಳನ್ನಾಗಲೀ ಅವಲಂಬಿಸಿಲ್ಲ. ಬದಲಿಗೆ, ಕಾಂಗ್ರೆಸ್ಸೇತರ ಮತಗಳೆಲ್ಲವೂ ವಿರೋಧ ಮತಗಳು ಮತ್ತು ಅವುಗಳನ್ನು ಯಾವುದೇ ಒಬ್ಬ ಕಾಂಗ್ರೆಸ್ ವಿರೋಧ ಅಭ್ಯರ್ಥಿಯೂ ಗಳಿಸಿಕೊಳ್ಳಬಹುದೆಂಬ ಒಂದು ಸಾಮಾನ್ಯ ಅನಿಸಿಕೆಯನ್ನು ಅವಲಂಬಿಸಿದೆ. ಆದರೆ ಚುನಾವಣಾ ಸಂಬಂಧವಾದ ಅಂಥ ಪ್ರಾಥಮಿಕ ಚಿಂತನ ವಿಧಾನವು ಯಾವುದೇ ರಾಜಕೀಯ ವಸ್ತುಸ್ಥಿತಿಯನ್ನು ಬಿಂಬಿಸುವುದಿಲ್ಲ. ಅವರು ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳು– ಎರಡೂ ಕಡೆಗಳಲ್ಲೂ ವೈವಿಧ್ಯಮಯ ವಿಭಿನ್ನ ಅಂಶಗಳಿರುತ್ತವೆ ಎಂಬುದನ್ನು ಮರೆಯುತ್ತಾರೆ.

## ಲಂಡನ್‌ನಲ್ಲಿ ಪ್ರತಿಯೊಬ್ಬರೂ ಜನಸಂಘದ ಬಗೆಗೆ ಹೆಚ್ಚು ಹೆಚ್ಚು ತಿಳಿಯಲು ಉತ್ಸುಕರಾಗಿದ್ದಾರೆ

ಎ.ಬಿ.ವಾಜಪೇಯಿ, ಸಂಸದರು, ಲಂಡನ್

ಲಂಡನ್ನಿಗೆ ಇದು ನನ್ನ ಮೂರನೆಯ ಭೇಟಿ. ಆದರೆ ಈ ಬಾರಿ ನನಗೆ ಕಂಡುಬಂದಂತೆ, ಈ ಮೊದಲು ಜನಸಂಘದ ಬಗೆಗೆ ಇಷ್ಟೊಂದು ಗಹನವಾದ ಆಸಕ್ತಿ ಇದ್ದುದನ್ನು ನಾನು ಗಮನಿರಲಿಲ್ಲ.

ಸಚಿವರಿರಲಿ, ಸಂಸದರಿರಲಿ, ಪತ್ರಿಕೋದ್ಯೋಗಿಗಳಿಗಿಂತ ಅಥವಾ ಬೇರಾವುದೇ ಘನತೆವೆತ್ತ ವಿಶೇಷ ನಾಗರಿಕರೇ ಇರಲಿ, ಯಾರನ್ನೇ ನಾವು ಭೇಟಿ ಮಾಡಿದರೂ ಅವರೆಲ್ಲರೂ ಕೂಡಾ ಜನಸಂಘದ ಹೆಸರಿನ ಪರಿಚಯ ಹೊಂದಿದಂತೆ ಕಾಣುತ್ತಾರೆ ಮತ್ತು ಅದರ ಬಗೆಗೆ ಇನ್ನೂ ಹೆಚ್ಚಿನ ಸಂಗತಿಗಳನ್ನೂ ತಿಳಿಯಲು ಆರೋಗ್ಯಕರ ಕುತೂಹಲವನ್ನು ವ್ಯಕ್ತಪಡಿಸುತ್ತಿದ್ದಾರೆ ಆಗಿಂದಾಗ್ಯೆ, ವಾಸ್ತವವಾಗಿ, ನಮ್ಮ ಸಂಸದೀಯ ಪ್ರತಿನಿಧಿಗಳನ್ನು ಪರಿಚಯಿಸಿದ ಕೂಡಲೇ ನಮಗೆ ಕೇಳಿಬರುವ ಮೊದಲನೇ ಪ್ರಶ್ನೆ (ಪರಿಚಯದಲ್ಲಿ ಕೇವಲ ಹೆಸರುಗಳನ್ನೂ ಹೇಳಲಾಗುತ್ತದೆ, ಪಕ್ಷದೊಂದಿಗಿನ ಸಂಬಂಧವನ್ನು ಹೇಳಿರುವುದಿಲ್ಲ) ಏನೆಂದರೆ, ಜನಸಂಘ ಪಕ್ಷದಿಂದ ಯಾರು?

ಈ ನಾಲ್ವರು ಪ್ರತಿನಿಧಿಗಳ ನಿಯೋಗದಲ್ಲಿ ವಿರೋಧ ಪಕ್ಷವೇ ಬಹುಮತವಿದ್ದು–ಅಂದರೆ ಒಬ್ಬರು ಕಾಂಗ್ರೆಸ್ಸಿಗರು, ಮೂವರು ವಿರೋಧ ಪಕ್ಷಗಳವರು ಇದ್ದೇವೆ. ಇಲ್ಲಿನ ಜನರು ಸ್ವತಂತ್ರ ಪಕ್ಷಕ್ಕಿಂತಲೂ ಹೆಚ್ಚಿಗೆ ಸಿ. ರಾಜುಗೋಪಾಲಾಚಾರಿಯವರ ಬಗೆಗೆ ಮಾತನಾಡಿಕೊಳ್ಳುತ್ತಾರೆ. ಪ್ರಜಾ

ಸೋಷಿಯಲಿಸ್ಟ್ ಪಾರ್ಟಿಗೆ ಸಂಬಂಧಿಸಿದಂತೆ ಕಾರ್ಮಿಕ ಪರವಾದಿಗಳು/ಕಾರ್ಮಿಕ ಪರಚಿಂತಕರು, ಆ ಪಕ್ಷದೊಂದಿಗೆ ರಾಜಕೀಯ ಸಂಬಂಧವಿರುವ ಪ್ರವೃತ್ತಿಯನ್ನು ಬಿಟ್ಟು ಕೊಟ್ಟಂತಿರುತ್ತಾರೆ.

ಸಚಿವರುಗಳೊಡನೆ ನಮ್ಮ ಸಂಭಾಷಣೆಗಳಲ್ಲಿ ಅಶೋಕ ಮೆಹ್ತಾರವರ ತತ್ವತ್ಯಾಗದ ಪ್ರಸ್ತಾಪ ತಪ್ಪದೇ ಬಂದೇ ಬರುತ್ತದೆ. ಆದರೆ ಈ ಮಾತುಕತೆಗಳು ಸ್ಪಷ್ಟವಾಗಿ ನಿರೂಪಿಸುವ ಒಂದು ಸಂಗತಿ ಎಂದರೆ ಪ್ರಜಾ ಸೋಷಿಯಲಿಸ್ಟ್ ಪಕ್ಷದವರು ಒಂದು ನಿರ್ಲಕ್ಷ್ಯವಾದ ಭವಿಷ್ಯವನ್ನು ಹೊಂದಿಲ್ಲ ಎಂಬುದೇ ಆಗಿದೆ.

ಜನಸಂಘದ ವಿಷಯದಲ್ಲಿ ಈ ಗಹನವಾದ ಆಸಕ್ತಿ ಏಕೆ ಎಂಬುದನ್ನೂ ಪತ್ತೆ ಹಚ್ಚಲೂ ಪ್ರಯತ್ನಿಸಿದೆ. ಬ್ರಿಟಿಷ್ ಪತ್ರಿಕೆಗಳಲ್ಲಿ ಭಾರತೀಯ ವರ್ತಮಾನಗಳಿಗೆ ತೀರಾ ಕಡಿಮೆ ಸ್ಥಳ ದೊರೆಯುತ್ತದೆ. ಮತ್ತು ರಾಜಕೀಯ ಪಕ್ಷಗಳಿಗಂತೂ ಏನೇನೂ ಸುದ್ದಿಸ್ಥಾನವೇ ಇರುವುದಿಲ್ಲ. ಆದರೆ ಕಳೆದ ವರ್ಷ ಜನಸಂಘದ ವತಿಯಿಂದ ನಡೆದ ಕಛ್ ಒಪ್ಪಂದದ ಪ್ರತಿರೋಧ ಪ್ರಾತ್ಯಕ್ಷಿಕೆಯೇ ಜನರ ನೆನಪಿನಲ್ಲಿ ಅಚ್ಚಳಿಯದಂತೆ ಅಚ್ಚೊತ್ತಿದೆ. ಬಿಬಿಸಿ (ಬ್ರಿಟಿಷ್ ಬ್ರಾಡಕಾಸ್ಟಿಂಗ್ ಕಂಪೆನಿ)ಯ ದೂರದರ್ಶನವು ಆ ಪ್ರಸಂಗವನ್ನೂ ಪ್ರತೀ ಮನೆಗೂ ತಲುಪಿಸಿತು. ಇತ್ತೀಚೆಗೆ ವರದಿಯಾದ ಸಣ್ಣ ಸಣ್ಣ ಸುದ್ದಿಗಳು ಜನಸಂಘವು ಮೈಸೂರು, ಆಂಧ್ರ ವಿಧಾನ ಪರಿಷತ್‌ಗಳಲ್ಲಿ ಜಯಗಳಿಸಿದ ಸುದ್ದಿಗಳು ಜನಸಂಘವನ್ನು ಕಾಂಗ್ರೆಸ್‌ಗೆ ಪ್ರಮುಖ ಸ್ಪರ್ಧಿ ಎಂದು ಬಿಂಬಿಸಿವೆ.

ಇತ್ತೀಚೆಗೆ, ದಿ ಟೈಮ್ಸ್ ಹೀಗೆ ವರದಿ ಮಾಡಿತ್ತು.................... ಸ್ವತಂತ್ರ ಭಾರತದ ಪಕ್ಷಗಳು....... ಜನಸಂಘ, ಡಿಎಂಕೆ ಮುಖ್ಯವಾಗಿ ಹೊಸದಾಗಿ ನಗರೀಕೃತಗೊಂಡ, ಸೌಲಭ್ಯಗಳು ಸಾಕಷ್ಟಿಲ್ಲದ ಕೆಳ ಮಧ್ಯಮ ವರ್ಗದವರಿಗೆ ಮುಟ್ಟುವಂತಹ ಹಾಗೂ ಬಹಳಷ್ಟು ಬಾರಿ ಪ್ರಾದೇಶಿಕ ಸಂಗತಿಗಳ ಕುರಿತು ಬರೆಯುತ್ತವೆ. ನಾನು ದ ಟೈಮ್ಸ್ ಪತ್ರಿಕೆಗೆ ಹೀಗೆ ಬರೆದಿದ್ದೇನೆ; ಜನಸಂಘವು ಅಖಿಲ ಭಾರತ ವ್ಯಾಪ್ತಿಯ ಪಕ್ಷವಾಗಿದ್ದು ಅದು ಯಾವಾಗಲೂ ಪ್ರಾದೇಶಿಕ ಭಾವನೆಗಳಿಗೆ ಸ್ಪಂದಿಸುತ್ತಿರುತ್ತದೆ, ಅದು ರಾಜಕೀಯವಾಗಿ ನಮಗೆ ಹಾನಿ ಮಾಡುವುದಿರಬಹುದಾದರೂ ಮಾಡುತ್ತಿರುತ್ತದೆ. ಮೈಸೂರು ಮಹಾರಾಷ್ಟ್ರಗಡಿ ವಿವಾದಕ್ಕೆ ಜನಸಂಘದ ನಿಲುವು ಈ ಸಂಬಂಧದಲ್ಲಿ ಇತ್ತೀಚಿನ ಒಂದು ನಿದರ್ಶನವಾಗಿದೆ. ಲಂಡನ್‌ನಲ್ಲಿ ಭಾರತೀಯ ಮಜ್‌ಲಿಸ್ ಇದೆ. ಅದರ ಸ್ಥಾಪನೆಯಲ್ಲಿ ನೇತಾಜಿ ಸುಭಾಷಚಂದ್ರ ಬೋಸ್‌ರವರ ಪಾತ್ರವೂ ಇತ್ತು. ಹಲವು ವರ್ಷಗಳ ಕಾಲ ಮಜ್‌ಲಿಸು ಕೃಷ್ಣ ಮೆನಸ್ ಹಾಗೂ ಅವರ ಸಹ ಪ್ರಯಾಣಿಕರ ಮುಖ್ಯ ವಲಯದಲ್ಲಿತ್ತು. ಈಗ ಅದು ಸಂಪೂರ್ಣವಾಗಿ ಕಮ್ಯುನಿಸ್ಟರ ಹತೋಟಿಯಿಂದ ಮುಕ್ತವಾಗಿದೆ. ಅದರ ಹಂಗಾಮಿ ಅಧ್ಯಕ್ಷರು ಈಗ ನರೇಶ ಅರೋರ ಅವರು ಒಂದು ಕಾಲಕ್ಕೆ ಆರ್.ಎಸ್.ಎಸ್. ಪ್ರಚಾರಕರು ಮತ್ತು ಲಂಡನ್‌ನಲ್ಲಿ ಬಿಜೆಎಸ್

ಶಾಖೆಯ ಕಾರ್ಯದರ್ಶಿಯವರು ಮಜ್ಲಿಸ್ ರಾಜಕೀಯೇಥರ ಸಂಸ್ಥೆಯಾಗಿದ್ದರೂ, ರಾಷ್ಟ್ರವಾದಿಗಳ ಪ್ರಕಾರ ಕಮ್ಯುನಿಸ್ಟ್ ಭದ್ರ ಮುಷ್ಠಿಯಿಂದ ಮುಕ್ತವಾಗಿರುವುದು ಒಂದು ದಿಗ್ವಿಜಯವೆನ್ನಿಸಿದೆ. ಮಜ್ಲಿಸ್‌ಗೆ ಜನಸಂಘದೊಂದಿಗೆ ಪ್ರತ್ಯಕ್ಷವಾಗಿಯಾಗಲೀ, ಪರೋಕ್ಷವಾಗಿಯಾಗಲೀ ಯಾವುದೇ ವಿಧವಾದ ಸಂಬಂಧವೇನೂ ಇಲ್ಲ. ಆದರೂ ಇತ್ತೀಚಿನ ಈ ಬೆಳವಣಿಗೆಗಳನ್ನು ಜನಸಂಘದ ಶಕ್ತಿ ವರ್ಧನೆಯ ಸೂಚಕಗಳೆಂದು ಅರ್ಥೈಸಿದರೆ ಅಂಥವರನ್ನು ಆಕ್ಷೇಪಿಸುವುದು ಕಷ್ಟವಾದೀತು.

ಜಾರ್ಖಂಡ ಪಕ್ಷವೂ ಕಾಂಗ್ರೆಸ್‌ನಲ್ಲಿ ಮಿಳಿತಗೊಂಡಿದೆ. ಪ್ರಜಾ ಸೋಷಲಿಸ್ಟ್ ಪಾರ್ಟಿ (ಪಿಎಸ್‌ಪಿ) ಮತ್ತು ಎಸ್‌ಎಸ್‌ಪಿಗಳ ಶ್ರೇಣಿಗಳನ್ನೂ ಕೂಡಾ ಆಳುವ ಪಕ್ಷದ ಪ್ರಯೋಜನಕ್ಕೆಂದು ವಿಭಜಿತಗೊಂಡಿವೆ. ಮಧ್ಯಪ್ರದೇಶ ಮತ್ತು ರಾಜಾಸ್ತಾನಗಳಲ್ಲಿ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳ ಅಭ್ಯರ್ಥಿಗಳು ೧೯೬೨ರ ಚುನಾವಣೆಯಲ್ಲಿ ಸಮ ಸಮ ಸಂಖ್ಯೆಯಲ್ಲಿ ಚುನಾಯಿತರಾಗಿ ಶಾಸಕಾಂಗಕ್ಕೆ ಮರು ಪ್ರವೇಶ ಪಡೆದಿದ್ದರು. ಅನುಸೂಚಿತ ಹರಿಯಾಣದಲ್ಲೂ ಎಲ್ಲಾ ಪ್ರಗತಿಪರ ಸ್ವತಂತ್ರ ಅಭ್ಯರ್ಥಿಗಳು ಕೂಡಾ ಕಾಂಗ್ರೆಸ್‌ಗೆ ಮರಳಿಬಂದಿದ್ದಾರೆ. ಕೇರಳದಲ್ಲಿ ಹಲವು ಕೇರಳ ಕಾಂಗ್ರೆಸಿಗರೂ ಮಾತೃ ಪಕ್ಷಕ್ಕೆ ಹಿಂತಿರುಗಿ ಹೋಗಿದ್ದರೆ ಉತ್ತರ ಪ್ರದೇಶದಲ್ಲಿ ಶ್ರೀ ಕೃಷ್ಣದತ್ತ ಪಾಲಿವಾಲರ್ ಮುಖಂಡತ್ವದಲ್ಲಿ ಸ್ವತಂತ್ರವಾದಿಗಳು, ಪಿಎಸ್‌ಪಿ ನಿಷ್ಠರು ಶ್ರೀ ಗೆಂಡಾಸಿಂಗರ ನೇತೃತ್ವದಲ್ಲಿ ಮತ್ತು ಜಾರ್ಖಂಡೇ ರಾಜ್(ಯ್)ರೊಂದಿಗೆ ಕಮ್ಯೂನಿಸ್ಟರು ಎಲ್ಲರೂ ಕಾಂಗ್ರೆಸ್ ಸೇರಿದ್ದಾರೆ. ಮಹಾರಾಷ್ಟ್ರದಲ್ಲಿ ರಿಪಬ್ಲಿಕನ್ನರು ಕಾಂಗ್ರೆಸ್‌ಗೆ ವಲಸೆ ಹೋಗಿದ್ದಾರೆ. ಕಾಂಬ್ಳಿ ಬಣದವರು ಕಾಂಗ್ರೆಸ್‌ನೊಂದಿಗೆ ಸೇರಿಯಾಗಿದೆ, ಗಾಯಕ್‌ವಾಡ ಗುಂಪಿನವರು ಕಾಂಗ್ರೆಸ್‌ನೊಂದಿಗೆ ಅಂತಿಮ ಸ್ವರೂಪದಲ್ಲಿ ಒಪ್ಪಂದವನ್ನೂ ಮಾಡಿಕೊಂಡಿದ್ದಾಗಿದೆ. ಕಮ್ಯುನಿಸ್ಟ್ ಮತಗಳು ಶ್ರೀ ವಿ.ಕೆ.ಕೃಷ್ಣಮೆನನ್ ಅಥವಾ ಕೆ.ಡಿ.ಮಾಳವೀಯರ ಕ್ಷೇತ್ರಗಳಲ್ಲಿ ಎಲ್ಲಿ ಹೋಗುತ್ತವೆ? ನಿಸ್ಸಂದೇಹವಾಗಿಯೂ ವಿರೋಧ ಪಕ್ಷದ ಅಭ್ಯರ್ಥಿಗಂತೂ ಅಲ್ಲ; ಕಮ್ಯುನಿಸ್ಟರು ಸ್ವತಂತ್ರ ಅಭ್ಯರ್ಥಿಗಳನ್ನಾಗಲೀ, ಕಮ್ಯುನಿಷ್ಟರಿಗಾಗಿ ಕೆಲಸ ಮಾಡುವ ಜನಸಂಘವನ್ನಾಗಲೀ ಬೆಂಬಲಿಸುವರೆ? ಪರಿಸ್ಥಿತಿ ಅನೂಹ್ಯವಾದದ್ದು, ಕಲ್ಪನೆಗೆ ನಿಲುಕುವಂಥದ್ದಲ್ಲ. ಬಹಳಷ್ಟು ಸಂದರ್ಭದಲ್ಲಿ ನೇರ ಹಣಾಹಣಿಯು ಕಾಂಗ್ರೆಸ್‌ನ ಅವಕಾಶಗಳನ್ನಷ್ಟೇ ವೃದ್ಧಿಸಬಹುದು.

ದೇಶದಲ್ಲಿ ರಾಜಕೀಯ ಪರಿಸ್ಥಿತಿಯು ಬಹಳ ಗೊಂದಲಮಯವಾಗಿದೆ. ಒಂದೆಡೆಯಲ್ಲಿ ಕಾಂಗ್ರೆಸ್ ಅನೈಕ ಮತ್ಯದಿಂದ ಕೂಡಿದ್ದರೆ/ವಿಭಜಿತಗೊಂಡಿದ್ದರೆ ಇನ್ನೊಂದೆಡೆಯಲ್ಲಿ ಅದು ಹೊಸ ಅನುಯಾಯಿಗಳನ್ನು ಗಳಿಸಿಕೊಳ್ಳುತ್ತಿದೆ. ಪಶ್ಚಿಮ ಬಂಗಾಳ, ಒರಿಸ್ಸಾ ಮತ್ತು ಮೈಸೂರಿನ ಪ್ರಾಂತ್ಯಗಳನ್ನೇ ದೊಡ್ಡ ಬಣಗಳು ಹೊರನಡೆದು ಒಂದು ಸಮನಾಂತರ ಕಾಂಗ್ರೆಸ್‌ನ್ನು ಪ್ರಪ್ರತ್ಯೇಕ

ವಿಚಾರವಾದಿಗಳೊಂದಿಗೆ ರೂಪಿಸಿಕೊಂಡಿವೆ. ಹಳೇ ಕಾಂಗ್ರೆಸಿಗರಲ್ಲಿ ಬಹಳಷ್ಟು ಸಂಖ್ಯೆಯವರು ಗುಜರಾತ್‌ನಲ್ಲಿ ಸ್ವತಂತ್ರ ಪಕ್ಷದೊಂದಿಗೆ ಸೇರಿ ಗುರುತಿಸಿಕೊಂಡಿದ್ದರೆ ಬೇರೆ ರಾಜ್ಯಗಳಲ್ಲಿಯೂ ಕೂಡ ಪಕ್ಷವಿಭಜನೆಗಳಾಗಿವೆಯಾದರೂ ಅಷ್ಟು ಸ್ಪಷ್ಟ ಗೋಚರವಾಗಿ ಅಲ್ಲ ಎನ್ನಬಹುದು.

**ಕಾಂಗ್ರೆಸ್–ಲಾಭ, ನಷ್ಟಗಳ ಲೆಕ್ಕಾಚಾರ**

ಇದಕ್ಕೆ ಪ್ರತಿಯಾಗಿ, ಶ್ರೀ ಅಶೋಕ ಮೆಹ್ತಾರವರ, ಹೆಚ್ಚು ಕಡಿಮೆ ಎಲ್ಲಾ ನಿಕಟವರ್ತಿಗಳೂ ಪ್ರಜಾ ಸೋಷಲಿಸ್ಟ್ ಪಾರ್ಟಿಯಿಂದ ಕಾಂಗ್ರೆಸ್‌ಗೆ ನಡೆದು ಬಂದವರೇ, ಎಲ್ಲಾ ರಾಜಕೀಯ ಪಕ್ಷಗಳನ್ನೂ ಗಮನಿಸಿದಾಗ ಜನಸಂಘ ಮಾತ್ರವೇ ತನ್ನ ಸದಸ್ಯರ ಬಿಗಿಯಾದ ಪಕ್ಷ ನಿಷ್ಠೆಯ ಬಗೆಗೆ ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದೆ. ಆದರೆ ಭಾರತೀಯ ಜನಸಂಘವೂ ಕೂಡಾ (ಬಿಜೆಎಸ್) ಇಬ್ಬರು ಸಂಸದರನ್ನೂ, ಒಬ್ಬ ಶಾಸಕರನ್ನೂ ಕಾಂಗ್ರೆಸ್‌ಗೆದುರಾಗಿ ಕಳೆದುಕೊಂಡಿದೆ.

**೧೯೬೨ರಿಂದ ವಿಭಜನೆಗಳು ಮತ್ತು ವಿಲೀನಗಳು**

ಕಳೆದ ಲೋಕಸಭಾ ಚುನಾವಣೆಗಳ ಕಾಲದಿಂದ ಕೆಲವು ವಿರೋಧ ಪಕ್ಷಗಳು ರೂಪಾಂತರಗೊಂಡು ವಿಕೃತವಾಗಿವೆಯಾದರೆ ಇತರೆ ಪಕ್ಷಗಳು ವಿಭಜಿತಗೊಂಡಿವೆ. ಸಮಾಜವಾದಿ ಪಕ್ಷ (ಸೋಷಿಯಲಿಸ್ಟ್ ಪಾರ್ಟಿ) ಮತ್ತು ಪ್ರಜಾ ಸೋಷಿಯಲಿಸ್ಟ್ ಪಕ್ಷ (ಪಿಎಸ್‌ಪಿ)ಗಳ ಒಕ್ಕೂಟ ಮತ್ತು ತದನಂತರದಲ್ಲಿ ಅವುಗಳ ವಿಭಜನೆ (ಪ್ರತ್ಯೇಕತೆ) ತುಂಬ ಸ್ವಾರಸ್ಯಪೂರ್ಣ ಸಂಗತಿಯೇ ಸರಿ. ಈ ಎಸ್‌ಎಸ್‌ಪಿ ಮತ್ತು ಈ ಪಿಎಸ್‌ಪಿಗಳ ಹಳೆಯ ಎಸ್‌ಪಿ ಮತ್ತು ಪಿಎಸ್‌ಐಗಳೇನಲ್ಲ. ಈ ಐಕಮತ್ಯ ಪ್ರಕ್ರಿಯೆಗೆ ಕೆಲವು ಸದಸ್ಯರು ಕಾಂಗ್ರೆಸ್‌ಗೂ, ಕೆಲವರು ಜನಸಂಘಕ್ಕೂ ವಲಸೆ ಹೋದ ನಷ್ಟದ ಬೆಲೆ ತೆರಲಾಗಿದೆ.

ಕಮ್ಯುನಿಸ್ಟ್ ಪಕ್ಷವು ಎಡ ಮತ್ತು ಬಲ ಪಕ್ಷಗಳಾಗಿ ವಿಭಜಿಸಲ್ಪಟ್ಟಿದೆ. ಸ್ವತಂತ್ರ ಪಕ್ಷವು ಅನಿಯೋಜಿತ, ರೂಪಾಂತರ ರಹಿತವಾದ ಎಂದಿನ ಜನ ಸಂದಣಿಯಂತೇ ಉಳಿದಿದೆ. ಅದರ ಸ್ಥಿತಿ ಹಾಗೂ ಅದರ ಸದಸ್ಯರ ನಿಷ್ಠೆಯನ್ನೂ ಕ್ಲುಪ್ತವಾಗಿ ತಿಳಿಯಲಾಗುತ್ತಿಲ್ಲ. ಜನಸಂಘವು ಮಾತ್ರ ಮಧ್ಯಪ್ರದೇಶದಲ್ಲಿ ಅಕ್ಷರಷಃ ಇಡೀ ಹಿಂದೂ ಮಹಾ ಸಭೆಯನ್ನೇ ಅಂದರೆ ರಾಮ ರಾಜ್ಯ ಪರಿಷತ್‌ನ ದೊಡ್ಡ ಹಾಗೂ ಪ್ರಭಾವೀ ವರ್ಗವನ್ನು ಮತ್ತು ಬಸ್ತಾರ್‌ನ ಸ್ವತಂತ್ರ ಅಭ್ಯರ್ಥಿಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಸಮರ್ಥವಾಯಿತು.

ಹಲವಾರು ಪ್ರಾದೇಶಿಕ ಪಕ್ಷಗಳ ವಸ್ತು ಸ್ಥಿತಿಯನ್ನು ಹೇಳುವ ಅಗತ್ಯವೇ ಇಲ್ಲ. ಏಕೆಂದರೆ ಅವುಗಳ ಪ್ರಭಾವ, ವರ್ಚಸ್ಸು ಸ್ಥಳೀಯ ಹಾಗೂ ಸೀಮಿತವಾದದ್ದು.

ಆದರೆ ಅಲ್ಲಿಯೂ ಕೂಡ ಡೆಮೊಕ್ರಾಟಿಕ್ ನ್ಯಾಷನಲ್ ಕಾನ್ಫರೆನ್ಸ್, ನ್ಯಾಷನಲ್ ಕಾನ್ಫರೆನ್ಸ್‌ನೊಂದಿಗೆ ವಿಲೀನಗೊಂಡದ್ದು ಮತ್ತು ನ್ಯಾಷನಲ್ ಕಾನ್ಫರೆನ್ಸ್ ಕಾಂಗ್ರೆಸ್‌ಲ್ಲಿ ವಿಲೀನಗೊಂಡುದು ಮತ್ತು ಬಕ್ಷಿ ಗುಲಾಂ ಮಹಮದ್‌ರ ನೇತೃತ್ವದಲ್ಲಿ ನ್ಯಾಷನಲ್ ಕಾನ್ಫರೆನ್ಸ್‌ನ ಪುನರುದಯ, ಪಂಜಾಬ್‌ನಲ್ಲಿ ಅಕಾಲಿದಳದ ವಿಭಜನೆ, ಡಿಎಂಕೆಯಲ್ಲಿ ಅಣ್ಣಾ ದೊರೈ–ಕರುಣಾನಿಧಿ ನಡುವಣ ಅಭಿಪ್ರಾಯ ಭಿನ್ನತೆ ಇವೆಲ್ಲವೂ ಗಮನಾರ್ಹ ಸಂಗತಿಗಳಾಗಿವೆ.

ಬೇರೆ ಅಂಶಗಳ ಜೊತೆ ಜೊತೆಗೆ ಮೇಲೆ ಹೇಳಿದ ಪಕ್ಷಗಳ ಸಂರಚನೆಯಲ್ಲಿನ ವ್ಯತ್ಯಾಸಗಳು ೧೯೬೭ರ ಚುನಾವಣಾ ಫಲಿತಾಂಶಗಳನ್ನು ಆಧರಿಸಿ ಮಾಡಬಹುದಾದ ಭವಿಷ್ಯವಾಣಿಗಳೆಲ್ಲವೂ ತಪ್ಪೆಂದೇ ಸಾಬೀತಾಗುವುದು ಶತಸಿದ್ಧ. ಇನ್ನೂ ಹೆಚ್ಚಿಗೆ ಹೇಳುವುದೆಂದರೆ ಭಾರತದಲ್ಲಿ ಮತಗಳು ಕೇವಲ ಪಕ್ಷದ ಆಧಾರದ ಮೇಲೆ ಚಲಾಯಿಸಲ್ಪಡುವುದಿಲ್ಲ. ಅಭ್ಯರ್ಥಿಯ ವ್ಯಕ್ತಿತ್ವ, ಆತನ ಜಾತಿ, ಸಮುದಾಯಗಳು ಮುಖ್ಯ ಪಾತ್ರವಹಿಸುತ್ತವೆ. ಚುನಾವಣೆಗಳು ಏಕಸದಸ್ಯ ಪ್ರಾತಿನಿಧಿಕ ಕ್ಷೇತ್ರಗಳಲ್ಲಿ ಸರಳ ಬಹುತಮದ ಆಧಾರದಿಂದಲೂ ನಡೆಯುವುದರಿಂದ ಅಭ್ಯರ್ಥಿಗಳ ಆಯ್ಕೆಯೂ ಮುಖ್ಯವಿಷಯವಾಗುತ್ತದೆ. ಸ್ಥಾನಗಳ ಅಂಕಿ ಸಂಖ್ಯೆಗಳ ಫಲಿತಾಂಶದ ಭವಿಷ್ಯವಾಣಿ ನುಡಿಯುವ ತಪ್ಪು ಕೆಲಸಕ್ಕೆ ನಾನು ಕೈ ಹಾಕುವುದಿಲ್ಲ. ಕೆಲವು ಸನ್ನಿವೇಶಗಳಲ್ಲಿ ಕನಿಷ್ಠ ಶೇ ೩೦ರಷ್ಟು ಬೆಂಬಲ ಮಾತ್ರದಿಂದಲೇ ಗರಿಷ್ಠ ಸ್ಥಾನಗಳು ಸಿಗಬಹುದು. ಹಾಗೆಯೇ, ದೊಡ್ಡ ಸಂಖ್ಯೆಯ ಸ್ಥಾನಗಳು ತೀರಾ ಕಡಿಮೆ ಅಂತರದಲ್ಲಿ ನಷ್ಟವಾಗಿ ಬಿಡಬಹುದು. ಕಳೆದ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ತೀರಾ ಕಡಿಮೆ ಅಂತರದಲ್ಲಿ ಸರಿಸುಮಾರು ಅಂದರೆ ೮೫ರಷ್ಟು ವಿಧಾನಸಭಾ ಶಾಸಕಾಂಗದ ಸ್ಥಾನಗಳನ್ನು ಕಳೆದುಕೊಂಡಿದೆ. ಅದೇ ರೀತಿ ಇಪ್ಪತ್ತು ಸ್ಥಾನಗಳನ್ನು ತೀರಾ ಕಡಿಮೆ ಅಂತರದಲ್ಲಿ ಗೆದ್ದುಕೊಂಡಿದೆ. ಒಂದು ಅತೀ ಸಣ್ಣ ಅಂತರವೂ ಕೂಡಾ ರಾಜ್ಯದಲ್ಲಿ ಗಣನೀಯವಾಗಿ ರಾಜಕೀಯ ಚಿತ್ರವನ್ನೂ ಬದಲಿಸುವುದು ಸಾಧ್ಯವಿತ್ತು.

**ಪಕ್ಷಗಳ ಮೂರು ಬಣಗಳು**

ಅಧಿಕಾರದ ಆಕಾಂಕ್ಷಿಗಳನ್ನು ಮೂರು ಗುಂಪುಗಳಾಗಿ ಗುರುತಿಸಬಹುದು. ಮೊದಲನೆಯದಾಗಿ ಕಾಂಗ್ರೆಸ್ ಇದೆ, ಅಧಿಕಾರದಲ್ಲಿರುವ ಪಕ್ಷವೂ ಇದಾಗಿದೆ. ಅನಂತರದ ಸ್ಥಾನ ಎಡಪಂಥೀಯರದು. ಅವರು ಸಿಪಿಐ, ಎಸ್‌ಎಸ್‌ಪಿ ಮತ್ತಿತರ ಅಲ್ಪ ಸಂಖ್ಯಾತ ಎಡಪಂಥೀಯ ಪಕ್ಷಗಳ ಬಣಗಳನ್ನು ಸೇರಿಸಿಕೊಂಡಿದ್ದಾರೆ. ಮೂರನೇ ಗುಂಪು ಕಮ್ಯುನಿಸ್ಟೇತರ ರಾಷ್ಟ್ರೀಯ ಪ್ರಜಾತಾಂತ್ರಿಕ ಪಕ್ಷಗಳನ್ನು ಒಳಗೊಂಡಿದೆ. ಸ್ವತಂತ್ರ ಹಾಗೂ ಜನಸಂಘಗಳು ಅವುಗಳ ಪ್ರಧಾನ ಘಟಕಗಳು,

ಆದರೆ ಬಹಳಷ್ಟು ಅತೃಪ್ತ ಕಾಂಗ್ರೆಸ್ ಬಣಗಳವರೂ ಅವರೊಂದಿಗೆ ಹೋಗಬಹುದು. ಪ್ರಸ್ತುತದಲ್ಲಿ ಅಂದರೆ ಪರಿವರ್ತನೆಗಾಗಿ ಸಾರ್ವತ್ರಿಕವಾದ ಅಪೇಕ್ಷೆ ಇರುವ ಸದ್ಯದ ದಿನಗಳಲ್ಲಿ ಈ ಮೂರನೇ ಗುಂಪಿನ ಕಡೆಗೆ ಭರವಸೆ, ನಿರೀಕ್ಷೆಯ ಕಣ್ಣುಗಳಿಂದ ಜನ ನೋಡುತ್ತಿದ್ದಾರೆ. ಚೈನಾ ಧಾಳಿ ಮತ್ತು ಆ ಸಂದರ್ಭದಲ್ಲಿ ಕಮ್ಯುನಿಸ್ಟರು ವಹಿಸಿದ ಪಾತ್ರ ಅವರ ಬಗೆಗಿನ ಅಭಿಪ್ರಾಯವನ್ನು, ಪ್ರತಿಷ್ಠೆಯನ್ನು ಹಾಳುಗೆಡವಿದೆ. ಅಷ್ಟೇ ಅಲ್ಲದೆ ಕೇರಳದಲ್ಲಿನ ಅವರ ಅಲ್ಪಾವಧಿ ಆಳ್ವಿಕೆಯೂ ಕೂಡಾ ಜನರಿಗೆ ಭ್ರಮ ನಿರಸನವನ್ನೇ ಉಂಟುಮಾಡಿದೆ. ಮತ ಪೆಟ್ಟಿಗೆಯ ಬಲದಿಂದ ತಾವು ಅಧಿಕಾರಕ್ಕೆ ಬರುವುದರ ಬಗೆಗೂ ಅವರಿಗೇನೂ ಅಂಥ ಹೆಚ್ಚಿನ ಭರವಸೆ ಇಲ್ಲವೆಂಬುದೂ ಅವರ ಇತ್ತೀಚಿನ ಬಂದ್ ಕಾರ್ಯಾಚರಣೆಗಳಿಂದ ಸ್ಪಷ್ಟವಾಗಿದೆ. ಇದರಲ್ಲಿ ಅವರು ಹೊಸ ಸಹವರ್ತಿಗಳನ್ನು ಸಮಾಜವಾದಿ ಸೋಷಿಯಲಿಸ್ಟ್ (ಎಸ್‌ಎಸ್‌ಪಿ) ಪಾರ್ಟಿಯಿಂದ ಕಂಡುಕೊಂಡಿದ್ದಾರೆ. ಎರಡೂ ಬಣಗಳವರು ಅತೃಪ್ತರೂ, ಹತಾಶರೂ ಆದಂತೆ ಕಾಣುತ್ತಿದ್ದಾರೆ. ಆದಾಗ್ಯೂ ಕೆಲವು ಪ್ರದೇಶಗಳಲ್ಲಿ, ಎಲ್ಲಿ ಕಾಂಗ್ರೆಸ್‌ಗೆ ಬಲವಾದ, ಗಂಭೀರವಾದ ಪ್ರತಿಸ್ಪರ್ಧಿ ಇಲ್ಲವೋ ಅಲ್ಲಿ ಕಾಂಗ್ರೆಸ್ ವಿರೋಧಿ ಭಾವನೆಗಳ ಪರಿಣಾಮ ರೂಪದ ಪ್ರಯೋಜವನ್ನೂ ಪಡೆಯುತ್ತಾರೆ. ರಾಷ್ಟ್ರೀಯ ಮಟ್ಟದಲ್ಲಿ ಮತಗಳ ಏರಿಕೆಯಲ್ಲಿ ಸುಧಾರಣೆ ಇಲ್ಲದಿರಬಹುದು. ಆದರೂ ಕೆಲವು ಪ್ರದೇಶಗಳಲ್ಲಿ ಅವರು ಸಾಕಷ್ಟು ಸಂಖ್ಯೆಯಲ್ಲಿ ಹಿಂದಕ್ಕೆ ಬರಬಹುದು.

ಕಾಂಗ್ರೆಸ್‌ನ ಮತಗಳ ಮೊತ್ತದಲ್ಲಿ ಗಣನೀಯವಾಗಿ ಇಳಿಕೆಯಾಗಲಿದೆ. ಕೇವಲ ಶೇ. ೨೫ಕ್ಕೆ ಇಳಿದರೂ ಯಾರೂ ಅಚ್ಚರಿ ಪಡಬೇಕಾಗಿಲ್ಲ. ಮೂರನೇ ಗುಂಪು ಮಾತ್ರ ಈ ವಲಸೆಯಿಂದ, ಕಾಂಗ್ರೆಸ್ ಬೆಂಬಲದಿಂದ ಖಚಿತವಾಗಿ ಸಿಂಹಪಾಲು ಪಡೆಯಲಿದೆ. ತನ್ನ ಮತಗಳನ್ನೂ ಸುಮಾರು ಶೇ ೧೬ ರಿಂದ ೩೨–೩೫ಕ್ಕೆ ಅಂದರೆ ಎರಡು ಪಟ್ಟು ಮತಗಳನ್ನು ಪಡೆಯುವುದು ಸುಲಭ ಸಾಧ್ಯ. ಅವರು ಪ್ರಜಾತಂತ್ರದಲ್ಲಿನ ತಮ್ಮ ವಿಶ್ವಾಸದಿಂದ ಕ್ಷೇತ್ರವನ್ನು ತುಂಬು ಆತ್ಮ ವಿಶ್ವಾಸದಿಂದ ಪ್ರವೇಶಿಸುತ್ತಿದ್ದಾರೆ. ಒಂದುವೇಳೆ ಅವರು ತಮ್ಮ ಸಂಘಟನೆಯನ್ನೂ ಜನತೆಯ ವ್ಯಾಪಕ ಬೆಂಬಲವಾಗಿ (ಮಾಡುವಷ್ಟು ಸಂಚಲನ ತಂದಲ್ಲಿ) ಮಾಡಿಕೊಳ್ಳುವಲ್ಲಿ ಸಜ್ಜುಗೊಳಿಸಿಕೊಳ್ಳುವುದು ಸಾಧ್ಯವಾದಲ್ಲಿ ಭವಿಷ್ಯವೇ ಅವರದಾಗುತ್ತದೆ.

### ಜನಸಂಘದ ಹೃದಯ ಸ್ಪರ್ಶಿಯಾದ ಪ್ರಗತಿ

ಪ್ರಸ್ತುತದ ಈ ವಿಶ್ಲೇಷಣೆಯ ಉದ್ದೇಶಕ್ಕೆ ಭಾರತೀಯ ಜನಸಂಘವನ್ನೂ ತೃತೀಯ ರಂಗದೊಂದಿಗೆ ಸೇರಿಸಲ್ಪಟ್ಟಿದೆ. ಸ್ವತಂತ್ರ ಪಕ್ಷದೊಂದಿಗೆ ಮತ್ತು ಅತೃಪ್ತ ಕಾಂಗ್ರೆಸಿಗರ ಬಣದೊಂದಿಗೆ ಗುರುತಿಸಲಾಗಿದೆ. ಆದರೂ ಜನಸಂಘವು ಯಾವುದೇ ಪಕ್ಷದೊಂದಿಗೆ ಯಾವುದೇ ಒಪ್ಪಂದಕ್ಕೆ ಒಳಪಡುವುದಾಗಲೀ, ರಾಷ್ಟ್ರೀಯ ಒಕ್ಕೂಟಕ್ಕೆ

ಸೇರುವುದಾಗಲೀ–ಏನನ್ನೂ ಮಾಡುವುದಿಲ್ಲವೆಂದು ತೀರ್ಮಾನಿಸಿದೆ. ಬದಲಿಗೆ, ಅದು ಚುನಾವಣೆಯಲ್ಲಿ ತನ್ನದೇ ಪಕ್ಷ ಪ್ರಣಾಳಿಕೆ, ಉಮೇದುವಾರಿಕೆ, ನಾಮಪತ್ರ, ಪಕ್ಷ ಚಿಹ್ನೆಗಳೊಂದಿಗೇ ಸ್ಪರ್ಧಿಸಲು ಉದ್ದೇಶಿಸಿದೆ. ಈ ನೀತಿ ನಿರ್ಣಯ ಮಾಡಿಕೊಳ್ಳಲು ಕಾರಣವೆಂದರೆ, ಅದು ಚುನಾವಣೆಯನ್ನು ಅಧಿಕಾರದ ಚುಕ್ಕಾಣಿ ಹಿಡಿಯಲು ಒಂದು ಅವಕಾಶ ಎಂದು ಮಾತ್ರ ಪರಿಗಣಿಸದೆ, ಜನರಿಗೆ ಅರಿವು ಮೂಡಿಸುವ ಒಂದು ಸಂದರ್ಭ ಎಂದು ಭಾವಿಸಿರುವುದೇ ಆಗಿದೆ. ಒಪ್ಪಂದಗಳಿಗೆ ಕೆಲವೊಂದು ಕನಿಷ್ಠ ಸಾಮಾನ್ಯ ಕಾರ್ಯಕ್ರಮಗಳ ಪ್ರಣಾಳಿಕೆಗಳ ಅಗತ್ಯವಿರುತ್ತದೆ. ಈ ಸಾಮಾನ್ಯ ಕಾರ್ಯಕ್ರಮ ಪ್ರಣಾಳಿಕೆಯು ಎಲ್ಲಾ ರಾಜಕೀಯ ಪಕ್ಷಗಳೂ ಘೋಷಿಸುವಂಥ ಕೆಲವೊಂದು ಸಾಮಾನ್ಯ/ಸಾಧಾರಣ ಅಂಶಗಳ ಏಕತಾನತೆಯ ಸಪ್ಪೆಯಾದ ನಿರೂಪಣೆ ಮಾತ್ರವೇ ಆಗಿ ಉಳಿದು ಬಿಡಬಹುದು. ಅಂಥ ರಾಜೀಸೂತ್ರಗಳು ಕಾರ್ಯಕರ್ತರ ಆದರ್ಶ, ನಿಲುವುಗಳನ್ನು ಕ್ಷೀಣಿಸಿಯೂ ಬಿಡಬಹುದು. ಅದಕ್ಕಿಂತ ಹೆಚ್ಚಾಗಿ, ಒಪ್ಪಂದಗಳು ಯಾವಾಗಲೂ ಒಂದು ನಕಾರಾತ್ಮಕ ಗುಣವನ್ನೂ ಹೊಂದಿರುತ್ತವೆ. ಕಾಂಗ್ರೆಸನ್ನು ವಿರೋಧಿಸುವುದು ಮಾತ್ರವೇ ನಮ್ಮ ಪರಮ ಧ್ಯೇಯವಾಗಿರಬಾರದು. ಜನಸಂಘವು ಯಾರೊಂದಿಗೂ ಯಾವುದೇ ಒಪ್ಪಂದಕ್ಕೆ ಸಹಿ ಹಾಕುವುದಿಲ್ಲವಾದರೂ ಕಮ್ಯುನಿಸ್ಟರು ಮತ್ತು ಮುಸ್ಲಿಂಲೀಗಿನ ಹೊರತಾದ ಪಕ್ಷಗಳಿಗೆ ತನ್ನ ಬಾಗಿಲನ್ನು ಮುಚ್ಚಿಲ್ಲ. ಈ ಹೊಂದಾಣಿಕೆಗಳು ಪ್ರಾಯೋಗಿಕ ನೆಲಗಟ್ಟಿನ ಮೇಲೆ ಅದೂ ಬಹುಮಟ್ಟಿಗೆ ಜಿಲ್ಲೆ ಅಥವಾ ಪ್ರಾದೇಶಿಕ ಮಟ್ಟದಲ್ಲಿ ತೀರ್ಮಾನಿಸಲ್ಪಡುವ ಮಟ್ಟಿಗೆ ಪರಿಣಾಮಕಾರಿಯಾಗಿರುತ್ತವೆ. ಮುಸ್ಲಿಂಲೀಗ್ ಮತ್ತು ಕಮ್ಯುನಿಸ್ಟ್‌ರನ್ನು ಹೊರಗಿಡಲು ಕಾರಣವೆಂದರೆ ಅವರುಗಳು ಪ್ರತಿನಿಧಿಸುವ ತಾತ್ವಿಕ ಸಿದ್ಧಾಂತವು ಮೊತ್ತ ರೂಪದಲ್ಲಿ ವಿಭಿನ್ನವೂ, ಭಾರತೀಯವಲ್ಲದ್ದೂ ಮತ್ತು ಪ್ರಜಾತಂತ್ರಕ್ಕೆ ವಿರುದ್ಧವಾದದ್ದೂ ಆಗಿದೆ. ನಾವು ಅವರೊಂದಿಗೆ ಯಾವುದೇ ವಿನಿಮಯ ಮಾಡಿಕೊಳ್ಳುವುದು ಸಾಧ್ಯವಿಲ್ಲ.

ಕಳೆದ ಐದು ವರ್ಷಗಳ ಅವಧಿಯಲ್ಲಿ ಭಾರತೀಯ ಜನಸಂಘವು ಎಲ್ಲ ಆಯವ್ಯಗಳಲ್ಲೂ ಬೆಳೆದುಬಿಟ್ಟಿದೆ. ಈಗ ಅದು ತನ್ನ ಶಾಖೆಗಳನ್ನೂ ದೇಶದ ಎಲ್ಲಾ ಭಾಗಗಳಿಗೂ ವಿಸ್ತರಿಸಿದೆ. ಆಯ್ದ ಕೆಲವು ಪ್ರದೇಶಗಳಲ್ಲಿ ಅದು ಉದ್ದೇಶಿತ ನಮೂನೆಯಲ್ಲಿ ಕೆಲಸ ಮಾಡಿದೆ. ಸರ್ಕಾರದ ತಪ್ಪು ಧೋರಣೆಗಳನ್ನು, ನೀತಿಗಳನ್ನು ಧೈರ್ಯವಾಗಿ ಹಾಗೂ ಸ್ಪಷ್ಟವಾಗಿ ವಿರೋಧಿಸುತ್ತಿದ್ದರೂ ರಾಷ್ಟ್ರದ ರಕ್ಷಣೆಯಂಥ ರಾಷ್ಟ್ರೀಯ ವಿಷಯಗಳಲ್ಲಿ ರಚನಾತ್ಮಕವಾಗಿ ಸಹಕರಿಸುತ್ತಲೂ ಇದೆ. ಜನಸಂಘವು ಮಾತ್ರವೇ ರಾಷ್ಟ್ರದ ರಕ್ಷಣೆಗೆ ಸರ್ವಪ್ರಥಮ ಆದ್ಯತೆ ನೀಡಿದ ಏಕೈಕ ಪಕ್ಷವಾಗಿದ್ದು ಚೈನಾ ಮತ್ತು ಪಾಕಿಸ್ತಾನಗಳಿಂದ ಬರಬಹುದಾದ ಅಪಾಯಗಳ ಬಗೆಗೆ ಎಚ್ಚರಿಸಿದ್ದೂ ಅದೇ ಪಕ್ಷ. ೧೯೫೭ ಮತ್ತು ೧೯೬೨ರ ಚುನಾವಣಾ ಪ್ರಣಾಳಿಕೆಗಳಲ್ಲಿ ಪಕ್ಷವು

ಯೋಜನಾ ಆದ್ಯತೆಗಳಲ್ಲಿ ಬದಲಾವಣೆಗಾಗಿ ಸಮರ್ಥಿಸಿಕೊಂಡಿತ್ತಲ್ಲದೆ ಬೆಲೆಗಳಲ್ಲಿ ಸ್ಥಿರತೆಗಾಗಿ ಹಾಗೂ ಸ್ವದೇಶೀ ಮತ್ತು ಸ್ವಾವಲಂಬನೆಗಳ ಪರವಾಗಿ ವಕಾಲತ್ತು ವಹಿಸಿತ್ತು. ಪಕ್ಷದ ಈ ಎಲ್ಲಾ ಹಾಗೂ ಇತರ ಹಲವು ನಿಲುವುಗಳು ಪ್ರಸಂಗ, ಸಂಗತಿಗಳಿಂದ ಸಮರ್ಥಿಸಲ್ಪಟ್ಟಿದ್ದರೂ ಕೂಡಾ! ಜನಸಂಘದ ವಿರೋಧಿಗಳು ಅದನ್ನು ಕೋಮುವಾದಿ ಎಂದೂ ಯಾವುದೇ ಆರ್ಥಿಕ ಕಾರ್ಯಕ್ರಮ ಇಲ್ಲದ ಪಕ್ಷವೆಂದೂ ಅಡ್ಡ ಹೆಸರಿಟ್ಟು ಕರೆದರು. ಆದರೆ ಈಗ ಯಾರೊಬ್ಬರೂ ಈ ಅಪಪ್ರಚಾರಕ್ಕೆ ಕಿವಿಗೊಡಲು ಸಿದ್ಧರಿಲ್ಲ. ಜನಸಂಘದ ರಾಷ್ಟ್ರೀಯವಾದವನ್ನು ಯಾರೊಬ್ಬರೂ ಪ್ರಶ್ನಿಸಲು ಸಾಧ್ಯವಿಲ್ಲ ಮತ್ತು ಅದರ ಆರ್ಥಿಕ ಸಿದ್ಧಾಂತವಂತೂ ಅರ್ಥಶಾಸ್ತ್ರ ಪರಿಣತರೆಂದು ಕರೆಸಿಕೊಂಡಿರುವವರ ಲಿಖಿತ ಆರ್ಥಿಕ ಸಿದ್ಧಾಂತಗಳಿಗಿಂತಲೂ ಹಿರಿದಾದ ಸಮರ್ಪಕತೆ ಹೊಂದಿಗೆ ಎಂಬುದನ್ನು ಶ್ರುತ ಪಡಿಸಿದೆ.

೧೬, ಆಗಸ್ಟ್ ೧೯೬೫ರಂದು ಪಕ್ಷವು ಭಾರಿಯೂ, ಶಿಸ್ತುಬದ್ಧವು, ಶಾಂತಿಯುತವೂ ಆದ ರೀತಿಯಲ್ಲಿ ಸಂಸತ್ತಿನಲ್ಲಿ ಮಂಡಿಸಿದ ನೀತಿಧೋರಣೆಗಳು ಸರ್ವಪಕ್ಷಗಳ ಮೆಚ್ಚುಗೆಯನ್ನು ಗಳಿಸಿದೆ ಮತ್ತು ಜನರ ಪರಿಗಣನೆಯಲ್ಲೂ ಪಕ್ಷವನ್ನೂ ಎತ್ತರಕ್ಕೇರಿಸಿದೆ. ಅದಕ್ಕೀಗ ದೊರಕುತ್ತಿರುವ ಪ್ರತಿಸ್ಪಂದನವೂ ಕೂಡಾ ಅತ್ಯುದ್ಭುತವಾಗಿದೆ. ಜನರ ನಂಬಿಕೆಗೆ ಯೋಗ್ಯವೆಂಬುದನ್ನು ಈಗ ಸಾಬೀತು ಪಡಿಸಬೇಕಾಗಿದೆ.

**ರಾಜ್ಯವಾರು ವಿಶ್ಲೇಷಣೆ**

ಉತ್ತರ ಪ್ರದೇಶ, ಮಧ್ಯಪ್ರದೇಶ, ಡೆಲ್ಲಿ, ಜಮ್ಮು ಮತ್ತು ಕಾಶ್ಮೀರಗಳಲ್ಲಿ ೧೯೬೨ರ ಚುನಾವಣೆಗಳಲ್ಲಿ ಜನಸಂಘವು ಪ್ರಮುಖ ವಿರೋಧ ಪಕ್ಷಗಾಗಿ ತಲೆ ಎತ್ತಿತು/ನಿಂತಿತು. ರಾಜಾಸ್ಥಾನದಲ್ಲಿ, ಸ್ವತಂತ್ರಪಕ್ಷ ಸಂಖ್ಯಾತ್ಮಕವಾಗಿ ಎರಡನೆಯದಾಗಿದ್ದರೂ, ಕಾರ್ಯತಾ ಅದು ಪ್ರಮುಖ ವಿರೋಧ ಪಕ್ಷವಾಗಿ ಕೆಲಸ ಮಾಡಿತು. ಪಂಜಾಬಿನಲ್ಲೂ ಕೂಡ ಈ ಕೆಲಸವನ್ನೂ ಪಕ್ಷವು ಮಾಡಬೇಕಾಗಿಬಂದಿತ್ತು. ಸಹಜವಾಗಿಯೇ ಈ ಎಲ್ಲ ಪ್ರದೇಶಗಳಲ್ಲೂ ರಾಜಕೀಯ ಶಕ್ತಿಗಳ ಧೃವೀಕರಣಕ್ಕೆ ಆಧಾರವಾಗಿ ಬೆಳೆದಿದೆ. ಇನ್ನೂ ಮುಂದಿನ ಚುನಾವಣೆಗಳಲ್ಲಿ ಅದು ಯಶಸ್ವಿಯಾಗಿ ಕಾಂಗ್ರೆಸನೊಂದಿಗೆ ಸ್ಪರ್ಧಿಸಲು ಸರಿಯಾಗಿ ಯೋಜನೆ ಹಾಕಿ ಕೊಳ್ಳಬೇಕಾಗುತ್ತದೆ. ಅದಕ್ಕೆ ತನ್ನ ಕರ್ತವ್ಯದ ಪ್ರಜ್ಞೆ ಇದೆ ಮತ್ತು ಕರ್ತವ್ಯ ನಿರ್ವಹಣೆಗೆ ಸಿದ್ಧತೆಯನ್ನು ನಡೆಸುತ್ತಿದೆ. ಬಿಹಾರ, ಮಹಾರಾಷ್ಟ್ರ ಮತ್ತು ಆಂಧ್ರಗಳಲ್ಲಿ ಒಟ್ಟು ಸ್ಥಾನಗಳ ಶೇ ೫೦ಕ್ಕಿಂತಲೂ ಹೆಚ್ಚಿನ ಸೀಟುಗಳಿಗೆ ಸ್ಪರ್ಧಿಸಲಿದೆ. ಬೇರೆ ರಾಜ್ಯಗಳಲ್ಲಿ ಅದು ತನ್ನ ಪ್ರಭಾವವನ್ನು ಸಾಕಷ್ಟು ಸಂಚಯನ ಮಾಡಿಕೊಂಡಿದೆಯಲ್ಲದೆ

ಪ್ರಧಾನವಾಗಿ ಅವುಗಳತ್ತ ಒತ್ತು ನೀಡಿ ಗಮನ ಹರಿಸಲಿದೆ. ಒಟ್ಟಾರೆಯಾಗಿ ೨೦೦೦ ವಿಧಾನಸಭಾ ಸ್ಥಾನಗಳಿಗೂ ೩೦೦ ಲೋಕಸಭಾ ಸ್ಥಾನಗಳಿಗೂ ಸ್ಪರ್ಧಿಸಲು ಅಂದಾಜು ಮಾಡಿದ್ದೇವೆ. ಏನಾದರೂ ಹೊಂದಾಣಿಕೆಗಳು ಮೂಡಿದಲ್ಲಿ ೧೫೦೦ ಶಾಸಕಸ್ಥಾನಗಳಿಗೂ ೨೫೦ ಸಂಸದ ಸ್ಥಾನಗಳಿಗೂ ಸ್ಪರ್ಧಿಸಬೇಕಾಗಬಹುದು.

ಈ ಮೊದಲೇ ಹೇಳಿದಂತೆ ನಾನು ಊಹೆಗಳನ್ನೂ ಮಾಡುವ ಗೊಂದಲಕ್ಕೆ ಬೀಳುವುದಿಲ್ಲ. ಆದರೆ ನಾವು ಬಹಳ ಆಶಾವಾದಿಗಳೂ ಹಾಗೂ ಆತ್ಮ ವಿಶ್ವಾಸದಿಂದ ಕೂಡಿದವರೂ ಆಗಿದ್ದೇವೆ. ಸಂಕಲ್ಪ ಮತ್ತು ಶ್ರದ್ಧಾಭಕ್ತಿಗಳಿಂದ ನಮ್ಮ ಕಾರ್ಯಕರ್ತರು ಬಹಳ ಶ್ರಮದಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನ್ಯಾಯಬಾಹಿರ ಪರಿಸ್ಥಿತಿ, (ಧಾರ್ಮಿಕ) ಅಧೋಗತಿ, ಹಿಂಸೆಗಳನ್ನು ಸೋಲಿಸಬೇಕಾಗಿದ್ದಲ್ಲಿ, ರಾಷ್ಟ್ರೀಯ ಪ್ರಜಾತಾಂತ್ರಿಕ ತತ್ವಗಳು, ಘಟಕಗಳ ಕಾರ್ಯಪ್ರವೃತ್ತವಾಗಬೇಕು ಮತ್ತು ಪ್ರಜಾತಾಂತ್ರಿಕ ಪ್ರಕ್ರಿಯೆಯ ಮೂಲಕವೇ ಪರಿವರ್ತನೆಯನ್ನು ತರಲು ಸಮರ್ಥರಾಗುತ್ತೇವೆಂದು ತಿಳಿದಿದೆ. ಜನ ಕಾಂಗ್ರೆಸನ್ನು ಸಹಿಸುವುದಿಲ್ಲ; ಕಮ್ಯೂನಿಸ್ಟರನ್ನು ಇಷ್ಟ ಪಡುವುದಿಲ್ಲ. ಅಂದ ಮೇಲೆ ರಾಷ್ಟ್ರವಾದಿಗಳು ಪರ್ಯಾಯವೊಂದನ್ನು ಕೊಡಬೇಕಗುತ್ತದೆ. ಅದನ್ನು ನಾವು ಕೊಡುತ್ತೇವೆ–ಅದೇ ನಮ್ಮ ವಚನ ಮತ್ತು ವಿಶ್ವಾಸ[ದ ಪ್ರತಿಜ್ಞೆ.]

**(ಮೂಲ : ಆರ್ಗನೈಸರ್ ೧೫–೦೪–೧೯೬೬)**

# ಒಂದು ಸ್ಮರಣೀಯ ಪತ್ರ

[ಶ್ರೀ ದೀನದಯಾಳ ಉಪಾಧ್ಯಾಯರು ೨೧ ಜುಲೈ, ೧೯೪೨ರಂದು ತಮ್ಮ ಸೋದರ ಮಾವನಿಗೆ, ತಾವು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾದದ್ದು ಏಕೆ ಎಂಬುದನ್ನೂ ವಿವರಿಸಿ ಲಖ್ಮೀಪುರದಿಂದ ಬರೆದ ಒಂದು ಸ್ಮರಣೀಯ ಪತ್ರ.]

**ಶ್ರೀಮಾನ್ ಮಾಮಾಜೀ, ಸಾದರ ಪ್ರಣಾಮಗಳು.**

ನಿಮ್ಮ ಪತ್ರ ಕೈಸೇರಿತು. ದೇವಿಯ ಅನಾರೋಗ್ಯದ ಸಂಗತಿ ತಿಳಿದು ಖೇದವಾಯಿತು. ನಿಮ್ಮ ಪತ್ರದಲ್ಲಿ ನೀವು ಬರೆದಿರುವುದೆಲ್ಲವೂ ಸರಿಯಾಗಿಯೇ ಇದೆ. ಅದಕ್ಕೆ ನಾನು ಏನೆಂದು ಉತ್ತರಿಸಬೇಕೆಂದು ನನಗೆ ತಿಳಿಯುತ್ತಿಲ್ಲ. ನಿಮ್ಮ ಪತ್ರವು ಮೊನ್ನೆ ನನ್ನ ಕೈಸೇರಿತು ಹಾಗೂ ಆಗಿನಿಂದಲೂ ಭಾವನೆಗಳು ಹಾಗೂ ಭಾಧ್ಯತೆಗಳು ಇವುಗಳ ನಡುವೆ ಭೀಕರ ಸಮರವೇ ನನ್ನ ಮನಸ್ಸಿನಲ್ಲಿ ನಡೆಯುತ್ತಿದೆ. ಭಾವನೆಗಳು, ಭಾವೋದ್ವೇಗಗಳನ್ನು ಒಂದು ದಿಕ್ಕಿನಲ್ಲಿ ಎಳೆದರೆ, ನನ್ನನ್ನು ಅವಿಶ್ರಾಂತ ಸ್ವೈರಣೆಯ ಚೇತನಗಳು ಇನ್ನೊಂದು ದಿಕ್ಕಿಗೆ ಎಳೆಯುತ್ತಿವೆ. ನಿಮ್ಮ ಸಲಹೆಯಂತೇ ನಾನೂ ಮೊದಲು ಒಂದು ಶಾಲೆಯಲ್ಲಿ ಉದ್ಯೋಗಕ್ಕೆ ಸೇರಿ, ಅದೇ ಸ್ಥಳದಲ್ಲಿ ಸಂಘದ ಕೆಲಸವನ್ನು ಅದೇ ಕಾಲಕ್ಕೆ ಮಾಡುತ್ತಿರುವುದೆಂದು ಆಲೋಚಿಸುತ್ತಿದ್ದೆ. ನಾನು ಲಕ್ನೋಗೆ ಬಂದಾಗ ಆ ನಿಟ್ಟಿನಲ್ಲಿ ಯೋಚಿಸುತ್ತಿದ್ದೆ. ಆದರೆ ಲಕ್ನೋದಲ್ಲಿ ಪ್ರಸಕ್ತ ಸನ್ನಿವೇಶವನ್ನು ಅವಲೋಕನ ಮಾಡಿ, ಮುಂದೆ ಮಾಡಬೇಕಾಗಿರುವ ವಿಶಾಲ ವ್ಯಾಪ್ತಿಯ ಕೆಲಸದ ಬಗೆಗೆ ಒಂದು ಕಲ್ಪನೆ ಮೂಡಿಬಂದಿತು. ಮತ್ತು ಒಂದು ನಿರ್ದಿಷ್ಟ ಪಟ್ಟಣದಲ್ಲಿ ಕೆಲಸ ಮಾಡುವುದಕ್ಕಿಂತಲೂ ಇಡೀ ಜಿಲ್ಲೆಯಲ್ಲಿ ಕೆಲಸ ಮಾಡಬೇಕಾಗುತ್ತದೆಂಬ ಸಲಹೆಯೂ ನನಗೆ ಬಂದಿದೆ. ಆ ಕ್ರಮದಿಂದಲೇ ಹಿಂದೂ ಸಮಾಜದಲ್ಲಿರವ ಕಾರ್ಯಕರ್ತರ ಕೊರತೆಯನ್ನು ಭರ್ತಿ ಮಾಡಬೇಕಾಗಿದೆ.

ಇಡೀ ಜಿಲ್ಲೆಯಲ್ಲಿ ನಾನು ಮಾಡಬೇಕಾಗಿರುವ ಪೂರ್ವ ನಿಯೋಜಿತ ಕೆಲಸದಿಂದಾಗಿ ಯಾವುದೇ ಒಂದು ಸ್ಥಳದಲ್ಲಿ ಮೂರು ಅಥವಾ ನಾಲ್ಕು ದಿನಗಳಿಗಿಂತ ಹೆಚ್ಚಿಗೆ ಇರಲು ಸಾಧ್ಯವಾಗುತ್ತಿಲ್ಲ ಅಥವಾ ಯಾವುದೇ ಕೆಲಸವನ್ನೂ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಂಘದ ಸ್ವಯಂ ಸೇವಕನಿಗೆ ಸಮಾಜ ಹಾಗೂ ರಾಷ್ಟ್ರದ ಕೆಲಸಕ್ಕೆ ಪ್ರಥಮ ಆದ್ಯತೆ; ಆತನ ವೈಯಕ್ತಿಕ ವಿಚಾರಗಳು ದೂರವಿರಬೇಕಾಗುತ್ತದೆ.

ಆದ್ದರಿಂದ ನಾನು ಈ ಸಂಬಂಧ ಸಲಹೆಗಳನ್ನು ಅಳವಡಿಸಬೇಕಾಯಿತು.

ನಾನು ಮಾಡಿದುದು ನಿಮ್ಮನ್ನು ತೊಂದರೆಗೀಡು ಮಾಡಿದೆ ಎಂದು ನನ್ನ ಭಾವನೆ. ಆದರೆ ಜ್ಞಾನಿಗಳೂ, ಗಂಭೀರ ಪ್ರವೃತ್ತಿಯವರೂ ಆದಂಥ ನಿಮ್ಮಂಥ ಒಬ್ಬವ್ಯಕ್ತಿ ಸಾರ್ವಜನಿಕ ಸೇವಾಸಕ್ತನಾದ ನನ್ನ ಕೆಲಸದ ಕುರಿತು ಅಸಂತೋಷಿಗಳಾದಲ್ಲಿ ಯಾರು ಸಾರ್ವಜನಿಕ ಸೇವೆಯಲ್ಲಿ ತೊಡಗಿಕೊಳ್ಳಲು ಮುಂದೆ ಬರುತ್ತಾರೆ? ಬಹುತೇಕವಾಗಿ ಸಂಘದ ಕುರಿತಂತೆ ಸರಿಯಾದ ಮಾಹಿತಿಯ ಕೊರತೆಯಿಂದಾಗಿ ಅಸಮಾಧಾನವಿರಬಹುದು. ಸಂಘಕ್ಕೂ ಕಾಂಗ್ರೆಸ್ ಅಥವಾ ಬೇರಾವುದೇ ರಾಜಕೀಯ ಸಂಘ, ಸಂಸ್ಥೆಗೂ ಯಾವುದೇ ಸಂಬಂಧವಿರುವುದಿಲ್ಲ. ಪ್ರಸಕ್ತ ರಾಜಕೀಯದಲ್ಲಿ ಯಾವುದೇ ಪಾತ್ರವಹಿಸುವುದಿಲ್ಲ. ಸತ್ಯಾಗ್ರಹಕ್ಕೆ ಮೊರೆ ಹೋಗುವುದಿಲ್ಲ, ಬಂದನಕ್ಕೊಳಗಾಗುವುದರಲ್ಲಿ ಸಂಘಕ್ಕೆ ಯಾವುದೇ ನಂಬಿಕೆ ಇರುವುದಿಲ್ಲ. ಅದು ಅಹಿಂಸಾವಾದಿಯೂ ಅಲ್ಲ ಹಿಂಸಾವಾದಿಯೂ ಅಲ್ಲ. ಹಿಂದೂಗಳಲ್ಲಿ ಐಕ್ಯತೆ ತರುವುದಷ್ಟೇ ಅದರ ಕೆಲಸ. ಕಳೆದ ಹದಿನೇಳು ವರ್ಷಗಳಿಂದಲೂ ಈ ಕೆಲಸವನ್ನು ಸಂಘವು ನಿರಂತರವಾಗಿ ಮಾಡುತ್ತಲೇ ಬಂದಿದೆ.

ದೇಶಾದ್ಯಂತ ಒಂದು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಶಾಖೆಗಳನ್ನು ಹೊಂದಿದ್ದು ಎರಡು ಲಕ್ಷಕ್ಕೂ ಹೆಚ್ಚಿಗೆ ಸ್ವಯಂ ಸೇವಕರಿದ್ದಾರೆ. ನಾನೊಬ್ಬನೇ ಈ ಕೆಲಸದಲ್ಲಿ ತೊಡಗಿಕೊಂಡಿರುವುದಲ್ಲ. ಇದೇ ಕೆಲಸಕ್ಕೆಂದೇ ಮೂನ್ನೂರಕ್ಕೂ ಹೆಚ್ಚಿನ ಕಾರ್ಯಕರ್ತರಿದ್ದಾರೆ. ಅವರೆಲ್ಲರೂ ಸುಶಿಕ್ಷಿತರು ಮತ್ತು ಒಳ್ಳೆಯ ಕುಟುಂಬಗಳಿಂದ ಬಂದವರು. ಅವರಲ್ಲಿ ಬಹಳಷ್ಟು ಮಂದಿ ಬಿ.ಎ., ಎಂ.ಎ., ಎಲ್.ಎಲ್.ಬಿ. ಕಲಿತವರಾಗಿದ್ದಾರೆ. ಕನಿಷ್ಠ ಪ್ರೌಢಶಾಲೆಯಲ್ಲಿ ಕಲಿಯದವರು ಯಾರೊಬ್ಬರೂ ಇಲ್ಲವೆನ್ನಿಸುತ್ತದೆ. ಅಥವಾ ಇದ್ದರೂ ಅಂಥವರ ಸಂಖ್ಯೆ ತೀರಾ ಕಡಿಮೆ. ಸಮಾಜ ಕಾರ್ಯಕ್ಕೆ ಅಷ್ಟೊಂದು ಮಂದಿ ಏಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ? ಸಾಮಾಜಿಕ ಪ್ರಗತಿ ಇಲ್ಲದೆ ವ್ಯಕ್ತಿಗತ ಅಭಿವೃದ್ಧಿ ಸಾಧ್ಯವಿಲ್ಲವೆಂಬ ಕಾರಣದಿಂದಲೇ ಅವರುಗಳು ಹಾಗೆ ಮಾಡಿದ್ದಾರೆ. ಯಾವುದೇ ಮನುಷ್ಯನೊಬ್ಬನು ಅತ್ಯುನ್ನತ ದರ್ಜೆಯ ಪ್ರಗತಿಯಲ್ಲಿ ಸಾಧಿಸಬಹುದಾದರೂ ಆತನ ಸಮಾಜದಲ್ಲೂ ತತ್ಸಮಾನವಾದ ಅಭಿವೃದ್ಧಿಯಾಗದ ಹೊರತೂ ಆತನ ಪ್ರಗತಿಗೆ ಯಾವುದೇ ಪ್ರಾಮುಖ್ಯತೆ ಇರುವುದಿಲ್ಲ. ಈ ಕಾರಣದಿಂದಾಗಿಯೇ ನಮ್ಮ ಕೆಲವು ಪ್ರಮುಖ ನಾಯಕರುಗಳೂ ಕೂಡಾ ವಿದೇಶಗಳಲ್ಲಿ ಅಪಮಾನವನ್ನು ಅನುಭವಿಸಬೇಕಾಗಿ ಬಂದಿದೆ. ಹರಿಸಿಂಗಗೌಡ, ಇಲ್ಲಿ ಮುಂದಾಳುವೆಂದು ಖ್ಯಾತನಾಮರಾಗಿದ್ದಾಗ್ಯೂ ಅವರೊಬ್ಬ ಭಾರತೀಯರೆಂಬ ಕಾರಣಕ್ಕೆ ಇಂಗ್ಲೆಂಡ್‌ನ ಹೋಟೆಲ್ ಒಂದರಲ್ಲಿ ವಸತಿ ಸೌಕರ್ಯವನ್ನು ನಿರಾಕರಿಸಲಾಯಿತು.

ಭಾರತದಲ್ಲಿ ಅತೀ ಉನ್ನತ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಯ ಉದಾಹರಣೆಯನ್ನು

ತೆಗೆದುಕೊಂಡು ವಾಸ್ತವವಾಗಿ ಆತನ ಸ್ಥಿತಿ ಏನೆಂಬುದನ್ನು ನೋಡಬಹುದು. ಮುಸಲ್ಮಾನ ಗೂಂಡಾಗಳು ಒಂದೇ ಏಟಿಗೆ ಆ ಅತ್ಯುನ್ನತ ನಾಗರಿಕನ ಗೌರವ, ಘನತೆಗಳನ್ನು ಮಣ್ಣುಪಾಲು ಮಾಡಿಬಿಡಬಹುದು. ಇದಕ್ಕೆ ಆ ಉನ್ನತ ವ್ಯಕ್ತಿ ಎತ್ತರದಲ್ಲಿದ್ದರೂ ಅವರು ಸೇರಿರುವ ಸಮಾಜವು ದುರ್ಬಲವೂ, ಅವನತಿಯತ್ತ ಸಾಗುತ್ತಿರುವುದೂ, ಸ್ವಾರ್ಥದ ತುತ್ತ ತುದಿಗೇರಿರುವುದೂ, ಅಧಿಕಾರ ರಹಿತವಾಗಿರುವುದೂ ಕಾರಣವಾಗಿರಬಹುದು. ನಮ್ಮಲ್ಲಿ ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಹಿತಾಸಕ್ತಿಗಳಿಗೇ ಮುಗಿಬೀಳುವುದೂ, ತನ್ನ ಬಗೆಗೆ ಮಾತ್ರವೇ ಚಿಂತಿಸಲು ಉದ್ಯುಕ್ತನಾಗುವುದು ಕಂಡುಬರುತ್ತಿದೆ. ಸೋರುತ್ತಿರುವ ದೋಣಿಯಲ್ಲಿ ಪಯಣಿಸುತ್ತಿರುವ ವ್ಯಕ್ತಿಯೊಬ್ಬನು ಎಷ್ಟೇ ಹೆಚ್ಚೆಂದರೂ ತನ್ನ ಸಾಮಾನು ಸರಂಜಾಮುಗಳನ್ನು ತನ್ನ ತಲೆಯ ಮೇಲೆ ಹೊತ್ತು ನಿಲ್ಲಬಹುದು. ಆದರೆ ಎಷ್ಟು ಹೊತ್ತು? ಆ ದೋಣಿ ಅವನೊಂದಿಗೇ ಮುಳುಗುವುದೇ ನಿಜ, ಮುಳುಗಲೇಬೇಕು. ಇದೇ ಪರಿಸ್ಥಿತಿಯಲ್ಲಿ ಹಿಂದೂ ಸಮಾಜ ಇಂದು ನಿಂತಿದೆ.

ಮನೆಗೆ ಬೆಂಕಿ ಬಿದ್ದಿದೆ; ಆದರೆ ಪ್ರತಿಯೊಬ್ಬರೂ ತಮ್ಮ ಪ್ರಾಣ ರಕ್ಷಣೆ ಮಾಡಿಕೊಳ್ಳುವುದಕ್ಕೆ ಮಾತ್ರವೇ ಪ್ರಯತ್ನಿಸುತ್ತಿದ್ದಾರೆ. ಯಾರೊಬ್ಬರೂ ಬೆಂಕಿಯನ್ನು ಆರಿಸುವ ಬಗೆಗೆ ಚಿಂತಿಸುತ್ತಿಲ್ಲ. ನೀವು ಸುರಕ್ಷಿತ ಸ್ಥಿತಿಯಲ್ಲಿದ್ದೀರೆಂದು ಕೊಂಡಿದ್ದೀರಾ? ತುರ್ತು ಪರಿಸ್ಥಿತಿ ಏರ್ಪಟ್ಟಲ್ಲಿ ಸಮಾಜವು ನಿಮ್ಮ ಬೆಂಬಲಕ್ಕೆ ನಿಲ್ಲುವುದೆಂಬ ನಂಬಿಕೆ ನಿಮಗಿದೆಯೇ? ಇಲ್ಲ. ಖಂಡಿತವಾಗಿಯೂ ಇಲ್ಲ. ಅವ್ಯವಸ್ಥಿತ ಸಮಾಜವೆಂಬ ಸರಳ ಕಾರಣದಿಂದಾಗಿ ಇಂಥ ಪರಿಸ್ಥಿತಿ ಬಂದಿದೆ. ನಾವು ದುರ್ಬಲರು ಮತ್ತು ನಮ್ಮ ಧಾರ್ಮಿಕ ಆರಾಧನೆ ಅರ್ಚನೆಗಳು ಕೂಡಾ ದೊಂಬಿ, ಗಲಭೆಗಳಿಗೆ ದಾರಿ ಮಾಡಿಕೊಡುತ್ತವೆ.

ನಮ್ಮ ಅಕ್ಕ ತಂಗಿಯರನ್ನು ಮುಸಲ್ಮಾನರು ಹೊತ್ತೊಯ್ಯುತ್ತಿದ್ದಾರೆ, ಅವರು ಬ್ರಿಟಿಷ್ ಸೈನಿಕರ ದೌರ್ಜನ್ಯಗಳಿಗೆ ಬಲಿಯಾಗುತ್ತಿದ್ದಾರೆ. ಅದೂ ಹಾಡು ಹಗಲಿನ ಬೆಳಕಿನಲ್ಲಿ! ನಾವು ನಮ್ಮ ಸಮಾಜದಲ್ಲಿ ಸ್ತ್ರೀಯರಿಗಿತ್ತಿರುವ ಘನತೆ, ಮಾನ್ಯತೆಗಳ ಕುರಿತು ಬೇಸರ, ದಣಿವಿಲ್ಲದಷ್ಟು ಜಂಭ ಕೊಚ್ಚಿಕೊಳ್ಳುವುದಕ್ಕೆ ಸಿದ್ಧರಿದ್ದರೂ ತೀರಾ ಅಸಹಾಯಕತೆಯಿಂದ ಸ್ತ್ರೀಯರ ಮೇಲಿನ ದೌರ್ಜನ್ಯಕ್ಕೆ ಮೂಕ ಸಾಕ್ಷಿಯಾಗಿದ್ದೇವೆ. ಇವನ್ನೆಲ್ಲ ತಡೆಗಟ್ಟಲು ನಾವು ಏನನ್ನೂ ಮಾಡಲಾಗುತ್ತಿಲ್ಲ. ಹೆಚ್ಚೆಂದರೆ ಸ್ವಾರಸ್ಯಕರ ಸುದ್ದಿಯಾಗಿ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಶೀರ್ಷಿಕೆಗಳಡಿಯಲ್ಲಿ ಪ್ರಕಟಿಸಬಹುದು ಅಥವಾ ಮಹಾತ್ಮಾಜಿಯವರು ಅದನ್ನು 'ಹರಿಜನ' ಪತ್ರಿಕೆಯಲ್ಲಿ ತಿರಸ್ಕರಿಸಿಯೂ ಬರೆಯಬಹುದು.

ಏಕೆ ಹೀಗೆ? ದುರಾಚಾರಿ, ದುಷ್ಕರ್ಮಿಗಳೊಂದಿಗೆ ಸೆಣಸಬಹುದಾದ ಅಧಿಕಾರ, ಸಾಮರ್ಥ್ಯಗಳಿರುವ ಹಿಂದೂಗಳಲ್ಲಿ (ಧೈರ್ಯದ) ಕೊರತೆ

ಇದ್ದಿರಬಹುದೇ? ಇಲ್ಲ. ಅದು ಹಾಗಲ್ಲ. ಒಬ್ಬ ವ್ಯಕ್ತಿ (ಈ ಹೋರಾಟಕ್ಕೆ ಟೊಂಕಕಟ್ಟಿ ನಿಂತರೆ) ಹಸ್ತ ತ್ರಾಣವನ್ನು ಕೈಗೆತ್ತಿಕೊಂಡು ಹೋರಾಟಕ್ಕೆ ನಿಂತರೆ ಸಮಾಜವು ಅವನ ಬೆಂಬಲಕ್ಕೆ ನಿಲ್ಲುವುದೆಂಬ ಭರವಸೆಯ ಕೊರತೆ ಇರುವುದರಿಂದ ಹೀಗಾಗುತ್ತದೆ. ವಾಸ್ತವವಾಗಿ, ಈ ಘಟನೆಗಳು ಜನತೆಯನ್ನು ಸಕ್ರಿಯರನ್ನಾಗಿ ಮಾಡುವಲ್ಲಿ, ಬಡಿದೆಬ್ಬಿಸುವಲ್ಲಿ ವಿಫಲವಾಗುತ್ತವೆ. ದೇಹದ ಒಂದು ಅಂಗಕ್ಕೆ ಪಾರ್ಶ್ವವಾಯು ಬಡಿದರೆ ಯಾವುದೇ ವಿಧವಾದ ಸಂವೇದನೆಗೂ ಸ್ಪಂದಿಸದಂತೆ ಅನುಭವ ಶೂನ್ಯವಾಗುತ್ತದೆ. ನಮ್ಮ ಸಮಾಜಕ್ಕೆ ಪಾರ್ಶ್ವವಾಯು ಬಡಿದಿದೆ. ಅದನ್ನು ಎಷ್ಟೋ ಆಘಾತಗೊಳಿಗೊಳಪಡಿಸಬಹುದಾದರೂ ವೇದನೆಯ ಅರಿವು ಅದಕ್ಕಿರುವುದಿಲ್ಲ. ಸಮಾಜದ ಪ್ರತಿಯೊಬ್ಬ ಸದಸ್ಯನೂ ತನ್ನದೇ ತಲೆಯ ಮೇಲೆ ಹೊಡೆತ ಬಿದ್ದಾಗ ಮಾತ್ರವೇ ನೋವನ್ನು ಗುರುತಿಸುತ್ತಾನೆ.

ಸಿಂಧ್ ಪ್ರಾಂತ್ಯದ ಗಡಿಭಾಗದಲ್ಲಿ ಹರ್ ಜನರಿದ್ದಾರೆ. ಆದರೆ ನಾವು ಆ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಒಂದುವೇಳೆ ಅವರು ತಮ್ಮ ಚಟುವಟಿಕೆಗಳನ್ನು ನಮ್ಮ ಪ್ರಾಂತ್ಯಕ್ಕೂ ವಿಸ್ತರಿಸಿದ್ದೇ ಆದರೆ ಸ್ವಲ್ಪಮಟ್ಟಿಗೆ ಸಂಚಲನವನ್ನುಂಟು ಮಾಡಬಹುದು. ಸನ್ನಿವೇಶದ ಗಂಭೀರತೆಯನ್ನು ಆ ಜನರು ನಮ್ಮ ಸ್ವಂತ ಸೋದರಿಯನ್ನೋ, ಹೆಣ್ಣು ಮಕ್ಕಳನ್ನೋ ಹೊತ್ತೊಯ್ಯಲು ಪ್ರಾರಂಭಿಸಿದಾಗ ಮಾತ್ರವೇ ಪೂರ್ತಿಯಾಗಿ ಅರ್ಥ ಮಾಡಿಕೊಳ್ಳುತ್ತೇವೆ. ಆದ್ದರಿಂದ ಒಬ್ಬ ನಿರ್ದಿಷ್ಟ ವ್ಯಕ್ತಿ ತನಗೆ ತಾನೇ ದೊಡ್ಡಸ್ತಿಕೆಯನ್ನು ಗಳಿಸಿಕೊಂಡ ಮಾತ್ರಕ್ಕೆ ಆ ಸಮಾಜಕ್ಕೆ ಆಗುವ ಒಳಿತಾದರೂ ಏನು? ಇನ್ನೂ ಹೇಳುವುದಾದರೆ ಅದು ಅಪಾಯಕಾರಿ ಬೆಳವಣಿಗೆ. ಒಂದು ಶರೀರದ ಸರ್ವಾಂಗೀಣ ಸ್ವಾಸ್ಥ್ಯಕ್ಕೆ ಇಡೀ ಶರೀರ ಪೂರ್ಣರೂಪದಲ್ಲಿ ಬೆಳವಣಿಗೆ ಹೊಂದಿರಬೇಕು, ಅದು ಬಿಟ್ಟು ಕಾಲುಗಳು ಮಾತ್ರವೇ ದಪ್ಪನಾಗಿ ಬೆಳೆದಿದ್ದು, ಉಳಿದಂತೆ ಶರೀರ ತೆಳ್ಳಗೂ, ಕೃಶವಾಗಿಯೂ ಇದ್ದರೆ ಅದು ಆನೆಕಾಲು ರೋಗಕ್ಕೆ ದಾರಿ ಮಾಡಿಕೊಡುತ್ತದೆ.

ಆದ್ದರಿಂದಲೇ ಬಹಳಷ್ಟು ಮಂದಿ ಕಾರ್ಯಕರ್ತರು ತಮ್ಮ ಎಲ್ಲಾ ವೈಯಕ್ತಿಕ ಆಶೆ ಆಕಾಂಕ್ಷೆಗಳನ್ನು ತ್ಯಾಗ ಮಾಡಿ ತಮ್ಮನ್ನು ತಾವು ಸಾದ್ಯಂತವಾಗಿ ಸಮಾಜದ ಏಳ್ಗೆಗಾಗಿ ಸಮರ್ಪಿಸಿಕೊಂಡಿದ್ದಾರೆ. ನಮ್ಮ ಹಿಂದುಳಿಯುವಿಕೆಗೆ ಸಮಗ್ರತೆಯ ಕೊರತೆಯೇ ಕಾರಣ. ಬೆಂತರ ಪಿಡುಗುಗಳು–ಅಜ್ಞಾನದಂತವು ಒಂದು ಸಮಾಜದ ನಿಮ್ನ ಸ್ಥಿತಿಯ ಅವಿಭಾಜ್ಯ ಪರಿಣಾಮಗಳಲ್ಲದೆ ಬೇರೇನಲ್ಲ. ಆದ್ದರಿಂದ ಸಂಘಟನೆಯೊಂದೇ ಸಂಘವು ಸಾಧಿಸಲಿಚ್ಛಿಸುವ ಏಕೈಕ ಗುರಿಯಾಗಿದೆ. ಸಂಘದ ಪ್ರಾಯೋಗಿಕ ಆಕೃತಿ ಅಥವಾ ವಾಸ್ತವಿಕ ಸ್ವರೂಪವನ್ನು ನೀವು ಆಗ್ರಾಕ್ಕೆ ಬಂದಾಗ ನೋಡಬಹುದಾಗಿದೆ. ಸಂಘದ ವಾಸ್ತವಿಕ ಕಾರ್ಯ ವಿಧಾನ. ಅದರ ಉಪಯುಕ್ತತೆಗಳನ್ನು ಅವಲೋಕಿಸಿದ ನಂತರ, ನಿಮ್ಮ ಮಕ್ಕಳಲ್ಲೊಬ್ಬ ಅದರ

ಕಾರ್ಯನೀತಿಯನ್ನು ತನ್ನ ಜೀವನ ಧ್ಯೇಯವಾಗಿ ಅಳವಡಿಸಿಕೊಂಡಿರುವನೆಂದು ನೀವೇ ಸಂತೋಷ ಪಡುವಿರೆಂದು ನಾನು ಭಾವಿಸಿದ್ದೇನೆ.

ದೇವರು ನಮ್ಮ ಕುಟುಂಬಕ್ಕೆ ಸ್ವಲ್ಪ ಸ್ಥಿತಿಗತಿಯನ್ನು ಕರುಣಿಸಿದ್ದಾನೆ. ಅಂದಮೇಲೆ ದೇಶ ಸೇವೆಗಾಗಿ ನಮ್ಮ ಕುಟುಂಬದ ಸದಸ್ಯರಲ್ಲೊಬ್ಬನನ್ನಾದರೂ ಕೊಡಲು ಸಾಧ್ಯವಿಲ್ಲವೇ? ನನಗೆ ಶಿಕ್ಷಣ ಕೊಟ್ಟು ನೈತಿಕ ಮಾರ್ಗದರ್ಶನ, ಬೇರೆಲ್ಲ ವಿದ್ಯಾರ್ಹತೆಗಳನ್ನು ಒದಗಿಸಿರುವ ನೀವು ಈಗ ನನ್ನನ್ನು ಸಮಾಜದೆಡೆಗೆ ಅದೂ ನಾವು ಎಷ್ಟೊಂದು ಋಣಿಗಳಾಗಿರುವ ಸಮಾಜಕ್ಕೆ ಕೊಡಲು ಸಾಧ್ಯವಿಲ್ಲವೆ? ಇದು ತ್ಯಾಗವಂತೂ ಅಲ್ಲ, ಇನ್ನು ಹೇಳುವುದಾದರೆ ಇದು ಬಂಡವಾಳ ಹೂಡಿಕೆ (ಎನ್ನಲಡ್ಡಿ ಇಲ್ಲ) ಸಮಾಜವೆಂಬ ಕೃಷಿ ಕ್ಷೇತ್ರಕ್ಕೆ ಗೊಬ್ಬರವನ್ನು (ಪೋಷಕ ದ್ರವ್ಯ) ಒದಗಿಸಿದಂತೆ. ಇತ್ತೀಚಿನ ದಿನಗಳಲ್ಲಿ ಸುಗ್ಗಿ ಕೊಯಲು ಅಥವಾ ಫಸಲು ಕಟಾವು ಮಾಡುವುದರಲ್ಲಿ ಆಸಕ್ತರಾಗಿದ್ದೇವೆಯೇ ವಿನಾ ಹೊಲಕ್ಕೆ ಗೊಬ್ಬರ ಒದಗಿಸುವುದನ್ನು ಮರೆಯುತ್ತಿದ್ದೇವೆ. ಭೂಮಿ ಅನುತ್ಪಾದಕವೂ, ಬಂಜರು ನೆಲವೂ ಆಗುತ್ತಾ ಬರುವ ಅಪಾಯವಿದೆ. ಕೆಲವೊಂದು ಮೌಲ್ಯರಹಿತ ಆಶೆ ಅಪೇಕ್ಷೆಗಳನ್ನು ಸಮಾಜದ ಪ್ರಯೋಜನ, ಸಂರಕ್ಷಣೆಗಳ ಸಲುವಾಗಿ ಬಿಟ್ಟು ಬಿಡಲು ಸಾಧ್ಯವಿಲ್ಲವೆ? ಹಾಗೂ ರಾಮನು ಕಾಡಿಗೆ ಹೋದ ಕಾರಣಕ್ಕೆ, ಕೃಷ್ಣನು ಸಹಿಸಿದ ಅಸಂಖ್ಯಾತ ಕಷ್ಟ ಕೋಟಲೆಗಳ ಕಾರಣಕ್ಕೆ ರಾಣಾ ಪ್ರತಾಪಸಿಂಹನು ಕಾಡಿನಿಂದ ಕಾಡಿಗೆ ಅಲೆದ ಕಾರಣಕ್ಕೆ, ಶಿವಾಜಿ ಸರ್ವಸ್ವವನ್ನೂ ತ್ಯಾಗ ಮಾಡಿದ ತತ್ವಕ್ಕೆ, ಗುರು ಗೋವಿಂದ ಸಿಂಹನು ತನ್ನ ಎಳೆಯ ಬಾಲಕರನ್ನು ಜೀವಂತವಾಗಿ ಸಮಾಧಿ ಮಾಡಲು ಅನುಮತಿಸಬೇಕಾಗಿ ಬಂದ ತಾತ್ವಿಕ ಕಾರಣಕ್ಕೆ ಈ ಸಣ್ಣ ಆಮಿಷಗಳನ್ನು ಬದಿಗೊತ್ತಲು ಸಾಧ್ಯವಿಲ್ಲವೇ? ಈ ದಿನ ಭಿಕ್ಷಾ ಪಾತ್ರೆಯನ್ನು ಕೈಯ್ಯಲ್ಲಿ ಹಿಡಿದು ನಮ್ಮಿಂದ ಸಮಾಜವು ಭಿಕ್ಷೆ ಬೇಡುತ್ತಿದೆ. ಅದರ ಬೇಡಿಕೆಗಳಿಗೆ ಪ್ರತಿಯಾಗಿ ನಾವು ಇದೇ ಔದಾಸೀನ್ಯವನ್ನು ಹೀಗೇ ಮುಂದುವರಿಸಿದ್ದೇ ಆದಲ್ಲಿ ನಾವು ಅತಿಯಾಗಿ ಪ್ರೀತಿಸುವ ಬಹುದೊಡ್ಡ ಭಾಗವನ್ನು ಕಳೆದುಕೊಳ್ಳುವ ದಿನವೊಂದು ಬರಬಹುದು.

ಸಂಘದ ಕಾರ್ಯ ವಿಧಾನದ ಬಗೆಗೆ ಸ್ವಲ್ಪ ತಿಳಿವಳಿಕೆ ಈಗಾಗಲೇ ನಿಮಗೆ ಇದ್ದಿದ್ದಲ್ಲಿ, ಅದರ ಕ್ರಿಯಾಶೀಲತೆಯ ಬಗೆಗೆ ಯಾವುದೇ ರೀತಿಯ ಅಪವಾದವನ್ನು ಸಹಿಸಿಕೊಳ್ಳುತ್ತಿರಲಿಲ್ಲವೆಂದು ನಾನು ಖಾತರಿಯಾಗಿ ಹೇಳಬಲ್ಲೆ. ನಿಮಗೆ ಅಪಖ್ಯಾತಿಯನ್ನು ತರುವಂಥ ಯಾವುದೇ ಕೆಲಸವನ್ನೂ ನಾನು ಮಾಡುವುದಿಲ್ಲ. ಬದಲಿಗೆ, ನಿಮ್ಮ ಪುತ್ರರಲ್ಲಿ ಒಬ್ಬನನ್ನು ರಾಷ್ಟ್ರ ಹಾಗೂ ಸಮಾಜದ ಕಾರಣಗಳಿಗಾಗಿ ಬಿಟ್ಟು ಕೊಟ್ಟುದಕ್ಕೆ ಹೆಮ್ಮೆ ಪಡುತ್ತೀರಿ. ನನ್ನನ್ನು ಬೆಳೆಸುವಾಗ ಕರ್ತವ್ಯ ಪ್ರಜ್ಞೆಯೊಂದರಿಂದ ಮಾತ್ರವೇ ಪ್ರೇರೇಪಿಸಲ್ಪಟ್ಟಿದ್ದೀರಿ. ಬೇರಾವುದೇ ವಿಚಾರಗಳಿದ್ದಿರಲಿಲ್ಲ. ಭಾವನಾತ್ಮಕ ಅಂಶವು ಆ ಕರ್ತವ್ಯ ಪ್ರಜ್ಞೆಗಿಂತ ಉತ್ತಮ ಸಂಗತಿಯಾಗಬಲ್ಲುದೇ ಕೊನೆಗೆ? ಇಲ್ಲಿಯವರೆಗೆ ನಿಮ್ಮ ಕರ್ತವ್ಯವು ನಿಮ್ಮ ಕುಟುಂಬಕ್ಕೆ ಮಾತ್ರವೇ ಸೀಮಿತವಾಗಿತ್ತು,

ಆದರೀಗ ಅದು ಪೂರ್ಣತಃ ಹಿಂದೂ ಸಮಾಜದವರೆಗೆ ವಿಸ್ತರಿಸಲ್ಪಡುತ್ತದೆ ಮಾತ್ರವಲ್ಲದೆ ಇಡೀ ಹಿಂದೂ ಸಮಾಜವನ್ನೇ ಅಪ್ಪಿಕೊಳ್ಳಲಿದೆ. ಕಾಲ ಕಳೆದಂತೆಲ್ಲ ಅದು ನಿಮ್ಮ ಕರ್ತವ್ಯದ ವಿಸ್ತರಣೆಗೆ ಮತ್ತು ಅಧೀನಾನುಸರಣೆಗಳಲ್ಲದೆ ಮತ್ತೇನೂ ಅಲ್ಲ. ಕರ್ತವ್ಯವು ಭಾವನಾತ್ಮಕತೆಯನ್ನು ಮೀರಿ ನಿಲ್ಲಬೇಕು. ತಮ್ಮ ಏಕೈಕ ಪುತ್ರರನ್ನು ಕೂಡಾ ಸಂತೋಷದಿಂದ ಬಿಟ್ಟುಕೊಟ್ಟ ಜನರಿದ್ದಾರೆ. ನೀವಾದರೂ ಮೂವರು ಪುತ್ರರನ್ನು ಪಡೆದ ಅದೃಷ್ಟವಂತರಾಗಿದ್ದೀರಿ. ಒಬ್ಬನೇ ಒಬ್ಬನನ್ನು ಸಮಾಜಕ್ಕೆ ಕೊಡಲಾರಿರ? ಬೇಡ–ಇಲ್ಲವೆಂದು ಹೇಳುವ ವ್ಯಕ್ತಿ ನೀವಲ್ಲ ಎಂದು ನಾನು ಬಲ್ಲೆ. ಒಂದು ಸುದೀರ್ಘ ಉಪನ್ಯಾಸದಿಂದ ನಿಮ್ಮನ್ನು ಬಾಧಿಸುತ್ತಿರಬಹುದೆಂದು ನೀವು ಭಾವಿಸುತ್ತಿರಬಹುದು. ಆದರೆ ಅಂಥ ಯಾವುದೇ ರೀತಿಯ ಕೆಲಸ ಮಾಡುವುದು ನನ್ನ ಉದ್ದೇಶವಾಗಿರಲಿಲ್ಲ. ಆದರೆ ಸಂಘವು ಏನು ಕೆಲಸ ಮಾಡುತ್ತಿದೆ ಎಂಬುದರ ಸೂಕ್ತ ಪರಿಚಯ ಮಾಡಿಸುವುದಷ್ಟೆ ನನ್ನ ಅಪೇಕ್ಷೆಯಾಗಿತ್ತು. ಒಂದು ಸಂಸ್ಥೆಯನ್ನು ಅದರ ಧ್ಯೇಯೋದ್ದೇಶಗಳು ಹಾಗೂ ಕಾರ್ಯಾ ನೀತಿಗಳಿಂದ ನಿರ್ಣಯಿಸಲಾಗುತ್ತದೆ. ಪಂಡಿತ್ ಶ್ಯಾಮ್ ನಾರಾಯಣಜೀ ಮಿಶ್ರಾ, ಅಂದರೆ ನಾನು ಇಲ್ಲಿ ಯಾರೊಂದಿಗೆ ಇರುತ್ತಿದ್ದೇನೆಯೋ ಅವರು ಖ್ಯಾತ ವಕೀಲರು ಹಾಗೂ ಅತ್ಯಂತ ಗೌರವಾನ್ವಿತ, ಜವಾಬ್ದಾರಿಯುತ ವ್ಯಕ್ತಿ. ಜೇಲಿಗೆ ಹೋಗುವ ಗುಂಪಿಗೆ ಸೇರಿದವರಲ್ಲ. ಅವರ ಉಸ್ತುವಾರಿಯಲ್ಲಿರುವ ನಾನು ಯಾವುದೇ ಬಗೆಯ ಬೇಜವಾಬ್ದಾರಿಯ ವರ್ತನೆಯನ್ನು ಮಾಡಲು ಸಾಧ್ಯವೇ ಆಗುವುದಿಲ್ಲ. ಎಲ್ಲವೂ ಚೆನ್ನಾಗಿದೆ. ದಯವಿಟ್ಟು ಬರೆಯಿರಿ. ದೇವಿಯ ಚಿಕಿತ್ಸೆಯ ವಿಷಯದಲ್ಲಿ ಅಲೋಪತಿಯಿಂದ ಹೋಮಿಯೋಪತಿಗೆ ಬದಲಿಸುವುದೇ ಬಹುಶಃ ಉತ್ತಮವೆಂದು ತೋರುತ್ತದೆ. ದೇವಿಯ ಅನಾರೋಗ್ಯವನ್ನು ಪೂರ್ಣ ಲಕ್ಷಣಗಳ ಜೊತೆಗೆ ರೋಗದ ಪೂರ್ಣ ಮಾಹಿತಿ, ವಿವರಗಳನ್ನು ಒದಗಿಸಲು ನಿಮಗೆ ಸಾಧ್ಯವಾದಲ್ಲಿ, ಇಲ್ಲಿನ ಖ್ಯಾತ ಹೋಮಿಯೋ ತಜ್ಞರೊಬ್ಬರನ್ನು ಸಂಪರ್ಕಿಸಿ ಸಲಹೆ ಪಡೆಯಲು ಹಾಗೂ ಸೂಕ್ತ ಔಷಧವನ್ನು ಸೂಚಿಸುವಂತೆ ಕೇಳಿಕೊಳ್ಳಲು ಸಾಧ್ಯವಾಗಬಹುದು, ಹೋಮಿಯೋಪತಿ ಚಿಕಿತ್ಸೆಯು ಸುರಕ್ಷಿತವೂ ಹೌದು, ದುಷ್ಪರಿಣಾಮ ರಹಿತವೂ ಹೌದು. ಭಾಯಿ ಸಾಹೇಬರಿಗೂ ಭಾಭೀಜಿಗೂ ನನ್ನ ನಮಸ್ಕಾರಗಳು. ದೇವಿ ಮತ್ತು ಮಹಾದೇವಿಗೆ ನನ್ನ ಪ್ರೀತಿಯ ನೆನಕೆಗಳು. ದಯವಿಟ್ಟು ಉತ್ತರಿಸಿರಿ.

ಭಾಯಿ ಸಾಹೇಬರು ನನಗೆ ಬರೆಯುವುದೇ ಇಲ್ಲ.

ನಿಮ್ಮ ಮಗ

**ದೀನಾ**

---

* (**'ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಎ. ಪ್ರೊಫೈಲ್'**–ಸುಧಾಕರ್ ರಾಜೆಯವರಿಂದ ಸಂಪಾದಿತ ಗ್ರಂಥದಿಂದ ಆಯ್ದ ಭಾಗ)

**(ಪಂ. ದೀನದಯಾಳರು ಬರೆದ ಪತ್ರವಿದು. ಸಂ.)**

# ಯಾಂತ್ರೀಕರಣಕ್ಕೆ ಹೊರತಾದ ಬೇಸಾಯಪದ್ಧತಿ

ಕೃಷಿ ಪ್ರಗತಿಯನ್ನು ಎರಡು ಪದರದ ಕಾರ್ಯಕ್ರಮದ ಮೂಲಕ ಸಾಧಿಸುವುದು ಸಾಧ್ಯವಿದೆ–ತಾಂತ್ರಿಕ ಮತ್ತು ಸಾಂಸ್ಥಿಕ. ಮೊದಲನೆಯದು ಬೇಸಾಯ ಪದ್ಧತಿಗಳು, ಹೂಡಿಕೆಗಳು ಹಾಗೂ ಗಾತ್ರ ಪರಿಮಾಣಗಳ ಕುರಿತು ನಿರೂಪಿಸುತ್ತದೆ. ಎರಡನೆಯದರಲ್ಲಿ ಭೂಧೃತಿ ಅಥವಾ ಭೂಹಿಡುವಳಿ ಪದ್ಧತಿಯಲ್ಲಿ ನಾವು ಬದಲಾವಣೆಯನ್ನು ತರಬೇಕಾಗುತ್ತದೆ ಮತ್ತು ಹೂಡಿಕೆಗಳ ಸರಬರಾಜು ಮತ್ತು ಉತ್ಪನ್ನಗಳ ಮಾರಾಟಗಳಿಗೆ ಸಂಬಂಧಪಟ್ಟಂತೆ ಸಂಸ್ಥೆಗಳನ್ನು ರಚಿಸಬೇಕಾಗುತ್ತದೆ. ಬೇರೆ ರೀತಿಯಿಂದ ಹೇಳುವುದಾದರೆ ಕೃಷಿ ಅಭಿವೃದ್ಧಿಗೆ ಒಂದು ಸಮಗ್ರ ವಿಧಾನವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಅಂಥದೇ ಸಮಾನ ಸದೃಶವಾದ ವಿಧಾನವನ್ನು ಕೈಗಾರಿಕೆಗಳಿಗೂ ಅಳವಡಿಸಿಕೊಳ್ಳಬೇಕಾಗುತ್ತದೆ.

**ಬೇಸಾಯ ಪದ್ಧತಿಗಳಲ್ಲಿ ಸುಧಾರಣಾ ವಿಧಾನಗಳು:**

ಭಾರತೀಯ ರೈತರು ಆಯಾ ಕಾಲಕ್ಕನುಗುಣವಾದ ಕೃಷಿ ವಿಧಾನವನ್ನು ಕಂಡುಕೊಂಡಿದ್ದಾರೆ. ಕಾಲಯೋಗ್ಯವಾದ ವಿಧಾನಗಳನ್ನು, ಅಸ್ತಿತ್ವದಲ್ಲಿರುವ ಭಾರತೀಯ ಸಂದರ್ಭಗಳಲ್ಲಿ ಸರಿಯಾಗಿ ಪ್ರಯತ್ನಿಸಿ ಪರೀಕ್ಷಿಸದಿರುವ ವಿಧಾನಗಳ ಪರವಾಗಿ ಹಠಾತ್ತನೆ ತ್ಯಜಿಸಿಬಿಡಬಾರದು. ಪರ್ಯಾಯ ಬೆಳೆಗಳ ಸರಣಿ ವಿಧಾನ, ಹಸಿರು/ಎಲೆ ಗೊಬ್ಬರ. ಜೈವಿಕ ಗೊಬ್ಬರಗಳು, ಮಣ್ಣು ಕುಸಿತಕ್ಕೆ ಅಂಚು ಕಟ್ಟುವಿಕೆ ಮತ್ತಿತರ ಬೇಸಾಯ ಪದ್ಧತಿಗಳ ಪರಿಚಯ ಭಾರತೀಯ ರೈತರಿಗೆ ಸಾಕಷ್ಟಿದ್ದು ನುರಿತಿರುತ್ತಾರೆ. ಭಾರತೀಯ ಕೃಷಿಕರು ಭೂಮಿಯ ಫಲವತ್ತತೆಯನ್ನು ಶತಮಾನಗಳಿಂದಲೂ ಕಾಯ್ದುಕೊಂಡು ಬರುತ್ತಿದ್ದಾರೆ. ಆದರೂ, ಇತ್ತೀಚಿನ ಕೆಲವರ್ಷಗಳಿಂದ ಅವರು ತಮ್ಮ ಪೂರ್ಣ ಜ್ಞಾನವನ್ನು ಅನ್ವಯಿಸಲು ಶಕ್ತರಾಗಿಲ್ಲವೆಂಬುದೂ ಸತ್ಯ.

ಭಾರತೀಯ ಬೇಸಾಯ ಪದ್ಧತಿಯು ಬಹಳಮಟ್ಟಿಗೆ ಇಂದ್ರ ದೇವತೆಯನ್ನು ಅವಲಂಬಿಸಿದೆ. (ಮಳೆ ದೇವತೆಯನ್ನು) ಮಳೆ ಪಂಚಾಂಗವೇ ಭಾರತೀಯ ಕೃಷಿಕನ ಜೀವನ ರೇಖೆ ಇದ್ದಂತೆ ಮುಂಗಾರು ತಿಂಗಳುಗಳು ನಿಶ್ಚಿತವಾಗಿ ಗುರುತಿಸಲ್ಪಟ್ಟಿದ್ದರೂ, ಯಾವುದೇ ಒಂದು ಸ್ಥಳ, ಪ್ರದೇಶಕ್ಕೆ ಇಂತಿಷ್ಟೇ ಮಳೆ ಬೀಳುವುದೆಂದು ಯಾರೂ ಭವಿಷ್ಯ ನುಡಿಯುವುದು, ಮೊದಲೇ ತಿಳಿಯುವುದು ಸಾಧ್ಯವಿಲ್ಲ. ಅಂದಾಜು

ಮಾಡುವುದು ಸಾಧ್ಯವಿಲ್ಲವಾದರೂ, ಅನಾವೃಷ್ಟಿ, ಅತಿವೃಷ್ಟಿಗಳಾದ ಸಂದರ್ಭಗಳಲ್ಲಿ ಪರಿಹಾರ ಕಂಡುಕೊಳ್ಳುವುದು ಕಷ್ಟವೇ ಸರಿ. ದೇಶದ ಆಡಳಿತಾಂಗವಂತೂ ಪ್ರಾರಂಭದಿಂದಲೂ ನೀರಾವರಿಗೆ ಅನುವು ನೀಡಿದೆ. ಶಾಸ್ತ್ರಗಳೂ ವ್ಯವಸಾಯವನ್ನು ಆಕಸ್ಮಿಕ ಅವಕಾಶವೆಂದು ಪರಿಗಣಿಸಬಾರದೆಂದೇ ತಿಳಿಸುತ್ತಾ ಬಂದಿವೆ.

**ಸಣ್ಣ ನೀರಾವರಿ ಯೋಜನೆಗಳು:**

ಭಾರತವು ಅಮೆರಿಕಾದ ಮಾದರಿಯನ್ನು ಅಳವಡಿಸಿಕೊಂಡು ಭಾರೀ ಗಾತ್ರದ ನೀರಾವರಿ ಯೋಜನೆಗಳ ನಿರ್ಮಾಣಕ್ಕೆ ತೊಡಗಿದೆಯಾದರೂ ಸಣ್ಣ (ಗಾತ್ರದ) ನೀರಾವರಿ ಯೋಜನೆಗಳೇ ಈ ದೇಶಕ್ಕೆ ದೀರ್ಘಕಾಲೀನ ದೃಷ್ಟಿಯಿಂದ ಹೆಚ್ಚು ಪ್ರಯೋಜನಕಾರಿಯಾಗಿರುತ್ತವೆ.

ಬೃಹತ್ ಅಣೆಕಟ್ಟುಗಳು, ಬಂಡವಾಳದ ಗಾತ್ರವನ್ನೂ ಭಾರೀ ಪ್ರಮಾಣದಲ್ಲಿ ಅಪೇಕ್ಷಿಸುತ್ತವೆ. ಭಕ್ರಾನಂಗಲ್, ದಾಮೋದರ್ ವ್ಯಾಲಿ ಮತ್ತು ಹಿರಾಕುಡ್ ಈ ಮೂರು ಅಣೆಕಟ್ಟುಗಳ ನಿರ್ವಹಣಾ ವೆಚ್ಚ ನಿಧಾನವಾಗಿ ಏರುತ್ತಿದೆ. ಆದರೆ ದವಸ ಧಾನ್ಯಗಳ ಉತ್ಪಾದನೆಗೆ ಅವುಗಳ ಕೊಡುಗೆ ಮಾತ್ರ ಸಣ್ಣ ನೀರಾವರಿ ಯೋಜನೆಗಳಷ್ಟು ಲಭಿಸುತ್ತಿಲ್ಲ ಎಂಬುದು ಈ ಕೆಳಗಿನ ವಿಷಯಗಳಿಂದ ಸ್ಪಷ್ಟವಾಗಿ ಸಾಬೀತಾಗುತ್ತದೆ. ಭಾರೀ ಯೋಜನೆಗಳ ಬಹುದೊಡ್ಡ ನ್ಯೂನ್ಯತೆ ಎಂದರೆ ಅವುಗಳನ್ನು ಕಾರ್ಯರೂಪಕ್ಕೆ ತೆರೆದೊಡನೆ ಅವುಗಳ ಆಸುಪಾಸಿನ ಪ್ರದೇಶಗಳಲ್ಲಿ ನೀರಿನ ಮಟ್ಟ ಏರುವುದರಿಂದಾಗಿ ಕೃಷಿ ಮಾಡಿರುವ ಭೂಮಿ ಮತ್ತು ಜನವಸತಿ ಪ್ರದೇಶಗಳಿಗೆ ಹಾನಿ ಒದಗುತ್ತದೆ. ಭೂಮಿ ಲವಣಯುಕ್ತವಾಗಿ ಬಿಡುತ್ತದೆಯಾಗಿ ಅನುತ್ಪಾದಕವಾಗುತ್ತದೆ ಮತ್ತು ಕುಡಿಯುವ ನೀರು ಕುಡಿಯಲು ಯೋಗ್ಯವಾಗಿರುವುದಿಲ್ಲ. ಅಣೆಕಟ್ಟುಗಳು ಮಳೆನೀರಿನ ಸುಗಮ ಧಾರೆಗೆ ಅಡ್ಡಗೋಡೆಯನ್ನು ನಿರ್ಮಿಸುವುದರಿಂದಾಗಿ ಮತ್ತು ಭೂಮಿಯು ನೀರನ್ನು ಹೀರಿಕೊಳ್ಳುವ ಶಕ್ತಿಯನ್ನು ಕಳೆದುಕೊಂಡು ತೇವಾಂಶದಿಂದ ಪೂರ್ಣವಾಗಿ ಶೈತ್ಯಗೊಂಡಿರುವುದರಿಂದಾಗಿ ತೀರಾ ಲಘುವಾದ ಮಳೆಗಳೂ ಕೂಡಾ ಪ್ರವಾಹದಂಥ ಪರಿಸ್ಥಿತಿಗೆ ಕಾರಣವಾಗಬಹುದಾಗಿದೆ. ನೀರು ಸಮಸ್ಯೆ ಪಂಜಾಬ್ ರಾಜ್ಯದ ಭಲಿಂಡಾ, ಫಿರೋಜ಼್‌ಪುರ, ಅಮೃತಸರ್ ಮತ್ತು ಗುರುದಾಸ್‌ಪುರ ಪ್ರದೇಶಗಳಲ್ಲಿ, ಉತ್ತರ ಪ್ರದೇಶಧ ಮುಜ಼ಫ್ಫರ್ ನಗರ, ಮಿರ್ಜಾಪುರ ಜಿಲ್ಲೆಗಳಲ್ಲಿ ದಿನೇದಿನೇ ಗಂಭೀರವಾಗುತ್ತಾ ಬರುತ್ತಿದೆ. ಹಲವಾರು ಪ್ರದೇಶಗಳಲ್ಲಿ ಈ ಹೆಚ್ಚುವರಿಯಾಗಿ ಹರಿದ ನೀರನ್ನು ನಾಲೆಗಳಿಗೆ ಕೊಳವೆಗಳ ಮೂಲಕ ಹಿಂದಕ್ಕೆ ಪಂಪ್ ಮಾಡಲಾಗುತ್ತದೆ. (ನೀರಿನ ಅತಿಯಾದ ಹೊರ ಚೆಲ್ಲುವಿಕೆಯನ್ನು ಪರಿಹರಿಸುವ ಸಲುವಾಗಿ) ಮತ್ತು ನಾಲೆಗಳಿಗೆ ಕಾಂಕ್ರೀಟ್ (ಗಾರೆ)ನಿಂದ ಒಂದು ಪದರದಂತೆ ಒಳಗೋಡೆಗಳನ್ನು ನಿರ್ಮಿಸಿ, ಈ ಸಮಸ್ಯೆಯನ್ನು ನಿವಾರಿಸುವ ಅಂದಾಜು

ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಈ ಎರಡೂ ಪರಿಹಾರೋಪಾಯಗಳೂ ಭಾರೀ ತುಟ್ಟಿಯಾದವೇ ಆಗಿವೆ. ಈ ಹಿನ್ನೆಲೆಯಲ್ಲಿ ಕೇವಲ ಸಣ್ಣ ಪ್ರಮಾಣದ ಯೋಜನೆಗಳು ಮಾತ್ರವೇ ನಮ್ಮ ದೇಶಕ್ಕೆ ಸೂಕ್ತವಾಗಿದೆ. ಏಕೆಂದರೆ,

೧) ಕಡಿಮೆ ವೆಚ್ಚದವಾದ್ದರಿಂದ ಲಭ್ಯ ಅನುಕೂಲಗಳ ವ್ಯಾಪ್ತಿಯೊಳಗಿವೆ.

೨) ಸಾಧನ ಸಲಕರಣಗಳ ಆಮದು ಸಾಮಗ್ರಿಗಳ ಮೇಲೆ ತೀರಾ ವಿರಳ ಅವಲಂಬನೆ ಹೊಂದಿವೆಯಲ್ಲದೆ ವಿಶೇಷ ಪರಿಣತರ ಯಂತ್ರೋಪಕರಣಗಳನ್ನು ಅತಿಯಾಗಿ ಅವಲಂಬಿಸಿರುವುದಿಲ್ಲ.

೩) ಅವುಗಳನ್ನು ಶೀಘ್ರವಾಗಿ ಮುಗಿಸಬಹುದು ಹಾಗೂ ಹೂಡಿಕೆಗಳ ಪ್ರತಿಯಾಗಿ ಫಲಿತಾಂಶಗಳನ್ನು ಬೇಗನೇ ಕೊಡಲಾರಂಭಿಸುತ್ತವೆ.

೪) ಕೃಷಿ ಭೂಮಿಯ ವಿಸ್ತೃತ ಭೂಪ್ರದೇಶಗಳನ್ನೂ, ಭಾರೀ ನೀರಾವರಿ ಯೋಜನೆಗಳಂತೆ ಮುಳುಗಡೆಗೊಳಪಡಿಸುವುದಿಲ್ಲ.

೫) ಭಾರೀ ಯೋಜನೆಗಳಲ್ಲಿ ನೀರಿನ ಉಪಯುಕ್ತತೆ (ಬಳಕೆ)ಯ ಪ್ರಮಾಣ ಶೇ.೫೫ ಇದ್ದರೆ, ಸಣ್ಣ ಯೋಜನೆಗಳಲ್ಲಿ ಶೇ ೯೫ರ ಪ್ರಮಾಣದಲ್ಲಿ ನೀರಿನ ಬಳಕೆ ಸಾಧ್ಯವಾಗುತ್ತದೆ. ಮತ್ತು

೬) ಸಣ್ಣ ನೀರಾವರಿ ಯೋಜನೆಗಳು ಸ್ಥಳೀಯರ ಪ್ರಯತ್ನಗಳು ಹಾಗೂ ಸಹಕಾರದ ಗರಿಷ್ಠ ಉಪಯೋಗವನ್ನು ಬಳಸಿಕೊಳ್ಳಲು ಸಾಧ್ಯವಿದೆ

ಸರ್ಕಾರಕ್ಕೆ ಭಾರೀ ನೀರಾವರಿ ಯೋಜನೆಗಳಿಂದಾಗಿ ಅನುಭವ ಉಂಟಾಗಿದ್ದು, ಸಣ್ಣ ನೀರಾವರಿ ಯೋಜನೆಗಳಿಗೆ ಅಗತ್ಯವಿರುವಷ್ಟು ಗಮನ ಹರಿಸಲೇಬೇಕಾದ ಒತ್ತಡಕ್ಕೊಳಗಾಗಿದ್ದರೂ ಕೂಡ ಈ ಸಣ್ಣ ಪ್ರಮಾಣದ ಯೋಜನೆಗಳನ್ನು ವ್ಯಾಪಕ ಮಟ್ಟದಲ್ಲಿ/ಪ್ರಮಾಣದಲ್ಲಿ ಸುಸಂಘಟಿತ ರೀತಿಯಿಂದ ನಿಯೋಜಿಸಲು ಕೈಗೆತ್ತಿಕೊಂಡಿಲ್ಲ. ನಾವು ಹೊಸ ಬಾವಿ, ಕೆರೆಗಳನ್ನು ನಿರ್ಮಿಸುವುದರ ಜೊತೆಜೊತೆಗೇ ಹಳೆಯ ಬಾವಿ, ಕೆರೆಕಟ್ಟೆಗಳ ದುರಸ್ತಿ ಹಾಗೂ ನವೀಕರಣಗಳ ಬಗೆಗೂ ಆಲೋಚಿಸುವುದು ಅಗತ್ಯ. ಏಕೆಂದರೆ ಹೊಸ ಬಾವಿ, ಕೆರೆ ಕಟ್ಟೆಗಳನ್ನು ಅಗೆದಾಗ, ಹಳೆಯವು ಪಾಳುಬಿದ್ದು ಅನುಪಯುಕ್ತವಾಗುತ್ತ ಹೋಗುತ್ತವೆ. ಹಳೆಯ ನೀರಾವರಿ ಸಂಪನ್ಮೂಲಗಳ ನವೀಕರಣ ಕಾರ್ಯ ಒಂದೆರಡು ವರ್ಷ ಕಾಲ ನಡೆಯಿತಾದರೂ ಬಹಳ ಮಟ್ಟಿಗೆ ಪ್ರಚಾರದ ಉದ್ದೇಶಕ್ಕಷ್ಟೇ ಆಗಿದ್ದು ಆನಂತರ ಅದನ್ನು ಕೈಬಿಡಲಾಯಿತು.

ಈ ದೇಶದಲ್ಲಿ ಸರಿಸುಮಾರು ೨೫ ಲಕ್ಷ ಬಾವಿಗಳಿವೆ. ಸ್ವಲ್ಪಮಟ್ಟಿನ ಪ್ರಯತ್ನ ಮಾಡಿದರೆ ಸಂಖ್ಯೆಯನ್ನು ಒಂದು ಕೋಟಿಯವರೆಗೆ ಮುಟ್ಟಿಸುವುದು ಸುಲಭ ಸಾಧ್ಯ. ಕೊಳವೆ ಬಾವಿಗಳೂ ಉಪಯುಕ್ತವೆಂದು ನಿರೂಪಿಸಬಲ್ಲುವು ಗುಡ್ಡ (ಗಾಡು) ಬೆಟ್ಟಗಳಂಥ ಎತ್ತರದ ಪ್ರದೇಶಗಳಲ್ಲಿ ಸಣ್ಣ ನೀರಿನ ಝರಿಗಳು ಕೂಡಾ ಪ್ರಯೋಜನಕಾರಿಯೇ ಆಗಬಲ್ಲುವು ಮತ್ತು ಅವುಗಳತ್ತ ಗಮನ ಹರಿಸಬೇಕಾಗಿದೆ.

**ನೇಗಿಲು ಅಥವಾ ಟ್ರ್ಯಾಕ್ಟರ್ ?**

ನೀರಾವರಿಯ ಜೊತೆಗೇ ರೈತರಿಗೆ ಸುಧಾರಿತ ಕೃಷಿ ವಿಧಾನಗಳು, ಎತ್ತುಗಳು, ಗೊಬ್ಬರಗಳು, ಫಲವತ್ತತೆಯನ್ನು ಹೆಚ್ಚಿಸುವ ರಸಗೊಬ್ಬರಗಳು ಹಾಗೂ ಒಳ್ಳೆಯ ಗುಣಮಟ್ಟದ ಬೀಜಗಳು–ಇವೆಲ್ಲವುಗಳ ಅಗತ್ಯವೂ ಇರುತ್ತದೆ. ಯಾಂತ್ರೀಕರಣದ ಗುಂಗಿಗೆ ಸಿಲುಕಿದ ಕೆಲವು ಮಂದಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿನಂತೆ ಉಳುಮೆ ಮಾಡಲು ಟ್ರ್ಯಾಕ್ಟರ್‌ಗಳನ್ನು ಬಳಸಲು ಒಲವು ತೋರುತ್ತಿದ್ದಾರೆ; ಆದರೆ ಭಾರತೀಯ ಸಂದರ್ಭಗಳಲ್ಲಿ ಟ್ರ್ಯಾಕ್ಟರ್‌ಗಳು ಹೊಂದಿಕೆಯಾಗುವುದಿಲ್ಲ. ಏಕೆಂದರೆ ಮೊದಲನೆಯದಾಗಿ, ನಮ್ಮ ಕೃಷಿ ಹಿಡುವಳಿಗಳ ವಿಸ್ತಾರ ಕಡಿಮೆ. (ಗಾತ್ರ ಸಣ್ಣದು) ಆದ್ದರಿಂದ ಟ್ರ್ಯಾಕ್ಟರ್‌ಗಳಿಗೆ ಹೊಂದುವುದಿಲ್ಲ. ಹಾಗೆಂದೇ ಆಗಿಂದಾಗ್ಯೆ ಸಲಹೆಗಳು ಬಂದಿವೆ ಏನೆಂದರೆ, ಹಿಡುವಳಿಗಳ ಗಾತ್ರವನ್ನು ವಿಸ್ತರಿಸಬೇಕು ಮತ್ತು ಸಮುದಾಯ ಬೇಸಾಯವನ್ನು ಸಂಯೋಜಿಸಿ ಟ್ರ್ಯಾಕ್ಟರ್‌ಗಳ ಬಳಕೆ ಮಾಡಿದರೆ ಆರ್ಥಿಕವಾಗಿ ಹೊರೆಯಾಗುವುದಿಲ್ಲ ಎಂದು. ಆದರೆ ಸಮುದಾಯ ವ್ಯವಸಾಯವಂತೂ ಮೊತ್ತ ರೂಪದಲ್ಲೇ ಭಾರತಕ್ಕೆ ಹೊಂದಾಣಿಕೆಯಾಗದ ವಿಚಾರ. ಏಕೆಂದರೆ ಭೂಮಿ–ಜನಸಂಖ್ಯೆಗಳ ಅನುಪಾತ. ಪ್ರಜಾಸತ್ತಾತ್ಮಕ ಸಾಮಾಜಿಕ ರಚನೆ, ನಿರುದ್ಯೋಗ ನಿವಾರಣೆ (ನಿರುದ್ಯೋಗ ನಿರ್ಮೂಲನೆ). ಒಂದು ಎಕರೆಗೆ ಉತ್ಪನ್ನ ಇಷ್ಟೆಂದು, ಅದಕ್ಕಾಗಿ ಒಂದು ನಿಗದಿತ ಗುಣಮಟ್ಟದ ಆದರ್ಶ ಮಾಪನದ ಅಂದಾಜು ಮಾಡುವ ಸಾಧ್ಯತೆ ಇಲ್ಲದಿರುವುದು. ರೈತ ತನ್ನ ಭೂಮಿಗೆ ಹೊಂದಿರುವ ಭಾವನಾತ್ಮಕ ಮಮಕಾರ ಮತ್ತು ನಮ್ಮ ಮೌಲ್ಯಮಾಪನ ವಿಧಾನ–ಈ ಎಲ್ಲ ದೃಷ್ಟಿಗಳಿಂದ ಇದು ಹೊಂದಿಕೆಯಾಗದ ವಿಚಾರವಾಗಿದೆ. (ಸಮುದಾಯ ಬೇಸಾಯವು ಅನ್ವಯಿಕವಾಗಿಲ್ಲ) ಆದಾಗ್ಯೂ, ಒಂದು ವೇಳೆ ಈ ಕ್ಷಣದಲ್ಲಿ ಸಾಮುದಾಯಿಕ ಬೇಸಾಯದ ಉಪಯುಕ್ತತೆ ಅಥವಾ ಇಲ್ಲದಿರುವಿಕೆ ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೆ ಹಾಗೇ ಬಿಟ್ಟರೂ ಕೂಡಾ, ನಾವು ದೊಡ್ಡ ದೊಡ್ಡ ಬೇಸಾಯ ಹಿಡುವಳಿ–ಭೂಮಿಗಳನ್ನು ನಿರ್ವಹಿಸುವುದು ಸಾಧ್ಯವಿಲ್ಲವೇಕೆಂದರೆ ಮಣ್ಣಿನ ಕುಸಿತಕ್ಕೆ ಕಾರಣವಾಗುವ ಹವಾಮಾನ ಪರಿಸ್ಥಿತಿಗಳ ಸಾಧ್ಯತೆಯಿಂದ. ಅದಕ್ಕಿಂತಲೂ ಹೆಚ್ಚಾಗಿ, ಟ್ರ್ಯಾಕ್ಟರ್‌ಗಳನ್ನು ನಮ್ಮ ದೇಶದಲ್ಲಿ ಉತ್ಪಾದನೆ ಮಾಡುತ್ತಿಲ್ಲವಷ್ಟೇ ಅಲ್ಲ, ಅವುಗಳಿಗೆ ಅಗತ್ಯವಿರುವ ಇಂಧನವೂ ಇಲ್ಲಿ ಹೇರಳವಾಗಿ ಲಭ್ಯವಿಲ್ಲ. ಚಾಲಕರನ್ನಾಗಲೀ, ಬೃಹತ್ ಪ್ರಮಾಣದಲ್ಲಿ ನಿರ್ವಹಣಾ ತಂತ್ರಜ್ಞರನ್ನಾಗಲೀ ತರಪೇತುಗೊಳಿಸುವುದೂ ಸಾಧ್ಯವಿಲ್ಲ. ಬಿಡಿಭಾಗಗಳನ್ನು ಒದಗಿಸುವುದಾಗಲೀ, ದುರಸ್ತಿಗಾಗಿ ಕಮ್ಮಟಗಳನ್ನು ಹಳ್ಳಿಗಳಲ್ಲಿ ಅಥವಾ ಕನಿಷ್ಠ ಪಕ್ಷ ಕೆಲವು ಕೇಂದ್ರ ಪ್ರದೇಶಗಳಲ್ಲಿ ಕೂಡಾ ವ್ಯವಸ್ಥೆ ಮಾಡಿ ನಡೆಸುವುದೂ ಕಠಿಣ ಕೆಲಸವೇ ಸರಿ. (ಗಾಭರಿಯ ಸಂಗತಿಯೇ ಸರಿ) ಇವೆಲ್ಲದರ ಜೊತೆಗೆ, ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಿದರೂ ಕೂಡಾ, ನಮ್ಮ ಜಾನುವಾರು ಸಂಪನ್ಮೂಲವನ್ನು

ಬಳಸಿಕೊಳ್ಳುವ ಪ್ರಶ್ನೆ ಏಳುತ್ತದೆ. ಸದ್ಯದಲ್ಲಿ ೧೫.೮೯ಕೋಟಿ ಹಸು ಕರುಗಳೂ, ೩.೫೧ಕೋಟಿ ಎಮ್ಮೆಗಳ ಎತ್ತು, ಕೋಣಗಳು ಕ್ರಮವಾಗಿ ೬.೪೨ ಕೋಟಿ ಮತ್ತು ೬೩ ಲಕ್ಷ–ಜಾನುವಾರು ಸಂಪತ್ತು ನಮ್ಮ ದೇಶದಲ್ಲಿದೆ ಎಂದು ಗಣತಿಯ ಪ್ರಕಾರ ಅಂಕಿ ಸಂಖ್ಯೆಗಳ ಮಾಹಿತಿ ಇದೆ. ಹಸುಗಳೂ ಎಮ್ಮೆಗಳೂ ಹಾಲು, ಕ್ಷೀರೋತ್ಪನ್ನಗಳಿಗೆ ಉಪಯುಕ್ತವಾಗಿವೆಯಾದರೂ ಎತ್ತು, ಕೋಣಗಳನ್ನು ಕೃಷಿ ಕಾರ್ಯಗಳಿಗೆ ಬಳಸಿಕೊಳ್ಳದಿದ್ದಲ್ಲಿ ಆರ್ಥಿಕವಾಗಿ ಹೊರೆಯಾಗಿ ಬಿಡುತ್ತವೆ. ಪಾಶ್ಚಾತ್ಯ ದೇಶದ ಮಂದಿ ಮಾಂಸಾಹಾರಿಗಳಾದುದರಿಂದ ಹೆಚ್ಚಾಗಿರುವ ಜಾನುವಾರುಗಳನ್ನು ಆಹಾರ ರೂಪದಲ್ಲಿ ಬಳಕೆ ಮಾಡಬಲ್ಲರು, ಆದರೆ ಅದು ಭಾರತೀಯ ಸಂಪ್ರದಾಯಕ್ಕೆ, ನೀತಿಸಂಹಿತೆಗೆ ವಿರೋಧವಾದದ್ದು. ಜಾನುವಾರುಗಳು ಆರ್ಥಿಕವಾಗಿ ಹೊರೆ ಎಂದೂ, ಅನುತ್ಪಾದಕವೆಂದೂ ಆದಮಾತ್ರಕ್ಕೆ ಅವುಗಳ ಹತ್ಯೆ ಮಾಡಲಾಗದು. (ನಿಷಿದ್ಧ) ಬದಲಿಗೆ, ಅವುಗಳನ್ನು ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಲು ಬಳಸಿಕೊಳ್ಳಬೇಕು. ಎತ್ತುಗಳು ನಮ್ಮ ಬೇಸಾಯ ಪದ್ಧತಿಯಲ್ಲಿ ರಾಜ ಮರ್ಯಾದೆಗೆ ಪಾತ್ರವಾದಂಥ ಪ್ರಮುಖ ಅಂಗವಾಗಿದ್ದು, ಟ್ರ್ಯಾಕ್ಟರ್‌ಗಳು ಅವುಗಳನ್ನು ಹಾಳುಗೆಡುವುತ್ತವೆ. ನೇಗಿಲು ಮತ್ತಿತರ ಕೃಷಿ ಸಾಧನೋಪಕರಣಗಳು ಭಾರತೀಯ ಪರಿಸರ, ಪರಿಸ್ಥಿತಿಗಳಿಗೆ ಅತ್ಯಂತ ಸೂಕ್ತವಾಗಿದ್ದು ಅವುಗಳನ್ನು ಸಣ್ಣ ಪುಟ್ಟ ಸುಧಾರಣೆಗಳೊಂದಿಗೆ ವೃದ್ಧಿಪಡಿಸಬಹುದಾಗಿದೆ.

**ಕೃಷಿ ಆಯೋಗವು ಈ ಕುರಿತು ಹೀಗೆ ಹೇಳಿದೆ**

"ಭಾರತದಲ್ಲಿ ಸಾರಾಸಗಟಾಗಿ ಎಲ್ಲಾ ಕೃಷಿ ಸಲಕರಣೆಗಳೂ ಸ್ಥಳೀಯ ಪರಿಸರಗಳಿಗೆ ತುಂಬಾ ಉಚಿತ (ಯೋಗ್ಯ)ವಾಗಿವೆ. ಎತ್ತುಗಳು ಎಳೆಯಲು, ಜಗ್ಗಲು ಹೊಂದಿರುವ ಬಲಕ್ಕೆ ಸಮ ತೂಕವಾಗಿ ಹಗುರವೂ, ಸುಲಭ ಬೆಲೆಯದೂ, ಸುಲಭವಾಗಿ ಮಾಡುವುದು, ಪರಿವರ್ತಿಸುವುದು – ಎಲ್ಲಕ್ಕೂ ಸಮ ಪ್ರಮಾಣ, ಪರಿಮಾಣಗಳಲ್ಲಿ ಸಿದ್ಧವಾಗಿರುತ್ತವೆ. ಜೊತೆಗೆ ಅತಿ ಮುಖ್ಯವಾಗಿ ಅವುಗಳು ಸುಲಭ ಲಭ್ಯವಾಗಿರುತ್ತವೆ' ಆದಾಗ್ಯೂ ನೆಗಿಲುಗಳು ಸುಲಭ ದರದಲ್ಲಿ ಈಗ ಸಿಗುತ್ತಿಲ್ಲ; ಕಬ್ಬಿಣದ ಬೆಲೆ ಏರಿತಲ್ಲದೆ, ಅವುಗಳ ಉತ್ಪಾದನೆ ಬಡಗಿಗಳ, ಕಮ್ಮಾರರ ಕೈಯಿಂದ ತಪ್ಪಿ ಕಾರ್ಖಾನೆಗಳ ಕೈವಶವಾದುದರ ಪರಿಣಾಮ ಇದು. ನಾವು ಈ ಸಮಸ್ಯೆಯತ್ತಲೂ ಗಮನ ಹರಿಸಬೇಕಾಗುತ್ತದೆ.

**ರಸಗೊಬ್ಬರಗಳು ಮತ್ತು ಗೊಬ್ಬರಗಳು:**

ಫಲವತ್ತತೆಯನ್ನು ಹೆಚ್ಚಿಸುವ ರಸಗೊಬ್ಬರಗಳ ಬಳಕೆಯಿಂದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಏರಿಕೆ ಮತ್ತು ಭೂಮಿಯ ಫಲವತ್ತತೆಯನ್ನು ಕಾಯ್ದುಕೊಳ್ಳುವುದು ಅಗತ್ಯ. ಆದಾಗ್ಯೂ ಗೊಬ್ಬರಗಳನ್ನೂ, ಫಲವತ್ಕಾರಕಗಳನ್ನೂ ಸರಿಯಾದ

ನಮೂನೆಯನ್ನು ಮಾತ್ರವೇ, ಅದೂ ಅಗತ್ಯ ಪ್ರಮಾಣದಲ್ಲಿ. ಮಣ್ಣಿನ ಸರಿಯಾದ ಪರೀಕ್ಷೆ ಮಾಡಿದ ನಂತರವೇ, ಅದೂ ಕೂಡ ಬೆಳೆಯಬೇಕಾದ ಬೆಳೆ, ಉತ್ಪಾದನಾ ವಿಧಾನ ಮತ್ತು ಲಭ್ಯವಿರುವ ನೀರಾವರಿ ಸೌಲಭ್ಯಗಳನ್ನು ಗಮನಕ್ಕೆ ತೆಗೆದುಕೊಂಡ ನಂತರ ಮಾತ್ರವೇ ಬಳಸತಕ್ಕುದಾಗಿದೆ. ರಸಗೊಬ್ಬರಗಳ ಬಳಕೆಯನ್ನು ಕಳೆದ ದಶಕದಲ್ಲಿ ವ್ಯಾಪಕವಾಗಿ ಪ್ರತಿಪಾದಿಸಲಾಯಿತು ಹಾಗೂ ಅದೇ ಅವಧಿಯಲ್ಲಿ ಅಮೋನಿಯಂ ಸಲ್ಫೇಟ್ ಬಳಕೆಯೂ ಬಹುಪಟ್ಟು ಏರಿಕೆಗೊಳಗಾಯಿತು. ಆದರೆ ರಸಗೊಬ್ಬರದ ನಿರಂತರ ಬಳಕೆಯಿಂದಾಗಿ ಭೂಮಿಯ ಫಲವತ್ತತೆಯು ಇಳಿಮುಖವಾಗುತ್ತ ಹೋಗುತ್ತವೆಯೇ ವಿನಾ ವೃದ್ಧಿಸುವುದಿಲ್ಲವೆಂಬುದು ನಿರ್ವಿವಾದ. ಆದರೆ ಸಗಣಿ ಹಾಗೂ ಬೇಸಾಯದ ಭೂಮಿಯಲ್ಲಿ ದೊರೆಯುವ ಸಾವಯವ ಗೊಬ್ಬರಗಳ ಜೊತೆಗೇ ಮಿತವಾದ ಪ್ರಮಾಣದಲ್ಲಿ ಬೆರೆಸಿ ರಸಗೊಬ್ಬರವನ್ನು (ಸಿಂಪಡಿಸಬಹುದಾಗಿದೆ) ಉಪಯೋಗಿಸಬೇಕು.

ರೈತರಿಗೆ ಸರಬರಾಜು ಮಾಡಿದ ಅಮೋನಿಯಂ ಸಲ್ಫೇಟ್‌ನ ಪರಿಮಾಣದ ಬಗೆಗೂ ನಮಗೆ ಖಚಿತತೆ ಇಲ್ಲ. ಹೊಲಗದ್ದೆಗಳಲ್ಲಿ ಬಳಸಲು ಒತ್ತಾಯದಿಂದ ವಿತರಿಸಿದ್ದೂ ವಾಸ್ತವವಾಗಿ ಬಳಕೆ ಮಾಡುವಲ್ಲಿನ ಪ್ರಮಾಣದ ಬಗೆಗೆ ಖಾತರಿ ಇಲ್ಲ. ಪಾನ ನಿಷೇಧ ಜಾರಿಯಲ್ಲಿರುವ ಸ್ಥಳಗಳಲ್ಲಿ ಅಮೋನಿಯಂ ಸಲ್ಫೇಟ್‌ನ್ನೂ ನ್ಯಾಯ ಬಾಹಿರ ಮದ್ಯ [ಕಳ್ಳು] ತಯಾರಿಕೆಯಲ್ಲಿ ಬಳಸಲಾಗುತ್ತಿದೆ ಎಂದೂ ವರದಿಗಳು ಬಂದಿವೆ. ಹೊಲಗದ್ದೆಗಳಲ್ಲಿ ತಯಾರಾಗುವ ಎರೆಗೊಬ್ಬರ (ಎಲೆಗೊಬ್ಬರ)ವೇ ರಸಗೊಬ್ಬರದ ಒಳ್ಳೆಯ ಸಂಪನ್ಮೂಲ. ಪ್ರತಿವರ್ಷ ದೇಶದಲ್ಲಿ ಲಭ್ಯವಿರುವ ೮೦೦೦ ಲಕ್ಷ ಟನ್‌ಗಳಷ್ಟು ಸಗಣಿಯಿಂದ ಸುಮಾರು ಅರ್ಧದಷ್ಟು ಗೋಮಯದಿಂದ ಬೆರಣಿಗಳನ್ನು ತಯಾರಿಸಿ ಇಂಧನವಾಗಿ ಬಳಸಲಾಗುತ್ತಿದೆ ಎಂದು ಲೆಕ್ಕಾಚಾರ ಮಾಡಲಾಗಿದೆ. ಆದರೆ ಇದೇ ಮೊತ್ತದ ಬಳಕೆಯಿಂದ ಗೊಬ್ಬರ ತಯಾರಿಸಲು, ಪರ್ಯಾಯ ಇಂಧನಗಳನ್ನು ಒದಗಿಸುವ ಯಾವುದೇ ಪ್ರಯತ್ನ ನಡೆದಿಲ್ಲ. ಭಾರತದಲ್ಲಿ ಉರುವಲು ಸರಬರಾಜಿಗೆ ಅಗತ್ಯವಾದ ವನ ಸಂಪತ್ತಿನ ಕೊರತೆ ಇದೆ. ಹೊಸ ಅರಣ್ಯ ಕಾಯ್ದೆಗಳು ರೈತರು ಕಾಡುಗಳಿಂದ ದರಗು, ಸೌದೆ, ಮತ್ತಿತರ ಉರುವಲು ಕಡ್ಡಿಗಳನ್ನು ಆಯುವುದನ್ನು ನಿಷೇಧಿಸುತ್ತವೆ. ಇತ್ತೀಚೆಗೆ ಗೋಬರ್ ಗ್ಯಾಸ್ (ಗೊಬ್ಬರ ಅನಿಲ) ಉತ್ಪಾದನೆಯ ಕೆಲ ಪ್ರಯೋಗಗಳೂ ಅಲ್ಲಲ್ಲಿ ನಡೆದಿವೆ. ಹೀಗೆ ತಯಾರಿಸಿದ ಅನಿಲವನ್ನು ಇಂಧನವಾಗಿಯೂ ದೀಪಗಳ ಉದ್ದೇಶಕ್ಕಾಗಿಯೂ ಉಪಯೋಗಿಸಬಹುದಾಗಿದ್ದು ಶೇಷ ವಸ್ತುವನ್ನು ಗೊಬ್ಬರವಾಗಿ ಬಳಸಬಹುದಾಗಿದೆ. ಸರ್ಕಾರವು ಗೋಬರ್ ಗ್ಯಾಸ್ ಸ್ಥಾವರಗಳನ್ನೂ ಬೃಹತ್ ಪ್ರಮಾಣದಲ್ಲಿ ಸ್ಥಾಪಿಸಿ ಉತ್ಪಾದಕ ಉದ್ದೇಶಗಳಿಗೆ ಉಪಯೋಗಿಸುವ ಬಗೆಗೆ ಸಮೀಕ್ಷೆ ನಡೆಸಬೇಕು.

ಪರ್ಯಾಯ ಬೆಳೆ ತೆಗೆಯುವುದರಿಂದಾಗಿ ಮಣ್ಣಿನಲ್ಲಿ ಫಲವತ್ತತೆಯನ್ನು ಮರುಪೂರಣಗೊಳಿಸಬಹುದಾಗಿದೆ. ರೈತರಿಗೆ ಪರ್ಯಾಯ ಫಸಲು ತೆಗೆಯುವುದನ್ನೂ, ಈಗೀಗ ಬೆಳೆಯುವ ಹಲವು ಹೊಸ ಧಾನ್ಯಗಳ ಕುರಿತಂತೆ ತಂತ್ರಜ್ಞಾನವನ್ನೂ ಕಲಿಸಬೇಕು.

**ನಮ್ಮ ರಾಷ್ಟ್ರೀಯ ಅವಶ್ಯಕತೆಗಳು**

ಸರ್ಕಾರವು ಸುಧಾರಿತ ಬೀಜ ತಳಿಗಳ ವಿತರಣೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರೂ ಸಮರ್ಪಕವಾಗಿ ಅಳವಡಿಸಲಾಗಿಲ್ಲ. ಆಡಳಿತಾಂಗದ ಆಲಸ್ಯ, ವಿಳಂಬ, ಕಡತಗಳು ಮುಂದಕ್ಕೆ ಚಲಿಸದೆ ಉಂಟಾಗುವ ಅಡ್ಡಿಗಳಿಂದಾಗಿ ಅಂಥ ಸುಧಾರಿತ ಬೀಜ ತಳಿಗಳು ಸರಿಯಾದ ಸಮಯಕ್ಕೆ ಸಿಗುವುದನ್ನು ಅಡ್ಡಿಪಡಿಸುತ್ತವೆ. ಬೆಳೆ ರೋಗಗಳನ್ನು ತಡೆಯಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕ.

ಈ ಎಲ್ಲಾ ಕಾರ್ಯಕ್ರಮಗಳಲ್ಲೂ ಅಭಿಪ್ರಾಯ ಭೇದಕ್ಕೆ ಆಸ್ಪದವೇ ಇಲ್ಲದಂತಾಗಿದೆ. ಬೇರೆ ರಾಷ್ಟ್ರಗಳ ಅನುಭವದಿಂದ ನಾವು ಖಂಡಿತವಾಗಿಯೂ ಪ್ರಯೋಜನ ಪಡೆದುಕೊಳ್ಳುವುದು ಸಾಧ್ಯ. ಆದರೆ ನಾವು ಅವುಗಳನ್ನು ಅನುಕರಿಸಲಾಗದು. ಭಾರತೀಯ ಪರಿಸ್ಥಿತಿ, ಸನ್ನಿವೇಶಗಳಿಗೆ ಸೂಕ್ತವಾಗಿ ಅಳವಡುವುದೇ (ಅಡಕಗೊಳ್ಳುವುದೇ) ಎಂಬುದನ್ನು ಸರಿಯಾಗಿ ಪ್ರಯೋಗಿಸಿ ನೋಡಿದ ನಂತರ ಮಾತ್ರವೇ ಆಮದು ಮಾಡಿಕೊಂಡ ತಂತ್ರಜ್ಞಾನವನ್ನು ಕೃತಿ ರೂಪಕ್ಕೆ ಅನ್ವಯಿಸಬೇಕು.

**[ಆಧಾರ/ಮಂಥನ್ ವಿಶೇಷಾಂಕ–೧೯೮೦]**

# ಆದರ್ಶವಾದ, ತಾಂತ್ರಿಕ ವಿಜ್ಞಾನ ಮತ್ತು ಅಧಿಕಾರ ವಿಕೇಂದ್ರೀಕರಣ

ಕಳೆದ ಕೆಲವು ಶತಕಗಳಲ್ಲಿನ ಆರ್ಥಿಕ ಸಿದ್ಧಾಂತಗಳೂ, ಆ ಸಿದ್ಧಾಂತಗಳನ್ನು ಆಧರಿಸಿದ ಸಮಾಜದ ಸಂರಚನೆ–ಇವುಗಳ ಪರಿಣಾಮವಾಗಿ ಮಾನವನ ಅಪಮೌಲ್ಯೀಕರಣವು ಫಲಕೃತಿಯಾಗಿದೆ. ಮಾನವನ ವ್ಯಕ್ತಿತ್ವವು ಆರ್ಥಿಕ ಸಂರಚನೆಗೆ ಏನೇನೂ ಸಂಬಂಧವಿಲ್ಲದಂತಾಗಿದೆ. ಬಂಡವಾಳ ಶಾಹಿ ಆರ್ಥಿಕ ಸಿದ್ಧಾಂತವು ಕೇವಲ ಆರ್ಥಿಕ ಮಾನವನನ್ನು ಮಾತ್ರವೇ ಗುರ್ತಿಸುತ್ತದೆ–ಅಂದರೆ ಭೌತಿಕ ಸಂಪತ್ತಿನ ಸಂಬಂಧವಾದ ಲಾಭ, ನಷ್ಟಗಳ ಲೆಕ್ಕಾಚಾರವನ್ನು ಮಾತ್ರವೇ ಮನುಷ್ಯನ ಎಲ್ಲಾ ನಿರ್ಣಯಗಳೂ ಆಧರಿಸಿರುತ್ತವೆ. ಗ್ರಾಹಕರ ಅಗತ್ಯಗಳ ಸಂಬಂಧವಾಗಿಯೂ, ಬಂಡವಾಳಶಾಹಿಯು ಗ್ರಾಹಕನ ಅಗತ್ಯಗಳು, ಅಪೇಕ್ಷೆ ಬೇಡಿಕೆಗಳಿಂದಲ್ಲದೆ ಗ್ರಾಹಕನ ಕೊಳ್ಳುವ ಶಕ್ತಿಯಿಂದ ಮಾತ್ರವೇ ನಿರ್ದೇಶಿಸಲ್ಪಡುತ್ತಾನೆ. ಸ್ಥಿತಿವಂತರ ಹಾಗೂ ಸಾಕಷ್ಟು ಭೋಗ ಭಾಗ್ಯ ಉಳ್ಳವರತ್ತಲೇ ಬಡವರ ಹಾಗೂ ಹಸಿದವರಿಗಿಂತಲೂ ಹೆಚ್ಚಿನ ಗಮನ ಹರಿಸುತ್ತಾನೆ. ತತ್ಪರಿಣಾಮವಾಗಿ, ಶ್ರೀಮಂತರ ಅಗತ್ಯಗಳ ಪೂರೈಕೆಗಾಗಿ ಲೆಕ್ಕವಿಲ್ಲದಷ್ಟು ವಸ್ತು–ವೈವಿಧ್ಯವು ಉತ್ಪಾದಿಸಲ್ಪಡುತ್ತದೆ, ಬಡವರಿಗೆ ಮೂಲಭೂತ ಜೀವನಾವಶ್ಯಕ ವಸ್ತುಗಳಿಗೂ ಕೂಡಾ ಅಭಾವವುಂಟಾಗುತ್ತದೆ. ಉತ್ಪಾದನೆಯ ಕೇಂದ್ರೀಕರಣ, ಏಕತ್ರ ಧೃವೀಕರಣಗಳು ಮೊತ್ತ ರೂಪದಲ್ಲಿ ಗ್ರಾಹಕನ ಪ್ರಭಾವವನ್ನು ಕಡೆಗಣಿಸುತ್ತವೆ. ಸಮಾಜವಾದವು ಬಂಡವಾಳ ಶಾಹಿಸಿದ್ದಾಂತಕ್ಕೆ ಪ್ರತಿ ಸಂವಾದಿಯಾಗಿ ಉದಯಿಸಿತು/ಆವಿರ್ಭವಿಸಿತು. ಆದರೆ ಸಮಾಜವಾದವೂ ಕೂಡಾ ಮನುಷ್ಯ ಜೀವಿಯ ಪ್ರಾಮುಖ್ಯತೆಯನ್ನು ಶೃತ ಪಡಿಸುವಲ್ಲಿ ವಿಫಲವಾಯಿತು. ಸಮಾಜವಾದಿಗಳು ಬಂಡವಾಳದ ಒಡೆತನವನ್ನು ರಾಜ್ಯದ ಕೈಗೆ ಹಸ್ತಾಂತರಿಸುವಷ್ಟರಲ್ಲೇ ತೃಪ್ತರಾದರು. ಈ ಎರಡೂ ಸಿದ್ಧಾಂತಗಳು–ಬಂಡವಾಳಶಾಹಿ ಹಾಗೂ ಕಮ್ಯುನಿಸ್ಟ್–ಸಮಗ್ರ ವ್ಯಕ್ತಿ, ಆತನ ನಿಜವಾದ ಸಂಪೂರ್ಣ ವ್ಯಕ್ತಿತ್ವ ಮತ್ತು ಆಶೋತ್ತರಗಳನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ವಿಫಲವಾದುವು. ಒಂದು ಸಿದ್ಧಾಂತವಾದರೋ ಮಾನವನನ್ನು ಬರೇ ಸ್ವಾರ್ಥ ಜೀವಿಯಾಗಿ, ಹಣದ ಸುತ್ತಲೇ ಪರಿಭ್ರಮಣ ಮಾಡುತ್ತ, ಭಯಂಕರ ಸ್ಪರ್ಧೆ ಎಂಬ ಒಂದೇ ಕಾನೂನು–ಸಾರ ರೂಪದಲ್ಲಿ ಕಾಡಿನ ಕಾನೂನು ಅಥವಾ ಅರಣ್ಯ ನ್ಯಾಯ ಮಾತ್ರವನ್ನೇ ಹೊಂದಿದವನನ್ನಾಗಿ ಪರಿಗಣಿಸುತ್ತದೆ; ಆದರೆ

ಇನ್ನೊಂದು ಸಿದ್ಧಾಂತವಾದರೋ ಮಾನವನನ್ನು ಅತ್ಯಂತ ದುರ್ಬಲ, ಕ್ಷುದ್ರ ನಿರ್ಜೀವ ವಸ್ತುವೆಂಬಂತೆ, ಸಂಕುಚಿತ ನೀತಿ ನಿಯಮಗಳಿಂದ ನಿಯಂತ್ರಿಸಲ್ಪಟ್ಟಂತೆ. ನಿರ್ದೇಶಿಸಿದ ಹೊರತೂ ಏನೊಂದೂ ಒಳಿತನ್ನು ಮಾಡಲು ಅಸಮರ್ಥನಾಗಿರುವವನಂತೆ ಪರಿಭಾವಿಸುತ್ತದೆ. ಎರಡೂ ಸಿದ್ಧಾಂತಗಳಲ್ಲಿಯೂ ಆರ್ಥಿಕ, ರಾಜಕೀಯ ಶಕ್ತಿಗಳ ಕೇಂದ್ರೀಕರಣವು ಧ್ವನಿತಗೊಂಡಿದೆ. ಆದ್ದರಿಂದಲೇ ಎರಡೂ ತಾತ್ವಿಕ ಸಿದ್ಧಾಂತಗಳೂ ಮನುಷ್ಯನನ್ನು ಅಪಮಾನವೀಕರಣ ಗೊಳಿಸಿವೆ (ಮನುಷ್ಯನನ್ನು ಮನುಷ್ಯನನ್ನಾಗಿ ಗುರುತಿಸಿಲ್ಲ.) ಭಗವಂತನ ಅತ್ಯುನ್ನತ ಸೃಷ್ಟಿಯಾದ ಮಾನವ ತಾನೇ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದ್ದಾನೆ. ನಾವು ಆತನನ್ನು ತನ್ನದೇ ಆದ ಸಮರ್ಪಕವಾದ ಸ್ಥಿತಿಯಲ್ಲಿ ಪುನರ್ ಪ್ರತಿಷ್ಠಾಪಿಸಬೇಕಾಗಿದೆ, ತನ್ನ ಘನಸ್ತಿಕೆ/ದೊಡ್ಡಸ್ತಿಕೆಯುನ್ನು ಸಾಕಾರಗೊಳಿಸಿಕೊಳ್ಳುವಂತೆ ಮಾಡಬೇಕಾಗಿದೆ. ಅವನ ಸಾಮರ್ಥ್ಯಗಳನ್ನು ಮರು ಜಾಗೃತಗೊಳಿಸಬೇಕಾಗಿದೆ, ಅವನ ಸುಪ್ತ ವ್ಯಕ್ತಿತ್ವದಲ್ಲಿ ಹುದುಗಿರುವ ದೈವಿಕ (ಪ್ರದೋನ್ನತಿಗಳಿಗೆ) ಉನ್ನತ ಸ್ತರಗಳಿಗೆ ಏರುವಂತೆ ಶ್ರಮಿಸಲು ಪ್ರೋತ್ಸಾಹಿಸಬೇಕಾಗಿದೆ. ಆರ್ಥಿಕ ವ್ಯವಸ್ಥೆಯ ವಿಕೇಂದ್ರೀಕರಣದಿಂದ ಮಾತ್ರವೇ ಇದು ಸಾಧ್ಯವಾಗುವುದು. ಇವು ನಮ್ಮ ಅರ್ಥ ವ್ಯವಸ್ಥೆಯನ್ನು ಬೆಳೆಸುವ ನಿಟ್ಟಿನಲ್ಲಿ ನಾವು ನೆನಪಿನಲ್ಲಿಡಲೇಬೇಕಾದ ಕೆಲವು ಸಾಮಾನ್ಯ ನಿರ್ದೇಶನಗಳು. ಪ್ರಸಕ್ತ ಸನ್ನಿವೇಶಗಳಿಗೆ ಸೂಕ್ತವಾಗಿರುವ ಅರ್ಥ ನೀತಿಯನ್ನು ಸಾರಾಂಶ ರೂಪದಲ್ಲಿ ಹೇಳುವ ಎರಡು ಪದಗಳೆಂದರೆ ಸ್ವದೇಶೀ ಮತ್ತು ವಿಕೇಂದ್ರೀಕರಣಗಳೇ ಆಗಿವೆ.

----

* (ಮೂಲ–ಮಂಥನ–ಜನವರಿ–೧೯೮೭)

# ನಮ್ಮ ರಾಷ್ಟ್ರೀಯ ಜೀವನದಲ್ಲಿ ಶ್ರೀಕೃಷ್ಣನ ಸ್ಥಾನ

ನಮ್ಮ ರಾಷ್ಟ್ರೀಯ ಜೀವನದ ಮೇಲೆ ಶ್ರೀರಾಮನ ಹೊರತಾಗಿ ಯಾರೊಬ್ಬರೂ ಅಷ್ಟೊಂದು ಗಾಢ ಪ್ರಭಾವ ಬೀರಿಲ್ಲ. ನಾವು ಈ ಇಬ್ಬರನ್ನೂ ಅವತಾರ ಪುರುಷರಾಗಿ ಆರಾಧಿಸುತ್ತಾ ಬಂದಿದ್ದೇವೆ. ನಮ್ಮ ಪಂಡಿತರುಗಳು (ವಿದ್ವಾಂಸರು) ಅವರಿಬ್ಬರ ವ್ಯಕ್ತಿತ್ವ ಗುಣಗಳನ್ನು ಅಧ್ಯಯನ ಮಾಡಿದ್ದಾರೆ. ಕವಿಗಳು ಹಾಡಿದ್ದಾರೆ. ಭಕ್ತರು ಎಲ್ಲಾ ನವವಿಧ ಭಕ್ತಿಯಿಂದ ಪೂಜೆ ಸಲ್ಲಿಸಿದ್ದಾರೆ. ಆದರೆ ಮೀರಾ ತನ್ನ ಕಾಲದ ಎಲ್ಲ ನಿಷೇಧಗಳ ಎಲ್ಲೆಯನ್ನು ಮೀರಿ ಮೇರೀತೋ ಗಿರಿಧರ ಗೋಪಾಲ್, ದೂಸರೋ ನ ಕೋಯೀ (ನನಗೆ ನನ್ನ ಗಿರಿಧರ ಗೋಪಾಲನಿದ್ದಾನೆ. ಬೇರೆ ಯಾರೂ ಇಲ್ಲ) ಎಂದು ಘಂಟಾಘೋಷವಾಗಿ ಅಭಿವ್ಯಕ್ತಿಸಿದ್ದಾಳೆ. ಸೂರದಾಸರಾದರೋ, ಒಬ್ಬ ಸ್ನೇಹಿತನ ಸ್ಥಾನದಲ್ಲಿ ನಿಂತು, ಹೀಗೆ ಆರೋಪಿಸಿದ್ದಾರೆ; ಹಾಥ್ ರಾಯೇ ಜತ್ ಹೋ, ನಿಬಲ್ ಜನ ಕೀ ಮೋಯ;

ಜಬ್ ಹೃದಯ್ ತೇನ್ ಛೂಟೀಹೋ, ಸಬಲ್ ಜನೀ ಹೋ ತೋಯ್

(ನೀನು ನನ್ನ ಕೈಬಿಟ್ಟು ಹೋಗುತ್ತಿದ್ದೀಯೆ, ಏಕೆಂದರೆ ನಾನು ದುರ್ಬಲನೆಂದು ನೀನು ಬಲ್ಲೆ. ಆದರೆ ನೀನು ನನ್ನ ಹೃದಯದಿಂದ ಹೊರಹೋಗಲು ಶಕ್ತನಾದರೆ ಮಾತ್ರವೇ ನಾನು ನಿನ್ನ ಶಕ್ತಿ, ಸಾಮರ್ಥ್ಯವನ್ನು ಗುರ್ತಿಸುತ್ತೇನೆ)

ಶಂಕರಾಚಾರ್ಯರು–ಪಂಡಿತರು, ದಾರ್ಶನಿಕರಲ್ಲಿ ವಿದ್ವಾಂಸರುಗಳಲ್ಲಿ ಕಿರೀಟ ಪ್ರಾಯರಾದವರು–ಹೀಗೆಂದು ಉದ್ಘೋಷಿಸಿದ್ದಾರೆ–ಬ್ರಹ್ಮ ಸತ್ಯಂ, ಜಗನ್ ಮಿಥ್ಯಂ ಎಂದು (ಜಗತ್ತು ಒಂದು ಭ್ರಮೆ, ಬ್ರಹ್ಮ ಮಾತ್ರವೇ ಸತ್ಯ) ಅವರೇ ಹೀಗೆ ಹಾಡಿದ್ದಾರೆ.

ಪುನರಪಿ ಜನನಂ, ಪುನರಪಿ ಮರಣಂ
ಪುನರಪಿ ಜನನೀ ಜಠರೇ ಶಯನಂ
ಇಹ ಸಂಸಾರೇ, ಖಲು ದುಸ್ತಾರೇ
ಕೃಪಯಾ ಪಾರೇ ಪಾಹಿ ಮುರಾರೇ
ಭಜ ಗೋವಿಂದಂ, ಭಜ ಗೋವಿಂದಂ
ಗೋವಿಂದಂ ಭಜ ಮೂಢಮತೇ ।

(ನೀನು ಮತ್ತೆ ಹುಟ್ಟುತ್ತೀಯೆ ಮತ್ತು ಮತ್ತೆ ಸಾಯುತ್ತೀಯೆ. ಪುನಃ ನೀನು ನಿನ್ನ ತಾಯಿಯ ಗರ್ಭದಲ್ಲಿ ಇರಬೇಕಾಗುತ್ತದೆ ಈ ಜಗತ್ತನ್ನೂ ದಾಟುವುದು

ಬಹಳ ಕಷ್ಟ ಮುರಾರಿಯ ಅನುಗ್ರಹದಿಂದ ಮಾತ್ರವೇ ಅದನ್ನು ದಾಟಲು ಸಾಧ್ಯವಾಗುತ್ತದೆ. ಆದ್ದರಿಂದ ಓ ಮೂಢಾತ್ಮನೇ, ಗೋವಿಂದನ ಪವಿತ್ರ ನಾಮ ಸ್ಮರಣೆ ಮಾಡು!)

**ಶ್ರೀಕೃಷ್ಣನ ಸಂದೇಶ ಹೀಗಿದೆ:**

ಸುಖ ದುಃಖೇ ಸಮೇಕೃತ್ವಾ, ಲಾಭಾಲಾಭಾ, ಜಯ ಜಯ್,
ತ ತೋ ಯುದ್ಧಾಯ ಯುಜ್ಯಸ್ವ ನೈದಂ ಪಾಪಮವಾಪ್ಯಸಿ

(ಗೀತ ೨:೩೮)

(ಸುಖ ಮತ್ತು ದುಃಖ ಲಾಭ ಮತ್ತು ನಷ್ಟ ಜಯ ಮತ್ತು ಅಪಜಯ – ಎಲ್ಲವನ್ನೂ ಒಂದೇ ಸಮನಾಗಿ ಪರಿಭಾವಿಸು, ಚಿಂತಿಸಬೇಡ. ನಿನ್ನನ್ನು ನೀನು ನಿನ್ನ ಕರ್ತವ್ಯ–ಯುದ್ಧ ಮಾಡುವುದಕ್ಕೆ ತೊಡಗಿಸಿಕೋ ಅದರಲ್ಲಿ ಯಾವುದೇ ಪಾಪಕ್ಕೂ ನೀನು ತಗುಲಿಕೊಳ್ಳುವುದಿಲ್ಲ. ಈ ವೀರ ಯೋಧರು ದೊಡ್ಡ ದೊಡ್ಡ ಚಕ್ರಾಧಿಪತ್ಯಗಳನ್ನು ಕಟ್ಟಿದರು ಮತ್ತು ರಾಷ್ಟ್ರವನ್ನು ಶ್ರೀಮಂತಗೊಳಿಸಿದರು. ಜ್ಞಾನ, ಕರ್ಮ, ಭಕ್ತಿಗಳ ಕ್ಷೇತ್ರದಲ್ಲಿ ಮಾತ್ರವೇ ಅಲ್ಲದೆ, ಮಾನವನ ಪ್ರತಿಯೊಂದು ಚಟುವಟಿಕೆಗಳಲ್ಲಿಯೂ ಕೃಷ್ಣನೇ ನಮ್ಮ ಮಾರ್ಗದರ್ಶಕನಾಗಿದ್ದಾನೆ.

ರಾಷ್ಟ್ರ ಜೀವನದಲ್ಲಿ ಯಾರೂ ಅಂಥ ಕೇಂದ್ರ ಸ್ಥಾನವನ್ನು ಗಳಿಸುವುದು ಅಷ್ಟು ಸುಲಭವಲ್ಲ. ಕೆಲ ಕಾಲದವರೆಗೆ ನೀವು ಒಂದು ಇಡೀ ರಾಷ್ಟ್ರವನ್ನು ನಿಮ್ಮೊಂದಿಗೆ ಕರೆದೊಯ್ಯಬಹುದು; ಅಥವಾ ಒಂದು ನಿರ್ದಿಷ್ಟವಾದ ಸಮುದಾಯಕ್ಕೆ ಸದಾಕಾಲಕ್ಕೂ ಸ್ಫೂರ್ತಿಯ ಮೂಲಸ್ತೋತ್ರವಾಗಿ ನೀವು ಬೆಳೆಯಬಹುದು. ಆದರೆ, ಇಡೀ ರಾಷ್ಟ್ರಕ್ಕೆ ಯುಗದಿಂದ ಯುಗಕ್ಕೆ, ಯುಗಾಂತರಗಳ ಕಾಲದಲ್ಲೂ ಸ್ಫೂರ್ತಿ ನೀಡುವ ಸಾಮರ್ಥ್ಯ ಇರಬೇಕೆಂದರೆ, ಆ ನೇತಾರನಿಗೆ ಅತೀ ಉನ್ನತ ಮಟ್ಟದ ಉತ್ತಮ ಗುಣಗಳು ಇರಬೇಕಾಗುತ್ತದೆ. ಸಮಾಜವು ಯಾರಲ್ಲಿ ತನ್ನದೇ ಆತ್ಮನನ್ನು ಕಾಣುತ್ತದೆಯೋ ಆತನು ಮಾತ್ರವೇ ಆರಾಧಿಸಲ್ಪಡುತ್ತಾನೆ. ಸದಾಕಾಲಕ್ಕೂ (ಸಾರ್ವಕಾಲಿಕವಾಗಿ) ರಾಷ್ಟ್ರ ವ್ಯಾಪಿಯಾದ ಗೌರವವನ್ನು ಯಾವ ವ್ಯಕ್ತಿ ತನ್ನ ಇಡೀ ಜೀವನವನ್ನು ರಾಷ್ಟ್ರಕ್ಕಾಗಿಯೇ ಮುಡಿಪಾಗಿಟ್ಟು ದುಡಿಯುತ್ತಾನೋ (ತನ್ನ ಜೀವನ ಪೂರ್ತವನ್ನೂ ರಾಷ್ಟ್ರಕ್ಕಾಗಿಯೇ ಸವೆಸುತ್ತಾನೋ) ಆತ ಮಾತ್ರವೇ ಗಳಿಸಿಕೊಳ್ಳುತ್ತಾನೆ. ಅಂಥ ವ್ಯಕ್ತಿಯೊಬ್ಬನು ರಾಷ್ಟ್ರದ ಅಂತರಾತ್ಮನನ್ನು ಸಾಕಾರಗೊಳಿಸಿಕೊಂಡದ್ದೇ ಆದಲ್ಲಿ, ಆತನ ಜೀವನ ಒಂದು ಮಹಾನ್ ಗಾಥೆಯಾಗಿ ಬಿಡುತ್ತದೆ, ಅದರ ಸ್ವರ ಮಾಧುರ್ಯವು ಇಡೀ ರಾಷ್ಟ್ರವೇ ಅವನೊಂದಿಗೆ ನರ್ತಿಸುವಂತೆ ಮಾಡಿಬಿಡುತ್ತದೆ. ನಾವು ಇಂದಿಗೂ ಭಗವಾನ್ ಶ್ರೀಕೃಷ್ಣನನ್ನು ಪೂಜಿಸುತ್ತೇವೆ. ಅವನ ಜನ್ಮದಿನವನ್ನು ಭಾರತದ ಆದ್ಯಂತವು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಕವಿಗಳು ಇಂದಿಗೂ

ಅವನ ಕುರಿತು ಹಾಡುವಾಗ ಭಾವಾನಿಷ್ಟ ಆಗುತ್ತಾರೆ, ದಾರ್ಶನಿಕರು ಆತನ ತತ್ವ ದರ್ಶನದ ವಿಮರ್ಶಾತ್ಮಕ ಅಧ್ಯಯನ ಮಾಡುತ್ತಾರೆ. ಲಕ್ಷಾಂತರ ಮಂದಿ ಸಂಕೀರ್ತನಗಳಲ್ಲಿ ಭಾಗವಹಿಸುತ್ತಾರೆ. ದಿವ್ಯಾನಂದದೊಂದಿಗೆ ನರ್ತಿಸುತ್ತಾರೆ. ಆದಾಗ್ಯೂ ರಾಷ್ಟ್ರ ಅಧೋಗತಿಗೆ ಇಳಿಯುತ್ತಿದೆ. ಇದಕ್ಕೆ ಒಂದೇ ಒಂದು ಕಾರಣವಿದೆ. ನಾವು ವಾಸ್ತವವನ್ನು ಮರೆಮಾಚುತ್ತಿದ್ದೇವೆ ಮತ್ತು ಆಕಾರ ಅಥವಾ ಬಹಿರೂಪಕ್ಕೆ ಮಾತ್ರ ಅಂಟಿಕೊಳ್ಳುತ್ತಿದ್ದೇವೆ. ಭಗವಾನ್ ಕೃಷ್ಣನ ನಾಮ ಜಪ ಮಾಡುತ್ತಿದ್ದೇವೆ. ಆದರೆ ಅವನ ಜೀವನದ ಮಹತ್ವವನ್ನು ಗ್ರಹಿಸುತ್ತಿಲ್ಲ ಮತ್ತು ಅದರಂತೆ ನಾವು ವರ್ತಿಸುತ್ತಿಲ್ಲ. ಅವನ ಜೀವನ ಸಂದೇಶವನ್ನು ಅರ್ಥೈಸಿಕೊಳ್ಳದೆ, ಬರೇ ಯಾಂತ್ರಿಕವಾಗಿ ಅವನ ನಾಮ ಜಪವನ್ನು ಮತ್ತೆ ಪಠಿಸುವವರು, ಕವಿಯ ಮಾತುಗಳಲ್ಲಿ ಹೇಳುವುದಾದರೆ ಭಕ್ತರಲ್ಲ, ಬದಲಿಗೆ ಪಾಪಿಗಳು.

ಅಪಹಾಯ ನಿಜಂ ಕರ್ಮ, ಕೃಷ್ಣ ಕೃಷ್ಣೇತಿ ವಾದಿನಃ ತೇ ತು ಪಾಪ ಹರೇರ ದೂಷಣ ಧರ್ಮಾರ್ಥಂ ಜನ್ಮ ಬದ್ಧರೇಃ

(ಯಾವ ಜನರು ಕೃಷ್ಣನ ಹೆಸರನ್ನು ಮಾತ್ರವೇ ಜಪಿಸುತ್ತಾರೋ, ತಮ್ಮ ಕರ್ತವ್ಯವನ್ನು ಮಾಡುವಲ್ಲಿ ಹಿಂಜರಿಯುತ್ತಾರೋ ಮತ್ತು ತಮ್ಮ ಕೊರತೆಗಳಿಗೆ ಹರಿಯನ್ನು ನಿಂದಿಸುತ್ತಾರೋ ಅವರು ಪಾಪಿಗಳು, ಏಕೆಂದರೆ ಕೃಷ್ಣನು ಧರ್ಮ ಸಂಸ್ಥಾಪನೆಗೆಂದು ಮಾತ್ರವೇ ಜನ್ಮ ತಾಳಿದವನು) ಮತ್ತೆ ನಮ್ಮ ಕರ್ಮ, ಕರ್ತವ್ಯವೇನು? ನಿಸ್ಸಂದೇಹವಾಗಿಯೂ ಭಗವಾನ್ ಕೃಷ್ಣನ ಕರ್ತವ್ಯದಂತೆಯೇ ನಮ್ಮದೂ ಆಗಿದೆ, ಏಕೆಂದರೆ ಆತನೇ ನಮ್ಮ ಆದರ್ಶ.

ಭಗವಾನ ಕೃಷ್ಣನಲ್ಲಿ ಎಲ್ಲಾ ಸದ್ಗುಣಗಳೂ ಉತ್ತುಂಗದಲ್ಲಿದ್ದು ಆತನೇ ಗುಣಗಳ ಮೊತ್ತವೇ ಆಗಿದ್ದಾಗ್ಯೂ, ರಾಷ್ಟ್ರದ ಬಗೆಗೆ ಆತನ ಆಳವಾದ ಪ್ರೇಮ ಹಾಗೂ ರಾಷ್ಟ್ರಕ್ಕಾಗಿ ಏನನ್ನಾದರೂ, ಪ್ರತಿಯೊಂದನ್ನೂ ಮಾಡಲು ಸದಾ ಸಿದ್ಧನಿರುವ ನಿಲುವು. ಬೇರೆಲ್ಲ ಗುಣಗಳಿಗಿಂತಲೂ ಮೊದಲಿಗೆ ನಿಲ್ಲುತ್ತವೆ. ಅವನು ತನಗಾಗಿ ಏನನ್ನು ಬಯಸಲಿಲ್ಲ. ಎಲ್ಲವನ್ನೂ ರಾಷ್ಟ್ರಕ್ಕಾಗಿ ಮಾತ್ರವೇ ಕಾಳಜಿ ವಹಿಸಿದನು. ಯಾವ ವ್ಯಕ್ತಿ ತನ್ನ ಜೀವನವನ್ನೇ ರಾಷ್ಟ್ರಕ್ಕಾಗಿ ಮುಡಿಪಾಗಿಡುತ್ತಾನೆಯೇ ಆತ ಗೀತೆಯಲ್ಲಿ ವರ್ಣಿಸಿರುವ ಸ್ಥಿತಪ್ರಜ್ಞನ ಗುಣಲಕ್ಷಣಗಳನ್ನು ಹೊಂದಿದವನಾಗಿರುತ್ತಾನೆ.

ದುಃಖೇಷ್ವನುದ್ವಿಗ್ನ ಮನಾಃ
ಸುಖೇಷು ವಿಗತ ಸ್ಪೃಹಃ
ವೀತರಾಗ ಭಯಕ್ರೋಧಃ
ಸ್ಥಿತಧೀರ್ಮುನಿ ಉಚ್ಯತೇ (ಗೀತೆ : ೨:೫೬)

(ದುಃಖ ಬಂದಾಗ ಉದ್ವಿಗ್ನತೆಗೊಳಗಾಗದೆ, ಸುಖ ಬಂದಾಗ ನಿರ್ಲಿಪ್ತನಾಗಿರಬಲ್ಲ ವ್ಯಕ್ತಿ, ಆಮಿಷ, ಭಯ, ಕ್ರೋಧಗಳಿಂದ ಮುಕ್ತನಾಗಿರಬಲ್ಲಾತ

ಮಾತ್ರವೇ ಸ್ಥಿತಪ್ರಜ್ಞ ಸ್ಥಿರ ಮನಸ್ಥಿತಿಯ ಒಬ್ಬ ಮುನಿ ಎಂದೆನಿಸಿಕೊಳ್ಳಬಲ್ಲ.)

ಭಗವಾನ ಕೃಷ್ಣ ಸುಖ–ದುಃಖ, ಭಯ–ಕ್ರೋಧ, ಮೋಹ–ಮತ್ಸರ, ಗೌರವ–ಅಗೌರವ (ಮಾನ–ಅಪಮಾನ) ಈ ದ್ವಂದ್ವ–ಭೇದಗಳಿಂದ ಮುಕ್ತನಾಗಿದ್ದು ಒಬ್ಬ ಆದರ್ಶ ಪುರುಷನಾಗಿದ್ದನು. ಅವನ ರಾಷ್ಟ್ರ ಪ್ರೇಮದ ಪ್ರತಿಯಾಗಿ ಪ್ರತಿಯೊಂದು ವಿಷಯವೂ ಅಧೀನವರ್ತಿಯಾಗಿರುತ್ತಿತ್ತು. ರಾಷ್ಟ್ರಹಿತದ ಹಾದಿಯಲ್ಲಿ, ಅಸ್ತಿತ್ವದಲ್ಲಿದ್ದ ಸಾಮಾಜಿಕ, ನೈತಿಕ ನೀತಿ ನಿರೂಪಣೆಗಳು ವ್ಯಕ್ತಿಪರವಾಗಿದ್ದು, ಅಡ್ಡವಾಗಿ ಬಂದ ಸಂದರ್ಭಗಳಲ್ಲಿ ಅವುಗಳನ್ನು ಮೀರಿ ಬದಿಗೆ ಸರಿಸುತ್ತಿದ್ದ.

ಭಗವಾನ್ ಕೃಷ್ಣ ಅವನ ಸಾಕು ತಂದೆ ನಂದನ ಗ್ರಾಮೀಣ ಪರಿಸರದಲ್ಲಿ, ವೃಂದಾವನದ ಗೋಕುಲದಲ್ಲಿ ಪೋಷಿಸಲ್ಪಟ್ಟನು. ನಂದನು ಸ್ಥಿತವಂತ ವ್ಯಕ್ತಿ. ಪ್ರತಿನಿತ್ಯವೂ ಕೃಷ್ಣನು ಗೋವುಗಳ ಮಂದೆಯ ಜೊತೆಗೆ, ಗೋಪಾಲಕರೊಂದಿಗೆ ಹೋಗಲೇ ಬೇಕಾದ ಅಗತ್ಯ ಅನಿವಾರ್ಯವೇನೂ ಇದ್ದಿರಲಿಲ್ಲ. ಮಹಾಭಾರತದಲ್ಲಿ ಚಿತ್ರಿಸಿರುವಂತೆ ಅಂದಿನ ಸಮಕಾಲೀನ ಸಮಾಜದಲ್ಲಿ ಶ್ರೀಮಂತರು ದನಕಾಯಲು ಹೋಗುವುದಾಗಲೀ, ಗೋವಳರಂಥ ನಿರಕ್ಷರಿಗಳಾದ ದೀನಜನರೊಂದಿಗೆ ಬೆರೆಯುವುದಾಗಲೀ ಇರಲಿಲ್ಲ. ಆದರೆ ಕೃಷ್ಣ ಅವರೊಂದಿಗೆ ಹೋಗಲು, ಒಡನಾಡಲು, ಹರಟೆ, ಕ್ರೀಡೆಗಳಲ್ಲಿ, ಊಟ ಮಾಡುವುದರಲ್ಲಿ, ಹಾಡು–ನೃತ್ಯಗಳಲ್ಲಿ ಪಾಲ್ಗೊಳ್ಳಲು ಇಚ್ಛಿಸುತ್ತಿದ್ದ. ಆತ ತನ್ನ ಅಹಂನ್ನು ಬದಿಗೊತ್ತಿದ್ದ. ಅತೀ ನಗಣ್ಯ ವ್ಯಕ್ತಿ ಅಥವಾ ಗ್ರಾಮೀಣ ಪರಿಸರದಿಂದ ಬಂದಿರಬಹುದಾದ ತೀರಾ ಅಮುಖ್ಯ ವ್ಯಕ್ತಿಯೊಂದಿಗೂ ಅಂದರೆ ಯಾವೊಬ್ಬ ಗೋಪ ಅಥವಾ ಗೋಪಿಕೆಯೊಂದಿಗಾದರೂ ಸಂಭಾಷಣೆಗೆ ತೊಡಗಲು ಕೃಷ್ಣ ಸಿದ್ಧನಿರುತ್ತಿದ್ದ. ಗೋಕುಲದಿಂದ ಬಹುದೂರದವರೆಗೂ ಅಲೆಯುತ್ತಿದ್ದ, ಬಹುಶಃ ಉದ್ದೇಶ ಪೂರ್ವಕವಾಗಿಯೇ ಹಾಗೆ ಮಾಡುತ್ತಿದ್ದಿರಬೇಕು ಹಾಗೂ ಸ್ಥಿರಚಿತ್ರ ಪ್ರತಿಮೆಗಳೋಪಾದಿಯಲ್ಲಿ ಹಸುಗಳ ಮಂದೆಗಳು. ಗೋವಳರು ಅತನ ಹಿಂದೆ ಮೆರವಣಿಗೆಯಲ್ಲಿ ಹಿಂಬಾಲಿಸುತ್ತಿದ್ದರು. ಹೀಗಾಗಿಯೇ ಹಲವು ವಿಪತ್ತುಗಳು. ಆ ಸುರೀ ಮರ್ದನ ಪ್ರಸಂಗಗಳು ಬಹುಮಟ್ಟಿಗೆ ಆಹ್ವಾನಿಸಲ್ಪಡುತ್ತಿದ್ದುವು. ಇಡೀ ನೆರೆ ಪ್ರಾಂತ್ಯ–ವಸತಿ ಪ್ರದೇಶವು ಕಂಸನಂಥ ಜನಗಳಿಂದ ತುಂಬಿತ್ತು. ಅಂಥವರ ಆಸುರೀ ಪ್ರತಾಪ, ಪ್ರಭಾವಗಳನ್ನು ಮರ್ದನ ಮಾಡಿ ಅವರಿಗೆ ಅವರ ವಸ್ತು, ಸ್ಥಾನಗಳನ್ನು ಹಿಂತಿರುಗಿಸಿಕೊಡುತ್ತಿದ್ದ. (?) ಅವರುಗಳಲ್ಲಿ ಧಾರ್ಮಿಕ ಶ್ರದ್ಧಾಸಕ್ತಿ, ರಾಷ್ಟ್ರ ಪ್ರೇಮ ತುಂಬಿಕೊಳ್ಳುತ್ತಿತ್ತು ಅವರ ಮನಸ್ಸುಗಳನ್ನು ಭಯ, ಆಂತರಿಕ ಮಾತ್ಸರಗಳಿಂದ ಮುಕ್ತ ಮಾಡುತ್ತಿದ್ದ. ಆತನ ವಿಶಾಲ ಹೃದಯ ಶೀಲತೆಯಿಂದಾಗಿ ಇಡೀ ಗೋಕುಲ–ಪುರುಷರು, ಸ್ತ್ರೀಯರು, ಮಕ್ಕಳು (ಆಬಾಲ ವೃದ್ಧರಾದಿಯಾಗಿ ಎಲ್ಲ ಗೋಕುಲವಾಸಿಗಳೂ) ಕೃಷ್ಣನಿಗೆ ದುಂಬಾಲು ಬೀಳುತ್ತಿದ್ದದಲ್ಲದೆ ತಮ್ಮದೆಲ್ಲವನ್ನೂ ಅವನ ಸೂಚನೆಗೆ ಪ್ರತಿಯಾಗಿ ತ್ಯಾಗಮಾಡಲು

ಸಂಕಲ್ಪ ಸಿದ್ಧರಾಗಿದ್ದರು. (ಸಿದ್ಧ ಸಂಕಲ್ಪ ಮಾಡಿದವರಾಗಿದ್ದರು.) ಆದ್ದರಿಂದಲೇ ಹಳೆಯ ಸಾಂಪ್ರಾಯಕ ಇಂದ್ರ ಪೂಜೆಯ ಪರ್ಯಾಯವಾಗಿ ಸಾಂಕೇತಿಕ ರಾಷ್ಟ್ರಪೂಜೆ–ಗೋವರ್ಧನ ಪೂಜೆ ಅಸ್ತಿತ್ವಕ್ಕೆ ಬಂದಿತು. ಭಗವಾನ್ ಕೃಷ್ಣ ಕಾಲಕ್ಕೆ ಹೊರತಾದ ಸಂಪ್ರದಾಯದಿಂದ ಸಿಡಿದು ಹೊರ ಬಂದನಾದರೂ, ಹೊಸ ಸಂಪ್ರದಾಯಗಳನ್ನು ಸ್ಥಾಪಿಸಲು ಅನುಮತಿ ಪಡೆದಿದ್ದನು. ಅದೇ ಗೋವರ್ಧನ ಗಿರಿಯನ್ನು ಎತ್ತಿ ಹಿಡಿದುದರ ಮಹತ್ವವಾಗಿದೆ. ಮಥುರಾದಿಂದ ಕೃಷ್ಣನಿಗೆ ಸವಾಲೊಂದು ಬಂದಿತು. ಕಂಸನನ್ನು ಕೊಲ್ಲಲು ಸೂಕ್ತ ಘಳಿಗೆ ಪ್ರಾಪ್ತವಾಯಿತು. ಇದಕ್ಕಾಗಿ ಯಾವ ಭೂಮಿಯ ಪ್ರತಿಯೊಂದು ಅಣು ಕಣವೂ ಆತನ ಪ್ರೇಮ ಸ್ಪಂದಿತವಾಗಿತ್ತೋ ಅಂಥ ಪ್ರೀತಿಯ ಸ್ಥಳವನ್ನೂ ಬಿಡಬೇಕಾಗಿ ಬಂದಿತು. ನಂದ, ಯಶೋಧ, ಗೋಪರು, ಗೋಪಿಕೆಯರು, ಗೋಮಂದೆಗಳು, ಎಳೆಯ ಕರುಗಳು (ತುರು, ಕರುಗಳು)–ಎಲ್ಲರೂ ವಿರಹವೇದನೆಯನ್ನು ಅನುಭವಿಸುತ್ತಿದ್ದರು. ಇಡೀ ಗೋಕುಲವೇ ರೋದಿಸುತ್ತಿತ್ತು–ಏಕೆಂದರೆ ಅವರ ಆತ್ಮವೇ ಅವರನ್ನು ಬಿಟ್ಟು ಹೊರಟಿತ್ತು. ಕೃಷ್ಣನೂ ಕೂಡಾ ಮನುಷ್ಯನಷ್ಟೇ? ಅವನಿಗೂ ಹೃದಯವಿತ್ತು. ಆತ ಶಿಲಾಮೂರ್ತಿಯಾಗಿರಲಿಲ್ಲ. ಆದರೆ ಕರ್ತವ್ಯವು ಭಾವನೆಗಳಿಗಿಂತ ಮೇಲಿನದು, ಗೋಕುಲದಲ್ಲಿ ಹರಿದ ಅಶ್ರುಜಲಧಾರೆ, ಮಧುರಾಕ್ಕೆ ಹೊರಡಬೇಕೆಂಬ ಅವನ ಸಂಕಲ್ಪವನ್ನು ಮುಳುಗಿಸಿ ಬಿಡಲಿಲ್ಲ. ಕೃಷ್ಣ ಕರ್ತವ್ಯದ ವೇದಿಕೆ ಪೀಠ)ಯಲ್ಲಿ ಪ್ರೀತಿಯನ್ನು ಬಲಿದಾನ ಮಾಡಿದ.

ಕೃಷ್ಣ ತನ್ನ ಸಮಕಾಲೀನ ಸಮಾಜಕ್ಕೆ ಸರಿಹೊಂದದ ಪುರಾತನ ಸಂಪ್ರದಾಯಗಳನ್ನೂ ತಿರಸ್ಕರಿಸಿದನು ಹಾಗೂ ಸಮಯೋಚಿತವಾದ, ಸಮಂಜಸವಾದ ನೂತನ ಸಂಪ್ರದಾಯಗಳನ್ನೂ ರೂಢಿಗೆ ತಂದನು.

**ರಣ ಹೇಡಿಯಾಗುವ ಮೂಲಕ ಕೃಷ್ಣ ಮಥುರಾವನ್ನು ರಕ್ಷಿಸಿದ ಬಗೆ (ಹೇಗೆ?)**

ಕಂಸನನ್ನು ಮುಗಿಸಿಬಿಡುವುದು ಕೃಷ್ಣನಿಗೆ ಏನೇನೂ ಕಷ್ಟದ ಕೆಲಸವಾಗಿರಲಿಲ್ಲ. ಏಕೆಂದರೆ ಇಡೀ ಜನತೆ ಅವನ ಬೆಂಬಲಕ್ಕಿದ್ದರು. ಕಂಸನ ದರ್ಬಾರಿಗೆ ಬರುವ ದಾರಿಯಲ್ಲಿ ಅವನು ಬಹಳ ಜನರನ್ನೂ ಸಂಧಿಸಿದ್ದನು ಮತ್ತು ಯಾರೊಬ್ಬರ ವಿನಾಯಿತಿಯೂ ಇಲ್ಲದಂತೆ ಎಲ್ಲರೂ ಅವನನ್ನು ಅನುಮೋದಿಸಿದ್ದರು. ಕಂಸನ ಮುಕುಟ (ಕಿರೀಟ)ವೇ ಕೃಷ್ಣನ ಅಂಗೈಯ್ಯಲ್ಲಿ ಇತ್ತು. ಆದರೂ ತನ್ನನ್ನೇ ಪಟ್ಟಕ್ಕೇರಿಸಿಕೊಳ್ಳುವ ಬದಲಿಗೆ ತನ್ನ ತಾಯಿಯ ತಂದೆ (ಮಾತಾ ಮಹ)–ಕಂಸನ ತಂದೆ ಉಗ್ರ ಸೇನನಿಗೆ ರಾಜ ಪಟ್ಟ ಕಟ್ಟಿಕೊಟ್ಟನು. ಆದರೂ ತಾನು ಜನಸೇವೆಯನ್ನು ಮುಂದುವರಿಸಿದನು. ಆದರೆ ಕಂಸನ ನಿಕಟ ಮಿತ್ರರು ಇದನ್ನು ಸಹಿಸದಾದರು. ಆದ್ದರಿಂದ ಜರಾಸಂಧ ಮಥುರಾದ ಮೇಲೆ ದಾಳಿ ಮಾಡಿದನು. ದಾಳಿಕೋರರಿಗೆ,

ಕೃಷ್ಣನ ಮುಂದಾಳತ್ವದಲ್ಲಿ ಮಥುರಾವಾಸಿಗಳು ಸರಿಯಾದ ಪ್ರತಿಪ್ರಹಾರವನ್ನೇ ನೀಡಿದರು. ಜರಾಸಂಧ ಪಲಾಯನ ಮಾಡಬೇಕಾಯಿತು. ಆದರೇನು, ಅವನು ಪುನಃ ದಂಡೆತ್ತಿ ಬಂದನು. ಅವನನ್ನು ಸೋಲಿಸಲಾಯಿತಾದರೂ, ಮತ್ತೊಮ್ಮೆ ದಾಳಿ ಮಾಡಿದನು. ಇದು ಹದಿನಾರು ವರ್ಷಗಳ ಸುದೀರ್ಘಕಾಲ ಹೀಗೇ ಮುಂದುವರೆಯಿತು. ಕೃಷ್ಣ ಈ ದೀರ್ಘ ಕಾಲಿಕ ಕೋಮುವ್ಯಾಜ್ಯದ ದುಷ್ಪರಿಣಾಮಗಳ ಕುರಿತು ಚಿಂತಿಸಿದನು. ಈ ದಾಳಿ, ದಂಡಯಾತ್ರೆಗಳ ಮೂಲ ಕಾರಣ ಮಥುರಾ ಮೇಲೆ ಜರಾಸಂಧನಿಗಿರುವ ದ್ವೇಷವಲ್ಲ. ತನ್ನ ಪ್ರತಿಯಾಗಿ ಇರುವ ವೈಯಕ್ತಿಕ (ದ್ವೇಷ) ಸೇಡು ಎಂಬ ನಿರ್ಣಯಕ್ಕೆ ತಲುಪಿದನು. ಆದ್ದರಿಂದ ಮಥುರಾವನ್ನು ರಕ್ಷಿಸುವ ಸಲುವಾಗಿ ಮಥುರಾದಿಂದ ತಾನು ನಿರ್ಗಮಿಸುವ ಆಲೋಚನೆ ಮಾಡಿದನು. ಆದರೆ ಕೃಷ್ಣ ಅಲ್ಲಿಂದ ಹೊರಡುವ ಮುನ್ನವೂ ಜರಾಸಂಥನು ಭಾರೀ ಸೇನಾಬಲದೊಂದಿಗೆ ಮಥುರಾ ಮೇಲೆ ದಾಳಿ ಮಾಡಿದನು. ಮತ್ತು ಈ ಬಾರಿ ಕಾಲಯಮನನ್ನು ಜೊತೆಯಲ್ಲಿ ಕರೆತಂದನು. ಶತ್ರು ಆಳಯದ ಇತ್ತಂಢಗಳವರೂ ಮುಖಾಮುಖಿಯಾಗಿ ಯುದ್ಧ ಸನ್ನದ್ಧರಾಗಿ ನಿಂತಿದ್ದರು. ರಣಭೇರಿ ಇನ್ನೇನು ಮೊಳಗುವುದರಲ್ಲಿತ್ತು ಆಗ ಇದ್ದಕ್ಕಿದ್ದಂತೇ ಹಠಾತ್ತನೆ ಕೃಷ್ಣ ಓಡಿ ಹೋಗುತ್ತಿರುವುದನ್ನು ನೋಡಿದರು! ಸುವಿಖ್ಯಾತ ರಣಧೀರ ಕೃಷ್ಣ ರಣರಂಗದಿಂದ ಪಲಾಯನ ಮಾಡುತ್ತಿದ್ದ! ಜರಾಸಂಧ ಗಟ್ಟಿಯಾಗಿ ಸವಾಲೆಸೆದು ಘೋಷಿಸುತ್ತಿದ್ದ, ಓ ಕೃಷ್ಣ, ಹೀಗೇಕೆ ಎಲ್ಲಿಗೆ ಓಡುತ್ತಿದ್ದೀಯೇ? ಅದು ರಣ ಹೇಡಿತನ ಎಂದು ಅದು ನಿಜವಾಗಲೂ ರಣರಂಗದಿಂದ ಹಾಗೆ ಹೊರಡುವುದು ರಣಹೇಡಿಯ ಕೆಲಸವೇ ಸರಿ. ಆದರೆ ಅಂಥ ಹೇಡಿತನವು ಮಥುರಾ ಸಲುವಾಗಿ ಅಗತ್ಯವೇ ಆಗಿತ್ತು. ಕೃಷ್ಣನೇ ಅರ್ಜುನನನ್ನು ಎಚ್ಚರಿಸಿ ಸಮರದಲ್ಲಿ ಪಾಲ್ಗೊಳ್ಳುವಂತೆ, ಓಡಿಹೋಗದಂತೆ ತಡೆದಿದ್ದ. ಏಕೆಂದರೆ ಹಾಗೆ ಪಲಾಯನ ಮಾಡಿದರೆ ಅನಾರ್ಯಜುಷ್ಟಂ, ಅಸ್ವಾಃಗ್ಯಮ್, ಅಕಿತಿಕರಂ (ಗೀತೆ–೨/೨) ಆರ್ಯನಿಗೆ ಶ್ರೇಯಸ್ಕರ ವಲ್ಲ, ನರಕಕ್ಕೆ ದಾರಿಯಾಗುತ್ತದೆ ಎಂದು ತಾನೇ ವಿವರಿಸಿದ್ದ. ಆದರೀಗ ತಾನೇ ರಣಹೇಡಿಯಂತೆ (ಯುದ್ಧಗಳ್ಳನಂತೆ) ಯುದ್ಧ ಭೂಮಿಯನ್ನು ಬಿಟ್ಟು ಓಡಿ ಹೋಗುತ್ತಿದ್ದಾನೆ?! ಏಕೆ ಹೀಗೆ? ಏಕೆಂದರೆ ಯುದ್ಧ ಮಾಡುವುದರಲ್ಲಿ ಹಾಗೂ ಓಡಿಹೋಗುವುದರಲ್ಲಿ. ಎರಡರಲ್ಲೂ ಅವನ ಮನಸಿನಲ್ಲಿದ್ದುದು ಸಮಾಜದ ಕ್ಷೇಮ ಚಿಂತನೆಯೊಂದೇ. ಜರಾಸಂಧನ ದಾಳಿ, ಯುದ್ಧ (ಘೋಷಣೆ)ಗಳಾದರೋ ಕೃಷ್ಣನಿಂದಾಗಿಯೇ ಇದ್ದದ್ದು. ಹಾಗೆಂದೇ ಯುದ್ಧ ಭೂಮಿಯಿಂದ ಓಡಿಹೋಗಿ ಕೃಷ್ಣ ಮಥುರಾವನ್ನು ಕಾಪಾಡಿದ್ದ! ಈವತ್ತಿಗೂ ಬಹಳ ಮಂದಿ ರಣಹೇಡಿ ಮಹನೀಯರನ್ನು ಕಾಣುತ್ತೇವೆ, ಆದರೆ ಅವರು ಆಳವಾದ ರಾಷ್ಟ್ರಪ್ರೇಮದಿಂದಾಗಿ ಯುದ್ಧ ಬಿಟ್ಟು ಹೋಗುವುದಲ್ಲ, ಹೇಡಿತನ ಹಾಗು ದೌರ್ಬಲ್ಯ/ಅಸಾಮರ್ಥ್ಯದಿಂದ ಹಾಗೆ ಮಾಡುತ್ತಾರೆ.

ಮಥುರಾ ನಗರವನ್ನು ಬಿಟ್ಟ ನಂತರ, ಕೃಷ್ಣ ದ್ವಾರಕಾ ನಗರ ರಚನೆಗೆ ಅಸ್ತಿಭಾರವನ್ನು ಹಾಕಿದನು. ಆದರೆ ಅಲ್ಲಿಯಾದರೂ ಆತ ಸುಮ್ಮನೆ ಕುಳಿತಿರುವುದಾದರೂ ಹೇಗೆ? ಅಧರ್ಮ ನಾಶ. ಧರ್ಮ ಪುನಃಸ್ಥಾಪನೆ/ ಪುನರುತ್ಥಾನಗಳ ಕಾರ್ಯ ಮುಂದಾಗಬೇಕಿತ್ತಷ್ಟೆ? ಆತನಿಗಿದ್ದ ಒಂದೇ ಒಂದು ಹಂಬಲವೆಂದರೆ ಸಮಾಜದಲ್ಲಿ ಚೆಲ್ಲಾಪಿಲ್ಲಿಯಾಗಿ ಚದುರಿ ಹೋಗಿದ್ದ ಬಿಡಿ ಭಾಗಗಳನ್ನೆಲ್ಲ ಮರು ಸಂಘಟಿಸುವುದು. ಭಾರತಕ್ಕೆ ಒಂದು ಸಶಕ್ತವಾದ, ಒಳ್ಳೆಯ ರೀತಿಯಿಂದ ಒಕ್ಕೂಟ ರಾಜ್ಯ ವಿಧಾನದ ಅಗತ್ಯವಿದ್ದಿತು. ಆ ಯುಗದಲ್ಲಿ ಹಸ್ತಿನಾಪುರದಲ್ಲಿ ಕೌರವರು ಮತ್ತು ಪಾಂಡವರು ಮಗಧದಲ್ಲಿ ಜರಾಸಂಧ, ಪ್ರಾಗ್ಜ್ಯೋತಿಷಪುರದಲ್ಲಿ ನರಕಾಸುರ, ಇವರುಗಳು ಪ್ರಮುಖವಾಗಿ ರಾಜ್ಯಾಡಳಿತ ನಿರತರಾದ ಪ್ರಮುಖ ಕುಟುಂಬಗಳಾಗಿದ್ದುವು ಮತ್ತು ಈ ಕುಟುಂಬಗಳಲ್ಲಿ ಯಾವುದಾದರೊಂದರಿಂದ ಒಬ್ಬ ಚಕ್ರವರ್ತಿ ಮೂಡಿ ಬರಬೇಕಾಗಿತ್ತು. ಅವರುಗಳಲ್ಲಿ ಪ್ರತಿಯೊಬ್ಬರೂ ಆ ಗೌರವಕ್ಕೆ ಅಪೇಕ್ಷಿಸಿದರು. ಕೃಷ್ಣನು ಪಾಂಡವರು ಮಾತ್ರವೇ ಭರತಖಂಡವನ್ನು ಆಳಲು ಹಾಗೂ ಧರ್ಮರಾಜ್ಯವನ್ನು ಸ್ಥಾಪಿಸಲು ಸಮರ್ಥರು ಎಂದು ಆಲೋಚಿಸಿದನು. ಆದ್ದರಿಂದಲೇ ಅವನು ಆ ಕನಸನ್ನು ನನಸಾಗಿಸಲು ತನ್ನ ಹೃನ್ಮನಗಳನ್ನು ಮುಡಿಪಾಗಿಟ್ಟು ದುಡಿದನು. ಒಂದು ರಾಷ್ಟ್ರದ ಧ್ಯೇಯೋದ್ದೇಶಗಳು ನಿರ್ಣಯಿಸಲ್ಪಟ್ಟ ಮೇಲೆ ಪ್ರತಿಯೊಬ್ಬ ದೇಶಭಕ್ತನಿಗೂ ಆ ಧ್ಯೇಯ ಸಾಧನೆಗಾಗಿ ಅಗತ್ಯವಿರುವ ತನ್ನೆಲ್ಲ ಶಕ್ತಿ, ಸತ್ವಗಳನ್ನೆಲ್ಲಾ ಒಪ್ಪಿಸಬೇಕಾಗುವುದು ಅನಿವಾರ್ಯವಾಗುತ್ತದೆ/ಅಲ್ಲಿಂದ ಮುಂದೆ ಮಾಡುವುದೋ, ಬಿಡುವುದೋ ಎಂದು ಚಿಂತಿಸುವ ಅಗತ್ಯವಿರುವುದಿಲ್ಲ. ರಾಷ್ಟ್ರೀಯ ಧ್ಯೇಯ ಸಾಧನೆಗೆ ಏನೆಲ್ಲ ಸಹಾಯಕವೋ ಅದೆಲ್ಲವೂ ಚೆಂದವೇ ಸರಿ; ಆ ಕನಸನ್ನು ಸಾಕಾರಗೊಳಿಸುವಲ್ಲಿ ಏನೆಲ್ಲ ಮಾಡಬಹುದೋ ಅದೆಲ್ಲವೂ ಸತ್ಯವೇ ಹೌದು. ಸದಾ ಸರ್ವಕಾಲಕ್ಕೂ ಧರ್ಮದ ನಿರೂಪಕನಾದ ಕೃಷ್ಣನ ಮಾರ್ಗದರ್ಶಕ ಮುಖ್ಯೋದ್ದೇಶವೇ ಇದಾಗಿತ್ತು. ಆತನಾದರೋ ಎಲ್ಲಾ ಕಾಲಕ್ಕೂ ಅತ್ಯುನ್ನತ ಧರ್ಮದರ್ಶಿಯೋ ಆಗಿದ್ದನು.

ಪಾಂಡವರು ರಾಜ್ಯ ಕಳೆದುಕೊಂಡ ನಂತರ ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಅಲೆಯುತ್ತಿದ್ದರು. ಆಗ ಕೃಷ್ಣ ಅವರ ಕಟ್ಟಾ ಬೆಂಬಲಿಗನಾಗಿ ಬಂದ. ಕೃಷ್ಣನ ಸಹಾಯ, ಮಾರ್ಗದರ್ಶನಗಳ ಕಾರಣದಿಂದಾಗಿ ಪಾಂಡವರು ತಮ್ಮ ಕಡೆಗೆ ಅಕ್ಷೌಹಿಣೀ (ಒಂಭತ್ತು) ಸೇನಾ ತುಕಡಿಗಳನ್ನೂ ಕಟ್ಟಬಲ್ಲವರಾದರು. ಅವನು ಪಾಂಡವರ ಕಡೆಗೆ ಹೇಗೆ ಜನ ಸಮೂಹವನ್ನು ಗೆದ್ದು/ಒಲಿಸಿಕೊಟ್ಟನು ಎಂಬುದು ಒಂದು ನಿದರ್ಶನದಿಂದ ಸ್ಪಷ್ಟವಾಗುತ್ತದೆ. ತನ್ನ ಅಣ್ಣ ಬಲರಾಮನೂ ಕೂಡ, ತನ್ನ ಶಿಷ್ಯ ದುರ್ಯೋಧನನ ಕಡೆಗೇ ಬೆಂಬಲಿಸುವನೇನೋ ಎಂಬ ಭಯ ಕೃಷ್ಣನಿಗಿತ್ತು. ಆದ್ದರಿಂದ ಬಲರಾಮನ ಹೃದಯದಲ್ಲಿ ಪಾಂಡವರಿಗಾಗಿ ಒಂದು ಮೃದು

ಭಾವವನ್ನುಂಟು ಮಾಡಲು ಒಂದು ಹಂಚಿಕೆ ಹೂಡಿದನು. ತಂಗಿ ಸುಭದ್ರೆಯನ್ನು ಅರ್ಜುನನಿಗೆ ಮದುವೆ ಮಾಡಿಕೊಡಲು ನಿಶ್ಚಯಿಸಿದನು. ಮಾಮೂಲು ಬಗೆಯಿಂದ ಬಲರಾಮನಂತೂ ಅದಕ್ಕೆ ಒಪ್ಪುತ್ತಿರಲಿಲ್ಲ. ಅದಕ್ಕೆ ಕೃಷ್ಣ ಅರ್ಜುನನಿಗೆ ಸುಭದ್ರೆಯನ್ನು ಓಡಿಸಿಕೊಂಡು ಹೋಗಲು ಆಹ್ವಾನ ನೀಡಿದನು. ವಿವಾಹ ನಡೆದೇ ಹೋದ ಮೇಲೆ ಬಲರಾಮನೂ ತಣ್ಣಗಾದನು ಮತ್ತು ಹೊಂದಾಣಿಕೆಗೆ ಒಗ್ಗಿಕೊಳ್ಳಬೇಕಾಯಿತು. ಸಾಮಾನ್ಯವಾಗಿ ಯಾರು ತಾನೇ ತನ್ನ ತಂಗಿಯೊಂದಿಗೆ ಓಡಿಹೋದವನನ್ನು ದೂಷಿಸದೆ ಇರುತ್ತಾರೆ? ಭಗವಾನ ಕೃಷ್ಣ ಮಾಡಿದ್ದೂ ಅದನ್ನೇ.... ಆದಾಗ್ಯೂ ಯಾರೊಬ್ಬರೂ ಬೆರಳೆತ್ತಿ ಆಡಿಕೊಳ್ಳುವಂತಿರಲಿಲ್ಲ; ಏಕೆಂದರೆ ಈ ಆಕ್ಷೇಪಾರ್ಹ ಕಾರ್ಯವನ್ನೂ ಒಂದು ಉನ್ನತ ಧ್ಯೇಯದಿಂದಾಗಿ ಪ್ರಚೋದಿಸಿದುದಾಗಿತ್ತು. ಮಹಾಭಾರತ ಯುದ್ಧ ಆರಂಭವಾಗುವ ಹೊತ್ತಿಗೆ ಸರಿಯಾಗಿ ಬಲರಾಮನನ್ನು ತೀರ್ಥಯಾತ್ರೆಗೆ ಹೋಗುವಂತೆ ಉತ್ತೇಜಿಸಲಾಯಿತು, ಪಾಂಡವರಿಗೆ ಪ್ರತಿಯಾಗಿ ದುರ್ಯೋಧನನನ್ನು ಬೆಂಬಲಿಸಲು ಬಲರಾಮ ಅಲ್ಲಿರದಂತೆ ನಿರ್ವಹಿಸಲಾಗಿತ್ತು!

ದುರ್ಯೋಧನ ಮತ್ತು ಅರ್ಜುನ ಇಬ್ಬರೂ ಶ್ರೀ ಕೃಷ್ಣನ ನೆರವು ಕೋರಲು ಬರುತ್ತಾರೆ. ಕೃಷ್ಣ ಅರ್ಜುನನಿಗೆ ನೆರವು ನೀಡಲು ಬಯಸಿರುತ್ತಾನೆ. ಅದಕ್ಕೆ ದುರ್ಯೋಧನ ಮೊದಲೇ ಬಂದರೂ ಕೃಷ್ಣ ಕಣ್ಣುಗಳನ್ನು ತೆರೆಯದೇ ಹಾಗೇ ಮಲಗಿರುತ್ತಾನೆ ಆದರೆ ಅರ್ಜುನ ಬಂದ ಕೂಡಲೇ ಅವನನ್ನು ಅಭಿನಂದಿಸಿ ಅವನು ಬಂದ ಕಾರಣವನ್ನೂ ವಿಚಾರಿಸುತ್ತಾನೆ. ಇದರ ಬಗೆಗೆ ನಾವೇನು ಹೇಳಬಹುದು? ಕೂದಲೆಳೆಯನ್ನು ಛೇದಿಸಬಲ್ಲಂಥ ವ್ಯಾಖ್ಯಾನಕಾರರು ಇದನ್ನು ಕಪಟತನ (ವಂಚನೆ) ಎಂದು ಕರೆದಾರು. ಆದರೆ ಇಡೀ ಜಗತ್ತು ಮಾತ್ರ ಇದನ್ನು ಕಾರ್ಯತಃ ಧರ್ಮದ ಅತ್ಯುಚ್ಚ ನಿದರ್ಶನವೆಂದೇ ಘೋಷಿಸುತ್ತದೆ.

ನೆರವು–ಈ ದೃಷ್ಟಿಯಿಂದ ಸ್ವತಃ ಪಾಂಡವರ ಪಕ್ಷಕ್ಕೆ ತಾನೇ ಹೋದ ಶ್ರೀಕೃಷ್ಣ ತನ್ನ ಸೈನ್ಯವನ್ನೆಲ್ಲ ದುರ್ಯೋಧನನ ಪಕ್ಷಕ್ಕೆ ನೆರವಾಗಲು ನಿರ್ದೇಶಿಸುತ್ತಾನೆ. ಈ ಸೈನ್ಯವು ಕೌರವರ ಪಕ್ಷದಲ್ಲಿ ಮಾಡಿದುದೇನು ಎಂಬುದು ಪ್ರತಿಯೊಬ್ಬರಿಗೂ ತಿಳಿದಿದೆ.

ಕೃಷ್ಣ ಯಾವುದನ್ನು ಧರ್ಮವೆಂದು ಕರೆದನೋ ಅದು ಯುದ್ಧದ ಅವಧಿಯಲ್ಲಿ ಮತ್ತಷ್ಟು ಸ್ಪಷ್ಟವಾಗುತ್ತದೆ ಕೃಷ್ಣ ಯುದ್ಧಕಾಲದಲ್ಲಿ ತಾನು ಯಾವುದೇ ಅಸ್ತ್ರ ಪ್ರಯೋಗವನ್ನೂ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದನು. ಆದರೆ ತೀರಾ ಕ್ಲಿಷ್ಟ ಸಂದರ್ಭದಲ್ಲಿ ಭೀಷ್ಮನ ಪ್ರತಿಯಾಗಿ ತನ್ನ ತೋಳನ್ನೇರಿಸಿ ಪ್ರಹಾರ ನೀಡಲು ಮುಂದಾಗುತ್ತಾನೆ. ತನ್ನ ಪ್ರತಿಜ್ಞೆಯನ್ನು ಮುರಿಯುವುದು ಪಾಪಗಳಲ್ಲೇ ಅತ್ಯಂತ ಹೀನಾಯವಾದುದೆಂದು ಪರಿಗಣಿಸಲ್ಪಟ್ಟಿದೆ. ಆದರೆ ಯಾರೊಬ್ಬರೂ ಕೃಷ್ಣನನ್ನು ಪಾಪಿ ಎಂದು ಕರೆಯುವುದಿಲ್ಲ. ಸಮಾಜವನ್ನು ಉದ್ಧರಿಸುವ ಪ್ರತಿಜ್ಞೆ ಮಾಡಿದ್ದನಾತ. ಆ ಧ್ಯೇಯ ಸಾಧನೆಗಾಗಿ ಮಾಡುವ ಪ್ರತಿ ಕಾರ್ಯವೂ ಧರ್ಮವೇ. ಬೃಹತ್ತಾದ

ಧ್ಯೇಯ ಸಾಧನೆಗೆ ಕಂಕಣ ಬದ್ಧನಾದ ವ್ಯಕ್ತಿಗೆ ಬೇರೆ ಸಣ್ಣ ಪಟ್ಟ ಬಾಧ್ಯತೆಗಳು ಗೌಣವೂ, ನಗಣ್ಯವು ಆಗಿಬಿಡುತ್ತವೆ.

ಕೌರವರ ಪಕ್ಷದ ಎಲ್ಲಾ ಸೇನಾ ಪ್ರಮುಖರೂ ಮೃತಿಹೊಂದಲು ಕಾರಣವಾದ ಘಟನಾ ಸರಣಿಯ ಪರಿಚಯ ನಮಗೆಲ್ಲರಿಗೂ ಇದೆ. ಭೀಷ್ಮನಿಗೆ ಮಾರಣಾಂತಿಕವಾದ ಪ್ರಹಾರ ಅರ್ಜುನನಿಂದಲೇ ಬಂದಿತು, ಅದು ಶಿಖಂಡಿಯಿಂದ ಬರಬೇಕಾಗಿತ್ತು. ಅದೂ ಭೀಷ್ಮ ಬಾಣ ಬಿಡುವುದನ್ನು ನಿಲ್ಲಿಸಿದ ಮೇಲೆ! ದ್ರೋಣಾಚಾರ್ಯರನ್ನು ಅವರ ಪುತ್ರ ಅಶ್ವತ್ಥಾಮ ಮರಣದ ತಪ್ಪು ಘೋಷಣೆಯನ್ನು ಅಶ್ವತ್ಥಾಮನೆಂಬ ಆನೆಯನ್ನು ಕೊಂದಾಗ, ಧರ್ಮರಾಜ ಯುಧಿಷ್ಠಿರನನ್ನೂ ಸೇರಿಸಿ ಅಶ್ವತ್ಥಾಮ ಹತಃ ಎಂದು ಮಾಡಿಸಿ ವಿಚಲಿತರನ್ನಾಗಿಸಲಾಯಿತು. ಭೇರಿ ನಗಾರಿಗಳ ಸದ್ದಿನ ಏರು ಭರಾಟೆಯಲ್ಲಿ ವಾಕ್ಯದ ಉತ್ತರಾರ್ಧವನ್ನು–ನರೋವಾ, ಕುಂಜರೋವಾ ಎಂಬುದನ್ನು ಕೇಳಿಸದಂತೆ ಅಡಗಿಸಲಾಯಿತು. ಜಯದ್ರಥನನ್ನು ಆತ ಆತ್ಮತ್ಯಾಗಕ್ಕೆ ಸಿದ್ಧನಾಗಿದ್ದರೂ ಕೃತಕವಾಗಿ ಸಂಧ್ಯಾಕಾಲದ ಛಾಯೆ ಗೋಚರಿಸುವಂತೆ ಮಾಡಿ ಅರ್ಜುನ ತನ್ನ ಪ್ರಹಾರ ಮಾಡಿದನು. ಕರ್ಣ ಕೆಸರಿನಲ್ಲಿ ಹೂತು ಹೋಗಿದ್ದ ತನ್ನ ರಥದ ಗಾಲಿಯನ್ನು ಹೊರ ತೆಗೆಯುತ್ತಿದ್ದಾಗ ಕೊಲ್ಲಲಾಯಿತು. ಮಲ್ಲ (ದ್ವಂದ್ವ) ಯುದ್ಧದಲ್ಲಿ ನಿಯಮ ಬಾಹಿರವಾಗಿ ಭೀಮ ದುರ್ಯೋಧನನ ತೊಡೆಗೆ–ಸೊಂಟ ಪಟ್ಟಿಯಿಂದ ಕೆಳಗೆ ಹೊಡೆದು ಸಾಯಿಸಲಾಯಿತು. ಸ್ಥೂಲ ನೋಟದಿಂದ ನೋಡಿದರೆ (ಮೇಲ್ನೋಟಕ್ಕೆ) ಇವೆಲ್ಲವೂ ಅಧರ್ಮ ಕಾರ್ಯಗಳು, ಅನ್ಯಾಯ. ಆದರೆ ಪ್ರತಿಯೊಬ್ಬರೂ ಇದನ್ನೂ ನ್ಯಾಯ ಸಮ್ಮತ, ಕಲಬೆರಕೆ ಇಲ್ಲದ ಪರಿಶುದ್ಧ ಧರ್ಮವೆಂದೇ ಒಪ್ಪಿಕೊಂಡಿದ್ದಾರೆ. ಅಂಥ ಸ್ಪಷ್ಟಗೋಚರ ಖಚಿತ ಕಾರ್ಯಗಳಿಂದಲೇ ಧರ್ಮರಾಜ್ಯವು ಸ್ಥಾಪಿಸಲ್ಪಟ್ಟಿತು, ಅದನ್ನೇ ಎಲ್ಲಾ ದ್ರಷ್ಟಾರರೂ, ಋಷಿ ಮುನಿಗಳೂ ಕನಸು ಕಂಡಿದ್ದರು. ಬಹಳ ಪೂರ್ವದಲ್ಲೇ ಮಹರ್ಷಿ ವೇದವ್ಯಾಸರೇ ಹೀಗೆ ಹಲುಬಿದ್ದರು/ವ್ಯಥೆಯಿಂದ ಪರಿತಪಿಸಿದ್ದರು:

> ಊರ್ಧ್ವ ಬಾಹುರ್ ವಿರೌಮ್ಯೇಷು ನಚ ಕಶಿತ ಶೃಗೋತಿ ಮೇ
> ಧರ್ಮಾದರ್ಥಶ್ಚ ಕಾಮಶ್ಚ ಸಾ ಧರ್ಮ ಕಿಂ ನ ಸೇವ್ಯತೇ.

(ಮಹಾಭಾರತ)

(ನಾನು ನನ್ನ ತೋಳುಗಳನ್ನು ಎತ್ತರಕ್ಕೆ ಏರಿಸಿ, ದನಿ ಏರಿಸಿ ಹೇಳುತ್ತಿದ್ದೇನಾದರೂ ಯಾರೂ ನನ್ನ ಮಾತುಗಳನ್ನೂ ಕೇಳಿಸಿಕೊಳ್ಳುತ್ತಿಲ್ಲ ಅರ್ಥ ಮತ್ತು ಕಾಮಗಳು ಧರ್ಮದಿಂದ ಮಾತ್ರವೇ ಸೇವಿಸಲ್ಪಡುತ್ತವೆ ಏಕೆ ನೀವು ಆ ಧರ್ಮವನ್ನು ಗಳಿಸಿಕೊಳ್ಳುತ್ತಿಲ್ಲ?)

ಧರ್ಮರಾಜ್ಯವು ಭಗವಾನ್ ಶ್ರೀ ಕೃಷ್ಣನ ನೀತಿ, ಚಾಣಾಕ್ಷಗಳಿಂದ ಸ್ಥಾಪಿಲ್ಪಟ್ಟಿತು. ನಾವು ಅವನನ್ನು ಅಧರ್ಮಿ ಅಥವಾ ಅಸತ್ಯವಾದಿ ಎಂದು ಕರೆಯುವುದು ಹೇಗೆ

ಸಾಧ್ಯವಾದೀತು?

ಭಾರತೀಯ ಆದರ್ಶವಾಗಿರುವ ಏಕಪತ್ನೀವ್ರತದ ಹೊರತಾಗಿಯೂ ಭಗವಾನ್ ಕೃಷ್ಣ ಹದಿನಾರು ಸಾವಿರ ನಾರಿಯರನ್ನು ವಿವಾಹ ಮಾಡಿಕೊಂಡನೆಂದು ಹೇಳಲಾಗುತ್ತದೆ ಯೋಗೇಶ್ವರನಾದ ಆ ಕೃಷ್ಣ ಹೀಗೇಕೆ ಮಾಡಿದ? ಅವನೊಬ್ಬ ವಿಕೃತ ವ್ಯಕ್ತಿ ಆಗಿದ್ದಿರಬಹುದೇ? ಈ ನಾರೀಸಮೂಹವಾದರೂ ನರಕಾಸುರನ ಸೆರೆಮನೆಗಳಲ್ಲಿ ಬಂಧಿತರಾಗಿದ್ದವರು. ಯುದ್ಧರಲ್ಲಿ ಗೆದ್ದಾಗ ಸಿಕ್ಕಿದ ಇವರುಗಳನ್ನು ಕೃಷ್ಣ ಬಂಧಮುಕ್ತಗೊಳಿಸಿದನು. ಆ ನಂತರ ಸಾಧ್ಯವಿರಬಹುದಾದ ಎಲ್ಲಾ ದುಷ್ಪರಿಣಾಮಗಳಿಂದಲೂ ಸಮಾಜವನ್ನು ಕಾಪಾಡುವ ಸಲುವಾಗಿ ಆತ ಆ ಎಲ್ಲರಿಗೂ ತನ್ನ ಅಭಯ ಹಸ್ತ ಚಾಚಿದನು.

ಸಮಾಜಕ್ಕಾಗಿ ಪ್ರತಿಯೊಂದನ್ನೂ ಮಾಡಿದನು. ತನ್ನ ಯಾದವ ಕುಲ ಬಾಂಧವರು ಅತಿಯಾಗಿ ಸುರಾಪಾನಿಗಳಾಗಿ ಸಮಾಜ ಕಂಟಕರಾಗಿ ಪರಿಣಮಿಸಿದಾಗ ಕೃಷ್ಣ ತಾನಾಗಿಯೇ ಅವರವರಲ್ಲೇ ಅಂತಃಕಲಹ, ದಾಯಾದಿ ವ್ಯಾಜ್ಯಗಳನ್ನು ಪ್ರಚೋದಿಸಿ ಅವರುಗಳು ಪೂರ್ಣ ಪ್ರಮಾಣದಲ್ಲಿ ನಿರ್ಧನರಾಗುವಂತೆ ಮಾಡಿದನು. ತನ್ನ ಕುಲಬಾಂಧವರ ಸರ್ವನಾಶಕ್ಕೂ ಆಸ್ಪದ ಮಾಡಿಕೊಟ್ಟನು. ಎಲ್ಲವನ್ನೂ ರಾಷ್ಟ್ರಕ್ಕೋಸ್ಕರವೇ ಮಾಡಿದನು. ಇದೇ ಕೃಷ್ಣನ ವ್ಯಕ್ತಿತ್ವದ ಮಹತ್ವದ ಅಂಶ. ಅವನ ಗುಣಸ್ವರೂಪದ ಈ ಸಾರಾಂಶವನ್ನು ನಾವು ಗ್ರಹಿಸಿದ್ದೇ ಆದರೆ ಅವನ ಜೀವನ ಧ್ಯೇಯ ಮತ್ತು ಉಳಿದೆಲ್ಲ ಅವತಾರಗಳ ಪರಮೋದ್ದೇಶವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇಂದು ನಾವು ಅಂಥ ಸಾಧಕರ ಸಿದ್ಧಿ (ಸಾಧನೆ)ಗಳತ್ತ ಮಾತ್ರವೇ ನೋಡುತ್ತಿದ್ದೇವೆ, ಅವರ ಸಾಧನ (ಪ್ರಯತ್ನ)ಗಳನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಸಿದ್ಧಿಯನ್ನು ಆರಾಧಿಸುವುದರಲ್ಲಿ ಪವಾಡಗಳ ಕೀಲಿಕೈ ಇರುವುದಿಲ್ಲ. ಅದ್ಭುತಗಳ ಯಶಸ್ಸಿಗೆ ರಾಜಮಾರ್ಗ ಸಾಧನೆ ಮಾಡುವುದೇ ಆಗಿದೆ. ಕೃಷ್ಣ ತನ್ನ ಸಮಕಾಲೀನ ಸಮಾಜದ ಆದರ್ಶ ಪುರುಷರೆಲ್ಲರ ಸಹಕಾರಕ್ಕೆ ಒತ್ತು ನೀಡಿ ಹೀಗೆ ಕರೆ ನಿಡಿದ್ದನು:

ಮನ್ಮನಾ ಭಾವ ಮದ್ಭಕ್ತೋ ಮದ್ಯಜಿ ಮಾಮ್ ನಮಸ್ಕುರು
ಮಮ್ ವೈಶ್ಯಸಿ ಸತ್ಯಂ ತೇ ಪ್ರತಿಮಾನೇ ಪ್ರಿಯೋಸ್ತು ಮೇ

(ಗೀತಾ ೯:೩೪)

(ಓ ನನ್ನ ಭಕ್ತರೇ, ಚಿಂತಕರೇ, ನನಗಾಗಿ ಯಜ್ಞ ಮಾಡಿರಿ, ನನಗೆ ಸ್ವಾಮಿನಿಷ್ಠೆ ಸಲ್ಲಿಸಿರಿ. ನಾನು ಸತ್ಯವಾಗಿಯೂ ವಚನ ನೀಡುತ್ತೇನೆ. ಈ ರೀತಿಯಿಂದ ನೀವು ನನ್ನನ್ನು ಹೊಂದುವಿರಿ.)

---

(ಮೂಲ–ಮಂಥನ–ಜನವರಿ–೧೯೮೭)

ನಮ್ಮ ಎಲ್ಲಾ ಸಾಮರ್ಥ್ಯಗಳನ್ನು ಸಂಪೂರ್ಣ ಶರಣಾಗತಿ, ರಾಷ್ಟ್ರಸೇವೆಗಾಗಿ ಮುಡಿಪಾಗಿಟ್ಟು ದುಡಿಯುವುದೇ ನಿಜವಾದ ಕೃಷ್ಣ ಪೂಜೆ

**ತತ್ತ್ವಗಳು ಮತ್ತು ನೀತಿ ಸಂಹಿತೆಗಳು**

[ಪಂಡಿತ್ ದೀನದಯಾಳ್ ಉಪಾಧ್ಯಾಯರಿಂದ ತಯಾರಿಸಲ್ಪಟ್ಟು, ಭಾರತೀಯ ಜನ ಸಂಘದ ಅಖಿಲ ಭಾರತ ಪ್ರತಿನಿಧಿ ಸಭಾದವರು ವಿಜಯವಾಡದಲ್ಲಿ ೧೯೬೫ರ ಜನವರಿ ೨೩ ರಿಂದ ೨೫ರವರೆಗೆ ನಡೆದ ಸಮಾವೇಶದಲ್ಲಿ ಅಂಗೀಕರಿಸಿದ ದಸ್ತಾವೇಜಿನಿಂದ ಆಯ್ದ ಭಾಗಗಳು.]

[ಕೃಪೆ ಮಂಥನ–ಜುಲೈ ೧೯೯೧]

ಪ್ರಜಾಪ್ರಭುತ್ವ, ಸಮಾನತೆ, ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ವಿಶ್ವಶಾಂತಿ ಇವೆಲ್ಲವೂ ಪರಸ್ಪರ ಸಂಬಂಧ ಹೊಂದಿರುವ ಪರಿಕಲ್ಪನೆಗಳು. ಆದರೆ ಪಾಶ್ಚಾತ್ಯರಲ್ಲಿ ಇವು ಆಗಿಂದಾಗ್ಯೆ ಒಂದಕ್ಕೊಂದು ಸಂಘರ್ಷಕ್ಕೆ ಒಳಗಾದ ಸಂಗತಿಗಳು. ಸಮಾಜವಾದ ಮತ್ತು ಒಂದು ವಿಶ್ವ ಸರ್ಕಾರದ ಸುಳಿವು, ಕಲ್ಪನೆಗಳು ಈ ಸಂಘರ್ಷಕ್ಕೆ ಪರಿಹಾರ ಹುಡುಕುವ ಪ್ರಯತ್ನಗಳ ಹಾದಿಯಲ್ಲಿ ಅಂಕುರಿಸಿದ ವಿಚಾರಗಳು ಅದಾಗ್ಯೂ, ಅವರು ಹಾಗೆ ಮಾಡುವಲ್ಲಿ ವಿಫಲರಾದರು ಮಾತ್ರವೇ ಅಲ್ಲದೆ ಈ ಪರಿಕಲ್ಪನೆಗಳನ್ನೂ ದುರ್ಬಲಗೊಳಿಸಿದರು ಮತ್ತು ಹೊಸ ಸಮಸ್ಯೆಗಳನ್ನು ಸೃಷ್ಟಿಸಿದರು. ಭಾರತೀಯ ಸಂಸ್ಕೃತಿಯ, ಈ ಕಲ್ಪನೆಗಳನ್ನು ಸುಸಂಗತ ಗೊಳಿಸಬಲ್ಲ, ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸಬಲ್ಲ ಒಂದು ತಾತ್ವಿಕ ನೆಲಗಟ್ಟನ್ನು ಒದಗಿಸುತ್ತದೆ. ಅಂಥ ಒಂದು ಆಧಾರವಿಲ್ಲವಾದಾಗಲ್ಲೆಲ್ಲ ಮನುಕುಲದ ಚಿಂತನೆ ಮತ್ತು ಅಭಿವೃದ್ಧಿಗಳು ಸ್ಥಗಿತಗೊಂಡಿವೆ. ಭಾರತೀಯ ಸಂಸ್ಕೃತಿಯು ಶ್ರುತಪಡಿಸಿದ ಮೂಲಭೂತ ತಥ್ಯಗಳು ದೇಶ, ಕಾಲಾತೀತವಾದ ಸಮಂಜಸತೆ (ಸಾಮಂಜಸ್ಯ)ಯನ್ನು ಹೊಂದಿವೆ ಆದ್ದರಿಂದ, ಈ ತಥ್ಯಗಳ ಜ್ಞಾನವು ನಮ್ಮ ಮುನ್ನಡೆಗೆ ಮಾತ್ರವೇ ಅಲ್ಲದೆ ಜಗತ್ತಿನ ಪ್ರಗತಿಪಥದ ದಿಕ್ಕನ್ನೂ ತೋರಿಸಬಲ್ಲುದು.

ಭಾರತೀಯ ಸಂಸ್ಕೃತಿಯ ದೃಷ್ಟಿಕೋನವೇ ಸಮಗ್ರ ಸ್ವರೂಪದ್ದು. ಜೀವನದ ಹತ್ತು ಹಲವು ಸಂಗತಿಗಳ ನಡುವೆ ಕಂಡುಬರುವ ಮೇಲ್ಮೈ ವ್ಯತ್ಯಾಸಗಳನ್ನೂ ಒಪ್ಪಿಕೊಳ್ಳುತ್ತದೆಯಾದರೂ ಅದೇ ಕಾಲಕ್ಕೆ ಆ ಅಂತರಗಳ ಅಡಿಯಲ್ಲಿರುವ ಐಕ್ಯತೆಯನ್ನು ಗುರುತಿಸಲು ಹವಣಿಸುತ್ತದೆ ಮತ್ತು ಇಡೀ ದೃಶ್ಯದ ಸಮಗ್ರ ದೃಷ್ಟಿ ಕೋನವನ್ನು ಅಂದಾಜು ಮಾಡುತ್ತದೆ. ಭಾರತೀಯ ಸಂಸ್ಕೃತಿಯು ಸಂಗತಿಗಳ ನಡುವೆ ಪರಸ್ಪರ ಅಂತರ ಅವಲಂಬನೆ, ಸಹಕಾರ, ಸಮಾನ ಕಾಳಜಿಗಳನ್ನು ಗುರುತಿಸುತ್ತದೆಯೇ ವಿನಾ ಘರ್ಷಣೆ, ವಿರೋಧ, ತಿರಸ್ಕಾರಗಳನ್ನಲ್ಲ. ಅದರ ದೃಷ್ಟಿಕೋನವೇ ಸರ್ವಾಂಗೀಣವಾದದ್ದು, ಆಂಶಿಕ ಸ್ವರೂಪದ್ದಲ್ಲ. ಅದು ಸರ್ವ ಹಿತವನ್ನೇ ಬಯಸುತ್ತದೆ. ಸಮಸ್ತರ ಕಲ್ಯಾಣಕ್ಕಾಗಿಯೇ ದುಡಿಯುತ್ತದೆ. ಸಮಗ್ರತೆಯೇ ಅದರ ಸರ್ವಪ್ರಮುಖ

ಧ್ಯೇಯೋದ್ದೇಶವಾಗಿದೆ.

**ವ್ಯಕ್ತಿ ಮತ್ತು ಸಮಾಜ :** ಪಾಶ್ಚಾತ್ಯ ಜಗತ್ತಿನ ಹಲವಾರು ತಾತ್ವಿಕ ಸಿದ್ಧಾಂತಗಳು, ವ್ಯಕ್ತಿ ಮತ್ತು ಸಮಾಜದ ನಡುವೆ ಒಂದು ಆಂತರಿಕ ಸಂಘರ್ಷ ಇದ್ದೇ ತೀರುತ್ತದೆಂಬುದನ್ನು ನಂಬುತ್ತದೆ ಮತ್ತು ಆ ಅನಿಸಿಕೆಯನ್ನಾಧರಿಸಿಯೇ ರೂಪು ತಳೆದಿವೆ. ಈ ಆದರ್ಶ ಸಿದ್ಧಾಂತಗಳು ಒಂದಿಲ್ಲೊಂದರಿಂದ ಕಾರಣವನ್ನು ತೆಗೆದುಕೊಳ್ಳುತ್ತವೆ. ಆದರೆ ವಾಸ್ತವ ಸಂಗತಿ ಎಂದರೆ ಎರಡು ಅಸ್ತಿತ್ವಗಳ ನಡುವೆ ಯಾವುದೇ ಆಂತರಿಕ ಸಂಘರ್ಷ ಇರುವುದಿಲ್ಲ. ದೃಗ್ಗೋಚರವಾದ ಅಸ್ತಿತ್ವ ವ್ಯಕ್ತಿಯೂ ಕೂಡಾ ದೃಗ್ಗೋಚರವಲ್ಲದ ಸಮಾಜ/ಸಮಷ್ಟಿಯ ಒಂದು ಪ್ರತಿನಿಧಿಯೇ ಆಗಿರುತ್ತಾನೆ. ವ್ಯಕ್ತಿಯ ಮೂಲಕವೇ ಸಮಾಜ ತನ್ನನ್ನೂ ಪ್ರಕಟಿಸಿಕೊಳ್ಳುತ್ತದೆ. ವಾಸ್ತವವಾಗಿ ವ್ಯಕ್ತಿಯು ಸಮಾಜದ/ಸಮಷ್ಟಿಯ ಒಂದು ಪ್ರಮುಖ ಸಾಧನ ಮಾಧ್ಯಮವಾಗಿದ್ದು ಅದರ ಪೂರ್ಣತೆಗೆ ಅಗತ್ಯ ಮೊತ್ತವೂ ಆಗಿರುತ್ತಾನೆ. ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣ ಅಥವಾ ವಿಘಟನೆಯು ಸಮಾಜವನ್ನು ಆಗಿಸುತ್ತದೆ. ಒಂದು ಹೂವು ತನ್ನ ದಳಗಳಿಂದಾಗಿ ಹೂವು ಆಗಿದೆ ಮತ್ತು ದಳಗಳ ಮೌಲಿಕತೆಯು ಅವು ಹೂವಿನೊಂದಿಗೇ ಉಳಿದುಕೊಳ್ಳುವುದರಲ್ಲಿ ಮತ್ತು ಹೂವಿನ ಸೌಂದರ್ಯವನ್ನು ಹೆಚ್ಚಿಸುವುದರಲ್ಲಿ ಅಡಕವಾಗಿರುತ್ತದೆ. ವ್ಯಷ್ಟಿಯ ಬೆಳವಣಿಗೆ ಮತ್ತು ಸಾಮಾಜಿಕ ಕ್ಷೇಮಾಭಿವೃದ್ಧಿಗಳು ಪರಸ್ಪರ ವಿರೋಧಿಯಾದ ಹಿತಾಸಕ್ತಿಗಳೇನಾಗಿಲ್ಲ.

### ವ್ಯಕ್ತಿಯ ಸರ್ವಾಂಗೀಣ ಪ್ರಗತಿ

ಒಬ್ಬ ವ್ಯಕ್ತಿಯು ಶರೀರ, ಮನಸ್ಸು, ಬುದ್ಧಿ ಮತ್ತೆ ಮತ್ತು ಆತ್ಮ–ಇವೆಲ್ಲದರ ಮೊತ್ತವೇ ಸರಿ. ವ್ಯಕ್ತಿಯ ಸರ್ವಾಂಗೀಣ ಪ್ರಗತಿಯನ್ನು ಅಪೇಕ್ಷಿಸುವ ಯಾರೇ ಆದರೂ ಅವನ ಈ ಎಲ್ಲಾ ಗುಣಲಕ್ಷಣ, ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲೇಬೇಕಾಗುತ್ತದೆ. ಈ ಎಲ್ಲಾ ನಿರೀಕ್ಷಿತ ಅಂಶಗಳೂ ಪೂರೈಸಲ್ಪಡುವುದು ಅಗತ್ಯ. ಆಗ ಮಾತ್ರವೇ ಒಬ್ಬ ವ್ಯಕ್ತಿಯು ನಿಜವಾದ ಸಂತೋಷದ ಅನುಭವವನ್ನು ಪಡೆದುಕೊಳ್ಳುತ್ತಾನೆ. ಭೌತಿಕ ಮತ್ತು ಆಧ್ಯಾತ್ಮಿಕ ಪ್ರಗತಿಗಳೆರಡನ್ನೂ ಧ್ಯೇಯವಾಗಿಸಿಕೊಳ್ಳಬೇಕು. ಈ ನಾಲ್ಕು ಪದರಗಳ ವಾಂಛಿತಾರ್ಥಗಳನ್ನೂ ಪೂರೈಸಿಕೊಳ್ಳಲು ಐಹಿಕ ಸಾಧನಗಳು, ಶಾಂತಿ, ಜ್ಞಾನ ಪ್ರಭೋದ ಹಾಗೂ ತಾದಾತ್ಮ್ಯಗಳು ದಾರಿಗಳಾಗಿವೆ. ಈ ಧ್ಯೇಯದ ಸಾಮನ್ವಯಿಕ ಸ್ವರೂಪವು ಸಾಮಾಜಿಕ ಒಳಿತಿಗಾಗಿ ವ್ಯಕ್ತಿ ತನ್ನನ್ನು ತೊಡಗಿಸಿಕೊಳ್ಳಲು ಸ್ಫೂರ್ತಿ ನೀಡುತ್ತದೆ.

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ಸಾಧನೆಯು ವ್ಯಷ್ಟಿ, ಸಮಷ್ಟಿಗಳ ಉಭಯ ವರ್ಗಗಳ ಉನ್ನತಿಯ (ಪರವಾದ) ಜಂಟಿ ಧ್ಯೇಯ ಸಾಧನೆಗೆ ಮಾಧ್ಯಮವಾಗಿದೆ ಎಂದು ಪರಿಗಣಿಸಲ್ಪಟ್ಟಿದೆ. ಧರ್ಮ,

ಅರ್ಥ ಮತ್ತು ಕಾಮಗಳ ಒಂದಕ್ಕೊಂದು ಪರಿಪೂರಕವೂ ಪೋಷಕವೂ ಆಗಿವೆ. ಅವುಗಳಲ್ಲಿ ಯಾವುದಾದರೊಂದನ್ನು ಮಾನವ ಚಟುವಟಿಕೆಗಳ ಪೂರ್ಣ ಪ್ರಮಾಣದ ಸ್ಫೂರ್ತಿ ಮಾತೃಕೆ ಎಂದು ಒಪ್ಪಿಕೊಳ್ಳಲು ಮತ್ತು ಚಟುವಟಿಕೆಗಳನ್ನು ಆ ಮಾನದಂಡದಿಂದ ಮಾತ್ರವೇ ಮೌಲ್ಯಮಾಪನ ಮಾಡುವುದು ಎಂದರೆ ವಸ್ತುಗಳನ್ನು ದೃಷ್ಟಿಯಿಂದ ನೋಡಿದಂತಾಗುತ್ತದೆ. ಆದಾಗ್ಯೂ ಧರ್ಮವು ಅರ್ಥ ಮತ್ತು ಕಾಮಗಳನ್ನು ಪೂರೈಸಿಕೊಳ್ಳಲು ಸಾಧನವಾಗಿರುವುದರಿಂದ ಅದಕ್ಕೇ ಅಗ್ರ ಮಾನ್ಯತೆ ಇದೆ.

## ಧರ್ಮದ ಸ್ವರೂಪ

ಧರ್ಮವನ್ನು ಮತ ಅಥವಾ ಪಂಥದೊಂದಿಗೆ ಸಮೀಕರಿಸುವುದರಿಂದಾಗಿ ವಿಪರೀತ ಗೊಂದಲಕ್ಕೆ ಕಾರಣವಾಗಿದೆ. ಧರ್ಮದ ನಿಜವಾದ ಅರ್ಥವೆಂದರೆ ಶಾಶ್ವತವಾದ ತತ್ವಗಳು–ಅವು ವ್ಯಷ್ಟಿ, ವ್ಯಕ್ತಿ, ಸಮಷ್ಟಿಗಳನ್ನೆಲ್ಲ ಪೊರೆಯುತ್ತವೆ ಹಾಗೂ ಅವುಗಳಿಗೆ ಬದ್ಧವಾಗಿರುವ ಮೂಲಕ ಆಯಾ ವರ್ಗ–ವ್ಯಷ್ಟಿ, ಸಮಷ್ಟಿ ಯಾವುದೇ ಇರಲಿ ಅದು ಇಹಲೋಕದಲ್ಲಿ ಐಹಿಕ ಸಂಪತ್ತನ್ನೂ, ಪರದಲ್ಲಿ ಆಧ್ಯಾತ್ಮಿಕ ಮೋಕ್ಷವನ್ನೂ ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಧರ್ಮದ ಮೂಲಭೂತ ಗುಣಧರ್ಮಗಳು ಶಾಶ್ವತವೂ, ನಾಶ ರಹಿತವೂ ಆಗಿವೆ. ಈ ತತ್ವಗಳ ದೀರ್ಘವೂ, ವಿಸ್ತಾರವೂ ಆದ ಅರ್ಥೈಸುವಿಕೆಯಲ್ಲಿ ಧರ್ಮದ ಅರ್ಥವ್ಯಾಪ್ತಿಯು ಕಾಲದೇಶಗಳಿಗೆ ಅನುಗುಣವಾಗಿ ಬದಲಾಗುತ್ತದೆ. ಈ ಬದಲಾಗುತ್ತಿರುವ ಜಗತ್ತಿನಲ್ಲಿ ಧರ್ಮ ಒಂದೇ ಸಮಾಜಕ್ಕೆ ಸ್ಥಿರತೆಯನ್ನು ತಂದುಕೊಡುವ ಅಂಶವಾಗಿದೆ. ಭಾರತೀಯ ರಾಜ್ಯಶಾಸ್ತ್ರದಲ್ಲಿ ಧರ್ಮಕ್ಕೆ ಮಾತ್ರವೇ ಪರಮೋಚ್ಚ ಸಾರ್ವಭೌಮತ್ವವನ್ನು ನೀಡಲಾಗಿದೆ.

ಸಮಾಜವೆಂದರೆ ವ್ಯಕ್ತಿಗಳ ಜನಸಂದಣಿ ಮಾತ್ರವಲ್ಲ. ಅದು ತನ್ನಲ್ಲಿ ತಾನು ಸ್ವತಂತ್ರ ಜೀವಿಯಾಗಿದೆ. ಒಂದು ಸಮಾಜವು ತನ್ನ ನೆಲಕ್ಕೆ ಭಾವನಾತ್ಮಕ ಭಕ್ತಿ ಶ್ರದ್ಧೆ ಹೊಂದಿದ್ದು ತನ್ನದೇ ಆದ ಬುದ್ಧಿಮತ್ತೆ, ಬೌದ್ಧಿಕ ಪಾರಮ್ಯಗುಣ ಹೊಂದಿರುತ್ತದೆ; ಆಗ ಅದು ಒಂದು ರಾಷ್ಟ್ರವನ್ನು ಸಂರಚಿಸುತ್ತದೆ. ಅಂತಃ ಶಕ್ತಿಯಾಗಿರುವ ಪ್ರತಿಭಾ ಸಂಪತ್ತು ಅಂತರ್ಗತವೂ, ಅಂತರ್ಜನ್ಯವೂ ಆಗಿರುತ್ತದೆ. ಆದರೆ ಭೌಗೋಳಿಕ ಮತ್ತು ಐತಿಹಾಸಿಕ ಸಂಗತಿಗಳಿಂದ ಮಾಡಿದ ಉತ್ಪನ್ನವಾಗಿರುವುದಿಲ್ಲ. ರಾಷ್ಟ್ರಗಳ ಉಗಮ, ಅವನತಿಗಳು ಅವುಗಳ ಪ್ರತಿಭೆಗೆ ಹೊಂದಿಕೊಂಡಂತೆ ಅವುಗಳ ಗುಣ, ಕಾರ್ಯ, ನಿರ್ವಹಣೆಗಳ ಗುಣಮಟ್ಟವನ್ನು ಅವಲಂಬಿಸಿರುತ್ತವೆ. ಇಷ್ಟೆಲ್ಲಾ ಅವುಗಳ ವಿಭಿನ್ನ ಗುಣಲಕ್ಷಣಗಳ ನಡುವೆಯೂ, ಬೇರೆ ಬೇರೆ ದೇಶಗಳ ಒಂದು ವಿಶ್ವ ಒಕ್ಕೂಟ–ಸಮಾಜ ನಿರ್ಮಾಣದಲ್ಲಿ ಪರಿಪೂರಕ ಪಾತ್ರವನ್ನು ನಿರ್ವಹಿಸಬಲ್ಲುವು. ಒಂದು ವೇಳೆ ಯಾವುದಾದರೂ ಒಂದು ರಾಷ್ಟ್ರವು ಹಾಗೆ ಮಾಡದಿದ್ದಲ್ಲಿ, ಒಕ್ಕೂಟದ ಐಕ್ಯತೆಯನ್ನು ಅಸಮತೋಲನಗೊಳಿಸಿದಲ್ಲಿ ಅದನ್ನು ವಕ್ರಬುದ್ಧಿಯ, ದುಷ್ಟ

ಅಂಗವೆಂದು ಪರಿಗಣಿಸಬೇಕಾಗುತ್ತದೆ. ರಾಷ್ಟ್ರಗಳನ್ನು, ವಿಶ್ವೊಕ್ಕೂಟ ರಚನೆಗಾಗಿ ಅವಗಣಿಸಿದಲ್ಲಿ, ಸಮುದಾಯ ಸಂರಚನೆಗಾಗಿ ವ್ಯಕ್ತಿಯ ಸ್ವಂತಿಕೆಯನ್ನು ನಾಶ ಮಾಡಿದಂತೇ ಸರಿ.

**ಸಂಸ್ಥೆಗಳ ಮೂಲರಚನೆ: [ಸಂಸ್ಥೆಗಳ ಉಗಮ]**

ಈ ಚತುರ್ವಿಧ ಪುರುಷಾರ್ಥಗಳನ್ನು ವ್ಯಕ್ತಿಗಳು ಸಾಧಿಸಿ, ಪೂರೈಸಿಕೊಳ್ಳಲು ಮತ್ತು ಸ್ವಯಂ ಪ್ರಕಟ ರೂಪ ತಾಳಲು ಸಮಾಜವು ವಿವಾಹ, ಕುಟುಂಬ, ಆಸ್ತಿ, ಜಾತಿ, ವರ್ಗ, ಸಮುದಾಯ, ವಾಣಿಜ್ಯ ವೃಂದ, ಪಂಚಾಯ್ತಿ, ರಾಜ್ಯ ಇತ್ಯಾದಿ ಹಲವಾರು ಸಂಸ್ಥೆಗಳಿಗೆ ಜನ್ಮ ನೀಡುತ್ತದೆ. ರಾಜ್ಯವು ಮುಖ್ಯವೇನೋ ಹೌದು, ಆದರೆ ಆತ್ಯಂತಿಕವಲ್ಲ. ಕೃತಯುಗದಲ್ಲಿ ಎಲ್ಲಾ ಮನುಷ್ಯರೂ ತಮ್ಮ ಗುಣಕರ್ಮಗಳಲ್ಲಿ ಪರಸ್ಪರ ಧರ್ಮದ ಮಾರ್ಗದರ್ಶನದಿಂದ ವರ್ತಿಸುತ್ತಿದ್ದರೆಂದೂ ಆದ್ದರಿಂದ ಅಲ್ಲಿ 'ರಾಜ್ಯ'(ದ ಅಗತ್ಯ) ಇರಲಿಲ್ಲವೆಂದೂ ಹೇಳುತ್ತಾರೆ. ಅದೇ ನಮ್ಮ ಸಮಾಜದ ಅಪೇಕ್ಷಣೀಯ; ಆದರ್ಶ ರಾಜ್ಯದ ಪರಿಕಲ್ಪನೆ ರಾಜ್ಯರಹಿತ. ಆದರೆ ಪೂರ್ಣ ಪ್ರಮಾಣದಲ್ಲಿ ಧರ್ಮದಿಂದ ನಿಯಂತ್ರಿಲಸ್ಪಟ್ಟ ಸಮಾಜ–ರಾಜ್ಯ. ಇದು ಯಾವಾಗ ಪ್ರತಿಯೊಬ್ಬರೂ ಸ್ವಾರ್ಥ ರಹಿತರೂ, ಧರ್ಮನಿಷ್ಠರೂ ಆಗುತ್ತಾರೋ ಆಗ ಮಾತ್ರ ಸಾಧ್ಯವಾಗುತ್ತದೆ. ಆದರೆ ಸಾಮಾನ್ಯವಾಗಿ, ಪ್ರತಿವ್ಯಕ್ತಿಗೂ ತನ್ನಧರ್ಮವನ್ನು ಆಚರಿಸಲು ಎಲ್ಲ ಅವಕಾಶಗಳನ್ನೂ ಒದಗಿಸುವ ಭರವಸೆ ನೀಡುವಂಥ ವ್ಯವಸ್ಥೆಯನ್ನು ನಿರ್ವಹಿಸಲು ಅಗತ್ಯವಾದಂಥ ಘಟಕವಾಗಿ ರಾಜ್ಯವೆಂಬ ಸಂಸ್ಥೆ ಅಗತ್ಯವಾಗುತ್ತದೆ.

**ಧರ್ಮರಾಜ್ಯ–ನಮ್ಮ ಆದರ್ಶ**

ಭಾರತೀಯ ರಾಜ್ಯದ ಆದರ್ಶ ಕಲ್ಪನೆಯು ಧರ್ಮ ರಾಜ್ಯವಾಗಿದೆ. ಎಲ್ಲಾ ನಂಬುಗೆ, ಪಂಥಗಳ ಪ್ರತಿಯಾಗಿ ಗೌರವ ಮತ್ತು ಸಹಿಷ್ಣುತೆಗಳು ಭಾರತೀಯ ರಾಜ್ಯದ ಒಂದು ಪ್ರಮುಖ, ಅತ್ಯಗತ್ಯ ಲಕ್ಷಣವಾಗಿದೆ. ಆರಾಧನೆ, ಅರ್ಚನೆ, ಪ್ರಜ್ಞೆಗಳ ವಿಷಯಗಳಲ್ಲಿ ಸ್ವಾತಂತ್ರ್ಯವನ್ನೂ ಎಲ್ಲರಿಗೂ ಖಾತರಿಯಾಗಿ ಕೊಡಬೇಕಲ್ಲದೆ, ರಾಜ್ಯ ಅಥವಾ ಆಡಳಿತಾಂಗವು ಮತಗಳ ಆಧಾರದಿಂದ ಯಾರನ್ನೂ, ನೀತಿ ಸಂಹಿತೆಯ ರಚನೆಯಲ್ಲಾಗಲೀ ಅಥವಾ ಅದರ ಅನ್ವಯಿಕತೆಯಲ್ಲಾಗಲೀ ಭೇದ ಭಾವ ಮಾಡಿ ಪ್ರತ್ಯೇಕಿಸಿ ನೋಡಬಾರದು. ಅದು ವರ್ಗರಹಿತ ರಾಜ್ಯವೇ ವಿನಃ ದೇವಾಧಿಪತ್ಯದಂಥ ಧರ್ಮರಾಜ್ಯವಲ್ಲ.

ಧರ್ಮರಾಜ್ಯವು ಯಾವೊಬ್ಬ ವ್ಯಕ್ತಿ ಅಥವಾ ಸಂಘಟಿತ ಸಮುದಾಯವನ್ನು ಸಾರ್ವಭೌಮತ್ವ ಹೊಂದಿದವರೆಂದು ಮಾನ್ಯ ಮಾಡುವುದಿಲ್ಲ. ಪ್ರತಿಯೊಬ್ಬ ಪ್ರಜೆಯು ಕೆಲವೊಂದು ನಿರ್ದಿಷ್ಟ ಋಣ ಬಾಧ್ಯತೆಗಳಿಗೂ, ನಿವಾಹಾವಳಿಗಳಿಗೂ

ಒಳಗಾಗಬೇಕಿರುತ್ತದೆ. ಶಾಸಕಾಂಗದ ನಿರ್ವಹಣಾಧಿಕಾರಿ ಹಾಗೂ ಪ್ರಜೆಗಳ ಹಕ್ಕುಗಳನ್ನು ಧರ್ಮವೇ ನಿರೂಪಿಸಿ, ನಿಗದಿಸುತ್ತದೆ. ವ್ಯಭಿಚಾರ ಸ್ವರೂಪದ ವರ್ತನೆಗೆ ಅನುಮತಿ ಇರುವುದಿಲ್ಲ. ಧರ್ಮರಾಜ್ಯದ ಅತೀ ನಿಕಟವಾದ ಆಂಗ್ಲ ಸಮಾನಾರ್ಥಕ ಪದವೆಂದರೆ ನ್ಯಾಯ ಬದ್ಧ ಆಳ್ವಿಕೆ. ಧರ್ಮರಾಜ್ಯವು ಒಂದುಕಡೆಯಲ್ಲಿ ಮಧ್ಯವರ್ತಿ ಪ್ರಾಬಲ್ಯ ಮತ್ತು ಮೊತ್ತ ಪ್ರಾಬಲ್ಯಗಳ ಮೇಲೆ ಕಡಿತ/ನಿಯಂತ್ರಣದ ಖಾತರಿ ನೀಡುತ್ತದೆಯಾದರೆ, ಇನ್ನೊಂದೆಡೆಯಲ್ಲಿ ಪ್ರಜಾ ಪ್ರಭುತ್ವವು ಗುಂಪುಗುಳಿಯ ಅರಾಜಕತೆಯತ್ತ ಅಧೋಗತಿಗೆ ಇಳಿಯುವುದನ್ನು ತಡೆಗಟ್ಟುತ್ತದೆ. ಬೇರೆ ಬೇರೆ ದೇಶಗಳ ರಾಜ್ಯ ಪರಿಕಲ್ಪನೆಗಳು ಹಕ್ಕು ಕೇಂದ್ರಿತವಾಗಿದ್ದರೆ, ಭಾರತೀಯ ಕಲ್ಪನೆಯ ಧರ್ಮರಾಜ್ಯವು ಕರ್ತವ್ಯ–ಬಾಧ್ಯತೆಗಳತ್ತ ದೃಷ್ಟಿಯನ್ನು ಕೇಂದ್ರೀಕರಿಸಿದೆ. ಸ್ವಾಭಾವಿಕವಾಗಿಯೇ, ಇಲ್ಲಿ ಹಕ್ಕುಗಳನ್ನು ಅವಗಣಿಸಿ ತಿರಸ್ಕರಿಸುವುದಕ್ಕಾಗಲೀ, ಮಿತಿಇಲ್ಲದಂತೆ ಹಕ್ಕುಗಳಿಗೆ ಹಂಬಲಿಸುವುದಕ್ಕಾಗಲೀ ಯವುದಕ್ಕೂ ಆಸ್ಪದವಿಲ್ಲ. ಕರ್ತವ್ಯಲೋಪದ ಅಧಿಕಾರದ, ಹಕ್ಕುಗಳ ಸಂಘರ್ಷ ಇಂಥ ಯಾವುದೇ ಆಪತ್ತುಗಳೂ ಇರುವುದಿಲ್ಲ.

**ಹಕ್ಕು ಬಾಧ್ಯತೆಗಳು**

ಧರ್ಮರಾಜ್ಯವೊಂದರಲ್ಲಿ ಜನರ ಹಕ್ಕುಗಳು ಉಲ್ಲಂಘನಾರ್ಹವಲ್ಲ. ಈ ಹಕ್ಕುಗಳನ್ನು ಕಾಪಡಿಕೊಳ್ಳುವುದೇ ಜನರ ಕರ್ತವ್ಯವಾಗಿದೆ. ಏಕೆಂದರೆ ಈ ಹಕ್ಕುಗಳನ್ನು ಅನುಭವಿಸುವ ಮೂಲಕವೇ ಅವರು ತಮ್ಮ ಧರ್ಮವನ್ನು ಪೂರೈಸಿಕೊಳ್ಳಬೇಕಾಗಿದೆ. ವಾಸ್ತವವಾಗಿ, ನಮ್ಮ ಈ ಧರ್ಮ ಪರಿಕಲ್ಪನೆಯ ಪ್ರಕಾರ ಹಕ್ಕು ಎಂಬುದು ಒಬ್ಬ ವ್ಯಕ್ತಿಗೆ ತನ್ನ ಕರ್ತವ್ಯಗಳನ್ನು ನಿಭಾಯಿಸಲು ಮತ್ತು ಒಂದು ಅಸ್ತಿತ್ವ, ಸಂಬಂಧದ ಬಾಂಧವ್ಯಗಳನ್ನು ಅನುಭವಿಸಲು ನೆರವಾಗುವ ಒಂದು ಸಾಧನೋಪಕರಣವಾಗಿದೆ. ಕರ್ತವ್ಯ ಮತ್ತು ಹಕ್ಕು ಧರ್ಮ ಎಂಬ ತಳಭಾಗವಿರುವ ತ್ರಿಕೋನದ ಎರಡು ಪಾರ್ಶ್ವಗಳಾಗಿವೆ. ಯೋಧನೊಬ್ಬನಿಗೆ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತನಾಗಿರುವುದು ಆತನ ಹಕ್ಕು; ಏಕೆಂದರೆ ಶಸ್ತ್ರಾಸ್ತ್ರಗಳ ಹೊರತಾಗಿ ಆತ ಜನರನ್ನು ರಕ್ಷಿಸುವ ತನ್ನ ಕರ್ತವ್ಯ ನಿರ್ವಹಿಸುವುದು ಸಾಧ್ಯವಾಗದ ಸಂಗತಿ. ಆದರೆ ಈ ಶಸ್ತ್ರಾಸ್ತ್ರಗಳನ್ನು ಒದಗಿಸುವುದು, ಬಳಸುವುದು–ಇವೆಲ್ಲ ಸಂಗತಿಗಳೂ ಪೂರ್ಣತಃ ಧರ್ಮದ ಅಧಿಕಾರದ ವ್ಯಾಪ್ತಿಗೆ ಸೇರುತ್ತವೆ.

**ಪ್ರಜಾಪ್ರಭುತ್ವ**

ಪ್ರಜಾಪ್ರಭುತ್ವ ಅಥವಾ ಜನರ ಆಡಳಿತ (ಲೋಕತಂತ್ರ)ವು ಜನರ ಹಕ್ಕುಗಳನ್ನು (ಲೋಕಾಧಿಕಾರವನ್ನು) ಎತ್ತಿ ಹಿಡಿಯುವುದು ಮತ್ತು ಜನರ ಕರ್ತವ್ಯಗಳನ್ನು

ಉತ್ತೇಜಿಸುವುದು–ಈ ಕಾರ್ಯಗಳಿಗೆ ಒಂದು ಸಾಧನ (ಪರಿಕರ/ಸಲಕರಣೆಯಾಗಿದೆ)ವಾಗಿದೆ. ಪ್ರಜಾಪ್ರಭುತ್ವವನ್ನು ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ಸ್ಥಾಪಿಸಬೇಕಾಗಿದೆ ವಾಸ್ತವವಾಗಿ ಪ್ರಜಾಪ್ರಭುತ್ವ ಎಂಬುದು ಅವಿಭಾಜ್ಯ (ಘಟಕ). ಅದನ್ನು ತುಣುಕುಗಳ ರೂಪದಲ್ಲಿ ಕಾಣಲಾಗದು. ಯಾವುದೇ ಒಂದು ಕ್ಷೇತ್ರದಲ್ಲಿ ಪ್ರಜಾಪ್ರಭುತ್ವದ ಅನುಪಸ್ಥಿತಿ ಇದ್ದಲ್ಲಿ ಉಳಿದ ಕ್ಷೇತ್ರಗಳಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ಧಕ್ಕೆಯೊದಗುವುದು ಶತಸ್ಸಿದ್ಧ. ಸಹಿಷ್ಣುತೆ, ವ್ಯಕ್ತಿಗೌರವ, ಪ್ರಜಾವರ್ಗದೊಡನೆ ಗುರುತಿಸಿಕೊಳ್ಳುವಿಕೆ, ಪ್ರಜೆಗಳು ಇವೆಲ್ಲವೂ ಪ್ರಜಾಪ್ರಭುತ್ವಕ್ಕೆ ಅತೀ ಅಗತ್ಯ ಅಂಗಾಂಶಗಳು. ಇವುಗಳ ಹೊರತಾದ ಪ್ರಜಾಪ್ರಭುತ್ವದ ಬರೀ ರೂಪುರೇಷೆಗಳ ಭೂಷಣವಾದ ರಚನೆಯು ಉದ್ದೇಶ ರಹಿತವಾಗಿಬಿಡುತ್ತದೆ. ಈ ಅಗತ್ಯ ಸಂಗತಿಗಳು ಇದ್ದಲ್ಲಿ ಸಾಂಸ್ಥಿಕ ಸ್ವರೂಪವು ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ಬದಲಾಗುತ್ತಿರುತ್ತದೆ.

ರಾಜಕೀಯ ಪ್ರಜಾಪ್ರಭುತ್ವದ ಪ್ರಮುಖ ಲಕ್ಷಣವೆಂದರೆ ಪ್ರಾತಿನಿಧಿಕವಾಗಿ ಆಳುವವರನ್ನೂ ಚುನಾಯಿಸುವುದು. ವೃತ್ತಿ ಸ್ವಾತಂತ್ರ್ಯ ವಸ್ತುಗಳ ಆಯ್ಕೆಯಲ್ಲಿ ಸ್ವಾತಂತ್ರ್ಯಗಳು ಆರ್ಥಿಕ ಪ್ರಜಾಪ್ರಭುತ್ವದಲ್ಲಿ ವಿಧಾಯಕ ಅಥವಾ ಆಜ್ಞಾಪಕ ಲಕ್ಷಣಗಳಾಗಿವೆ. ಸಾಮಾಜಿಕ ಪ್ರಜಾಪ್ರಭುತ್ವವು ಸ್ಥಾನ ಗೌರವ ಮತ್ತು ಅವಕಾಶಗಳ ಸಮಾನತೆಯಿಂದ ಉದ್ಭವಿಸುತ್ತದೆ. ಈ ಎಲ್ಲ ಹಕ್ಕುಗಳೂ ಒಂದಕ್ಕೊಂದು ಪರಿಪೂರಕವಾಗಿರುವಂತೆಯೂ, ಬೇರೆಯವುಗಳ ಪರಿಣಾಮಗಳಿಂದ ಕುಸಿತಕ್ಕೊಳಗಾಗದಿರುವಂತೆಯೂ ಖಾತರಿ ಪಡಿಸುವಂಥ ಪ್ರಯತ್ನಗಳನ್ನು ಮಾಡಬೇಕಾಗಿದೆ.

ಸ್ವಾತಂತ್ರ್ಯ: ವ್ಯಕ್ತಿಗಳಿಗೆ ಹಾಗೂ ರಾಷ್ಟ್ರಗಳಿಗೆ ಸ್ವಾತಂತ್ರ್ಯವು ಒಂದು ಸ್ವಾಭಾವಿಕವಾದ ಪ್ರೇರಣೆಯೇ ಆಗಿದೆ. ದಾಸ್ಯ, ನಿರ್ಬಂಧಗಳಿರುವಲ್ಲಿ ಸಂತೋಷವೂ ಇಲ್ಲ. ಶಾಂತಿಯು ಇರುವುದಿಲ್ಲ. ರಾಜಕೀಯ ಸ್ವಾತಂತ್ರ್ಯದ ಜೊತೆಗೇ ಆರ್ಥಿಕ ಹಾಗೂ ಸಾಮಾಜಿಕ ಮುಕ್ತ ಪರಿಸ್ಥಿತಿಗಳೂ ಅಗತ್ಯ. ವ್ಯಕ್ತಿಗಳ ಮತ್ತು ಸಮಾಜದ ಸ್ವಾಭಾವಿಕ ಹಿತಾಸಕ್ತಿಗಳ ಪೂರೈಕೆಯಲ್ಲಿ ರಾಜ್ಯದ ಮಧ್ಯಪ್ರವೇಶ ಇಲ್ಲದಿರುವುದೇ ರಾಜಕೀಯ ಸ್ವಾತಂತ್ರ್ಯ. ಆರ್ಥಿಕ ಸ್ವಾತಂತ್ರ್ಯವು ಅರ್ಥದಲ್ಲಿದೆಯಾದರೂ ಮಾನವನ ಪ್ರಗತಿಗೆ (ಭಾವಾತ್ಮಕ) ಸಕಾರಾತ್ಮಕವಾಗಿಯಾಗಲೀ, ನಕಾರಾತ್ಮಕವಾಗಿಯಾಗಲೀ ಒಂದು ಅಡಚಣೆಯಾಗಿ ಪರಿಣಮಿಸುವುದಾಗಬಾರದು. ಕೊನೆಯದಾಗಿ, ಎಲ್ಲಿ ಒಂದು ಸಮಾಜವು ವ್ಯಕ್ತಿಯ ಸ್ವಾಭಾವಿಕ ಪ್ರಗತಿಗೆ ತನ್ನ ಕೊಡುಗೆ ನೀಡುತ್ತದೆಯೋ, ನಿರ್ಬಂಧ ಒಡ್ಡಿ ಅಡ್ಡಿ ಮಾಡುವುದಿಲ್ಲವೋ ಅಂಥ ಸಮಾಜದಲ್ಲಿ ಸಾಮಾಜಿಕ ಸ್ವಾತಂತ್ರ್ಯ ಇರುತ್ತದೆ. ಈ ಸ್ವಾತಂತ್ರ್ಯಗಳೆಲ್ಲವೂ, ರಾಷ್ಟ್ರವು ಅವುಗಳನ್ನು ಅನುಭವಿಸಿದ ಮೇಲೆಯೇ ವ್ಯಕ್ತಿಗೂ ಲಭ್ಯವಾಗುತ್ತದೆ.

ಪ್ರಜಾಪ್ರಭುತ್ವದಂತೆಯೇ ಸ್ವಾತಂತ್ರ್ಯವೂ ಅಭೇದ್ಯ ಸಂಗತಿ. ರಾಜಕೀಯ ಸ್ವಾತಂತ್ರ್ಯವಿಲ್ಲದೆ, ಉಳಿದೆರಡು ಸ್ವಾತಂತ್ರ್ಯಗಳನ್ನು ಪಡೆಯಲಾಗುವುದಿಲ್ಲ. ಆರ್ಥಿಕ ಸ್ವಾತಂತ್ರ್ಯದ ಹೊರತಾಗಿ ಒಂದು ಜನತೆ ಸಾಮಾಜಿಕ ಸ್ವಾತಂತ್ರ್ಯವನ್ನಾಗಲೀ ಬಹುಮಟ್ಟಿನ ರಾಜಕೀಯ ಸ್ವಾತಂತ್ರ್ಯವನ್ನಾಗಲೀ ಹೊಂದಿರಲು ಸಾಧ್ಯವಿಲ್ಲ. ಸಾಮಾಜಿಕ ಸ್ವಾತಂತ್ರ್ಯದ ಹೊರತಾಗಿ, ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯಗಳೂ ಕೂಡಾ ತಮ್ಮ ಅಂತಃ ಸತ್ವವನ್ನು ಕಳೆದುಕೊಳ್ಳುತ್ತವೆ.

## ಆರ್ಥಿಕ ಸುವ್ಯವಸ್ಥೆ

ರಾಜಕೀಯ ಕ್ಷೇತ್ರದಂತೆ ಆರ್ಥಿಕ ವಿಷಯಗಳಲ್ಲಿಯೂ ಕೂಡಾ ಸುಭಿಕ್ಷ ಸ್ಥಿತಿಯು ಕೃತಯುಗದಲ್ಲಿ ಮಾತ್ರವೇ ಇದ್ದಿರಬೇಕು. ಅಂಥ ಒಂದು ಆದರ್ಶ ರಾಜ್ಯದಲ್ಲಿ ಮಾತ್ರವೇ ಅದು ಸಾಮಂಜಸ್ಯವನ್ನೂ ಹೊಂದಿರಲು ಸಾಧ್ಯ. ಸಾಧಾರಣವಾಗಿ. ಸಮರ್ಪಕವಾದ ಉತ್ಪಾದನೆ, ವಿತರಣೆ ಹಾಗೂ ಸಂಪತ್ತಿನ ಅನುಭೋಗ ಇವುಗಳನ್ನು ಖಾತರೀಕರಿಸುವ ನಿಟ್ಟಿನಲ್ಲಿ ಆರ್ಥಾಯಾಮ ಅಥವಾ ಅರ್ಥವ್ಯವಸ್ಥೆಗೆ ಒಂದು ಚೌಕಟ್ಟು ಇರುವುದು ಅನಿವಾರ್ಯವಾಗುತ್ತದೆ. ಈ ಉದ್ದೇಶಕ್ಕೆಂದೇ ವೈವಿಧ್ಯಮಯ ಸಂಸ್ಥೆಗಳು ಹುಟ್ಟಿಕೊಂಡಿವೆ/ರೂಪು ತಳೆದಿವೆ. ಈ ಸಂಬಂಧವಾಗಿ ರಾಜ್ಯದ ಮೇಲೂ ಒಂದು ಭಾರೀ ಜವಾಬ್ದಾರಿ ಇದೆ. ಆದರೆ ಮಾಲಿಕತ್ವ ಹಾಗೂ ರಾಜ್ಯದಲ್ಲಿನ ಎಲ್ಲಾ ಉತ್ಪಾದನಾ ಸಾಧನಗಳ ಮೇಲಿನ ನಿಯಂತ್ರಣ–ಇವುಗಳು ಆರ್ಥಿಕ ಹಾಗೂ ರಾಜಕೀಯ ಶಕ್ತಿಗಳ ಕೇಂದ್ರೀಕರಣಕ್ಕೆ ದಾರಿ ಮಾಡಿಕೊಡುತ್ತವೆ. ಇದು ತಪ್ಪಾಗುತ್ತದೆ. ಆದಾಗ್ಯೂ ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯು ಸದಾ ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಲು ಅರ್ಥವ್ಯವಸ್ಥೆಯನ್ನು ಒಂದು ಸಮಸ್ಥಿತಿ/ಗತಿಯಲ್ಲಿಡಲು, ರಾಷ್ಟ್ರದ ಮೂಲಭೂತ ಧ್ಯೇಯಗಳನ್ನು ಸಾಧಿಸಿಕೊಳ್ಳಲು, ರಾಜ್ಯವು ಸಾಮಾನ್ಯವಾಗಿ ಯೋಜನೆಗಳನ್ನು ರೂಪಿಸುವುದು, ನಿರ್ದೇಶಿಸುವುದು, ನಿಯಂತ್ರಿಸುವುದು ಮತ್ತು ಕೆಲವೊಂದು ವಿಶಿಷ್ಟ ಕ್ಷೇತ್ರಗಳಲ್ಲಿ, ಸನ್ನಿವೇಶಗಳಲ್ಲಿ ಆಡಳಿತ ನಿರ್ವಹಣೆ ಹಾಗೂ ಒಡೆತನದ ಜವಾಬ್ದಾರಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ.

## ಅರ್ಥ ಮತ್ತು ಸಮೃದ್ಧಿಯ ಅಪೇಕ್ಷೆ

ಅರ್ಥದ ಅಪೇಕ್ಷೆಯ ಕಾರಣದಿಂದಾಗಿ ಧರ್ಮವು ಭಾದಿತವಾಗುತ್ತದೆ. ಅಲ್ಲದೆ, ಅರ್ಥದ ಅತೀ ಸಮೃದ್ಧಿಯಿಂದಾಗಿಯೂ ಧರ್ಮವು ಬಳಲುವ ಸಾಧ್ಯತೆ ಇದೆ. ಈ ಎರಡೂ ಸನ್ನಿವೇಶಗಳಲ್ಲಿಯೂ ಆರ್ಥಿಕ ಸ್ವಾತಂತ್ರ್ಯವು ಮೊಟಕಾಗುತ್ತದೆ. ಅಗತ್ಯವಿರುವಷ್ಟು ಜೀವನಾಂಶಗಳ ಅಲಭ್ಯತೆ ಅಥವಾ ಜೀವನಾವಶ್ಯಕ ವಸ್ತುಗಳ

ಉತ್ಪಾದನೆ ಅಥವಾ ಅಭಿವೃದ್ಧಿಗಳ ನಿರ್ವಹಣೆಗೆ ಅಗತ್ಯವಾದ ಬಂಡವಾಳದ ಕೊರತೆ–ಇವುಗಳು ಅರ್ಥದ ಬೇಡಿಕೆಯನ್ನುಂಟು ಮಾಡುತ್ತವೆ. ಇದು ವ್ಯಕ್ತಿಗೂ, ಸಮಾಜಕ್ಕೂ ಅನ್ವಯಿಸುತ್ತದೆ. ಸಂಪತ್ತು ಒಂದು ಸಾಧನ ಮಾತ್ರವೆಂಬುದನ್ನು ಮರೆತಾಗಿನ ಶ್ರೀಮಂತ್ರಿಕೆಯ ವ್ಯಾಮೋಹ, ಧರ್ಮ ನಿಯಂತ್ರಿತ ಕಾಮನೆಯ ಕೊರತೆ, ಸಂಪತ್ತಿನ ಅನುಭೋಗಕ್ಕೆ ಜ್ಞಾನ ಮತ್ತು ಸಾಮರ್ಥ್ಯಗಳಿಲ್ಲದಿರುವಿಕೆ, ಹಣ ಮತ್ತು ಐಶ್ವರ್ಯಗಳಿಗೆ ಅಗತ್ಯಕ್ಕೂ ಮೀರಿದ ಪ್ರಭಾವವಿರುವಂಥ ಪರಿಸ್ಥಿತಿ, ಸಮಾಜದಲ್ಲಿ ಆರ್ಥಿಕ ಅಸಮಾನತೆಗಳು ಹಣದ ಉಬ್ಬರವಿಳಿತಗಳು–ಈ ಎಲ್ಲವೂ ಧರ್ಮಕ್ಕೆ ಹಾನಿಕರವಾದ ಅರ್ಥ ಸಂಕೀರ್ಣತೆಯ ಸನ್ನಿವೇಶಗಳತ್ತ ಬೊಟ್ಟು ಮಾಡುತ್ತವೆ. ಅಂಥ ಅತಿಧನವು ಮಾನವನ ಶಕ್ತಿಯನ್ನು ಅಪವ್ಯಗೊಳಿಸುತ್ತದೆಯಲ್ಲದೆ, ಆತ್ಯಂತಿಕವಾಗಿ ಸಂಪತ್ತು, ಸಮೃದ್ಧಿಗಳ ನಾಶಕ್ಕೆ ದಾರಿ ಮಾಡಿಕೊಡುತ್ತದೆ.

**ಸ್ವತ್ತಿನ ಒಡೆತನ**

ಸ್ವತ್ತಿನ ಮಾಲೀಕತ್ವದ ಸಂಗತಿ ಮುಖ್ಯವಾದದ್ದು. ಕೆಲವರ ಅಭಿಪ್ರಾಯದಲ್ಲಿ ಒಬ್ಬ ವ್ಯಕ್ತಿಗೆ ಸ್ವತ್ತಿನ ಮೇಲಿನ ಹಕ್ಕು ಆತ್ಯಂತಿಕವಾದದ್ದು. ಆದರೆ ಸ್ವತ್ತಿನ ಒಡೆತನ, ಅದರಲ್ಲೂ ಉತ್ಪಾದನಾ ಸಾಧನೋಪಕರಣಗಳ ಮೇಲಿನ ಮಾಲೀಕತ್ವವು ಎಲ್ಲಾ ಕೆಡಕುಗಳಿಗೂ ಮೂಲಕಾರಣವೆಂದು ಪರಿಭಾವಿಸುವವರೂ ಇದ್ದಾರೆ. ಎಲ್ಲಾ ಸ್ವತ್ತುಗಳೂ ಭಗವಂತನಿಗೇ ಸೇರಿದ್ದು ಮತ್ತು ಮಾನವ ಅದಕ್ಕೆ ವಿಶ್ವಸ್ತ ಅಂದರೆ ಟ್ರಸ್ಟಿ ಮಾತ್ರ ಎಂಬ ದೃಷ್ಟಿಕೋನ ಹೊಂದಿರುವ ಚಿಂತಕರೂ ಇದ್ದಾರೆ. ದರ್ಶನ ಅಥವಾ ತಾತ್ವಿಕ ಸಿದ್ಧಾಂತ ರೂಪದಲ್ಲಿ ಈ ವಿಶ್ವಸ್ತ ಕಲ್ಪನೆಯು ಸ್ತುತ್ಯಾರ್ಹವಾಗಿದೆ. ಆದರೆ ವಾಸ್ತವ ರೂಢಿಯಲ್ಲಿ, ಯಾವ ನಿಯಂತ್ರಣ ನಿಯಮಾವಳಿಗಳು ಮತ್ತು ಪರಿಮಿತಿಗಳು ಈ ಟ್ರಸ್ಟಿಯ ವರ್ತನೆ, ವ್ಯವಹಾರಗಳನ್ನು ನಿರ್ದೇಶಿಸಬೇಕು ಎಂಬ ಪ್ರಶ್ನೆ ಯಾವಾಗಲೂ ಉಳಿದೇ ಇರುತ್ತದೆ.

ಒಬ್ಬ ವ್ಯಕ್ತಿ ಅಥವಾ ಹಲವು ವ್ಯಕ್ತಿಗಳ ಒಂದು ಸಮೂಹ ಅಂದರೆ ಯಾವ ವರ್ಗದೊಂದಿಗೆ ಆ ವ್ಯಕ್ತಿ ತನ್ನೆಲ್ಲ ಅಗತ್ಯಗಳು, ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕಿಸಲಾಗದಂತೆ ಸಂಬಂಧಿತನಾಗಿರುತ್ತಾನೋ ಅಂಥ ವ್ಯಕ್ತಿಯಾಗಲೀ ಸಮೂಹವಾಗಲೀ ಸ್ವತ್ತಿನ ಹೊರತಾಗಿ ಬದುಕಲು ಸಾಧ್ಯವಿಲ್ಲ. ಕರ್ಮ ಅಥವಾ ಒಂದು ಕಾರ್ಯ ಚಟುವಟಿಕೆಯು ಅದರ ಫಲ ಅಥವಾ ಪರಿಣಾಮದೊಂದಿಗೆ ಹೊಂದಿಕೊಂಡಿರುತ್ತದೆ. ಒಬ್ಬ ವ್ಯಕ್ತಿ ಗಳಿಸಿರುವುದನ್ನು ಬಳಸಲು ಮತ್ತು ಅನುಭೋಗಿಸಲು ಇರುವ ಸ್ವಾತಂತ್ರ್ಯದಿಂದ ಸ್ವತ್ತು ಅಥವಾ ಆಸ್ತಿಯ ಪರಿಕಲ್ಪನೆ ಅಂಕುರಿಸುತ್ತದೆ. ಪೂರ್ತಾ ಗಳಿಕೆಯನ್ನು ಅನುಭವಿಸುವುದನ್ನು ಮಾಡದೆ ಗಳಿಕೆಯಿಂದ ಉಳಿತಾಯ ಮಾಡುವುದೂ ಒಂದು ಸ್ವಾಭಾವಿಕ ಪ್ರವೃತ್ತಿ ಮತ್ತು ಅದು ಒಂದು

ರಾಷ್ಟ್ರೀಯ ಧರ್ಮ/ಸತ್ಕರ್ಮವೂ ಹೌದು. ಸ್ವತ್ತು ಅದನ್ನು ಹೊಂದಿರುವ ವ್ಯಕ್ತಿಗೆ ಘನತೆ, ಭದ್ರತೆ ಮತ್ತು ತೃಪ್ತಿಗಳ ಪ್ರಜ್ಞೆಯನ್ನೂ ಉಂಟು ಮಾಡುತ್ತದೆ. ಆದ್ದರಿಂದಾಗಿ ಸ್ವತ್ತು ಅಥವಾ ಆಸ್ತಿಯನ್ನು ಹೊರತುಪಡಿಸಲು ಸಾಧ್ಯವಿಲ್ಲ.

ಸ್ವತ್ತಿನ ಹಕ್ಕು ಸಾಮಾಜಿಕ ಅಂಗೀಕಾರಗಳಿಗೆ ಅನುಗುಣವಾಗಿದೆ. ಸ್ವತ್ತಿನ ಪರಿಕಲ್ಪನೆಯು ಸಾಕಷ್ಟು ಸಂಕೀರ್ಣ ಸ್ವರೂಪದ್ದಾಗಿದ್ದು ಕಾಲ, ದೇಶ, ವಸ್ತುಗಳ ಪ್ರತಿಯಾಗಿ ಬದಲಾಗುತ್ತಿರುತ್ತದೆ. ಆಯಾ ಸಮಾಜದಲ್ಲಿನ ಬದಲಾಗುತ್ತಿರುವ ಅಗತ್ಯಗಳ ಜೊತೆಗೇ ವ್ಯತ್ಯಾಸಗಳೂ ಸಂಭವಿಸುತ್ತಿರುತ್ತವೆ. ಯಾರು ಸ್ವತ್ತಿನ ಮೇಲಿನ ನಿಯಂತ್ರಣದ ಹಕ್ಕನ್ನು ಸಮಾಜಕ್ಕೆ ಬೇಡವೆನ್ನುತ್ತಾರೋ ಅವರು ಆ ನಿರ್ದಿಷ್ಟ ಕ್ಷಣದಲ್ಲಿ ಅಸ್ತಿತ್ವದಲ್ಲಿರುವಂತೆ ಸ್ವತ್ತಿನ ಸಂಬಂಧವಾದ ಕಲ್ಪನೆಗಳಲ್ಲಿ ಯಾವುದೇ ಬದಲಾವಣೆಯಾಗಬಾರದೆಂದು ಬಯಸುವವರಾಗಿರುತ್ತಾರೆ. ಆದರೆ ಸಮಾಜಕ್ಕೆ ಅಧಿಕಾರ ಇದೆ ಮತ್ತು ಹಲವು ಸಲ ಆಸ್ತಿ ಹಕ್ಕುಗಳನ್ನು ಬದಲಿಸುವುದೂ ಕೂಡಾ ಅದರದೇ ಕರ್ತವ್ಯ ಕೂಡಾ ಆಗಿಬಿಡುತ್ತದೆ. ಆತ್ಯಂತಿಕವಾದ ಮತ್ತು ಸ್ವತ್ತಿನ ಮೇಲೆ ಅವಿಭಾಜ್ಯ ಆಸ್ತಿ ಹಕ್ಕು ಎಂಬುದಿರುವುದಿಲ್ಲ.

ಸ್ವತ್ತಿನ ಮೇಲಿನ ಹಕ್ಕು ಎಂಬುದನ್ನು ಪರಿಮಿತಿಗಳಿಗೊಳಪಟ್ಟಂತೆ ಗುರ್ತಿಸಬೇಕಾಗುತ್ತದೆ. ಈ ಪರಿಮಿತಿಗಳು ಆಯಾ ಸಮಾಜದ ಹಾಗೂ ವ್ಯಕ್ತಿಗಳ ಅಗತ್ಯಗಳು ಮತ್ತು ಜೀವನ ಮೌಲ್ಯಗಳಿಗನುಗುಣವಾಗಿ ನಿಗದಿಸಲ್ಪಡುತ್ತವೆ. ಸಂಪತ್ತಿನ ಸಮೃದ್ಧಿಯು ಒಬ್ಬ ವ್ಯಕ್ತಿಯನ್ನು ಆಲಸ್ಯ ಮತ್ತು ಪರಾವಲಂಬನೆಗಳತ್ತ ಒಯ್ದಾಗ ಮತ್ತು ಸಂಪತ್ತಿನ ಕೊರತೆಯು ಬೇರೆಯವರ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡಿದಾಗ, ಸ್ವತ್ತಿನ ನಿಯಂತ್ರಣ, ನಿಯಮ ಅನಿವಾರ್ಯವಾಗುತ್ತದೆ.

ಮೂಲಭೂತವಾಗಿ, ಅಸ್ತಿತ್ವದಲ್ಲಿರುವ ಆಸ್ತಿಗಳ ಪರಿಕಲ್ಪನೆಗಳಲ್ಲಿ ಬದಲಾವಣೆಗಳುಂಟಾದ ಸಂದರ್ಭಗಳಲ್ಲಿ ಬಾಧೆಗೊಳಪಡುವ ವ್ಯಕ್ತಿಗಳಿಗೆ ಪುನರ್ವಸತಿ ಕಲ್ಪಿಸಿಕೊಡುವುದು ಆಯಾ ಸಮಾಜದ ಹೊಣೆಗಾರಿಕೆಯೇ ಆಗಿದೆ. ಆದರೆ ಸ್ಪಷ್ಟತೆ ಹಾಗೂ ಸ್ಥಿರತೆಗಳ ದೃಷ್ಟಿಯಿಂದ ಪರಿಹಾರೋಪಾಯದ ಸಿದ್ಧಾಂತವು ಅತಿಮುಖ್ಯವಾಗುತ್ತದೆ.

## ಒಂದು ಸ್ವಸ್ಥ ಅರ್ಥವ್ಯವಸ್ಥೆಯ ಪ್ರಮಾಣ

ಒಂದು ರಾಷ್ಟ್ರದ ಅರ್ಥವ್ಯವಸ್ಥೆಯ ಮುಖ್ಯ ಆಕಾಂಕ್ಷೆಯೂ ಅದರ ರಾಜಕೀಯ ವ್ಯವಸ್ಥೆಯಂತೇ, ವ್ಯಕ್ತಿಗಳ ಸರ್ವಾಂಗೀಣ ಬೆಳವಣಿಗೆಯ ಧ್ಯೇಯ ಸಾಧನೆಯೂ ಆಗಿದೆ. ಸಂಪತ್ತಿನ ಉತ್ಪಾದನೆಯ ಗುರಿಯೂ ಮೂಲಭೂತವಾಗಿ ಮನುಷ್ಯನಿಗೆ ಸಂತೋಷ ಕೊಡುವುದೇ ಆಗಿದೆ. ಮಾನವ ದುಡಿಮೆಯೇ ಉತ್ಪಾದನೆಯ ಮೂಲಸಾಧನ. ಮನುಷ್ಯನ ಆರ್ಥಿಕ ಚಟುವಟಿಕೆಯ ಧ್ಯೇಯವಾದರೂ ತನ್ನ

ಅಗತ್ಯಗಳ ಪೂರೈಕೆಗಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ದುಡಿಸಿಕೊಳ್ಳುವುದೇ ಆಗಿದೆ. ಉತ್ತಮ ಸ್ವರೂಪದ ಅರ್ಥ ಪದ್ಧತಿಯು ವ್ಯಕ್ತಿ ತನ್ನ ಅಗತ್ಯಗಳನ್ನು ಪೂರೈಸಿ ಕೊಳ್ಳುವುದರ ಜೊತೆಗೇ ಅವನ ಸರ್ವತೋಮುಖ ಕ್ಷೇಮಾಭಿವೃದ್ಧಿಯನ್ನೂ ಉತ್ತೇಜಿಸುತ್ತಿರುತ್ತದೆ. ಯಾವ ವ್ಯವಸ್ಥೆಯು ವ್ಯಕ್ತಿಯ ಆರ್ಥಿಕ ಏಳ್ಗೆಯನ್ನು ಮುಂದುವರಿಸಿದರೂ ಬೇರೆ ದಿಕ್ಕುಗಳಲ್ಲಿ ಅವನ ಪ್ರಗತಿಗೆ ಹಿನ್ನಡೆಯುಂಟುಮಾಡುತ್ತದೋ ಅಂಥದನ್ನು ಪ್ರಯೋಜನಕರ ವ್ಯವಸ್ಥೆ ಎಂದು ಪರಿಗಣಿಸಲಾಗದು. ಪ್ರತಿಯೊಂದು ಅರ್ಥ ವ್ಯವಸ್ಥೆಯಲ್ಲೂ ಮನುಷ್ಯನ ಹಿತಾಸಕ್ತಿಯೇ ಕೇಂದ್ರ ಬಿಂದುವಾಗಿರಬೇಕು.

ಬಂಡವಾಳಶಾಹೀ ಅರ್ಥವ್ಯವಸ್ಥೆಯು ಆರ್ಥಿಕವ್ಯಕ್ತಿಯನ್ನು ತನ್ನೆಲ್ಲ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಒಪ್ಪಿಕೊಂಡಿದ್ದಾಗ್ಯೂ ಅಸಮರ್ಪಕವೇ ಸರಿ. ಹೆಚ್ಚು ಹೆಚ್ಚು ಲಾಭಗಳಿಕೆಯ ಸ್ವಾರ್ಥದ ಅಪೇಕ್ಷೆಯೇ ಈ ಪದ್ಧತಿಯಲ್ಲಿ ಚಾಲಕ ಶಕ್ತಿಯಾಗಿದ್ದು ಸ್ಪರ್ಧೆಯೇ ಇದರಲ್ಲಿ ನಿಯಂತ್ರಣಾಧಿಕಾರ ಹೊಂದಿರುತ್ತದೆ. ಇದು ಭಾರತೀಯ ದರ್ಶನಕ್ಕೆ ಒಗ್ಗುವುದಿಲ್ಲ. ಬಂಡವಾಳಶಾಹಿ ಸಿದ್ಧಾಂತದಿಂದಾಗಿ ಸೃಷ್ಟಿಯಾದ ಸಮಸ್ಯೆಗಳಿಗೆ ಪ್ರತಿಯಾಗಿ ಸಮಾಜವಾದವು ಮೂಡಿತು. ಅದರ ಧ್ಯೇಯಗಳೇನೋ ಮೆಚ್ಚುವಂಥವೇ ಆಗಿದ್ದರು ಅಂತಿಮ ಫಲಿತಾಂಶ ರೂಪದಲ್ಲಿ ಅದೂ ಕೂಡ ಮನುಕುಲಕ್ಕೆ ಅನುಕೂಲಕರವಾಗುವಲ್ಲಿ ವಿಫಲವಾಯಿತು. ಕಾರಣವೇನೆಂದರೆ, ವೈಜ್ಞಾನಿಕ ಸಮಾಜವಾದದ ಆದ್ಯ ಪ್ರವರ್ತಕನಾದ ಕಾರ್ಲ್‌ಮಾರ್ಕ್ಸ್‌ನ ಸಮಾಜ ಹಾಗೂ ವ್ಯಕ್ತಿಗಳ ವಿಶ್ಲೇಷಣೆಯೇ ಮೂಲತಃ ಭೌತಿಕ ಸುಖ ಸಂಪತ್ತಿನ ಪರವಾದದ್ದು ಹಾಗೂ ಅದರಿಂದಾಗಿ ಅಸಮರ್ಪಕವಾದದ್ದು. ವರ್ಗ ಸಂಘರ್ಷದ ಪರಿಕಲ್ಪನೆಯು ಸಹಜವಾದ ಮತ್ತು ಸ್ಥಿರವಾದ ಸಹಕಾರ ಮನೋಧರ್ಮ, ಪ್ರವೃತ್ತಿಗೆ ದಾರಿ ಮಾಡಿಕೊಡುವುದು ಸಾಧ್ಯವಿಲ್ಲ.

ಬಂಡವಾಳವಾದ ಹಾಗೂ ಸಮಾಜವಾದಗಳು ಸ್ವತ್ತಿನ ವಿಷಯದಲ್ಲಿ ವಿಭಿನ್ನ ದೃಷ್ಟಿಕೋನ ಹೊಂದಿವೆ. ಆದರೆ ಎರಡೂ ಸಿದ್ಧಾಂತಗಳು ಸ್ವತ್ತಿನ ಕೇಂದ್ರೀಕರಣ ಮತ್ತು ಏಕಸ್ವಾಮ್ಯೀಕರಣದತ್ತಲೇ ಕರೆದೊಯ್ಯುತ್ತವೆ. ಹೀಗಾಗಿ ಇವೆರಡರಲ್ಲೂ ಮನುಷ್ಯ ಕಡೆಗಣಿಸಲ್ಪಡುತ್ತಾನೆ. ಯಾವ ವ್ಯವಸ್ಥೆಯಲ್ಲಿ ಮನುಷ್ಯನ ಸ್ವಂತ ಆಸಕ್ತಿಯು ಅಭಾದಿತವಾಗಿರುತ್ತದೊ, ಆದರೂ ಸಮಾಜದಲ್ಲಿನ ಇತರರೊಂದಿಗಿನ, ಅವನ ಸಂಬಂಧದಲ್ಲಿ ಮಾನವೀಯ ಮೌಲ್ಯಗಳು ಸೊರಗುವುದಿಲ್ಲವೋ ಅಂಥ ಅರ್ಥವ್ಯವಸ್ಥೆ ನಮಗೀಗ ಅಗತ್ಯವಾಗಿದೆ. ಇಂಥ ಧ್ಯೇಯೋದ್ದೇಶವು ವಿಕೇಂದ್ರೀಕೃತ ಅರ್ಥ ವ್ಯವಸ್ಥೆಯಿಂದ ಮಾತ್ರವೇ ಪೂರೈಸಲ್ಪಡಲು ಸಾಧ್ಯವಾಗುತ್ತದೆ.

## ವಿಕೇಂದ್ರೀಕೃ ಅರ್ಥವ್ಯವಸ್ಥೆ

ಅಧಿಕಾರ ಕೇಂದ್ರೀಕರಣವು ಪ್ರಜಾಪ್ರಭುತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರೋಧ ಪರಿಸ್ಥಿತಿಯಾಗಿದೆ. ರಾಷ್ಟ್ರೀಯ ಐಕ್ಯತೆಯ ಸಂಬಂಧವಾದ ಸಂಗತಿಗಳಿಗೆ ಗಮನ ನೀಡುವ ಅಗತ್ಯ ಇರುವುದು ಹೌದಾದರೂ, ಆರ್ಥಿಕ ಶಕ್ತಿಯು ಲಂಬಾತ್ಮಕವಾಗಿಯೂ, ಅಡ್ಡಡ್ಡವಾಗಿಯೂ ವಿಕೇಂದ್ರೀಕೃತಗೊಳ್ಳಬೇಕು. ಪಶ್ಚಿಮ ರಾಷ್ಟ್ರಗಳಲ್ಲಿ ಔದ್ಯೋಗೀಕರಣವು ಅಧಿಕಾರದ ಕೇಂದ್ರೀಕರಣಕ್ಕೆ ದಾರಿ ಮಾಡಿಕೊಟ್ಟಿದೆ. ಆಡಳಿತ ವರ್ಗ, ಕಂಪೆನಿಯ ಮಾಲಿಕತ್ವ ಇತ್ಯಾದಿಗಳು. ಸಂಪತ್ತು ಮತ್ತು ಅಧಿಕಾರಗಳು ಕೆಲವೇ ಮಂದಿಯ ಕೈಗಳಲ್ಲಿ ಸಂಚಯಗೊಳ್ಳುವುದಕ್ಕೆ ಕಾರಣವಾಗಿವೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿನ ಬಹಳಷ್ಟು ಕೆಡುಕುಗಳಿಗೂ ಕೂಡಾ ಈ ಕೇಂದ್ರೀಕರಣವೇ ಕಾರಣ. ಆದರೆ ಸಮಾಜವಾದೀ ವ್ಯವಸ್ಥೆಯು ಈ ಕೇಂದ್ರೀಕರಣದಲ್ಲಿ ಯಾವುದೇ ದೋಷವನ್ನೂ ಗುರುತಿಸಲಿಲ್ಲ. ಸಮಾಜವಾದಿಗಳು ಬಡವಾಳದ ಮಾಲಿಕತ್ವವನ್ನೂ ಖಾಸಗಿಯವರ ಕೈಗಳಿಂದ ಸರ್ಕಾರಕ್ಕೆ ಹಸ್ತಾಂತರಿಸುವುದಕ್ಕೆ ಮಾತ್ರವೇ ಒತ್ತು ನೀಡಿದರು. ಆದರೆ ವಾಸ್ತವವಾಗಿ ಸಮಾಜವಾದಿ ಆಳ್ವಿಕೆಯಲ್ಲಿ ಆರ್ಥಿಕ ಮತ್ತು ರಾಜಕೀಯ ಶಕ್ತಿ, ಅಧಿಕಾರಗಳು ಒಂದೇ ವರ್ಗದ ಕೈಗಳಲ್ಲಿ ಕೇಂದ್ರಿತಗೊಂಡುವು. ಮತ್ತು ಅದರಿಂದಾಗಿಯೇ ಈ ಕೇಂದ್ರೀಕರಣದ ದುಷ್ಪರಿಣಾಮಗಳು ಇನ್ನೂ ಹೆಚ್ಚು ಉಲ್ಬಣಗೊಳ್ಳುತ್ತವೆ. ಈ ರೋಗ ರುಜಿನಗಳಿಗೆ ವಿಕೇಂದ್ರೀಕರಣದಿಂದ ಮಾತ್ರವೇ ಪರಿಹಾರ. ಅದರಂತೆ, ಸಾಮಾಜಿಕ, ಆರ್ಥಿಕ ಸಂಸ್ಥೆಗಳನ್ನು ಪ್ರತ್ಯೇಕವಾಗಿ ಗುರುತಿಸಬೇಕಾಗುತ್ತದೆ. ಸಾಮಾಜಿಕ, ವೈಜ್ಞಾನಿಕ ಮತ್ತು ತಂತ್ರಜ್ಞಾನಗಳ ಅನ್ವೇಷಣೆಗಳು ವಿಕೇಂದ್ರಿಕೃತ ಕೈಗಾರಿಕೆಗಳತ್ತ ಒಲವು ತೋರುತ್ತಿವೆ. ವಿಕೇಂದ್ರೀಕರಣವು ಮಾನವನ ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕೆ ಬಹಳ ಅನುಕೂಲಕರವಾಗಿದೆ. ಸಣ್ಣ ಪ್ರಮಾಣದ ಯಾಂತ್ರೀಕೃತ ಕೈಗಾರಿಕೆಗಳು, ಸಣ್ಣ ಪ್ರಮಾಣದ ವ್ಯಾಪಾರ ವಾಣಿಜ್ಯೋದ್ಯಮಗಳು, ಸಣ್ಣ ಹಿಡುವಳಿ ಕೃಷಿಗಳು, ವ್ಯಕ್ತಿಗಳು, ಕುಟುಂಬಗಳು ಅಥವಾ ಸಹಕಾರ ಮಂಡಳಿಗಳ ಮಾಲಿಕತ್ವದಡಿಯಲ್ಲಿ ನಿರ್ವಹಿಸಲು ಸಾಧ್ಯವಾಗುವಂಥವೇ ನಮ್ಮ ಅರ್ಥವ್ಯವಸ್ಥೆಯ ತಳಹದಿಯಾಗಬೇಕು. ಬೃಹತ್ ಕೈಗಾರಿಕಾ ಘಟಕಗಳು, ಈ ನಿಯಮಕ್ಕೆ ಅಪವಾದವಾಗಿರಬೇಕಾಗುತ್ತದೆ.

## ಅಭಿವೃದ್ಧಿಯ ಪುರಾವೆ

ಪ್ರತಿಯೊಂದು ಸಮಾಜವೂ ಹುಟ್ಟುವ ಪ್ರತಿಯೊಂದು ಮಗುವಿನ ಉನ್ನತಿಗೆ ವ್ಯವಸ್ಥೆ ಮಾಡಲು ಜವಾಬ್ದಾರವಾಗಿರುತ್ತದೆ; ವ್ಯಕ್ತಿ ತನ್ನ ಪ್ರತ್ಯೇಕ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಮಾತ್ರವಲ್ಲದೆ ತನ್ನ ಸಮಾಜದ ಒಳಿತಾಗಿ ಒಬ್ಬ ಜವಾಬ್ದಾರಿಯುತ ಸದಸ್ಯನಾಗಿ ತನ್ನ ಕೊಡುಗೆ ನೀಡಲೂ ನೆರವಾಗುವಂಥ ಶಿಕ್ಷಣವನ್ನೂ ಕೊಡಲು

ಹೊಣೆ ಹೊರಬೇಕಾಗಿರುತ್ತದೆ. ಪ್ರತೀ ಶಕ್ತ, ಸುದೃಢ ವ್ಯಕ್ತಿಗೂ ಉದ್ಯೋಗ, ಸಾಕಷ್ಟು ವಿರಾಮ ಮತ್ತು ಪ್ರತಿವ್ಯಕ್ತಿಗೂ ಜೀವನೋಪಾಯ ಒದಗಿಸುವುದೂ ಸಮಾಜದ ಜವಬ್ದಾರಿಯೇ ಆಗಿರುತ್ತದೆ. ಪ್ರತೀ ನಾಗರಿಕ ಸಮಾಜವೂ ಈ ಬಾಧ್ಯತೆಗಳನ್ನೂ ಒಂದಲ್ಲಾ ಒಂದು ರೂಪದಲ್ಲಿ ಪೂರೈಸುತ್ತಿರುತ್ತದೆ. ವಾಸ್ತವವಾಗಿ, ಇವೆಲ್ಲವೂ ಅಭಿವೃದ್ಧಿಯ ಪ್ರಮುಖ ಪುರಾವೆಗಳಾಗಿವೆ ಆದ್ದರಿಂದ, ಒಂದು ಕನಿಷ್ಠ ಜೀವನಮಟ್ಟ, ಶಿಕ್ಷಣ, ಉದ್ಯೋಗ, ಸಾಮಾಜಿಕ ಭದ್ರತೆ ಮತ್ತು ಯೋಗಕ್ಷೇಮ–ಇವುಗಳು ಪ್ರತೀ ಪ್ರಜೆಯ ಮೂಲಭೂತ ಹಕ್ಕುಗಳೆಂದು ಒಪ್ಪಿಕೊಳ್ಳಬೇಕಾಗುತ್ತದೆ.

**ಸಮಗ್ರ ಮಾನವತಾವಾದ**

ನಮ್ಮ ಸಮಾಜ ಪದ್ಧತಿಯಲ್ಲಿ ವ್ಯಕ್ತಿಯು ಪರಮೋಚ್ಚ ಸ್ಥಾನವನ್ನು ಹೊಂದಿರುತ್ತಾನೆ. ಯತ್ ಪಿಂಡೇ ತದ್ ಬ್ರಹ್ಮಾಂಡೇ – ಯಾವುದು ಅಣುವಿನಲ್ಲಿದೆಯೋ ಅದು ಮಹತ್ತಿನಲ್ಲಿಯೂ ಇದೆ ಎಂಬ ಸಿದ್ಧಾಂತದ ಪ್ರಕಾರ ವ್ಯಕ್ತಿಯು ಸಮಾಜದ ಪ್ರತಿನಿಧಿ ಹಾಗೂ ಪ್ರಧಾನ ಸಾಧನವೂ ಹೌದು. ಭೌತಿಕ ಸಂಪತ್ತು ಮನುಷ್ಯನ ಸಂತೋಷಕ್ಕೆ ಒಂದು ಸಾಧನವೇ ವಿನಾ ಅದೇ ಆತ್ಯಂತಿಕವಲ್ಲ. ಸಮುದಾಯ–ಮಾನವ ಅಥವಾ ಸಮಷ್ಟಿಮಾನವನನ್ನು ಪರಿಗಣಿಸಿ, ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳುಳ್ಳ, ಒಂದು ಪ್ರತ್ಯೇಕ ವ್ಯಕ್ತಿತ್ವವುಳ್ಳ ಜೀವಂತ ಮನುಷ್ಯರನ್ನು ವಿಶಿಷ್ಟವಾಗಿ ಗಣನೆಗೆ ತೆಗೆದುಕೊಂಡು ಮಾನ್ಯತೆ ನೀಡಲು ವಿಫಲವಾಗುವ ಒಂದು ವ್ಯವಸ್ಥೆ ಸಮರ್ಪಕವಾಗಿರುವುದಿಲ್ಲ. ಅದೇ ರೀತಿಯಲ್ಲಿ, ಮನುಷ್ಯನ ಯಾವುದೋ ಒಂದು ಗುಣಧರ್ಮವನ್ನು ಗಮನಿಸಿ, ಒಂದು ಸಮಗ್ರ ದೃಷ್ಟಿಯಿಂದ ಮನುಷ್ಯನನ್ನು ಜೀವಂತ ವ್ಯಕ್ತಿಯಾಗಿ–ಶರೀರ, ಮನಸ್ಸು, ಬುದ್ಧಿ, ಆತ್ಮಗಳಿಂದ ಕೂಡಿದವನೆಂದೂ, ಪುರಷಾರ್ಥಗಳಿಂದ ಪೂರೈಸಿಕೊಳ್ಳಬೇಕಾದ ಹಲವಾರು ಅಗತ್ಯ, ತುರ್ತುಗಳುಳ್ಳವನೆಂದು ಗಮನಿಸಲು ವಿಫಲವಾಗುವ ವ್ಯವಸ್ಥೆಯೂ ಕೂಡಾ ಅಸಮರ್ಪಕವೇ ಹೌದು. ನಮ್ಮ ಆದರ್ಶ ಧ್ಯೇಯವಾದರೋ ಸಮಗ್ರ ವ್ಯಕ್ತಿ–ಬೇರೆ ಅಸಂಖ್ಯಾತ ವ್ಯಷ್ಟಿ ಹಾಗೂ ಸಮಷ್ಟಿ ಘಟಕಗಳೊಂದಿಗೆ ಏಕಕಾಲಕ್ಕೆ ಸಹಭಾಗಿಯಾಗಬಲ್ಲ ಚೈತನ್ಯವುಳ್ಳವನು. ಸಮಗ್ರ ಮಾನವತಾ ಸಿದ್ಧಾಂತದ ಮೂಲಾಧಾರ ಶಿಲೆಯ ಮೇಲೆ ನಮ್ಮ ಇಡೀ ವ್ಯವಸ್ಥೆಯ ಸೌಧ ನಿರ್ಮಾಣವಾಗಬೇಕಾಗಿದೆ.

ಹಲವಾರು ಸಿದ್ಧಾಂತಗಳು ಮಾನವತಾವಾದವನ್ನು ಪ್ರತಿಪಾದಿಸುತ್ತಾ ಬಂದಿವೆ. ಆದರೆ ಅವುಗಳ ಆಲೋಚನಾ ಲಹರಿ ಪಾಶ್ಚಾತ್ಯ ದರ್ಶನಗಳಲ್ಲಿ ಬೇರಿಳಿಸಿವೆಯಾಗಿ ಸತ್ವರೂಪದಲ್ಲಿ ಐಹಿಕ ನಿಷ್ಠೆಯದೇ ಆಗಿವೆ. ಈ ಚಿಂತಕರು ಮನುಷ್ಯನ ವರ್ತನೆಯ ನೈತಿಕ ಸ್ವರೂಪಕ್ಕೆ ಯಾವುದೇ ತಾತ್ವಿಕ ವಿವರಣೆ ಕೊಡಲು ಶಕ್ತರಾಗಲಿಲ್ಲ. ಆಧ್ಯಾತ್ಮಿಕತೆ

ಅಥವಾ ಅಧಿ ಭೌತಿಕವಾದವನ್ನು ನಿರಾಕರಿಸಿದರೆ, ಮಾನವ ಸಂಬಂಧಗಳು, ಮನುಷ್ಯ ಮತ್ತು ಜಗತ್ತಿನ ನಡುವಣ ಸಂಬಂಧ, ಇವುಗಳನ್ನು ವಿವರಿಸಲು ಸಾಧ್ಯವಾಗುವುದಿಲ್ಲ.

**ಪಾಶ್ಚಾತ್ಯ ಆದರ್ಶಗಳ ಅಂಧಾನುಕರಣೆ:**

• ಭಾರತದಲ್ಲಿ ಬಹಳಷ್ಟು ರಾಜಕೀಯ ಪಕ್ಷಗಳು ಪಾಶ್ಚಾತ್ಯ ಆದರ್ಶ, ನಿಲುವುಗಳಿಂದ ಸ್ಫೂರ್ತಿ ಪಡೆದಿವೆ. ಅವುಗಳೆಲ್ಲವೂ ಪಶ್ಚಿಮ ರಾಷ್ಟ್ರಗಳಲ್ಲಿ ಒಂದಲ್ಲ ಒಂದು ರಾಜಕೀಯ ಚಳುವಳಿಗೆ ಸಂಬಂಧಿಸಿರುತ್ತವೆ ಮತ್ತು ತತ್ಸಬಂಧ ಸಂಸ್ಥೆಗಳ ಪ್ರತಿಛಾಯೆಗಳಾಗಿರುತ್ತವೆ. ಅವು ಭಾರತದ ಆಶೋತ್ತರಗಳನ್ನಂತೂ ಪೂರೈಸಲು ಶಕ್ತವಾಗಿರುವುದಿಲ್ಲ. ತಿರುವು–ಹಾದಿಗಳಲ್ಲಿ ಬಂದು ನಿಂತಿರುವ ಜಗತ್ತಿಗೆ ಅವು ಯಾವುದೇ ಮಾರ್ಗದರ್ಶನವನ್ನೂ ನೀಡುವುದೂ ಸಾಧ್ಯವಿಲ್ಲ.

• ಕೆಲವೇ ಕೆಲವು ರಾಜಕೀಯ ಪಕ್ಷಗಳು ಭಾರತೀಯ ಸಂಸ್ಕೃತಿಗೆ ಅಪಸ್ವರದ ದನಿ ಎತ್ತುತ್ತವೆ. ಆದರೆ ಭಾರತೀಯ ಸಂಸ್ಕೃತಿಯ ಲವಲವಿಕೆ, ಚೈತನ್ಯಗಳು ಅವುಗಳಲ್ಲಿಲ್ಲ ಹಾಗೂ ಶಾಶ್ವತವಾದ, ನಿರಂತರವಾದ ಭಾರತೀಯ ಮೌಲ್ಯಗಳು ಅವುಗಳ ಯಥಾಸ್ಥಿತಿಗೆ ಕಾರಣವಾಗುವ ಸ್ಥಿರವಾದ, ಅಂದರೆ ಸ್ಥಿತಸ್ಥಾಪಕತ್ವ, ಹೊಂದಾಣಿಕೆಗೆ ಒಗ್ಗದ ಗುಣಧರ್ಮಕ್ಕೆ ಪುರಾವೆಗಳಾಗಿ ತೋರುತ್ತವೆ. ಭಾರತೀಯ ಸಂಸ್ಕೃತಿಯಲ್ಲಿನ ಕ್ರಾಂತಿಕಾರಕ ಅಂಶವನ್ನೂ ಆ ಪಕ್ಷಗಳು, ಸಿದ್ಧಾಂತಗಳು ಗ್ರಹಿಸುವುದಿಲ್ಲ. ವಾಸ್ತವವಾಗಿ ಅಸ್ಪೃಶ್ಯತೆ, ಜಾತಿಭೇದ, ವರದಕ್ಷಿಣೆ, ಶ್ರಾದ್ಧಕರ್ಮ. ಸಂಬಂಧ ಸಮಾರಾಧನೆ ಇತ್ಯಾದಿ ಆಚಾರಗಳು, ಸ್ತ್ರೀಯರನ್ನು ಕಡೆಗಣಿಸುವುದು ಇತ್ಯಾದಿ. ಅನಿಷ್ಟ ಪದ್ಧತಿಗಳು ಸಮಾಜದಲ್ಲಿ ಅಸ್ತಿತ್ವದಲ್ಲಿರುವುದು ಸಮಾಜದ ಅನಾರೋಗ್ಯ ಮತ್ತು ಅವನತಿಯ ಪ್ರವೃತ್ತಿಯ ಲಕ್ಷಣಗಳಾಗಿವೆ. ಭಾರತೀಯ ಸಂಸ್ಕೃತಿಗಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡ ಅನೇಕ ಭಾರತೀಯ ಮಹನೀಯರುಗಳು ಈ ಪಿಡುಗುಗಳ ವಿರುದ್ಧ ಹಿಂದೆಯೇ ಹೋರಾಟ ಮಾಡಿದ್ದರು. ನಮ್ಮ ಬಹಳಷ್ಟು ಸಾಮಾಜಿಕ ಮತ್ತು ಆರ್ಥಿಕ ಪದ್ಧತಿಗಳ ವಿಶ್ಲೇಷಣೆ ಮಾಡಿದಲ್ಲಿ ಅವೆಲ್ಲವೂ ಆಯಾ ಕಾಲಕ್ಕೆ ಹೊಂದಿಕೊಳ್ಳಲು ಮತ್ತು ಬದಲಾವಣೆಗೆ ತೆರೆದುಕೊಳ್ಳಲು ಆಗದ ಆಯಾ ಸಮಾಜದ ದೌರ್ಬಲ್ಯ ಅಥವಾ ವಿದೇಶೀಯರ ಪ್ರತಿಯಾಗಿ ಸಮಾಜದ ರಕ್ಷಣೆ ಮಾಡಿದ ಗುರಾಣಿಯಂತೆ ಕೆಲಸ ಮಾಡಿದ ಸಂಸ್ಥೆಗಳು ಅಥವಾ ವಿದೇಶಿಯರು ನಮ್ಮ ಮೇಲೆ ಹೇರಿದಂಥವು ಅಥವಾ ಅಂಧಾನುಕರಣೆಯಿಂದ ನಾವಾಗಿ ವಿದೇಶೀಯರನ್ನು ಅನುಕರಿಸಿ ಅಳವಡಿಸಿಕೊಂಡಂಥವು ಎಂದು ಸ್ಪಷ್ಟವಾಗುತ್ತದೆ. ಅಂಥ ಸಂಸ್ಥೆಗಳನ್ನು ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ಜತನವಾಗಿ ಕಾಯ್ದುಕೊಳ್ಳುವುದು ಸಾಧ್ಯವಿಲ್ಲ.

**ಸಮಗ್ರ ಮಾನವತಾವಾದ : ಏಕೈಕ ಮಾರ್ಗ:**

ಸಮಗ್ರ ಮಾನವತಾವಾದವು ಭಾರತೀಯ ಹಾಗೂ ಪಾಶ್ಚಾತ್ಯ ಆದರ್ಶಗಳ ಸಂತುಲಿತ ಮೌಲೀಕರಣವನ್ನು ಅಗತ್ಯವಾಗಿ ಮಾಡಲೇಬೇಕು. ಈ ಮೌಲೀಕರಣದ

ಆಧಾರದಿಂದ ಅದು ಮನುಷ್ಯನಿಗೆ ತನ್ನ ವರ್ತಮಾನದ ಚಿಂತನೆ, ಅನುಭವ, ಸಾಧನೆಗಳಿಂದ ಮುಂದೆ ಹೇಗೆ ಅಭಿವೃದ್ಧಿಯ ಕಡೆಗೆ ಸಾಗಬೇಕೆಂಬ ಒಂದು ಮಾರ್ಗಸೂಚಿಸಲು ಯತ್ನಿಸುತ್ತದೆ. ಪಾಶ್ಚಾತ್ಯ ಜಗತ್ತು ಬಹಳ ದೊಡ್ಡ ಭೌತಿಕ ಅಭಿವೃದ್ಧಿಯನ್ನೇನೋ ಸಾಧಿಸಿದೆಯಾದರೂ ಆಧ್ಯಾತ್ಮಿಕ ಸಾಧನೆಯಲ್ಲಿ ಇನ್ನೂ ಸ್ಥೂಲ ಸಾಧನೆಯನ್ನು ಮಾಡಲು ಸಾಧ್ಯವಾಗಿಲ್ಲ. ಭಾರತವು ಈ ಭೌತಿಕ ಮುಂದರಿಕೆಯಲ್ಲಿ ಇನ್ನೂ ಬಹಳವಾಗಿ ಹಿಂದುಳಿದಿದೆ ಮತ್ತು ಇದರಿಂದಾಗಿ ಅದರ ಆಧ್ಯಾತ್ಮವಾದವೂ ಕೂಡಾ ಬರೇ ಬಡಾಯಿ ಎಂಬಂತಾಗಿಬಿಟ್ಟಿದೆ. ನಾಯಂ ಆತ್ಮಾ ಬಲ ಹೀನೇನ ಲಭ್ಯಃ ದುರ್ಬಲರಿಗೆ ಆತ್ಮಸಾಕ್ಷಾತ್ಕಾರವಾಗುವುದು ಅಸಾಧ್ಯ– ಭೌತಿಕ ಸಂಪದಭಿವೃದ್ಧಿಯ ಹೊರತಾಗಿ ಆಧ್ಯಾತ್ಮಿಕ ಮುಕ್ತಿಯೂ ಸಾಧ್ಯವಿಲ್ಲ, ಆದ್ದರಿಂದಲೇ ನಾವು ಶಕ್ತಿ, ಭೌತಿಕ ಸುಖಸಂತೋಷಗಳಿಂದಾಗಿ ಶ್ರಮಿಸುತ್ತೇವೆ. ಅಂದರೆ ಮಾತ್ರವೇ ನಾವು ರಾಷ್ಟ್ರೀಯ ಸ್ವಾಸ್ಥ್ಯ ಸ್ಥಿತಿಯನ್ನು ನಿರ್ಮಿಸಲು ಶಕ್ತರಾಗುತ್ತೇವೆ, ಜಗತ್ತಿನ ಪ್ರಗತಿಗೆ ಕೊಡುಗೆ ನೀಡುತ್ತೇವೆ, ಜಗತ್ತಿಗೆ ಹೊರೆಯಾಗುವುದಿಲ್ಲ.

ಸಮಗ್ರ ಮಾನವತಾವಾದ ಎಂಬುದು ಭಾರತೀಯ ಸಂಸ್ಕೃತಿಯ ವಿಭಿನ್ನ ಲಕ್ಷಣಗಳ ಒಂದು ಮೊತ್ತ ರೂಪಕ್ಕೆ ನೀಡಿದ ಹೆಸರಾಗಿದೆ. ಸಕ್ರಿಯ ಚಟುವಟಿಕೆಗಳಿಂದ ಕೂಡಿದ, ಸಂಯೋಗದ ಏಕರೂಪದ ನಿಲುವಿನ, ಉದಾತ್ತ ಧ್ಯೇಯ ಧೋರಣೆಗಳಿಂದ ಕೂಡಿದ ಭಾರತೀಯ ಸಂಸ್ಕೃತಿಯ ಗುಣಧರ್ಮಗಳ ಮೊತ್ತರೂಪ ಇದಾಗಿದೆ. ಈ ಆದರ್ಶವೇ ನಮ್ಮ ಮುನ್ನಡೆಯ ದಿಕ್ಕನ್ನು ನಿರ್ಧರಿಸುತ್ತದೆ. ಆದರೆ ನಮ್ಮ ಆದರ್ಶ ಸಿದ್ಧಾಂತವೆಂದರೆ ಯಾವುದೇ ಉಪದೇಶಗಳ ಮುದ್ದೆಯಲ್ಲ; ಅಂದರೆ ಜಡ ಬೋಧೆಯ ದಾಖಲೆಯಲ್ಲ. ಆದರ್ಶವೆಂದರೆ ಅದು ಅಭ್ಯಾಸ–ಅನುಸರಣೆಗಳಿಗೆ ಅಳವಡಿಸಲ್ಪಡಬೇಕು. ನಮ್ಮ ಕಾರ್ಯಕ್ರಮ (ಪ್ರಣಾಳಿಕೆ) ವಾಸ್ತವವಾದಲ್ಲಿ ನೆಲೆಗೊಳ್ಳಬೇಕು. ವಾಸ್ತವವಾಗಿ, ವಾಸ್ತವವಾದವೇ ನಮ್ಮ ಕಾರ್ಯನೀತಿಯ ಭದ್ರಕೋಟೆ, ನಮ್ಮ ಸಾಧನೆಗಳ ಮಾನದಂಡ ಮತ್ತು ನಮ್ಮ ಧ್ಯೇಯಧೋರಣೆಗಳ ಒರೆಗಲ್ಲು.

(ಕೃಪೆ ಮಂಥನ್–ಜುಲೂ ೧೯೯೧)

೧೯೬೭ರಲ್ಲಿ ಕೇರಳದ ಕಲ್ಲಿಕೋಟೆಯಲ್ಲಿ ಪಂ. ದೀನದಯಾಳರು ಮಾಡಿದ ಅಧ್ಯಕ್ಷ ಬಾಷಣ:

ಸಹ ಪ್ರತಿನಿಧಿಗಳೇ,

ಈ ವರ್ಷ ನೀವು ನನಗೆ ಪಕ್ಷದ ಅಧ್ಯಕ್ಷತೆಯ ಹೊಣೆಗಾರಿಕೆಯನ್ನು ಒಪ್ಪಿಸಿದ್ದೀರಿ. ಎಲ್ಲರೂ ಒಂದೇ ಸಮನಾದ ಭಕ್ತಿ, ಶ್ರದ್ಧಾಸಕ್ತಿಗಳಿಂದ ಪಕ್ಷ ಕಟ್ಟುವಲ್ಲಿ ತೊಡಗಿಸಿಕೊಂಡಿರುವ ಕಾರ್ಯಕರ್ತರ ಸಂಘಟನೆ ನಮ್ಮದಾಗಿದೆ. ನೀವು ಈ ನಿರ್ದಿಷ್ಟ ಸಂವಿಧಾನಿಕ ಕರ್ತವ್ಯದ ಬಾಧ್ಯತೆಯನ್ನು ಪೂರೈಸಲು ನನ್ನನ್ನು ಕರೆದು

ಗೌರವಿಸಿದ್ದೀರಿ. ಇದು ನಿಮ್ಮ ಔದಾರ್ಯ. ಪ್ರೀತಿಗಳ ದ್ಯೋತಕವಾಗಿದೆ. ವಾಸ್ತವವಾಗಿ ಇದನ್ನು ಧಾರಾಳವಾದ ಪ್ರಮಾಣದಲ್ಲಿ ಕಳೆದ ಹದಿನೈದು ವರ್ಷಗಳಿಂದಲು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿಯೂ ಪಡೆಯುತ್ತ ಬಂದಿದ್ದೇನೆ. ಈ ನಿಮ್ಮ ಉದಾರ ಪ್ರೀತಿಯೇ ಇನ್ನು ಮುಂದೆಯೂ ನನಗೆ ಪ್ರಮುಖ ಆಧಾರ ಶಕ್ತಿಯಾಗಲಿದೆ.

**ಎರಡು ಯುಗಗಳ ಸಂಕ್ರಮಣ**

ಈ ದಿನ ನಾವು, ಭಗವಾನ್ ಪರಶುರಾಮನ ತಪಸ್ಸಿನಿಂದ ಪುನೀತವಾದ ಈ ಪುಣ್ಯಭೂಮಿ ಕೇರಳದಲ್ಲಿ ಸಂಧಿಸುತ್ತಿದ್ದೇವೆ. ಕಾಲದ ದೃಷ್ಟಿಯಿಂದ ಎರಡು ಪ್ರಮುಖ ಯುಗಗಳ ಸಂಕ್ರಮಣ ಕಾಲದಲ್ಲಿ ನಾವಿಂದು ನಿಂತಿದ್ದೇವೆ. ಕಳೆದ ಅರ್ಧ ಶತಮಾನದ ಅವಧಿಯಲ್ಲಿ ರಾಷ್ಟ್ರದ ಜನಮನವು ಕಾಂಗ್ರೆಸ್ ಮತ್ತು ಅದರ ತಾತ್ವಿಕ ನಿಲುವಿನ ಬಲವಾದ ಪ್ರಭಾವಕ್ಕೆ ಒಳಗಾಗಿತ್ತು. ಅದರ ನೇತಾರರು ರಾಷ್ಟ್ರನೀತಿಯ ನಿರ್ಮಾತೃಗಳು ಮಾತ್ರವೇ ಅಲ್ಲದೆ ಸಮಕಾಲೀನ ಜೀವನ ಮೌಲ್ಯಗಳ ವಕ್ತಾರರೂ ಆಗುತ್ತಾ ಬಂದಿದ್ದಾರೆ. ಸ್ವಾತಂತ್ರ್ಯ ಬಂದನಂತರ ಸರ್ಕಾರದ ಆಡಳಿತ ಸೂತ್ರವೂ ಅವರುಗಳ ಕೈಗೇ ಬಂದಿತು. ಇದು ಕಾಂಗ್ರೆಸ್‌ನ ಕಾರ್ಯಾಚರಣೆಯ ವಿವರವಾದ ಮೌಲ್ಯಮಾಪನದ ವೇದಿಕೆ ಅಲ್ಲವಾಗಿದ್ದಾಗ್ಯೂ ಶ್ರೀ ಸಾಮಾನ್ಯರಲ್ಲಿ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸಿದ್ದು ಈ ಕಾಲಾವಧಿಯ ಪ್ರಮುಖ ಕೊಡುಗೆ ಎಂದರೆ ತಪ್ಪಾಗಲಾರದು. ಒಂದು ವೇಳೆ ಈ ರಾಜಕೀಯ ಪ್ರಜ್ಞೆಯನ್ನು ಪ್ರಸಕ್ತ ರಾಜಕೀಯದ ಉಪದ್ವ್ಯಾಪಗಳಿಂದ ಕಲುಷಿತಗೊಳಿಸದಿದ್ದಲ್ಲಿ, ಸಕಾರಾತ್ಮಕವಾದ ರಾಷ್ಟ್ರೀಯ ಪುನರುತ್ಥಾನಕ್ಕೆ ಒಂದು ಸಮರ್ಥ ಸಾಧನವಾಗಿ ಪರಿಣಮಿಸಲ್ಪಡುತ್ತಿತ್ತು. ನಾವು ಈ ವೇಳೆಗೇ ಸಾಕಷ್ಟು ಗಣನೀಯ ಸಾಧನೆ ಮಾಡಲು ಸಾಧ್ಯವಾಗುತ್ತಿತ್ತು ಮತ್ತು ಇಂದು ಸುತ್ತಿಕೊಂಡಿರುವ ಸಮಸ್ಯೆಗಳಿಂದ ರಾಷ್ಟ್ರವು ಮುಕ್ತವಾಗಿರುವುದು ಸಾಧ್ಯವಿತ್ತು. ನಾವಿಂದು ಯಾವ ನವಯುಗದ ಹೊಸ್ತಿಲಲ್ಲಿ ನಿಂತಿದ್ದೇವೆಯೋ ಆ ಸಂಧಿಕಾಲದಲ್ಲಿ ರಾಜಕೀಯ ಜಾಗೃತಿಯು ಸಕಾರಾತ್ಮಕ ಅಭಿವ್ಯಕ್ತಿ ಹೊರಹೊಮ್ಮಬೇಕಾಗಿದೆ. ಈ ದೇಶದಲ್ಲಿ ಕಳೆದ ಕಾಲದ ಕೊಂಡಿಯಿಂದ ಇನ್ನೂ ಬಂಧಿತರಾಗಿರುವ ಮಂದಿ ಇದ್ದಾರೆ. ಅಷ್ಟೇ ಅಲ್ಲದೆ ರಾಷ್ಟ್ರೀಯ ಮೌಲ್ಯಗಳ ಬಗೆಗೆ ಅಜ್ಞರಾಗಿರುವವರು ಅಥವಾ ಅವುಗಳಿಗೆ ತೀರಾ ಜಾಳುಜಾಳಾದ ಮಾನ್ಯತೆ ನೀಡುವವರೂ ಇದ್ದಾರೆ, ಮತ್ತು ಅದರಿಂದಾಗಿ ವಿದೇಶೀ ಜೀವನ ಮೌಲ್ಯಗಳಿಂದ ಬಹುಬೇಗನೆ ಪ್ರಭಾವಿತರಾಗಲು ಸಿದ್ಧರಿರುವವರಾಗಿದ್ದಾರೆ. ಆದ್ದರಿಂದ ರಾಷ್ಟ್ರವು ಹೊಸ ಯುಗಕ್ಕೆ ಕಾಲಿಡುತ್ತಿರುವ ಈ ಸಂಧಿಕಾಲವು ಸುಗಮವಾಗಿಲ್ಲ. ಹಲವು ಆತಂಕ, ಸಂಘರ್ಷಗಳಿಂದ ಕೂಡಿದೆ. ಈ ಹಿನ್ನೆಲೆಗೆ ಪ್ರತಿಯಾಗಿ ನಾವು ಸದ್ಯದ ಸಮಸ್ಯೆಗಳನ್ನು ವಿಶ್ಲೇಷಿಸಬೇಕಾಗಿದೆ ಮತ್ತು ನಮ್ಮ ನೀತಿ ನಿರೂಪಣೆ ಮಾಡಬೇಕಾಗಿದೆ.

**ಪರ್ಯಾಯಕ್ಕಾಗಿ ಹುಡುಕಾಟ**

ಪಾಕಿಸ್ತಾನಿ ಆಕ್ರಮಣಕ್ಕೆ ಪ್ರತಿಯಾಗಿ ನಮ್ಮ ದಿಟ್ಟ ಯೋಧರ ಪಡೆಗಳು ತಮ್ಮ ಶೌರ್ಯ ಸಾಹಸಗಳನ್ನೂ ಮೆರೆದಾಗಲೇ ಅಂದರೆ ೧೯೬೫ರ ಆಗಸ್ಟ್–ಸೆಪ್ಟೆಂಬರ್ ನಡುವೆಯೇ ಮುಂಬರಲಿದ್ದ ಕ್ರಾಂತಿಯ ಉತ್ಪಾತದ ಲಕ್ಷಣಗಳು ನಿಚ್ಚಳವಾಗಿ ಗೋಚರಿಸಿದುವು. ಕಾಂಗ್ರೆಸ್ ಆಳ್ವಿಕೆಯಲ್ಲಿ, ಈ ಘಟನೆಗಳ ಮುನ್ಸೂಚನೆಯ ಕ್ಷಣಗಳಲ್ಲಿ ಕಾಂಗ್ರೆಸಿಗರು ಮಾಡಿದ ನೀತಿ ನಿಯಮಗಳು ಅವರ ಶೋಚನೀಯ ಅಸಮರ್ಥತೆಯನ್ನು, ಬರಲಿದ್ದ ಕ್ರಾಂತಿಯ ಮಾಧ್ಯಮ/ಸಾಧನವಾಗಿ ವರ್ತಿಸಿದುದನ್ನು ಶ್ರುತ ಪಡಿಸಿದುವು. ಫಲಿತಾಂಶವೆಂದರೆ ಜನತೆ ಕಾಂಗ್ರೆಸನ ದುರಾಡಳಿತದಿಂದ ಮುಕ್ತವಾಗಲು ಮತ್ತಷ್ಟು ಆಳವಾಗಿ ಹಂಬಲಿಸುವಂತಾಯಿತು. ನಾಲ್ಕನೇ ಲೋಕಸಭಾ ಚುನಾವೆಯೊಂದಿಗೆ, ಕಾಂಗ್ರೆಸ್‌ನ ಕ್ರಮೇಣ ಕಳಾಹೀನತೆಗೆ, ಅವನತಿಗೆ ಪ್ರಕ್ರಿಯೆ ಆರಂಭವಾದಂತಾಯಿತು. ವಿರೋಧ ಪಕ್ಷಗಳು ಆಗಲೇ ಉತ್ತಮ ರೀತಿಯಿಂದ ಸಂಘಟಿತಗೊಂಡಿದ್ದಲ್ಲಿ, ಫಲಿತಾಂಶಗಳು ಇನ್ನೂ ಹೆಚ್ಚು ಸುಸಮ್ಮತವಾಗಿರುತ್ತಿದ್ದುವು. ಬೇರೆ ಪಕ್ಷಗಳೊಂದಿಗೆ ತುಲನೆ ಮಾಡಿದರೆ, ಚುನಾವಣೆಯಲ್ಲಿ ಜನಸಂಘದ ಸಾಧನೆ ಗಣನೀಯವಾಗಿ ಮಹತ್ವದ್ದೇ ಆಗಿದೆ. ಆದರೆ ಪರಿಸ್ಥಿತಿಯ ಬೇಡಿಕೆಗಳಿಗೆ ಸಂಬಂಧಿಸಿದ ನಿಟ್ಟಿನಿಂದ ಅವಲೋಕಿಸಿದರೆ ಫಲಿತಾಂಶಗಳು ಇನ್ನೂ ಬಹಳಷ್ಟು ನಿರೀಕ್ಷೆಗಳನ್ನೂ ಉಳಿಸಿಬಿಟ್ಟಿವೆ. ಆದಾಗ್ಯೂ ಈ ಚುನಾವಣೆಗಳ ಫಲಿತಾಂಶವು ಕಾಂಗ್ರೆಸ್‌ಗೆ ಸ್ಪಷ್ಟ ಪರ್ಯಾಯವಾಗಿ ಜನಸಂಘವು ಬೆಳೆಯಲು ಸಮರ್ಥವಾಗಿದೆ ಎಂಬುದನ್ನೂ ಜನತೆಗೆ ಸ್ಫುಟವಾಗಿ ನಿರೂಪಿಸಿದೆ. ಜನತೆಯಲ್ಲಿ ಮೂಡಿದ ಈ ಭರವಸೆಯೇ ಚುನಾವಣೆಯ ನಂತರದಲ್ಲಿ ಉಂಟಾದ ಪಕ್ಷದ ಜನಪ್ರಿಯತೆಯ ನಿಶಿತ ಏರಿಕೆಗೆ ಹಾಗೂ ಅದರ ವ್ಯವಸ್ಥಿತ ವಿಸ್ತರಣೆಗೆ ಗಮನಾರ್ಹ ಸಂಗತಿಯಾಗಿವೆ.

ಸಮಸ್ಯೆಗಳ ಸ್ವರೂಪ: ಚುನಾವಣಾ ನಂತರದ ಸಮಸ್ಯೆಗಳನ್ನೂ ಮೂರು ವರ್ಗಗಳಾಗಿ ವಿಂಗಡಿಸಬಹುದು, ಮೊದಲನೆಯದಾಗಿ ಸಂಕ್ರಮಣಕಾಲದ ರಾಜಕೀಯಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳಿವೆ. ಪಕ್ಷಗಳ ಆಂತರಿಕ ಸಂಬಂಧ, ಹಲವು ಪಕ್ಷಗಳ ಸಂಯೋಜಿತ ಸಚಿವಾಲಯಗಳ ಅಸ್ಥಿರ ಸ್ವರೂಪ, ಪಕ್ಷಾಂತರ ಇತ್ಯಾದಿಗಳೆಲ್ಲ ಈ ಗುಂಪಿನೊಳಗೆ ಬರುವ ಸಮಸ್ಯೆಗಳಾಗಿವೆ. ಎರಡನೇ ವರ್ಗಕ್ಕೆ ಸೇರಿದ ಸಮಸ್ಯೆಗಳೆಂದರೆ ನಮ್ಮ ಸಂವಿಧಾನ ರಚನೆಯಿಂದ ಮೊಳಕೆಯೊಡೆಯುವಂಥವು. ಆದರೂ ಉದ್ಭವಿಸಿದ್ದಿರಲಿಲ್ಲ ಅಥವಾ ಈಗಿನಷ್ಟು ಗಂಭೀರವಾಗಿ ಮುಖಾಮುಖಿಯಾಗಿರಲಿಲ್ಲ. ಮೂರನೆಯದಾಗಿ ಆರ್ಥಿಕ, ರಕ್ಷಣೆ, ಗೃಹ ಮತ್ತು ವಿದೇಶೀ ವ್ಯವಹಾರ ಕ್ಷೇತ್ರಗಳಿಗೆ ಸಂಬಂಧಿಸಿದ ಬಹುಪದರಗಳ ಸಮಸ್ಯೆಗಳಿವೆ. ಅವುಗಳ ಕಾಂಗ್ರೆಸ್ ಸರ್ಕಾರದ ದೋಷಪೂರ್ಣ ನೀತಿ

ನಿಯಮಗಳಿಂದಾಗಿ ಉದ್ಭವಿಸಿದ್ದು ಈಗಂತೂ ತೀರಾ ಜಟಿಲವಾಗಿ ಬಿಟ್ಟಿವೆ. ಮೊದಲನೇ ವರ್ಗದ ಸಮಸ್ಯೆಗಳು ತತ್‌ಕ್ಷಣದಲ್ಲಿ, ಅತೀ ಆಸಕ್ತಿ, ಕುತೂಹಲಕಾರಿ ಸಮಸ್ಯೆಗಳಾಗಿದ್ದು, ಸಾಮಾನ್ಯವಾಗಿ ಸಾರ್ವಜನಿಕರ ಟೀಕೆ, ಚರ್ಚೆಗಳನ್ನೂ ಗರಿಷ್ಠ ಮಟ್ಟಕ್ಕೆನ್ನುವಂತೆ ಪ್ರಚೋದಿಸುತ್ತವೆ. ಆದರೆ ಅವು ಉಳಿದೆರಡು ವರ್ಗಗಳ ಸಮಸ್ಯೆಗಳಿಗಿಂತಲೂ ಕಡಿಮೆ ಪ್ರಾಮುಖ್ಯತೆ ಪಡೆದವು ಎಂದು ಹೇಳಬಹುದು. ಈ ಸಮಸ್ಯೆಗಳನ್ನೂ ಸರಿಯಾಗಿ ನಿಭಾಯಿಸಲಿಲ್ಲವಾದರೆ, ಅವು ದೇಶದ ಐಕ್ಯತೆ ಹಾಗೂ ಹಿತಾಸಕ್ತಿಗಳನ್ನೂ ಗಂಭೀರವಾಗಿ ಗಂಡಾಂತರಕ್ಕೀಡು ಮಾಡುತ್ತವೆ.

**ರಾಜ್ಯಪಾಲರುಗಳ ವರ್ತನೆ**

ಚುನಾವಣೆಗಳ ನಂತರ ಡೆಲ್ಲಿ ಮತ್ತು ಮದ್ರಾಸ್‌ಗಳ ಹೊರತಾಗಿ ಬೇರೆಲ್ಲಾ ಒಂದೇ ಪಕ್ಷ ಸ್ಪಷ್ಟ ಬಹುಮತಗಳಿಸಲು ಶಕ್ತವಾಗಲಿಲ್ಲವಾದ್ದರಿಂದ, ಕಾಂಗ್ರೆಸ್‌ಗೆ ಪರ್ಯಾಯವಾಗಿ ಕಾಂಗ್ರೆಸ್ಸೇತರ ಸರ್ಕಾರ ರಚಿಸುವುದು ಸಾಧ್ಯವಾಗಲಿಲ್ಲವೆಂಬುದೇ ಮೊದಲ ಸಮಸ್ಯೆಯಾಗಿತ್ತು. ಪರಿಸ್ಥಿತಿಯ ಅಗತ್ಯ, ಒತ್ತಡಗಳನ್ನೂ ಮನಗಂಡು ಹಾಗೂ ಚುನಾವಣಾ ಘೋಷಣೆಗಳ ಪರವಾಗಿ ನಿಲ್ಲುವ ಸಲುವಾಗಿ ಕಾಂಗ್ರೆಸ್ಸೇತರ ಪಕ್ಷಗಳು ಒಂದೆಡೆ ಕಲೆತು ಪಂಜಾಬ್, ಬಿಹಾರ್, ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಸಮ್ಮಿಶ್ರ ಸರ್ಕಾರಗಳನ್ನು ರಚಿಸಲು ಮುಂದಾದವು. ರಾಜಾಸ್ತಾನ ಮತ್ತು ಉತ್ತರ ಪ್ರದೇಶಗಳಲ್ಲಿ ಇನ್ನೂ ಕೂಡಾ, ಸಾರ್ವಜನಿಕರ ವಿರೋಧದ ದವಡೆಯ ಪ್ರತಿಯಾಗಿಯೂ ರಾಜ್ಯಗಳ ರಾಜ್ಯಪಾಲರುಗಳ ನೆರವಿನಿಂದ ಅಧಿಕಾರದ ಚುಕ್ಕಾಣಿ ಹಿಡಿಯಲು ಕಾಂಗ್ರೆಸ್ ಪ್ರಯಾಸ ಪಟ್ಟು ಪ್ರಯತ್ನಿಸಿತು. ಉತ್ತರ ಪ್ರದೇಶದಲ್ಲಿ ಬಹಳಕಾಲ ತನ್ನ ಆಳ್ವಿಕೆಯನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ರಾಜಾಸ್ತಾನದಲ್ಲಿ ಹಲವಾರು ಅಡ್ಡದಾರಿಗಳನ್ನೂ ಬಳಸಿ, ಅಂತೂ ತಮ್ಮ ಬಹುಮತವನ್ನು ಗಣನೀಯವಾಗಿ ಹೆಚ್ಚಿಸಿಕೊಂಡವೆಂದೇ ಹೇಳಬೇಕು.

ಈ ಮೇಲಿನ ಪ್ರಸಂಗಗಳಲ್ಲಿ ಆನಂತರ ಮಧ್ಯಪ್ರದೇಶದಲ್ಲಿ ಮಿಶ್ರಾ ಸರ್ಕಾರದ ಪತನದ ಸಂದರ್ಭದಲ್ಲಿ, ಪುನಃ ಇತ್ತೀಚೆಗೆ ಪಶ್ಚಿಮ ಬಂಗಾಳ, ಹರಿಯಾಣ, ಪಂಜಾಬಗಳಲ್ಲಿ ರಾಜ್ಯಪಾಲರುಗಳ ಮಧ್ಯವರ್ತಿ ವರ್ತನೆ–ವ್ಯವಹಾರಗಳು ಆ ಮಹತ್ವದ ಸ್ಥಾನದ ಘನತೆಯನ್ನೂ, ಸಾಂವಿಧಾನಿಕ ಘನತೆ ಗಾಂಭೀರ್ಯಗಳನ್ನು ಮಸುಕು ಮಾಡಿವೆ, ಅಧೋಗತಿಗಿಳಿಸಿವೆ. ರಾಜ್ಯಪಾಲರುಗಳು ಕೇಂದ್ರ ಸರ್ಕಾರದ ಪ್ರತಿನಿಧಿಗಳಾದುದರಿಂದ ಅವರ ವರ್ತನೆ, ವ್ಯವಹಾರ ಕ್ರಮಗಳ ಸಂಪೂರ್ಣ ಹೊಣೆಗಾರಿಕೆಯನ್ನು ಕೇಂದ್ರ ಸರ್ಕಾರವೇ ಹೊರಬೇಕಾಗುತ್ತದೆ. ರಾಜ್ಯಪಾಲರುಗಳ ಕ್ರಮಗಳನ್ನು ಪರಿಗಣನೆಗೆ ತೆಗೆದುಕೊಳ್ಳದಿರುವ ಮೂಲಕ ಕೇಂದ್ರ ಸರ್ಕಾರವು ತನ್ನದೇ ಸದುದ್ದೇಶ, ಧ್ಯೇಯಗಳ ಬಗೆಗೆ ಅಪನಂಬುಗೆಯನ್ನು ಸೃಷ್ಟಿ ಮಾಡಿದೆ,

ಹಾಗೂ ತಾನು ಆ ಪ್ರಾಧಿಕಾರವನ್ನೂ ಕೇವಲ ಹೊಸ ಮುಖವಾಗಿಟ್ಟು ಆ ಕಚೇರಿಯನ್ನು ತನ್ನದೇ ಆದ ಪಕ್ಷಧ್ಯೇಯಗಳನ್ನೂ ಸಾದಿಸಿಕೊಳ್ಳಲು ಹವಣಿಸುತ್ತಿದೆ ಎಂಬುದು ಸ್ಪಷ್ಟವಾಗುತ್ತವೆ. ಕೆಲವೊಂದು ಕಡೆಗಳಲ್ಲಿ ರಾಜ್ಯಪಾಲರುಗಳನ್ನು ಚುನಾಯಿಸಬೇಕೆಂಬ ಮಾತು ಕೇಳಿಬರುತ್ತಿದೆ. ಆದರೆ ಅದು ಸಮಸ್ಯೆಯನ್ನು ಪರಿಹರಿಸುತ್ತದೆಂದು ನನಗನ್ನಿಸುತ್ತಿಲ್ಲ. ವಿರಳವಾದ ಸನ್ನಿವೇಶಗಳನ್ನು ಬದಿಗಿಟ್ಟು ನೋಡಿದರೆ ರಾಜ್ಯಪಾಲರು ಒಬ್ಬ ಸಾಂವಿಧಾನಿಕ ಮುಖ್ಯಸ್ಥರು ಮಾತ್ರ. ಆದ್ದರಿಂದ ಈ ಹುದ್ದೆಗೆ ನೇಮಕಗೊಳ್ಳುವವರು ಸಮಗ್ರ ದೃಷ್ಟಿಯುಳ್ಳವರೂ, ನ್ಯಾಯಬದ್ಧ ರೀತಿಯಲ್ಲಿ ತಮ್ಮ ವಿವೇಚನೆಯನ್ನು ಬಳಸಬಲ್ಲವರೂ ಹಾಗೂ ಜನತೆಗೆ ಅವರ ನಿಷ್ಪಕ್ಷಪಾತ ನಿಲುವಿನಲ್ಲಿ ಸಾಕಷ್ಟು ಭರವಸೆ ಇರುವಂಥವರೂ ಆಗಿರಬೇಕಾಗುತ್ತದೆ. ಜನತೆಯಿಂದ ತಿರಸ್ಕೃತ ರಾಜಕಾರಣಿಗಳು ಅಥವಾ ನಿವೃತ್ತ ನಾಗರಿಕ ಆಡಳಿತ ಅಧಿಕಾರಿಗಳು–ಇಂಥವರನ್ನು ಆಯ್ಕೆ ಮಾಡುವ ಬದಲು ಸರ್ಕಾರವು ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳತ್ತ ತನ್ನ ಕಣ್ಣು ಹೊರಳಿಸಿದರೆ ಉತ್ತಮವೆಂದು ನನ್ನ ಆಲೋಚನೆ ಇದೆ. ನ್ಯಾಯಮೂರ್ತಿಗಳ ನಿವೃತ್ತಿ ದಿನಾಂಕಗಳು ಹಾಗೂ ಖಾಲಿಯಾಗಲಿರುವ ರಾಜ್ಯಪಾಲರ ಹುದ್ದೆಗಳು– ಅವುಗಳನ್ನು ಆದ್ಯಾತಾನುಸಾರ ಭರ್ತಿ ಮಾಡುವ ವಿಧಾನಕ್ಕೆ ಅನುಗುಣವಾಗಿ ಒಂದು ಯಾದಿಯನ್ನು ತಯಾರಿಸಿ ಅನುಸರಿಸಬಹುದು. ಅಂಥ ಒಂದು ಸಂಪ್ರದಾಯವನ್ನೂ ಹಾಕಿಕೊಂಡು ಅನ್ವಯಿಸುವುದು ಸಾಧ್ಯವಾದಲ್ಲಿ ಸಂಬಂಧಪಟ್ಟ ರಾಜ್ಯ ಸರ್ಕಾರದ ಸಮ್ಮತಿಯಾಗಲೀ, ಗೃಹ ಸಚಿವಾಲಯದ ಇಷ್ಟ, ಸಹಮತಿಗಳಾಗಲೀ ಸಂಬಂಧ ಹೊಂದಿರುವುದಿಲ್ಲ.

**ಸಮ್ಮಿಶ್ರ ಸರ್ಕಾರಗಳ ಕಾರ್ಯಾಚರಣೆ**

ಆಡಳಿತಾತ್ಮಕ ಮಟ್ಟದಲ್ಲಿ, ಸಮ್ಮಿಶ್ರ ಸರ್ಕಾರಗಳು ಕಾಂಗ್ರೆಸ್‌ಗೆ ಒಂದು ಉತ್ತಮ ಪರ್ಯಾಯವನ್ನು ನೀಡಿದುವಾದರೂ, ಕಾಂಗ್ರೆಸ್‌ಗೆ ಸಮತೂಕವಾಗಿ ನೀತಿ ಸಂಹಿತೆಗಳನ್ನಾಗಲೀ, ಕಾರ್ಯಕ್ರಮ ನಿಯೋಜನೆಗಳನ್ನಾಗಲೀ ಮಾಡುವಲ್ಲಿ ಸಾಮಯಿಕ ಸ್ವರೂಪವನ್ನು ಕಾಯ್ದುಕೊಳ್ಳಲಿಲ್ಲ. ವಾಸ್ತವವಾಗಿ ನನಗನ್ನಿಸುವಂತೆ ಅವುಗಳ ಉದ್ದೇಶವೂ ಅದಾಗಿರಲಿಲ್ಲ. ಈ ಸಮ್ಮಿಶ್ರ ಸ್ವರೂಪದ ಸರ್ಕಾರಗಳ ಕೆಲವು ಘಟಕಗಳು, ಸಮ್ಮಿಶ್ರ ಸರ್ಕಾರಗಳು ಕೆಲವೊಂದು ಸೈದ್ಧಾಂತಿಕ ಪರಿಮಿತಿಗಳೊಳಗೆ ಕೆಲಸ ಮಾಡಬೇಕಾಗುತ್ತದೆಂಬುದನ್ನು ಒಪ್ಪಲು ಸಿದ್ಧವಿಲ್ಲ ಮತ್ತು ಸರ್ಕಾರಗಳನ್ನು ತಮ್ಮ ತಮ್ಮ ಪಕ್ಷಗಳ ಧೋರಣೆ, ನೀತಿಗಳನ್ನೂ ಕಾರ್ಯರೂಪಕ್ಕೆ ತರಲು ಸಾಧನ ಮಾಧ್ಯಮಗಳನ್ನಾಗಿ ಬಳಸಿಕೊಳ್ಳುವ ಪ್ರಯತ್ನ ಮಾಡಿದುವು. ಈ ಏಕಪಕ್ಷೀಯ ನಿಷ್ಠೆ ಮತ್ತು ಹೊಣೆಗಾರಿಕೆ ಪ್ರಜ್ಞೆಯ ಕೊರತೆಯ ಪರಿಣಾಮವಾಗಿ, ಈ ಸರ್ಕಾರಗಳು ಆಂತರಿಕ ಆತಂಕಗಳಿಗೆ ಒಳಗಾದುವು ಮತ್ತು ಯಾವಾಗಲೂ

ಅನಿಶ್ಚಿತತೆಯ ನೆರಳಿನಡಿಯಲ್ಲೇ ಕೆಲಸ ಮಾಡಬೇಕಾಯಿತು. ಆದಾಗ್ಯೂ ಇಷ್ಟೆಲ್ಲ ನ್ಯೂನತೆಗಳ ನಡುವೆಯೂ, ಸೀಮಿತ ಸಂಪನ್ಮೂಲಗಳು, ರಾಜ್ಯಗಳ ಹಕ್ಕುಗಳು ಮತ್ತು ಕಾಂಗ್ರೆಸ್ಸೇತರ ಸರ್ಕಾರಗಳನ್ನು ಉರುಳಿಸಲು ಕೇಂದ್ರದ ತಂತ್ರಗಾರಿಕೆಯ ನಿರಂತರವಾದ ಪ್ರಯತ್ನಗಳು ಇವೆಲ್ಲದರ ಮಧ್ಯೆಯೂ ಈ ಸಮ್ಮಿಶ್ರ ಸರ್ಕಾರಗಳು ತಮ್ಮ ಅಧಿಕಾರ, ಆಳ್ವಿಕೆಯ ಅಲ್ಪಾವಧಿಯಲ್ಲೇ ಹಲವಾರು ಸಂಗತಿಗಳಲ್ಲಿ ಜನರಿಗೆ ಉಪಶಮನ, ಸಮಾಧಾನಗಳನ್ನೂ ಒದಗಿಸಿವೆ. ಈ ಸರ್ಕಾರಗಳು ಪವಾಡ ಸದೃಶ ಅದ್ಭುತ ಸಾಧನೆಗಳನ್ನೂ ಮಾಡುವವೆಂದು ನಿರೀಕ್ಷಿಸಿದವರಿಗೆ ನಿರಾಶೆಯಂತೂ ಆಗಿದೆ.

ಈ ಸಮ್ಮಿಶ್ರ ಸರ್ಕಾರಗಳ ಪ್ರಯೋಗವು ವಾಸ್ತವಿಕತೆ ಮತ್ತು ವಸ್ತುನಿಷ್ಠ ರಾಜಕೀಯ ಮೌಲ್ಯಮಾಪನದ ಅಭ್ಯಾಸಗಳಿಗೆ ಅವಕಾಶ ನೀಡಿದಲ್ಲಿ ಅದೇ ಒಂದು ಪ್ರಯೋಜನವಾದೀತು. ಈ ಸರ್ಕಾರಗಳ ಸಂರಚನೆಯು ರಾಜಕೀಯ ಅಸ್ಪೃಶ್ಯತೆಯನ್ನು ಅಳಿಸುವ ನಿಟ್ಟಿನಲ್ಲಿ ಒಂದು ಸ್ತುತ್ಯರ್ಹ ಹೆಜ್ಜೆಯೇ ಸರಿ. ವಿರೋಧಿಯ ದೃಷ್ಟಿಕೋನವನ್ನು ಅನುಮೋದಿಸಲು ಸಿದ್ಧವಿರುವಿಕೆ, ಹಲವು ವೈವಿಧ್ಯ, ವೈರುಧ್ಯಗಳು ಇದ್ದಾಗೂ ವಿಭಿನ್ನ ಪಕ್ಷಗಳು ಒಟ್ಟಾಗಿ ಕೆಲಸ ಮಾಡಲು ಇಚ್ಛೆ ಇರುವಿಕೆ ಇದು ಪ್ರಜಾತಾಂತ್ರಿಕ ಪ್ರವೃತ್ತಿ ಮತ್ತು ರಾಷ್ಟ್ರದ ಮುಲಭೂತ ಏಕತೆಯ ನಿದರ್ಶನ. ಈ ಸಮ್ಮಿಶ್ರ ಸರ್ಕಾರಗಳ ಭವಿಷ್ಯ ಏನೇ ಇರಲಿ, ಈ ಸಾಧನೆಯನ್ನು ಕಾಯ್ದುಕೊಂಡು, ಕಾಪಾಡಿಕೊಳ್ಳಲು ಶಕ್ತರಾಗುತ್ತೇವೆಂದು ನಾನು ಆಶಿಸುತ್ತೇನೆ.

## ಸಂಸದೀಯ ಪ್ರಜಾಪ್ರಭುತ್ವ–ಒಂದು ಪ್ರಯೋಗ

ಈ ಸಮ್ಮಿಶ್ರ ಸರ್ಕಾರಗಳ ಆಂತರಿಕ ಆತಂಕಗಳು ಮತ್ತು ರಾಜಕೀಯ ಅಸ್ಥಿರತೆಗಳು ಅಂದರೆ ಈ ಸರ್ಕಾರಗಳನ್ನೂ ಅಲುಗಾಡಿಸಲು ನಡೆಯುವ ನಿರಂತರ ಪ್ರಯತ್ನಗಳು ಅಥವಾ ಆ ಸರ್ಕಾರಗಳ ಬೀಳುವಿಕೆ–ಇವೆಲ್ಲವೂ ಹಲವು ಧುರೀಣರು ಪ್ರಸ್ತುತ ಅಸ್ತಿತ್ವದಲ್ಲಿರುವ (ರೂಢಿಯಲ್ಲಿರುವ) ಮಂತ್ರಾಲಯ ಸ್ವರೂಪದ ಸರ್ಕಾರವನ್ನು ಬದಿಗೊತ್ತಿ ಅಧ್ಯಕ್ಷೀಯ ಆಡಳಿತ ವ್ಯವಸ್ಥೆಗೆ ಶಿಫಾರಸು ಮಾಡಲು ಪ್ರೇರೇಪಿಸಿವೆ. ಶ್ರೀ ಅಶೋಕ ಮೆಹ್ತಾರವರು ಈ ವ್ಯವಸ್ಥೆಯನ್ನೂ ರಾಜ್ಯಮಟ್ಟದಲ್ಲಿ ಮಾತ್ರವೇ ಪರಿಚಯಿಸಿ, ಅಳವಡಿಸಲು ಸಲಹೆ ಮಾಡಿದ್ದಾರೆ. ಆದರೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಈ ಭೇದವನ್ನು ಏಕೆ ಕಾಣಲಾಗಿದೆ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ವಾಸ್ತವಾಂಶ ಏನೆಂದರೆ ಬ್ರಿಟನ್ ಹಾಗೂ ಅಮೆರಿಕಾಗಳಲ್ಲಿ ಸರ್ಕಾರದ ಸ್ವರೂಪಗಳು ಅವುಗಳ ಇತಿಹಾಸದಿಂದ ಉದ್ಭವಿಸಿ ಬೆಳೆದು ಬಂದಂಥವಾಗಿವೆ. ಒಬ್ಬರಲ್ಲಾ ಒಬ್ಬರನ್ನು ಅನುಕರಿಸಲು ಪ್ರಯತ್ನಿಸುವ ಬದಲಿಗೆ, ನಮ್ಮದೇ ಆದ ಪ್ರವೃತ್ತಿ, ಮನೋಧರ್ಮಗಳಿಗೆ ಒಪ್ಪುವಂಥ ಪ್ರಾಜಾತಾಂತ್ರಿಕ ರೂಢಿ, ಪದ್ಧತಿಗಳನ್ನೂ ನಿರೂಪಿಸುವ ಪ್ರಯತ್ನ

ಮಾಡೋಣ. ವಾಸ್ತವವಾಗಿ ಕಳೆದ ಐವತ್ತು ವರ್ಷಗಳ ಅವಧಿಯಲ್ಲಿ ನಾವು ಸಂಸದೀಯ ಸರ್ಕಾರ ವ್ಯವಸ್ಥೆಯೊಂದಿಗೆ ಕಾರ್ಯನಿರತರಾಗಿದ್ದೇವೆ. ನಾವು ಇದನ್ನೂ ನಮ್ಮ ಬದಲಾದ ರಾಜಕೀಯ ಸ್ವರೂಪಕ್ಕೆ ಸೂಕ್ತವಾಗಿ ಹೊಂದುವಂತೆ ರೂಪಿಸಲು ಪ್ರಯತ್ನಿಸಿದರೆ ಹೆಚ್ಚು ಫಲಕಾರಿಯಾಗಿರುತ್ತದೆ. ಬ್ರಿಟಿಷ್ ಪಾರ್ಲಿಮೆಂಟಿನ ದ್ವಿಪಕ್ಷೀಯ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಸಂಪ್ರದಾಯಗಳನ್ನು ಅನುಸರಿಸುವ ಬದಲಿಗೆ, ಬಹು ಪಕ್ಷ ಮಾದರಿಯ ಭಾರತೀಯ ರಾಜ ನೀತಿಗೆ ಸರಿಹೊಂದುವಂಥ ಕಟ್ಟು ಕಟ್ಟಳೆಗಳನ್ನೂ ರೂಢಿಸೋಣ, ಆಗ ಸಂಕ್ರಮಣ ಕಾಲದ ಅಸ್ಥಿರತೆಯನ್ನು ನಿವಾರಿಸಿಕೊಳ್ಳಲು ಸಾಧ್ಯವಾಗಲಿದೆ. ಉದಾಹರಣೆಗೆ, ಯಾವುದೇ ಸರ್ಕಾರವೂ ಶಾಸಕಾಂಗದಲ್ಲಿ ಅವಿಶ್ವಾಸಮತ ಚಲಾವಣೆಯಾದ ಹೊರತು ರಾಜೀನಾಮೆ ನೀಡುವುದಿಲ್ಲ ಎಂಬ ಪದ್ಧತಿಯನ್ನು ಅಂಗೀಕರಿಸಬಹುದಾಗಿದೆ. ಮೇಲಿನ ಸಂಪ್ರದಾಯಕ್ಕೆ ಹೊಂದಿಕೊಂಡಂತೆ ಒಪ್ಪಬಹುದಾದ ಇನ್ನೊಂದು ವಾಡಿಕೆ ಎಂದರೆ ಒಂದು ವೇಳೆ ಶಾಸಕಾಂಗದ ಬಹುಜನರು ಸಭಾನಾಯಕರನ್ನು ಶಾಸಕರ ಸಭೆಯನ್ನು ಕರೆಯುವಂತೆ ಕೋರಿದಲ್ಲಿ ತಪ್ಪದೇ ಕರೆಯಬಹುದಾಗಿದೆ.

**ಪಕ್ಷಾಂತರ ಸಮಸ್ಯೆ**

ಶಾಸಕರು ಪಕ್ಷದಿಂದ ಹೊರನಡೆಯುವುದು–ಪಕ್ಷಾಂತರದ ಪಿಡುಗು ಸರ್ಕಾರದ ರಚನೆ ಅಥವಾ ಬೀಳುವಿಕೆಗೆ ಬಹಳಷ್ಟು ಬಾರಿ ಕಾರಣವಾಗಿದೆ ಎಂಬ ಟೀಕೆಗೆ ಆಸ್ಪದವಾಗಿದೆ. ಇದು ಹೊಸ ಪ್ರವೃತ್ತಿ ಏನೂ ಅಲ್ಲ. ಕಾಂಗ್ರೆಸನ್ನೂ ಚುನಾವಣೆಯ ತಕ್ಷಣ ಪೂರ್ವದಲ್ಲಿ ಬಿಡುವುದು ಮತ್ತು ಚುನಾವಣೆಯ ನಂತರ ಮರುಸೇರ್ಪಡೆಗೊಳ್ಳುವುದು ಭಾರತೀಯ ರಾಜಕಾರಣದ ಅತೀ ಪರಿಚಿತ ಪ್ರವೃತ್ತಿ, ಲಕ್ಷಣವಾಗಿದ್ದು ಬಹಳಷ್ಟು ಪಕ್ಷಗಳ ಉದಯ ಮತ್ತು ಬೇರೆ ಪಕ್ಷಗಳ ವಿಸರ್ಜನೆಗಳನ್ನೂ ಇದಕ್ಕೆ ಸಮೀಕರಿಸಬಹುದಾಗಿದೆ. ಕಾಂಗ್ರೆಸನ್ನು ಬಿಟ್ಟಿಲ್ಲದಿರುವವರೂ ಪಕ್ಷದೊಳಗೂ ಕೂಡ ತಮ್ಮ ಗುಂಪು–ನಿಷ್ಠೆಯನ್ನೂ ಕೂಡಾ ಆಗಾಗ್ಯೆ ಬದಲಿಸುತ್ತಿರುತ್ತಾರೆ. ಇವೆಲ್ಲದರ ಪರಿಣಾಮವಾಗಿ, ಹೊರಗಿನಿಂದ ಕಾಂಗ್ರಸ್‌ನ ಹೆಸರು ಒಂದೇ ಆಗಿದ್ದರೂ, ಕಾಂಗ್ರೆಸ್ ಸಚಿವರುಗಳು ನಿರಂತರ ಅಸ್ಥಿರತೆಗಳ ಆತಂಕದಲ್ಲಿರುತ್ತಾರೆ. ಹಲವು ಬಾರಿ ಕೆಳಗೆ ಬಿದ್ದುದೂ ಆಗಿದೆ. ಸ್ವಾತಂತ್ರ ಬಂದನಂತರ ಕಾಂಗ್ರೆಸ್ ಹಾಗೂ ಕಾಂಗ್ರೆಸ್ ಮಂದಿ ಒಂದು ಸಿದ್ಧಾಂತಕ್ಕೆ ಏಕೋ ನಿಷ್ಠೆಯಿಂದಿದ್ದು ಒಂದೇ ದಿಕ್ಕಿನಲ್ಲಿ ಹೋಗುವುದನ್ನು ಅವಗಣಿಸಿದ್ದಾರೆ. ಆದ್ದರಿಂದ ಅವರು ಈ ರೀತಿ ವರ್ತಿಸುವುದಾಗಿದೆ. ಪಕ್ಷಾಂತರದ ಅಪರಾಧ ಪ್ರಜ್ಞೆ ಇರುವವರಲ್ಲಿ ನೂರಕ್ಕೆ ಶೇ. ತೊಂಭತ್ತೊಂಭತ್ತು ಮಂದಿ ಒಂದೇ ಕಾಂಗ್ರೆಸಿಗರು ಅಥವಾ ಮಾಜಿ ಕಾಂಗ್ರೆಸಿಗರು. ಪಕ್ಷಗಳ ನೀತಿ ಧೋರಣೆ, ಕಾರ್ಯಕ್ರಮ ಪ್ರಣಾಳಿಕೆಗಳು ಒಳ್ಳೆಯ ಸಿದ್ಧಾಂತಗಳನ್ನಾಧರಿಸಿ ನಿರೂಪಿತಗೊಂಡು ಹರಳುಗಟ್ಟಿ

ಘನೀಕೃತವಾದಂತೆಲ್ಲ ಅವುಗಳ ಸಂಘಟನೆಗಳು ಶಕ್ತಿಯುತವಾಗುತ್ತವೆ. ಜನಸಮುದಾಯಗಳಲ್ಲಿ ಅರಿವು ವೃದ್ಧಿಸುತ್ತದೆ ಮತ್ತು ಪಕ್ಷದ ವೇದಿಕೆಯನ್ನಾಧರಿಸಿ ತಮ್ಮ ಮತ ಚಲಾಯಿಸುವ ಜಾಣ್ಮೆ ಬಲಿತು, ಪಕ್ಷಾಂತರದ ಪಿಡುಗು ತಾನೇ ತಾನಾಗಿ ಇಳಿಮುಖವಾಗುತ್ತದೆ.

ಶಾಸಕಾಂಗ ಶಿಸ್ತು ಕ್ರಮಗಳು, ಅವಕಾಶ ವಾದಿ ಪಕ್ಷಾಂತರಕ್ಕೆ ಪ್ರತಿಯಾಗಿ ಇರಲೆಂದು ಸಲಹೆ ಮಾಡಲಾಗಿದೆ. ಕಾನೂನು ಮೊರೆ ಹೋಗುವ ಹಾಗೂ ಕಾನೂನು ರೂಪಿಸುವವರನ್ನು ನಿಯಂತ್ರಿಸುವ ಬದಲು, ಈ ವಿಷಯವನ್ನೂ ರೂಢಿಗತ ಪದ್ಧತಿ ಹಾಗೂ ಜನಾಭಿಪ್ರಾಯದ ಒತ್ತಡ, ಒತ್ತಾಸೆಗಳಿಗೆ ಬಿಟ್ಟು ಬಿಡುವುದೇ ಲೇಸು. ಪ್ರತಿಯೊಬ್ಬ ಶಾಸಕನೂ ತನ್ನ ಪಕ್ಷಕ್ಕೆ ಮಾತ್ರವೇ ಅಲ್ಲದೆ ತನ್ನ ಕ್ಷೇತ್ರ ಮತ್ತು ರಾಷ್ಟ್ರಕ್ಕೆ ಜವಾಬ್ದಾರನಾಗಿರುತ್ತಾನೆ. ಆತನ ಈ ಎಲ್ಲಾ ವಿಭಿನ್ನ ಋಣ ಬಾಧ್ಯತೆಗಳನ್ನೂ ಒಂದು ಕಾನೂನ ಚೌಕಟ್ಟಿಗೆ ಸೀಮಿತಗೊಳಿಸುವುದು ಅಷ್ಟು ಸುಲಭದ ಮಾತಲ್ಲ. ಆದಾಗ್ಯೂ ಎಲ್ಲಾ ರಾಜಕೀಯ ಪಕ್ಷಗಳು ಒಂದು ನೀತಿ ಸಂಹಿತೆಯನ್ನು ಅಂಗೀಕರಿಸಿ ಅಳವಡಿಸುವುದು ಸಾಧ್ಯವಾದಲ್ಲಿ, ಈ ಅವಕಾಶವಾದಿ ಪ್ರವೃತ್ತಿಯನ್ನೂ ಸಮರ್ಥವಾಗಿ ತಡೆಗಟ್ಟಲು ಸಾಧ್ಯವಿದೆ. ಬ್ರಿಟಿಷ್ ಮಾದರಿಯಲ್ಲಿ ವ್ಯಕ್ತಿ–ಅಭ್ಯರ್ಥಿಗಳಿಗೆ ಮತ ಚಲಾಯಿಸುವ ಪದ್ಧತಿ ಬಿಟ್ಟು, ಪಕ್ಷಕ್ಕಾಗಿ ಮತ ಚಲಾಯಿಸುವ ಅಭ್ಯರ್ಥಿಗಳ ಪಟ್ಟಿಗಳನ್ನು ಚುನಾಯಿಸುವ ವಿಧಾನವನ್ನು ಅಳವಡಿಸಿಕೊಳ್ಳುವುದು ಸಾಧ್ಯವಾದಲ್ಲಿ ಪ್ರಸಕ್ತ ರಾಜಕೀಯದ ಹಲವಾರು ಪಿಡುಗು ಪೀಕಲಾಟಗಳನ್ನು ನಿವಾರಿಸಿಕೊಳ್ಳಬಹುದಾಗಿದೆ. ಪ್ರಾಯಃ ಈ ಎರಡೂ ಪದ್ಧತಿಗಳ ಒಂದು ಸಂಯೋಗ ಸ್ವರೂಪದ ಮಾದರಿಯನ್ನು, ಪಶ್ಚಿಮ ಜರ್ಮನಿಯ ಮಾದರಿಯಲ್ಲಿ ಅಳವಡಿಸಿಕೊಳ್ಳುವುದೇ ನಮ್ಮ ರಾಷ್ಟ್ರಕ್ಕೆ ಅತೀ ಉತ್ತಮ ರೀತಿಯಲ್ಲಿ ಹೊಂದಿಕೊಳ್ಳಬಹುದು.

**ಕೇಂದ್ರ–ರಾಜ್ಯಗಳ ಸಂಬಂಧಗಳು**

ಕೇಂದ್ರದಲ್ಲಿ ಕಾಂಗ್ರೆಸ್ ಆಳ್ವಿಕೆ ಮುಂದುವರೆದಿದೆಯಾದರೆ, ರಾಜ್ಯಗಳಲ್ಲಿ ಹಲವಾರು ಕಾಂಗ್ರೆಸ್ಸೇತರ ಸರ್ಕಾರಗಳಿವೆ. ಇದು ಕೇಂದ್ರ–ರಾಜ್ಯಗಳ ಸಂಬಂಧಗಳಲ್ಲಿ ಸಾಕಷ್ಟು ರಾಜಕೀಯ ಪ್ರಾಮುಖ್ಯತೆಯ ವಿಷಯಕ್ಕೆ ತನ್ನ ಕೊಡುಗೆ ನೀಡಿದೆ. ನಮ್ಮ ಸಂವಿಧಾನವು ಸ್ವರೂಪ ರಚನೆಯಲ್ಲಿ ಪ್ರಾತಿನಿಧಿಕ ಪ್ರಜಾತಾಂತ್ರಿಕವಾಗಿದ್ದರೂ ಬಹಳಷ್ಟು ಸವಲತ್ತುಗಳು ಏಕ ನಿಷ್ಠೆ. ಪೂರ್ವಾಗ್ರಹ ದೃಷ್ಟಿಯನ್ನೇ ಸ್ಪಷ್ಟಪಡಿಸುತ್ತದೆ. ಕಳೆದ ಇಪ್ಪತ್ತು ವರ್ಷಗಳಲ್ಲಿದ್ದ ರಾಜಕೀಯ ಪರಿಸ್ಥಿತಿ ಮತ್ತು ಅಸ್ತಿತ್ವದಲ್ಲಿರುವ ಯೋಜನೆ ಹಾಗೂ ಆರ್ಥಿಕ ವ್ಯವಸ್ಥೆಗಳು ಕೇಂದ್ರವನ್ನೇ ಬಹುಮಟ್ಟಿಗೆ ಅಧಿಕಾರಯುತವಾಗಿ ಮಾಡಿದೆ. ಹಿಂದೆ ಕಾಂಗ್ರೆಸ್ ಎಲ್ಲಾ ಹಂತಗಳಲ್ಲೂ ತಾನೇ ತಾನಾಗಿದ್ದೂ, ಕೇಂದ್ರದ

ಪ್ರಭುತ್ವವನ್ನು ಯಾರೂ ಸವಾಲು ಮಾಡುವಂತಿರಲಿಲ್ಲ ಅಥವಾ ಅಧಿಕಾರ ದುರುಪಯೋಗ ಮಾಡಿದೆ ಎಂದು ಕೇಂದ್ರವನ್ನು ದೂರುತ್ತಿರಲಿಲ್ಲ. ಕಾಂಗ್ರೆಸ್ ಪರಮಾಧಿಕಾರ (ಹೈಕಮಾಂಡ್)ವೂ ಕೂಡಾ ತನ್ನ ಪ್ರಭಾವ ಬಳಸಿ ರಾಜ್ಯ–ಕೇಂದ್ರಗಳ ಸಂಬಂಧಗಳು ಸುಗಮವಾಗಿರುವಂತೆ ನೋಡಿಕೊಳ್ಳುತ್ತಿತ್ತು. ಆದರೀಗ ಸನ್ನಿವೇಶ ಬದಲಾಗಿದೆ. ಹಲವು ರಾಜ್ಯಗಳು ಕಾಂಗ್ರೇಸ್ಸೇತರ ಸರ್ಕಾರಗಳ ಆಳ್ವಿಕೆಯಲ್ಲಿವೆ. ಅವರುಗಳು ತಮ್ಮ ಕಲ್ಪನೆಯಂತೆಯೇ ಜನರಿಗೆ ಸೇವೆ ನೀಡಲು ಅಪೇಕ್ಷಿಸುತ್ತಾರೆ. ಅದಕ್ಕೆ ಅವರಿಗೆ ಪೂರ್ಣ ಅವಕಾಶ ಕೊಡಬೇಕಲ್ಲದೆ ಅವರ ಬಾಧ್ಯತೆಗಳ ನಿರ್ವಹಣೆಗೆ ಅಗತ್ಯವಾಧ ಸಂಪನ್ಮೂಲಗಳನ್ನೂ ಒದಗಿಸಬೇಕು. ರಾಷ್ಟ್ರದ ಸಾರ್ವಭೌಮಾಧಿಕಾರವು ಕೇಂದ್ರ ಸರ್ಕಾರದಲ್ಲಿ ಹುದುಗಿದೆ. ರಾಜ್ಯ ಸರ್ಕಾರಗಳೊಂದಿಗೆ ಕೇಂದ್ರದ ವ್ಯವಹಾರಗಳಲ್ಲಿ ಕೇಂದ್ರ ಸರ್ಕಾರವು ತನ್ನ ಜವಾಬ್ದಾರಿಯ ಪ್ರಜ್ಞೆಯೊಂದಿಗೆ ಉದಾರ ಹಾಗೂ ನಿಷ್ಪಕ್ಷಪಾತ ರೀತಿಯಿಂದ ನಡೆದುಕೊಳ್ಳಲಿ. ಅದರ ಬದಲಾಗಿ, ಪಕ್ಷದ ಸಂಕುಚಿತ ನಿಲುವಿನಿಂದ ವಿಷಯಗಳನ್ನು ಪರಿಶೀಲಿಸುತ್ತಿದ್ದರೆ ಮತ್ತು ತಮಗಿರುವ ಸಾಂವಿಧಾನಿಕ ಅಧಿಕಾರವನ್ನು ಕ್ಷುಲ್ಲಕ ವಿಧಾನ, ಸಮರ್ಥನೆಗಳಿಗೆ ಬಳಸುತ್ತಿದ್ದರೆ ಅವರು (ಹೈಕಮಾಂಡನವರು) ರಾಷ್ಟ್ರದ ಹಿತಾಸಕ್ತಿಗಳಿಗೆ ಧಕ್ಕೆ ಉಂಟು ಮಾಡುತ್ತಿರುತ್ತಾರೆ. ರಾಷ್ಟ್ರವಾದಿಗಳು ಹತಾಶರಾಗುತ್ತಾರೆ. ಅಸಮಗ್ರತೆ, ಬಿರುಕುಗಳನ್ನುಂಟು ಮಾಡಲು ಆಸಕ್ತರಾದವರು ಪರಿಸ್ಥಿತಿಯನ್ನು ದುರುಪಯೋಗ ಪಡಿಸಿ, ಕೇಂದ್ರದ ಪರಮೋಚ್ಚ ಅಧಿಕಾರಕ್ಕೆ ಸವಾಲು ಎಸೆದು, ದುರ್ಬಲಗೊಳಿಸುತ್ತಾರೆ. ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಕಮ್ಯುನಿಸ್ಟ್‌ರ ನಡಾವಳಿ ಇದಕ್ಕೊಂದು ನಿದರ್ಶನ. ಕೇಂದ್ರ–ರಾಜ್ಯಗಳ ಆತಂಕಗಳು ದೇಶದ ಐಕ್ಯತೆಗೆ ಆಘಾತಕಾರಿ ಆಗಿರಬಾರದೆಂದಿದ್ದಲ್ಲಿ, ನಮ್ಮ ಸಂವಿಧಾನದ ಸ್ವರೂಪವನ್ನೂ ಏಕರೂಪಗೊಳಿಸಬೇಕು. ಇನ್ನೊಂದೆಡೆ ಆರ್ಥಿಕ ಮತ್ತಿತರ ಶಕ್ತಿಮೂಲಗಳು ಸದ್ಯ ಕೇಂದ್ರದಲ್ಲಿ ಘನೀಕೃತಗೊಂಡಿರುವುದನ್ನು ಆಯಾ ರಾಜ್ಯಗಳಿಗೆ ವಿಕೇಂದ್ರೀಕರಣ ಮಾಡಬೇಕು, ತನ್ಮೂಲಕ ಅವುಗಳು ತಮ್ಮ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು

**ಖಾಯಂ ಆರ್ಥಿಕ ಆಯೋಗ ಅಗತ್ಯ**

ಆರ್ಥಿಕವಾಗಿ ಸದ್ಯ ರಾಜ್ಯಗಳು ಕೇಂದ್ರದ ಮೇಲೆ ದಯನೀಯವಾಗಿ ಅವಲಂಬಿಸಿವೆ. ಸಂವಿಧಾನವು ಸಂಪನ್ಮೂಲಗಳನ್ನೂ, ಋಣಬಾಧ್ಯತೆ, ಹೊಣೆ ನಿಭಾವಣೆಗಳನ್ನೂ ಹೇಗೆ ಪ್ರತ್ಯೇಕಿಸಿದೆ ಎಂದರೆ ಆಡಳಿತ, ಸಾರ್ವಜನಿಕ ಹಿತಾಸಕ್ತಿ ನಿರ್ವಹಣೆ ಮತ್ತು ಪ್ರಗತಿಪರ ಕಾರ್ಯಕ್ರಮಗಳ ಹೊಣೆ ಆಯಾ ರಾಜ್ಯ ಸರ್ಕಾರಗಳದ್ದೇ ಆಗಿದ್ದು ಸ್ಥಿತಿಸ್ಥಾಪಕ ಸ್ವರೂಪವಿರುವ ಮತ್ತು ಆದಾಯ ಕರಗಳ

ಸಂಪನ್ಮೂಲಗಳು ಕೇಂದ್ರದೊಂದಿಗೇ ಇವೆ. ಆದಾಯ ತೆರಿಗೆ, ಅಬಕಾರಿ ಶುಲ್ಕ ಬಾಬತ್ತುಗಳಿಂದ ರಾಜ್ಯಗಳಿಗೆ ಹಣಕಾಸು ನಿಯೋಗದ ಶಿಫಾರಸಿನ ಮರ್ಜಿಗೆ ಅನುಗುಣವಾಗಿ ಆದಾಯವಿದೆಯಾದರೂ, ಕೇಂದ್ರದಿಂದ ವಿವೇಚನಾಧಿಕಾರ ಬಳಸಿ ಕೊಡಬಹುದಾದ ಅನುದಾನಗಳ ಮೇಲೆ ಅವಲಂಬಿಸಬೇಕಾಗುತ್ತದೆ. ೧೯೫೧–೫೨ರಲ್ಲಿ ರಾಜ್ಯಗಳ ಖರ್ಚು ವೆಚ್ಚಗಳ ಶೇ. ೨೯.೪ರಷ್ಟು ಆದಾಯ ಕೇಂದ್ರದ ಸಂಪನ್ಮೂಲಗಳಿಂದ ಬಂದಿತ್ತು. ೧೯೬೬–೬೭ಕ್ಕೆ ಪರಿಷ್ಕೃತ ಅಂಕಿ–ಅಂಶಗಳ ರೀತ್ಯಾ, ಈ ಮೊತ್ತವು ಶೇ. ೫೫.೩ಕ್ಕೆ ಏರಿದೆ. ಅದೇ ಅವಧಿಯಲ್ಲಿ ಕೇಂದ್ರದ ವಿವೇಚನಾಧಿಕಾರಕ್ಕೊಳಪಟ್ಟು ಮಂಜೂರಾದ ಅನುದಾನಗಳು ರಾಜ್ಯಗಳ ಖರ್ಚುವೆಚ್ಚಗಳ ಮೊತ್ತ ಪ್ರಮಾಣದ ಶೇ. ೭ ರಿಂದ ೧೯ ರಷ್ಟಕ್ಕೆ ಏರಿದುವು. ಸಹಜವಾಗಿಯೇ ಈ ವಿದ್ಯಮಾನಗಳ ಸ್ಥಿತಿಗತಿಗಳ ಜವಾಬ್ದಾರಿಯುತ ಸರ್ಕಾರದ ಸ್ಫೂರ್ತಿಯನ್ನು ಪಣಕ್ಕೊಡ್ಡುತ್ತವೆ. ಇದನ್ನು ಬದಲಿಸಬೇಕಾಗಿದೆ. ಈ ಉದ್ದೇಶಕ್ಕೆಂದೇ ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕೆಂಬ ಬೇಡಿಕೆಯನ್ನು ಮಂಡಿಸಲಾಗಿದೆ. ಆದರೆ ನನಗನ್ನಿಸುವಂತೆ, ಸಂವಿಧಾನವನ್ನು ತಿದ್ದುಪಡಿಗೆ ಒಳಮಾಡದೆಯೇ, ಒಂದು ಹೊಂದಾಣಿಕೆಯ ವ್ಯವಸ್ಥೆಯನ್ನು ಬದಲಾದ ಪರಿಸ್ಥಿತಿಯ ಅಗತ್ಯಗಳನ್ನೂ ಪೂರೈಸುವ ಮಟ್ಟಿಗೆ ರೂಪಿಸಬಹುದಾಗಿದೆ. ಪ್ರತೀ ಐದು ವರ್ಷಗಳಿಗೊಮ್ಮೆ ನೇಮಕಗೊಳ್ಳುವ ಬದಲು ಹಣಕಾಸು ನಿಯೋಗವನ್ನು ಒಂದು ಖಾಯಂ ಆಡಳಿತಾಂಗವಾಗಿ ಮಾಡಬಹುದು ಹಾಗೂ ೨೮೨ನೇ ಪರಿಚ್ಛೇದದ ಅಡಿಯಲ್ಲಿ ಕೇಂದ್ರ ಸರ್ಕಾರದ ವಿವೇಚನಾಧಿಕಾರದಿಂದ ಕೊಡ ಮಾಡಲಾಗುವ ಸಾಲ ಸವಲತ್ತು, ಅನುದಾನ, ಸೌಲಭ್ಯಗಳನ್ನು ಈ ನಿಗಮದ ವ್ಯಾಪ್ತಿಯೊಳಗೆ ತರಬಹುದಾಗಿದೆ.

**ತೆರಿಗೆ ಸ್ವರೂಪದ ಮರು ಪರಿಶೀಲನೆ**

ಇದೇ ಸಂದರ್ಭದಲ್ಲಿ ರಾಜ್ಯಗಳು ತಮ್ಮದೇ ಸಂಪನ್ಮೂಲಗಳನ್ನು ಹೇಗೆ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುತ್ತವೆಂಬುದನ್ನೂ ಗಮನಿಸುವುದೂ ಅಗತ್ಯ. ಕರಭಾರವನ್ನೂ ಕಡಿಮೆ ಮಾಡುವುದು ಮತ್ತು ಕರಸಂಗ್ರಹಕ್ಕೆ ಸದ್ಯ ಕಾರ್ಯ ಶೀಲವಾಗಿರುವ ವ್ಯವಸ್ಥೆಯನ್ನು ಸರಳೀಕರಿಸುವುದು ಇವೆರಡೂ ಅಗತ್ಯವೆಂಬುದು ನಿಸ್ಸಂದೇಹ ವಿಷಯವಾಗಿದೆ. ಆದರೆ ಹಲವು ರಾಜ್ಯ ಸರ್ಕಾರಗಳ ತೆರಿಗೆ ಸಂಗ್ರಹ ನಿಯಮಾವಳಿಗಳು ಸರ್ಕಾರದ ಜವಾಬ್ದಾರಿಗಿಂತಲೂ ರಾಜಕೀಯ ಘೋಷಣೆಗಳಂತೆ ಇದ್ದು ಪ್ರಭಾವ ಬೀರಲು ಹವಣಿಸುತ್ತಿವೆ. ವರಮಾನ ತೆರಿಗೆ, ಮಾರಾಟ ತೆರಿಗೆಗಳ ಭೂ ತೆರಿಗೆ ವಿಷಯದಲ್ಲಿ ಇತ್ತೀಚೆಗೆ ಹಲವಾರು ಕ್ರಾಂತಿಕಾರಿ ಕಲ್ಪನೆಗಳು ಹುಟ್ಟಿಕೊಂಡಿವೆ; ಈ ಎಲ್ಲಾ ಸಲಹೆ, ಅಂದಾಜು ಮಸೂದೆಗಳನ್ನೂ ವೈಜ್ಞಾನಿಕ ವಿಶ್ಲೇಷಣೆಗೆ ಒಪ್ಪಿಸಬೇಕು, ಆನಂತರ ಅಂತಿಮ ತೀರ್ಮಾನ ಕೈಗೊಳ್ಳಬೇಕು. ಏಕೆಂದರೆ

ಈ ತೆರಿಗೆಗಳು ಈವರೆಗೂ ವರಮಾನದ ಪ್ರಮುಖ ಸಂಪನ್ಮೂಲಗಳಾಗಿದ್ದುವು. ಹಾಗಿಲ್ಲದಿದ್ದರೂ ಕೂಡಾ, ಹಣಕಾಸು ನಿಗಮವು ಇಡೀ ತೆರಿಗೆ ಸಂಗ್ರಹ ಸಂರಚನೆಯನ್ನು ಪರೀಕ್ಷಿಸುವ ನಿಚ್ಚಳ ಅಗತ್ಯವಿದೆ. ೧೯೫೩–೫೪ರಲ್ಲಿ ಕೊನೆಯ ತೆರಿಗೆ ವಿಚಾರಣಾ ನಿಗಮವನ್ನು ರಚಿಸಲಾಗಿತ್ತು. ಆಗ ತಾನೇ ಮೊದಲನೇ ಯೋಜನೆಯನ್ನು ಜಾರಿಗೆ ತರಲಾಗಿತ್ತು.

ಈಗಾಗಲೇ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದವೆ. ೧೯೫೧–೫೨ರಲ್ಲಿ ಕೇಂದ್ರ ಹಾಗೂ ರಾಜ್ಯಗಳ ತೆರಿಗೆ ಆದಾಯದ ಒಟ್ಟು ಮೊತ್ತವೇ ೬೩೮ ಕೋಟಿ ರೂ.ಗಳೆಂದು ಲೆಕ್ಕಾಚಾರ ಮಾಡಲಾಗಿತ್ತು. ೧೯೬೭–೬೮ರಲ್ಲಿ ಅಂದಾಜು ಲೆಕ್ಕಾಚಾರ ಪ್ರಕಾರ ೩೪೯೯ ಕೋಟಿ ರೂ.ಗಳಾಗಿವೆ. ಈ ಮಧ್ಯದ ಅವಧಿಯಲ್ಲಿ ಭೂತೆರಿಗೆಯಿಂದ ಆದಾಯ ದುಪ್ಪಟ್ಟಾಗಿದೆ. ಅದಾಯ ತೆರಿಗೆ ಮತ್ತು ಕಂಪೆನಿ ತೆರಿಗೆಗಳು ನಾಲ್ಕು ಪಟ್ಟಾಗಿದೆಯಾದರೆ ಮಾರಾಟ ತೆರಿಗೆ ಒಂಭತ್ತು ಪಟ್ಟು ಹೆಚ್ಚಿದೆ ಹಾಗೂ ಅಬ್ಕಾರಿ ಶುಲ್ಕು ಹದಿನೆಂಟು ಪಟ್ಟು ಏರಿದೆ. ಈ ತೆರಿಗೆಗಳು ಹಂಗಾಮಿ ಅವಧಿಗಳ ಆಧಾರದ ಮೇಲಿಂದ ಏರಿಕೆಯಾಗುತ್ತಿದ್ದು, ನಂತರ ಏರಿಕೆಯನ್ನು ಖಾಯಂ ಆಗಿ ಸ್ಥಿರ ಪಡಿಸಲಾಗುತ್ತಿದೆ. ಅಷ್ಟೇ ಅಲ್ಲದೆ, ಕೆಲವು ವಸ್ತು ವಿಶೇಷಗಳು ಅಬ್ಕಾರಿ ಶುಲ್ಕ, ಮಾರಾಟ ತೆರಿಗೆ, ಆಕ್ಟ್ರೈ ಶುಲ್ಕಗಳು ಮತ್ತು ತೀರುವಳಿ ತೆರಿಗೆಗಳು– ಇವುಗಳಿಗೆ ಒಳಪಟ್ಟಂತೆ ಇದ್ದು ಸಹಜವಾಗಿಯೇ ಅವುಗಳ ಬೆಲೆ ಏರಿಕೆಯಾಗುತ್ತದೆ. ಕಳೆದ ಹದಿನೈದು ವರ್ಷಗಳಲ್ಲಿ ವರಮಾನ ವಿಂಗಡಣೆಯಲ್ಲಿ ವ್ಯಾಪಕ ಬದಲಾವಣೆಗಳಾಗಿವೆ. ರೂಪಾಯಿಯ ಮೌಲ್ಯ ತೀರಾ ಕೆಳಕ್ಕೆ ಹೋಗಿದೆ, ರಾಜ್ಯಗಳು ಪುನರ್ವಿಂಗಡಣೆಗೊಂಡಿವೆ ಮತ್ತು ಇದೀಗ ಯೋಜನೆಯೇ ಮರು ಪರಿಶೀಲನೆಯಲ್ಲಿದೆ. ಈ ಎಲ್ಲಾ ಅಂಶಗಳ ಕಾರಣದಿಂದಾಗಿ, ತೆರಿಗೆ ವಿಚಾರಣಾ ನಿಗಮವು ಅಗತ್ಯವೇ ಆಗಿದೆ. ಈ ನಿಗಮವು ಆರ್ಥಿಕ ಅಭಿವೃದ್ಧಿ, ಬಂಡವಾಳ ನಿಯೋಜನೆ, ಸಾರ್ವಜನಿಕ ಕ್ಷೇಮಾಭಿವೃದ್ಧಿ, ಭೇದ ವಿಂಗಡಣೆಗಳನ್ನು ತೆಗೆದು ಹಾಕುವ ಅಗತ್ಯವಿದೆ. ಅಧಿಕಾರ ವಿಕೇಂದ್ರಿಕೃತ ಸರ್ಕಾರದ ಅವಶ್ಯಕತೆಗಳು ಮತ್ತು ಆ ನಿಟ್ಟಿನಲ್ಲಿ ಅಸ್ತಿತ್ವದಲ್ಲಿರುವ ತೆರಿಗೆಗಳು ಹಾಗೂ ತೆರಿಗೆ ವ್ಯವಸ್ಥೆಯ ಸ್ವರೂಪದ ಸಂಬಂಧವಾದ ಶಿಫಾರಸ್ಸುಗಳನ್ನೂ ಮಾಡಬಹುದು.

## ರೂಪಾಯಿ ಅಪಮೌಲ್ಯವು ಅರ್ಥ ವ್ಯವಸ್ಥೆಗೆ ತಡೆ ಒಡ್ಡಿದೆ

ರಾಷ್ಟ್ರದ ಅರ್ಥವ್ಯವಸ್ಥೆಯು ಹಲವಾರು ವರ್ಷಗಳಿಂದ ಆತಂಕಕ್ಕೆ ಕಾರಣವಾಗುತ್ತಿದೆಯಲ್ಲದೆ ಇತ್ತೀಚೆಗೆ ಅದು ತೀರಾ ಕ್ಷಿಪ್ರಗತಿಯಲ್ಲಿ ಕ್ಷೀಣಿಸಿದೆ. ೧೯೫೬ರ ಆರಂಭದಲ್ಲೇ ಆರ್ಥಿಕ ಕುಸಿತದ ಚಿಹ್ನೆಗಳು ಗೋಚರಿಸಲಾರಂಭಿಸಿವೆ. ಪಾಕಿಸ್ತಾನದೊಂದಿಗಿನ ಕದನದ ಅವಧಿಯಲ್ಲೇ ವಿದೇಶೀ ನೆರವು, ಆಮದುಗಳು

ಸ್ಥಗಿತಗೊಂಡ ಕಾರಣದಿಂದ ಆಮದು ಕಚ್ಚಾವಸ್ತುಗಳು ಹಾಗೂ ಹೊರಗಿನಿಂದ ಬರುವ ಬಿಡಿಭಾಗಗಳನ್ನವಲಂಬಿಸಿ ಉತ್ಪಾದನೆ ಮಾಡುತ್ತಿದ್ದ ಕೈಗಾರಿಕೆಗಳು ತೀವ್ರವಾಗಿ ತೊಂದರೆಗೀಡಾದುವು. ಆದರೆ ಆ ಸಮಯದಲ್ಲಿ ಅಂಥ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಲು ದೇಶ ಮಾನಸಿಕವಾಗಿ ಸಿದ್ಧತೆ ಮಾಡಿಕೊಂಡಿತ್ತು. ಅದರಿಂದಾಗಿ, ಆಮದು ಪದಾರ್ಥಗಳಿಗೆ ಪರ್ಯಾಯ ಕಾರ್ಯಕ್ರಮಗಳನ್ನೂ ಬೃಹತ್ ಪ್ರಮಾಣದಲ್ಲಿ ಹಮ್ಮಿಕೊಳ್ಳಲಾಯಿತಲ್ಲದೆ, ಆತ್ಮವಿಶ್ವಾಸ ಬೇರೂರಲಾರಂಭಿಸಿದ್ದು ರಾಷ್ಟ್ರವು ಸ್ವಾವಲಂಬನೆಗೆ ಸಕಲ ಸನ್ನದ್ಧವಾಯಿತೆಂಬ ಭಾವನೆ ನೆಲೆಗೊಳ್ಳಲಾರಂಭಿಸಿತ್ತು. ಆದರೆ ಈ ಪ್ರಯತ್ನಗಳಿಗೆ ಫಲ ದೊರೆಯುವ ಮುನ್ನವೇ ಸರ್ಕಾರವು ವಿದೇಶೀ ಒತ್ತಡಗಳಿಗೆ ಮಣೆಯಿತಾಗಿ ರೂಪಾಯಿ ಮೌಲ್ಯವನ್ನು ಇಳಿಸಿತು. ೭೫೦ ಕೋಟಿ ರೂಪಾಯಿಗಳ ಸಂಯುಕ್ತ ವಿದೇಶೀ ಸಾಲಗಳು ಲಭ್ಯವಾಗುವ ಭರವಸೆಯನ್ನಾಧರಿಸಿ ಆಮದು ನೀತಿಯನ್ನು ಸಡಿಲಿಸಿತು. ನಿಯಮವು ರಾಷ್ಟ್ರದ ವ್ಯಾಪಾರ, ವಾಣಿಜ್ಯೋದ್ಯಮಗಳನ್ನು ಪ್ರತಿಕೂಲ ಪರಿಣಾಮದತ್ತ ದೂಡಿತು. ವಿದೇಶಿ ಸಾಲ ಮೊತ್ತ ಏರಿತು, ಅಂತೆಯೇ ಬೆಲೆಗಳೂ ಏರಿದುವು. ಆದರೆ ಉತ್ಪಾದನಾ ಗತಿ ಶೀಘ್ರಗತಿಯದಾಗಿ ಬೆಳೆಯಲಿಲ್ಲ. ಕೆಲವೊಂದು ಕೈಗಾರಿಕೋದ್ಯಮಗಳಲ್ಲಿ ೧೯೬೬ನೇ ಸಾಲಿನ ಉತ್ಪಾದನೆ ೧೯೬೫ರಲ್ಲಾದುದಕ್ಕಿಂತಲೂ ಕಡಿಮೆಯಾಗಿತ್ತು. ರಫ್ತು ವಿಸ್ತರಣೆಯ ಧ್ಯೇಯವೂ ಸಾಕಾರಗೊಳ್ಳಲಿಲ್ಲ. ವ್ಯಾಪಾರ–ವಾಣಿಜ್ಯ ಲೆಕ್ಕಪತ್ರಗಳ ಅಂಕಿ ಅಂಶಗಳ ಪ್ರಕಾರ ಪಾವತಿ ಬಾಕಿ ಖಾತೆಯಲ್ಲಿ ೭೭೩.೪ ಕೋಟಿ ರೂಪಾಯಿಗಳನ್ನೂ ತೋರಿಸುತ್ತಿದ್ದು, ಅದು ಅದರ ಹಿಂದಿನ ವರ್ಷದ್ದಕ್ಕಿಂತಲೂ ಹೆಚ್ಚಿನದಾಗಿದೆ. ವಿದೇಶೀ ವ್ಯಾಪಾರ ಕ್ಷೇತ್ರದಲ್ಲಿ ಅದೇ ರೀತಿಯ ಪ್ರವೃತ್ತಿ ಮುಂದುವರೆದಿದೆ. ರೂಪಾಯಿ ಅಪಮೌಲ್ಯ ಪ್ರವೃತ್ತಿಯು ನಮ್ಮ ಅರ್ಥ ವ್ಯವಸ್ಥೆಗೆ ಹಾನಿ ಮಾಡಿದೆ.

ಇಷ್ಟಾಗಿಯೂ, ಅಂತರರಾಷ್ಟ್ರೀಯ ಶಕ್ತಿಗಳು ನಮ್ಮ ಮೇಲೆ ಇನ್ನೂ ಒಂದು ಬಾರಿ ಅಪಮೌಲ್ಯ ಪ್ರಸಂಗದ ಪ್ರಹಾರವನ್ನು ಹೇರಲು ಹೆಣಗುತ್ತಿರುವಂತೆ ತೋರುತ್ತಿದೆ. ಒಂದುವೇಳೆ ಹಾಗೇನಾದರೂ ಅದಲ್ಲಿ ತಾವು ರಾಜೀನಾಮೆ ಕೊಡುವುದಾಗಿ ಬೆದರಿಕೆ ಹಾಕುವ ಮೂಲಕ ಉಪಪ್ರಧಾನಿ ಮೊರಾರ್ಜಿ ದೇಸಾಯಿಯವರು ಸ್ಥಿರತೆ ಮುಂದುವರಿಯುವ ಮುನ್ಸೂಚನೆ ನೀಡಿದ್ದಾರೆ. ಆದರೂ, ಪ್ರತಿಕೂಲ ಪಾವ್ತಿ ಶುಲ್ಕ ಬಾಕಿ ಏರಿಕೆಗೆ ಕಾರಣವಾದ ಮುಲಭೂತ ಅನಾರೋಗ್ಯಕರ ಪರಿಸ್ಥಿತಿಗಳಿಗೆ ಹಾಗೂ ವಿದೇಶೀ ಸರ್ಕಾರಗಳತ್ತ ನಮ್ಮ ಭಿಕ್ಷಾಪಾತ್ರೆಯನ್ನು ಮುಂಚಾಚುವಂತೆ ಮಾಡುವ ಪರಿಸ್ಥಿತಿಗಳಿಗೆ ಪರಿಹಾರ ದೊರೆತ ಹೊರತು, ಸದ್ಯ ಇರುವ ಮೌಲ್ಯವನ್ನೂ ಕೂಡಾ ಕಾಪಾಡಿಕೊಳ್ಳುವುದೂ ಸಾಧ್ಯವಾಗಲಾರದು.

**ಹಂಗಾಮಿ ಸಿದ್ಧಾಂತ ಕೆಲಸಕ್ಕೆ ಬಾರದು**

ಸಾಮಯಿಕ ಪರಿಹಾರೋಪಾಯಗಳನ್ನು ಬೆಳೆಯುತ್ತಿರವ ಹಣದುಬ್ಬದ ಪರಿಣಾಮಗಳಿಗೆ ಪ್ರತಿಯಾಗಿ ಎದುರಿಸುವುದಕ್ಕೂ, ಅರ್ಥವ್ಯವಸ್ಥೆಗೆ ಸಂಚಲನ ಉಂಟು ಮಾಡುವುದಕ್ಕೂ ಬೇಕೆಂದು ಬರಮಾಡಿಕೊಳ್ಳಲಾಗುತ್ತಿದೆ. ಆದರೆ ಸರ್ಕಾರವು ಪರಿಸ್ಥಿತಿಯ ಗಂಭೀರತೆಯನ್ನು ಮನಗಾಣುತ್ತಿರುವಂತೆ ಕಾಣುತ್ತಿಲ್ಲ. ಮತ್ತು ಅದನ್ನು ಜಾಗರೂಕತೆಯಿಂದ ವಿಶ್ಲೇಷಿಸಲು ತುಸುವಾದರೂ ಪ್ರಯತ್ನವನ್ನು ಮಾಡುತ್ತಿದ್ದಂತಿಲ್ಲ. ಸಮಸ್ಯೆಗಳ ಸಾಂದರ್ಭಿಕ ಪರಿಶೀಲನೆ ಮತ್ತು ತಾತ್ಕಾಲಿಕ ಉಪಶಮನಗಳನ್ನು ಅಳವಡಿಸಿಕೊಳ್ಳುವುದರಿಂದ ಪರಿಹಾರ ಸಾಧ್ಯವಿಲ್ಲ.

೧೯೬೬ರ ಜೂನ್‌ನಲ್ಲಿ ಕೈಗೊಂಡ ರೂಪಾಯಿ ಅಪಮೌಲ್ಯ ಮಾಡುವ ನಿರ್ಣಯವು ಅರ್ಥ ವ್ಯವಸ್ಥೆಯಲ್ಲಿನ ಇಳಿಗತಿಗೆ ಕಚ್ಚಾವಸ್ತುಗಳ ಆಮದು ಕೊರತೆಯೇ ಕಾರಣವೆಂಬ ವಿಶ್ಲೇಷಣೆಯನ್ನು ಆಧರಿಸಿ ಮಾಡಲಾಗಿತ್ತು. ಮತ್ತು ಈ ವರ್ಷದ ಆಯವ್ಯಯದಲ್ಲಿ ಈ ಅಂಶವನ್ನು ಕಡೆಗಣಿಸಲಾಗಿದೆ ಮತ್ತು ಬರಗಾಲ ಹಾಗೂ ಕೃಷಿ ಉತ್ಪಾದನೆಯಲ್ಲಿ ಕೊರತೆಗಳನ್ನು ಆರ್ಥಿಕ ಮುಗ್ಗಟ್ಟಿಗೆ ಕಾರಣಗಳೆಂದು ದೂರಲಾಗಿದೆ. ಕೆಲವು ಇಂಜನಿಯರಿಂಗ್ ಕೈಗಾರಿಕೋದ್ಯಮಗಳು ರೈಲ್ವೆ ಇಲಾಖೆಯ ಕಾರ್ಯಕಾರಿ ಕೋರಿಕೆ, ಆದೇಶಗಳ ನೆರವಿನಿಂದಾಗಿ ಕ್ರಿಯಾಶೀಲವಾಗಿವೆ. ಆದರೆ ರೈಲ್ವೆ ವಿಸ್ತರಣಾ ಕಾರ್ಯಕ್ರಮದಲ್ಲಿ ಸ್ಥಗಿತತೆಯಾದಂದು ಈ ಆದೇಶ, ಉತ್ಪಾದನೆಗಾಗಿ ಕೋರಿಕೆ–ಇವೆಲ್ಲವೂ ಅನಗತ್ಯ, ವ್ಯರ್ಥವೆಂಬುದು ಮನವರಿಕೆಯಾಗಿಲ್ಲ.

**ವಿಷಯಾಂತರ ತಂತ್ರಗಳು**

ರಾಷ್ಟ್ರದ ಆರ್ಥಿಕ ಧೋರಣೆಯಲ್ಲಿ ಕೆಲವೊಂದು ಕ್ರಾಂತಿಕಾರಕ ಬದಲಾವಣೆಗಳನ್ನು ಬೇಡುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಕೇಂದ್ರದಲ್ಲಿನ ಕಾಂಗ್ರೆಸ್ ಸರ್ಕಾರವು ತನ್ನ ಬಹಳಷ್ಟು ಶ್ರಮ, ಶಕ್ತಿ ಹಾಗೂ ಸಮಯಗಳನ್ನೂ ಕೆಲವೊಂದು ಮುಖ್ಯ ಸಮಸ್ಯೆಗಳ ಕುರಿತು, ಅಂದರೆ ಯಾವುವು ಭಾರತೀಯ ಅರ್ಥವ್ಯವಸ್ಥೆಯ ಮೂಲಭೂತ ಸಮಸ್ಯೆಗಳಿಗೆ ಏನೇನೂ ಸಂಬಂಧ ಹೊಂದಿಲ್ಲವೋ ಅಂಥವನ್ನು ಕುರಿತು ವ್ಯಯ ಮಾಡುತ್ತಿದೆ. ಹೀಗೆ, ರಾಜಧನಗಳು, ಹಜ಼ಾರಿ ವರದಿ, ಬ್ಯಾಂಕುಗಳ ರಾಷ್ಟ್ರೀಕರಣ ಪ್ರಸ್ತಾವನೆ, ಜನರಲ್ ಇನ್ಸೂರೆನ್ಸ್ ಇವೆಲ್ಲವೂ ಸಾದ್ಯಂತವಾಗಿ ಚರ್ಚಿಸಲ್ಪಟ್ಟಿವೆ. ಅಷ್ಟೇ ಅಲ್ಲದೆ ಈ ಪ್ರಶ್ನೆಗಳಿಂದಾಗಿ ದೇಶದ ಆರ್ಥಿಕ ಪ್ರಗತಿ ಕುಂಠಿತವಾಗುತ್ತಿದೆ ಎಂಬಂತೆ ಬಿಂಬಿತವಾಗಿದೆ. ವಾಸ್ತವವಾಗಿ ಈ ಪ್ರಶ್ನೆಗಳು ಸಾಕಷ್ಟು ಅಂತರದಿಂದಲೂ ಕೂಡಾ ನಮ್ಮ ಮೂಲಭೂತ ಸಮಸ್ಯೆಗಳಾದ ಆಹಾರದ ಅಭಾವ, ಕುಸಿಯುತ್ತಿರುವ ಉತ್ಪಾದನೆ, ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ ಮತ್ತು ಏರುತ್ತಿರುವ ಧಾರಣೆಗಳು. ಇವಾವುದಕ್ಕೂ ಏನೇನೂ ಸಂಬಂಧ ಹೊಂದಿಲ್ಲ

ಮತ್ತು ಯಾವಾಗ ಈ ಸಂಗತಿಗಳು ಮತ್ತೆ ಮತ್ತೆ ಚರ್ಚಿಸಲ್ಪಡುತ್ತವೆಯೋ ಮತ್ತು ಸರ್ಕಾರ ಅವುಗಳನ್ನು ಶಮನಗೊಳಿಸುವ ಯಾವುದೇ ಇಚ್ಛೆ, ಇರಾದೆಗಳ ಸುಳಿವನ್ನೂ ನೀಡುವುದಿಲ್ಲವೋ ಆಗ ಯಾರಿಗೇ ಆದರೂ ಈ ಚರ್ಚೆಗಳ ನಿಜವಾದ ಉದ್ದೇಶ ಜನತೆಯ ಗಮನವನ್ನು ಬೇರೆಡೆಗೆ ತಿರುಗಿಸುವ ವಿಷಯಾಂತರದ ತಂತ್ರವೆಂದೂ, ಗಮನವನ್ನು ನಿರ್ಣಾಯಕ ಸಮಸ್ಯೆಗಳಿಂದ ಬೇರೆಡೆಗೆ ತಿರುಗಿಸುವ ಹಾಗೂ ಕೆಲವೊಂದು ವರ್ಗಗಳ ಮೇಲೆ ಮಾತ್ರವೇ ರಾಜಕೀಯ ಒತ್ತಡವನ್ನೂ ಹಾಕಲು ಈ ಚರ್ಚೆಗಳನ್ನು ಬಳಸುವ ಅನ್ಯೋಪಾಯ ಮಾರ್ಗವೆಂದು ಸಂದೇಹ ಬರುತ್ತದೆ.

## ಬ್ಯಾಂಕುಗಳ ಮೇಲೆ ಸಾಮಾಜಿಕ ಹತೋಟಿ

ಪಾರ್ಲಿಮೆಂಟಿನಲ್ಲಿ ಕಡೆಯ ಅಧಿವೇಶನದಲ್ಲಿ, ಅರ್ಥ ಸಚಿವರಾದ ಶ್ರೀ ಮೊರಾರ್ಜಿ ದೇಸಾಯಿಯವರು, ಬ್ಯಾಂಕಿಂಗ್ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಲು ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡುವುದಾಗಿ ಒಂದು ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯಲ್ಲಿ ಬ್ಯಾಂಕುಗಳ ಮೇಲೆ ಸಾಮಾಜಿಕ ಹತೋಟಿ ವ್ಯವಸ್ಥೆಯ ಕುರಿತು ಘೋಷಿಸಲಾಗಿದೆ. ಅರ್ಥ ಸಚಿವರು ಒಂದು ಆಯೋಗದಿಂದ ಬ್ಯಾಂಕಿಂಗ್ ಸಮಸ್ಯೆಗಳು ಪರೀಕ್ಷಿಸಲ್ಪಡಬೇಕೆಂದು ಸೂಕ್ತವಾಗಿಯೇ ಹೇಳಿರುವರಾದರೂ, ಆಯೋಗದ ವರದಿ ಬರುವವರೆಗೂ ಕಾದಿದ್ದರೆ ಒಳ್ಳೆಯದಿತ್ತು. ಆ ಮೊದಲೇ ತಾವೇ ತಮ್ಮ ಆಲೋಚನೆಯ ಸಾಮಾಜಿಕ ನಿಯಂತ್ರಣ ಯೋಜನೆಯ ಕುರಿತು ಪ್ರಸ್ತಾಪ ಮಾಡಿದ್ದಾರೆ. ನಿಜವಾದ ಸಮಸ್ಯೆ ಇಂದು ನಮ್ಮ ಮುಂದಿರುವುದೆಂದರೆ ಬಂಡವಾಳ ನಿಯೋಜನೆ, ಸಾಮಾಜಿಕ ಹತೋಟಿಯ ಬಂಡವಾಳ ಸಂಗ್ರಹ, ನಿಯೋಜನೆಗಳಿಗೆ ನೆರವು ನೀಡಲಾರದು– ಅಷ್ಟೇ ಅಲ್ಲ ಈ ಯೋಜನೆಯು ಬ್ಯಾಂಕುಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ತೃಪ್ತಿಕರವಾಗಿ ಬಳಕೆ ಮಾಡಿಕೊಳ್ಳುವ ಬಗೆಗೂ ಖಾತರಿ ನೀಡುವುದೂ ಅನುಮಾನವಾಗಿದೆ. ಕೃಷಿ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಬಂಡವಾಳದ ಅಗತ್ಯ ತೀವ್ರವಾಗಿರುವುದರಲ್ಲಿ ಸಂದೇಹವೇ ಇಲ್ಲ. ಅವುಗಳು ಸಾಗುವುದಾದರೂ ಹೇಗೆ? ಅಥವಾ ಅವುಗಳು ಅನಗತ್ಯವೆಂದು ಪರಿಗಣಿಸಲ್ಪಟ್ಟಿವೆಯೋ ಹೇಗೆ? ಸಣ್ಣ ಕೈಗಾರಿಕೆಗಳು ಮತ್ತು ಕೃಷಿ ಕ್ಷೇತ್ರಗಳಿಂದ ಪ್ರತಿನಿಧಿಗಳನ್ನು ನಿರ್ದೇಶಕ ಮಂಡಳಿಯಲ್ಲಿ ಸೇರಿಸಿಕೊಳ್ಳುವ ಪ್ರಸ್ತಾವೆ ಸ್ವಾಗತಾರ್ಹ. ಆದರೆ ಅವರನ್ನೂ ಆಯ್ಕೆ ಮಾಡುವ ಕ್ರಮ ಹೇಗೆ? ಅವರನ್ನು ನಾಮಕರಣ ಮಾಡಬೇಕೆ? ಹಾಗಿದ್ದಲ್ಲಿ, ನಾಮಕರಣ ಪ್ರಕ್ರಿಯೆ ರಾಜಕೀಯ ಲೆಕ್ಕಾಚಾರಗಳಿದ ಆಭಾಸಗಳು ಆಗುವ ಸಾಧ್ಯತೆ ಹೆಚ್ಚು. ಠೇವಣಿದಾರರಿಗೇಕೆ ನಿರ್ದೇಶಕ ಮಂಡಳಿಯಲ್ಲಿ ಪ್ರಾತಿನಿಧ್ಯ ನೀಡಿಲ್ಲವೆಂದು ನನಗೆ ಅಚ್ಚರಿಯಾಗಿದೆ. ಜೊತೆಗೇ ಈ ಯೋಜನೆಯಿಂದ ವಿದೇಶಿ ಬ್ಯಾಂಕುಗಳನ್ನು ಹೊರಗಿಡಲಾಗಿದೆ. ಇದು ಭಾರತೀಯ ಬ್ಯಾಂಕುಗಳಿಗೆ

ಘಾಸಿ ಮಾಡುವುದು ಸಹಜ. ಇಂಥ ರಾಜಕೀಯ ಯೋಜನೆಗಳನ್ನು ಜಾರಿಗೆ ತರುವುದಕ್ಕಿಂತಲೂ ಸರ್ಕಾರ ಬಂಡವಾಳ ಹೂಡಿಕೆಯ ಅಗತ್ಯ, ಕೋರಿಕೆಗಳನ್ನು ಪೂರೈಸಲು ಹೊಸ ಬ್ಯಾಂಕುಗಳನ್ನು ತೆರೆಯಲು ತೀರ್ಮಾನಿಸಿದ್ದರೇ ಒಳ್ಳೆಯದಿತ್ತು.

**ಯೋಜನೆಗೆ ರಜೆ ಇಲ್ಲ:**

ಯೋಜನಾ ಆಯೋಗದ ಬಗೆಗೂ ನಾವು ನಿರಾಶೆಗೊಳಗಾಗಿದ್ದೇವೆ; ನಾಲ್ಕನೇ ಪಂಚವಾರ್ಷಿಕ ಯೋಜನೆಯು ೧೯೬೯ರ ಏಪ್ರಿಲ್ ೧ ರಿಂದ ಆರಂಭವಾಗಬೇಕು ಎಂದು ಸೂಚಿಸುವ ಮೂಲಕ ಒಂದು ಯೋಜನಾ ರಜಾದಿನಕ್ಕೆ ಒಪ್ಪಿಕೊಂಡಿದೆ. ಆದರೆ ಪರಿಸ್ಥಿತಿಯು ಇನ್ನೂ ಹಿರಿದಾದ ಕಾರ್ಯ ಚಟುವಟಿಕೆಗಳಿಗೆ ಕರೆ ನೀಡುತ್ತಿದೆಯೇ ವಿನಾ ಒಂದು ರಜೆ ದಿನ, ವಿರಾಮವನ್ನಲ್ಲ. ಪರಿಸ್ಥಿತಿಗಳು ಕಷ್ಟಕರವಾಗಿರುವಾಗ, ಸರಿಯಾಗಿ ಪರಿಶೀಲಿಸಿದ, ಯೋಜನಾ ಸಹಿತವಾದ ಕಾರ್ಯಕ್ರಮಗಳು ಹೆಚ್ಚಿನ ಅಗತ್ಯವಾಗಿ ಬಿಡುತ್ತವೆ. ಈವರೆಗಿನ ಯೋಜನೆಗಳ ಫಲಶೃತಿಯಾಗಿ ರಾಷ್ಟ್ರದ ಅರ್ಥ ವ್ಯವಸ್ಥೆಯಲ್ಲಿ ಉಂಟಾದ ತೊಂದರೆ, ಬಿರುಕುಗಳನ್ನು ಹೋಗಲಾಡಿಸುವಂಥ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು, ಹಾಗೂ ಅವು ನಮ್ಮ ಅಭಿವೃದ್ಧಿಪಡಿಸಿದ ಸಾಮರ್ಥ್ಯವನ್ನು ಶಕ್ತಿಯನ್ನು ಪಡೆದುಕೊಳ್ಳುವಂಥ ರೀತಿಯಲ್ಲಿರಬೇಕು. ಸದ್ಯದ ಆರ್ಥಿಕ ಕುಸಿತ ಮತ್ತು ಭಾರಿ ಪ್ರಮಾಣದ ನಿರುದ್ಯೋಗ ಸಮಸ್ಯೆಗಳು ಕಳೆದ ಎರಡು ವರ್ಷಗಳಲ್ಲಿ ಉದ್ದೇಶಪೂರ್ವಕವಾಗಿ ಗಮನಾರ್ಹವಾಗಿ ಬದಲಾದ ರೀತಿಗಳಿಂದಾಗಿ ಎನ್ನಬಹುದು. ಯೋಜನೆಯಡಿಯ ಉತ್ಪಾದಕ ಯೋಜನೆಗಳನ್ನೂ ಮೊಟಕುಗೊಳಿಸಿ, ಆಡಳಿತದ ಅನುತ್ಪಾದಕ ವೆಚ್ಚವನ್ನು ಮಾತ್ರ ಹೆಚ್ಚಿಸುತ್ತಾ ಬರಲಾಗಿದೆ, ಅಂಥ ಆಯವ್ಯಯವು ಆರ್ಥಿಕ ಪ್ರಗತಿಗೆ ಅನುಕೂಲಕರವಲ್ಲ. ಆರ್ಥಿಕ ಕುಸಿತದಿಂದ ವರಮಾನಗಳಲ್ಲಿ ಇಳಿಕೆ, ಆಡಳಿತ ವೆಚ್ಚದ ಹೆಚ್ಚಳದಿಂದ ಹಣದುಬ್ಬರವೂ ಉಂಟಾಗುತ್ತವೆ. ತತ್ಪರಿಣಾಮವಾಗಿ, ಎಷ್ಟೆಲ್ಲಾ ಪ್ರಯತ್ನಗಳನ್ನು ಮಾಡಿದರೂ, ಕೊರತೆಯ ಹಣಕಾಸು ಆಯವ್ಯಯ ಅನಿವಾರ್ಯವಾಗಿ ಬಿಡುತ್ತದೆ. ಈ ವಿಷಯದಲ್ಲಿ ನಾವು ವಾಸ್ತವವಾದಿಗಳಾಗೋಣ, ಬರೇ ಸಿದ್ಧಾಂತ ಪ್ರತಿಪಾದಕರಾಗದಿರೋಣ, ನಿರುದ್ಯೋಗಿಗಳ ಸಾಮರ್ಥ್ಯವನ್ನು ಬಳಸಿಕೊಳ್ಳುವ ಸಲುವಾಗಿ ಮತ್ತು ಶೀಘ್ರ ಫಲಪ್ರದ ಯೋಜನೆಗಳನ್ನು ಅಳವಡಿಸಲು ಕೊರತೆಯ ಆಯವ್ಯಯಕ್ಕೆ ಒಂದು ನ್ಯಾಯಬದ್ಧ ಪರಿಹಾರೋಪಾಯವನ್ನು ಹುಡುಕುವುದು ನಿಜವಾಗಲು ಪ್ರಯೋಜನಕರವೆಂದು ನಿರೂಪಿಸಬಲ್ಲುದು.

ಯೋಜನಾ ಆಯೋಗವು ಇಂದು ನಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಅಲ್ಪಾವಧಿ ಹಾಗೂ ದೀರ್ಘಾವಧಿ ಪರಿಹಾರಗಳನ್ನು ಸಲಹೆ ಮಾಡುವ ಪರಿಣಿತನ ಪಾತ್ರ ವಹಿಸಬೇಕಾಗಿದೆ. ಯೋಜನೆ ಎಂದರೆ ವಿವಿಧ ವಲಯಗಳಲ್ಲಿ ಗುರಿ ನಿಗದೀಕರಣ ಮಾತ್ರವಲ್ಲ ಹಾಗೂ ಗುರಿಗಳ ಒಂದು ಅಂಕಗಣಿತಾತ್ಮಕ

ಮಾಪನ ಮಾತ್ರವೂ ಅಲ್ಲ. ಅದು ಕಲ್ಪನಾ ಶಕ್ತಿ, ದೂರದೃಷ್ಟಿ ವಾಸ್ತವಿಕ ಪ್ರಜ್ಞೆ–ಈ ಗುಣಗಳ ಇರುವಿಕೆಯನ್ನು ನಿರೀಕ್ಷಿಸುತ್ತದೆ. ಆದರೆ ಈ ಹಿಂದಿ ಯೋಜನೆಗಳಲ್ಲಿ ಇವೆಲ್ಲವುಗಳ ಗೈರು ಹಾಜರಿಯು ಅವುಗಳ ಅಗತ್ಯವನ್ನು ಸ್ಪಷ್ಟಗೋಚರಗೊಳಿಸಿರುವುದು ದುರದೃಷ್ಟಕರ ಸಂಗತಿಯೇ ಸರಿ.

**ನಾವು ಸ್ವಾವಲಂಬಿಗಳಾಗಿರಬೇಕು**

ಒಂದೇ ಸಮನಾಗಿ ಕೇಳಿ ಬರುತ್ತಿರುವ ಆತಂಕದ ಕೂಗು, ಸಂಪನ್ಮೂಲಗಳ ಕೊರತೆಯ ಕುರಿತದ್ದೇ ಆಗಿದೆ. ಆದರೆ ಈ ದೇಶದಲ್ಲಿ ಸಂಪನ್ಮೂಲಗಳಿಗೆ ಬಡತನವಿದೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಈ ದೇಶದಲ್ಲಿ ಸಾಕಷ್ಟು ಸಂಪನ್ಮೂಲಗಳು– ಮಾನವ, ಭೌತಿಕ ಮತ್ತು ಆರ್ಥಿಕ–ಮೂರೂ ಬಗೆಯ ಸಂಪನ್ಮೂಲಗಳು ಇವೆ. ಯೋಜನೆಯ ಗಾತ್ರ ಹಾಗೂ ಆಕಾರಗಳು ಲಭ್ಯವಿರುವ ಹಾಗೂ ಸಮರ್ಥವಾದ ಸಂಪನ್ಮೂಲಗಳ ಬಳಕೆಗೆ ಸುಸಂಬದ್ಧವಾಗಿ ನಿರೂಪಿಸಲ್ಪಡಬೇಕು. ಈವರೆಗಿನ ನಮ್ಮ ಯೋಜನೆಗಳು ವಿದೇಶೀ ಸಂಪನ್ಮೂಲಗಳು. ವಿದೇಶೀ ಯಂತ್ರೋಪಕರಣಗಳು, ವಿದೇಶಿ ತಂತ್ರಜ್ಞರು, ವಿದೇಶಿ ಬಂಡವಾಳ–ಕಡೆಗೆ ವಿದೇಶಿ ಕಚ್ಚಾ ಪದಾರ್ಥಗಳು ಮತ್ತು ಮಾರುಕಟ್ಟೆಗಳನ್ನಾಧರಿಸಿ ರೂಪಿಸಲ್ಪಟ್ಟವು. ಯೋಜನೆಗಳು ನಾವು ಏನನ್ನು ಹೊಂದಿಲ್ಲವೊ ಅವುಗಳನ್ನು ಪಡೆಯಲು ಅನುವಾಗುವಂತೆ ರೂಪಿಲಸ್ಪಟ್ಟಿವೆ. ಆದರೆ ನಾವು ಈಗಾಗಲೇ ಹೊಂದಿರುವುದನ್ನು ಸಂರಕ್ಷಿಸಿಕೊಳ್ಳುವ ಬಗೆಗಾಗಲೀ, ಅದರ ಆಧಾರದಿಂದ ಅಭಿವೃದ್ಧಿ ಹೊಂದುವುದರ ಕಡೆಗಾಗಲೇ ಯಾವುದೇ ರೀತಿಯ ಗಮನ ಹರಿಸಲಾಗಿಲ್ಲ. ಕೃಷಿ ಹಾಗೂ ಸ್ವದೇಶಿ ಕೈಗಾರಿಕೆಗಳು ಕಡೆಗಣಿಸಲ್ಪಟ್ಟಿವೆ. ವಿದೇಶೀ ಸಂಯೋಜನಾ ಒಡಂಬಡಿಕೆಗಳು, ಒಪ್ಪಂದದ ನಿಬಂಧನೆಗಳು ನಮ್ಮ ಹಿತಾಸಕ್ತಿಗಳಿಗೆ ವಿರುದ್ಧವಿದ್ದಾಗಲೂ ಹಾಗೂ ನಮ್ಮ ಆತ್ಮಗೌರವಕ್ಕೆ ಧಕ್ಕೆ ತರುವಂತಿದ್ದಾಗ್ಯೂ ಸ್ವಾಗತಿಸಲ್ಪಡುತ್ತಾ ಬಂದಿವೆ. ಈ ದೇಶದಲ್ಲಿ ಪಟ್ಟಭದ್ರ ವಿದೇಶೀ ಹಿತಾಸಕ್ತಿಗಳು ಎಷ್ಟು ಶಕ್ತವಾಗಿವೆ ಎಂದರೆ ಅವು ನಮ್ಮ ಆರ್ಥಿಕ ಕಾರ್ಯಕ್ರಮಗಳನ್ನು ಮಾತ್ರವೇ ಅಲ್ಲದೆ ಶೈಕ್ಷಣಿಕ ಹಾಗೂ ರಾಜಕೀಯ ನೀತಿ ಧೋರಣೆಗಳ ಮೇಲೂ ಪ್ರಭಾವ ಬೀರಲು ಹವಣಿಸುತ್ತಿವೆ. ನಮ್ಮ ಸ್ವಾತಂತ್ರ್ಯವು ಉಳಿಯಬೇಕಿದ್ದಲ್ಲಿ ಆರ್ಥಿಕ ವಲಯದಲ್ಲಿ ಸ್ವಾವಲಂಬಿಗಳಾಗಲೇಬೇಕು. ಇದೇ ನಮ್ಮ ಭಾವೀ ಯೋಜನೆಗಳ ಅಡಿಗಲ್ಲಾಗಬೇಕು.

**ಕೃಷಿ ಸಮಸ್ಯೆಗಳು**

ಕಳೆದ ಹಲವು ವರ್ಷಗಳಿಂದಲೂ ಕೃಷಿ ಕ್ಷೇತ್ರಕ್ಕೇ ಆದ್ಯತೆ ನೀಡಲಾಗುವುದೆಂದು ಘೋಷಣೆ, ಪ್ರಕಟಣೆಗಳನ್ನು ಮೇಲಿಂದ ಮೇಲೆ ಕೇಳುತ್ತಲೇ ಬಂದಿದ್ದೇವೆ. ಆದರೆ

ಸರ್ಕಾರದ ನೀತಿಧೋರಣೆಗಳು ಮಾತ್ರ ರೈತರ ಹಿತಾಸಕ್ತಿಗಳಿಗಾಗಲೀ, ಕೃಷಿಯ ಅಗತ್ಯಗಳ ಪೂರೈಕೆಗಾಗಲೀ ಕಿಂಚಿತ್ತು ಕಾಳಜಿ ವಹಿಸಿದಂತೆ ತೋರುವುದಿಲ್ಲ. ಭಾರತದಲ್ಲಿನ ರಸಗೊಬ್ಬರಗಳ ಬೆಲೆ ವಿಶ್ವದಲ್ಲೇ ಅತೀ ಹೆಚ್ಚಿನ ದರವಾಗಿದೆ. ಈ ಶೀರ್ಷಿಕೆಯಡಿಯಲ್ಲಿ ಅಂದರೆ ರಸಗೊಬ್ಬರಗಳಿಗಾಗಿ ಕಳೆದ ವರ್ಷ ಸರ್ಕಾರ ೫೫ ಕೋಟಿ ರೂ.ಗಳ ಸಹಾಯ ಧನವನ್ನು ಕೊಡಮಾಡಿದೆ. ಆದರೆ ಈ ವರ್ಷದ ಕೇಂದ್ರದ ಬಡ್ಜೆಟ್ಟಿನಲ್ಲಿ ಈ ಸಹಾಯಧನ ನೀಡಿಕೆಯನ್ನು ನಿಲ್ಲಿಸಲಾಗಿದೆ. ವಿದೇಶಿ ಕಂಪೆನಿಗಳು ಇಲ್ಲಿ ರಸಗೊಬ್ಬರ ತಯಾರಿಕಾ ಘಟಕಗಳನ್ನು ತೆರೆಯಲು ಅನುಮತಿಸಲ್ಪಟ್ಟಿವೆ ಹಾಗೂ ರಸಗೊಬ್ಬರಗಳ ಬೆಲೆಗಳ ನಿರ್ಣಯಕ್ಕೂ ಇಚ್ಛಾನುಸಾರ ನಿಗದಿಸಲು ಅವುಗಳಿಗೆ ಅವಕಾಶ ನೀಡಲಾಗಿದೆ. ಆದರೆ ವಾಸ್ತವಾಂಶವೇನೆಂದರೆ ರೈತನಿಗೆ ತನ್ನ ಇಂಧನ ಅಗತ್ಯ ಪೂರೈಕೆಗೆ ಅರೆ ಬೆಂದ ಇದ್ದಿಲು (ಮೆದು ಇದ್ದಿಲು) ಹಾಗೂ ಗೊಬ್ಬರಕ್ಕೆ ಗೋಮಯವನ್ನು ಬಯಳಸಲು ನೆರವು ನೀಡಿ ಪ್ರೋತ್ಸಾಹಿಸಿದ್ದಲ್ಲಿ ಯಾವುದೇ ಹೊಸ ರಸಗೊಬ್ಬರದ ಕಾರ್ಖಾನೆ, ಘಟಕಗಳಿಗೆ ಅಗತ್ಯವೇ ಇರುತ್ತಿರಲಿಲ್ಲ. ಅನ್ವಯಿಕ ಆರ್ಥಿಕ ಸಂಶೋಧನಾ ರಾಷ್ಟ್ರೀಯ ಮಂಡಳಿಯ ಒಂದು ವರದಿಯಲ್ಲಿ ಗಮನಿಸಿರುವಂತೆ, ಭಾರತದಲ್ಲಿ ಒಂದು ವರ್ಷದಲ್ಲಿ ಹತ್ತು ಸಿಂದ್ರಿಗಣಿಗಳ್ನು ಉರಿಸಲಾಗುತ್ತಿದೆ. ಆದರೆ ಈ ಸ್ವದೇಶೀ ಸಂಪತ್ತನ್ನು ಉದಾಸೀನದಿಂದ ಕಾಣುತ್ತ ವಿದೇಶೀ ಕಂಪೆನಿಗಳನ್ನೇ ಅವಲಂಬಿಸುವುದನ್ನು ಮುಂದುವರೆಸುತ್ತಿದ್ದೇವೆ.

ಕೆಲವು ಜಿಲ್ಲೆಗಳನ್ನು ಕಡ್ಡಾಯ ಬೇಸಾಯಕ್ಕೆ ಆಯ್ಕೆ ಮಾಡಿರುವ ರೀತಿಗಳನ್ನು ಗಮನಿಸಿದರೆ ಮುಖ್ಯ ಭಾಗಿಗಳಾದ ರೈತರ ಹಿತ ದೃಷ್ಟಿಯಿಂದ ನೋಡಿಲ್ಲವೆಂಬುದು ತಿಳಿಯುತ್ತದೆ. ಏನೆಲ್ಲ ಹೇಳಿದರೂ, ಕಾರ್ಯಕ್ರಮವು ಗರಿಷ್ಠ ಪ್ರಮಾಣದ ಉತ್ಪಾದನೆಯ ಧ್ಯೇಯ ಸಾಧನೆ ಮಾಡುವುದಿಲ್ಲ. ಅದೂ ಅಲ್ಲದೆ, ನೈಸರ್ಗಿಕ ಗೊಬ್ಬರವನ್ನು ಹೊರತುಪಡಿಸಿ ರಸಗೊಬ್ಬರಗಳ ಬಳಕೆ ಮಾಡುವುದರಿಂದ ಭೂಮಿಯ ಫಲವತ್ತತೆಯನ್ನು ಶೋಚನೀಯವಾಗಿ ಬಾಧಿಸುತ್ತದೆ. ದೂರದೃಷ್ಟಿ ಇಲ್ಲದ ಪ್ರಸಕ್ತ ಕೃಷಿ ನೀತಿಗಳ ಫಲಶೃತಿಯಾಗಿ ಮುಂದೊಂದು ದಿನ ಫಲವತ್ತೆಯ ಶ್ರೀಮಂತ ಪ್ರದೇಶಗಳಾದ ಲೂಧಿಯಾನ ಮತ್ತು ತಂಜಾವೂರುಗಳೂ ಕೂಡಾ ಬಂಜರಾಗಿ ಬಿಡಬಹುದೆಂದು ಆಲೋಚಿಸಲೂ ನಡುಕವುಂಟಾಗುತ್ತದೆ. ಅಂಥ ಪ್ರಕೃತಿ ವಿಕೋಪ ಸಂಭವಿಸಿದಂತೆ ತಡೆಗಟ್ಟೋಣ. ನೀರಾವರಿಗೆ ಕೆಲಮಟ್ಟಿಗೆ ಗಮನ ಹರಿಸಲಾಗಿರುವುದೇನೋ ಸರಿಯೇ. ಆದರೇನು ಸರ್ಕಾರ ಕೆಲಸ ಮಾಡುತ್ತಿರುವ ವಿಧಾನಗಳು ರೈತರ ಒಟ್ಟಾರೆ ಪ್ರತಿಕ್ರಿಯೆ, ಅಭಿಪ್ರಾಯವನ್ನು ಈ ಹಿಂದಿ ಗಾದೆಮಾತಿನಲ್ಲಿ ಸಂಗ್ರಹ ರೂಪದಲ್ಲಿ ಹೇಳಬಹುದಾಗಿದೆ–ಕಾಪಾನೀ ಜಬ್ ಕೃಷೀ ಸುಖಾನೀ (ಫಸಲು ವಿಫಲವಾದ ಮೇಲೆ ನೀರು ಹರಿಸಿದರೇನು ಪ್ರಯೋಜನ?) ಅಂತರರಾಜ್ಯ ನದೀ ಜಲ ವ್ಯಾಜ್ಯಗಳ ವಿಷಯದಲ್ಲಿ ಪ್ರಾಂತೀಯ ನಿಷ್ಠೆಗಳು ಎಷ್ಟು ಗಹನವಾಗಿಬಿಟ್ಟಿವೆ

ಎಂದರೆ ಕೋಟ್ಯಾಂತರ ಕ್ಯೂಸೆಕ್ಸ್ ನೀರು ಸಮುದ್ರಕ್ಕೆ ವ್ಯರ್ಥವಾಗಿ ಹರಿಯಲು ಬಿಡಲಾಗಿದೆ, ಆದರೂ ವ್ಯಾಜ್ಯಕ್ಕೆ ಸಂಬಂಧಿಸಿದ ತಂಡಗಳವರು ನಿಷ್ಠುರತೆಯನ್ನು ಬಿಟ್ಟು ಮೃದುಧೋರಣೆ ತಳೆದಿಲ್ಲ. ವಿದ್ಯುಚ್ಛಕ್ತಿಯನ್ನು ಯೂನಿಟ್‌ಗೆ ತಲಾ ೧೨ ಪೈಸೆ ದರದಲ್ಲಿ ಕೊಳವೆ ಬಾವಿಗಳಿಗೆ ಒದಗಿಸಲು ಮಾಡಿರುವ ನಿರ್ಧಾರವೇನೋ ಸ್ತುತ್ಯಾರ್ಹವೇ ಸರಿ, ಆದರೆ ಆ ತೀರ್ಮಾನಕ್ಕೆ ಅರ್ಥ ಬರುವುದು ವಿದ್ಯುಚ್ಛಕ್ತಿಯನ್ನು ವಾಸ್ತವವಾಗಿ ರೈತರಿಗೆ ದೊರಕಿಸಿಕೊಟ್ಟಲ್ಲಿ ಮಾತ್ರ.

### ಕೃಷಿ ಮತ್ತು ಧಾರಣೆ ನೀತಿ

ಸರ್ಕಾರದ ಮಧ್ಯವರ್ತಿ ಅಥವಾ ತಜ್ಞರ ಸಲಹೆ ಸಹಿತ ಯೋಜನೆಗಳು ರೈತರಿಗೆ ಭಾರೀ ಹೊಡೆತನವನ್ನೇ ನೀಡಿವೆ. ಕೇರಳ ಈ ಲೆಕ್ಕಾಚಾರದಲ್ಲಿ ತೀರಾ ದೊಡ್ಡ ದೋಷಿ ಎಂದೇ ನಿರೂಪಿಸಿದೆ. ಇಲ್ಲಿ ಇಲಾಖಾ ಕಚೇರಿಗಳಲ್ಲಿ ಬಾಬುಗಳಿದ್ದಾರೆ. ಅವರು ನಿರ್ದಿಷ್ಟವಾಗಿ ಒಬ್ಬ ರೈತ ಎಷ್ಟು ಉತ್ಪನ್ನ ಹೊರತೆಗೆಯಬೇಕು, ಎಷ್ಟು ಬಳಕೆ ಮಾಡಿಕೊಳ್ಳಬೇಕು ಎಂಬುದನ್ನು ಈ ಬಾಬುಗಳು ತೀರ್ಮಾನಿಸುತ್ತಾರೆ! ಆ ರೈತನಿಗೆ ತನ್ನ ಹೆಚ್ಚುವರಿ ದವಸ ಧಾನ್ಯಗಳ ದಾಸ್ತಾನನ್ನು ಸರ್ಕಾರೀ ದಾಸ್ತಾನು ಮಳಿಗೆಗಳಲ್ಲಿ ಜಮಾಯಿಸಲು ಆದೇಶ ನೀಡಲಾಗುತ್ತದೆ. ಹಲವು ಬೆಳೆಗಳ ಬೆಲೆಗಳನ್ನು ಕೇಂದ್ರ ಸರ್ಕಾರ ನಿಗದಿಸಿದ್ದು ಅವು ಆರ್ಥಿಕವಾಗಿ ಸಮಂಜಸವಾಗಿಲ್ಲ. ಧಾರಣೆ ವಾಸಿಗಳು ಸ್ಥಿರವಾಗಿರುವಂತೆ ನೋಡಿಕೊಳ್ಳುವುದು ಮುಖ್ಯ, ಅಷ್ಟೇ ಅಲ್ಲದೆ ರೈತನಿಗೆ ತನ್ನ ಉತ್ಪನ್ನಕ್ಕೆ ತಕ್ಕುದಾದ ನ್ಯಾಯಬದ್ಧ, ಪೂರ್ಣ ಮೌಲ್ಯ ಸಿಗುವಂತೆ ಮಾಡದೆ ನಿರಾಕರಿಸಿದ್ದೇ ಆದಲ್ಲಿ ಅನ್ಯಾಯ ಮಾತ್ರವಲ್ಲ ಆತ್ಮಹಾನಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ನಮ್ಮ ಕೃಷಿ ಉತ್ಪನ್ನಧಾರಣೆ ನೀತಿಯ ಮೊಟ್ಟ ಮೊದಲ ಧ್ಯೇಯವೇ ಉತ್ಪಾದಕರ, ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಉತ್ಪಾದಕರ ವರಮಾನದಲ್ಲಿ ಕುಸಿತವನ್ನು ತಡೆಯುವುದೇ ಆಗಿರಬೇಕು. ಕೃಷಿ ವರಮಾನವೇ ಅರ್ಥವ್ಯವಸ್ಥೆಯನ್ನು ಪೋಷಿಸುವುದಾಗಿದೆ.

ಆಹಾರ ಧಾನ್ಯಗಳ ಬೆಲೆ ಏರಿಕೆಯೇ ನಗರವಾಸಿಗಳಿಗೆ ಭಾರೀ ತೊಂದರೆ ಉಂಟು ಮಾಡಿದೆ, ಅದರಲ್ಲೂ ಕಡಿಮೆ ಆದಾಯ ವರ್ಗದವರಿಗೆ ಮತ್ತು ನಿಗದಿತ ಆದಾಯ ವರ್ಗಗಳವರಿಗೆ ಬಹಳ ಕಷ್ಟವಾಗಿದೆ ಈ ವರ್ಗಗಳವರಿಗೆ ದಿನಬಳಕೆಯ ಜೀವನಾವಶ್ಯಕ ಪದಾರ್ಥಗಳು ನ್ಯಾಯ ಬೆಲೆಗೆ ದೊರಕುವಂತೆ ಮಾಡಬೇಕು. ಮದ್ರಾಸ್ ಸರ್ಕಾರವು, ಕೆಲವು ನಗರಗಳಲ್ಲಿ ತನ್ನ ಯೋಜನೆಯಂತೆ ಅಕ್ಕಿಯನ್ನು ಒಂದು ರೂಪಾಯಿಗೆ ಒಂದು ಕೆ.ಜಿ. ಮಾರಾಟ ಮಾಡುವಲ್ಲಿ ಯಶಸ್ವಿಯಾಗುವುದು ಸಾಧ್ಯವಿದ್ದಲ್ಲಿ, ದೇಶದ ಇತರ ಭಾಗಗಳಲ್ಲಿ ಇದೇ ಕ್ರಮ ಏಕೆ ಅಸಾಧ್ಯವೆಂದು ಹೇಳಲು ಬೇರೆ ಕಾರಣಗಳೇನಿಲ್ಲ. ಹಾಗೆಯೇ ತುಟ್ಟಿಭತ್ಯೆ ಪ್ರಮಾಣವನ್ನು ಜೀವನದ

ಗುಣಮಟ್ಟ, ವೆಚ್ಚಗಳೊಂದಿಗೆ ಹೊಂದಾಣಿಕೆ ಮಾಡಿ ನಿಗದಿಸಬೇಕು. ಸರ್ಕಾರ ಈ ಸಿದ್ಧಾಂತ/ತತ್ವವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿರುವುದು ವಿಷಾದನೀಯ ವಿಷಯ. ಸರ್ಕಾರದ ಈ ಧೋರಣೆಯೇ ಹಲವಾರು ವ್ಯಾಜ್ಯಗಳು, ಕಾರ್ಮಿಕ ಗಲಭೆಗಳಿಗೆ ಕಾರಣ. ಕಾರ್ಮಿಕರು ಮತ್ತು ಉದ್ಯೋಗಿಗಳು ಮಾತ್ರವಲ್ಲದೆ, ಪಿಂಚಣಿದಾರರಿಗೂ ಕೂಡಾ ತುಟ್ಟಿಭತ್ಯೆ ಕೊಡಬೇಕು ಮತ್ತು ಅವರ ನಿವೃತ್ತಿ ವೇತನಗಳು ಪ್ರಸ್ತುತ ಅಸ್ತಿತ್ವದಲ್ಲಿರುವ ವೇತನ ಶ್ರೇಣಿಗಳೊಂದಿಗೆ (ಸಹಮತ, ಸಂಬಂಧ ಹೊಂದಿರಬೇಕು) ಅನುರೂಪತೆ ಹೊಂದಿರಬೇಕು.

**ತುಣುಕು ಆಹಾರ ವಲಯಗಳು**

ಆಹಾರ ವಲಯಗಳು ಮತ್ತು ಹಲವಾರು ವಸ್ತು, ಉತ್ಪನ್ನಗಳ ಸಾಗಾಣಿಕೆಯ ಮೇಲೆ ಬಹಳಷ್ಟು ನಿರ್ಬಂಧಗಳನ್ನೂ ಹೇರುವುದರಿಂದಾಗಿ ಆರ್ಥಿಕವಾಗಿ ಅನಾರೋಗ್ಯಕರ ಮತ್ತು ಸಂವಿಧಾನದ ಮೂಲೋದ್ದೇಶಕ್ಕೂ ವಿರೋಧವಾಗಿರುತ್ತದೆ. ಈ ನಿರ್ಬಂಧ, ನಿಬಂಧನೆಗಳು ವ್ಯಾಪಾರದ ಮಾಮೂಲು ಮಾರ್ಗಗಳನ್ನೂ ಮುಚ್ಚಿಬಿಡುತ್ತವೆ, ಮಾರುಕಟ್ಟೆಯಲ್ಲಿ ಕೃತಕ ಅಭಾವವನ್ನು ಸೃಷ್ಟಿಸುತ್ತವೆ ಮತ್ತು ಕಳ್ಳಸಾಗಣೆ ಹಾಗೂ ಕಾಳಸಂತೆಗಳಿಗೆ ಪ್ರೋತ್ಸಾಹ ನೀಡುತ್ತವೆ. ಈ ನೀತಿಯ ರಾಷ್ಟ್ರೀಯ ಸಮಗ್ರತೆಗೂ ಪ್ರತಿಕೂಲತೆಯನ್ನುಂಟು ಮಾಡುತ್ತದೆ. ನಾವು ಅತೀ ಮುಖ್ಯ ಸಂಗತಿಯಾಗಿರುವ ಆಹಾರ ಕುರಿತು ರಾಷ್ಟ್ರೀಯ ಗುಣಮಟ್ಟದ ನಿಲುವಿನಿಂದ ಆಲೋಚಿಸುವುದು ನಮಗೆ ಸಾಧ್ಯವಾಗದೇ ಹೋದರೆ ಹಾಗೂ ನಮ್ಮ ದೃಷ್ಟಿಯನ್ನು ಸಂಕುಚಿತ ಪ್ರಾದೇಶಿಕ ಹಿತಾಸಕ್ತಿಗಳಿಂದ ಮಸುಕು ಮಾಡಿಕೊಂಡರೆ ರಾಷ್ಟ್ರೀಯ ಸಮಗ್ರತೆ ಒಂದು ಅರ್ಥ ಶೂನ್ಯ ಘೋಷಣೆಯಾಗಿ ಬಿಡುತ್ತದೆ. ಕೆಲವು ಭ್ರಷ್ಟ ಅಧಿಕಾರಿಗಳು, ಅಧಿಕಾರ ದಾಹಿ ರಾಜಕಾರಣಿಗಳು ಮತ್ತು ಭಾರೀ ವ್ಯಾಪಾರೋದ್ಯಮಿಗಳು ಕಳ್ಳಸಾಗಣೆಯನ್ನು ಅತೀ ಲಾಭದಾಯಕ ವ್ಯಾಪಾರವಾಗಿ ಕಂಡುಕೊಂಡಿದ್ದು ಈ ಧೋರಣೆಯ ಮುಂದುವರಿಕೆಯಲ್ಲಿ ಪಟ್ಟಭದ್ರ ಹಿತಾಸಕ್ತಿಯನ್ನು ಎಷ್ಟು ಬೆಳೆಸಿಕೊಂಡಿದ್ದಾರೆಂದರೆ ಬರೇ ತರ್ಕ ಬದ್ಧ, ಸಕಾರಣ ಚಿಂತನೆಗಳು ಇವುಗಳನ್ನು ಬದಲಿಸಲು ಸಾಧ್ಯವಿಲ್ಲದಷ್ಟು!

**ರಾಷ್ಟ್ರೀಯ ಅಧ್ಯಯನ ವಿಧಾನ**

ಆರ್ಥಿಕ ಸಮಸ್ಯೆಗಳ ಅಧ್ಯಯನಕ್ಕೆ ರಾಷ್ಟ್ರೀಯ ವಿಧಾನವು ಇಲ್ಲದಿದ್ದಲ್ಲಿ, ಸಮರ್ಪಕವಾದ ಯೋಜನೆ, ಆಳವಾದ ಪ್ರಯತ್ನ ಹಾಗೂ ಕೇಂದ್ರದಲ್ಲಿ ಸಮರ್ಥ ನಾಯಕತ್ವ ಇಲ್ಲದಿದ್ದಲ್ಲಿ ಪ್ರತೀ ರಾಜ್ಯದವರೂ ಮತ್ತು ವಿಭಾಗದವರೂ ಬೇರೆಯವರ ಬಗೆಗೆ ನಿಷ್ಕಾಳಜಿಯಿಂದ ತಮ್ಮನ್ನು ಮಾತ್ರವೇ ಕಾಯ್ದು ಕೊಳ್ಳಲು ಶ್ರಮಿಸುತ್ತಿರುತ್ತಾರೆ.

ಅವರು ಹೇಳುವಂತೆ ಪ್ರತಿಯೊಬ್ಬನೂ ತನಗಾಗಿ, ದೆವ್ವ ಕೌಶಲ್ಯದಿಂದಲೋ ಅಕುಶಲತನದಿಂದಲೋ ಅಂತೂ ಈ ಪ್ರವೃತ್ತಿಯು ಸಂಕುಚಿತವಾದ ಪ್ರಾದೇಶಿಕ ಅಥವಾ ಸಂಸ್ಥಾನಶಾಹಿ ಪ್ರವೃತ್ತಿಯನ್ನು ಪ್ರೋತ್ಸಾಹಿಸುತ್ತಿರುತ್ತದೆ. ಕೇರಳದ ಮುಖ್ಯಮಂತ್ರಿ ಇ.ಎಂ.ಎಸ್. ನಂಬೂದ್ರಿ ಪಾದರವರು ಯಾವಾಗ ಕೇರಳದಿಂದ ರಫ್ತು ಮಾಡಿದ ವ್ಯಾಪಾರದ ಆದಾಯವನ್ನೂ ಅಂದರೆ ವಿದೇಶೀ ವಿನಿಮಯದಿಂದ ಬಂದ ವರಮಾನವನ್ನು ಹೊರಗಿನಿಂದ ತಮ್ಮ ರಾಜ್ಯಕ್ಕೆ ಆಹಾರ ದವಸ ಧಾನ್ಯಗಳನ್ನು ಕೊಳ್ಳಲು ತನಗೆ ಅನುಮತಿ ನೀಡಬೇಕೆಂದು ಕೋರಿಕೆ ಮಂಡಿಸುವರೋ, ಅಥವಾ ಕೇಂದ್ರದ ವಿರುದ್ಧ ಕೇರಳ ಬಂದ್‌ಗೆ ಕರೆ ನೀಡುವರೋ ಆಗ ಖಂಡಿತವಾಗಿಯೂ ಅದು ದೇಶದ ಐಕ್ಯತೆಗೆ ಭಾರೀ ಹೊಡೆತವೇ ಹೌದು. ಅದೇ ರೀತಿಯಲ್ಲಿ ಮಹಾರಾಷ್ಟ್ರದವರಿಗೆ ನ್ಯಾಯ ದೊರಕಿಸಿಕೊಡುವ ತನ್ನ ವಾದ ಸಮರ್ಥಿಸಲು ಶಿವಸೇನೆಯು ಮುಂಬಯಿಯಲ್ಲಿ ಬೇರೆ ರಾಜ್ಯಗಳಿಂದ ಬಂದು ಸೇವೆಯಲ್ಲಿರುವ ಅಥವಾ ವ್ಯಾಪಾರೋದ್ಯಮಗಳಲ್ಲಿರುವ ಜನರಿರುವ ಯಾವುದೇ ಭಾಗದವರೆದುರಾದರೂ ಪ್ರತಿಭಟನೆ ನಡೆಸಬಹುದು. ಅದು ಮೂಲ ವಿಷಯಕ್ಕೆ ಕುರುಡಾಗುತ್ತಿರುತ್ತದೆ, ಅದೆಂದರೆ ದೇಶದ ಎಲ್ಲಾ ವರ್ಗಗಳ ಜನರ ಆರ್ಥಿಕ ಹಿತಾಸಕ್ತಿಗಳೂ ಅವಿಭಾಜ್ಯವಾಗಿ ಪರಸ್ಪರ ಸರಪಳಿಯಂತೆ ಹೊಂದಿಕೊಂಡಿವೆ ಎಂಬುದಾಗಿದೆ. ನಿರುದ್ಯೋಗ ಮತ್ತು ಬಡತನಗಳು ಈ ದೇಶದಲ್ಲಿ ಸಂಯುಕ್ತ ಪ್ರಯತ್ನದಿಂದ ಮಾತ್ರವೇ ಅಳಿಸಲ್ಪಡುತ್ತವೆ.

**ಅಂತರರಾಷ್ಟ್ರೀಯ ವ್ಯಾಜ್ಯಗಳು**

ರಾಷ್ಟ್ರದ ರಾಜಕೀಯ ಸಮಸ್ಯೆಗಳ ಸಂಬಂಧವಾದ ನಿರ್ಣಯದಲ್ಲೂ ಕೂಡಾ, ರಾಷ್ಟ್ರದ ಈ ಮೂಲಭೂತ ಐಕ್ಯತೆಯನ್ನು ಕಡೆಗಣಿಸುವಂತಿಲ್ಲ. ಇಂದೀಗ ಕೆಲವು ರಾಜ್ಯಗಳ ನಡುವೆ ಗಡಿತಕರಾರು ವ್ಯಾಜ್ಯಗಳು ಇವೆ. ಇವುಗಳನ್ನು ಸಾಮಾನ್ಯವಾಗಿ ರಾಜ್ಯಗಳ ಪುನರ್ವಿಂಗಡಣೆಯ ಸಂದರ್ಭದಲ್ಲಿ ರೂಪಿಸಿದ ತತ್ವಗಳ ಆಧಾರದ ಮೇಲಿಂದ ಪರಿಹರಿಸಬೇಕಾಗಿರುತ್ತದೆ. ಜನಸಂಘವು ಭಾಷೆಯೂ ಒಂದು ಮುಖ್ಯಾಂಶವಾಗಿದ್ದು ಎರಡು ರಾಜ್ಯಗಳ ನಡುವೆ ಗಡಿ ರೇಖೆ ಗುರುತಿಸುವಾಗ ಪರಿಶೀಲಿಸಲ್ಪಡಬೇಕೆಂದು ಒಪ್ಪುತ್ತದೆಯಾದರೂ ಅದೇ ಪೂರ್ಣವಾಗಿ ನಿರ್ಣಾಯಕವೆಂದು ಪರಿಭಾವಿಸುವುದಿಲ್ಲ. ಆಡಳಿತದಲ್ಲಿ ಭಾಷೆಗೆ ಒಂದು ಪ್ರಮುಖ ಸ್ಥಾನವಿದೆ, ಅದರಲ್ಲೂ ವಿಶೇಷವಾಗಿ ಪ್ರಜಾತಾಂತ್ರಿಕ ಆಡಳಿತದಲ್ಲಿ ಮುಖ್ಯ ಸ್ಥಾನವಿದೆ. ಆದ್ದರಿಂದ ಸಾಮಾನ್ಯವಾಗಿ ಭಾಷಾವಾರು ಗಡಿಗಳು ರಾಜ್ಯಗಳ ಗಡಿಗಳಾಗಿ ಘನೀಭವಿಸಿ ಬಿಟ್ಟಿವೆ. ಇಲ್ಲಿ ಆದರೆ ಭಾಷೆಯೊಂದೇ ಆತ್ಯಂತಿಕವಾದ ಅಂಶವೆಂದು ಪರಿಗಣಿಸಲ್ಪಡಬೇಕು ಎಂದು ಅಪೇಕ್ಷಿಸುವ ಮಂದಿ ಇದ್ದಾರೆ. ಈ ಜನರ ವಿಧಾನವು

ಉಪರಾಷ್ಟ್ರ ನಿಷ್ಠೆಯನ್ನು ಪ್ರೇರೇಪಿಸುತ್ತದೆ, ಜನಸಂಘ ಇದನ್ನು ಒಪ್ಪುವುದಿಲ್ಲ. ಮಹಾಜನ್ ಆಯೋಗವು ಮೈಸೂರು–ಮಹಾರಾಷ್ಟ್ರ ಮತ್ತು ಮೈಸೂರು ಕೇರಳ ಗಡಿವ್ಯಾಜ್ಯಗಳ ಬಗೆಗೆ ಅಧ್ಯಯನ ನಡೆಸಿ ವರದಿ ಮಾಡಲೆಂದು ನೇಮಿಸಲ್ಪಟ್ಟಿತ್ತು. ಆಯೋಗದ ವರದಿಯು ವ್ಯಾಜ್ಯಗಳನ್ನು ಪರಿಹರಿಸಲು ನೆರವು ನೀಡಬೇಕು ನಿಜ. ಆದರೆ ಈ ಪ್ರಸಂಗವನ್ನು ವ್ಯಾಮೋಹ ರಹಿತ ಮನೋಧರ್ಮ ಮತ್ತು ಒಣ ಪ್ರತಿಷ್ಠೆಗಳ ಹೊರತಾಗಿ ಪರಿಶೀಲಿಸಲು ಮನೋಭೂಮಿಕೆ ಸಿದ್ಧವಿದ್ದಲ್ಲಿ ಮಾತ್ರ ಇದು ಸಾಧ್ಯವಾಗುತ್ತದೆ. ಅಭಿಪ್ರಾಯ ಸಂಗ್ರಹದ ಬಗೆಗಿನ ಸಲಹೆಯನ್ನು ಒಪ್ಪಲು ಸಾಧ್ಯವಿಲ್ಲ. ರಾಜ್ಯಗಳ ನಡುವಣ ಪ್ರತ್ಯೇಕತಾ ಗಡಿರೇಖೆಯನ್ನು ಎಳೆದು ಗುರುತಿಸುವುದು, ಪ್ರತ್ಯೇಕಿಸುವುದು ಸಂಸತ್ತಿನ ಕೆಲಸ.

**ಅಸ್ಸಾಂನ ಪುನಾರಚನೆ**

ಅಸ್ಸಾಂನ ಮರು ಸಂಘಟನೆಯಲ್ಲಿ ಕೇಂದ್ರದ ನೇತೃತ್ವದಿಂದಾಗಿ ಮತ್ತಷ್ಟು ಸಂಕೀರ್ಣತೆಗೆ ಕಾರಣವಾಗಿದೆ. ಗೃಹ ಸಚಿವ ಚವ್ಹಾಣರು ಲೋಕಸಭಾ ಚುನಾವಣೆಗೆ ತಕ್ಷಣ ಪೂರ್ವದಲ್ಲಿ ಅಸ್ಸಾಂಗೆ ಪ್ರಾತಿನಿಧಿಕ ಸ್ವರೂಪ ನೀಡಲಾಗುವುದೆಂದು ನೀಡಿದ ಹೇಳಿಕೆ ರಾಜಕೀಯ ತಪ್ಪು ಆಶ್ವಾಸನೆಯಾಗಿದ್ದು ಅದನ್ನು ಸರಿಪಡಿಸಲು ಕೇಂದ್ರ ಸರ್ಕಾರ ಈಗ ಹೆಣಗಾಡುತ್ತಿದೆ. ದುರದೃಷ್ಟವಶಾತ್, ಸಂವಿಧಾನದ ಆರನೇ ಪರಿಚ್ಛೇದದಲ್ಲಿ ಅಸ್ಸಾಂನ ಗುಡ್ಡಗಾಡು ಜನಾಂಗಗಳಿಗೆ ಒಂದು ವಿಶೇಷ ಸ್ಥಾನ ಕಲ್ಪಿಸಿದಂದೇ ಅಸ್ಸಾಂನಲ್ಲಿ ಪ್ರತ್ಯೇಕತೆಯ ಬೀಜಗಳನ್ನು ಬಿತ್ತಿದಂತಾಗಿದೆ. ಈಗ ನಾವು ಅದರ ವಿಷಫಲಗಳನ್ನು ಕಟಾವು ಮಾಡಿಕೊಳ್ಳಲೇಬೇಕಾಗಿದೆ. ಕೇವಲ ಮೂರು ಲಕ್ಷ ಜನ ಸಂಖ್ಯೆಯಷ್ಟು ಮಂದಿಗಾಗಿ ಪ್ರತ್ಯೇಕ ನಾನಾ ರಾಜ್ಯ ಸ್ಥಾಪನೆ ಮಾಡಿದ್ದು ಈ ಪ್ರತ್ಯೇಕತಾ ಪ್ರವೃತ್ತಿಗಳಿಗೆ ಪ್ರೋತ್ಸಾಹ ನೀಡಿದೆ. ಅಷ್ಟೇ ಅಲ್ಲದೆ ಈ ಪ್ರಾಂತ್ಯದಲ್ಲಿನ ವಿದೇಶೀ ಮಿಷನರಿಗಳು ವಿಚ್ಛಿದ್ರಕಾರಿ ಶಕ್ತಿಗಳಿಗೆ ತಮ್ಮ ಕಾಣಿಕೆಯನ್ನು ನೀಡುತ್ತ ಪ್ರಚೋದಿಸುತ್ತಿದ್ದಾರೆ. ನಮ್ಮ ಅಸ್ಸಾಂ ಮಸೂದೆಯು ಸಮಸ್ಯೆಯ ಈ ಎಲ್ಲಾ ಅಂಶಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ, ಬರೇ ತೇಪೆ ಹಚ್ಚುವ ಕೆಲಸ ಪ್ರಯೋಜನಕ್ಕೆ ಬರುವುದಿಲ್ಲ.

**ಹಿಂದೂ ನಾಗಾಗಳು ಏಕಾಗಬಾರದು?**

ಸರ್ಕಾರವು ಭೂಗತ ನಾಗಾಗಳೊಡನೆ ದೀರ್ಘಕಾಲೀನವೂ ಅತೀ ವಿಸ್ತೃತವೂ ಆದ ಮಾತು ಕತೆಯಲ್ಲಿ ತೊಡಗಿಕೊಂಡಿದೆಯಾದರೂ ಫಲಕಾರಿಯಾದ ಯಾವುದೇ ಫಲಿತಾಂಶ ಇನ್ನೂ ಕಣ್ಣಿಗೆ ಬೀಳುತ್ತಿಲ್ಲ. ಈ ಮಧ್ಯೆ ಈ ಕ್ರಾಂತಿಕಾರಿ ನಾಗಾಗಳು ಕಮ್ಯುನಿಸ್ಟ್ ಚೈನಾದೊಂದಿಗೆ ಸಲ್ಲದ ಚಟುವಟಿಕೆಗಳಲ್ಲಿ ಕಾಲಹರಣ

ಮಾಡುತ್ತಿದ್ದಾರೆಂದು ವರದಿಯಾಗಿದೆ. ಅಲ್ಲೊಮ್ಮೆ ಇಲ್ಲೊಮ್ಮೆ ವಿರಳವಾಗಿಯಾದರೂ ಹಿಂಸೆಯ ಸ್ಫೋಟಗಳೂ ಮುಂದುವರಿದಿವೆ. ವಿಶೇಷತಃ ಮಣಿಪುರವಂತೂ ಅಂಥ ಚಟುವಟಿಕೆಯ ಕೇಂದ್ರವೇ ಆಗಿಬಿಟ್ಟಿದೆ. ಸಹಜವಾಗಿಯೇ ತೀವ್ರಗಾಮಿಗಳ ವರ್ಗ ಪ್ರಸ್ತುತದ ಪರಿಸ್ಥಿತಿಯನ್ನು ಇನ್ನು ಬೃಹತ್ತಾದ ಪ್ರತಿಭಟನೆಗೆ ಸಜ್ಜುಗೊಳಿಸಿಕೊಳ್ಳಲು ಬಳಸಿಕೊಳ್ಳುತ್ತಿದೆ. ಭಾರತ ಸರ್ಕಾರ ಅತಿ ಜಾಗೃತಿಯಿಂದಿರಬೇಕು. ಪ್ರಜ್ಞಾಪೂರ್ವಕವಾಗಿ ಕ್ರಾಂತಿಕಾರಿಗಳನ್ನು ಪ್ರತ್ಯೇಕಿಸಿ ಅವರೊಂದಿಗೆ ನಿಷ್ಠುರವಾಗಿಯೇ ವ್ಯವಹರಿಸಬೇಕು. ಇಲ್ಲಿ ಉಲ್ಲೇಖಿಸಲೇಬೇಕಾದ ಒಂದು ಸಂಗತಿ ಎಂದರೆ ಅಸ್ಸಾಂ ರಾಜ್ಯದ ಅರ್ಧದಷ್ಟು ಜನಸಂಖ್ಯೆ ಹಿಂದೂ ನಾಗಾಗಳದ್ದೇ ಆಗಿದೆ. ನಾಗಾಲ್ಯಾಂಡ್‌ನೊಂದಿಗೆ ಈವರೆಗೆ ನವದೆಹಲಿ ನಡೆಸಿದ ಮಾತುಕತೆಯೆಲ್ಲ ಸಾರಾಸಗಟಾಗಿ ಬ್ಯಾಪ್ಟಿಸ್ಟ್ ಮಿಷನ್ ಮಾಧ್ಯಮದ ಮೂಲಕವೇ ಆಗಿದೆ. ಹಿಂದು ಗುಡ್ಡಗಾಡು ಜನಾಂಗಗಳವರಿಗೆ ಸಿಗಬೇಕಾದ ಮಾನ್ಯತೆಯನ್ನು ಈವರೆಗೂ ಕೊಟ್ಟಿಲ್ಲ. ಈ ಪರಿಸ್ಥಿತಿ ಬದಲಾಗಬೇಕು. ಅವರ ಹಿತಾಸಕ್ತಿಗಳು ಮತ್ತು ಹಕ್ಕುಗಳನ್ನು ಕೂಡಾ ರಕ್ಷಿಸಬೇಕಾಗುತ್ತದೆ.

**ಕಾಶ್ಮೀರದ ವಿಷಯದಲ್ಲಿ ಹಿಂಜರಿಕೆ ಸಲ್ಲದು**

ಮಿರ್ಜಾ಼ ಅಫ್ಜಲ್ ಬೇಗ್ ಮೇಲಿನ ನಿರ್ಬಂಧಗಳ ರದ್ಧತಿ, ಡಿಲ್ಲಿಯಲ್ಲಿ ಷೇಕ್ ಅಬ್ದುಲ್ಲಾರ ಬಿಡುಗಡೆಗಳ ನಂತರ, ಕಾಶ್ಮೀರವನ್ನು ಭಾರತದಿಂದ ಪ್ರತ್ಯೇಕಿಸಲು ಇಚ್ಛಿಸುವ ವ್ಯಕ್ತಿಗಳು–ಶಕ್ತಿಗಳು ಪುನಃ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಎಲ್ಲಾ ಹಳೆಯ ವಾದಗಳು, ದೀರ್ಘಕಾಲದಿಂದಲೂ ಸ್ಫೋಟಿಸುತ್ತಿರುವ ವಿಚಾರಗಳು ಪುನರಾವರ್ತನೆಯಾಗಿವೆ ಮತ್ತು ಪ್ರಸ್ತಾವನೆಗಳು ಯಾವುವು ಈ ಮೊದಲು ರಾಷ್ಟ್ರೀಯ ಹಿತದೃಷ್ಟಿಯಿಂದ ಅಥವಾ ಪ್ರಾಯೋಗಿಕವಲ್ಲವೆಂದು ತಿರಸ್ಕರಿಸಲ್ಪಟ್ಟಿದ್ದುವೋ ಅವೇ ಪುನಃ ಚಾಲ್ತಿ ಪಡೆಯುತ್ತಿವೆ. ಈ ಪ್ರಸ್ತಾವೆಗಳು ನಮಗೆ ಪಾಕಿಸ್ತಾನದ ಮಿತ್ರತ್ವವನ್ನು ದೊರಕಿಸಿಕೊಡುತ್ತೆಂಬ ವಾದವನ್ನಾಧರಿಸಿ ಅವುಗಳಿಗೆ ಕೇಂದ್ರ ಸರ್ಕಾರದ ಬೆಂಬಲವೂ ದೊರೆಯುತ್ತಿದೆ. ಈ ಎಲ್ಲಾ ಸ್ವಘೋಷಿತ ಶಾಂತಿ ಮತ್ತು ನ್ಯಾಯ ಬೆಂಬಲಿಗರೂ ಹಾಗೂ ಸ್ವಯಂ ಪಾಕಿಸ್ತಾನ ಮತ್ತು ಅಂತರಾಷ್ಟ್ರೀಯ ಶಕ್ತಿಗಳು–ಅಂದರೆ ಕರೆಯದೆಯೇ ನಮಗೆ ಸಲಹಾಕಾರರಾಗಿ ಬರುವಂಥವರು ಎಲ್ಲರಿಗೂ ಕೂಡಾ ಯಾವುದೇ ದ್ವಂದ್ವ, ಗೊಂದಲ, ಸಂದೇಹಗಳಿಗೆಡೆ ಇಲ್ಲದ ಸ್ಪಷ್ಟ ಮಾತುಗಳಲ್ಲಿ ಈಗಲೇ ನೇರವಾಗಿ ಹೇಳಬೇಕಾಗಿರುವುದೇನೆಂದರೆ ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ ಮತ್ತು ಯಾವುದೇ ರಾಜಿಗೆ ಸಿದ್ಧರಿಲ್ಲ ಎಂದು. ಈ ವಿಚಾರದಲ್ಲಿ ವಿಶ್ವ ಸಂಸ್ಥೆಯಾಗಲೀ ಅಥವಾ ಬೇರಾವುದೇ ಮಧ್ಯವರ್ತಿಯೇ ಆಗಲಿ ಯಾರ ಮಧ್ಯಸ್ತಿಕೆಗೂ ನಾವೀಗ ಅವಕಾಶ ಕೊಡುವುದು ಸಾಧ್ಯವಿಲ್ಲ.

ಕೆಲವರು ಕಾಶ್ಮೀರ ಈಗ ಅನುಭವಿಸುತ್ತಿರುವ ಸ್ವಾಯತತ್ತೆಗಿಂತಲೂ ಹೆಚ್ಚಿನದನ್ನು ಕೊಡಬೇಕೆಂದು ವಕಾಲತ್ತು ವಹಿಸುತ್ತಿದ್ದಾರೆ. ಆದರೆ ಈ ಪ್ರಸ್ತಾವೆಯ ಬೇರು ಪ್ರತ್ಯೇಕತಾ ಅಥವ ವಿಭಜನಾ ಸಿದ್ಧಾಂತದಲ್ಲಿದೆಯಷ್ಟೇ ಅಲ್ಲದೆ ರಾಷ್ಟ್ರೀಯ ಹಿತಾಸಕ್ತಿಗೆ ಪ್ರತಿ ದ್ವಂದ್ವದಂತಿದ್ದು ಸಂವಿಧಾನಕ್ಕೂ ಸವಾಲಿನಂತಿದೆ. ನಾವು ಸ್ಪಷ್ಟವಾಗಿ, ನೇರನುಡಿಗಳಲ್ಲಿ ಹೇಳಲಿಚ್ಛಿಸುವುದೇನೆಂದರೆ ಭಾರತದ ಜನತೆ ಭಾರತದೊಂದಿಗೆ ಕಾಶ್ಮೀರದ ಸಮಗ್ರ ಸಂಬಂಧವನ್ನೂ ವಿರುದ್ಧ ತಿರುವಿಗೆ ತರುವಂಥ ಯಾವುದೇ ಕೆಲಸವನ್ನೂ ಸಹಿಸುವುದಿಲ್ಲ ಎಂಬುದನ್ನೇ ಆಗಿದೆ. ಈ ಸಂದರ್ಭದಲ್ಲಿ ಸಂವಿಧಾನದ ೩೭೦ನೇ ನಿಯಮದ ಬಗೆಗೆ ನಾನು ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಇದು ನಮ್ಮದೇ ಆದ ಒಂದು ಆಂತರಿಕ ವ್ಯವಸ್ಥೆಯೇ ಆಗಿದ್ದಾಗ್ಯೂ ಕೂಡಾ, ಕಾಶ್ಮೀರವು ಭಾರತದ ಒಂದು ಸಮಗ್ರ ಭಾಗವೇ ಹೌದೆಂಬುದಕ್ಕೆ ಯಾವುದೇ ಧಕ್ಕೆ ತರುವುದಿಲ್ಲವಾದರೂ, ಒಂದು ವಿಶೇಷವಾದ ಸೌಲಭ್ಯವನ್ನು ಈ ಕಾಯ್ದೆಗೆ ಸೇರ್ಪಡೆ ಮಾಡಲೇಬೇಕಾಗಿದೆ. ಅಂದರೆ ಅದು ಒಂದು ಮೌಲಿಕವಾದರೆ ಮನೋ ವೈಜ್ಞಾನಿಕ ಉದ್ದೇಶವನ್ನು ಪೂರೈಸುತ್ತದೆ. ಆಗ ಕಾಶ್ಮೀರದ ಬಗೆಗಿನ ಎಲ್ಲಾ ಊಹಾಪೋಹಗಳೂ ತಾವೇ ತಾವಾಗಿ ನಿಂತುಹೋಗುತ್ತವೆ.

**ಸಾದಿಕ್ ಸರ್ಕಾರದ ವೈಫಲ್ಯ**

ಕೇಂದ್ರ ಸರ್ಕಾರವು ಜಮ್ಮು-ಕಾಶ್ಮೀರದ ಆಂತರಿಕ ಆಡಳಿತದ ಕಡೆಗೂ ಗಮನ ಹರಿಸಬೇಕಾಗಿದೆ. ಶ್ರೀ ಸಾದಿಕ್ ಈ ರಾಜ್ಯಕ್ಕೆ ಒಂದು ನಿಷ್ಪಕ್ಷಪಾತ ಹಾಗೂ ಬಲವಾದ ಆಡಳಿತ ನೀಡುವಲ್ಲಿ ಸೋತಿದ್ದಾರೆ. ಒಂದು ಹಿಂದೂ ಹುಡುಗಿಯನ್ನು ಹೊತ್ತೊಯ್ದು ಬಲವಂತದಿಂದ ವಿವಾಹ ನಡೆಸಿದ ಪ್ರಕರಣವನ್ನು ನಿಭಾಯಿಸುವ ಸಂದರ್ಭದಲ್ಲಿ ಉದಾಸೀನತೆ, ನಿಷ್ಕರುಣೆ, ಕೋಮುವಾರು ಪೂರ್ವಾಗ್ರಹ ಪ್ರವೃತ್ತಿಗಳನ್ನು ತೋರಿದ ಜಮ್ಮು-ಕಾಶ್ಮೀರದ ಪೊಲೀಸ್‌ರಿಂದಾಗಿ ಆಡಳಿತದಲ್ಲಿ, ಕಾಶ್ಮೀರಿ ಹಿಂದೂಗಳ ನಂಬುಗೆ, ವಿಶ್ವಾಸಗಳು ಏರು ಪೇರಾಗಿವೆ. ಕಣಿವೆಯ ಹಿಂದೂಗಳು, ಕೇಂದ್ರ ಗೃಹ ಸಚಿವ ಶ್ರೀ ಚವ್ಹಾಣರು ನೀಡಿದ್ದ ಭರವಸೆಯನ್ನು ಪೂರೈಸುವಲ್ಲಿ ವಿಫಲರಾಗಿದ್ದಾರೆ ಎಂದು ದೂರುತ್ತಿದ್ದಾರೆ. ಯಾವುದೇ ವಿಭಾಗದವರೇ ಆದರೂ ಅವರಿಗೆ ನ್ಯಾಯಸಿಗದಂತೆ ವಂಚಿತರಾಗಿದ್ದಾರೆ ಹಾಗೂ ಅಭದ್ರತೆ ಕಾಡುತ್ತಿದೆ ಎಂದೇ ಭಾವಿಸಬೇಕಾಗಿದೆ ಎಂಬುದೀಗ ವಿಷಾದನೀಯ ಸಂಗತಿಯಾಗಿದೆ. ಶ್ರೀ ಗಜೇಂದ್ರ ಗಡ್ಕರ್, ಸರ್ವೋಚ್ಛ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರು. ಇವರ ನೇತೃತ್ವದಲ್ಲಿ ನೇಮಕ ಗೊಂಡಿದ್ದ ಆಯೋಗವು ಸೇವಾಕ್ಷೇತ್ರ ಇತ್ಯಾದಿಗಳಲ್ಲಿ ಪ್ರಾತಿನಿಧ್ಯದ ಪ್ರಶ್ನೆಯನ್ನು ಕುರಿತಂತೆ ಪರೀಕ್ಷಿಸಲೆಂದು ನಿಯೋಜಿತವಾಗಿತ್ತು. ಪ್ರಾದೇಶಿಕ ನೆಲೆಗಳ ಮೇಲೆ ನಿರ್ಣಾಯಕ ಅಧಿಕಾರ ಬಳಕೆಯನ್ನು ನಿಜವಾಗಲು ವಿಚಾರಣೆ

ಮಾಡಬೇಕಾಗಿದೆಯಾದರೂ, ವಿಷಯವನ್ನು ಕೋಮುವಾದ ದೃಷ್ಟಿಯಿಂದ ನೋಡಿದ್ದೇ ಆದಲ್ಲಿ ಮಾತ್ರ ಅದು ಸಂವಿಧಾನದ ಮೂಲಧ್ಯೇಯ ಹಾಗೂ ಒಕ್ಕಣಿಕೆಗಳಿಗೆ ವಿರೋಧವಾಗುತ್ತದೆ.

**ದಾಂಧಲೆ, ಗಲಭೆಗಳ ಹಿಂದೆ ಪಟ್ಟಭದ್ರ ಹಿತಾಸಕ್ತಿಗಳು**

ಇತ್ತೀಚಿನ ಕೆಲವು ತಿಂಗಳುಗಳಲ್ಲಿ ದೇಶದ ಕೆಲವು ಭಾಗಗಳಲ್ಲಿ ಕೋಮು ಗಲಭೆಗಳಾಗುತ್ತಿವೆ. ಇವು ದುರದೃಷ್ಟಕರ ಹಾಗೂ ವಿಷಾದಕರ. ಸರ್ಕಾರವು ಅಂಥ ಶಾಂತಿಭಂಗ ಪ್ರಸಂಗ ಹಾಗೂ ದೌರ್ಜನ್ಯ ದುರ್ಘಟನೆಗಳಲ್ಲಿ ನಿಷ್ಪಕ್ಷಪಾತವಾಗಿ ಹಾಗೂ ನಿಷ್ಠುರವಾಗಿ ವರ್ತಿಸಬೇಕಾಗುತ್ತದೆ. ಆದರೆ ನಾನು ಇಲ್ಲಿ ಹೇಳಬೇಕಾಗಿರುವುದೇನೆಂದರೆ ಅಂಥ ಸಂದರ್ಭಗಳಲ್ಲಿ ಆಡಳಿತ ನೀತಿ ಮತ್ತು ನಡಾವಳಿಗಳನ್ನೂ ನಿಯಂತ್ರಿಸಿ, ನಿರ್ದೇಶಿಸುವಂಥ ನೀತಿ ಸಂಹಿತೆಯನ್ನು ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ನಿರೂಪಿಸಿದ್ದು. ಅದು ಅಪರಾಧಿಗಳನ್ನು ಶಿಕ್ಷಿಸುವುದಾಗಲೀ ತಂಟೆಕೋರ ದುಷ್ಟಶಕ್ತಿಗಳನ್ನು ದಮನ ಮಾಡುವುದಾಗಲೀ ಉದ್ದೇಶಿಸಿರಲಿಲ್ಲ. ಸರ್ಕಾರವು ಸ್ಫುಟವಾಗಿ ಕಾಣಿಸುವಂತೆ ಪ್ರಸಂಗಕ್ಕೆ ಸಂಬಂಧಿಸಿದ ಉಭಯ ಕೋಮುಗಳನ್ನೂ ವಿಚಾರಣೆಯ ಮಾನದಂಡದಿಂದ ವಿಮರ್ಶಿಸುವಂತೆ ಕಂಡರೂ ವಾಸ್ತವವಾಗಿ ಅದರ ಕಾರ್ಯ ವಿಧಾನಗಳು ಉಭಯ ಕೋಮುಗಳ ನಡುವಣ ಕಂದರವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ, ಸ್ಥಿರೀಕರಿಸುತ್ತದೆ. ಈ ರೀತಿ ನಂಬಿಕೆ ಬರಿಸುವಂತೆ ಮಾಡುವ ತೋರಿಕೆಯ ನೀತಿ ಸಂಹಿತೆ ಪರಿವರ್ತಿತವಾಗಬೇಕು, ಗಲಭೆ ಕೋರರು–ಯಾವುದೇ ಕೋಮಿಗೆ ಸೇರಿದವರೇ ಆಗಿದ್ದರೂ ಶಿಕ್ಷಿಸಲ್ಪಡಬೇಕು. ಗಲಭೆ ದಾಂಧಲೆಗಳಲ್ಲಿ ಪಟ್ಟಭದ್ರ ರಾಜಕೀಯ ಹಿತಾಸಕ್ತಿಗಳನ್ನು ಬೆಳೆಸಿಕೊಂಡಿರುವ ದುಷ್ಟ ಶಕ್ತಿಗಳು ರಾಷ್ಟ್ರದಲ್ಲಿವೆ. ಇಂಥ ದೌಜನ್ಯ ಪ್ರಕರಣಗಳನ್ನು ಪತ್ತೆಹಚ್ಚಿ ದಮನ ಮಾಡಲು ಶ್ರಮಿಸುವುದನ್ನು ಬಿಟ್ಟು ಈ ದುಷ್ಟ ಶಕ್ತಿಗಳು ಉದ್ದೇಶ ಪೂರ್ವಕವಾಗಿ ಅವುಗಳನ್ನು ಮತ್ತಷ್ಟು ವ್ಯಾಪಕಗೊಳಿಸುವುದಲ್ಲದೆ ತಮ್ಮ ದುರುದ್ದೇಶ, ಸ್ವಾರ್ಥ ಸಂಗತಿಗಳಿಗೆ ಯೋಗ್ಯವಾಗಿ ಸೂಕ್ತವೆಂಬಂತೆ ವರದಿ ತಯಾರಿಸಿ ಅಪ ಪ್ರಚಾರ ಮಾಡಲು ಶ್ರಮಿಸುತ್ತಿರುತ್ತವೆ. ಪ್ರಕರಣ ಯಾವುದೇ ಇರಲಿ, ಎಲ್ಲೇ ಘಟನೆ ಸಂಭವಿಸಿರಲಿ, ಅವರದು ಒಂದೇ ನಮೂನೆಯ (ಯಾಂತ್ರಿಕ) ವಿಶ್ಲೇಷಣೆ ಹಾಗೂ ಸಿದ್ಧಪಡಿಸಿದ ಅಪ ಪ್ರಚಾರದ ಘೋಷಣೆ. ಅವರ ಪ್ರಕಾರ, ಎಲ್ಲ ಕಡೆಗಳಲ್ಲೂ ಮುಸ್ಲಿಮರನ್ನೇ ಕೊಲ್ಲಲಾಗುತ್ತಿದೆ ಮತ್ತು ಕೊಲೆ ಮಾಡುತ್ತಿರುವವರು ಯಾವಾಗಲು ಭಾರತೀಯ ಜನಸಂಘ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರು ಎಂದೇ ಬಿಂಬಿಸಲಾಗುತ್ತದೆ. ಅಚ್ಚರಿಯ ಸಂಗತಿ ಎಂದರೆ ಎಲ್ಲಿ ಭಾರತೀಯ ಜನಸಂಘ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಘಟಕಗಳೇ

ಇಲ್ಲವೋ ಅಂಥಲ್ಲಿಯೂ ಕೂಡಾ, ಈ ವರ್ಗಗಳಿಗೆ ಸೇರಿದ ಪತ್ರಿಕೆಗಳು, ನಿಯತಕಾಲಿಕೆಗಳು. ಈ ಎರಡೂ ಸಂಘಟನೆಗಳ ಭದ್ರಮುಷ್ಟಿ, ಪ್ರಾಬಲ್ಯಗಳಿರುವುದನ್ನು ಪತ್ತೆ ಹಚ್ಚುತ್ತವೆ!? ಅವರ ಈ ರೀತಿಯ ವರ್ತನೆ ಜೇಬುಗಳ್ಳರ ತಂತ್ರವನ್ನು ನಿಮ್ಮ ನೆನಪಿಗೆ ತರುತ್ತದೆ–ಚಾಕಚಕ್ಯತೆ, ಚಾತುರ್ಯಗಳಿಂದ ಮೊದಲೇ ರೂಪಿಸಿಕೊಂಡಂತೆ ಅಚ್ಚುಕಟ್ಟಾಗಿ ಕಳ್ಳತನ, ಜೇಬುಗಳ್ಳತನವನ್ನು ಮಾಡಿ ಮುಗಿಸಿ, ಅವರುಗಳಲ್ಲೇ ಒಬ್ಬರು ಒಂದು ಕಡೆಗೆ ಓಡುತ್ತಾ ಕಳ್ಳಕಳ್ಳ ಎಂದು ಕಿರುಚುತ್ತಾ ಹೋಗುವುದು, ಮುಗ್ಧ ದಾರಿ ಹೋಕರಲ್ಲೊಬ್ಬರ ಕಡೆಗೆ ಗಮನ ಸೆಳೆದು ಚೆನ್ನಾಗಿ ಥಳಿಸಲಾರಂಭಿಸುವುದು–ಆ ವೇಳೆಗೆ ಅಸಲಿ ಕಳ್ಳ ಆ ಸ್ಥಳದಿಂದ ಪಲಾಯನ ಗೈದಿರುತ್ತಾನೆ. ನಾವು ಇಂಥ ದುಷ್ಟಶಕ್ತಿಗಳ ಬಗೆಗೆ ತುಂಬಾ ಜಾಗರೂಕತೆಯಿಂದಿರಬೇಕಾಗುತ್ತದೆ.

**ಭಾಷೆ**

ರಾಷ್ಟ್ರಭಕ್ತಿ ಹಾಗೂ ಸಾಮಾನ್ಯ ಜ್ಞಾನಗಳೆರಡೂ ರಾಷ್ಟ್ರದ ಕೆಲಸ ಕಾರ್ಯಗಳನ್ನು ಅದರದೇ ಭಾಷೆಗಳಲ್ಲಿ ನಡೆಸಬೇಕೆಂದೇ ಬಯಸುತ್ತವೆ. ಕೇಂದ್ರೀಯ ಶಿಕ್ಷಣ ಸಚಿವಾಲಯವು ಈ ವರ್ಷ ಭಾರತೀಯ ಭಾಷೆಗಳನ್ನು ವಿಶ್ವವಿದ್ಯಾಲಯದ ಹಂತದವರೆಗೂ ಶಿಕ್ಷಣ ಮಾಧ್ಯಮ ಮಾಡಲು ಕೈಗೊಂಡ ತೀರ್ಮಾನವು ಸ್ತುತ್ಯರ್ಹವಾಗಿದೆ. ಈ ತೀರ್ಮಾನವು ಶಿಕ್ಷಣ ಆಯೋಗದ ಶಿಫಾರಸ್ಸುಗಳಿಗೆ ಅನುರೂಪವಾಗಿದೆ. ಅಲ್ಲದೆ, ಸಂಸದೀಯ ಶಿಕ್ಷಣ ಸಮಿತಿ, ಶಿಕ್ಷಣ ಸಚಿವರುಗಳ ಸಮಾವೇಶ ಮತ್ತು ಕುಲಪತಿಗಳ ಸಮಾವೇಶಗಳೂ ಕೂಡಾ ಈ ತೀರ್ಮಾನವನ್ನು ಸಹಮತದಿಂದ ಬೆಂಬಲಿಸಿವೆ. ಇಷ್ಟಾಗಿಯೂ ಕೆಲವು ಆಂಗ್ಲ ಪ್ರೇಮಿಗಳು ಈ ತೀರ್ಮಾನವನ್ನು ಪ್ರತಿರೋಧಿಸುತ್ತಿದ್ದಾರೆ. ಅವರು ಗುರುತಿಸಲೆಂದು ಹವಣಿಸುತ್ತಿರುವ ಸಮಸ್ಯೆಗಳು ಒಂದೇ. ಕಾಲ್ಪನಿಕ ಅಥವಾ ಪ್ರತ್ಯೇಕಿತ ವ್ಯಕ್ತಿಗಳನ್ನು ಮಾತ್ರ ಬಾಧಿಸುತ್ತವೆ ಅಥವಾ ಸ್ಥಿತ್ಯಂತರದ ಸಂಕ್ರಮ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಸಮಸ್ಯೆಗಳ ಬಗೆಗೆ ಈ ರೀತಿಯ ಸದ್ದುಗದ್ದಲ ಎಬ್ಬಿಸುವ ಬದಲಿಗೆ ಅವರು ಅವುಗಳನ್ನೂ ಪರಿಹರಿಸಲು ಶ್ರಮಿಸಿದ್ದರೆ ಉತ್ತಮವಿತ್ತು. ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳನ್ನು ರಚಿಸಿಯಾದ ಮೇಲೆ, ಪ್ರಾಂತೀಯ ಭಾಷೆಗಳನ್ನು ರಾಜ್ಯಮಟ್ಟದಲ್ಲಿ ಬಳಸುವುದು ಹೆಚ್ಚಿದೆ. ಅದೇ ವೇಗವನ್ನು ಮುಂದುವರಿಸಿದ್ದೇ ಆದಲ್ಲಿ ಕೆಲವೇ ತಿಂಗಳುಗಳಲ್ಲಿ ಇವುಗಳಲ್ಲಿ ಬಹಳಷ್ಟು ರಾಜ್ಯಗಳಲ್ಲಿ ಸರ್ಕಾರಿ ಕೆಲಸಕಾರ್ಯ ವ್ಯವಹಾರಗಳನ್ನು ಜನರ ಭಾಷೆಗಳಲ್ಲಿಯೇ ನಿರ್ವಹಿಸುವುದು ಸಾಧ್ಯವಾಗುತ್ತದೆ. ಈ ಎಲ್ಲ ರಾಜ್ಯ ಸರ್ಕಾರಗಳನ್ನೂ, ದೇಶೀಯ ಭಾಷೆಗಳಿಗೆ ಅವುಗಳಿಗೆ ಅರ್ಹವಾದ ಸ್ಥಾನ, ಮಾನ್ಯತೆ ನೀಡಿದುದಕ್ಕೆ ನಾನು ಅಭಿನಂದಿಸಲೇಬೇಕು. ಈ ಭಾಷಾನೀತಿಯನ್ನು

ಒತ್ತು ನೀಡಿ ಬೆಂಬಲಿಸಿದ್ದುದರಿಂದ ಜನಪ್ರಿಯ ಸರ್ಕಾರಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ.

ಕೇಂದ್ರ ಸರ್ಕಾರದ ನೀತಿ–ಇಂಗ್ಲಿಷ್‌ನ ಸ್ಥಾನದಲ್ಲಿ ಹಿಂದಿಯನ್ನು ಮಾನ್ಯಗೊಳಿಸಲು ತೀರ್ಮಾನಿಸಿರುವುದರಿಂದಾಗಿ ಸಮಸ್ಯೆಗಳು ಸೃಷ್ಟಿಯಾಗುವುದು ಮುಂದುವರೆದಿದೆ. ಈ ನಿಟ್ಟಿನಲ್ಲಿ ಸಕ್ರಿಯ ಕ್ರಮಗಳನ್ನು ಕೈಗೊಳ್ಳುವ ಬದಲಿಗೆ, ಸರ್ಕಾರವು ತನ್ನ ಕ್ರಮಗಳಿಂದಾಗಿ ವಿರೋಧಾಭಾಸಗಳನ್ನೂ ಅನುಮಾನಗಳನ್ನು ಸೃಷ್ಟಿಸುತ್ತಿದೆ ಎಂಬುದೇ ವಿಷಾದದ ಸಂಗತಿ. ಜನಸಂಘವು ಯಾರಿಗೆ ಹಿಂದಿ ತಿಳಿದಿಲ್ಲವೋ ಅವರ ಹಕ್ಕನ್ನು ನಿರ್ಬಂಧಿಸುವ ಯಾವುದೇ ಕ್ರಮವನ್ನಾಗಲೀ ಅಥವಾ ಅವರ ಯಾವುದೇ ಹಕ್ಕುಗಳನ್ನು ಕಸಿದುಕೊಳ್ಳುವುದನ್ನಾಗಲೀ ಬೆಂಬಲಿಸುವುದಿಲ್ಲ. ಜನಸಂಘವು ಹಾಗೆಂದೇ ಕೇಂದ್ರೀಯ ಲೋಕಸೇವಾ ಆಯೋಗ (ಯುಪಿಎಸ್‌ಸಿ) ದ ಎಲ್ಲಾ ಪರೀಕ್ಷೆಗಳನ್ನೂ ಆಯಾ ಪ್ರಾದೇಶಿಕ ಭಾಷಾ ಮಾಧ್ಯಮಗಳಲ್ಲೇ ನಡೆಸಬೇಕು ಮತ್ತು ಯಾವುದೇ ಒಂದು ನಿರ್ದಿಷ್ಟವಾದ ಭಾಷಾಜ್ಞಾನವನ್ನು ನೇಮಕಾತಿ ಸಂದರ್ಭದಲ್ಲಿ ಕಡ್ಡಾಯಗೊಳಿಸಬಾರದು ಎಂದು ಕೋರುತ್ತಲೇ ಬಂದಿದೆ. ಇಂಗ್ಲಿಷನ್ನು ಸಂಕ್ರಮಣದ ಅವಧಿಯಲ್ಲಿ ಅಂದರೆ ಸ್ಥಿತ್ಯಂತರ ತರುವ ಸಂದರ್ಭದಲ್ಲಿ ಬಳಸಲು ಬಯಸುವರನ್ನು ಹಾಗೆ ಮಾಡಲು ಅನುಮತಿಸಬೇಕಾಗುತ್ತದೆ. ಆದರೆ ಸದಾಕಾಲಕ್ಕೂ ಇಂಗ್ಲಿಷಿನ ಪ್ರಾಬಲ್ಯವನ್ನು, ಹಿಂದಿಗೆ ಅದರ ಹಕ್ಕುಬದ್ಧ ಮಾನ್ಯತೆಯ ನಿರಾಕರಣೆಯನ್ನೂ ಸಹಿಸಲಾಗುವುದಿಲ್ಲ. ಇತ್ತೀಚೆಗೆ ಅಂಗೀಕರಿಸಲ್ಪಟ್ಟು ಅನುಮೋದಿತವಾದ ಅಧಿಕೃತ ಭಾಷಾ ಮಸೂದೆ (ತಿದ್ದುಪಡಿ) ಮತ್ತು ಭಾಷಾ ನಿರ್ಣಯಗಳು ತಪ್ಪು ದಿಕ್ಕಿನಲ್ಲಿ ಕೈಗೊಂಡ ಕ್ರಮಗಳಾಗಿವೆ. ಕೇಂದ್ರದ ಭಾಷಾ ನೀತಿಯ ಈ ಮಸೂದೆಯಲ್ಲಿ ಅಂಗೀಕರಿಸಲ್ಪಟ್ಟಂತೆ ಯಾವ ರಾಜ್ಯ ಸರ್ಕಾರಗಳು ತಮ್ಮ ವ್ಯವಹಾರಗಳನ್ನು ತಮ್ಮ ಪ್ರಾದೇಶೀಕ ಭಾಷೆಗಳಲ್ಲಿ ನಡೆಸಲು ಅಪೇಕ್ಷಿಸಿರುವವೋ ಅವುಗಳ ಹಾದಿಯಲ್ಲೂ ಅಡ್ಡಗಲ್ಲಾಗಲಿದೆ. ನವದೆಹಲಿಯಲ್ಲಿ ಇಂಗ್ಲಿಷ್ ಎಲ್ಲಿಯವರೆಗೆ ಆಳುತ್ತಿರುತ್ತದೆಯೋ ಅಲ್ಲಿಯವರೆಗೂ ತಮಿಳು ಮದ್ರಾಸ್‌ನಲ್ಲಿಯೂ ಕೂಡಾ ತನ್ನ ಹಕ್ಕುಬದ್ಧ ಮಾನ್ಯತೆಯನ್ನು ಗಳಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ.

### ಅರಬ್ ರಾಷ್ಟ್ರಗಳು ಚಿಂತನೆ ಮಾಡಬೇಕು

ಭಾರತ ಸರ್ಕಾರದ ವಿದೇಶಿ ನೀತಿಯು ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿಫಲಿಸುವುದೂ ಇಲ್ಲ. ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದೂ ಇಲ್ಲ. ಉದಾಹರಣೆಗೆ ಪಶ್ಚಿಮ ಏಷ್ಯಾಯುದ್ಧಗಳ ಬಗೆಗೆ ಸರ್ಕಾರದ ಧೋರಣೆಗೆ ಜನತೆಯ ಅನುಮೋದನೆ ಇದ್ದಿರಲಿಲ್ಲ. ಬ್ರಿಟನ್ ಸೂಯಜ಼್ ಕಾಲುವೆಯ ಮೇಲೆ ಅಣುಬಾಂಬ್ ಸ್ಫೋಟಿಸಿದಾಗ, ಭಾರತದ ಜನತೆ ಅದನ್ನು ಬಲವಾಗಿ

ವಿರೋಧಿಸಿದ್ದರು. ನಾವು ಯಾವಾಗಲೂ ಅರಬ್ ದೇಶಗಳೊಂದಿಗಿನ ಮಿತ್ರತ್ವವನ್ನು ಆಧರಿಸುತ್ತಲೇ ಬಂದಿದ್ದೇವೆ. ಅದರೆ ಇಂಡೋ–ಪಾಕ್ ಯುದ್ಧ ಸ್ಫೋಟಗೊಂಡಾಗ ಅರಬ್ ರಾಷ್ಟ್ರಗಳಿಂದ ಕನಿಷ್ಠ ಬಾಯಿ ಮಾತಿಗಾದರೂ ಸಹಾನುಭೂತಿ ಪಡೆಯುವಲ್ಲಿ ವಿಫಲರಾದೆವು, ಪಾಕಿಸ್ತಾನ ತಪ್ಪು ಮಾಡಿದ್ದು ಸ್ಪಷ್ಟ ಗೋಚರವಾಗೇ ಇತ್ತು. ಜೋರ್ಡಾನ್ ವಾಸ್ತವವಾಗಿ ಭಾರತದೆದುರು ಪಾಕಿಸ್ತಾನದ ವರ್ತನೆಯಲ್ಲಿ ಪರವಹಿಸಿ ವಕಾಲತ್ತು ವಹಿಸಿತ್ತು. ಆನಂತರ ಭಾರತೀಯರು ಅರಬರ ಬಗೆಗೆ ಭಾರಿ ನಿರಾಶೆಗೊಳಗಾದರು. ಈ ನಿರಾಶೆಯೇ ಇಸ್ರೇಲ್–ಅರಬ್ ರಾಷ್ಟ್ರಗಳ (ಯು.ಎ.ಆರ್.) ಸಂಘರ್ಷದ ವೇಳೆಗೆ ಭಾರತೀಯರ ಧೋರಣೆಯಲ್ಲಿನ ಬದಲಾವಣೆಗೆ ಕಾರಣವಾಯಿತು. ಅರಬ್ ರಾಷ್ಟ್ರಗಳು ಭಾರತದ ಮಿತ್ರತ್ವವನ್ನು ಪ್ರಾಮಾಣಿಕವಾಗಿ ಅಪೇಕ್ಷಿಸುವುದೇ ಆದಲ್ಲಿ ಅವುಗಳು ನಮ್ಮ ಭಾವನೆಗಳನ್ನು ಪರಿಭಾವಿಸಬೇಕಾಗುತ್ತದೆ. ಅವರು ನಮ್ಮ ಶತ್ರುಗಳೊಂದಿಗೆ ಆಪ್ತ ಸಂಬಂಧ ಹೊಂದುವುದು ಸಾಧ್ಯವಿದ್ದರೆ, ನಾವು ಇಸ್ರೇಲ್‌ನೊಂದಿಗೆ ಏಕೆ ಸಂಬಂಧ ಹೊಂದಬಾರದು ಎಂಬುದನ್ನು ಮನಗಾಣಬೇಕು.

### ಚೈನಾ–ಪಾಕ್ ಒಳಸಂಚು

ಕಮ್ಯುನಿಸ್ಟ್ ಚೈನಾ ಮತ್ತು ಪಾಕಿಸ್ತಾನಗಳ ಬಗೆಗೆ ನಮ್ಮ ನೀತಿ ಧೋರಣೆ ಹೇಗಿರಬೇಕೆಂದರೆ, ಆತ್ಮಗೌರವ ಯುಕ್ತ ರಾಷ್ಟ್ರವೊಂದು, ತನ್ನ ಮಣ್ಣಿನ ಮೇಲೆ ಪದಾಘಾತ ಮಾಡಿದ ಹಾಗೂ ದಾಳಿ ಮಾಡಿದ ಶತ್ರು ರಾಷ್ಟ್ರಗಳೊಂದಿಗೆ ಹೇಗೆ ನಡೆದುಕೊಳ್ಳಬೇಕೋ ಹಾಗಿರಬೇಕು. ಆಶ್ಚರ್ಯದ ಸಂಗತಿ ಎಂದರೆ ನಾವು ಇನ್ನೂ ಕೂಡಾ ಫಾರ್ಮೋಸಾ ಸರ್ಕಾರವನ್ನು ಮಾನ್ಯ ಮಾಡಿಲ್ಲ. ಮತ್ತು ಭಾರತವು ಟಿಬೆಟಿನ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಕ್ರಿಯವಾಗಿ ತನ್ನ ಕೊಡುಗೆ ನೀಡಬೇಕಾಗಿದೆ. ದಲೈಲಾಮಾರ ಬಗೆಗಿನ ನಮ್ಮ ಸದ್ಯದ ನಿಲುವು ಧ್ಯೇಯ ಸಾಧನೆಗೆ ನೆರವಾಗುವುದಕ್ಕಿಂತಲೂ ಹೆಚ್ಚಾಗಿ ಅಡ್ಡಿ ಮಾಡುತ್ತದೆ. ಪಾಕಿಸ್ತಾನವಂತೂ ತಾಷ್ಕೆಂಟ್ ಒಪ್ಪಂದವನ್ನು ಅಕ್ಷರಷಃ ಕಸದ ಬುಟ್ಟಿಗೆ ಎಸೆದಿದೆ. ನಮ್ಮ ನೇತಾರರು ಯಾವುದೇ ಕಾರಣಕ್ಕೂ ಅದನ್ನು ನಂಬಿ ಭರವಸೆಯಿಂದ ಮುಂದುವರಿದರೆ ಅದು ವಿಪರ್ಯಾಸವೇ ಸರಿ. ಪಾಕಿಸ್ತಾನದ ಕುರಿತಂತೆ ಸೋವಿಯತ್ ರಷ್ಯಾದ ಧೋರಣೆಯಲ್ಲಿ ಸಕಾರವಾದ ಬದಲಾವಣೆ ಇದೆ. ಆದರೆ ಪಾಕಿಸ್ತಾನದ ಕುರಿತ ನಮ್ಮ ಧೋರಣೆಯು ಮುಖ್ಯವಾಗಿ ಸೋವಿಯತ್ ನಾಯಕರನ್ನು ಮೆಚ್ಚಿಸುವ ಉದ್ದೇಶದಿಂದ ಮಾತ್ರವೇ ನಿರ್ಧರಿತವಾದಂತೆ ತೋರುತ್ತಿದೆ. ಮಾಂಗ್ಲಾ ಡ್ಯಾಂ ವಿಷಯದಲ್ಲಿ ನಮ್ಮ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಅಯಾಚಿತವಾಗಿ ಅಯುಬ್ ಖಾನ್‌ರನ್ನು ಅಭಿನಂದಿಸಿ ಸಂದೇಶ ರವಾನಿಸಿರುವುದಕ್ಕೆ ಇದಲ್ಲದೆ ಬೇರೇನೂ ಸಮರ್ಥನೆ

ನಮಗೆ ಕಾಣುತ್ತಿಲ್ಲ. ಪಾಕಿಸ್ತಾನದ ಬಗೆಗಿನ ಭಾರತದ ಧೋರಣೆ ಆದೇಶದ ವರ್ತನೆಯನ್ನಾಧರಿಸಿ ರೂಪುಗೊಳ್ಳುವುದು ಬೇಕಿಲ್ಲವಾದರೆ, ಸೋವಿಯತ್ ರಷ್ಯ ಅಥವಾ ಅಮೇರಿಕಗಳ ದಾಕ್ಷಿಣ್ಯದಿಂದ ಹಾಗೂ ಅನುನಯದಿಂದ ನಿರೂಪಿಸಲ್ಪಡುವುದಾದಲ್ಲಿ ಈ ಪ್ರಾಂತ್ಯದಲ್ಲಿ ಶಾಂತಿ ಎಂದಿಗೂ ನೆಲೆಸುವುದು ಸಾಧ್ಯವಾಗುವುದಿಲ್ಲ. ಚೈನಾ ಮತ್ತು ಪಾಕಿಸ್ತಾನಗಳು ಒಂದು ಪೂರ್ವನಿಯೋಜಿತ ದಾಳಿಯ ಯೋಜನೆಯನ್ನು ಸಿದ್ಧಪಡಿಸುತ್ತಿವೆ. ಅವುಗಳು ಒಳ ಸಂಚು ಮಾಡುತ್ತಿರುವ ಯೋಜನೆಯ ಬಗೆಗೆ ನಾವು ಉದಾಸೀನರಾಗಿ ಉಳಿಯಲು ಸಾಧ್ಯವಿಲ್ಲ. ಇತ್ತೀಚೆಗೆ ನಮ್ಮ ಸೇವಾ ಸಿದ್ಧತೆಯಲ್ಲಿ ಸ್ವಲ್ಪ ಮಟ್ಟಿಗೆ ಏರಿಕೆಯಾಗಿರುವುದರಲ್ಲಿ ಸಂದೇಹವಿಲ್ಲವಾದರೂ ಪರಿಸ್ಥಿತಿಯ ಅಗತ್ಯಗಳನ್ನು ಎದುರಿಸಲು ಇನ್ನೂ ಸಾಕಷ್ಟು ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ. ಭಾರತ ಸರ್ಕಾರವು ಮೊಂಡುತನದಿಂದ ತನ್ನ ಮೊದಲ ನಿಲುವಿಗೇ ಅಂಟಿಕೊಂಡು ಮುಂದುವರೆಯುತ್ತಿದೆ. ನಾನು ನಮ್ಮ ನಿಲುವನ್ನು ಪುನರುಚ್ಚರಿಸಲು ಭಾರತವು ಅಣು ಬಾಂಬ್ ಪ್ರಯೋಗಕ್ಕೆ ಸಿದ್ಧವಾಗಿರಬೇಕೆಂದು ಹೇಳಲು ಇಚ್ಛಿಸುತ್ತೇನೆ. ಈ ತೀರ್ಮಾನವನ್ನು ತೆಗೆದುಕೊಳ್ಳುವಲ್ಲಿನ ನಮ್ಮ ವೈಫಲ್ಯವು ನಮ್ಮ ಭದ್ರತೆಯನ್ನು ತೀವ್ರವಾಗಿ ಅಪಾಯಕ್ಕೆ ಒಡ್ಡುತ್ತದೆ.

**ಪೀಕಿಂಗ್–ಪಿಂಡಿ ದೇಶಾಭಿಮಾನಿಗಳು**

ಚೈನಾ ಮತ್ತು ಪಾಕಿಸ್ತಾನಗಳಿಂದ ಉಂಟಾದ ಈ ಬೆದರಿಕೆಯ ಸಂದರ್ಭದಲ್ಲಿ. ನಾವು ದೇಶದೊಳಗಿನ ಕೆಲವು ಶಕ್ತಿಗಳ ಚಟುವಟಿಕೆಗಳನ್ನು–ಅಂದರೆ ಅಲ್ಲಿನವರ ತಂತ್ರ, ಯೋಜನೆಗಳಿಗೆ ಅನುರೂಪವಾಗಿ ಅವರಿಂದ ಆದರ್ಶಾತ್ಮಕ ಸ್ಫೂರ್ತಿ ಪಡೆದು ವರ್ತಿಸುವವರ ನಡೆಗಳನ್ನು ಗಮನಿಸುತ್ತಿರಬೇಕು. ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಸರ್ಕಾರದಲ್ಲಿ ಪ್ರಾತಿನಿಧ್ಯವನ್ನು ದೊರಕಿಸಿಕೊಂಡ ಮೇಲೆ ಮಾವೋ ಕಮ್ಯುನಿಸ್ಟರು ಬಹಳ ಮಟ್ಟಿಗೆ ದಿಟ್ಟತನ ಗಳಿಸಿಕೊಂಡಂತೆ ವರ್ತಿಸುತ್ತಿದ್ದು ತಮ್ಮ ಅಂದಾಜು ಯೋಜನೆಗಳನ್ನು ಸಾಕಾರಗೊಳಿಸಲು ಪ್ರತಿಪಾದಿಸಲು ಅಧಿಕಾರದ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ನಕ್ಸಲ್ ಬಾರಿ ವರ್ಗವನ್ನು ಸಂಘಟಿಸಿ ಕಾನೂನು ಮತ್ತು ವ್ಯವಸ್ಥೆಗಳನ್ನು ಹಾಳು ಗೆಡವಿದ್ದಾರೆ. ಅದೇ ಕಾಲಕ್ಕೆ ಅವರು ಆಡಳಿತವನ್ನು ಪಕ್ಷಪಾತ ಪೀಡಿತಗೊಳಿಸಲು ಮತ್ತು ಪೊಲೀಸ್ ವ್ಯವಸ್ಥೆಯನ್ನು ನೀತಿ ಹೀನಗೊಳಿಸಲು ಪ್ರಯತ್ನಿಸುತ್ತಿದ್ದಾರೆ.

ದೇಶವಾಸಿಗಳು ಸದಾಕಾಲಕ್ಕೂ ಕಟ್ಟೆಚ್ಚರದಿಂದ ಜಾಗೃತವಾಗಿ ಗಮನಿಸುತ್ತಿರಬೇಕು. ಜನತೆ, ಈ ದುಷ್ಟಶಕ್ತಿಗಳು ಕಮ್ಯುನಿಸ್ಟ್ ಚೈನಾ ಅಥವಾ ಪಾಕಿಸ್ತಾನದ ಧೋರಣೆಗಳ ಪ್ರಯೋಜನ ಪಡೆಯಲು ಅವಕಾಶ ಕೊಡದಂತೆ ನೋಡಿ ಕೊಳ್ಳುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಯಾವಾಗಲೇ ಆದರೂ ಸರಿ,

ಎಲ್ಲೇ ಆದರೂ ಸರಿ ಈ ದುಷ್ಟಶಕ್ತಿಗಳು ಶಾಂತಿಗೆ ಭಂಗ ತಂದರೆ, ದೇಶದ ಭದ್ರತೆಗೆ ಬೆದರಿಕೆ ಒಡ್ಡಿದರೆ ನಿರ್ದಾಕ್ಷಿಣ್ಯವಾಗಿ ಅವರನ್ನು ದಮನ ಮಾಡಲೇಬೇಕು. ಈ ಶಕ್ತಿ ಘಟಕಗಳನ್ನು ರಾಜಕೀಯ ಮಟ್ಟದಲ್ಲಿ ಮಟ್ಟ ಹಾಕುವುದು ಅಗತ್ಯ. ಈ ದೇಶದ ಜನ ರಾಷ್ಟ್ರೀಯತೆಯಲ್ಲಿ ಮತ್ತು ಪ್ರಜಾಪ್ರಭುತ್ವದಲ್ಲಿ ಅತ್ಯಂತ ಗಾಢವಾದ ವಿಶ್ವಾಸವನ್ನು ಹೊಂದಿದ್ದರೆ ಮತ್ತು ಈ ಮೌಲ್ಯಗಳನ್ನೂ ನಾಶ ಮಾಡುವ ದುಷ್ಟವರ್ಗವನ್ನು ಅವರು ಸಹಿಸುವುದಿಲ್ಲ.

ಆದಾಗ್ಯೂ ನ್ಯಾಯಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿಯಲ್ಲಿ ಕೇಂದ್ರ ಸರ್ಕಾರಕ್ಕಿರುವ ಅಧಿಕಾರಗಳೆಂದು ಊಹಿಸಿ ಸರ್ಕಾರ ಅಂಗೀಕರಿಸಿರುವ ಅಧಿಕಾರಗಳು ಅಸಮರ್ಥನೀಯ ಹಾಗೂ ಅನುಚಿತವಾದಂಥವು. ಕಳೆದ ಚುನಾವಣೆಯಲ್ಲಿ ಉಂಟಾದ ಸೋಲಿನ ಹಿನ್ನೆಲೆಯಲ್ಲಿ ಕೇಂದ್ರದಲ್ಲಿನ ಕಾಂಗ್ರೆಸ್ ಸರ್ಕಾರವು ಅಂಥ ಅಧಿಕಾರಗಳನ್ನೆಲ್ಲ ತನಗೆ ಕೊಟ್ಟುಕೊಳ್ಳುವ, ಮುಂದೊಮ್ಮೆ ಸರ್ಕಾರದ ಮೇಲೆ ತನ್ನ ಬಿಗಿ ಮುಷ್ಟಿಯ ಹಿಡಿತವನ್ನು ಉಳಿಸಿಕೊಳ್ಳಲು ಬಳಸಲು ಬೇಕಾದೀತೆಂದುಕೊಂಡು ಆತಂಕದಿಂದ ಈ ರೀತಿ ಮಾಡುತ್ತಿರುವಂತೆ ಕಾಣುತ್ತಿದೆ.

## ಪ್ರಜಾ ಜಾಗೃತಿಯನ್ನು ನಿಯೋಜಿತಗೊಳಿಸಬೇಕು

ಪ್ರತಿಯೊಂದು ಗಲಭೆ, ಪ್ರತಿಭಟನೆಯ ಸಂದರ್ಭದಲ್ಲೂ ಕಮ್ಯುನಿಸ್ಟರ ಕಾಣದಕೈಯ ಕೈವಾಡವಿದೆ ಎಂದು ಶಂಕಿಸುವ ಮತ್ತು ಅದನ್ನು ಹೊಸಕಿ ಹಾಕಿ ಬಿಡಬೇಕೆಂದು ಸಲಹೆ ಮಾಡುವ ಮಂದಿಯ ಬಗೆಗೂ ನಾವು ಜಾಗರೂಕತೆ ವಹಿಸಬೇಕಾಗುತ್ತದೆ. ಸದ್ಯದ ಬದಲಾಗುತ್ತಿರುವ ಸನ್ನಿವೇಶದಲ್ಲಿ ಸಾರ್ವಜನಿಕ ಪ್ರತಿಭಟನೆಗಳು ಸ್ವಾಭಾವಿಕ ಹಾಗೂ ಅಗತ್ಯವೂ ಕೂಡಾ. ವಾಸ್ತವವಾಗಿ ಅವುಗಳು ಸಾಮಾಜಿಕ ಜಾಗೃತಿಯ ಅಭಿವ್ಯಕ್ತಿ, ಮಾಧ್ಯಮಗಳೇ ಆಗಿವೆ. ಈ ಪ್ರತಿಭಟನೆಗಳನ್ನು ರಚನಾತ್ಮಕ ಕ್ರಾಂತಿಯ ಸಾಧನಗಳನ್ನಾಗಿ ಮಾಡಿಕೊಳ್ಳಬೇಕು ಮತ್ತು ಹಿಂಸೆ, ಸಾಹಸಗಳಾಗಿ ಬಿಡಲು ಅವಕಾಶ ಕೊಡಬಾರದು. ಆದ್ದರಿಂದ ನಾವು ಜನತೆಯ ಆಂದೋಲನಗಳಲ್ಲಿ ಲವಲವಿಕೆಯಿಂದ ಪಾಲ್ಗೊಳ್ಳಬೇಕು ಮತ್ತು ಅವರಿಗೆ ಮಾರ್ಗದರ್ಶನ ನೀಡಲು ಪ್ರಯತ್ನಿಸಬೇಕು. ಆರ್ಥಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಉದ್ದೇಶಿಸಿರುತ್ತಾರೋ ಅವರು ಈ ಚಳುವಳಿ ಆಂದೋಲನಗಳಿಂದ ವಿಚಲಿತಗೊಳ್ಳುವುದಿಲ್ಲ. ಮಾತ್ರವಲ್ಲ ಹತಾಶೆ, ನಿರಾಶೆಗಳ ವಾತಾವರಣ ಸೃಷ್ಟಿಸಲು ಹವಣಿಸುತ್ತಿರುತ್ತಾರೆ. ನಮಗನ್ನಿಸುವಂತೆ ಈ ವರ್ಗದ ಮಂದಿ ಪ್ರಗತಿ ರಥದ ಗಾಲಿಗಳನ್ನು ಸ್ಥಗಿತಗೊಳಿಸಲು ಹಾಗೂ ದೇಶದ ಗಮ್ಯಸ್ಥಾನವನ್ನು ತಿರುಚಲು ವ್ಯರ್ಥ ಪ್ರಯತ್ನ ಮಾಡುತ್ತಿರುತ್ತಾರೆ. ಆದರೆ ಇದು ಸಾಧ್ಯವಾಗುವುದಿಲ್ಲ. ಇತಿಹಾಸದಿಂದ ಸ್ಫೂರ್ತಿಯನ್ನು ತೆಗೆದುಕೊಳ್ಳುವಾಗ್ಯೆ, ನಮ್ಮ

ಸಾಧನೆಯ ಪರಾಕಾಷ್ಠೆಯನ್ನು ತಲುಪಿದ್ದೇವೆಂದು ಭಾವಿಸುವುದಿಲ್ಲ; ವರ್ತಮಾನದಲ್ಲಿ ವಾಸ್ತವ, ಪ್ರಾಯೋಗಿಕ ಕಾರ್ಯ ವಿಧಾನ ಸಾಧ್ಯವಿರುವಾಗ, ವರ್ತಮಾನಕ್ಕೇ ಕಟ್ಟು ಬಿದ್ದಿರುವಂತೆ ಭಾಸವಾಗುವುದಿಲ್ಲ ಮತ್ತು ನಮ್ಮ ಕಣ್ಣಮುಂದೆಯೇ ಈ ರಾಷ್ಟ್ರಕ್ಕೆ ಭವ್ಯ ಭವಿಷ್ಯವಿರುವ ದೃಶ್ಯವಿರುವಾಗ, ನಾವು ಬರೇ ನೋಟಕರಲ್ಲ, ನಮ್ಮ ಕಾಣ್ಕೆಯನ್ನು ಸಾಕಾರಗೊಳಿಸಲು ಕಂಕಣ ಬದ್ಧರಾದ ಕರ್ಮಯೋಗಿಗಳಾಗಿದ್ದೇವೆ.

ನಾವು ಯಾವುದೇ ಒಂದು ನಿರ್ದಿಷ್ಟ ಸಮುದಾಯ ಅಥವಾ ವರ್ಗದ ಸೇವೆಗೆ ಪ್ರತಿಜ್ಞಾ ಬದ್ಧರಾದವರಲ್ಲ, ಬದಲಿಗೆ ಇಡೀ ದೇಶಕ್ಕೆ ಸೇವೆಗೆ ವಚನಬದ್ಧರಾಗಿದ್ದೇವೆ. ಈ ದೇಶ ವಾಸಿಗಳಲ್ಲಿ ಪ್ರತಿಯೊಬ್ಬರೂ ನಮ್ಮ ರಕ್ತದ ರಕ್ತ, ಮಾಂಸಖಂಡಗಳಲ್ಲಿ ಮಾಂಸಖಂಡವಾಗಿದ್ದಾರೆ. ಪ್ರತಿಯೊಬ್ಬರಿಗೂ ತಾವು ಭಾರತಮಾತೆಯ ಮಕ್ಕಳು ಎಂಬ ಹೆಮ್ಮೆಯ ಪ್ರಜ್ಞೆ ಮೂಡಿಸುವವರೆಗೂ ನಾವು ವಿರಮಿಸಬಾರದು. ನಾವು ತಾಯಿ ಭಾರತಿಯನ್ನು ಸುಜಲ, ಸುಫಲ (ಫಲಭರಿತ, ಜಲಭರಿತ)ಗಳನ್ನಾಗಿ ಅನ್ವರ್ಥಗೊಳಿಸಬೇಕು. ದಶಪ್ರಹರಣ ಧಾರಿಣೀ ದುರ್ಗಾ (ಹತ್ತು ಆಯುಧಗಳಿಂದ ಕೂಡಿದ ದೇವಿದುರ್ಗಾ) ಆಗಿ ತಾಯಿ ದುಷ್ಟಶಕ್ತಿಯನ್ನು ದಮನ ಮಾಡಬಲ್ಲಳು; ಲಕ್ಷ್ಮಿಯಾಗಿ ಎಲ್ಲೆಡೆಯೂ ಸಿರಿವಂತಿಕೆಯನ್ನು ವಿತರಣೆ ಮಾಡಬಲ್ಲಳು ಹಾಗು ಸರಸ್ವತಿಯಾಗಿ ತನ್ನ ಸುತ್ತಲೂ ಅಜ್ಞಾನದ ತಮವನ್ನು (ಕತ್ತಲೆಯನ್ನು) ಹೊಡೆದೋಡಿಸಿ ಜ್ಞಾನದ ಕಿರಣಗಳನ್ನು ಪಸರಿಸುವಳು. ಅಂತಿಮ ವಿಜಯದಲ್ಲಿ ನಂಬುಗೆ ಇಟ್ಟು ಈ ಕಾರ್ಯದಲ್ಲಿ ನಮ್ಮನ್ನು ನಾವು ಸೇವೆಗೆ ಸಮರ್ಪಿಸಿಕೊಳ್ಳೋಣ.

ವಂದೇ ಮಾತರಂ

(ಭಾರತೀಯ ಜನಸಂಘದ ಹದಿನಾಲ್ಕನೇ ವಾರ್ಷಿಕ ಅಧಿವೇಶನ)

ಸಂಗ್ರಹ–ನಿರೂಪಣೆ–ವಿ.ಎನ್.ದೇವಧರ್.

ಸಮಾಚಾರ್–ಭಾರತದ ಮುಖವಾಣಿ – ದೀನ್‌ದಯಾಳ್ ಉಪಾಧ್ಯಾಯ

ಕ್ಷಣದಿಂದ ಕ್ಷಣಕ್ಕೆ ನಮ್ಮ ಸುತ್ತಲೂ ಅಸಂಖ್ಯಾತ ಘಟನೆಗಳು ಸಂಭವಿಸುತ್ತಿರುತ್ತವೆ. ಅವುಗಳಲ್ಲಿ ಬೇರೆಯವರಿಗೆ ಹೇಳಲು ಸೂಕ್ತವೆಂದು ನಾವು ಯಾವುದನ್ನು ಪರಿಭಾವಿಸುತ್ತೇವೆಯೋ ಅವುಗಳೆಂದರೆ ವಾರ್ತೆಗಳು ಯಾವ ಸುದ್ದಿಯ ಒಬ್ಬ ವ್ಯಕ್ತಿ ಅಥವಾ ಕುಟುಂಬಕ್ಕೆ ಸೀಮಿತವಾದುದಲ್ಲವೋ ಯಾವುದು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದುದೋ ಅದು ವೃತ್ತ ಪತ್ರಿಕೆಯಲ್ಲಿ ಸ್ಥಾನ ಪಡೆದುಕೊಳ್ಳುತ್ತದೆ. ಅದೇ ಸುದ್ದಿಗೂ ಸಾಹಿತ್ಯಕ್ಕೂ ಇರುವ ಪ್ರಮುಖ ವ್ಯತ್ಯಾಸ. ಒಂದು ಸುದ್ದಿಯು ಮುಖ್ಯವಾಗಿ ಬೇರೆಯವರಿಗೆ ಏನಾಯಿತೆಂಬುದಕ್ಕೆ ಸಂಬಂಧಿಸಿರುತ್ತದೆಯಾದರೆ ಸಾಹಿತ್ಯವು ಮೂಲಭೂತವಾಗಿ ಸ್ವಂತದ ಅಭಿವ್ಯಕ್ತಿಯ ಒಂದು ಮಾಧ್ಯಮವಾಗಿರುತ್ತದೆ. ವಸ್ತುನಿಷ್ಠತೆ ವಾರ್ತೆಯ ಪ್ರಮುಖ ಲಕ್ಷಣವಾಗಿರುತ್ತದೆ. ಆದಾಗ್ಯೂ ಸುದ್ದಿ

ಸಂಗ್ರಹಿಸುವವರು ಅಸಂಖ್ಯಾತ ಘಟನೆಗಳ ಸುದ್ದಿಗಳನ್ನು ಸಂಗ್ರಹಿಸಿದರೂ ಕೆಲವೊಂದನ್ನು ಮಾತ್ರ ವರದಿ ಮಾಡುತ್ತಾರೆ.

ಎಲ್ಲಾ ಪ್ರಸಂಗಗಳ ಸುದ್ದಿ ಸಂಗ್ರಹ ಸಾಧ್ಯವೂ ಅಲ್ಲ, ಅಗತ್ಯವೂ ಅಲ್ಲ, ಒಬ್ಬ ವ್ಯಕ್ತಿಯ ಅಥವಾ ಒಂದು ದೃಶ್ಯದ ಭಾವಚಿತ್ರವು ಸಂಬಂಧಿಸಿದ ಘಟನೆಯ ಪೂರ್ಣ ಪ್ರತಿಬಿಂಬದ್ದಾಗಿರುತ್ತದೆ. ಒಬ್ಬ ವರ್ಣ ಕಲಾವಿದ ಚಿತ್ರಿಸಿದ ಚಿತ್ರಿಕೆಯಲ್ಲಿ ಪ್ರೇಕ್ಷಕ/ ನೋಡುಗನಿಗೆ ಆ ವಸ್ತುವಿಗೆ ಸಂಬಂಧಿಸಿದ ಕಲ್ಪನೆಯ ಕುರಿತು ಒಂದು ಸರಿಸುಮಾರು ಕಲ್ಪನೆ ಬರುವಂಥ ವಿವರಗಳು ಮಾತ್ರ ಇರುತ್ತವೆ. ಅಪೇಕ್ಷಿತ ಛಾಪುಗಳನ್ನು ಬಿಟ್ಟು ಬಿಡುತ್ತದೆ. ಅದೇ ತೆರನಾಗಿ, ಶುಷ್ಕ ಸುದ್ದಿಗಳನ್ನೂ ವರದಿ ಮಾಡುವುದು ಮಾತ್ರವೇ ವಾರ್ತೆ ಸುದ್ದಿ ಆಗುವುದಿಲ್ಲ. ಅದು ಆಸಕ್ತಿ ದಾಯಕವೂ, ಜನಸಾಮಾನ್ಯರ ಕುತೂಹಲವನ್ನು ತಣಿಸಬಲ್ಲಂಥದ್ದೂ ಆಗಿರಬೇಕು. ವರದಿಗಾರನೊಬ್ಬನು ಸಾರ್ವಜನಿಕರ ಕುತೂಹಲವನ್ನೂ ಅರಿವಿನಲ್ಲಿಟ್ಟುಕೊಂಡು ನಿರ್ಲಿಪ್ತನಾಗಿ ಕೆಲಸ ಮಾಡುವುದು ಸಾಧ್ಯವಾಗುವುದಿಲ್ಲ. ಸಾರ್ವಜನಿಕರ ಆಸಕ್ತಿಯನ್ನು ತೃಪ್ತಿ ಪಡಿಸುವುದು ಮಾತ್ರವೇ ಮುಖ್ಯವಲ್ಲ. ಒಬ್ಬ ಪತ್ರಿಕೋದ್ಯೋಗಿಯು ಜನಸಾಮಾನ್ಯರ ಆಸಕ್ತಿಯನ್ನು ಮಾರ್ಗದರ್ಶಿಯಾಗಿ ಸರಿಯಾದ ದಿಕ್ಕಿನಲ್ಲಿ ಬೆಳೆಸುತ್ತಾನೆ. ಇದೇ ಆತನ ವೃತ್ತಿಯ ಭಾವನಾತ್ಮಕ ಮತ್ತು ಸೃಜನಾತ್ಮಕ ಸಂಗತಿಯಾಗಿರುತ್ತದೆ. ಈ ಮಾರ್ಗ ಸೂಚಿಯಾಗುವ ಪ್ರಜ್ಞೆಯನ್ನು ಆತ ಕಳೆದುಕೊಂಡದ್ದೇ ಆದರೆ ಆತ ಯಾವಾಗಲೂ ಸುದ್ದಿ ಸಂಗ್ರಹ ಹಾಗೂ ವಿತರಣೆಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾನೆ. ಒಬ್ಬ ಬಾತ್ಮೀದಾರನಿಗೂ ಮತ್ತು ವದಂತಿಯನ್ನು ಬೆಳೆಸುವವನಿಗೂ ವ್ಯತ್ಯಾಸವಿದೆ. ವದಂತಿಯು ಓದುಗರಿಗೆ ಆಸಕ್ತಿದಾಯಕವಾಗಿರಬಹುದು, ಆದರೆ ಅದು ವಾತುಕತೆ ಅಲ್ಲವಷ್ಟೆ? ಸಂಭಾಷಣೆಯೊಂದರಲ್ಲಿ ಸತ್ಯ, ಶಿವ ಮತ್ತು ಸುಂದರ ಈ ಮೂರು ಗುಣಲಕ್ಷಣಗಳಿರಬೇಕಾಗುತ್ತದೆ. ಒಬ್ಬ ವರದಿಗಾರ ಒಂದು ಕಲ್ಪನಾ ಪ್ರಪಂಚದಲ್ಲಿ ವಿಹರಿಸುತ್ತಿರುವವನಲ್ಲ. ತನ್ನ ಸುತ್ತಲಿನ ನಿಜಜೀವನದ ಪ್ರಸಂಗಗಳಿಂದ ಆತನ ಸೃಜನ ಶಕ್ತಿಯು ಸ್ಫುರಿತವಾಗುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ಆತ ವರದಿಯನ್ನು ತಯಾರಿಸುತ್ತಾನೆ. ಈ ಹಿನ್ನೆಲೆಯಲ್ಲಿ ವಸ್ತು ನಿಷ್ಠತೆಯು ಸುದ್ದಿ ಸಂಗ್ರಹದ ಮುಖ್ಯ ಲಕ್ಷಣಗಳಲ್ಲೊಂದಾಗಿರಬಹುದಾದರೂ ಅದೂ ಕೂಡಾ ವ್ಯಕ್ತಿತ್ವದಿಂದ ಪ್ರಭಾವಿತವಾಗುತ್ತದೆ. ಪ್ರತಿ ಸುದ್ದಿಯೂ ಅದರದೇ ಆದ ಪ್ರತ್ಯೇಕತೆಯನ್ನು ಹೊಂದಿರಬೇಕು. ಈ ದೃಷ್ಟಿಯಿಂದ ಭಾರತೀಯ ಪತ್ರಕರ್ತರು ಹಿಂದೆ ಬೀಳುತ್ತಾರೆ.

ಬಹಳಷ್ಟು ವೃತ್ತ ಪತ್ರಿಕೆಗಳು ಒಂದೇ ತೆರನಾದ ರಚನೆಯನ್ನು ಹೊಂದಿರುತ್ತವೆ. ಸಂಪಾದಕೀಯ ಹಾಗೂ ಬೇರೆ ಕೆಲವೊಂದು ವಿಷಯಗಳ ಹೊರತಾಗಿ ಎಲ್ಲಾ ವಾರ್ತಾ ಪತ್ರಿಕೆಗಳಲ್ಲೂ ಹೆಚ್ಚುಕಡಿಮೆ ಬೇರೆಲ್ಲ ಸಂಗತಿಗಳೂ ಒಂದೇ ತೆರನಾಗಿರುತ್ತದೆ. ಯಾರು ಸಾರ್ವಜನಿಕ ಜೀವನದಲ್ಲಿ ಪ್ರಮುಖವಾಗಿ ಕೆಲಸ ಮಾಡುತ್ತಿದ್ದಾರೋ

ಅವರೂ ಕೂಡ ಒಂದಕ್ಕಿಂತ ಹೆಚ್ಚಿನ ವೃತ್ತ ಪತ್ರಿಕೆ ಓದುವ ಅಗತ್ಯವಿದೆ ಎಂದು ಆಲೋಚಿಸುವುದಿಲ್ಲ! ಅವರು ಯವುದೇ ದಿನ ಪತ್ರಿಕೆಯನ್ನಾದರೂ ಒಗ್ಗಿಸಿಕೊಳ್ಳುತ್ತಾರೆ. ಭಾರತದ ದಿನಪತ್ರಿಕೆತಗಳು ತಮ್ಮದೇ ಆದ ಪ್ರತ್ಯೇಕ ಛಾಪು ಒತ್ತುವುದರಲ್ಲಿ ವಿಫಲವಾಗುತ್ತವೆ. ಇದರ ಹಿಂದಿನ ಕಾರಣವೆಂದರೆ ಬಹಳಷ್ಟು ದಿನಪತ್ರಿಕೆಗಳಿಗೂ 'ಪ್ರೆಸ್‌ಟ್ರಸ್ಟ್ ಆಫ್ ಇಂಡಿಯಾ' ಒಂದೇ ಸುದ್ದಿ ಮೂಲವಾಗಿದೆ. ಅದು ವಾಸ್ತವವಾಗಿ ರಾಯಿಟರ್ಸ್‌ನ ಇನ್ನೊಂದು ಅಭಿವ್ಯಕ್ತಿ ಮಾಧ್ಯಮವಾಗಿದ್ದು ಅಸೋಸಿಯೇಟ್‌ಡ್ ಪ್ರೆಸ್ ಆಫ್ ಇಂಡಿಯಾದ ಶಾಖೆಯಂತಿದೆ.

ಇದಲ್ಲದೆ, ಹಲವಾರು ಸರ್ಕಾರಿ ಕಚೇರಿಗಳು, ಸರ್ಕಾರೀ ಇಲಾಖೆಗಳ ಮಾಹಿತಿ ಕಚೇರಿಗಳೂ ಕೂಡಾ ಬಹಳಷ್ಟು ಪತ್ರಿಕೆಗಳಿಗೆ ಸುದ್ದಿ ಮೂಲಗಳಾಗಿರುತ್ತವೆ. ಪತ್ರಕರ್ತರು ಒಂದು ದೃಷ್ಟಾಂತದ ಬಗೆಗೆ ಒಂದೇ ಬಗೆಯ ನಿದರ್ಶನ ಸಂಹಿತೆಯನ್ನು ಅನುಸರಿಸುತ್ತಾರಾಗಿ ಬಹಳಷ್ಟು ಪತ್ರಕರ್ತರು ಒಂದೇ ಶೈಲಿಯಲ್ಲಿ ವರದಿ ತಯಾರಿಸಿ ಕಳಿಸುತ್ತಾರೆ. ಒಂದು ವೇಳೆ ಯಾರಾದರೊಬ್ಬರು ಏನಾದರೊಂದು ಹೊಸ ಶೈಲಿಯಲ್ಲಿ ಪ್ರಯತ್ನಿಸಿದರೂ, ಹೊಸ ಸಂಪಾದಕರುಗಳು ಅದನ್ನು ಪ್ರಕಟಿಸಲು ನಿರಾಕರಿಸುತ್ತಾರೆ. ಇದರ ಪರಿಣಾಮವೆಂಬಂತೆ ಸ್ವಾತಂತ್ರ್ಯಾನಂತರವೂ ಈ ಕ್ಷೇತ್ರದಲ್ಲಿ ಮುಂದುವರೆಯುವಲ್ಲಿ ವಿಫಲರಾಗಿದ್ದೇವೆ. ಸುದ್ದಿಕ್ಷೇತ್ರದಲ್ಲಿ ರಾಜಕಾರಣಿಗಳ, ಹಲವಾರು ಸಂಘ–ಸಂಸ್ಥೆಗಳ, ವಿಶೇಷವಾಗಿ ಆಳುವ ಪಕ್ಷದವರ ಪ್ರಭಾವ ಪ್ರಬಲವಾಗಿರುತ್ತವೆ. ಇದು ಭಾರತೀಯರ ರಾಷ್ಟ್ರ ಜೀವನದ ಮೂಲಭೂತ ತತ್ವಗಳಿಗೆ ಪ್ರತಿಯಾಗಿರುತ್ತದೆ. ರಾಜಕೀಯದ ಹೊರತಾದ ಬೇರೆ ಕ್ಷೇತ್ರಗಳು ಸಾಕಷ್ಟಿವೆಯಾದರೂ ಅವುಗಳನ್ನೂ ಉಪೇಕ್ಷಿಸಲಾಗಿದೆ.

ಒಂದು ಅಪಘಾತ ಅಥವಾ ಅಪರಾಧ ಸಂಭವಿಸಿದಾಗ ಮಾತ್ರ ಗಮನ ಹರಿಸಲಾಗುವುದು. ಸಾಹಿತ್ಯ, ಸಂಸ್ಕೃತಿ, ಧರ್ಮಗಳ ಸಂಬಂಧವಾಗಿ ಸುದ್ದಿ ಇರುವುದು ತೀರಾ ವಿರಳ. ವಿದೇಶೀ ಸುದ್ದಿಗಳ ಮೇಲುಗೈಯ್ಯಂತೂ ಇರುತ್ತದೆ. ಅರ್ಜೆಂಟಿನಾದಲ್ಲಿ ಒಂದು ರೈಲ್ವೇ ಅಪಘಾತ ಸಂಭವಿಸಿದರೆ ವಾರ್ತಾ ಪತ್ರಿಕೆಯಲ್ಲಿ ಸುದ್ದಿ ಇದ್ದೇ ಇರುತ್ತದೆ. ಆದರೆ ನಿಮ್ಮದೇ ನಗರದಲ್ಲಿ ಇರಬಹುದಾದ ಜಗದ್ಗುರು ಶಂಕರಾಚಾರ್ಯರ ಸಂಬಂಧವಾದ ಕಾರ್ಯಕ್ರಮವು ಲೇಖನ ಯೋಗ್ಯವೆಂದು ಪರಿಗಣಿಸಲ್ಪಡುವುದಿಲ್ಲ. ರಾಯಿಟರ್ಸ್ ಮೂಲದಿಂದ ಬರುವ ಪೋಪ್ ಸಮಾಚಾರ ಅಥವಾ ವಿದೇಶೀ ಪಂಥದ ಸಮಾಚಾರವು ಪ್ರಕಟಿಸಲ್ಪಡುತ್ತದೆ. ಆಕಾಲಿ ನಾಯಕ ಮಾಸ್ಟರ್ ತಾರಾ ಸಿಂಗ್‌ನ ಹೇಳಿಕೆಗಳು ಆತ ರಾಜಕೀಯದಲ್ಲಿ ಸಕ್ರಿಯವಾಗಿರುವುದರಿಂದ ಪ್ರಕಟಣಾ ಯೋಗ್ಯವೆಂದು ಪರಿಗಣಿಸಲ್ಪಡುತ್ತವೆಯಾದರೂ, ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯ ಸದಸ್ಯರ ಅಭಿಪ್ರಾಯಗಳು ಕಡೆಗಣಿಸಲ್ಪಡುತ್ತವೆ.

ಸಂಭಾಷಣೆಯ ಮೌಲ್ಯದ ಕುರಿತಾದ ಅಭಿಪ್ರಾಯದ ಹೊರತಾಗಿಯೂ

ಭಾಷೆಯೂ ಒಂದು ಮುಖ್ಯ ಸಂಗತಿಯಾಗಿದೆ. ಈ ವರೆಗೆ ನಾವು ಇಂಗ್ಲಿಷನ್ನು ವ್ಯಾವಹಾರಿಕ ಭಾಷೆಯಾಗಿ ಬಳಸುತ್ತ ಬಂದಿದ್ದೇವೆ. ಏಜೆನ್ಸಿ ವ್ಯವಹಾರಗಳು ಪ್ರಮುಖವಾಗಿ ಆಂಗ್ಲಭಾಷೆಯಲ್ಲಿಯೇ ನಡೆಯುತ್ತಿವೆ. ಸ್ಥಳೀಯ ಭಾಷಾ ಸುದ್ದಿಪತ್ರಿಕೆಗಳು ಕೂಡಾ ಆಂಗ್ಲ ಸುದ್ದಿ ಮೂಲದಿಂದ ಅನುವಾದಿಸಿ ಪ್ರಕಟಿಸುತ್ತವೆ.

ಇವೆಲ್ಲದರ ಫಲಶ್ರುತಿ ಎಂದರೆ ಭಾರತಕ್ಕೆ ಒಂದು ಅಭಿವ್ಯಕ್ತಿ ಅಥವಾ ಮುಖವಾಣಿ ಇಲ್ಲವಾಗಿದೆ. ಯಾರು ಆಂಗ್ಲ ಭಾಷೆಯಲ್ಲಿ ಆಲೋಚಿಸುತ್ತಾರೋ ಅವರು ಭಾರತೀಯ ನೀತಿ ಸಂಹಿತೆಯನ್ನು ಗ್ರಹಿಸುವಲ್ಲಿ ವಿಫಲರಾಗುತ್ತಾರೆ, ಯಾರು ಗ್ರಹಿಸುತ್ತಾರೋ ಅಂಥವರೂ ಕೂಡಾ ಅದನ್ನು ಇಂಗ್ಲಿಷಿನಲ್ಲಿ ಅಭಿವ್ಯಕ್ತಿಸಲು ವಿಫಲರಾಗುತ್ತಾರೆ; ಎಲ್ಲಾ ಸುದ್ದಿ ಸಂಗ್ರಹವನ್ನು ಆಂಗ್ಲ ವಾಚಕರನ್ನೂ ಗಮನದಲ್ಲಿಟ್ಟುಕೊಂಡೇ ಮಾಡಲಾಗುತ್ತದೆ ಮತ್ತು ಅದನ್ನೇ ಸ್ಥಳೀಯ ಭಾಷಾ ಪತ್ರಿಕೆಗಳಿಗೂ ಒದಗಿಸಲಾಗುತ್ತದೆ. ಪ್ರೆಸ್‌ಟ್ರಸ್ಟ್ ಆಫ್ ಇಂಡಿಯಾ (ಪಿಟಿಐ)ವು ಎರಡನೇ ದರ್ಜೆಯ ಸುದ್ದಿ ಸರಬರಾಜು ಸೇವೆ ನೀಡುತ್ತದೆ ಮತ್ತು ಪತ್ರಿಕೆಗಳಿಗೆ ಅದು ಕಡಿಮೆ ವೆಚ್ಚದ್ದಾಗಿ ಲಭ್ಯವಿರುತ್ತದೆ. ಈ ಸೇವೆಯಲ್ಲಿ ಮೂಲ ಸುದ್ದಿಗಳನ್ನು ಕತ್ತರಿಸಿ ಸಂಗ್ರಹ ರೂಪಕ್ಕೆ ತಂದು ಒದಗಿಸಲಾಗುತ್ತದೆ. ಅಂಥ ದಿನ ಪತ್ರಿಕೆಗಳ ಸಂಪಾದಕರು ಒಬ್ಬ ಅನುವಾದಕರಲ್ಲದೆ ಬೇರೇನೂ ಆಗಿರಲು ಸಾಧ್ಯವಿಲ್ಲ. ಅನೇಕ ಬಾರಿ ವರದಿಗಾರನೊಬ್ಬ ಭಾರತೀಯ ಭಾಷೆಯೊಂದರಲ್ಲಿ ಕೊಡಲ್ಪಟ್ಟ ಹೇಳಿಕೆಯೊಂದನ್ನು ಆಂಗ್ಲಭಾಷೆಗೆ ತರ್ಜುಮೆ ಮಾಡುತ್ತಾನೆ ಮತ್ತು ಅದೇ ಪತ್ರಿಕೆಯ ಸಂಪಾದಕ ಪುನಃ ಅದನ್ನೇ ಹಿಂದಿ ಭಾಷೆಗೆ ಭಾಷಾಂತರಿಸುತ್ತಾನೆ.

(ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಫೌಂಡೇಷನ್ ಫಾರ್ ಇಂಟಿಗ್ರಲ್ ಹ್ಯೂಮನಿಸ–ಇದರಲ್ಲಿ ಡಾ. ಮಹೇಶ್ಚಂದ್ರ ಶರ್ಮ ಅವರು ಪ್ರಕಟಿಸಿ, ಪ್ರಕಾಶಿಸಿದ ಪಂ. ದೀನದಯಾಳರ ಲೇಖನ.)

**ಬಿ.ಎಸ್.ವಿಜಯಲಕ್ಷ್ಮಿ**

* * *

# ಒಂದು ಹೊಸ ಜಲಿಯವಾಲಾ

ಕಳೆದ ವಾರ, ೧೯೬೩ರ ಏಪ್ರಿಲ್ ೧೩ರಂದು, ಬೈಸಾಖಿಯ ಶುಭ ಸಂದರ್ಭದಲ್ಲಿ ಗೃಹಸಚಿವ ಶ್ರೀ ಲಾಲ್ ಬಹಾದುರ್ ಶಾಸ್ತ್ರಿ ಅವರು ಅಧಿಕೃತ ಭಾಷಾ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದರು. ಈ ಉದ್ದೇಶಿತ ಕಾಯಿದೆಯನ್ವಯ, ಭಾರತ ಸ್ವತಂತ್ರವಾಗುವ ಮುನ್ನ ಅಥವಾ ಸಂವಿಧಾನವನ್ನು ಅಳವಡಿಸಿಕೊಳ್ಳುವ ಮುನ್ನ ಕಚೇರಿಯ ಉದ್ದೇಶಗಳಿಗಾಗಿ ಇಂಗ್ಲಿಷ್ ಭಾಷೆಯ ಬಳಕೆಯಾಗುತ್ತಿದ್ದ ರೀತಿಯಲ್ಲಿಯೇ, ಎಳ್ಳಷ್ಟೂ ವ್ಯತ್ಯಾಸವಿಲ್ಲದೆ, ಅದು ೧೯೬೫ರ ಜನವರಿ ೨೬ರ ನಂತರವೂ ಬಳಕೆಯಾಗಲಿದೆ.

೧೯೬೫ರ ಜನವರಿ ೨೬ರ ನಂತರ ಎಲ್ಲ ಕಚೇರಿ ವ್ಯವಹಾರಗಳು ಹಿಂದಿಯಲ್ಲೇ ನಡೆಯಬೇಕೆಂದು ಸಂವಿಧಾನದ ೩೪೩ನೇ ಕಲಮು ವಿಧಿಸುತ್ತದೆ. ಹಿಂದಿ ಭಾಷೆಗೆ ಈ ನ್ಯಾಯವಾದ ಸ್ಥಾನವನ್ನು ಈಗ ನಿರಾಕರಿಸಲು ಉದ್ದೇಶಿಸಲಾಗಿದೆ. ಶ್ರೀ ಶಾಸ್ತ್ರಿಯವರು ಇದನ್ನು ಕೇವಲ ಭಾಷಾಂತರದ, ಅದೂ ನಿರ್ದಿಷ್ಟ ಉದ್ದೇಶಗಳಿಗಾಗಿ ಮಾತ್ರ ಬಳಸಲ್ಪಡುವ, ಭಾಷೆಯಾಗಿ ಮಾಡಬೇಕೆಂದು ಉದ್ದೇಶಿಸಿದ್ದಾರೆ. ಇಷ್ಟಾಗಿಯೂ ಈ ಮಸೂದೆಯು (ವಿಧೇಯಕವು) ಹಿಂದಿ ಭಾಷೆಯ ಸ್ಥಾನವನ್ನು ಉತ್ತಮಗೊಳಿಸುವುದೆಂದು ಶಾಸ್ತ್ರಿಯವರು ಹೇಳುವುದೇ ಆದಲ್ಲಿ, ಅವರು ಉದ್ದೇಶ ಪೂರ್ವಕವಾಗಿ ಜನತೆಗೆ ಮೋಸಮಾಡಲು ಪ್ರಯತ್ನಿಸುತ್ತಿದ್ದಾರೆಂದು ನಾನು ಹೇಳಲೇಬೇಕಾಗುತ್ತದೆ.

ನಮ್ಮ ಸಂವಿಧಾನದ ಕರ್ತೃಗಳು ಹಿಂದಿಯನ್ನು ಭಾರತದ ಅಧಿಕೃತ ಭಾಷೆಯೆಂದು ಪರಿಗಣಿಸಿರುವುದರ ಹಿಂದಿನ ಕಾರಣಗಳ ವಿಷಯವಾಗಿ ಇಲ್ಲಿ ವಿಸ್ತರಿಸಲು ನಾನು ಬಯಸುವುದಿಲ್ಲ. ಈ ವಿಷಯವನ್ನು ಸಂವಿಧಾನ ಮಂಡಳಿಯಲ್ಲಿ ವಿಶದವಾಗಿ ಚರ್ಚಿಸಿ, ಸೂಕ್ತ ಚಿಂತನೆಯ ನಂತರ, ಹಿಂದಿ ರಾಷ್ಟ್ರದ ಅಧಿಕೃತ ಭಾಷೆಯೆಂದು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಎಲ್ಲ ಕಚೇರಿ ಕಾರ್ಯಗಳಿಗೂ ಇಂಗ್ಲಿಷಿನ ಸ್ಥಾನವನ್ನು ಹಿಂದಿ ವಹಿಸಿಕೊಳ್ಳುವುದು ಸಾಧ್ಯವಾಗುವಂತೆ ಸಂವಿಧಾನ ಪ್ರಾರಂಭದಿಂದ ಹದಿನೈದು ವರ್ಷಗಳ ಒಳಗೆ ಹಿಂದಿಯನ್ನು ಬೆಳೆಸುವ

ಹಾಗೂ ಆಡಳಿತ ಯಂತ್ರವನ್ನು ತರಬೇತಿಗೊಳಿಸುವ ಜವಾಬ್ದಾರಿಯನ್ನು ಆಡಳಿತಗಾರರಿಗೆ ಸಂವಿಧಾನವು ವಿಧಿಸಿತು. ಈ ಕರ್ತವ್ಯವನ್ನು ನಿರ್ವಹಿಸುವಲ್ಲಿ ಸರ್ಕಾರವು ಸೋತಿದೆ ಎಂಬುದು ಸ್ಪಷ್ಟವಾಗಿದೆ. ತನ್ನ ಸೋಲನ್ನು ಒಪ್ಪಿಕೊಂಡು, ಅದನ್ನು ಪರಿಹರಿಸಲು ಸ್ವಲ್ಪ ಕಾಲಾವಧಿಯನ್ನು ಜನತೆಯಿಂದ ಕೋರುವ ಬದಲು ಸರ್ಕಾರವು ಈ ವಿಷಯದಲ್ಲಿ ಪಶ್ಚಾತ್ತಾಪ ಪಟ್ಟಿಲ್ಲ ಮಾತ್ರವಲ್ಲ, ಆ ಕರ್ತವ್ಯದಿಂದಲೇ ಶಾಶ್ವತವಾಗಿ ಬಿಡುಗಡೆ ಹೊಂದಲು ಪ್ರಯತ್ನಿಸುತ್ತಿದೆ. ಭಾಷಾ ಕಾಯಿದೆಗೆ ಬೇರಾವ ಉದ್ದೇಶವೂ ಇರುವಂತೆ ಕಾಣುವುದಿಲ್ಲ.

ಈ ಮಸೂದೆಯು ಶಬ್ದತಃ ಮತ್ತು ಭಾವತಃ ಸಂವಿಧಾನಕ್ಕೆ ಅಪಚಾರ ಮಾಡುತ್ತದೆ ಎಂದು ನಾನು ಆರೋಪಿಸುತ್ತೇನೆ. ಕಾಯಿದೆಯನ್ವಯ ನಿರ್ದಿಷ್ಟವಾಗಿ ಉಲ್ಲೇಖಿಸಿದ ಉದ್ದೇಶಗಳಿಗೆ ೧೯೬೫ರ ನಂತರವು ಇಂಗ್ಲಿಷ್ ಭಾಷೆಯನ್ನು ಬಳಸಲು ಅನುಮತಿ ನೀಡಬೇಕಾದ ಅವಶ್ಯಕತೆಗಳನ್ನು ಮುಂಗಾಣುವ ಸಂವಿಧಾನದ ೩೪೩(೩) ಕಲಮ್ಮನ್ನು ಈ ಕಾಯಿದೆಯು ಆಧರಿಸಿದೆ. ಅವಶ್ಯಕತೆ ತಲೆದೋರಿದಲ್ಲಿ ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ, ಇಂಗ್ಲಿಷಿಗೆ ಅವಕಾಶ ನೀಡಲು ಸಂವಿಧಾನ ಕರ್ತೃಗಳು ಉದ್ದೇಶಿಸಿದ್ದರು ಎಂಬುದು ಸ್ಪಷ್ಟವಾಗಿದೆ. ಅದೂ ಕುಡಾ ಅನಿರ್ದಿಷ್ಟಾವಧಿಗೆ ಅಲ್ಲ. ೩೪೩(೩)ನೇ ಕಲಮ್ಮನ್ನು ಸಂವಿಧಾನವನ್ನೇ ತಿರುಚಲು ಖಂಡಿತವಾಗಿಯೂ ಬಳಸಲಾಗುವುದಿಲ್ಲ. ಶಿವಜೀಯನ್ನೇ ಸುಟ್ಟುಹಾಕಲು ಶಿವನ ಸೃಷ್ಟಿಯಾದ ಭಸ್ಮಾಸುರನಿಗೆ ಅವಕಾಶ ನೀಡಿದಂತಾಗುತ್ತದೆ. ಸಂವಿಧಾನದಲ್ಲಿ ತಿದ್ದುಪಡಿಗಳನ್ನು ತರಲು ಪಾರ್ಲಿಮೆಂಟಿಗೆ (ಸಂಸತ್ತಿಗೆ) ಸಂವಿಧಾನವು ಅಧಿಕಾರ ನೀಡಿದೆ. ನಿಜ, ಆದರೆ ಅದು ಯಾವುದೇ ತಿದ್ದುಪಡಿಯನ್ನಾದರೂ, ಉದಾಹರಣೆಗೆ, ಇಂತಹ ದಿನದಿಂದ ಸಂವಿಧಾನದ ನಿಯಮಗಳು ಚಾಲ್ತಿಯಲ್ಲಿರುವುದಿಲ್ಲ ಎಂದು ಘೋಷಿಸುವ ತಿದ್ದುಪಡಿಯನ್ನು ಮಾಡಲು ಅಧಿಕಾರ ನೀಡಲಾರದು!

೧೯೬೫ರ ಜನವರಿ ೨೬ರ ನಂತರ, ಸಂಸತ್ತಿನಲ್ಲಿ ಮಂಡಿಸಿದ ವಿಧಾಯಕ ಕಾನೂನುಗಳ ಜೊತೆಯಲ್ಲಿ ಅಧಿಕೃತ ಹಿಂದೀ ಅನುವಾದಗಳು ಇರಲೇಬೇಕು ಎಂದೂ ಈ ಮಸೂದೆಯು ನಿಬಂಧಿಸುತ್ತದೆ. ಎಂತಹ ಅನುಗ್ರಹ! ಆದರೆ ಇದೂ ಕೂಡಾ ೩೪೩ನೇ ಕಲಮಿನ ಉದ್ದೇಶಕ್ಕೆ ವ್ಯತಿರಿಕ್ತವಾದದ್ದು ಎಂದು ಸೂಚಿಸಬಯಸುತ್ತೇನೆ. ಒಂದು ವೇಳೆ, ಇಂಗ್ಲಿಷ್ ಅನುವಾದಗಳನ್ನು ಒದಗಿಸಲು ಅವಕಾಶ ನೀಡಿದ್ದು, ಅವುಗಳನ್ನು ಅಧಿಕೃತ ಎಂದು ಪರಿಗಣಿಸಿದ್ದರೆ ಅದನ್ನು ಅರ್ಥಮಾಡಿಕೊಳ್ಳಬಹುದಾಗಿತ್ತೇನೋ. ಆಗ ಅಂತಹ ಕಾಯಿದೆ ತರುವ ಮೂಲಕ, ಇಂಗ್ಲಿಷನ್ನು ನಿರ್ದಿಷ್ಟ ಉದ್ದೇಶಗಳಿಗೆ ಬಳಸಲು ಅನುಮತಿ ನೀಡುವ, ಈ ಹಿಂದೆ ಹೇಳಲಾದ. ೩೪೩(೩)ನೇ ಕಲಮನ್ನು ಸಂಸತ್ತು ಕಾರ್ಯಗತಗೊಳಿಸಿದಂತಾಗುತ್ತಿತ್ತು. ಆದರೆ ಈಗ ಇಂಗ್ಲಿಷ್ ಅಧಿಕೃತ ಭಾಷೆಯ ಪಾತ್ರದಲ್ಲೇ ಮುಂದುವರೆಯುತ್ತದೆ

ಹಾಗೂ ಹಿಂದಿ ಕೇವಲ ಅಧೀನವಾದ ಸ್ಥಾನದಲ್ಲಿರುತ್ತದೆ.

ಈ ಅನುವಾದದಿಂದ ಆಗುವ ಪ್ರಯೋಜನವೇನು? ನ್ಯಾಯಾಲಯಗಳು ಇಂಗ್ಲಿಷಿನಲ್ಲಿ ಕಾರ್ಯ ನಿರ್ವಹಿಸುವುದನ್ನು ಮುಂದುವರೆಸುತ್ತವೆ ಹಾಗೂ ಕಾಯಿದೆಯ ಇಂಗ್ಲಿಷ್ ಆಖ್ಯಾನಗಳೇ (ಪಠ್ಯಗಳೇ) ಮೂಲ ಎಂದು ಪರಿಗಣಿಸಲ್ಪಡುತ್ತವೆ. ಹಲವಾರು ಇನ್ನಿತರ ಭಾರತೀಯ ಭಾಷೆಗಳಿಗೆ ಆಯಾ ರಾಜ್ಯಗಳಲ್ಲಿ ಇರುವ ಸ್ಥಾನವೂ ಈ ಮಸೂದೆಯಿಂದಾಗಿ ಹಿಂದಿಗೆ ಲಭಿಸುವುದಿಲ್ಲ ಎಂಬುದನ್ನು ಗಮನಿಸಬೆಕು. ಉದಾಹರಣೆಗೆ ಬಂಗಾಳದಲ್ಲಿ ಶಾಸನಸಭೆ ಮಾನ್ಯತೆ ನೀಡುವ ಮಸೂದೆಗಳು ಮೂಲದಲ್ಲಿ ಬಂಗಾಳಿ ಭಾಷೆಯಲ್ಲಿದ್ದು, ಇಂಗ್ಲಿಷ್ ಮತ್ತು ಹಿಂದಿ ಅನುವಾದಗಳು ಅವುಗಳ ಜೊತೆಗೆ ಇರುತ್ತವೆ. ಅಷ್ಟೆ, ಮಸೂದೆಯಲ್ಲಿ ಇದನ್ನೂ ಸ್ಪಷ್ಟವಾಗಿ ಹೇಳಲಾಗಿದೆ. ಹಿಂದಿಗೆ ಸಂಬಂಧಿಸಿದ ಅವಕಾಶಗಳು ಸ್ಪಷ್ಟವಾಗಿಯೇ ಇದಕ್ಕೆ ವ್ಯತಿರಿಕ್ತವಾಗಿವೆ.

ರಾಷ್ಟ್ರಪತಿಗಳ ಪೂರ್ವಾನುಮತಿಯೊಂದಿಗೆ, ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪು, ಶಾಸನ, ಕಟ್ಟಳೆಗಳಿಗೆ ಹಿಂದೂ ಇಲ್ಲವೆ ಆಯಾ ರಾಜ್ಯದ ಅಧಿಕೃತ ಭಾಷೆಯನ್ನು ಬಳಸಲು ರಾಜ್ಯದ ರಾಜ್ಯಪಾಲರು ಅಧಿಕಾರ ನೀಡಬಹುದು ಎಂದು ಕೃತಜ್ಞತಾಪೂರ್ವಕವಾಗಿ (?) ಅವಕಾಶ ಮಾಡಿಕೊಡಲಾಗಿದೆ. ಆದರೆ ಅಂತಹ ಎಲ್ಲ ತೀರ್ಪುಗಳ ಜೊತೆಯಲ್ಲಿ ಅಧಿಕೃತ ಇಂಗ್ಲಿಷ್ ಭಾಷಾಂತರಗಳು ಇರುತ್ತವೆ. ಕಾರ್ಯತಃ ಅಧ್ಯಕ್ಷರ ಪೂರ್ವಾನುಮತಿ ಪಡೆದುಕೊಳ್ಳುವ ತೊಂದರೆಯನ್ನು ತೆಗೆದುಕೊಳ್ಳುವುದೇ ಇಲ್ಲ ಎಂದು ದೃಢವಾಗಿ ನಂಬಬಹುದು. ಇಂಗ್ಲಿಷಿನಲ್ಲಿ ಕಾನೂನಾದ ನ್ಯಾಯಸಂಹಿತೆಗಳನ್ನು ನಿರ್ವಹಿಸಬೇಕಾಗುವುದು, ನಂತರ ನಮ್ಮ ತೀರ್ಪುಗಳ್ನು ಹಿಂದಿಯಲ್ಲಿ ಬರೆಯುವುದು ಮತ್ತು ಅವುಗಳಿಗೆ ಮತ್ತೆ ಇಂಗ್ಲಿಷ್ ಭಾಷಾಂತರಗಳನ್ನು ಲಗತ್ತಿಸುವುದು ಇವೆಲ್ಲ ಸಣ್ಣ ಉಪದ್ರವವಲ್ಲ (ಅಲ್ಪ ಸ್ವಲ್ಪ ರೇಜಿಗೆಯಲ್ಲ).

ಹಿಂದಿಗೆ ಒಂದು ವಿಶೇಷ ಅನುಗ್ರಹದ ಸಂಕೇತವೆಂಬಂತೆ, ಆದರೆ ವಾಸ್ತವವಾಗಿಯೂ ಸಾರ್ವಜನಿಕ ಅಭಿಪ್ರಾಯವನ್ನು ಕಂಗೆಡಿಸಲೆಂದೇ ಸರ್ಕಾರವು, ೧೯೭೫ರ ಜನವರಿ ೨೬ರ ನಂತರ "ರಾಷ್ಟ್ರದ ಅಧಿಕೃತ ಕಾರ್ಯಗಳಲ್ಲಿ ಹಿಂದಿಯನ್ನು ಬಳಸುವುದರಲ್ಲಿ ಉಂಟಾದ ಸುಧಾರಣೆಗಳನ್ನು ಪುನಃಪರಿಶೀಲಿಸಿ ಆ ಬಗ್ಗೆ ಶಿಫಾರಸ್ಸುಗಳನ್ನು ಮಾಡುವ ಒಂದು ವರದಿಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸುವಂತೆ ರಾಷ್ಟ್ರಪತಿಗಳು ಒಂದು ಸಮಿತಿ ರಚಿಸಿಬಹುದು" ಮತ್ತು "ಆ ವರದಿಗೆ ಅನುಗುಣವಾಗಿ ರಾಷ್ಟ್ರಪತಿಗಳು ನಿರ್ದೇಶನಗಳನ್ನು ನೀಡಬಹುದು" ಎಂದು, ಈ ಉದ್ದೇಶಿತ ಮಸೂದೆಯಲ್ಲಿ ಅವಕಾಶ ನೀಡಿದೆ.

ಈ ವಾಕ್ಯಾಂಗದ ಪ್ರತಿಪದವೂ ಕೂಡಾ ವಂಚನೆಯಲ್ಲಿ ಮುಳುಗಿದೆ. ಸಂವಿಧಾನ

ಕಾರ್ಯಶೀಲವಾದಾಗಿನಿಂದ ಐದು ವರ್ಷಗಳಾದಾಗ ಮತ್ತು ತದನಂತರ ಅಲ್ಲಿಂದ ಹತ್ತು ವರ್ಷಗಳಾದಾಗ ಇತರ ವಿಷಯಗಳ ಜೊತೆಗೆ ಕಚೇರಿ ಕಾರ್ಯಗಳಿಗಾಗಿ ಹಿಂದಿಯ ಪ್ರಗತಿಶೀಲ ಬಳಕೆ ಮತ್ತು ರಾಷ್ಟ್ರದ ಎಲ್ಲ ಅಥವಾ ಯಾವುದೇ ಉದ್ದೇಶಕ್ಕಾಗಿ ಇಂಗ್ಲಿಷ್ ಬಳಕೆಯ ನಿರ್ಬಂಧಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸುಗಳನ್ನು ಮಾಡಲು ಒಂದು ಆಯೋಗವನ್ನು ರಾಷ್ಟ್ರಪತಿಗಳು ರಚಿಸಬೇಕು ಎಂದು ಸಂವಿಧಾನದ ೩೪೪ನೇ ಕಲಮ್ಮು ವಿಧಿಸಿದೆ. ಅಂತೆಯೇ ಐದು ವರ್ಷಗಳ ನಂತರ ಒಂದು ಆಯೋಗವನ್ನು ನೇಮಿಸಲಾಯಿತು. ಅದು ತನ್ನ ವರದಿಯನ್ನು ಸಲ್ಲಿಸಿತು ಮತ್ತು ಸಂಸತ್ತಿನ ಒಂದು ಸಮಿತಿಯು ತನ್ನ ಶಿಫಾರಸ್ಸುಗಳನ್ನು ಮಾಡಿತು. ಅದರ ಆಧಾರದ ಮೇಲೆ ರಾಷ್ಟ್ರಪತಿಗಳೂ ಕೆಲವು ನಿರ್ದೇಶನಗಳನ್ನು ನೀಡಿದರು. ಆದರೆ ಅದೆಲ್ಲವನ್ನೂ ಸದ್ದಿಲ್ಲದೆ ಕಸದ ತೊಟ್ಟಿಗೆ ಹಾಕಲಾಗಿದೆ. ಹತ್ತು ವರ್ಷಗಳ ನಂತರ ನೇಮಕವಾಗಬೇಕೆಂದು ಸಂವಿಧಾನ ವಿಧಿಸಿದ್ದ ಎರಡನೆಯ ಆಯೋಗದ ಮಾತನ್ನೂ ಯಾರೂ ಎತ್ತುವುದಿಲ್ಲ.

ಇದು ಸಂವಿಧಾನದ ಒಂದು ಕಡ್ಡಾಯದ ನಿಬಂಧನೆಯಾಗಿತ್ತು. ಹಾಗೂ ಸರ್ಕಾರವು ಇದನ್ನು ಘೋರವಾಗಿ ಅಲಕ್ಷಿಸಿದೆ. ರಾಷ್ಟ್ರಪತಿಗಳು ರಚಿಸಲೇಬೇಕು ಎಂದು ೩೪೪ನೇ ಕಲಮ್ಮು ಘೋಷಿಸಿದೆ, ಆದರೆ ಈ ಉದ್ದೇಶಿತ ಮಸೂದೆಯಲ್ಲಿ ರಾಷ್ಟ್ರಪತಿಗಳು ರಚಿಸಬಹುದು ಎಂದು ಹೇಳಲಾಗಿದೆ. ಸಂವಿಧಾನದ "ಬೇಕು" ಎಂಬುದು ಹಾಗೂ ಈ ಮಸೂದೆಯ "ಬಹುದು" ಎಂಬುದು ಇವು. ಈ ಮಸೂದೆಯ ಮೂಲಕ ಜನತೆಯ ಮೇಲೆ ಎಸಗುತ್ತಿರುವ ಮೋಸವನ್ನು ಸ್ಪಷ್ಟವಾಗಿ ಬಯಲು ಮಾಡುತ್ತವೆ.

ಈ ಕ್ರಮವನ್ನು ಕೈಗೊಳ್ಳಲು ಶಾಸ್ತ್ರಿಯವರು ಈ ದಿನಾಂಕವನ್ನು ಉದ್ದೇಶಪೂರ್ವಕವಾಗಿ ಆರಿಸಿಕೊಂಡರೋ ಇಲ್ಲವೋ ಎನ್ನುವುದು ನಮಗೆ ತಿಳಿಯದು. ಅದು ಹೇಗಾದರೂ ಇರಲಿ, ಈ ಕರಾಳ ಮಸೂದೆ ಹಾಗೂ ಬೈಸಾಖಿ–ಇವುಗಳ ಸಂಬಂಧ ವಿಶೇಷ ಮಹತ್ವದ್ದೆಂದು ಇತಿಹಾಸದಲ್ಲಿ ದಾಖಲಾಗಲಿದೆ. ಇತ್ತೀಚಿನ ಇತಿಹಾಸದ ಎರಡು ಮಹತ್ವದ ಘಟನೆಗಳನ್ನು ಬೈಸಾಖಿ ನೆನಪು ಮಾಡಿಕೊಡುತ್ತದೆ. ಖಾಲ್ಸಾ ಪಂಥ ಹುಟ್ಟಿದ್ದು ಈ ದಿನವೇ. ಗುರುಗೋವಿಂದ ಸಿಂಗರು ಪಂಚ ಪ್ಯಾರೆಗಳನ್ನು ಧರ್ಮದೊಳಗೆ ವಿಧಿವತ್ತಾಗಿ ಪ್ರಾರಂಭಿಸಿದರು. ಖಾಲ್ಸಾ ಹೇಗೆ ಮುಘಲ್ ಆಳ್ವಿಕೆಯ ಬುನಾದಿಯನ್ನೇ ಅಲುಗಾಡಿಸಲು ಸಮರ್ಥವಾಯಿತು ಎಂಬುದು ನಮ್ಮೆಲ್ಲರಿಗೂ ತಿಳಿದಿದೆ. ಇನ್ನೂ ಇತ್ತೀಚೆಗೆ, ಜಲಿಯನ್ ವಾಲಾದ ರಕ್ತಸಿಕ್ತ ಹಿಂಸಾಚಾರ ನಡೆದದ್ದು ಬೈಸಾಖಿಯಂದೇ, ಆ ಹೇಯ ಕೃತ್ಯದಿಂದ ಇಡಿ ರಾಷ್ಟ್ರಕ್ಕೇ ಆಘಾತವಾಯಿತು. ಸಿಟ್ಟಿಗೆದ್ದ ಮೋತಿಲಾಲ್ ನೆಹರೂ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುವಂತೆ ಪ್ರೇರೇಪಿಸಿದ್ದು ಜಲಿಯನ್ ವಾಲಾ ಬಾಗ್. ಒಂದು

ರೀತಿಯಲ್ಲಿ ಜಲಿಯನ್ ವಾಲಾ ಅಲೆಯು ಬ್ರಿಟಿಷರ ವಿರುದ್ಧ ತಿರುಗಿದ ದಿನಾಂಕವಾಯಿತು. ಈ ವರ್ಷ ನಮಗೆ ಬಂದಿರುವುದು ಅಂತಹುದೇ ಇನ್ನೊಂದು ರಕ್ತಸಿಕ್ತ ಬೈಸಾಖಿ. ಜಲಿಯನ್ ವಾಲಾದಲ್ಲಿ ಕಗ್ಗೊಲೆಗೀಡಾದವರು ಜನತೆ; ಈಗ ಕತ್ತು ಹಿಚುಕಲು ಪ್ರಯತ್ನಿಸಿರುವುದು ಜನರ ಭಾಷೆಯನ್ನು. ತಮ್ಮ ತುಪಾಕಿಗಳು ಮತ್ತು ಭರ್ಜಿಗಳ ಸಹಾಯದಿಂದ ಭಾರತದಲ್ಲಿನ ತಮ್ಮ ಸಾಮ್ರಾಜ್ಯವನ್ನು ಮುಂದುವರೆಸಿಕೊಂಡು ಹೋಗುವುದು ಸಾಧ್ಯವಾಗುತ್ತದೆಂದು ಇಂಗ್ಲಿಷಿನವರು ಭಾವಿಸಿದ್ದರು. ಅವರ ಎಣಿಕೆ ತಪ್ಪೆಂದು ಇತಿಹಾಸ ತೋರಿಸಿತು. ಅಂತೆಯೇ ಇಂದಿ ಇಂಗ್ಲಿಷ್ ಭಕ್ತರು ಈ ರಾಷ್ಟ್ರದ ಇಂಗ್ಲಿಷ್ ಪ್ರಾಬಲ್ಯವನ್ನು ಶಾಶ್ವತಗೊಳಿಸುತ್ತೇವೆಂದು ಭರವಸೆ ಇಟ್ಟುಕೊಂಡಿರಬಹುದು. ಇವರ ಎಣಿಕೆಯೂ ಅಷ್ಟೇ ತಪ್ಪೆಂದು ಇತಿಹಾಸ ಸಾಬೀತುಪಡಿಸಲಿದೆ. ರಾಷ್ಟ್ರದ ಆತ್ಮಗೌರವ ಎಂಬುದು ಒಂದು ಜೀವಂತ ಶಕ್ತಿ. ಈ ಪಿತೂರಿ ಯಶಸ್ವಿಯಾಗಲು ಅದು ಅವಕಾಶ ನೀಡಲಾರದು.

ಇಂಗ್ಲಿಷಿಗೆ ಸಂಬಂಧಿಸಿದ ಈ ಮಸೂದೆಯನ್ನು ಮಂಡಿಸಿ ರಾಷ್ಟ್ರದ ಐಕ್ಯತೆಗೆ ಒಂದು ಕ್ರೂರವಾದ ಘಾತ ಉಂಟು ಮಾಡಲಾಗಿದೆ. ಐಕ್ಯತೆಗೆ ಮಾನ್ಯತೆ ನೀಡುವವರು ಹೆಚ್ಚಿನ ತಾಳ್ಮೆಯನ್ನು ತಂದುಕೊಳ್ಳಬೇಕು ಹಾಗೂ ಐಕ್ಯತೆಯನ್ನು ಉಳಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು.

ಕಾಂಗ್ರೆಸ್ಸಿನವರು ತಾವು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ದಿನಗಳನ್ನು ನೆನಪು ಮಾಡಿಕೊಳ್ಳಲಿ ಎಂಬುದು ಅವರಲ್ಲಿ ನನ್ನ ಸರಳ ಕೋರಿಕೆ. ಅಂದು ಅವರಿಗೆ ಸ್ಫೂರ್ತಿ ನೀಡಿದ್ದ ಭಾವನೆಗಳನ್ನು ಮತ್ತು ಆದರ್ಶಗಳನ್ನು ನೆನಪು ಮಾಡಿಕೊಳ್ಳಲು ಅವರು ಪ್ರಯತ್ನಿಸಲಿ. ಅವರು ಎತ್ತಿಹಿಡಿದ ಎಲ್ಲಕ್ಕೂ ಸರ್ಕಾರದ ಇಂದಿನ ನಿಲುವು ವ್ಯತಿರಿಕ್ತವಾಗಿಲ್ಲವೆ? ಅವರು ಎತ್ತಿಹಿಡಿದದ್ದು ಏನನ್ನ? ಇವೆಲ್ಲದವರೊಂದಿಗೆ ಅವರು ರಾಜಿ ಮಾಡಿಕೊಳ್ಳಲು ಕಾರಣವೇನು? ತಮ್ಮ ಮನಸ್ಸಿನಲ್ಲಿರುವುದನ್ನು ಮಾತನಾಡಲು ಹಾಗು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ವರ್ತಿಸಲು ಅವರು ಧೈರ್ಯವಾಗಿ ಮುಂದೆ ಬರಬೇಕಾದ ಸಂದರ್ಭ ಇದು. ಆದರೆ ವೃದ್ಧಾಪ್ಯದಿಂದಾಗಿಯೋ, ಅಥವಾ ಒಲವು ಮತ್ತು ಆಸಕ್ತಿಗಳಿಂದಾಗಿಯೋ, ಅವರಿಗೆ ನೆನಪು ಬಾರದಿದ್ದರೆ, ಅಥವಾ ಇಂತಹ ಹೆಜ್ಜೆಯಿಡಲು ಬೇಕಾದ ಪೌರುಷವನ್ನು ತೋರಲು ಅವರಿಗೆ ಸಾಮರ್ಥ್ಯವಿಲ್ಲದಿದ್ದರೆ, ಆಗ ನಾವು ಈ ಹಿಂದಿನ ದಿನಗಳ ನಾಯಕತ್ವದ ಬದುಕಿನ ಮೊದಲ ಅಧ್ಯಾಯಗಳಿಂದ ಪಾಠ ಕಲಿತು ತಾಯಿ ಭಾರತಿಯ ರಕ್ಷಣೆಗಾಗಿ ದೃಢವಾಗಿ ಎದ್ದು ನಿಲ್ಲೋಣ.

ಆರ್ಗನೈಸರ್, ೨೨ ಏಪ್ರಿಲ್, ೧೯೬೩.

**ಟಂಡನ್ ಮತ್ತು ಜನಸಂಘ**

ಲಖ್ನೋದಲ್ಲಿನ ರಾಜರ್ಷಿ ಪುರುಷೋತ್ತಮ ದಾಸ್ ಟಂಡನ್

ವಸ್ತುಪ್ರದರ್ಶನದ ಬಗ್ಗೆ ಮಾತನಾಡುತ್ತ, ಉತ್ತರ ಪ್ರದೇಶದ ಮುಖ್ಯಮಂತ್ರಿ ಶ್ರೀ ಸಿ.ಪಿ.ಗುಪ್ತ ಅವರು ಟಂಡನ್ ಜೀ ಅವರ ಹೆಸರನ್ನು ಜನಸಂಘವು ದುರುಪಯೋಗಪಡಿಸಿಕೊಳ್ಳುತ್ತಿದೆಯೆಂದು ಆರೋಪಿಸಿದರು. ಟಂಡನ್ ಜೀಯವರ ಆದರ್ಶಗಳಿಗೂ ಜನಸಂಘದ ಧೋರಣೆಗಳಿಗೂ ಧ್ರುವ–ಧ್ರುವಗಳ ಅಂತರ ಎಂದು ಅವರು ಹೇಳಿದರೆಂದು ವರದಿಯಾಗಿದೆ.

**ಟಂಡನ್ ಕಾಂಗ್ರೆಸ್ಸಿನ ಸ್ವತ್ತಲ್ಲ:**

ಈ ವಸ್ತು ಪ್ರದರ್ಶನವನ್ನು ಆಯೋಜಿಸಿದ್ದ ಸಮಿತಿಯ ಬಗ್ಗೆ ಹೇಳುವುದಾದರೆ, ಅದಕ್ಕೂ ಜನಸಂಘಕ್ಕೂ ಯಾವ ಸಂಬಂಧವೂ ಇಲ್ಲ. ಉತ್ತರಪ್ರದೇಶಧ ಮಂತ್ರಿಮಂಡಲದ ಕೆಲವು ಸದಸ್ಯರೂ ಸೇರಿದಂತೆ ಕೆಲವು ಕಾಂಗ್ರೆಸ್ಸಿಗರು ಅದರ ಜೊತೆ ಸಂಬಂಧ ಹೊಂದಿದ್ದಂತೆಯೇ ಜನಸಂಘದ ಕೆಲವು ಸದಸ್ಯರೂ ಅದರ ಜೊತೆ ಸಂಪರ್ಕದಲ್ಲಿದ್ದರು ಎನ್ನುವುದೇನೋ ನಿಜವೇ. ವಾಸ್ತವವಾಗಿಯೂ ಅದು ಒಂದು ಪಕ್ಷೇತರ ಸಮಿತಿಯಾಗಿತ್ತು. ಆದರೆ ಕೆಲವರು ಯಾವುದೇ ಸಂದರ್ಭದಲ್ಲೂ ಪಕ್ಷಪಾತ ಧೋರಣೆಯನ್ನು ಬಿಡಲು ಅಸಮರ್ಥರು ಎಂದು ತೋರುತ್ತದೆ. ಅವರು ಪ್ರತಿಯೊಂದು ಘಟನೆಯನ್ನೂ ಒಂದಲ್ಲಾ ಒಂದು ಪಕ್ಷಕ್ಕೆ ಜೋಡಿಸಲು ಪ್ರಯತ್ನಿಸುತ್ತಾರೆ. ನೇರವಾಗಿ ಆ ವಸ್ತುಪ್ರದರ್ಶನದ ಬಗ್ಗೆ ಟೀಕಿಸುವುದು ನನ್ನ ಉದ್ದೇಶವಲ್ಲ. ಆದರೆ ಈ ಗುಪ್ತಾಜಿ ಅವರ ನಿರ್ದಿಷ್ಟ ಆರೋಪದ ಬಗ್ಗೆ ನಾನು ಹೇಳಲು ಇಚ್ಛಿಸುತ್ತೇನೆ.

ರಾಜರ್ಷಿ ಪುರುಷೋತ್ತಮ ದಾಸ್ ಟಂಡನ್ ಅವರು ಶ್ರೇಷ್ಠ ಚೇತನ. ಅಂತಹ ಮಹಾತ್ಮರು ಅವರ ಜೀವಿತಾವಧಿಯಲ್ಲಿ ಯಾವುದೋ ಒಂದು ನಿರ್ದಿಷ್ಟ ಪಂಗಡ ಅಥವಾ ಮತ ಇಲ್ಲವೆ ಪಕ್ಷದೊಂದಿಗೆ ಸಂಬಂಧವಿರಿಸಿಕೊಂಡಿರಬಹುದು. ಆದರೆ ಅದರಿಂದಾಗಿ ಅವರು ಆಯಾ ಪಂಗಡ ಅಥವಾ ಮತ ಇಲ್ಲವೇ ಪಕ್ಷದ ಸ್ವಂತ ಸ್ವತ್ತಾಗುವುದಿಲ್ಲ ಎಂಬುದನ್ನು ಶ್ರಿ ಗುಪ್ತಾಜೀ ಅವರೂ ಒಪ್ಪುತ್ತಾರೆ ಎಂದು ನನ್ನ ದೃಢ ನಂಬಿಕೆ. ಇಡೀ ರಾಷ್ಟ್ರವೇ ಅವರಿಂದ ಸ್ಫೂರ್ತಿ ಪಡೆದುಕೊಳ್ಳುತ್ತದೆ ಹಾಗೂ ಅವರ ಬಗ್ಗೆ ಹಕ್ಕು ಸಾಧಿಸಬಲ್ಲದು. ಅವರನ್ನು ಒಂದು ಕಿರಿದಾದ ಪಂಗಡಕ್ಕೆ ನಿರ್ಬಂಧಿಸಲು ಪ್ರಯತ್ನಿಸುವುದೇ ಸಂಕುಚಿತ ಪ್ರಾಂತೀಯ ಮನೋಭಾವದ ಅಭಿವ್ಯಕ್ತಿಯಾಗಿದೆ.

**ಮರಣಾನಂತರ ಪಕ್ಷದ ಹಣೆಪಟ್ಟಿ ಬೇಡ**

ಮಹಾರಾಣ ಪ್ರತಾಪ್ ಮತ್ತು ಛತ್ರಪತಿ ಶಿವಾಜಿಯವರನ್ನು, ಉದಾಹರಣೆಗೆ, ಮೇವಾರ ಅಥವಾ ಮಹಾರಾಷ್ಟ್ರದ ಪ್ರಾಂತ್ಯಗಳಿಗೆ ಸೀಮಿತಗೊಳಿಸುವುದು ಸಾಧ್ಯವೇ?

ಗುರು ಗೋವಿಂದ ಸಿಂಗ್ ಸಿಖ್ಖರಿಗೆ ಮಾತ್ರ ಸ್ಫೂರ್ತಿದಾಯಕ ಆದರ್ಶವೆ? ಲೋಕಮಾನ್ಯ ತಿಲಕ್, ಮಹಾತ್ಮಗಾಂಧಿ ಮತ್ತು ಡಾ. ರಾಜೇಂದ್ರ ಪ್ರಸಾದರನ್ನು ಕೇವಲ ಕಾಂಗ್ರೆಸ್ಸಿನ ಶ್ರೇಷ್ಠ ವ್ಯಕ್ತಿಗಳು ಎಂದು ಪರಿಗಣಿಸಿದರೆ ನಾವು ಅವರ ಔನ್ನತ್ಯವನ್ನು ಕುಬ್ಜಗೊಳಿಸಿದಂತಾಗುವುದಿಲ್ಲವೇ? ರಾಜರ್ಷಿ, ಟಂಡನ್ ಮತ್ತು ಸರ್ದಾರ್ ಪಟೇಲರು ತಮ್ಮ ಜೀವನಪರ್ಯಂತ ಕಾಂಗ್ರೆಸ್ಸಿನಲ್ಲಿ ಇದ್ದಿರಬಹುದು. ಆದರೆ ಅವರ ಕಾರ್ಯನೀತಿಗಳನ್ನು ರೂಪಿಸಿದ ತತ್ತ್ವಗಳು ಕೇವಲ ಕಾಂಗ್ರೆಸ್ಸಿಗರ ಸ್ವಂತ ಆಸ್ತಿಯಾಗುವುದಿಲ್ಲ. ಡಾ. ಹೆಗ್ಡೇವಾರ್ ಮತ್ತು ಡಾ. ಶ್ಯಾಮಾಪ್ರಸಾದ್ ಮುಖರ್ಜಿ ಅವರ ಜೀವನ ಮತ್ತು ಆದರ್ಶಗಳು ಇಡೀ ರಾಷ್ಟ್ರಕ್ಕೇ ಸ್ಫೂರ್ತಿಯ ಸೆಲೆಯೇ ಹೊರತು ಕೇವಲ ಆರೆಸ್ಸೆಸ್ ಮತ್ತು ಜನಸಂಘದ ಸದಸ್ಯರಿಗಲ್ಲ.

ಬೇರೆ ಬೇರೆ ಪಕ್ಷಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗಲೂ ಇತರ ಪಕ್ಷಗಳ ನಾಯಕರನ್ನು ಗೌರವಿಸುವ ಸಹಿಷ್ಣುತೆ ಮತ್ತು ಔದಾರ್ಯಗಳು ನಮ್ಮಲ್ಲಿರಬೇಕು. ಅನುಕರಣೆಗೆ ಯೋಗ್ಯವಾದದ್ದು ಅವರಲ್ಲಿದ್ದರೆ ಅದನ್ನು ಮೈಗೂಡಿಸಿಕೊಳ್ಳಲು ನಾವು ಯಾವಾಗಲೂ ಸಿದ್ಧರಾಗಿರೋಣ. ಮರಣದ ನಂತರ ಅವರು ಖಂಡಿತವಾಗಿಯೂ ಆ ಪಕ್ಷ ಅಥವಾ ಪ್ರಾಂತ್ಯದ ಸ್ವತ್ತಾಗಿ ಉಳಿಯುವುದಿಲ್ಲ. ಇದೇ ಸರ್ವ ಸಮ್ಮತವಾದ ಭಾರತೀಯ ಸಂಪ್ರದಾಯ ಮತ್ತು ರಾಷ್ಟ್ರೀಯ ಇತಿಹಾಸ ನಿರ್ಮಾಣವಾಗಿರುವುದೇ ಆ ತಳಹದಿಯ ಮೇಲೆ, ಮರಣಾನಂತರವೂ ಅವರನ್ನು ಅವರ ಪಕ್ಷಗಳಿಗೆ ನಿರ್ಬಂಧಿಸುವುದೇ ಆದಲ್ಲಿ, ರಾಷ್ಟ್ರದ ವರ್ತಮಾನ ಮಾತ್ರವಲ್ಲ, ಅದರ ಗತಕಾಲವೂ ದುರ್ಭರವಾಗಿ ಹೋಳುಹೋಳಾಗುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ, ಸಾಮಾಜಿಕ ಜೀವನದಲ್ಲಿ ಎಲ್ಲ ಬಗೆಯ ವೈವಿಧ್ಯತೆಗಳಿದ್ದರೂ, ಸ್ಮಶಾನಗಳು ಯಾವಾಗಲೂ ಎಲ್ಲರಿಗೂ ಏಕರೂಪವಾಗಿಯೇ ಇವೆ. ಉತ್ತಮನೋ ಅಥವಾ ನೀಚನೋ, ಪ್ರತಿಯೊಬ್ಬನು ಅದೇ ಸ್ಮಶಾನಘಟ್ಟಕ್ಕೆ ಹೋಗುವನು. ಆದ್ದರಿಂದ ಇಂದು ಕಾಂಗ್ರೆಸ್ಸಿಗರು ಅವರನ್ನಾಗಲೀ ಅಥವಾ ಬೇರಾವುದೇ ಶ್ರೇಷ್ಠ ವ್ಯಕ್ತಿಗಳನ್ನೇ ಆಗಲೀ ತಮ್ಮ ಪಕ್ಷದ ನಾಲ್ಕು ಗೋಡೆಗಳ ಮಧ್ಯೆ ಬಂಧಿಸಲು ಹವಣಿಸಿದರೆ, ಟಂಡನ್ ಜೀಯವರ ಹೆಸರನ್ನು ದುರುಪಯೋಗಪಡಿಸಿಕೊಳ್ಳಲು ಯತ್ನಿಸುತ್ತಿರುವವರು ಅವರೇ ಎಂದು ನಾವು ಹೇಳಬೇಕಾಗುತ್ತದೆ. ಟಂಡನ್ ಜೀ ಅವರ ಪವಿತ್ರ ಸ್ಮರಣೆಗೆ ಅವರು ಅನ್ಯಾಯವೆಸಗುತ್ತಿದ್ದಾರೆ ಹಾಗೂ ಅವರ ಹಿರಿಮೆಯನ್ನು ಹಾಳುಗೆಡವುತ್ತಿದ್ದಾರೆ ಎಂದು ನಾವು ಹೇಳಬೇಕಾಗುತ್ತದೆ.

ಇನ್ನು ಟಂಡನ್ ಜೀಯವರ ಆದರ್ಶಗಳ ಬಗ್ಗೆ ಮತ್ತು ಜನಸಂಘದ ಯೋಜನೆಗಳಿಗೆ ಅವುಗಳ ಪ್ರಸ್ತುತತೆಯ ಬಗ್ಗೆ ಹೇಳುವುದಾದರೆ, ಟಂಡನ್ ಜೀಯವರ ತತ್ತ್ವಗಳನ್ನು ಮುಕ್ತವಾಗಿ ಒಪ್ಪಿಕೊಂಡಿರುವ ಯಾವುದಾದರೂ ಒಂದು ಪಕ್ಷವು ಈ ದೇಶದಲ್ಲಿ ಇರುವುದೇ ಆದಲ್ಲಿ ಅದು ಭಾರತೀಯ ಜನಸಂಘ ಎಂದು ಹೇಳಬಹುದು.

ಇದನ್ನು ಪರೀಕ್ಷಿಸಿ ನೋಡಲು ಇಚ್ಛಿಸುವ ಯಾರೇ ಆದರೂ, ಕಾಂಗ್ರೆಸ್ ಅಧ್ಯಕ್ಷರಾಗಿ ಟಂಡನ್ ಜೀಯವರು ನೀಡಿದ ಭಾಷಣಗಳು ಮತ್ತು ಅವರು ಘೋಷಣೆಗಳನ್ನು ಎತ್ತಿಕೊಂಡು, ಅವುಗಳನ್ನು ಭಾರತಿಯ ಜನಸಂಘದ ಪ್ರಣಾಳಿಕೆಗಳ ಪಕ್ಕದಲ್ಲಿರಿಸಿ ಓದಿ ನೋಡಲಿ, ಅವೆರಡರಲ್ಲೂ ಎಂತಹ ಸಂಪೂರ್ಣ ಹೊಂದಾಣಿಕೆ ಇದೆ ಎಂದು ಗಮನಿಸಬಹುದು. ರಾಜರ್ಷಿ ಟಂಡನ್ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಮುಂದುವರೆದಿದ್ದರೆ ಹಾಗೂ ಅವರು ಪ್ರತಿಪಾದಿಸಿದ ಆಶಯಗಳನ್ನು ಕಾಂಗ್ರೆಸ್ ಸ್ವೀಕರಿಸಿದ್ದಿದ್ದರೆ ಜನಸಂಘವನ್ನು ಹುಟ್ಟುಹಾಕುವ ಅವಶ್ಯಕತೆಯೇ ಇರುತ್ತಿರಲಿಲ್ಲ ಎನ್ನುವುದು ವಸ್ತುಸ್ಥಿತಿ.

ಟಂಡನ್ ಜೀವಯವರು ಅಧ್ಯಕ್ಷಸ್ಥಾನವನ್ನು ಬಿಟ್ಟುಕೊಡುವಂತೆ ಹೇಗೆ ಬಲಾತ್ಕರಿಸಲಾಯಿತು. ಅವರು ಕಾಂಗ್ರೆಸ್ಸಿಗರಿಂದ ಪ್ರಜಾಸತ್ತೀಯುವಾಗಿ ಚುನಾಯಿತರಾಗಿದ್ದರೂ ನಂತರದ ಕಾಲದಲ್ಲಿ ಹೇಗೆ ಅವರ ಅನುಯಾಯಿಗಳು ಅವರನ್ನು ತೊರೆದರು ಮತ್ತು ಅಂದಿನಿಂದಲು ಕಾಂಗ್ರೆಸ್, ಸೈದ್ಧಾಂತಿಕವಾಗಿ ರಾಷ್ಟ್ರೀಯತಾ ಭಾವನೆಗಳಿಂದ ದೂರದೂರಕ್ಕೆ ಹೇಗೆ ಕೊಚ್ಚಿಹೋಗುತ್ತಿದೆ ಎಂಬುದನ್ನು ಭಾರತೀಯ ರಾಜಕೀಯದ ಪ್ರತಿಯೊಬ್ಬ ವಿದ್ಯಾರ್ಥಿಯೂ ಬಲ್ಲ. ಈಗಲೂ ಕೂಡಾ ಕಾಂಗ್ರೆಸ್ಸಿನಲ್ಲಿರುವ ಟಂಡನ್ ಜೀಯವರ ಸಹವರ್ತಿಗಳು ಎಚ್ಚತ್ತುಕೊಂಡು ಟಂಡನ್ ಜೀಯವರ ಆದರ್ಶಗಳನ್ನು ಬೆಂಬಲಿಸುವುದಾದಲ್ಲಿ. ಅವರು ನಿಜವಾದ ಅರ್ಥದಲ್ಲಿ ಋಷಿಗಳೆನಿಸಿದ ಟಂಡನ್ ಜೀ ಅವರಿಗೆ ಪಾವತಿಸಬೇಕಾದ ಹಿರಿಯ ಋಣವನ್ನು ತೀರಿಸಿದಂತಾಗುತ್ತದೆ.

**ಹೇಗೆ ವಿದ್ಯಾರ್ಥಿ ಪರಿಷತ್ ಟಂಡನ್ನರನ್ನು ಬೆಂಬಲಿಸಿತ್ತು**

ಭ್ರಷ್ಟಾಚಾರದಿಂದ ಕಲುಷಿತವಾಗಿರುವ ಇಂದಿನ ಸಾರ್ವಜನಿಕ ಜೀವನದಲ್ಲಿ, ವೈಯಕ್ತಿಕ ನಡವಳಿಕೆಯ ನಿಷ್ಕಳಂಕತೆಗಾಗಿ ಟಂಡನ್ ಜೀಯವರ ಒಪ್ಪಂದವನ್ನೊಪ್ಪದ ಒತ್ತಾಯವು ಅನೇಕರಿಗೆ ಅಸಾಧ್ಯವಾಗಿರಬಹುದು. ಅಂತಹ ಯಾವುದೇ ಸಲಹೆಯನ್ನು ನೀಡಿ ಶ್ರೀ ಗುಪ್ತಾ ಅವರನ್ನು ಹಾಗೂ ಇತರ ಕಾಂಗ್ರೆಸ್ಸಿಗರನ್ನು ಮುಜುಗರಕ್ಕೆ ಈಡುಮಾಡಲು ನಾನು ಬಯಸುವುದಿಲ್ಲ. ಆದರೆ ಹಿಂದಿಯ ವಿಷಯದಲ್ಲಿ ಟಂಡನ್ ಜೀಯವರ ಧೋರಣೆಯ ಒಂದು ಪುಟವನ್ನು ಸ್ವೀಕರಿಸಲು ಅವರಿಗೆ ಸಾಧ್ಯವಾಗಬೇಕು. ನ್ಯಾಯಾಸ್ಥಾನಗಳಲ್ಲಿ ಹಿಂದಿಯನ್ನು ಅಂಗೀಕರಿಸುವಂತೆ ಮಾಡುವುದರಿಂದ ಹಿಡಿದು ಅದನ್ನು ಭಾರತದ ರಾಷ್ಟ್ರೀಯ ಭಾಷೆಯಾಗಿ ಮಾಡುವವರೆಗೆ, ಹಿಂದಿಗೆ ರಾಷ್ಟ್ರೀಯ ಜೀವನದಲ್ಲಿ ಅದರ ನ್ಯಾಯಯುತ ಸ್ಥಾನವನ್ನು ದೊರಕಿಸಿಕೊಡಲು ಟಂಡನ್ ಬಾಬು ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟರು. ಇಂದು ಹಿಂದಿಗೆ ಭಾರತದ ಸಂವಿಧಾನದಲ್ಲಿ ಇರುವ ಸ್ಥಾನ ಅವರಿಂದಾಗಿಯೇ

ಲಭಿಸಿದುದು. ಈ ಮಾ–ಕಿ–ಪುಕಾರ್ (ತಾಯಿಯ ಮೊರೆ) ಮಂಟಪವನ್ನು ನಿರ್ಮಿಸಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಆಗಲೂ ಹಿಂದಿಗಾಗಿ ಟಂಡನ್ ಜೀಯವರ ಪ್ರಯತ್ನಗಳಿಗೆ ಬೆಂಬಲ ನೀಡಿತ್ತು. ಹಿಂದಿ ಅಥವಾ ಹಿಂದೂಸ್ತಾನಿ ಇವುಗಳಲ್ಲಿ ಯಾವುದು ಭಾರತದ ಅಧಿಕೃತ ಭಾಷೆಯಾಗಬೇಕು ಎಂಬುದರ ಬಗ್ಗೆ ಒಂದು ದಿಢೀರ್ ಜನಾಭಿಪ್ರಾಯ ಸಂಗ್ರಹಿಸಿ, ಜನಾಭಿಪ್ರಾಯಕ್ಕೆ ಸ್ಪಷ್ಟವಾದ ಅಭಿವ್ಯಕ್ತಿ ನೀಡಲು ಮತ್ತು ಆ ಮೂಲಕ, ಟಂಡನ್ ಜೀಯವರು ಸಂಸತ್ತಿನ ಒಳಗೆ ನಡೆಸುತ್ತಿದ್ದ ಪ್ರಯತ್ನಗಳಿಗೆ ಹೊರಗಿನ ವ್ಯವಸ್ಥಿತ ಅಭಿಪ್ರಾಯದ ಮೂಲಕ ಬೆಂಬಲ ನೀಡಲು ಪರಿಷತ್ತಿಗೆ ಸಾಧ್ಯವಾಯಿತು.

**ತಾಯಿಯ ಮೊರೆಗೆ ಎದುರಾಗಿ ಅಧಿಕಾರದ ಕರೆ**

ಟಂಡನ್ ಜೀಯವರು ಹಿಂದಿಗಾಗಿ ಅಷ್ಟು ಹುರುಪಿನಿಂದ ನಡೆಸಿದ ಹೋರಾಟ ಇಂದು ಸೊರಗಲು ಅವಕಾಶ ನೀಡಲಾಗಿದೆ ಮತ್ತು ಹಿಂದಿಯನ್ನು ಇಂಗ್ಲಿಷಿಗೆ ಅಧೀನವಾಗಿ ಮಾಡಲು ಯತ್ನಿಸಲಾಗುತ್ತಿದೆ. ಇಂಗ್ಲಿಷನ್ನು ಸಹ–ಅಧಿಕೃತ ಭಾಷೆಯನ್ನಾಗಿ ಮಾಡಲು ಒಂದು ಮಸೂದೆಯನ್ನು ಮಂಡಿಸಲಾಗುತ್ತಿದೆ. ಟಂಡನ್ ಜೀ ಯವರ ಅನುಯಾಯಿಗಳೆಂದು ಹೇಳಿಕೊಳ್ಳುವ ಶ್ರಿ ಚಂದ್ರಭಾನು ಗುಪ್ತ, ಶ್ರೀ ಕಮಲಾಪತಿ ತ್ರಿಪಾಠಿ ಮತ್ತು ಇತರ ಕಾಂಗ್ರೆಸ್ಸಿಗರು ಟಂಡನ್ ಜೀಯವರ ಆತ್ಮದ ಕರೆಗೆ ಕಿವಿಗೊಡುವರೆ? ಅವರಿಗೆ ತಾಯಿಯ ಮೊರೆ ಕೇಳಲಿಲ್ಲ, ಆದರೆ ಅವರು ತಾಯ್ನುಡಿಯ ಕರೆಗಾದರೂ ಕಿವಿಗೊಡಬೇಡವೇ? ಅಥವಾ ಅಧಿಕಾರದ ಆರ್ಭಟದ ಕೂಗು ಅವರ ಆತ್ಮದ ದನಿಯನ್ನೂ ಅಡಗಿಸಿಬಿಡುತ್ತದೆಯೇ?

ಸಭಾಪತಿಯಾಗಿ ಟಂಡನ್ ಜೀಯವರು ಶಾಸನಸಭೆಯ ಎಲ್ಲ ಕಲಾಪಗಳಲ್ಲೂ ಹಿಂದಿಯು ಇಂಗ್ಲಿಷನ್ನು ಸಂಪೂರ್ಣವಾಗಿ ಉಚ್ಚಾಟಿಸುವಂತೆ ನೋಡಿಕೊಂಡರು. ಅಂತೆಯೇ, ತಾವು ಮುಖ್ಯಮಂತ್ರಿಗಳಾಗಿ ಅಧಿಕಾರದಲ್ಲಿರುವಷ್ಟು ಕಾಲ, ರಾಜ್ಯದಾದ್ಯಂತ, ಎಲ್ಲ ಆಡಳಿತಾತ್ಮಕ ಮತ್ತು ಕಚೇರಿ ಕೆಲಸಗಳಲ್ಲಿ ಹಿಂದಿಯು ಇಂಗ್ಲಿಷನ್ನು ಸ್ಥಳಪಲ್ಲಟ ಮಾಡುತ್ತದೆ ಎಂದು ಶ್ರೀ ಗುಪ್ತ ಅವರು ಭರವಸೆ ನೀಡಬಲ್ಲರೇ? ಅವರು ಅಷ್ಟು ಮಾತ್ರ ಮಾಡಿದರೆ ಸಾಕು, ಅದು ಟಂಡನ್ ಜೀಯವರ ಆತ್ಮಕ್ಕೆ ಹೆಚ್ಚಿನ ಸಮಾಧಾನ ನೀಡಿ, ಅವರು ಅದಕ್ಕಾಗಿ ಶ್ರೀ ಗುಪ್ತ ಅವರಿಗೆ ಆಶೀರ್ವಾದ ಮಾಡುವರು. ಆದರೆ ಅವರು ಇದನ್ನು ಮಾಡುವುದರಲ್ಲಿ ಸೋತರೆ, ಹೆಸರಿಗೆ ಮಾತ್ರ ಟಂಡನ್ ಜೀಯವರ ನೆನಪನ್ನು ಅವರು ಉದ್ಧರಿಸುವರು ಎಂದೂ, ಅದೂ ಕೂಡಾ ಕೇವಲ ಪಕ್ಷದ ಲಾಭಕ್ಕಾಗಿ ಮಾತ್ರ ಎಂದೂ ನಾವು ಹೇಳುವುದು ಸಮರ್ಥನೀಯವಾಗುತ್ತದೆ. ಇತ್ತೀಚಿನ ಬೆಳವಣಿಗೆಗಳು ನಮ್ಮ ಕಾಂಗ್ರೆಸ್ ಸೋದರರಲ್ಲಿ ಟಂಡನ್ ಜೀಯವರ ನೆನಪನ್ನು ಮತ್ತು ಆದರ್ಶಗಳನ್ನು ಸಜೀವಗೊಳಿಸಲು ಸಹಾಯ ಮಾಡಿದರೆ,

ರಾಜರ್ಷಿ ಪುರುಷೋತ್ತಮದಾಸ ಟಂಡನ್ ಸಮಿತಿಯ ಉದ್ದೇಶ ಬಹುಮಟ್ಟಿಗೆ ಯಶಸ್ವಿಯಾಗುತ್ತದೆ ಎಂದು ನಾನು ಭಾವಿಸಿದ್ದೇನೆ.

ಆರ್ಗನೈಸರ್, ೮ ಏಪ್ರಿಲ್, ೧೯೬೩

**ನಾವು ಸೋತಿದ್ದೇಕೆ? – ಒಂದು ವಿಶ್ಲೇಷಣೆ:**

ಫಲಿತಾಂಶ ಪ್ರತಿಕೂಲವಾಗಿದ್ದರೂ ಸಹ, ಜಾನ್‌ಪುರ್ ಮಧ್ಯಕಾಲಿನ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನನ್ನ ಮೊದಲ ಅನುಭವ ನನಗೆ ಸಂತೋಷವನ್ನೇ ತಂದಿತು. ಜನಸಂಘಕ್ಕೆ ಜನ ಮತ ನೀಡದಿರಬಹುದು. ಆದರೆ ಅವರು ಅದರ ತತ್ತ್ವಗಳನ್ನು ಮೆಚ್ಚಿಕೊಂಡರು ಹಾಗೂ ಅದರ ನಿಲುವನ್ನು ಸಮರ್ಥಿಸಿದರು. ಜನಸಂಘ ತನ್ನ ಸ್ಥಾನವನ್ನು ಕಳೆದುಕೊಂಡಿದ್ದರೆ ಅದಕ್ಕೆ ಕಾರಣ ಮತದಾರರ ಬೆಂಬಲದ ಕೊರತೆಯಲ್ಲ, ಅದು ಕಾಂಗ್ರೆಸ್ಸಿನ ಕೃತ್ರಿಮದ ನಡೆಗಳಿಗೆ ಸರಿಸಾಟಿಯೆಂದು ಸಾಧಿಸಲು ಸಾಧ್ಯವಾಗಲಿಲ್ಲ ಎಂಬುದು, ಅಷ್ಟೇ ಏನೇ ಆದರೂ ಸೋಲನ್ನು ಒಪ್ಪಿಕೊಳ್ಳಲೇಬೇಕು. ಅದಕ್ಕೆ ಕಾರಣ ಹುಡುಕಿ ಅದನ್ನು ಒತ್ತರಿಸುವ ಪ್ರಯತ್ನ ಮಾಡಲಾಗದು. ಆದರೆ, ಮುಂದೆ ಬೀಳುಗುಂಡಿಗಳಿಂದ ಪಾರಾಗಲು ಇಡೀ ಪ್ರಚಾರವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಬೇಕು.

**ನಾನೊಬ್ಬ ಪರಕೀಯನಾಗಿದ್ದೆ**

ರಾಜಕೀಯ ಮತ್ತು ಆರ್ಥಿಕ ವಿಷಯಗಳನ್ನು ಆಧರಿಸಿ ಜನಸಂಘವು ಚುನಾವಣೆಯಲ್ಲಿ ಹೋರಾಟ ನಡೆಸಿತು. ಅಮ್ರೋಹಾ ಮತ್ತು ಫರೂಖಾಬಾದ್‌ಗಳಲ್ಲಿನಂತೆ, ಸರ್ಕಾರದ ಚೀನಾ ಕಾರ್ಯನೀತಿಯಲ್ಲಿ ಬದಲಾವಣೆಗಾಗಿ ಅದು ಆಗ್ರಹಿಸಿತು; ಭೂಗಂದಾಯದ ಮೇಲಿನ ತೆರಿಗೆಯನ್ನು, ಕಡ್ಡಾಯ ಉಳಿತಾಯ ಯೋಜನೆಯ್ನೂ ಅದು ವಿರೋಧಿಸಿತು. ಹಾಗೂ ರಾಷ್ಟ್ರದ ಅಧಿಕೃತ ಭಾಷೆಗೆ ಸಂಬಂಧಿಸಿದಂತೆ ಸಂವಿಧಾನದ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳನ್ನೂ ಮಾಡಕೂಡದೆಂದು ವಾದಿಸಿತು. ಜನಸಂಘದ ಅಭಿಪ್ರಾಯವನ್ನು ಜನ ಸಾಮಾನ್ಯವಾಗಿ ಅನುಮೋದಿಸಿದರು. ಆದರೆ ಕಾಂಗ್ರೆಸ್ ಒಂದು ವಿಭಿನ್ನ ತಂತ್ರವನ್ನು ಹೂಡಿತು. ಕಾಂಗ್ರೆಸ್ಸಿನ ಮೂಲಧೋರಣೆಗಳ ಬಗ್ಗೆ ಮತದಾರರಿಗೆ ತಿಳುವಳಿಕೆ ನೀಡಬೇಕೆಂಬ ಪಂಡಿತ್ ನೆಹರೂ ಅವರ ಸಲಹೆಯನ್ನು ಅದು ಗಾಳಿಗೆ ತೂರಿತು. ಬದಲಿಗೆ ಅವರನ್ನು ಕಂಗೆಡಿಸಿ, ಅವರಲ್ಲಿ ಗೊಂದಲ ಹುಟ್ಟಿಸಲು ಪ್ರಯತ್ನಿಸಿತು. ಮೊದಲ ದಿನದಿಂದಲೇ ತೀರಾ ಕೆಳಮಟ್ಟದ ಪ್ರಾಂತೀಯತೆಯನ್ನು ಅವರು ಪ್ರೋತ್ಸಾಹಿಸಿದರು. ಸಾವಿರಾರು ಮೈಲು ದೂರದಿಂದ ಒಬ್ಬ ಹೊರಗಿನವನನ್ನು ಆಮದು ಮಾಡಿಕೊಂಡ ಜನಸಂಘವನ್ನು ದೂರುವ ಕರಪತ್ರವನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಬಿಡುಗಡೆ ಮಾಡಿ ಸ್ಥಳಿಯನಾದ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ

ಕೋರಿದರು.

ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಅಜಿತ್ ಪ್ರಸಾದ್ ಜೈನ್ ಅವರು ತಮ್ಮ ಸಾರ್ವಜನಿಕ ಭಾಷಣದಲ್ಲಿ ಈ ಕರಪತ್ರವನ್ನು ವಿರೋಧಿಸಿ, ಮೈಸೂರಿನ ತುಮಕೂರಿನಿಂದ ಸ್ಪರ್ಧಿಸಿ, ವಿಜಯಿಯಾದ ತಮ್ಮದೇ ಉದಾಹರಣೆಯನ್ನು ನೀಡಿ, ಭಾರತದ ಒಬ್ಬ ನಾಗರೀಕನು, ತಾನು ಹುಟ್ಟಿದ ಮತ್ತು ವಾಸಿಸುವ ಸ್ಥಳ ಯಾವುದೇ ಆಗಿದ್ದರೂ ಸರಿಯೇ, ತನಗೆ ಬೇಕಾದ ಚುನಾವಣಾ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಬಹುದು ಎಂದರು. ಜನಸಂಘದ ಚುನಾವಣಾ ಪ್ರಚಾರವು ರಾಷ್ಟ್ರೀಯ ವಿಷಯಗಳನ್ನೇ ಮುಖ್ಯವಾಗಿ ಆಧರಿಸಿತ್ತು ಎಂದು ಮೆಚ್ಚಿಕೊಂಡರು.

**ಜಾನ್‌ಪುರ್ ಒಂದು ರಾಷ್ಟ್ರವೇ?**

ಆದರೆ ಈ ಬುದ್ಧಿಮಾತು ಸ್ಥಳೀಯ ಕಾಂಗ್ರೆಸ್ ನಾಯಕರ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಸ್ಥಳೀಯ ಭಾವನೆಗಳನ್ನು ಉದ್ರೇಕಿಸುವುದನ್ನು ಅವರು ಯಾವ ಮಟ್ಟದಲ್ಲಿ ಮುಂದುವರೆಸಿದರು ಎಂದರೆ, ಚುನಾವಣೆಗೆ ಕೆಲವೇ ದಿನಗಳು ಬಾಕಿಯಿದ್ದಾಗ ಜಾನ್ ಪುರದ ನಾಡಿಗೆ ಕಾಂಗ್ರೆಸ್ ಅಭ್ಯರ್ಥಿಯ ಸೇವೆಗಳನ್ನು ಕೊಂಡಾಡುವ ಹಾಡುಗಳನ್ನು ಕಟ್ಟಲಾಯಿತು. ಆ ಹಾಡು ಹೀಗಿತ್ತು ಜಾನ್ ಪುರದಲ್ಲೇ ಜನಿಸಿದ, ಜಾನ್ಪುರದ ಮಣ್ಣಿಂದಲೇ ನಿರ್ಮಾಣಗೊಂಡ, ಜಾನ್ ಪುರದ ಗಾಳಿಯನ್ನೇ ಉಸಿರಾಡುವ, ಜಾನ್ ಪುರಕ್ಕಾಗಿಯೇ ಬದುಕಿದ್ದು ಜಾನ್ ಪುರಕ್ಕಾಗಿ ಸಾಯಲು ಸಿದ್ಧನಿರುವ ಮಾನವನಿವನು. ಆ ಹಾಡು ಹೀಗೆ ಮುಂದುವರೆಯುತ್ತಿತ್ತು ರಾಷ್ಟ್ರ ನಾಯಕನಾದ ಜನಸಂಘದ ಅಭ್ಯರ್ಥಿಯು ದೇಶದ ಬೇರಾವುದೇ ಚುನಾವಣಾ ಕ್ಷೇತ್ರದಿಂದ ಚುನಾವಣೆಗೆ ನಿಲ್ಲಬಹುದು. ಆದರೆ ರಾಜ್‌ದೇವ್ ಸಿಂಗ್ ಬೇರೆಲ್ಲಿ ಹೋಗಲು ಸಾಧ್ಯ? ಅವನು ಆಯ್ಕೆಯಾದರೆ ಜಾನ್ ಪುರದಿಂದಲೇ ಆಯ್ಕೆ ಆಗುವನು, ಇಲ್ಲದಿದ್ದರೆ ಅವನು ಆಯ್ಕೆ ಆಗುವುದೇ ಇಲ್ಲ.

ಹೀಗೆ ಜಾನ್ ಪುರವನ್ನು ಒಂದು ರಾಷ್ಟ್ರವೆಂಬಂತೆ ಪ್ರತಿನಿಧಿಸಲಾಯಿತು ಹಾಗೂ ಕಾಂಗ್ರೆಸ್ ಅಭ್ಯರ್ಥಿಯನ್ನು ಅದರ ರಾಷ್ಟ್ರನಾಯಕನೆಂಬಂತೆ ದಿವ್ಯತೆಗೇರಿಸಲಾಯಿತು. ಕಾಂಗ್ರೆಸ್ ನಾಯಕರು ಪ್ರಾಂತೀಯ ಮತ್ತು ಸಂಕುಚಿತ ನಿಷ್ಠೆಗಳನ್ನು ಖಂಡಿಸುತ್ತಿದ್ದಾಗಲೇ, ಹಾಗೂ ಪ್ರತ್ಯೇಕತಾವಿರೋಧಿ ಮಸೂದೆಯನ್ನು ಸಂಸತ್ತು ಅಳವಡಿಸಿಕೊಂಡಾಗಲೇ ಇದೆಲ್ಲಾ ನಡೆಯುತ್ತಿತ್ತು. ವಿಜಯಿಯಾದ ಕಾಂಗ್ರೆಸ್ ಅಭ್ಯರ್ಥಿಯು ಲೋಕಸಭೆಯಲ್ಲಿ ದನಿ ಎತ್ತುವುದು ರಾಷ್ಟ್ರಕ್ಕಾಗಿಯೋ ಇಲ್ಲ ಜಾನ್‌ಪುರಕ್ಕಾಗಿಯೋ ಎಂಬುದನ್ನು ಕಾದು ನೋಡಬೇಕಾಗಿದೆ.

ಕಾಂಗ್ರೆಸ್ ಪ್ರಚಾರಕರು ಒತ್ತಿ ಹೇಳಿದ ಎರಡನೆಯ ಅಂಶವೆಂದರೆ ಕಾಂಗ್ರೆಸ್

ಹಾಗೂ ಕಾಂಗ್ರೆಸ್ ಅಭ್ಯರ್ಥಿಯು ೧೯೪೨ರ ಚಳುವಳಿಯಲ್ಲಿ ನಿರ್ವಹಿಸಿದ ಪಾತ್ರ. ಅವರು ಗತಕಾಲದ ಬಗ್ಗೆ ಹೇಳಿದರೇ ಹೊರತು ವರ್ತಮಾನದ ಬಗ್ಗೆ ಮಾತನಾಡಲೇ ಇಲ್ಲ. ನಮಗೆ ಕಾಂಗ್ರೆಸ್ಸಿಗೆ ಮತ ಬೇಡ, ಆದರೆ ರಾಜ್‌ದೇವ್ ಸಿಂಗಿಗೆ ಅಪರೂಪದ ಅವಕಾಶ ಲಭಿಸಿದೆ. ದಯಮಾಡಿ ಅವನನ್ನು ನಿರಾಶೆಗೊಳಿಸಬೇಡಿ ಎಂಬುದೇ ಸಾಮಾನ್ಯ ಘೋಷಣೆಯಾಗಿತ್ತು.

ಭಾರತದ ಮೇಲೆ ಆಕ್ರಮಣ ಮಾಡಲು ಬಿಜೆಎಸ್ ಚೀನಾವನ್ನು ಆಮಂತ್ರಿಸಿದ್ದು ನಿಮಗೆ ಗೊತ್ತೆ?

ಹೀಗಾಗಿ ಎಲ್ಲ ರೀತಿಗಳಿಂದಲೂ ಪ್ರಕ್ಷೇಪಿಸುತ್ತಿದ್ದುದು ಕಾಂಗ್ರೆಸ್ ಅಭ್ಯರ್ಥಿಯ ವ್ಯಕ್ತಿತ್ವವನ್ನೇ. ವರ್ತಮಾನದ ವಿಷಯಗಳನ್ನು ಎತ್ತಲೇ ಇಲ್ಲ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಸಂಪೂರ್ಣವಾಗಿ ಸುಳ್ಳಾದ ಹೇಳಿಕೆಗಳನ್ನು ನೀಡಲಾಯಿತು. ಉದಾಹರಣೆಗೆ: ಜನಸಂಘದ ನಾಯಕರಾದ ರಾಜಾಸಾಹೇಬ್ ಜಾನ್‌ಪುರ್ ಅವರು ಚೌ ಎನ್ ಲೈ ಅವರಿಗೆ ಆಮಂತ್ರಣ ಕಳಿಸಿದ್ದರಿಂದಲೇ ಚೀನಾದವರು ಭಾರತದ ಮೇಲೆ ಆಕ್ರಮಣ ನಡೆಸಿದರು ಎಂದು ಉತ್ತರ ಪ್ರದೇಶದ ಯೋಜನಾ ಸಚಿವರಾದ ಶ್ರೀ ಹರಗೋವಿಂದ ಸಿಂಗ್ ಅವರು ಕಾರ್ಯಕರ್ತರ ಒಂದು ಸಭೆಯಲ್ಲಿ ಹೇಳಿದರು. ಜಾನ್‌ಪುರದಲ್ಲಿ ಕಾಂಗ್ರೆಸ್ ಸೋತರೆ ಅಮೇರಿಕಾ ಭಾರತಕ್ಕೆ ನೀಡುತ್ತಿರುವ ಎಲ್ಲ ನೆರವನ್ನು ನಿಲ್ಲಿಸುತ್ತದೆಯೆಂದು ಅವರ ಒಂದು ಸಾರ್ವಜನಿಕ ಭಾಷಣದಲ್ಲಿ ಹೇಳಿದರು. ಶಾಸಕಾಂಗದ ಜನಸಂಘದ ನಾಯಕರ ಕೋರಿಕೆಯ ಮೇರೆಗೆ ಭೂಕಂದಾಯವನ್ನು ಹೆಚ್ಚಿಸಲಾಯಿತು ಎಂದು ಉತ್ತರ ಪ್ರದೇಶದ ಹಣಕಾಸು ಸಚಿವರಾದ ಶ್ರೀ ಕಮಲಾಪತಿ ತ್ರಿಪಾಠಿ ಅವರು ವೃತ್ತಪತ್ರಿಕೆಗಳಲ್ಲಿ ವರದಿಯಾಗಿರುವ ಅವರ ಒಂದು ಭಾಷಣದಲ್ಲಿ ಹೇಳಿದ್ದಾರೆ.

**ಧೋರಣೆಗಳನ್ನು ಕುರಿತು ಕಾಂಗ್ರೆಸ್ ಮಾತನಾಡಲೇ ಇಲ್ಲ**

ಇಂತಹ ಎಲ್ಲ ಸ್ಪಷ್ಟ ಸುಳ್ಳುಗಳನ್ನು ಮತದಾರರ ಸಮುದಾಯ ನಂಬಿಬಿಟ್ಟಿತು. ಕಾಂಗ್ರೆಸ್ಸಿನ ಚುನಾವಣಾ ಪ್ರಚಾರಕರು ಧೋರಣೆಗಳ ವಿಷಯದಲ್ಲಿ ಖಚಿತವಾಗಿರಲೇ ಇಲ್ಲ ಎಂಬುದನ್ನು ತೋರಿಸಲು ಮಾತ್ರ ನಾನು ಅವುಗಳನ್ನು ಉಲ್ಲೇಖಿಸಿದೆ. ಇಷ್ಟು ಮಾತ್ರವಲ್ಲ, ಕಾಂಗ್ರೆಸ್ ಧೋರಣೆಗಳನ್ನು ಜನ ಎಷ್ಟರ ಮಟ್ಟಿಗೆ ವಿರೋಧಿಸುತ್ತಾರೆಂದು ಅವರು ಬಲ್ಲವರಾದ್ದರಿಂದ ಈ ಧೋರಣೆಗಳ ಸೂತ್ರೀಕರಣದ ಜೊತೆಗೆ ಜನಸಂಘವನ್ನು ಹೇಗಾದರೂ ಮಾಡಿ ಜೋಡಿಸಲು ಅವರು ಪ್ರಯತ್ನಿಸಿದರು. ಚುನಾವಣೆಯಲ್ಲಿ ಧೋರಣೆಗಳ ವಿಷಯದಲ್ಲಂತೂ ಕಾಂಗ್ರೆಸ್ ಸೋತಿದೆ ಎನ್ನುವುದು ಸ್ಪಷ್ಟವಾಗಿದೆ. ಅಮ್ರೋಹಾದಲ್ಲಿನ ತನ್ನ ಅಭ್ಯರ್ಥಿಯನ್ನು ಬದಲಿಸುವ ಅದರ ನಿರ್ಧಾರದಿಂದಲೂ ಈ ವಿಷಯದಲ್ಲಿ ಕಾಂಗ್ರೆಸ್ಸಿಗಿರುವ ಅಧೈರ್ಯ ಎದ್ದು ಕಾಣುತ್ತದೆ.

ಜನತೆಯ ತೀರ್ಮಾನವು ಚೀನಾ, ಭಾಷೆ ಮತ್ತು ತೆರಿಗೆಯ ವಿಷಯದಲ್ಲಿ ಸರ್ಕಾರದ ಧೋರಣೆಗಳಿಗೆ ವಿರುದ್ಧವಾಗಿದೆ. ಈ ವಿಷಯದಲ್ಲಿ ಜಾನ್‌ಪುರದ ಮತದಾರರು ಅಮ್ರೋಹಾ ಮತ್ತು ಫರುಕ್ಕಾಬಾದಿನ ತಮ್ಮ ದೇಶಬಾಂಧವರಿಂದ ಭಿನ್ನವಾಗೇನೂ ಇಲ್ಲ. ಕಾಂಗ್ರಸ್ಸಿನ ಮತಗಳನ್ನು ಗಳಿಸಿಕೊಡುವಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಿದ ಕಾಂಗ್ರೆಸ್‌ನ ದುರಾಚಾರಗಳನ್ನು ನಾವು ಅಲಕ್ಷಿಸಿದರೂ ಜಾನ್‌ಪುರದ ಜನರೂ ಕೂಡಾ ಕಾಂಗ್ರೆಸ್ಸಿನ ಧೋರಣೆಗಳನ್ನು ತಿರಸ್ಕರಿಸಿದ್ದಾರೆಂದು ಧೈರ್ಯವಾಗಿ ಹೇಳಬಹುದು.

ಪ್ರಜಾಸತ್ತೀಯವಾಗಿ ಉಳಿಯಲು ಸರ್ಕಾರವು ಅಪೇಕ್ಷಿಸಿದ್ದೇ ಆದರೆ ಅದು ತನ್ನ ಧೋರಣೆಗಳನ್ನು ಬದಲಾಯಿಸಿಕೊಳ್ಳುತ್ತದೆ ಎಂದು ನಿರೀಕ್ಷಿಸುವುದು ಇಂತಹ ಸಂದರ್ಭದಲ್ಲಿ ತಪ್ಪಾಗಲಾರದು. ಅನುಮಾನಕ್ಕೆ ಎಡೆಯೇ ಇಲ್ಲದಂತೆ ವ್ಯಕ್ತವಾಗಿರುವ ಒಲವುಗಳನ್ನು ಅವರು ಅಲಕ್ಷಿಸದಿರಲಿ. ಸಂವಿಧಾನದ ವಾಚ್ಯಾರ್ಥದ ಮರೆಯಲ್ಲಿ ಅವರು ರಕ್ಷಣೆ ಪಡೆಯದಿರಲಿ. ಸಂವಿಧಾನದ ನಿಬಂಧನೆಗಳಿಗಿಂತಲೂ ವಾಡಿಕೆಗಳು ಹೆಚ್ಚು ಶಕ್ತವಾದವು. ಹಾಲಿ ಇರುವ ಸರ್ಕಾರದ ಧೋರಣೆಗಳು ಮತ್ತು ವಿನ್ಯಾಸ ಎರಡರಲ್ಲೂ ತೀವ್ರ ಬದಲಾವಣೆಯನ್ನು ಪ್ರಜಾಸತ್ತೀಯ ವಾಡಿಕೆಗಳು ಒತ್ತಾಯಿಸುತ್ತವೆ.

**ಈ ಸರ್ಕಾರದ ಅವಸಾನದ ಆರಂಭ**

ವಿರೋಧ ಪಕ್ಷಗಳ ಐಕ್ಯತೆಯು ಮುಂದುವರೆಯಬೇಕು ಹಾಗೂ ವೃದ್ಧಿಸಬೇಕು

ನವದೆಹಲಿ, ೨೨ ಆಗಸ್ಟ್ ಪಂಡಿತ್ ನೆಹರೂ ಅವರ ಸರ್ಕಾರದ ಬಗ್ಗೆ ಆಚಾರ್ಯ ಕೃಪಲಾನಿ ಅವರು ಮಂಡಿಸಿದ ಅವಿಶ್ವಾಸ ನಿರ್ಣಯವು ಸದನದಲ್ಲಿ ಚರ್ಚೆಗೆ ಸ್ವೀಕೃತವಾದ ಮೊದಲನೆಯ ಇಂತಹ ವಿಷಯವೆಂದು ಇತಿಹಾಸದಲ್ಲಿ ದಾಖಲಾಗುತ್ತದೆ.

ಮತದಾನದ ವೇಳೆಯಲ್ಲಿ ಅದರ ವಿಧಿ ಏನೆಂಬುದು ಪೂರ್ವ ನಿರ್ಧಾರವಾಗಿತ್ತು. ಅಜಾಗರೂಕರಾದವರು ಹಾಗೂ ಭೋಳೇ ಸ್ವಭಾವದವರು ಮಾತ್ರ ಇದಕ್ಕಾಗಿ ವ್ಯಥೆ ಪಡುವರು. ಭಾರೀ ಸಂಖ್ಯೆಯ ಕಾಂಗ್ರೆಸ್ಸಿಗರು ವಿರೋಧ ಪಕ್ಷದವರೊಡನೆ ಮತ ನೀಡಿ ಚಕಿತಗೊಳಿಸದ ಹೊರತು ಮಂಡನೆ ಯಶಸ್ವಿಯಾಗುವ ಅವಕಾಶವೇ ಇರಲಿಲ್ಲ. ಆದರೆ ಕಾಂಗ್ರೆಸ್ಸಿಗರು ಅಂತಹ ಆಶ್ಚರ್ಯದಾಯಕ ಹೆಜ್ಜೆ ಇಟ್ಟಿದ್ದರೇ ಆಶ್ಚಯವಾಗುತ್ತಿತ್ತು. ಅವರಿಗೆ ಅಂತಹ ಸಾಮರ್ಥ್ಯವಿದ್ದಿದ್ದರೆ ಖಂಡನಾ ನಿರ್ಣಯವನ್ನು ಮಂಡಿಸುವ ಪ್ರಮೇಯವೇ ಬರುತ್ತಿರಲಿಲ್ಲ. ಇನ್ನೂ ಬಹಳ ಮುಂಚೆಯೇ ವಿಷಯಗಳು ಸುಧಾರಿಸುತ್ತಿದ್ದವು.

ನಾಲ್ಕು ದಿನದ ಚರ್ಚೆಯು ಸರ್ಕಾರದ ಕೊರತೆಗಳನ್ನು ಗುರುತುಮಾಡಿ ತೋರಿಸಲು ವಿರೋಧ ಪಕ್ಷಗಳಿಗೆ ಒಂದು ಅವಕಾಶ ನೀಡಿದೆ. ವಿರೋಧ ಪಕ್ಷಗಳಲ್ಲಿ

ಈ ಮಂಡನೆಯನ್ನು ಬೆಂಬಲಿಸಿದವರು ವಿಭಿನ್ನ ಹಿನ್ನೆಲೆಗಳವರು. ಅವರ ಸಿದ್ಧಾಂತದ ಹಾಗೂ ಕಾರ್ಯಸರಣಿಯ ವ್ಯತ್ಯಾಸಗಳು ಎಲ್ಲರಿಗೂ ತಿಳಿದಿರುವಂತಹವೇ. ಸರ್ಕಾರದ ಧೋರಣೆಗಳನ್ನು ಪ್ರತಿರೋಧಿಸುತ್ತಿರುವ, ಕಮ್ಯೂನಿಸ್ಟೇತರ ವಿರೋಧ ಪಕ್ಷಗಳ ಸದಸ್ಯರನ್ನು ಮೆಚ್ಚಿಕೊಳ್ಳಲೇಬೇಕು. ತಮ್ಮ ಸಹೋದ್ಯೋಗಿಗಳೊಂದಿಗಿನ ಭೇದಗಳನ್ನು ಆ ಕ್ಷಣದಲ್ಲಿ ಅವರು ಪ್ರಸ್ತಾಪ ಮಾಡಲಿಲ್ಲ. ಅವರು ಮುಂಚಿತವಾಗಿ ಮಾಡಿಕೊಂಡ ಯಾವುದೇ ಸಮ್ಮತಿ ಇಲ್ಲವೇ ಒಪ್ಪಂದ ಇಲ್ಲದೇ ಇದು ನಡೆಯಿತು ಎಂಬುದನ್ನು ಪರಿಗಣಿಸಿದರೆ ಭಾರತದ ರಾಜಕೀಯದ ಮುಂದಿನ ನಡೆಗಳ ಬಗ್ಗೆ ಭರವಸೆ ಉಂಟಾಗುತ್ತದೆ.

ವಿರೋಧ ಪಕ್ಷಗಳ ಸಾಧನೆಗೆ ವ್ಯತಿರಿಕ್ತವಾಗಿ, ಕಾಂಗ್ರೆಸ್ ಸಂಸದೀಯ ಪಕ್ಷದ ಕಚೇರಿಯು ಒದಗಿಸಿದ ಸಮೃದ್ಧವಾದ ಮಾಹಿತಿಗಳು ಮತ್ತು ಟಿಪ್ಪಣಿಗಳು ಇದ್ದಾಗ್ಯೂ, ಒಮ್ಮತದಿಂದ ಸರ್ಕಾರವನ್ನು ಬೆಂಬಲಿಸುವಂತಹ ಆಧಾರಾಂಶಗಳನ್ನು ಕ್ರಮಬದ್ಧವಾಗಿ ಹೇಳಲು ಇಲ್ಲವೇ ವಾದಗಳನ್ನು ಮಂಡಿಸಲು ಕಾಂಗ್ರೆಸ್‌ನ ಭಾಷಣಕಾರರು ಸಮರ್ಥರಾಗಲಿಲ್ಲ. ಕೃತಕವಾಗಿ ಜೋಡಿಸಿದ, ಪಂಡಿತ್ ನೆಹರೂ ಅವರಿಗೆ ಬೆಂಬಲ ಸೂಚಿಸುವ ಹೇಳಿಕೆಗಳ ಅಲ್ಲೊಂದು ಇಲ್ಲೊಂದು ವಾಕ್ಯಗಳನ್ನು ತೆಗೆದುಹಾಕುವಂತೆ ಸಂಪಾದಿಸಿ, ಭಾಷಣಕಾರರ ಹೆಸರಿಲ್ಲದೆ ಪ್ರಕಟಿಸಿದರೆ. ಬಹುಪಾಲು ಭಾಷಣಗಳು ವಿರೋಧ ಪಕ್ಷಗಳಿಂದ ಬಂದಂತೆಯೇ ತೋರುತ್ತವೆ. ಸಚಿವರು ಇತರ ಸಚಿವರಿಗೆ ಜವಾಬ್ದಾರಿಯನ್ನು ಹೊರಿಸುತ್ತಾ ತಮ್ಮ ಕಾರ್ಯಗಳನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು. ಸಚಿವ ಸಂಪುಟದಲ್ಲಿ ಸಮಷ್ಟಿ ಜವಾಬ್ದಾರಿಯ ಭಾವದ ಕೊರತೆ ತೀರ ಸ್ಪಷ್ಟವಾಗಿತ್ತು.

ಹಿಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ದೊರೆತ ಜನ ಬೆಂಬಲವೇ ಕಾಂಗ್ರೆಸ್ಸಿಗರ ವಾದದ ತಿರುಳಾಗಿತ್ತು. ಆದರೆ ಅಲ್ಲಿಂದ ಈಚೆಗೆ ಕಾಲ ಸರಿದಿರುವುದನ್ನು ಡಾ. ಲೋಹಿಯಾ ಅವರು ಸರಿಯಾಗಿಯೇ ನೆನಪು ಮಾಡಿಕೊಟ್ಟರು. ಪಂಡಿತ್ ನೆಹರೂ ಹಾಗೂ ಕಾಂಗ್ರೆಸ್ಸಿನ ಅನೇಕ ಬೆಂಬಲಿಗರಲ್ಲಿ ೧೯೬೨ರ ಅಕ್ಟೋಬರ್–ನವೆಂಬರ್ ಘಟನೆಗಳು ಭ್ರಮನಿರಸನ ಉಂಟುಮಾಡಿದ್ದವು. ಎಲ್ಲ ಪಟ್ಟಭದ್ರ ಹಿತಾಸಕ್ತಿಗಳಂತೆಯೇ ಕಾಂಗ್ರೆಸ್ ಕೂಡಾ ಗತಕಾಲಕ್ಕೆ ಕಟ್ಟುಬೀಳಲು ಬಯಸುತ್ತದೆ ಹಾಗೂ ಚಲನಶೀಲ ಜಗತ್ತಿನ ಸಂದರ್ಭಗಳಿಗೆ ಸ್ಪಂದಿಸಲು ಇಚ್ಛಿಸುವುದಿಲ್ಲ. ಪ್ರಜಾಪ್ರಭುತ್ವವು ಚಲನಶೀಲವಾಗಿಲ್ಲದಿದ್ದರೆ ಅದು ಪ್ರಜಾಪ್ರಭುತ್ವವಾಗಿ ಉಳಿಯಲಾರದು. ಜಡವಾದ ಮನಸ್ಸಿನ ನಿಷ್ಕ್ರಿಯವಾದ ಚಿಂತನೆಯ ಜನರ ಕೈಯಲ್ಲಿ ಅದು ಸುರಕ್ಷಿತವಾಗಿಲ್ಲ.

ವಿವಿಧ ಪ್ರತಿಪಕ್ಷಗಳ ಆರೋಪಿತ ಲೋಪಗಳ ಆಧಾರದ ಮೇಲೆ ಕೆಲವು ಕಾಂಗ್ರೆಸ್ಸಿಗರು ತಮ್ಮ ಸರ್ಕಾರವನ್ನು ಸಮರ್ಥಿಸಿಕೊಳ್ಳಲು ಯತ್ನಿಸಿದ್ದು

ಹಾಸ್ಯಾಸ್ಪದವಾಗಿತ್ತು. ಕೆಲವು ಸಾಮಾನ್ಯರಿಗೆ ತುರಿಕೆಯೋ, ರಕ್ತ ಕ್ಯಾನ್ಸರ್ರೋ ಆದ ಮಾತ್ರಕ್ಕೆ ಕುಷ್ಠರೋಗಿಗಳು ಸಾಮಾನ್ಯರೊಂದಿಗೆ ಬೆರೆತು ಅವರ ವ್ಯವಹಾರಗಳನ್ನು ನಿಯಂತ್ರಿಸಲು ಅವಕಾಶ ಮಾಡಿಕೊಡಲಾಗುವುದಿಲ್ಲ. ಅದೂ ಅಲ್ಲದೆ, ಇದು ಪ್ರಸಕ್ತ ಸರ್ಕಾರದ ಬಗ್ಗೆ ಅವಿಶ್ವಾಸದ ಪ್ರಶ್ನೆಯೇ ಹೊರತು ವಿರೋಧ ಪಕ್ಷಗಳಲ್ಲಿನ ನಂಬಿಕೆಯ ಪ್ರಶ್ನೆಯಲ್ಲ. ಪ್ರಸಕ್ತ ಸರ್ಕಾರದ ಉಳಿವಿಗೆ ಯಾವುದೇ ವಾದವನ್ನು ಹೂಡಲಾಗಿಲ್ಲ.

ಮಂಡನೆಯ ಬಗೆಗಿನ ಚರ್ಚೆಯು ಮುಕ್ತಾಯವಾಗಿದೆ. ಆದರೆ ಐವತ್ತಕ್ಕಿಂತಲೂ ಹೆಚ್ಚು ಕಮ್ಯೂನಿಸ್ಟೇತರ ಸದಸ್ಯರನ್ನು ಮಂಡಿತ ವಿಷಯದ ಪರವಾಗಿ ಕರೆತಂದಿದ್ದವರ ಪರಿಶ್ರಮಕ್ಕೂ ಮುಕ್ತಾಯ ಹಾಕುವುದೇ? ಇಲ್ಲ. ಖಂಡಿತವಾಗಿಯೂ ಇಲ್ಲ. ಈ ನಿರ್ಣಯವು ಪ್ರಸಕ್ತ ಸರ್ಕಾರದ ಡಾ. ಲೋಹಿಯಾ ಅವರು ಕರೆದಂತೆ ರಾಷ್ಟ್ರೀಯ ಅವಮಾನದ ಅಂತ್ಯದ ಪ್ರಾರಂಭವಾಗಬೇಕು. ಐತಿಹಾಸಿಕ ನಿರ್ಣಯವೂ ಕೂಡಾ ಇತಿಹಾಸವನ್ನು ನಿರ್ಮಿಸಬೇಕು.

ಚರ್ಚೆಯ ವೇಳೆಯಲ್ಲಿ ವಿರೋಧ ಪಕ್ಷಗಳಿಗೆ ನಿರಾತಂಕವಾಗಿತ್ತು. ಆದರೆ ಈಗ ಚರ್ಚೆಯ ನಂತರ ಅದು ಪರೀಕ್ಷೆಗೊಳಗಾಗುತ್ತದೆ. ಅವರೀಗ ಪರಸ್ಪರರಿಗೆ ಸಮೀಪವಾಗುವರೋ ಒಬ್ಬರಿಂದೊಬ್ಬರು ದೂರ ಸರಿಯುವರೋ? ಬದಲಾಗುತ್ತಿರುವ ಕಾಲಮಾನದ ಸವಾಲುಗಳನ್ನು ಸ್ವೀಕರಿಸಿದರೆ, ವಿರೋಧ ಪಕ್ಷಗಳ ನಾಯಕರು ಖಂಡಿತವಾಗಿಯೂ ಅವರು ನಿರ್ವಹಿಸಬೇಕಾದ ಪತ್ರವನ್ನು ನಿರ್ವಹಿಸಬಲ್ಲರು.

ಇದೊಂದು ಕಾರ್ಯಸಾಧ್ಯ ಪ್ರಶ್ನೆ ಹಾಗೂ ಸಾಮಾನ್ಯ ತಿಳುವಳಿಕೆಯ ಉತ್ತರವನ್ನು ನಿರೀಕ್ಷಿಸುತ್ತದೆ. ಇಷ್ಟು ಕಾಲ ಅನೌಪಚಾರಿಕವಾಗಿ ಕಲೆಯುತ್ತಿದ್ದಂತೆ ಈ ವಿವಿಧ ವಿರೋಧ ಪಕ್ಷಗಳು ಇನ್ನು ಮುಂದೆಯೂ ಒಟ್ಟಾಗಿ ಕೆಲಸ ಮಾಡಲು ಒಂದು ಸೂತ್ರವನ್ನು ರೂಪಿಸಿಕೊಂಡು ಪ್ರಸಕ್ತ ಸರ್ಕಾರಕ್ಕೆ ಒಂದು ಬದಲೀ ಸಾಧ್ಯತೆಯನ್ನು ಬೆಸೆಯಲಿ ಎಂದು ನಾವು ಆಶಿಸೋಣ.

**ಮೂಲ : ಆರ್ಗನೈಸರ್, ೨೬ ಆಗಸ್ಟ್ ೧೯೬೩**

**ಕಾಶ್ಮೀರದ ವಿಷಯದಲ್ಲಿ ಮಿ. ಕೆನೆಡಿ ಅವರ ನಿಲುವಿನಲ್ಲಿರುವ ತಪ್ಪೇನು**

ಮತ್ತೊಮ್ಮೆ ಅಧ್ಯಕ್ಷ ಕೆನೆಡಿ ಮತ್ತು ಪ್ರಧಾನ ಮಂತ್ರಿ ಮ್ಯಾಕ್‌ಮಿಲನ್ ಅವರು ಕಾಶ್ಮೀರ ಸಮಸ್ಯೆಗೆ ಮಧ್ಯವರ್ತಿ ಒಪ್ಪಂದಕ್ಕೆ ಬರಲು ಆಗ್ರಹಿಸಿದ್ದಾರೆ. ಈ ವಿಷಯದಲ್ಲಿ ಅವರ ಅಭಿಪ್ರಾಯಗಳು ಸುಪರಿಚಿತವಾಗಿವೆ; ಆದರೆ ಪಾಕಿಸ್ತಾನದ ಹಟಮಾರಿತನವು ಎಲ್ಲ ಸಮಾಲೋಚನೆಗಳನ್ನೂ ಧಿಕ್ಕರಿಸಿದ್ದು, ಅಲ್ಲಿನ ನಾಯಕರು ಪಾಶ್ಚಿಮಾತ್ಯ ದೇಶಗಳೊಂದಿಗಿನ ಅವರ ಒಪ್ಪಂದಗಳಿಗೆ ವ್ಯತಿರಿಕ್ತವಾಗಿ ಕಮ್ಯೂನಿಸ್ಟ್

ಚೀನಾದೊಂದಿಗೆ ಸಲಿಗೆಯಿಂದಿರಲು ಮತ್ತು ಅದರೊಂದಿಗೆ ಎಲ್ಲ ರೀತಿಯ ಸಂಧಾನಗಳನ್ನೂ ಒಡಂಬಡಿಕೆಗಳನ್ನೂ ಮಾಡಿಕೊಳ್ಳಲು ಬಯಸಿರುವಾಗ, ಅದೇ ಅಭಿಪ್ರಾಯಗಳಿಗೆ ಕಟ್ಟುಬಿದ್ದು ಅದನ್ನೇ ಮತ್ತೆ ಮತ್ತೆ ಹೇಳುತ್ತಿರುವುದು ಸ್ವಲ್ಪ ಆಶ್ಚರ್ಯಕರವಾಗಿದೆ. ಅವರು ಇಲ್ಲವೇ ಪಾಕಿಸ್ತಾನದ ಎಲ್ಲ ದುಷ್ಕೃತ್ಯಗಳಿಗೆ ಕುರುಡಾಗಿದ್ದಾರೆ ಅಥವಾ ಅವರ ಬೆದರಿಕೆಯ ತಂತ್ರಕ್ಕೆ ಬಲಿಯಾಗಿದ್ದಾರೆ. ಕಮ್ಯೂನಿಸಮ್ಮಿನ ಪೈಶಾಚಿಕ ಪ್ರವೃತ್ತಿಯನ್ನು ಅಡಗಿಸಲು ಅಸಕ್ತರಾಗಿರುವ ವಿಶ್ವದಾದ್ಯಂತದ ಶಕ್ತಿಗಳಿಗೆ ಈ ನಿಲುವು, ಬೆಂಬಲ ಮತ್ತು ಸ್ಥೈರ್ಯಗಳನ್ನು ನೀಡಲಾರದು.

ಭಾರತ ಮತ್ತು ಪಾಕಿಸ್ತಾನಗಳು ಕಾಶ್ಮೀರ ಸಮಸ್ಯೆಯನ್ನು ಇತ್ಯರ್ಥಗೊಳಿಸುವುದು ಈ ಉಪಖಂಡವನ್ನು ಕಮ್ಯೂನಿಸಮ್ಮಿನ ವಿರುದ್ಧ ಕಾಪಾಡಲು ಅತ್ಯುತ್ತಮ ಮಾರ್ಗ ಎಂದು ಅಮೇರಿಕಾ ಭಾವಿಸುವುದರಿಂದ ಅವು ಹಾಗೆ ಮಾಡಲೆಂದು ಅಮೇರಿಕಾ ಬಯಸುತ್ತದೆ ಎಂದು ಅಧ್ಯಕ್ಷ ಕೆನೆಡಿ ಹೇಳಿದರೆಂದು ವರದಿಯಾಗಿದೆ. ಬಾಕಿ ಉಳಿದಿರುವ ಯಾವುದೇ ಸಮಸ್ಯೆಯನ್ನಾದರೂ ಪರಿಹರಿಸುವುದು ಯಾವಾಗಲೂ ಅಪೇಕ್ಷಣೀಯ, ಆದರೆ ಅದು ಭಾರತ ಮತ್ತು ಪಾಕಿಸ್ತಾನಗಳನ್ನು ಕಮ್ಯೂನಿಸಮ್ಮಿನಿಂದ ರಕ್ಷಿಸುತ್ತದೆಂದು ಆಶಿಸುವುದು ಸಮಂಜಸವಲ್ಲದಿರಬಹುದು. ವಾಸ್ತವವಾಗಿಯೂ, ಕಮ್ಯೂನಿಸಮ್ಮಿನ ಅಪಾಯಕಾರೀ ಆಯಾಮಗಳನ್ನು ಪೂರ್ತಿಯಾಗಿ ಅರಿತುಕೊಂಡರೆ ಹಾಗೂ ಇತರೆ ಸಮಸ್ಯೆಗಳನ್ನು ಪಕ್ಕಕ್ಕೆ ಸರಿಸಿದರೆ ಮಾತ್ರ ಕಮ್ಯೂನಿಸಮ್ಮನ್ನು ತಡೆಹಿಡಿಯಬಹುದು. ಆದರೆ ಕಮ್ಯೂನಿಸಮ್ ವಿಸ್ತರಣೆಯ ವಿರುದ್ಧ ಶಕ್ತಿಗಳನ್ನು ಒಟ್ಟುಗೂಡಿಸುವುದಕ್ಕಿಂತ ಕಾಶ್ಮೀರವನ್ನು ಕಸಿದುಕೊಳ್ಳುವುದರಲ್ಲೇ ಪಾಕಿಸ್ತಾನವು ಹೆಚ್ಚು ಆಸಕ್ತವಾಗಿದೆ ಎನಿಸುತ್ತದೆ.

ಯುದ್ಧವಿರೋಧಿ ಒಪ್ಪಂದ ಮಾಡಿಕೊಳ್ಳಲು ಪ್ರಧಾನಮಂತ್ರಿ ನೆಹರು ಅವರ ಸಲಹೆಯನ್ನು ತಳ್ಳಿಹಾಕಿದ ಅಧ್ಯಕ್ಷ ಆಯೂಬ್ ಖಾನರು ಕಮ್ಯೂನಿಸ್ಟ್ ಚೀನಾದೊಂದಿಗೆ ಅಂತಹ ಒಪ್ಪಂದ ಮಾಡಿಕೊಳ್ಳುವುದು ಸೂಕ್ತವೆಂದು ಭಾವಿಸಿದ್ದಾರೆ. ಅವರು ಪರಸ್ಪರ ರಕ್ಷಣಾ ಒಪ್ಪಂದವನ್ನು ಸಹಿ ಮಾಡುವ ಆಲೋಚನೆ ಮಾಡುತ್ತಿದ್ದಾರೆ ಮಾತ್ರವಲ್ಲದೆ, ಏಕಕಾಲಕ್ಕೆ ಭಾರತದ ಮೇಲೆ ಆಕ್ರಮಣ ನಡೆಸುವ ಸಂಚು ಹೂಡುತ್ತಿದ್ದಾರೆ. ಕೆಲವು ಜಿಗಿ–ಹಲಗೆ ಚಟುವಟಿಕೆಗಳಿಗಾಗಿ ಗಡಿಯುದ್ದಕ್ಕೂ ಕಮ್ಯೂನಿಸ್ಟ್ ಚೀನಾ ಮತ್ತು ಪಾಕಿಸ್ತಾನದ ಪಡೆಗಳನ್ನು ಸಾಂದ್ರವಾಗಿ ಜೋಡಿಸಲಾಗಿದೆ. ಭಾರತದಲ್ಲಿ ಪಾಕಿಸ್ತಾನೀ ಏಜೆಂಟರ ವಿಸ್ತೃತ ಮಟ್ಟದ ಗೂಢಚರ್ಯೆ ಬೆಳಕಿಗೆ ಬಂದಿದೆ; ಸಿಪಿಐನ ಅಸ್ತಿತ್ವದೊಂದಿಗೆ ಈ ವಿಷಯದಲ್ಲಿ ಚೀನಾದ ಕಾರ್ಯಸಾಧ್ಯತೆಯನ್ನು ಊಹಿಸಬಹುದಾಗಿದೆ. ಪಾಕಿಸ್ತಾನವು ಕಮ್ಯೂನಿಸ್ಟ್ ವಿರೋಧಿಯಲ್ಲ, ಆದರೆ ಭಾರತ ವಿರೋಧಿ ಎಂಬುದು ಸ್ಪಷ್ಟವಾಗಿದೆ.

ಅದು ಪಾಕಿಸ್ತಾನದ ಜನ್ಮಜಾತ ಲಕ್ಷಣವಿರಬಹುದು. ಆದರೆ ನಾವು ಪಾಕಿಸ್ತಾನದೊಂದಿಗೆ ವ್ಯವಹರಿಸುವಾಗ ಅದನ್ನು ಗಣನೆಗೆ ತೆಗೆದುಕೊಳ್ಳಬೇಕು. ಪಾಶ್ಚಿಮಾತ್ಯ ದೇಶಗಳು ಕಡೆಗಣಿಸಿರುವುದು ಈ ವಿಷಯವನ್ನೇ. ಭಾರತಕ್ಕೆ ತೊಂದರೆಯುಂಟು ಮಾಡಲು ಪಾಕಿಸ್ತಾನವು ಏನು ಬೇಕಾದರೂ ಮಾಡಲು ಸಿದ್ಧವಾಗಿದೆ. ಈ ಕಾರಣಕ್ಕಾಗಿಯೇ ಅದು ವಿಧ್ಯುಕ್ತ ವಾಗ್ದಾನಗಳನ್ನೂ ಅಂತರರಾಷ್ಟ್ರೀಯ ಒಪ್ಪಂದಗಳನ್ನೂ ಮುರಿಯಬಲ್ಲದು. ತನ್ನನ್ನೂ ಬೆನ್ನಲ್ಲಿ ಇರಿಯಲು ಸಾಧ್ಯ ಎಂಬುದನ್ನು ಅರ್ಥಮಾಡಿಕೊಳ್ಳದೆ, ಭಾರತದ ಮೇಲೆ ಸೇಡು ತೀರಿಸಿಕೊಳ್ಳಲೆಂದೇ ಮೋಸದ ಪ್ರಬಲ ರಾಷ್ಟ್ರವನ್ನು ಅಪ್ಪಿಕೊಳ್ಳಬಲ್ಲದು. ಇವೆಲ್ಲ ಕಮ್ಯೂನಿಸ್ಟ್ ರಾಜ್ಯವಿಸ್ತರಣಾ ನೀತಿಯ ಸವಾಲನ್ನು ಎದುರಿಸುವ ನಿರ್ಧಾರವನ್ನು, ಕೊನೆಯ ಪಕ್ಷ ಇಚ್ಛೆಯನ್ನಾದರೂ, ಸೂಚಿಸುತ್ತವೆಯೇ?

ಕಾಶ್ಮೀರದ ವಿಷಯ ಇತ್ಯರ್ಥವಾಗದಿರುವುದೇ ಪಾಕಿಸ್ತಾನದ ಈಗಿನ ಚೇಷ್ಟೆಗಳಿಗೆಲ್ಲ ಕಾರಣ ಎಂದು ಕೆಲವರು ಭಾವಿಸುತ್ತಾರೆ. ಈ ವಿಷಯದಲ್ಲಿ ಒಮ್ಮೆ ಅದಕ್ಕೆ ಸಮಾಧಾನವಾದರೆ ಅದರ ಧೋರಣೆ ಬದಲಾಗುತ್ತದೆ. ಭಾರತ ಮತ್ತು ಪಾಕಿಸ್ತಾನಗಳು ಆಗ ಕಮ್ಯೂನಿಸ್ಟ್ ಚೀನಾದ ವಿರುದ್ಧ ನಿಕಟ ಮಿತ್ರರಾಷ್ಟ್ರಗಳಾಗುತ್ತವೆ.ನಾವು ಇದನ್ನು ಒಪ್ಪುವುದಿಲ್ಲ. ಪಾಕ್ ನಾಯಕರ ಹೇಳಿಕೆಗಳು ನಮ್ಮ ವಾದಕ್ಕೆ ಪುಷ್ಟಿ ನೀಡುತ್ತವೆ. ತಮಗೆ ಇಡೀ ಕಾಶ್ಮೀರವೇ ದೊರೆತರೂ ಪಾಕಿಸ್ತಾನವು ಭಾರತದೊಂದಿಗೆ ಕೈಜೋಡಿಸುವುದಿಲ್ಲವೆಂದು ಪಾಕಿಸ್ತಾನದ ವಿದೇಶಾಂಗ ಸಚಿವರಾದ ಶ್ರೀ ಭುಟ್ಟೋ ಅವರು ಅಸಂದಿಗ್ಧವಾಗಿ ಹೇಳಿದ್ದರು. ಕಾರಣವೇನೇ ಇರಬಹುದು. ಪಾಕಿಸ್ತಾನವು ಜಗಳಗಂಟಿ ಚೀನಾದೊಂದಿಗೆ ಮುಖಾಮುಖಿಯಾಗುವ ಸ್ಥಿತಿಯಲ್ಲಿಲ್ಲ. ಕಳೆದ ಅಕ್ಟೋಬರ್–ನವೆಂಬರ್‌ನ ಭಾರತದ ಹೀನ ಸಾಧನೆಯು ಚೀನಾದ ಬಗೆಗಿನ ಆಗ್ನೇಯ ಏಷಿಯನ್ ರಾಷ್ಟ್ರಗಳ ಧೋರಣೆಯನ್ನು ಪ್ರಭಾವಿಸಿದೆ. ಅವರೆಲ್ಲ ಭೀತಿಗೊಂಡಿದ್ದಾರೆ. ಅಮೇರಿಕಾದ ಬೃಹತ್ ಪ್ರಮಾಣದ ಸೇನಾ ಸಹಾಯವಿದ್ದಾಗ್ಯೂ ಪಾಕಿಸ್ತಾನವೂ ಇದಕ್ಕೆ ಅಪವಾದವಲ್ಲ. ಕಾಶ್ಮೀರವನ್ನು “ಬೆಳ್ಳಿಯ ಪರಾತ”ದಲ್ಲಿರಿಸಿ ಒಪ್ಪಿಸಿದರೂ ಪಾಕಿಸ್ತಾನಕ್ಕೆ ಚೀನಾದ ಬಗೆಗಿರುವ ಧೋರಣೆ ಬದಲಾಗುವುದಿಲ್ಲ. ಕಳೆದ ಶರತ್ಕಾಲದ ಘಟನೆಗಳನ್ನು ತೊಡೆದುಹಾಕುವುದರಿಂದ ಮಾತ್ರ ಅದು ಬದಲಾಗುತ್ತದೆ. ವಸ್ತುಸ್ಥಿತಿಯೇನೆಂದರೆ, ಕೇವಲ ಭಾರತ ಮಾತ್ರ, ಪ್ರಜಾಪ್ರಭುತ್ವಗಳ ಸಮರ್ಪಕ ಸಹಾಯದೊಂದಿಗೆ, ಕಮ್ಯೂನಿಸ್ಟ್ ಚೀನಾವನ್ನು ಅದರ ಉಚಿತ ಹದ್ದುಬಸ್ತಿನಲ್ಲಿಡಬಹುದು. ಇತರ ದೇಶಗಳು, ಅಪೇಕ್ಷಿಸಿದರೂ ಕೂಡಾ, ಆಕ್ಟೋಪಸ್ಸನ್ನು (ಅಷ್ಟಪದಿಯನ್ನು) ಅಂಕೆಯಲ್ಲಿರಿಸಲು ಬೇಕಾದ ಪ್ರಾಬಲ್ಯವನ್ನು ಒಟ್ಟುಗೂಡಿಸಲು ಪ್ರಾಕೃತಿಕವಾಗಿ ಅಸಾಧ್ಯ. ಈ ಕಾರಣದಿಂದಾಗಿಯೇ ಕಮ್ಯೂನಿಸ್ಟ್ ಚೀನಾದ ವಿರುದ್ಧ ಸಂಕಲಿತ ಪ್ರಾಬಲ್ಯದ ಕೋಟೆಗಳೆನಿಸಿರುವವೂ

ಕೂಡ ಶೋಚನೀಯವಾಗಿ ಭಗ್ನವಾಗಿವೆ. ಪಾಕಿಸ್ತಾನದ ಈಗಿನ ಧೋರಣೆಯು ಭಾರತದ ಬಗ್ಗೆ ದ್ವೇಷ ಹಾಗೂ ಪ್ರಬಲ ದಬಾವಣೆಗಾರನಿಗೆ ಶರಣಾಗತಿಗಳ ಜೋಡಿ ಭ್ರಾಂತಿಗಳ ಫಲಶ್ರುತಿಯಾಗಿದೆ. ಭಾರತದ ವಿರುದ್ಧದ ದುಷ್ಕೃತ್ಯಗಳಿಗೆ ಚೀನಾಗೆ ತಕ್ಕ ಶಾಸ್ತಿ ಮಾಡುವ ತನಕ, ಯಾವುದೇ ಪೂಸಿ ಹೊಡೆಯುವುದಾಗಲೀ ಬಲಾತ್ಕಾರವಾಗಲೀ ಪಾಕಿಸ್ತಾನವನ್ನು ಅಷ್ಟೇಕೆ, ಆಗ್ನೇಯ ಏಷಿಯಾದ ಯಾವುದೇ ದೇಶವನ್ನಾಗಲೀ, ತಪ್ಪೊಪ್ಪಿಗೆ ಒಪ್ಪದ ಹಾಗೂ ದುರಹಂಕಾರದ ಚೀನಾದ ವಿರುದ್ಧ ಜಂಟೀ ರಕ್ಷಣೆಯ ಕಾರ್ಯಯೋಜನೆಗೆ ಪ್ರೇರೇಪಿಸುವುದಿಲ್ಲ.

ಜೊತೆಗೆ ಪಾಕಿಸ್ತಾನವನ್ನು ನಮ್ಮ ಕಡೆಗೆ ಸೆಳೆದುಕೊಳ್ಳಬೇಕೆಂಬ ನಮ್ಮ ಆತಂಕದಲ್ಲಿ, ಕಮ್ಯೂನಿಸ್ಟ್ ಆಕ್ರಮಣಕಾರರನ್ನು ತಡೆಗಟ್ಟುವ ಭಾರತದ ನಿರ್ಧಾರವನ್ನು ಅಥವಾ ಸಾಮರ್ಥ್ಯವನ್ನು ದುರ್ಬಲಗೊಳಿಸುವ ಯಾವ ತಂತ್ರವನ್ನೂ ನಾವು ರೂಪಿಸುವಂತಿಲ್ಲ. ಈಗಿರುವ ಪರಿಸ್ಥಿತಿಯಲ್ಲಿ ಕೆಲವು ವಿದೇಶಿ ಗೆಳೆಯರಿಂದ ಸೂಚಿಸಲ್ಪಟ್ಟ ಮತ್ತು ಆಶ್ಚರ್ಯವೆನಿಸುವಂತೆ ಶ್ರೀ ರಾಜಗೋಪಾಲಾಚಾರಿ ಅವರಿಂದ ಬೆಂಬಲಿಸಲ್ಪಟ್ಟ ವಿವಿಧ ಪರಿಹಾರಗಳು ಜನತೆಯ ಆತ್ಮಸ್ಥೈರ್ಯವನ್ನು ದುರ್ಬಲಗೊಳಿಸುವ ಹೆಜ್ಜೆಗಳಾಗಿವೆ. ಕಳೆದ ಇಂಡೋ–ಪಾಕ್ ಮಾತುಕಥೆಗಳ ಸಂದರ್ಭದಲ್ಲಿ ಭಾರತವು ಕೆಲವು ಹೊಂದಾಣಿಕೆಗಳೊಂದಿಗಾದರೂ ಸರಿಯೇ, ಕದನ–ವಿರಾಮ ರೇಖೆಯ ಗುಂಟ ಇತ್ಯರ್ಥ ಮಾಡಿಕೊಳ್ಳುವುದನ್ನು ಸೂಚಿಸಿತು. ಆದರೆ ಇದು ಪಾಕಿಸ್ತಾನಕ್ಕೆ ಸಮಾಧಾನ ನೀಡಲಿಲ್ಲ. ಇದು, ರಾಷ್ಟ್ರೀಯತಾವಾದಿ ಭಾರತವು ಸುಲಭವಾಗಿ ಸಮ್ಮತಿಸುವ ರಿಯಾಯಿತಿ ಆಗಿರಲಿಲ್ಲ. ಏಕೆಂದರೆ ಇದರಿಂದ ಆಕ್ರಮಣಕ್ಕೆ ಪಾರಿತೋಷಕ ಕೊಟ್ಟಂತೆ ಆಗುತ್ತಿತ್ತು. ಇದು ಜನತೆಯನ್ನು ಸ್ಥೈರ್ಯಗೆಡಿಸುತ್ತಿತ್ತು ಅದೂ ಅಲ್ಲದೆ, ಭಾರತದ ಕಮ್ಯೂನಿಸ್ಟರು ಕಮ್ಯೂನಿಸ್ಟ್ ಚೀನಾದೊಂದಿಗೂ ಅದೇ ರೀತಿಯ ಇತ್ಯರ್ಥಕ್ಕಾಗಿ ದನಿಯೆತ್ತುತ್ತಿದ್ದರು. ಇವೆಲ್ಲ ಭಾರತದ ಘನತೆಗೆ ಹಾಗೂ ತನ್ನ ನಾಡಿನ ಭೂಸ್ವತ್ತುಗಳ ಸಮಗ್ರತೆಯನ್ನು ಕಾಯ್ದುಕೊಳ್ಳುವ ಭಾರತದ ನಿರ್ಧಾರಕ್ಕೆ ಹೊಂದಿಕೊಳ್ಳಲಾರವು.

ಕಮ್ಯೂನಿಸ್ಟ್ ಚೀನಾದ ದುಷ್ಟ ಯೋಜನೆಗಳನ್ನು ಹತೋಟಿಯಲ್ಲಿಡಲು ಆಸಕ್ತಿಯಿರುವವರೆಲ್ಲ ಬುದ್ಧಿವಿಕಲ್ಪವಾಗಿರವ ಪಾಕಿಸ್ತಾನಕ್ಕೆ ಅತಿಯಾದ ಪ್ರಾಮುಖ್ಯತೆ ನೀಡಲು ನಿರಾಕರಿಸಲಿ ಹಾಗೂ ಅದರ ಬದಲಿಗೆ, ಭಾರತವು ಕಮ್ಯೂನಿಸ್ಟ್ ಚೀನಾಕ್ಕೆ ಛೀಮಾರಿ ಹಾಕಿ ಅಧಿಕಾರ ದಾಹದ ಚೀನಾದಿಂದಾಗಿ ಏರುಪೇರಾದ ಸಮತೋಲನವನ್ನು ಸರಿಪಡಿಸುವಂತೆ ಭಾರತವನ್ನು ನೈತಿಕವಾಗಿ, ಸೈನ್ಯಯೋಗ್ಯ ರೀತಿಯಲ್ಲಿ ಹಾಗೂ ಆರ್ಥಿಕವಾಗಿ ಬಲಗೊಳಿಸುವುದಕ್ಕೆ ಗಮನ ನೀಡಲಿ. ಅದು ಪಾಕಿಸ್ತಾನೀ ನಾಯಕರ ಮಾನಸಿಕ ಅಸಮತೋಲನವನ್ನು ಸರಿಪಡಿಸುತ್ತದೆ. ಪಾಶ್ಚಿಮಾತ್ಯ ದೇಶಗಳು ಪಾಕಿಸ್ತಾನವನ್ನು ಹಿಂದಕ್ಕೆ ಗೆದ್ದುಕೊಳ್ಳಲು ಮತ್ತು ಬಾಕಿ ಉಳಿದಿರುವ

ಇಂಡೋ–ಪಾಕ್ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ಎರಡೂ ರಾಷ್ಟ್ರಗಳ ಶಾಂತಿಯುತ ಬೆಳೆವಣಿಗೆಗೆ ಭಾರತದೊಂದಿಗೆ ಸೌಹಾರ್ದ ಮತ್ತು ಸಾಮರಸ್ಯಗಳ ಅವಶ್ಯಕತೆಯನ್ನು ಪಾಕಿಸ್ತಾನದ ನಾಯಕರು ಅರ್ಥಮಾಡಿಕೊಳ್ಳುವಂತೆ ಮಾಡಲು ಅದೊಂದೇ ಮಾರ್ಗ.

**ಮೂಲ: ಪೊಲಿಟಿಕಲ್ ಡೈರಿ ಅಂಕಣ, ಆರ್ಗನೈಸರ್, ೧೬ ಸೆಪ್ಟೆಂಬರ್ ೧೯೬೩**

## ರಾಷ್ಟ್ರೀಯ ಪ್ರಜಾಪ್ರಭುತ್ವವಾದಿಗಳು, ಪ್ರಜಾಪ್ರಭುತ್ವವಾದಿ ಸಮಾಜವಾದಿಗಳು ಮತ್ತು ರಾಷ್ಟ್ರೀಯ ಸಮಾಜವಾದಿಗಳು

ಆಧುನಿಕ ಜಗತ್ತಿನ ರಾಜಕೀಯ ಬೆಳವಣಿಗೆಯು ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದ ಎಂಬ ಮೂರು ಕಲ್ಪನೆಗಳಿಂದ ಪ್ರಭಾವಿತವಾಗಿದೆ ಹಾಗೂ ರೂಪಿಸಲ್ಪಟ್ಟಿದೆ. ಕಾಲಾನುಕ್ರಮದಲ್ಲಿ ರಾಷ್ಟ್ರೀಯತೆ ಮೊದಲನೆಯದು ಹಾಗೂ ಸಮಾಜವಾದ ಕೊನೆಯಲ್ಲಿ ಬಂದದ್ದು. ಈ ವಿಷಯದಲ್ಲಿ ಯುರೋಪನ್ನು ಪ್ರಾತಿನಿಧಿಕ ಲಕ್ಷಣವುಳ್ಳದ್ದೆಂದು ಪರಿಗಣಿಸಿದಾಗ ೧೩ನೇ ಶತಮಾನದಿಂದ ೧೯ನೇ ಶತಮಾನದವರೆಗೆ ಅದರ ಭೂ ನಕ್ಷೆಯು ರಾಷ್ಟ್ರೀಯ ಹಂಬಲಗಳಿಂದಾಗಿ (ಪ್ರೇರಣೆ, ಪ್ರಚೋದನೆ) ಮತ್ತೆ ಮತ್ತೆ ಬರೆಯಲ್ಪಟ್ಟಿತು ಎಂದು ಕಂಡುಬರುತ್ತದೆ. ರಾಷ್ಟ್ರೀಯತೆಯು ಜನರನ್ನು ಒಂದುಗೂಡಿಸಿತು ಹಾಗೂ ವಿಭಿನ್ನ ಒಗ್ಗೂಡಿದ ಜನ ಹಾಗೂ ವಿಭಿನ್ನ ಸಂಸ್ಥಾನಗಳು ತಮ್ಮ ತಮ್ಮ ಸ್ವಾಯತ್ತತೆಗಳನ್ನು ಒಂದು ರಾಷ್ಟ್ರೀಯ ಸರ್ಕಾರಕ್ಕಾಗಿ ಬಿಟ್ಟುಕೊಡಲು ಒತ್ತಾಯಿಸಿತು. ಅದು ಒಂದು ಗುಂಪಿನ ಜನರನ್ನು ಮತ್ತೊಂದು ಗುಂಪಿನಿಂದ ಪ್ರತ್ಯೇಕಿಸಿತು ಹಾಗೂ ಕ್ರಮೇಣ ಒಬ್ಬ ವ್ಯಕ್ತಿಯ ಲಹರಿ ಇಲ್ಲವೇ ಬಯಕೆಗಿಂತಲೂ ರಾಷ್ಟ್ರೀಯ ಹಿತಾಸಕ್ತಿಗಳು ಯುದ್ಧ ಮತ್ತು ಶಾಂತಿಗಳಿಗೆ ಕಾರಣವಾದವು. ರಾಷ್ಟ್ರಗಳು ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಗಳಿಸಿಕೊಂಡಂತೆ, ಸರ್ಕಾರದ ಸ್ವರೂಪವೂ ಕೂಡಾ ಆಸಕ್ತಿ ಮತ್ತು ವಿವಾದಗಳ ಒಂದು ವಿಷಯವಾಯಿತು. ಸರ್ಕಾರದ ಸ್ವರೂಪದ ಬಗ್ಗೆ ಎಲ್ಲ ವಿವಾದಗಳನ್ನೂ ಕ್ಷಿಪ್ರವಾಗಿ ತಿರಸ್ಕರಿಸಲು ಪ್ರಯತ್ನಿಸಿದಾಗ, ಆ ವಿಷಯದಲ್ಲಿ ಅವನಿಗೆ ಸುಪ್ತವಾಗಿದ್ದ ಆಸಕ್ತಿಯನ್ನೇ ಅವನು ಪ್ರದರ್ಶಿಸಿದ. ಅವನು ಹೀಗೆ ಬರೆದ:

ಸರ್ಕಾರದ ಸ್ವರೂಪಗಳ ಬಗ್ಗೆ
ಮುಠ್ಠಾಳರು ವಾದಿಸಲಿ
ಅತ್ಯುತ್ತಮವಾಗಿ ನಡೆಸಿದುದೇ
ಅತ್ಯುತ್ತಮ

**ಪೋಪ್ ಪ್ರಶ್ನೆಗೆ ಉತ್ತರಿಸಲಿಲ್ಲ**

ಆದರೆ ಪೋಪ್ ಕ್ಲಿಷ್ಟವಾದ ಪ್ರಶ್ನೆಗೆ ಉತ್ತರಿಸಲಿಲ್ಲ; ಯಾವ ಸ್ವರೂಪದ

ಸರ್ಕಾರದಲ್ಲಿ ಅತ್ಯುತ್ತಮ ಆಡಳಿತ ಸಿಗುತ್ತದೆ, ಅಥವಾ ಸಿಗುತ್ತದೆಂದು ನಾವು ಭರವಸೆ ಇಡಬಹುದು? ಆಗ ಪ್ರಚಲಿತವಾಗಿದ್ದದ್ದು ರಾಜಪ್ರಭುತ್ವ ಸರ್ಕಾರದ ಎಲ್ಲ ಲೋಪಗಳಿಗೂ ಅದೇ ಕಾರಣವಾಗಿತ್ತು ಅಥವಾ ಹಾಗೆ ಕಾಣಿಸುವಂತೆ ಸುಲಭವಾಗಿ ಮಾಡಬಹುದಾಗಿತ್ತು. ಹೆಚ್ಚು ಹೆಚ್ಚು ರಾಜಕೀಯ ಚಿಂತಕರು ರಾಜರ ದೈವದತ್ತ ಅಧಿಕಾರದ ತತ್ತ್ವವನ್ನು ಪ್ರಶ್ನಿಸತೊಡಗಿದರು. ಎಲ್ಲರೂ ಸಮಾನರೆಂದು ಪರಿಗಣಿಸುವುದು ಪ್ರಚಲಿತವಾಯಿತು. ಇವೆಲ್ಲವೂ ಪ್ರಜಾಪ್ರಭುತ್ವದ ವಿಚಾರಗಳನ್ನು ಹುಟ್ಟುಹಾಕಿದವು. ಗ್ರೀಸಿನ ನಗರ–ಗಣರಾಜ್ಯಗಳ ಬಗ್ಗೆ ಆಸಕ್ತಿ ಮರುಜೀವ ತಳೆಯಿತು. ಫ್ರೆಂಚ್ ಕ್ರಾಂತಿಯ ವೇಳೆಗೆ ಗಣರಾಜ್ಯವು ವ್ಯವಹಾರ ಸ್ವರೂಪ ಪಡೆದುಕೊಂಡು ಯೂರೋಪಿನ ಅನೇಕ ದೇಶಗಳಲ್ಲಿ ಬೇರು ಬಿಡಲು ಒಂದು ಶತಮಾನಕ್ಕಿಂತ ಹೆಚ್ಚು ಕಾಲ ಬೇಕಾಯಿತು.

ನಿಜವಾದ ಅಧಿಕಾರವು ಕೆಲವರ ಕೈಯಲ್ಲೇ ಇರುವುದು ಕೈಗಾರಿಕಾ ಕ್ರಾಂತಿಯ ಬೆಳವಣಿಗೆಯೊಂದಿಗೆ ಸ್ಪಷ್ಟವಾಯಿತು. ಕೇವಲ ಆರ್ಥಿಕ ಕ್ಷೇತ್ರದಲ್ಲಿ ಮಾತ್ರವಲ್ಲದೆ ರಾಜಕೀಯ ರಂಗದಲ್ಲೂ ಶೋಷಣೆ ನಡೆಯುತ್ತಿತ್ತು. ಸಾಮಾನ್ಯ ವ್ಯಕ್ತಿಗೆ ಮತದಾನದ ಹಕ್ಕನ್ನು ನಿರಾಕರಿಸಲಾಗಿತ್ತು. ಇಲ್ಲವೇ ಮುಕ್ತವಾಗಿ ಮತದಾನದ ಹಕ್ಕನ್ನು ಚಲಾಯಿಸುವಂತಹ ವಾತಾವರಣ ಇರಲಿಲ್ಲ. ಸಾಮಾಜಿಕ ನ್ಯಾಯಕ್ಕಾಗಿ ಮೂಡಿದ ಕಟ್ಟಾಸೆಯು ಸೋಶಿಯಲಿಸಂ ಎಂದು ಕರೆಯಲ್ಪಟ್ಟ ಒಂದು ರಾಜಕೀಯ ತತ್ತ್ವವನ್ನು ಹುಟ್ಟುಹಾಕಿತು. ಮಾರ್ಕ್ಸ್ ಅದನ್ನು ಒಂದು ಪದ್ಧತಿಯಾಗಿ ರೂಪಿಸುವವರೆಗೆ ಸಮಾಜವಾದ ಎನ್ನುವುದು ಅನೇಕ ಸಾಮಾಜಿಕ ಕಾರ್ಯಕರ್ತರ, ಕಾರ್ಮಿಕ ಸಂಘಗಳು ಮತ್ತು ರಾಜಕೀಯ ತತ್ತ್ವಶಾಸ್ತ್ರಜ್ಞರ (ಚಿಂತಕರ) ರಾಮರಾಜ್ಯದ (ಆದರ್ಶ ರಾಜ್ಯದ) ಆದರ್ಶಗಳನ್ನು ಪ್ರತಿನಿಧಿಸುವ ಒಂದು ಅಸ್ಪಷ್ಟವಾದ ಆಕಾಂಕ್ಷೆಯಾಗಿತ್ತು. ಈ ತತ್ತ್ವವನ್ನು ಮಾರ್ಕ್ಸ್ ಪ್ರತಿಪಾದಿಸಿದ್ದರಲ್ಲಿ ಈ ಅಂಶಗಳು ಇರಲಿಲ್ಲವೆಂದಾಗಲೀ ಅಥವಾ ಸಮಾಜವಾದ ಹೆಚ್ಚು ವ್ಯವಹಾರವಾಯಿತೆಂದಾಗಲೀ ಅಲ್ಲ. ಆದರೆ ಸಮಾಜವಾದೀ ಚಿಂತನೆಯು ಅದನ್ನು ಒಂದು ಖಚಿತ ರಾಜಕೀಯ ತತ್ತ್ವದ ಮಟ್ಟಕ್ಕೆ ಏರುವಂತೆ ಅವನು ಅದಕ್ಕೆ ಒಂದು ವಿಶ್ಲೇಷಣೆಯನ್ನು, ಒಂದು ಮೀಮಾಂಸೆಯನ್ನೂ ನೀಡಿದ. ಮಾರ್ಕ್ಸ್‌ನ ನಂತರವೂ ಅವನಿಂದ ಭಿನ್ನವಾದ ಸಮಾಜವಾದಿಗಳು ಬಂದಿದ್ದಾರೆ. ಆದರೆ ಅವರ ಪ್ರಧಾನ ಪ್ರಮೇಯಗಳಲ್ಲೂ ಮತ್ತು ಅಂತಿಮ ಗುರಿಗಳಲ್ಲೂ ಯಾವುದೇ ವಿಶಿಷ್ಟ..ಛಾಪು ಮೂಡಿಸಲು ಸಾಧ್ಯವಾಗಿಲ್ಲ. ಮಾರ್ಕ್ಸ್‌ನ ವಿಧಾನಶಾಸ್ತ್ರವು ಅನೇಕರಿಗೆ ಸಮಾಜವಾದ ಎನ್ನುವುದು ಒಂದು ಅನಿಷ್ಟ ಎನಿಸುವಂತೆ ಮಾಡಿದೆ ಹಾಗೂ ಅದನ್ನು ರಾಷ್ಟ್ರೀಯತಾವಾದ ಮತ್ತು ಪ್ರಜಾಪ್ರಭುತ್ವಗಳೊಂದಿಗೆ ಹೊಂದಿಕೊಳ್ಳಲಾರದಂತೆ ಮಾಡಿದೆ.

**ರಾಷ್ಟ್ರೀಯತಾವಾದ ಒಂದು ವಾಸ್ತವ**

ಈಗಲೂ ರಾಷ್ಟ್ರೀಯತಾವಾದವು ವಿಶ್ವದ ಸರ್ಕಾರಗಳ ಧೋರಣೆಗಳನ್ನು ಪ್ರಭಾವಿಸುವ ಏಕೈಕ ಪ್ರಭಾವಶಾಲೀ ಅಂಶವಾಗಿದೆ. ಆದರೆ ಅದರ ಪ್ರಾಬಲ್ಯವನ್ನು ವ್ಯಕ್ತವಾಗಿ ಗುರ್ತಿಸುವವರು ಕೆಲವೇ ಕೆಲವರು. ಕೆಲವರಂತೂ ಅದನ್ನು ಮನುಕುಲಕ್ಕೆ ಒಂದು ಶಾಪವೆಂದು ಪರಿಗಣಿಸಿ ರಾಷ್ಟ್ರೀಯತೆಯನ್ನು ಅಂತ್ಯಗೊಳಿಸಬೇಕೆಂದು ಬಯಸುತ್ತಾರೆ. ಇವರೂ ಕೂಡಾ ಈ ಪ್ರಾಥಮಿಕ ಪ್ರವೃತ್ತಿಯಿಂದ ತಮ್ಮನ್ನು ತಾವು ಮುಕ್ತಗೊಳಿಸಿಕೊಳ್ಳುವುದರಲ್ಲಿ ಸಫಲರಾಗಿಲ್ಲ; ಅವರು ಕೇವಲ ಕೆಲವು ಭ್ರಾಂತಿಗಳನ್ನು ಸೃಷ್ಟಿಸಿಕೊಂಡು ತಮ್ಮ ರಾಷ್ಟ್ರೀಯ ಸಮಾಜವಾದಿಗಳು ಹಾಗೂ ಪ್ರಜಾಪ್ರಭುತ್ವವಾದೀ ಸಮಾಜವಾದಿಗಳು ರೂಪು ತಳೆದಿದ್ದಾರೆ. ಒಂದೊಂದಾಗಿ ಪರಿಗಣಿಸಿದರೆ ರಾಷ್ಟ್ರೀಯತಾವಾದಿಗಳು, ಸಮಾಜವಾದಿಗಳು ಹಾಗೂ ಪ್ರಜಾಪ್ರಭುತ್ವವಾದಿಗಳು ಇರಬಹುದು.

ಮುಕ್ತ ಜಗತ್ತಿನ ಬಹುಪಾಲು ದೇಶಗಳನ್ನು ಮೊದಲ ವರ್ಗದಲ್ಲಿ ಸೇರಿಸಬಹುದು. ಎಂದರೆ ರಾಷ್ಟ್ರೀಯತಾವಾದಿ ಪ್ರಜಾಪ್ರಭುತ್ವವಾದಿಗಳು. ಅವರು ರಾಷ್ಟ್ರೀಯತೆಯನ್ನು ಸಿದ್ಧವಾದದ್ದೆಂದು ಭಾವಿಸಿ ಪ್ರಜಾಪ್ರಭುತ್ವವನ್ನು ಆದರ್ಶವೆಂದು ತಮ್ಮ ದೃಷ್ಟಿಯಲ್ಲಿರಿಸಿಕೊಳ್ಳುತ್ತಾರೆ. ಇವರಿಗೆ ಸಮಾಜವಾದದ ಹೆಚ್ಚಿನ ಮೋಹವಿಲ್ಲ ಮತ್ತು ಕೆಲವರಂತೂ ಅದನ್ನು ಪ್ರಜಾಪ್ರಭುತ್ವಕ್ಕೆ ಹಾನಿಕಾರಕವೆಂದು ಪರಿಗಣಿಸುತ್ತಾರೆ. ನಾಜಿತತ್ತ್ವ ಮತ್ತು ಫ್ಯಾಸಿಸಂ (ಉಗ್ರ ಬಲಪಂಥ) ಇವೆರಡೂ ರಾಷ್ಟ್ರೀಯತಾ ಸಮಾಜವಾದದ ರೂಪಗಳಾಗಿದ್ದವು. ಕಮ್ಯೂನಿಸ್ಟ್ ದೇಶಗಳಾದ ಯು ಎಸ್ ಎಸ್ ಆರ್, ಚೀನ, ಯುಗೋಸ್ಲಾವಿಯಾ ಮುಂತಾದವುಗಳನ್ನು ಕೂಡಾ ರಾಷ್ಟ್ರೀಯತಾವಾದಿ ಸಮಾಜವಾದಿ ಎಂದು ಕರೆಯಬಹುದು. ಕಂಡುಬರುವ ಒಂದೇ ವ್ಯತ್ಯಾಸವೆಂದರೆ ಇವು ರಾಷ್ಟ್ರೀಯತೆಯನ್ನು ದೈವತ್ವಕ್ಕೇರಿಸುವುದಿಲ್ಲ. ಆದರೆ ರಾಷ್ಟ್ರೀಯತೆಯ ಪ್ರಭಾವ ಸುಲಭವಾಗಿ ಗುರ್ತಿಸುವಂತಿರುತ್ತದೆ. ರಾಷ್ಟ್ರೀಯತೆಯ ಮೇಲೆ ಅತಿಯಾದ ಒತ್ತು ಹಾಕಿ ಹಿಟ್ಲರನು ತನ್ನವರನ್ನು ಖಂಡಿತವಾಗಿಯೂ ಪ್ರಚೋದಿಸಿದ. ಆದರೆ ಇತರರ ವಿರೋಧ ಕಟ್ಟಿಕೊಂಡ. ಕಮ್ಯೂನಿಸ್ಟ್ ದೇಶಗಳು ಇನ್ನೂ ಸೂಕ್ಷ್ಮವಾಗಿ ವರ್ತಿಸುತ್ತಿವೆ. ಒಂದು ಜಾಗತಿಕ ಚಳುವಳಿ ಎಂದು ತಮ್ಮನ್ನು ಕರೆದುಕೊಂಡು ಇತರ ಜನರ ನಿಷ್ಠೆಯನ್ನು ಅವರು ಸುಲಭವಾಗಿ ಹಾಳುಮಾಡಿ ತಮ್ಮದೇ ರಾಷ್ಟ್ರೀಯ ವಿಸ್ತರಣಾ ಉದ್ದೇಶಗಳನ್ನು ಸಾಧಿಸಿಕೊಳ್ಳುತ್ತಾರೆ.

**ಸಮಾಜವಾದವು ಒಂದು ಶಕ್ತಿ**

ಭಾರತೀಯ ಜನಸಂಘವು ರಾಷ್ಟ್ರೀಯತೆ ಮತ್ತು ಪ್ರಜಾಪ್ರಭುತ್ವಗಳ ಮೇಲೆ ಸಮಾನ ಭರವಸೆ ಹೊಂದಿದೆ ಹಾಗೂ ರಾಷ್ಟ್ರದ ಬೆಳವಣಿಗೆಯ ಇಂದಿನ ಹಂತದಲ್ಲಿ

ಸಮಾಜವಾದ ನಿರ್ವಹಿಸಬೇಕಾದ ಪಾತ್ರವೂ ಇದೆ ಎಂದು ಗುರ್ತಿಸುತ್ತದೆ.

ಪಾಶ್ಚಾತ್ಯ ವಸಾಹತು ಶಕ್ತಿಗಳಿಂದ ತಮ್ಮ ಸ್ವಾತಂತ್ರ್ಯವನ್ನು ಪಡೆದಿರುವ ಏಶಿಯಾ ಮತ್ತು ಆಫ್ರಿಕಾದ ದೇಶಗಳಲ್ಲಿ ಪ್ರಚಲಿತವಾಗಿರುವ ರಾಜಕೀಯ ತತ್ತ್ವವೆಂದರೆ ಪ್ರಜಾಪ್ರಭುತ್ವವಾದಿ ಸಮಾಜವಾದ. ತಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಂಪರ್ಕದಿಂದಾಗಿ ಅವರಿಗೆ ಪ್ರಜಾಪ್ರಭುತ್ವದಲ್ಲಿ ಸ್ವಲ್ಪ ಶ್ರದ್ಧೆಯಿದೆ. ಆದರೂ ಸಮಾಜವಾದದ ಸೊಗಸುಗಾರಿಕೆಯ ಘೋಷಣೆಗಳ ಆಡಂಬರದ ಪ್ರಭಾವದಿಂದ ಅವರು ತಪ್ಪಿಸಿಕೊಳ್ಳಲಾರರು. ಅದೂ ಅಲ್ಲದೆ ಸಮಾಜವಾದವು ಬಹು ಜನರನ್ನು ಆಳಿ ಮೋಸಗೊಳಿಸುವ ವಿವಿಕ್ತ ಕೂಟಗಳ ಅಧಿಕಾರದಾಹವನ್ನೂ ತಣಿಸುತ್ತದೆ. ಬಡತನ ಮತ್ತು ಮೌಢ್ಯಗಳು ತಾಂಡವವಾಡುವ ಸಮಾಜದಲ್ಲಿ ಸಮಾಜವಾದವು ಆಕರ್ಷಕ. ಆದರೆ ಅದೊಂದು ಪರಿಹಾರವಲ್ಲ. ಜಗತ್ತಿನ ಮುಕ್ತ ಹಾಗೂ ಸುಧಾರಿತ ದೇಶಗಳು ರಾಷ್ಟ್ರೀಯತಾವಾದಿ ಪ್ರಜಾಪ್ರಭುತ್ವವಾದಿಗಳಾಗಿದ್ದಾರೆ; ಶಿಸ್ತಿಗೊಳಪಟ್ಟ ಮುಂದುವರೆದ ಇಲ್ಲವೆ ಹಿಂದುಳಿದ–ದೇಶಗಳು ರಾಷ್ಟ್ರೀಯತಾ ಸಮಾಜವಾದಿಗಳೋ ಕಮ್ಯೂನಿಸ್ಟರೋ ಆಗಿದ್ದಾರೆ. ಮತ್ತು ಮುಕ್ತ ಆದರೆ ಹಿಂದುಳಿದ ದೇಶಗಳು ಪ್ರಜಾಪ್ರಭುತ್ವವಾದಿ ಸಮಾಜವಾದಿಗಳಾಗಿದ್ದಾರೆ. ಇವು ಸ್ಥೂಲವಾದ ವರ್ಗಗಳು. ಆದರೆ ಈ ಮೂರರಲ್ಲಿ ಯಾವುದರಲ್ಲೇ ಆಗಲೀ ಸುಲಭವಾಗಿ ಸೇರಿಸಲಾಗುವ ಅಪವಾದಗಳಿವೆ. ಉದಾಹರಣೆಗೆ ಪಾಕಿಸ್ತಾನವು ರಾಷ್ಟ್ರೀಯತಾ ಪ್ರಜಾಪ್ರಭುತ್ವವೂ ಅಲ್ಲ, ರಾಷ್ಟ್ರೀಯತಾ ಸಮಾಜವಾದಿಯೂ ಅಲ್ಲ.

### ಪ್ರಜಾಪ್ರಭುತ್ವ ಎಂಬುದು ಒಂದು ಗುರಿ

ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿರುವಾಗ ಭಾರತವನ್ನು ಒಂದು ಪ್ರಜಾಪ್ರಭುತ್ವವಾದಿ ಸಮಾಜವಾದೀ ದೇಶವೆಂದು ಕರೆಯಬಹುದು. ಈಗ, ದೇಶದ ಆರ್ಥಿಕಸ್ಥಿತಿಯು ಅಪಕ್ವವಾಗಿರುವಾಗ, ನಮ್ಮ ಸ್ವಾತಂತ್ರ್ಯದ ಪ್ರಾರಂಭದ ಹಂತದಲ್ಲಿರುವಾಗ, ಬ್ರಿಟಿಷ್ ಸಂಸದೀಯ ಸಂಸ್ಥೆಗಳ ಪರಂಪರೆಯಿಂದ ಬಂದ ಸ್ವತ್ತಿನಿಂದಾಗಿ ನಮಗೆ ಸಮಾಜವಾದಿಯಾಗಿರಲು ಹಾಗೂ ಪ್ರಜಾಸಕ್ತಿಯ ಸಮಾಜವಾದಿಯಾಗಿರಲು ಸಾಮರ್ಥ್ಯವಿದೆ. ಅದಕ್ಕಾಗಿ ಇಂದು ದೇಶದ ಆರ್ಥಿಕ ಬೆಳವಣಿಗೆಯ ಕ್ಷೇತ್ರದಲ್ಲಿ ಕೆಲವು ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕು ಅಷ್ಟೆ. ಒಂದು ಹಿಂದುಳಿದ ದೇಶದ ಸೀಮಿತ ಸಾಮರ್ಥ್ಯಗಳಿಂದಾಗಿ ಖಾಸಗಿ ಬಂಡವಾಳದ ಪ್ರವೇಶ ಅಸಾಧ್ಯವಾಗಿರುವ ಕೆಲವು ಕ್ಷೇತ್ರಗಳಿವೆ. ಸರ್ಕಾರವೇ ಪ್ರವೇಶಿಸಬೇಕಾಗುತ್ತದೆ. ಅಲ್ಲದೆ ಒಂದು ಅಭಿವೃದ್ಧಿಶೀಲ ದೇಶಕ್ಕೆ ಅನಿವಾರ್ಯವಾದ ಕೆಲವು ನಿಯಂತ್ರಕ ಕಾರ್ಯಭಾರಗಳೂ ಇರುತ್ತವೆ. ನಂತರದಲ್ಲಿ ಅಸಮಾನತೆಗಳನ್ನು ನಿರ್ಮೂಲನ ಮಾಡುವ ಪ್ರಶ್ನೆಯೂ ಇದೆ. ಈ ವಿಷಯಗಳಲ್ಲಿ ಭಾರತವು

ಸಮಾಜವಾದಿಯಾಗಿರಲೇಬೇಕು. ಆದರೆ ಕೆಲವು ಹಾನಿಕರ ಪರಿಣಾಮಗಳೂ ಇವೆ. ಮೊದಲಿಗೆ, ಸಮಾಜವಾದದಿಂದಾಗಿ ಸರ್ಕಾರವು ಖಂಡಿತವಾಗಿಯೂ ಉದ್ಯಮದ ಒಂದು ದೊಡ್ಡ ಕ್ಷೇತ್ರವನ್ನು ಆಕ್ರಮಿಸಿಕೊಳ್ಳುತ್ತದೆ ಮತ್ತು ಅದರಿಂದಾಗಿ, ದೇಶದ ಒಳಿತಿಗಾಗಿ ವಾಣಿಜ್ಯೋದ್ಯಮಿ ನಿರ್ವಹಿಸಬಹುದಾದ ಚಟುವಟಿಕೆಗಳಿಂದಲೂ ಅವನನ್ನು ದೂರ ಇಡುತ್ತದೆ. ದೇಶದ ಚಟುವಟಿಕೆಗಳು ಏಕಸ್ವಾಮ್ಯವನ್ನು ಸಮರ್ಥಿಸುವಂತಾಗುತ್ತದೆ. ಇಲ್ಲಿ ಮತ್ತೆ ಹುಚ್ಚು ಅಭಿಮಾನದ ಕೆಲವರ ಸಮಾಜವಾದಿ ಬಯಕೆಗಳನ್ನು ತೃಪ್ತಿಪಡಿಸಲು, ಇತರ ಕೈಗಾರಿಕಾ ಚಟುವಟಿಕೆಗಳನ್ನು ಕೈಗೊಳ್ಳಲು ಅಥವಾ ಈಗಾಗಲೇ ಖಾಸಗಿ ವಾಣಿಜ್ಯೋದ್ಯಮಿಗಳಿಂದ ಅಭಿವೃದ್ಧಿಗೊಂಡದ್ದನ್ನು ರಾಷ್ಟ್ರೀಕರಣ ಮಾಡಲು ತನ್ನ ಶಕ್ತಿಗಳ ದಿಕ್ಕು ಬದಲಿಸುತ್ತದೆ. ಒಂದು ಅಭಿವೃದ್ಧಿಶೀಲ ದೇಶದಲ್ಲಿನ ಸರ್ಕಾರದ ನ್ಯಾಯಬದ್ಧ ಜವಾಬ್ದಾರಿಗೆ ಅನುಗುಣವಾಗಿ ಆರ್ಥಿಕ ಚಟುವಟಿಕೆಗಳಿಗೆ ಪೋಷಣೆ ನೀಡುವುದರ ಬದಲಿಗೆ, ಅದು ಆಗಲೇ ಅಭಿವೃದ್ಧಿಗೊಂಡ ಕೈಗಾರಿಕೆಗಳನ್ನು ದುರಾಕ್ರಮಣ ಮಾಡಲು ಮೊದಲುಮಾಡುತ್ತದೆ.

**ಭಾರತೀಯ ಪಕ್ಷಗಳ ಸ್ಥಾನ**

ಸಮಾಜವಾದದ ಹಾದಿಯಲ್ಲಿ ಮುಂದುವರಿದಂತೆ ಹೆಚ್ಚಿನ ಅಧಿಕಾರವು ಆಳುವ ಕೂಟದಲ್ಲಿ ಸಾಂದ್ರಗೊಳ್ಳುತ್ತದೆ, ಅಧಿಕಾರಶಾಹಿಯ ಕಲ್ಪನೆಗೆ ಮೀರಿದ ಪ್ರಮಾಣದಲ್ಲಿ ವೃದ್ಧಿಯಾಗುತ್ತದೆ ಮತ್ತು ಕ್ರಮೇಣ ನಾಗರೀಕನಿಗೆ ತನ್ನ ಸ್ವಾತಂತ್ರ್ಯವನ್ನು ಚಲಾಯಿಸಲು ಕಾರ್ಯತಃ ಅಸಾಧ್ಯವಾಗುತ್ತದೆ. ಹೀಗಾಗಿ ಸಮಾಜವಾದವು ವಿಸ್ತರಿಸಿದಂತೆ ಪ್ರಜಾಪ್ರಭುತ್ವವು ಕುಗ್ಗುತ್ತದೆ. ಸಮಾಜವಾದವು ನಿಜವಾದ ಗುರಿಯಾಗಿ ಪ್ರಜಾಪ್ರಭುತ್ವವನ್ನು ಕಡೆಗಣಿಸಲಾಗುತ್ತದೆ. ಅಂತೆಯೇ ಪ್ರಜಾಪ್ರಭುತ್ವವಾದಿ ಸಮಾಜವಾದಕ್ಕಾಗಿ ಪಟ್ಟುಹಿಡಿಯುವವರೆಲ್ಲ ಅಂತಿಮವಾಗಿ ಒಂದಲ್ಲಾ ಇನ್ನೊಂದನ್ನು ಕೈಬಿಡಬೇಕಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಿ ನಾಶವಾಗುವುದು ಪ್ರಜಾಪ್ರಭುತ್ವವೇ. ಪಿ.ಎಸ್.ಪಿ. ಪ್ರಜಾಪ್ರಭುತ್ವದ ಮೇಲೆ ಹೆಚ್ಚು ಒತ್ತು ಹಾಕುತ್ತದೆ ಮತ್ತು ಸೋಷಿಯಲಿಸ್ಟ್ ಪಕ್ಷವು ಸಮಾಜವಾದವನ್ನು ಎತ್ತಿಹಿಡಿಯುತ್ತದೆ ಎಂಬುದರ ಹೊರತಾಗಿ ಈ ವಿಷಯದಲ್ಲಿ ಈ ಎರಡು ಪಕ್ಷಗಳು ಕೂಡಾ ಕಾಂಗ್ರೆಸ್ಸಿನಿಂದ ಭಿನ್ನವಾಗಿಲ್ಲ.

ಈ ಪಕ್ಷಗಳಿಗೆ ತೀರಾ ಇತ್ತೀಚಿನವರೆಗೂ ರಾಷ್ಟ್ರೀಯತಾವಾದದ ಬಗ್ಗೆ ಹೆಚ್ಚು ಕಾಳಜಿಯಿರಲಿಲ್ಲ. ಅದನ್ನು ಸಿದ್ಧ ವಿಷಯವೆಂದು ಭಾವಿಸಿದ್ದವು. ಆದರೆ ಸೋಷಿಯಲಿಸ್ಟ್ ಪಕ್ಷವು ಅದಕ್ಕೆ ಸ್ವಲ್ಪ ಗಮನ ಹರಿಸಿತ್ತು. ಆದರೆ ಇದೆಲ್ಲಾ ತಂತ್ರಗಾರಿಕೆಯೋ ಅಥವಾ ಸೈದ್ಧಾಂತಿಕವೋ ಎಂಬುದನ್ನು ಕಾದು ನೋಡಬೇಕಾಗಿದೆ.

**ಜನಸಂಘ ಮತ್ತು ಸ್ವತಂತ್ರ**

ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಪಕ್ಷಗಳು ಸ್ವಾಭಾವಿಕವಾಗಿಯೇ ಸಮಾಜವಾದಿಯೇತರ ಗುಂಪಿಗೆ ಸೇರುತ್ತವೆ. ಭಾರತೀಯ ಜನಸಂಘ ಮತ್ತು ಸ್ವತಂತ್ರ ಪಕ್ಷಗಳನ್ನು ಈ ಗುಂಪಿನಲ್ಲಿರಿಸಬಹುದು. ಆದರೆ ಈ ಎರಡು ಪಕ್ಷಗಳಲ್ಲು ಪ್ರಾಶಸ್ತ್ಯದಲ್ಲಿ ವ್ಯತ್ಯಾಸವಿದೆ. ಹಿಂದುಳಿದವರ ಸ್ಥಿತಿಯನ್ನು ಸುಧಾರಿಸುವ ಪ್ರಯತ್ನವಾಗಿ ವಸ್ತುಸ್ಥಿತಿಯನ್ನು ಮಾರ್ಪಡಿಸಲು ಉದ್ದೇಶಿಸುವ ಸರ್ಕಾರದ ಎಲ್ಲ ಕ್ರಿಯೆಗಳನ್ನೂ ವಿರೋಧಿಸುವ ಮಟ್ಟದಲ್ಲಿ ಸ್ವತಂತ್ರ ಪಕ್ಷವು ಸಮಾಜವಾದಿಯೇತರವಾಗಿದೆ. ಸಮಾಜವಾದದ ಸರ್ವಾಧಿಕಾರೀ ಧೋರಣೆಯನ್ನು ಬೆಂಬಲಿಸುವುದಿಲ್ಲ ಎನ್ನುವ ಮಟ್ಟಿಗೆ ಜನಸಂಘವು ಸಮಾಜವಾದಿಯೇತರವಾದದ್ದು. ಆದರೆ ಅದು ಖಂಡಿತವಾಗಿಯೂ ಸಾಮಾಜಿಕ ನ್ಯಾಯವನ್ನೂ, ಅಸಮಾನತೆಗಳ ನಿರ್ಮೂಲನವನ್ನೂ, ಹೆಚ್ಚಿನ ವಿಷಯಗಳಲ್ಲಿ ವಸ್ತುಸ್ಥಿತಿಯನ್ನು ಮಾರ್ಪಡಿಸುವುದನ್ನೂ ಬೆಂಬಲಿಸುತ್ತದೆ. ಸಮಾಜವಾದಿಯೇತರ ಎಂದು ಮಾತ್ರಕ್ಕೆ ವಿಧದ ಬಂಡವಾಳಶಾಹಿ ಎಂದಲ್ಲ.

ಕೈಗಾರಿಕಾ ಪ್ರಾತಿನಿಧ್ಯದ ಪಾಶ್ಚಿಮಾತ್ಯ ದೇಶಗಳಲ್ಲಿನ ಬೆಳವಣಿಗೆಯ ಪ್ರಕ್ರಿಯೆಗಿಂತ ಭಿನ್ನವಾದ ಏನನ್ನು ಸ್ವತಂತ್ರ ಪಕ್ಷವು ಕಲ್ಪಿಸಿಕೊಳ್ಳುತ್ತಿಲ್ಲ. ರಾಷ್ಟ್ರೀಯತಾ ವಾದದ ಬಗ್ಗೆ ಕೂಡಾ ಅದಕ್ಕೆ ಕಾಳಜಿಯಿಲ್ಲ. ಆದ್ದರಿಂದ ಅದೊಂದು ಪ್ರಜಾಪ್ರಬುತ್ವವಾದೀ ಪಕ್ಷ; ಆದರೆ ಅದನ್ನು ರಾಷ್ಟ್ರಮಟ್ಟದ ಪ್ರಜಾಪ್ರಭುತ್ವವೆಂದು ಕರೆಯಲಾಗದು. ಭಾರತೀಯ ಜನಸಂಘವಾದರೋ ರಾಷ್ಟ್ರೀಯತೆ ಮತ್ತು ಪ್ರಜಾಪ್ರಭುತ್ವ ಇವೆರಡಕ್ಕೂ ಸಮಾನವಾದ ಪ್ರಾಮುಖ್ಯತೆ ನೀಡುತ್ತದೆ ಮತ್ತು ದೇಶದ ಬೆಳವಣಿಗೆಯ ಇಂದಿನ ಹಂತದಲ್ಲಿ ಸಮಾಜವಾದ ನಿರ್ವಹಿಸಬೇಕಾದ ಪಾತ್ರವೂ ಇದೆ ಎಂದು ಗುರ್ತಿಸುತ್ತದೆ.

ಒಟ್ಟಿನಲ್ಲಿ ನಮ್ಮಲ್ಲಿ, ಸಂಪೂರ್ಣವಾಗಿ ಸಮಾಜವಾದಿಯಾಗಿದ್ದು ಅದರಿಂದಾಗಿಯೇ ಪ್ರಜಾಪ್ರಭುತ್ವವಾದಿಯಾಗಲೀ, ರಾಷ್ಟ್ರೀಯತಾವಾದಿಯಾಗಲೀ ಆಗಿಲ್ಲದ ಕಮ್ಯೂನಿಸ್ಟ್ ಪಕ್ಷವಿದೆ; ಪ್ರಜಾಪ್ರಭುತ್ವವಾದಿ ಸಮಾಜವಾದಿಯಾಗಿರುವ ಮತ್ತು ಆ ಕಾರಣದಿಂದ ರಾಷ್ಟ್ರೀಯತೆಯ ಬಗ್ಗೆ ಚಿಂತಿಸಿದ ಕಾಂಗ್ರೆಸ್ ಪಿ.ಎಸ್.ಪಿ ಮತ್ತು ಸೋಶಿಯಲಿಸ್ಟ್ ಪಕ್ಷ ಮತ್ತು ಇತರ ಕೆಲವು ಸಣ್ಣ ಪಕ್ಷಗಳಿವೆ; ಪೂರ್ಣವಾಗಿ ಪ್ರಜಾಪ್ರಭುತ್ವವಾದಿಯೂ, ಪೂರ್ಣವಾಗಿ ಸಮಾಜವಾದಿಯೇತರವೂ, ಬಹುಮಟ್ಟಿಗೆ ರಾಷ್ಟ್ರೀಯತೆಗೆ ವಿಮುಖವೂ ಆಗಿರುವ ಸ್ವತಂತ್ರ ಪಕ್ಷವಿದೆ; ಮತ್ತು ಮೂಲತಃ ರಾಷ್ಟ್ರೀಯತಾವಾದಿಯೂ ಮತ್ತು ಪ್ರಜಾಪ್ರಭುತ್ವವಾದಿಯೂ ತನ್ನ ವಿಶಾಲ ಕಾರ್ಯನೀತಿಯಲ್ಲಿ ಸಮಾಜವಾದಿಯೇತರವೂ ಆದರೆ ತನ್ನ ಭಾವನಾತ್ಮಕ ಮತ್ತು ಭಾವಕಲ್ಪನೆಯ ಮೊರೆಯಲ್ಲಿ ಸಮಾಜವಾದಿಯೂ ಅದ ಭಾರತೀಯ

ಜನಸಂಘವೂ ಇದೆ.

ರಾಷ್ಟ್ರೀಯತೆಯ ಕಲ್ಪನೆಯಲ್ಲಿ ಜನಸಂಘ ಸ್ವತಃ ಘೋಷಿಸಿಕೊಂಡಿರುವ ಸ್ವರೂಪಕ್ಕೂ ಇತರರ ಕಲ್ಪನೆಗೂ ವ್ಯತ್ಯಾಸವಿದೆ. ಜನಸಂಘ ಹೊರತಾಗಿ ಇತರ ಎಲ್ಲರೂ ಪ್ರಾದೇಶಿಕ ರಾಷ್ಟ್ರೀಯತೆಯನ್ನು ನಂಬುತ್ತಾರೆ. ಜನಸಂಘವು ಸಾಂಸ್ಕೃತಿಕ ರಾಷ್ಟ್ರೀಯತೆಯಲ್ಲಿ ವಿಶ್ವಾಸವಿಟ್ಟಿದೆ. ಭಾರತದಲ್ಲಿ ಒಂದು ರಾಷ್ಟ್ರವನ್ನು ನಿರ್ಮಿಸಬೇಕೆಂದು ಇತರರು ಭಾವಿಸುತ್ತಾರೆ, ಆದರೆ ಭಾರತವು ಅನಾದಿಕಾಲದಿಂದಲೂ ಒಂದು ರಾಷ್ಟ್ರವಾಗಿದೆ ಎಂಬುದು ಜನಸಂಘದ ನಂಬಿಕೆ. ಆದ್ದರಿಂದಲೇ ಸಮಕಾಲೀನ ರಾಷ್ಟ್ರೀಯ ಜೀವನದಿಂದ ಅದು ಸ್ಫೂರ್ತಿಯನ್ನೂ ಮಾರ್ಗದರ್ಶನವನ್ನೂ ಅರಸಬಹುದು; ಆದರೆ ಇತರರು ಅಪರೂಪದ ಸಾಂದರ್ಭಿಕ ಆವೇಗಗಳಿಗೆ ಹೊರತಾಗಿ, ರಾಷ್ಟ್ರದ ಶಕ್ತಿ ಪ್ರೋತ್ಸಾಹಗಳ ಬೃಹತ್ ಆಕರಗಳನ್ನು ಬಳಸಿಕೊಳ್ಳುವುದರಲ್ಲಿ ಸೋಲುತ್ತಾರೆ. ಆದ್ದರಿಂದಲೇ ಕೇವಲ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳಷ್ಟೇ ಅಲ್ಲ, ಅರ್ಥ ವ್ಯವಸ್ಥೆ ರಾಜತಾಂತ್ರಿಕತೆ ಮತ್ತು ಸಮಾಜಗಳೆಲ್ಲದರ ವಿಚಾರಗಳಲ್ಲೂ ಅವರು ಪಾಶ್ಚಿಮಾತ್ಯ ದೇಶಗಳತ್ತಲೇ ನೋಡುತ್ತಾರೆ. ಎಲ್ಲ ಪಕ್ಷಗಳ ಪೈಕಿ ಜನಸಂಘವೇ ಅತ್ಯಂತ ಭಾರತ ಆಧಾರಿತವಾದದ್ದು.

## ಆರ್ಗನೈಸರ್ – ಒಂದು ಸಂದರ್ಶನ

### ತೆರಿಗೆ ದರವನ್ನು ಗರಿಷ್ಠ ೪೫%ಕ್ಕೆ ಇಳಿಸಿ ಮತ್ತು ಮಾಸಿಕ ರೂ.೫೦೦ಕ್ಕಿಂತಲೂ ಕಡಿಮೆಯ ವರಮಾನಗಳಿಗೆ ವಿನಾಯಿತಿ ನೀಡಿ

ನಮ್ಮ ಆರ್ಥಿಕ ಬೆಳವಣಿಗೆಯ ಗತಿ ಎಷ್ಟು ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ? ಅದರ ಗತಿಯನ್ನು ಉತ್ತಮ ಪಡಿಸಲು ಏನು ಮಾಡಬಹುದು? ಈ ವಾರದ ಮೊದಲಲ್ಲಿ ಭಾರತೀಯ ಜನಸಂಘದ ಸಾಮಾನ್ಯ ಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರೊಂದಿಗೆ ಚರ್ಚಿಸಿದ ಕೆಲವು ಪ್ರಶ್ನೆಗಳು ಇವು. ಮಾತುಕತೆಯ ಸಾರಾಂಶ ಇಲ್ಲಿದೆ. ಸಂ.

ಸಂ: ನಮ್ಮ ಆರ್ಥಿಕ ಬೆಳವಣಿಗೆಯ ಗತಿ ನಿಮಗೆ ಸಮಾಧಾನ ತಂದಿದೆಯೇ?

ದೀನ್ : ಇಲ್ಲ

ಸಂ: ಏನು ತಪ್ಪಾಗಿದೆ ಮತ್ತು ಎಲ್ಲಿ ಎನಿಸುತ್ತದೆ?

ದೀನ್ : ನಮ್ಮ ಪ್ರಗತಿಯು ಹೆಚ್ಚು ಕಾರ್ಮಿಕಾಧಿಕ್ಯವಾಗಿಯೂ, ಕಡಿಮೆ ಬಂಡವಾಳಾಧಿಕ್ಯವಾಗಿಯೂ ಇರಬೇಕು ಎಂದು ನಾನು ಭಾವಿಸುತ್ತೇನೆ. ಅದು ಇನ್ನೂ ಕಡಿಮೆ ಆಮದು ವ್ಯಾಪಾರದತ್ತ ತಿರುಗಿರಬೇಕು ಎಂದೂ ಭಾವಿಸುತ್ತೇನೆ.

**ಚಂಬಲ್ ಯೋಜನೆಯು ಒಂದು ಆದರ್ಶ**

ಸಂ: ಕೆಲವು ನಿರ್ದಿಷ್ಟ ಉದಾಹರಣೆಗಳನ್ನು ನೀಡಬಲ್ಲಿರಾ?

ದೀನ್ : ಖಂಡಿತವಾಗಿಯೂ. ನಮ್ಮ ಅಣೆಕಟ್ಟುಗಳನ್ನೇ ತೆಗೆದುಕೊಳ್ಳೋಣ. ಅವುಗಳ ನಿರ್ಮಾಣಕ್ಕಾಗಿ ನಾವು ದುಬಾರಿಯಾದ ಯಂತ್ರಗಳನ್ನು ಆಮದು ಮಾಡಿಕೊಂಡಿದ್ದೇವೆ. ಅವುಗಳನ್ನು ಕಟ್ಟಲು ಕಾರ್ಮಿಕರನ್ನೇ ಇನ್ನೂ ಹೆಚ್ಚಾಗಿ ಬಳಸಿಕೊಳ್ಳಬೇಕಾಗಿತ್ತು. ಚಂಬಲ್ ಯೋಜನೆಗಾಗಿ ಕೆಲಸ ಮಾಡಿದ ಮೈಸೂರಿನ ಎಂಜಿನಿಯರುಗಳು (ಅಭಿಯಂತರು) ಸ್ಥಳೀಯ ಯೋಜನೆಗಳ ಅನುಭವದಿಂದಾಗಿ ಹೀಗೆಯೇ ಮಾಡಿದರು. ನಮ್ಮ ಇತರ ಅಣೆಕಟ್ಟುಗಳಲ್ಲೂ ಹಾಗೆಯೇ ಮಡಬೇಕಾಗಿತ್ತು.

ನಾವು ಇನ್ನೂ ಸಣ್ಣ ಅಣೆಕಟ್ಟು ಯೋಜನೆಗಳಿಗೆ ಗಮನ ಹರಿಸಬೇಕಾಗಿತ್ತು ಎಂದೂ ಭಾವಿಸುತ್ತೇನೆ. ಇದರಿಂದಾಗಿ ಕಡಿಮೆ ಖರ್ಚು, ಹೆಚ್ಚಿನ ಪ್ರಮಾಣದ ಉಪಯುಕ್ತತೆ ಮತ್ತು ಹೆಚ್ಚು ಶೀಘ್ರವಾದ ಹಾಗೂ ಹೆಚ್ಚಿನ ಲಾಭ ಉಂಟಾಗುತ್ತಿದ್ದವು.

ಸಂ: ಬೇರೆ ಉದಾರಹಣೆ ಇದೆಯೇ?

ದೀನ್ : ಇದೆ. ನಾವು ಅತಿಯಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದೇವೆ ಎನಿಸುತ್ತದೆ. ಅಲ್ಲದೆ ಅವುಗಳನ್ನೆಲ್ಲ ಸಿಮೆಂಟಿನಿಂದ ಕಟ್ಟುತ್ತಿದ್ದೇವೆ. ಸ್ಥಳೀಯವಾಗಿ ತಯಾರಿಸಿದ ಇಟ್ಟಿಗೆಯನ್ನು ಏಕೆ ನಾವು ಬಳಸಲಿಲ್ಲ? ಭಾರವಾದ ಸಿಮೆಂಟಿನ ಸಾಗಣೆಯಿಂದಾಗಿ ರೈಲ್ವೇ ಇಲಾಖೆಯ ಮೇಲೆ ಉಂಟಾದ ಒತ್ತಡ ಅದರಿಂದ ಕಡಿಮೆಯಾಗುತ್ತಿತ್ತಲ್ಲದೆ ಸ್ಥಳೀಯವಾದ ವಿಕೇಂದ್ರಿಕೃತ ಇಟ್ಟಿಗೆಗೂಡು ಕೈಗಾರಿಕೆಯನ್ನೂ ಪ್ರೋತ್ಸಾಹಿಸಿದಂತಾಗುತ್ತಿತ್ತು.

ನಾವು ನಮ್ಮ ವ್ಯಾಪಾರ ನಡೆಸುವುದಕ್ಕಾಗಿ ಹಡಗುಗಳನ್ನು ನಿರ್ಮಿಸಲು ನೌಕಾಂಗಣಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಈ ಹಂತದಲ್ಲಿ ಬಹುಶಃ ಹಡಗುಗಳನ್ನು ಖರೀದಿ ಮಾಡುವುದೇ ಹೆಚ್ಚು ಅಗ್ಗವಾಗುತ್ತಿತ್ತು. ನಮ್ಮ ದುರ್ಲಭವಾದ ಬಂಡವಾಳ ಸಂಪನ್ಮೂಲಗಳನ್ನು ಸುಲಭವಾಗಿ ಲಭ್ಯವಾಗದಂತೆ ಬಂಧಿಸಿಡುತ್ತಿದ್ದೇವೆ. ಶೀಘ್ರವಾದ ಲಾಭ ಬರುವತ್ತ ನಮ್ಮ ಬಂಡವಾಳ ಮುಖ ಮಾಡಿರಬೇಕು. ಸರ್ಕಾರವು ಸಣ್ಣ ಕೈಗಾರಿಕೆಗೆ ಅವಶ್ಯಕವಾದಷ್ಟು ಗಮನ ಹರಿಸುತ್ತಿಲ್ಲ ಎನಿಸುತ್ತದೆ.

ಸಂ: ಯಾವುದಾದರೂ ಉದಾಹರಣೆ?

ದೀನ್ : ನಮ್ಮ ವಿದ್ಯುತ್ ಎಂಜಿನಿಯರಿಂಗ್ ಕೈಗಾರಿಕೆಯು ಚೆನ್ನಾಗಿ ಕೆಲಸ ಮಾಡಿದೆ. ಅವರು ವಿದ್ಯುತ್ ಮೋಟಾರುಗಳು (ಯಂತ್ರ) ಪಂಪುಗಳು ಮುಂತಾದವನ್ನು ರಫ್ತು ಮಾಡುತ್ತಿದ್ದಾರೆ. ಆದರೆ ಅವರಿಗೆ ಬೇಕಾದಷ್ಟು ಉಕ್ಕಿನ ನಿಯತಾಂಶವನ್ನು (ಕೋಟಾ) ಪಡೆದುಕೊಳ್ಳುವುದು, ಅವರಿಗೆ ಕಷ್ಟವಾಯಿತು.

ಬಹಳ ಹೆಚ್ಚು ಸಂದರ್ಭಗಳಲ್ಲಿ ಪರವಾನಿಗೆಗಳು ರಾಜಕೀಯ ಉದ್ಯಮಪತಿಗಳಿಗೆ ದೊರಕುತ್ತವಲ್ಲದೆ ನಿಜವಾದ ಬಳಕೆದಾರರಿಗೆ ಅಲ್ಲ.

ನಮ್ಮ ಏರುಪೇರಾದ ಅಭಿವೃದ್ಧಿಯಿಂದಾಗಿ ಅವಶ್ಯಕ ವಸ್ತುಗಳ ಕೊರತೆಯುಂಟಾಗಿದೆ ಹಾಗೂ ದಿನಬಳಕೆಯ ವಸ್ತುಗಳ ಕ್ರಯ ನಿರಂತರವಾಗಿ ಏರುತ್ತಿದೆ.

**ವೇತನದಾರರ ವರ್ಗ ನಜ್ಜುಗುಜ್ಜಾಗಿದ್ದಾರೆ**

ಸಂ: ಒಟ್ಟಿನಲ್ಲಿ ಜನತೆ ಮುಂಚಿಗಿಂತಲೂ ಈಗ ಉತ್ತಮವಾಗಿ ಬದುಕುತ್ತಿದ್ದಾರೆ ಎನಿಸುವುದಿಲ್ಲವೆ?

ದೀನ್ : ಇದು ವರ್ಗದಿಂದ ವರ್ಗಕ್ಕೆ ಬದಲಾಗುತ್ತದೆ. ಭೂರಹಿತ ಕೂಲಿಕಾರರು ಮುಂಚಿಗಿಂತ ಹೀನ ಸ್ಥಿತಿಗಿಳಿದಿದ್ದಾರೆ. ಅಂತೆಯೇ ಇಡೀ ವೇತನದಾರರೂ ಎಂದರೆ ಸಮಾಜದ ಸ್ಥಿರ ವರಮಾನದ ಅಂಗ. ಮಧ್ಯಮ ದರ್ಜೆಯ ರೈತನ ಸ್ಥಿತಿ ಮುಂಚಿಗಿಂತ ಏನೂ ಕೇಡಾಗಿಲ್ಲ. ದೊಡ್ಡ ರೈತ ಹೆಚ್ಚಿನ ಲಾಭ ಗಳಿಸಿದ್ದಾನೆ. ಸಣ್ಣ ಪಟ್ಟಣಗಳಿಗಿಂತಲೂ ದೊಡ್ಡ ನಗರಗಳ ಕಾರ್ಖಾನೆಯ ಕಾರ್ಮಿಕ ಹೆಚ್ಚು ಉತ್ತಮ ಸ್ಥಿತಿಯಲ್ಲಿದ್ದಾನೆ. ವರ್ತಕರೂ ಚೆನ್ನಾಗಿದ್ದಾರೆ. ಅಂತೆಯೇ ಹಿರಿಯ ವಕೀಲರು. ವೈದ್ಯರು ಮುಂತಾದವರು. ಆದರೆ ಇಷ್ಟೆಲ್ಲ ಆದ ಮೇಲೆ ಉಳಿಯುವ ಬಹುಪಾಲು ಜನ ಹಿಂದಿಗಿಂತಲು ಹೀನ ಸ್ಥಿತಿಯಲ್ಲಿದ್ದಾರೆ ಎಂದು ಕಂಡುಬರುತ್ತದೆ. ಹಿಂದೆ, ಗುಮಾಸ್ತನಾಗಲೀ ಮತ್ತು ಉಪಾಧ್ಯಾಯನಾಗಲೀ ಇಬ್ಬರೂ ಸಣ್ಣ ಸಾಹೇಬರೇ ಆಗಿದ್ದರು. ಈಗ ಅವರು ಬಿಳಿಯುಡುಗೆ ಧರಿಸಿರುತ್ತಾರೆ, ಅಷ್ಟೆ ಅವರಿಗೆ ಯಾವ ಉಳಿತಾಯವೂ ಇಲ್ಲ, ಯಾವ ಅಂತಸ್ತೂ ಇಲ್ಲ.

ಸಂ: ಹಾಗಾದರೆ ಅವರೇಕೆ ಚಳವಳಿ ನಡೆಸುವುದಿಲ್ಲ?

ದೀನ್ : ಮೂರು ವರ್ಷಗಳ ಹಿಂದಿನ ಕೇಂದ್ರ ಸರ್ಕಾರೀ ನೌಕರರ ಮುಷ್ಕರವು ಅವರ ಆಳವಾದ ಅಸಮಾಧಾನದ ಅಭಿವ್ಯಕ್ತಿಯಾಗಿತ್ತು. ಅವರು ಎಷ್ಟೊಂದು ಕಾಲವನ್ನು ಕಚೇರಿಯಲ್ಲಿ ಮತ್ತು ಎಷ್ಟೊಂದು ಕಾಲವನ್ನು ಕಚೇರಿಗೆ ಹೋಗಿ ಬರಲು ವೆಚ್ಚ ಮಾಡುತ್ತಾರೆಂದರೆ ಅವರಿಗೆ ಯಾವುದೇ ಚಳವಳಿಗೆ ಸಮಯವಾಗಲೀ ಶಕ್ತಿಯಾಗಲೀ ಇರುವುದಿಲ್ಲ. ಜೊತೆಗೆ, ಬಹುಶಃ ಬಿಳಿ ಕಾಲರಿನ ವರ್ಗದಲ್ಲಿ ಮುಷ್ಕರ ಸಾಮಾಜಿಕವಾಗಿ ಹೆಚ್ಚು ಗೌರವಾನ್ವಿತವಲ್ಲ.

ಸಂ: ವೇತನದಾರರು ಹಿಂದಿಗಿಂತಲೂ ಹೆಚ್ಚು ಚೆನ್ನಾಗಿರುವಂತೆ ತೋರುವುದಿಲ್ಲವೇ?

ದೀನ್ : ಸ್ವರೂಪಗಳು ಬದಲಾಗಿವೆ. ಉಪಭೋಗದ (ಹಣ ವೆಚ್ಚ ಮಾಡುವ) ಮಟ್ಟಗಳು ಮಾರ್ಪಟ್ಟಿವೆ. ಸಿನೆಮಾ ಮಂದಿರಕ್ಕೆ ತಿಂಗಳಿಗೊಮ್ಮೆ ಹೋಗುವುದು ಅನಿವಾರ್ಯವೆನಿಸಿದೆ. ಆದರೆ ಅವರ ಮಕ್ಕಳಿಗೆ ಕುಡಿಯಲು ಹಾಲು ದೊರಕುವುದಿಲ್ಲ. ೧೯೩೯ರಿಂದೀಚೆಗೆ ಕ್ರಯಗಳು ಐದು ಪಟ್ಟು ಹೆಚ್ಚಾಗಿವೆಯೆಂಬುದನ್ನು ಮರೆಯಬೇಡಿ. ಆದರೆ ಒಬ್ಬ ಗುಮಾಸ್ತನ ಸಂಬಳವು ಅಂದು ೪೦ ರೂಪಾಯಿಗಳಿದ್ದುದು ಈಗ

ಕೇವಲ ೧೦೫ ರೂಪಾಯಿಗಳಿಗೇರಿದೆ. ಕೇರಳ, ಮೈಸೂರು ಮುಂತಾದ ಕಡೆಗಳಲ್ಲಿ ಪದವೀಧರರು ತಿಂಗಳಿಗೆ ೭೦ ರೂಪಾಯಿಗಳ ಸಂಬಳದಿಂದ ಆರಂಭಿಸುತ್ತಾರೆ!

**ಸಮಾಜವಾದ ಏಕೆ ಸ್ಫೂರ್ತಿ ನೀಡದು**

ಸಂ: ಈಗ ಹೆಚ್ಚು ಉದ್ಯೋಗಸ್ತ ಪತ್ನಿಯರಿರಬಹುದು?

ದೀನ್ : ಬಹಳ ಹೆಚ್ಚಲ್ಲ, ದೇಶದ ಬಹುಪಾಲು ಭಾಗಗಳಲ್ಲೂ ಇಲ್ಲ.

ಸಂ: ಈಗ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗಿದೆ. ಇನ್ನೂ ರೈತನಿಗೆ ಮುಂಚಿಗಿಂತ ಬಹಳ ಹೆಚ್ಚು ಉತ್ಪಾದಿಸಲು ಸ್ಫೂರ್ತಿ ಬಂದಿಲ್ಲ?

ದೀನ್ : ರೈತ ಮುಂಚಿಗಿಂತಲೂ ಹೆಚ್ಚಾಗಿಯೇ ಉತ್ಪಾದಿಸುತ್ತಿದ್ದಾನೆ. ಆದರೆ ಅವನಿಗೆ ಸಿಗುತ್ತಿರುವ ಕ್ರಮ ಹೆಚ್ಚೇನಲ್ಲ; ನ್ಯಾಯವಾದ ಬೆಲೆ ಸಿಗುತ್ತಿದೆ ಅಷ್ಟೆ. ಅವನ ಅವಶ್ಯಕತೆಗಳೂ ಅವನಿಗೆ ಹೆಚ್ಚು ದುಬಾರಿಯಾಗಿವೆ.

ಸಂ: ಕ್ರಯದ ಮಟ್ಟವನ್ನು ನಿರ್ಧರಿಸುವುದರಲ್ಲಿ ಆಹಾರ ಪದಾರ್ಥಗಳ ಕ್ರಯಗಳು ಎಲ್ಲಕ್ಕಿಂತ ದೊಡ್ಡ ಏಕೈಕ ಘಟಕ. ಆಹಾರ ಪದಾರ್ಥಗಳ ಹೆಚ್ಚಿನ ದರಗಳೇ ಇತರ ಎಲ್ಲ ಕ್ರಯಗಳನ್ನೂ ಮೇಲಕ್ಕೆ ನೂಕುತ್ತಿವೆ. ಹಾಗೂ ವೇತನದಾರರನ್ನು ನಜ್ಜುಗುಜ್ಜಾಗಿಸುತ್ತಿವೆ. ರೈತನಿಗೆ ಹೆಚ್ಚು ನೀಡಿದಷ್ಟೂ ಗುಮಾಸ್ತನನ್ನು ಹೆಚ್ಚು ಹೆಚ್ಚಾಗಿ ಪೀಡಿಸಿದಂತೆ.

ದೀನ್ : ಇದಕ್ಕೆ ಒಂದು ಪರಿಹಾರವಿದೆ. ಸರ್ಕಾರವು ಕಡಿಮೆ ಸಂಪಾದಿಸುವವರಿಗಾಗಿ, ಉದಾಹರಣೆಗೆ ತಿಂಗಳಿಗೆ ೨೦೦ ರೂಪಾಯಿಗಳಿಗಿಂತ ಕಡಿಮೆ ಸಂಪಾದಿಸುವವರಿಗಾಗಿ, ಆಹಾರ ಪದಾರ್ಥಗಳಿಗೆ ಸಹಾಯಧನ ನೀಡಬೇಕು. ಸರ್ಕಾರದ ಎಲ್ಲ ಆದಾಯದ ಶೇಕಡಾ ೨೦ರಷ್ಟನ್ನು ಕಬಳಿಸುತ್ತಿರುವ ಆಡಳಿತದ ಮೇಲಿನ ವೆಚ್ಚವನ್ನು ನಿಯಂತ್ರಿಸುವುದರಿಂದ ಇದಕ್ಕಾಗಿ ಸರ್ಕಾರವು ಸುಲಭವಾಗಿ ಹಣ ಒದಗಿಸಬಹುದು. ಸರ್ಕಾರೀ ಕಚೇರಿಗಳ ನಾಯಿಕೊಡೆಯಂತಹ ಬೆಳವಣಿಗೆಯನ್ನು ತುಂಡರಿಸಬೇಕು.

ಸಂ: ರಾಷ್ಟ್ರದ ಆರ್ಥಿಕ ವ್ಯವಸ್ಥೆಗಾಗಿ ಎಲ್ಲರೂ ಸಾಧ್ಯವಾದಷ್ಟನ್ನೂ ಮಾಡುತ್ತಿದ್ದಾರೆಂದು ಎನಿಸುತ್ತದೆಯೇ? ಸರ್ಕಾರದಲ್ಲಿ ಜಡತ್ವ ಹೆಚ್ಚಾಗಿಯೇ ಇದೆಯಲ್ಲವೆ?

ದೀನ್ : ಅದಂತೂ ಬಹು ಮಟ್ಟಿಗೆ ಇದೆ.

ಸಂ: ಇದಕ್ಕೆ ಸರಳತೆ ಮತ್ತು ತ್ಯಾಗ ಎನ್ನುವ ವಿಚಾರವೇ ಕಾರಣವೆನ್ನುತ್ತೀರಾ? ಈ ತ್ಯಾಗ ಎನ್ನುವ ಮಾತನ್ನೇ ನಾವು ತ್ಯಜಿಸಬೇಕಲ್ಲವೇ?

ದೀನ್ : ಇದು ಬಹಳ ಆಸಕ್ತಿ ಹುಟ್ಟಿಸುವ ವಿಚಾರ. ಆದರೆ ನಮ್ಮ ಸಮಾಜದಲ್ಲಿ ಕೆಲವು ಚಿಂತನೆಗಳಿವೆ. ಹಣ ಸಂಪಾದಿಸುವುದು ಅದರಷ್ಟಕ್ಕೇ ಒಳಿತೆಂದು ಪರಿಗಣಿಸಲ್ಪಟ್ಟಿಲ್ಲ. ನಮ್ಮ ಸಮಾಜವನ್ನು ಸಶಕ್ತವನ್ನಾಗಿ ಮಾಡಲು ಅತ್ಯುತ್ತಮ

ವಿಧಾನವೆಂದರೆ ಜನರ ಮನಸ್ಸನ್ನು ಒಂದು ಶ್ರೇಷ್ಠ ರಾಷ್ಟ್ರೀಯ ಗುರಿಗೆ ಎತ್ತಿ ಕಟ್ಟುವುದು. ಭಾರತ ಮತ್ತು ಪಾಕಿಸ್ತಾನಗಳ ಮರುಜೋಡಣೆ ಇಂತಹ ಒಂದು ಗುರಿಯಾಗಬಹುದು.

ಸಂ: ಸ್ಫೂರ್ತಿದಾಯಕ ಗುರಿಯಾಗಿ ಸಮಾಜವಾದಕ್ಕೆ ಏನನ್ನುತ್ತೀರಾ?

ದೀನ್ : ಸಮಾಜವಾದವೆಂದರೆ ಬೇರೆ ಬೇರೆಯವರಿಗೆ ಬೇರೆ ಬೇರೆ ಅರ್ಥ ನೀಡುತ್ತದೆ ಎಂಬ ಭಯವಿದೆ ನನಗೆ. ಅದು ಯಾರಿಗೂ ಸ್ಫೂರ್ತಿ ನೀಡಿಲ್ಲ ಎಂಬುದು ಸ್ಪಷ್ಟವಾಗಿದೆ. ಸಮಾಜವಾದವೆಂದರೆ ರಾಷ್ಟ್ರೀಕರಣಗೊಳಿಸುವುದು ಎಂದೂ, ರಾಷ್ಟ್ರೀಕರಣವೆಂದರೆ ರಾಜಾಸ್ಥಾನದ ಆಹಾರ ಧಾನ್ಯಗಳ ವ್ಯಾಪಾರದಂತೆ, ಆಯ್ಕೆಯಾದ ಪ್ರಿಯರಿಗೆ ಪರವಾನಿಗೆಗಳನ್ನು ನೀಡುವುದೆಂದೂ ಅರ್ಥವಾದಾಗ, ಅದರಿಂದ ಯಾರೂ ಸ್ಫೂರ್ತಿ ಪಡೆದಿಲ್ಲ ಎಂಬುದರಲ್ಲಿ ಆಶ್ಚರ್ಯವಿಲ್ಲ.

**ಕಡಿಮೆ ತೆರಿಗೆ ಹಾಕಿ ಹೆಚ್ಚು ಸಂಗ್ರಹಿಸುವುದು ಹೇಗೆ**

ಸಂ: ಬೆಳವಣಿಗೆಯ ಗತಿಯನ್ನು ಉತ್ತಮಪಡಿಸಲು ಬೇರೇನಾದರೂ ನಿರ್ದಿಷ್ಟ ಸಲಹೆಗಳು?

ದೀನ್ : ಈಗಿನ ವರಮಾನ ತೆರಿಗೆ ಮತ್ತು ನಗರಸಭೆ ತೆರಿಗೆಗಳು ಎಷ್ಟು ಹೆಚ್ಚಾಗಿವೆಯೆಂದರೆ ಅದರಿಂದ ಬಹುಮಟ್ಟಿಗೆ ನುಣುಚಿಕೊಳ್ಳಲಾಗುತ್ತದೆ. ಇದರ ಫಲಿತಾಂಶವೇ ತನ್ನ ಸಟ್ಟಾ ವ್ಯಾಪಾರದ ಚಟುವಟಿಕೆಯಿಂದಾಗಿ ಅರ್ಥವ್ಯವಸ್ಥೆಯಲ್ಲಿ ಗೊಂದಲ ಹುಟ್ಟಿಸುವ ಭಾರೀ ಮೊತ್ತದ ಕಪ್ಪುಹಣ. ಸರ್ಕಾರವು ಕಾಲ್ಡೋರರ ಸಲಹೆಗಳ ಇಡೀ ಯೋಜನೆಯನ್ನು ಅಂಗೀಕರಿಸಿ ತೆರಿಗೆಗಳನ್ನು ಗರಿಷ್ಠ ೪೫%ಕ್ಕೆ ಇಳಿಸಬೇಕೆಂದು ನಾನು ಬಯಸುತ್ತೇನೆ.

ಅಲ್ಲದೆ ಮಾಸಿಕ ೨೫೦ ರೂಪಾಯಿಗಳಷ್ಟು ಕಡಿಮೆ ವರಮಾನಗಳ ಮೇಲೆ ವರಮಾನ ತೆರಿಗೆ ಅನವಶ್ಯಕ. ಅದಕ್ಕಿಂತ ಎರಡು ಪಾಲು ಹೆಚ್ಚಿನ ವರಮಾನಗಳಿಂದ ಅದು ಆರಂಭಿಸಬಹುದು. ಇದರಿಂದ ಕಡಿಮೆ ಆದಾಯ ತರುವ ಹೆಚ್ಚಿನ ಕೆಲಸದ ಹೊರೆಯಿಂದ ತೆರಿಗೆ ಅಧಿಕಾರಿಗಳು ಮುಕ್ತರಾಗುತ್ತಾರೆ.

ಅಲ್ಲದೆ ನಾಮಮಾತ್ರದ ತೆರಿಗೆ ಇಳಿಕೆಯ ನಂತರ, ಸರ್ಕಾರವು ಎಲ್ಲ ಆದಾಯ ಘೋಷಣೆಗಳನ್ನೂ ಸತ್ಯವೆಂದು ಅಂಗೀಕರಿಸಬೇಕು. ದೃಷ್ಟಾಂತ ಶೋಧಗಳಲ್ಲಿ ತಪ್ಪಿತಸ್ಥರೆಂದು ಸಿಕ್ಕಿಬೀಳುವ ತೆರಿಗೆ ಅಪರಾಧಿಗಳ ವಿಷಯದಲ್ಲಿ ನಿಷ್ಕರುಣೆಯಿಂದ ಕ್ರಮ ಜರುಗಿಸಬೇಕು. ಅಂತಹ ಪದ್ಧತಿಯು, ಈಗಿನ ಎಲ್ಲ ತೆರಿಗೆದಾರರನ್ನೂ ಕಳ್ಳರೆಂದು ಪರಿಗಣಿಸುವ ಪದ್ಧತಿಗಿಂತಲೂ ಹೆಚ್ಚು ಆದಾಯವನ್ನು ಸರ್ಕಾರದ ಬೊಕ್ಕಸಕ್ಕೆ ತಂದುಕೊಡುತ್ತದೆ ಎಂದು ನನ್ನ ಊಹೆಯಾಗಿದೆ.

**ಮೂಲ : ಆರ್ಗನೈಸರ್,**

## ಭಾರತೀಯ ಜನಸಂಘ

**(ಆಕರ: ಆರ್ಗನೈಸರ್ ದೀಪಾವಳಿ, ೧೯೬೪)** ಭಾರತೀಯ ಜನಸಂಘವು ಒಂದು ಜೀವಂತ ತತ್ತ್ವವಾಗಿರಬೇಕು, ಒಂದು ವೀರ್ಯವತ್ತಾದ ಚಳುವಳಿಯಾಗಬೇಕು, ಶಿಸ್ತು ಶ್ರದ್ಧೆಗಳ ನುರಿತ ತಂಡವುಳ್ಳ ಹಾಗೂ ಜನತೆಯಷ್ಟೇ ವಿಸ್ತಾರವಾದ ಬುನಾದಿಯುಳ್ಳ ಜಾಗರೂಕ ಪಕ್ಷವಾಗಬೇಕು. ಅದೊಂದೇ ಅದರ ಅಸ್ತಿತ್ವಕ್ಕೆ ಒಂದು ಅರ್ಥ ಮತ್ತು ಅದರ ಸಾಧನೆಗಳ ಅಳತೆಗೋಲು ಎಂದು ಬರೆಯುತ್ತಾರೆ ದೀನ್ ದಯಾಳ್ ಉಪಾಧ್ಯಾಯ, ಪ್ರಧಾನ ಕಾರ್ಯದರ್ಶಿ, ಭಾರತೀಯ ಜನಸಂಘ.

ಭಾರತೀಯ ಜನಸಂಘವು ವಿಶಿಷ್ಟ ಲಕ್ಷಣಗಳುಳ್ಳ ಒಂದು ಪಕ್ಷ. ಹೇಗಾದರೂ ಅಧಿಕಾರಕ್ಕೆ ಬರಬೇಕೆಂಬ ಆಸಕ್ತಿ ಇರುವ ಜನರ ಒಂದು ಗುಂಪಲ್ಲ ಇದು. ಇಲ್ಲವೇ ಕೇವಲ ತನಗಾಗಿ ವಶೀಲಿ ನಡೆಸುವುದರಲ್ಲಿ ಆಸಕ್ತಿ ಹೊಂದಿದ್ದು ಅದರಿಂದಲೇ ತೃಪ್ತಿ ಪಡೆಯುವ ಯಾವುದೇ ಪಟ್ಟಭದ್ರ ಹಿತಾಸಕ್ತಿಯನ್ನೂ ಅದು ಪ್ರತಿನಿಧಿಸುವುದಿಲ್ಲ. ಬ್ರಿಟಿಷರು ಹೊರಟುಹೋದ ಮೇಲೆ ಅಧಿಕಾರ ನಮ್ಮವರ ಕೈಸೇರಿದಾಗ ಅದರಲ್ಲಿ ಪಾಲು ಪಡೆಯಲು ನಮಗೆ ಕರೆ ನೀಡಲಿಲ್ಲ ಎಂದು ಅದಕ್ಕೆ ಯಾವುದೇ ಅಸಮಾಧಾನವಿಲ್ಲ. ವಾಸ್ತವವಾಗಿಯೂ ಭಾರತೀಯ ಜನಸಂಘದ ಸ್ಥಾಪಕ ಅಧ್ಯಕ್ಷರಾದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರು ಕೇಂದ್ರ ಮಂತ್ರಿಮಂಡಲದ ಸದಸ್ಯರಾಗಿದ್ದರು. ಪೂರ್ವ ಬಂಗಾಳದ ಅಲ್ಪಸಂಖ್ಯಾತರ ವಿಷಯಕ್ಕಾಗಿ ಅವರು ರಾಜೀನಾಮೆ ಕೊಟ್ಟ ನಂತರವೇ ಅವರು ಒಂದು ಹೊಸ ಪಕ್ಷ ಕಟ್ಟುವ ಆಲೋಚನೆ ಮಾಡಿದ್ದು.

ಜನಸಂಘವು, ಹೊಸ ಯುಗದ ಉಗಮದಿಂದಾಗಿ ರಾಜಕೀಯವಾಗಿ ಅಥವಾ ಆರ್ಥಿಕವಾಗಿ ಪದಚ್ಯುತರಾದವರು ಒಂದುಗೂಡಿರುವ ಗುಂಪೂ ಅಲ್ಲ. ಮಾಜಿ ಎನ್ನುವ ಪೂರ್ವಪ್ರತ್ಯಯವನ್ನು ಅದರ ಯಾವುದೇ ಸದಸ್ಯರಿಗೆ ಸೇರಿಸುವುದೂ ಕಷ್ಟಸಾಧ್ಯ. ಹಿಂದೆ ಸಂಚಯಿಸಿಟ್ಟಿರುವುದನ್ನು ಆಶ್ರಯಿಸುವ ಬದಲು ಅವರು ತಮ್ಮ ವರ್ತಮಾನದ ಸಂಪಾದನೆಯನ್ನು ನೆಚ್ಚುತ್ತಾರೆ. ಅಲ್ಲ ಅಲ್ಲ ಎಂಬ ಈ ಪರಿಚಿತ ಶೈಲಿಯಲ್ಲಿ ಜನಸಂಘವನ್ನು ವಿವರಿಸುವುದು ಸರಿಯಾದದ್ದೇ ಆದರೂ ಜನರಿಗೆ ಅದು ಸಮಾಧಾನ ನೀಡಲಾರದು. ಹಾಗೂ ಅವರು "ಒಟ್ಟಿನಲ್ಲಿ ಅದು ಏನು?" ಎಂದು ಪ್ರಶ್ನಿಸಬಹುದು.

### ಜನಸಂಘವು ಒಂದು ಚಳವಳಿ, ಒಂದು ಪಕ್ಷವಲ್ಲ

ತನಗೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ಪಡೆಯಲೇಬೇಕೆಂಬ ರಾಷ್ಟ್ರದ ಕಟ್ಟಾಸೆಯಲ್ಲಿ ಅದು ಉಗಮಿಸುತ್ತದೆ. ತನ್ನ ಪಾಲಿಗೆ ವಿಧಿ ನಿಯಾಮಕವಾದದ್ದನ್ನು ಘೋಷಿಸಿ ಸಾಧಿಸಲೇಬೇಕೆಂಬ ರಾಷ್ಟ್ರದ ಉತ್ಕಟವಾದ ಇಚ್ಛೆ ಇದು. ಸರಳವಾಗಿ

ಹೇಳುವುದಾದರೆ, ಮುಕ್ತವಾದ ವಾತಾವರಣದಲ್ಲಿ ಉಸಿರಾಡುವ, ಮತ್ತು ಗರುಡನಂತೆ ಮೇಲಮೇಲಕ್ಕೆ ಹಾರುತ್ತಾ, ಅತ್ಯುನ್ನತವಾದದ್ದರೊಂದಿಗೆ ಐಕ್ಯವಾಗದಂತೆ ನಮ್ಮ ದೇಶವನ್ನು ಅಶಕ್ತವಾಗಿ ಮಾಡಿದ್ದ ಭೌತಿಕ ಮತ್ತು ಮಾನಸಿಕ ಬಂಧನಗಳಿಂದ ಬಿಡಿಸಿಕೊಳ್ಳಬೇಕೆಂಬ ಜನತೆಯ ಆಕಾಂಕ್ಷೆಯ ಅಭಿವ್ಯಕ್ತಿ ಅದು. ಒಟ್ಟು ವ್ಯವಸ್ಥೆಯಲ್ಲಿ ನಮ್ಮ ಸ್ಥಾನವನ್ನು ಕಂಡುಕೊಳ್ಳುವ ಮತ್ತು ಅದರಿಂದಾಗಿ ರಾಷ್ಟ್ರವು ಒಂದು ಉದ್ದೇಶಪೂರ್ವಕವಾಗಿ ಮತ್ತು ಸಂತೋಷವಾಗಿ ಬದುಕುವಂತೆ ಮತ್ತು ಮನುಕುಲಕ್ಕೆ ಸೇವೆ ಸಲ್ಲಿಸುವಂತೆ ಮಾಡುವ ಪ್ರಯತ್ನ ಅದು.

ಭಾರತೀಯ ಸಂಸ್ಕೃತಿ ಮತ್ತು ಮರ್ಯಾದೆಗಳು ಭಾರತೀಯ ಜನಸಂಘದ ಆಧಾರ. ಭಾರತೀಯ ಸಂಸ್ಕೃತಿ ಎಂದಾಗ, ಸೂಚಿಸುತ್ತಿರುವುದು ಒಂದು ವಿಶ್ವಾತ್ಮಕ ತತ್ತ್ವವನ್ನೇ ಹೊರತು ಕೇವಲ ಒಂದು ಜನಾಂಗಕ್ಕೆ ವಿಶಿಷ್ಟವಾದ ಸಂಸ್ಕೃತಿಯನ್ನು ರೂಪಿಸುವ ಅಂಶಗಳನ್ನಲ್ಲ. ವಿಭಜಿತ ವಿಶ್ವವನ್ನು ಒಂದುಗೂಡಿಸಿ ಅದಕ್ಕೆ ಶಾಂತಿ ನೀಡುವ ಸಾಮರ್ಥ್ಯ ಇರುವುದು ಈ ತತ್ತ್ವಕ್ಕೇ. ಈ ಅತಿ ಮುಖ್ಯ ತತ್ತ್ವವನ್ನು ಒಳಗೊಳ್ಳದಿದ್ದರೆ ಸಹಜೀವನ ಮತ್ತು ವಿಶ್ವ ಐಕ್ಯತೆ ಎನ್ನುವುದು ಕೇವಲ ಜಾಣತನದ ಘೋಷಣೆಗಳಾಗುತ್ತವೆ. ಇದು ನಮ್ಮ ಜೀವನ ಧ್ಯೇಯ. "ಬಿಳಿಯರ ಹೊರೆ"ಯನ್ನು ನಿರ್ವಹಿಸುತ್ತೇವೆಂಬ ನೆವದಲ್ಲಿ ತಮ್ಮ ಆಳ್ವಿಕೆಯನ್ನು ಸಮರ್ಥಿಸಿಕೊಂಡ ಯರೋಪಿನ ವಸಾಹತುದಾರರ ಧೋರಣೆಯಂತೆಯೇ ಈ ಜವಾಬ್ದಾರಿ ಹಾಗೂ ಕರ್ತವ್ಯನಿಷ್ಠೆ ಎಂದು ಭ್ರಮಿಸಬಾರದು. ಕಂದು ಬಣ್ಣದವರ ಜವಾಬ್ದಾರಿ ಎಂಬುದೇನೂ ಇಲ್ಲ. ಬೋಧಿಸುತ್ತಾ ವಿಶ್ವವನ್ನು ಸಮೀಪಿಸಲು ನಾವು ಬಯಸುವುದಿಲ್ಲ. ಸ್ವಾತಂತ್ರ್ಯ ಬಂದಾಗಿನಿಂದ ನಾವು ಸಾಕಷ್ಟು ಬೋಧಿಸಿದ್ದೇವೆ. ನಮ್ಮ ಪಾತ್ರ ಮೇಲ್ಪಂಕ್ತಿಯದೇ ಹೊರತು ಬೋಧಕನದಲ್ಲ. ಯಾವಾಗಲೂ ಇದೇ ನಮ್ಮ ಮಾರ್ಗವಾಗಿದೆ ಎನ್ನುತ್ತದೆ ಮನುಸ್ಮೃತಿ. ಒಂದು ಅಣುವಿನಷ್ಟು ಕ್ರಿಯೆಯು ಒಂದು ಮಣದಷ್ಟು ಬೋಧನೆಗಿಂತ ಲೇಸೆನ್ನುತ್ತದೆ ಒಂದು ಹಳೆಯ ಸುಭಾಷಿತ. ಅದರಲ್ಲಿ ನಮಗೆ ನೀತಿಯಿದೆ.

**ಭಾರತೀಯ ಸಂಸ್ಕೃತಿ ಎಂದರೇನು?**

ಈ ಸಣ್ಣ ಲೇಖನದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಮರ್ಯಾದೆಗಳನ್ನು ನಿಷ್ಕೃಷ್ಟವಾಗಿ ಪ್ರತಿಪಾದಿಸುವ ಮತ್ತು ವ್ಯಾಖ್ಯಾನಿಸುವ ಉದ್ದೇಶ ನನಗಿಲ್ಲ. ಅದು ಅಖಂಡವಾದುದೇ ಹೊರತು ಖಂಡಾತ್ಮಕವಾದುದಾಗಲೀ, ಸಣ್ಣ ಅಂಶವಾಗಲೀ ಅಲ್ಲ. ಅದೊಂದು ಸುಸಂಯೋಜಿತವಾದ ಜೈವಿಕ ಸಮಷ್ಟಿಯೇ ಹೊರತು ಸಂಯುಕ್ತವಾದುದಲ್ಲ. ಕೇವಲ ಸಮಾಜದ ಅಂಗವೆಂದು ಮಾತ್ರವಲ್ಲ, ಇಡೀ ಸೃಷ್ಟಿಯ ಅವಿಭಾಜ್ಯ ಅಂಗವಾಗಿ ಸಂಪೂರ್ಣ ಮಾನವನನ್ನು ಅದು ಪರಿಗಣಿಸುತ್ತದೆ. ಪಶ್ಚಿಮದ ಹೆಚ್ಚು ಪಾಲು ತತ್ತ್ವಗಳಲ್ಲಿ ಮಾನವನನ್ನು ಇಡೀ ವ್ಯವಸ್ಥೆಯ ಮೇಲ್ತುದಿಯಲ್ಲಿ

ಇರಿಸಲಾಗಿದೆಯಾದರೂ ಅಪಮಾನುಷಗೊಳಿಸುವ (ಯಾಂತ್ರೀಕರಿಸುವ) ಪ್ರಕ್ರಿಯೆಯು ಬಹು ವೇಗವಾಗಿ ನಡೆಯುತ್ತಿದೆ. ಜೀವನದ ತತ್ತ್ವವನ್ನು ತರ್ಕಬದ್ಧಗೊಳಿಸಿ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳನ್ನು ಮಾನವೀಕರಿಸಿ, ಮಾನವನನ್ನು ಮತ್ತೆ ಬದುಕಿಸಿ ಉದಾತ್ತೀಕರಿಸುವುದು ಅಗತ್ಯವಾಗಿದೆ. ಭಾರತೀಯ ಸಂಸ್ಕೃತಿ ಪ್ರಯತ್ನಿಸುತ್ತಿರುವುದು ಇದೇ ಆಗಿದೆ. ಈ ಬಗ್ಗೆ ಅಂತಿಮ ಮಾತನ್ನು ಹೇಳಿ ಆಗಿದೆ ಎನ್ನುವುದು ಬಡಾಯಿಯ ಮಾತಾಗುತ್ತದೆ. ಸಂಶೋಧನೆ ಮತ್ತು ತಪಾಸಣೆಯ ಪ್ರವೃತ್ತಿಗೆ ವಿರುದ್ಧವೆನಿಸುತ್ತದೆ. ಆದರೆ ಪ್ರಯತ್ನವಂತೂ ನಡೆಯುತ್ತಿದೆ. ಹಾಗೂ ಪ್ರಯತ್ನವನ್ನು ಮುಂದುವರೆಸಲು ಬೇಕಾದ ಧೈರ್ಯ ಮತ್ತು ಭರವಸೆಗಳನ್ನು ನೀಡುವಷ್ಟು ಯಶಸ್ಸೂ ಲಭಿಸಿದೆ.

ಭಾರತೀಯ ಸಂಸ್ಕೃತಿ ಚಲನಶೀಲವಾದುದೇ ಹೊರತು ಜಡವಾದುದಲ್ಲ. ನಿಜವಾಗಲೂ ಜೀವಂತವಾಗಿರುವುದೇ ಚಲನಶೀಲತೆ. ಬೆಳೆಯುವುದನ್ನು ಸ್ಥಗಿತಗೊಳಿಸಿದಾಗ ನಿಷ್ಕ್ರಿಯತೆ ತಲೆದೋರುತ್ತದೆ. ಜಡತೆಯು ವಿಯೋಜನೆಗೆ ಮತ್ತು ಸಾವಿಗೆ ದಾರಿಮಾಡಿಕೊಡುತ್ತದೆ. ನಮ್ಮ ಭವ್ಯವಾದ ಗತಕಾಲ ಹಾಗೂ ದರಿದ್ರವಾದ ವರ್ತಮಾನದಿಂದಾಗಿ ಸಮಾಜದಲ್ಲಿ ಎರಡು ಪ್ರವೃತ್ತಿಗಳು ಕಾರ್ಯಪ್ರವೃತ್ತವಾಗಿರುವುದು ಕಂಡುಬರುತ್ತದೆ. ಅವುಗಳಲ್ಲಿ ಒಂದು– ಹಿಂದಿನದ್ದನ್ನು ಎಂದರೆ ಈಗ ಹಾಲಿ ಇರುವುದನ್ನು ಪವಿತ್ರವಾದದ್ದೆಂದು, ಪ್ರಶ್ನಿಸಬಾರದ್ದೆಂದು, ಎಂದೂ ಬದಲು ಮಾಡಬಾರದ್ದೆಂದು ಸ್ವೀಕರಿಸುತ್ತದೆ. ಮತ್ತೊಂದು– ಹಳೆಯ ಪ್ರತಿಯೊಂದನ್ನೂ ಖಂಡಿಸುತ್ತದೆ ಹಾಗೂ ಬದಲಾವಣೆಯ ಗುರಿ ಮತ್ತು ಸ್ವರೂಪಗಳನ್ನು ಪರಗಣಿಸದೆ ಬದಲಾವಣೆಗಾಗಿ ಹಂಬಲಿಸುತ್ತದೆ. ಈ ಎರಡು ಪ್ರವೃತ್ತಿಗಳ ವಿಷಯದಲ್ಲೂ ಜನಸಂಘದ ಸಹಮತವಿಲ್ಲ. ಗತಕಾಲವು ನಮಗೆ ಸ್ಫೂರ್ತಿ ನೀಡಲಿ. ಆದರೆ ನಾವು ಪ್ರಗತಿಪರವಾಗಿರಬೇಕು. ಹಿಂದಿನ ಪೀಳಿಗೆಯವರು ನಮಗೆ ಬಿಟ್ಟುಹೋಗಿರುವುದನ್ನು ಸಂರಕ್ಷಣ ಮಾಡಿಕೊಂಡರೆ ಅದರಿಂದ ನಮ್ಮ ಪೂರ್ವಜರಿಗೆ ಉಪಕಾರ ಮಾಡಿದಂತೇನೂ ಅಲ್ಲ. ಗುಲಾಮಗಿರಿಯೂ ನಮಗೆ ಹಿಂದಿನವರಿಂದ ಬಳುವಳಿಯಾಗಿಯೇ ಬಂದಿತ್ತು. ಆ ಆಸ್ತಿಯಿಂದ ಬಿಡುಗಡೆ ಹೊಂದಲು ಮಾನವ ಶ್ರಮಪಟ್ಟಿದ್ದಾನೆ. ಅಂತಹ ಇನ್ನೂ ನೂರು ಆಸ್ತಿಗಳಿರಬಹುದು. ಅವುಗಳನ್ನು ನಿವಾರಣೆ ಮಾಡಿಕೊಳ್ಳುವುದೊಂದೇ ಪರಿಹಾರ. ಬಾಧ್ಯತೆಗಳಿಂದ ಬಿಡುಗಡೆ ಪಡೆದುಕೊಳ್ಳುವುದು ಕೂಡಲೇ ಆಗಬೇಕು ಮತ್ತು ಆಸ್ತಿಪಾಸ್ತಿಗಳನ್ನು ರಕ್ಷಿಸಿಕೊಳ್ಳುವುದಷ್ಟೇ ಅಲ್ಲ, ಅವುಗಳನ್ನು ವೃದ್ಧಿಸಿಕೊಳ್ಳಬೇಕು. ಕೇವಲ ಸಂರಕ್ಷಣೆಯ ಬಗ್ಗೆ ಚಿಂತಿಸುವವರು ಪ್ರಕೃತಿಯ ನಿಯಮಗಳನ್ನು ಮರೆಯುತ್ತಾರೆ.

**ನಮಗೆ ಸ್ಫೂರ್ತಿ ನೀಡುವವರು**

ತಮ್ಮ ವೈಯಕ್ತಿಕ ಲಾಭದ ನಿರೀಕ್ಷೆಯಿಂದಾಗಿ, ಇಲ್ಲವೆ ಹೊಸ ಗಾಳಿಯನ್ನು

ಉಸಿರಾಡುವ ಸಾಮರ್ಥ್ಯವಿಲ್ಲದೆ, ಬದಲಾವಣೆಯನ್ನು ವಿರೋಧಿಸುವವರು ಬದಲಾವಣೆಯನ್ನು ಆಗ್ರಹಪಡಿಸುವ ಯಾವುದೇ ಹೆಜ್ಜೆಗೆ ಒಂದು ಕೆಟ್ಟ ಹೆಸರಿಡುತ್ತಾರೆ. ಧರ್ಮವು ಆಳ್ವಿಕೆ ನಡೆಸಿದಾಗ, ಅದು "ಪಾಷಂಡಮತ" ಎನಿಸಿತು. ಕಮ್ಯೂನಿಸ್ಟರು ಅದನ್ನು "ಕಮ್ಯೂನಿಸ್ಟ್ ಪಂಥ ಚ್ಯುತಿ" "ಸುಧಾರಣಾವಾದ" ಎಂದು ಮುಂತಾಗಿ ಕರೆದರು. ಇನ್ನು ಕಮ್ಯೂನಿಸ್ಟ್–ವಿರೋಧಿಗಳಿಗೆ ಬಂದರೆ, ಅವರ ಚಿಂತನೆಯಿಂದಲೇ ಒಂದು ಕ್ರಮವನ್ನು ಶಾಶ್ವತವಾಗಿ ಹೊರಗಿಡಲು, ಅದನ್ನು "ಕಮ್ಯೂನಿಸ್ಟ್" ಎಂದು ಕರೆದರು. ಕಲಬೆರಕೆಯ ಹಾಗೂ ಖೋಟಾ ವಸ್ತುಗಳ ಉತ್ಪಾದನೆಯ ಈ ಯುಗದಲ್ಲಿ ಉತ್ಪನ್ನಗಳನ್ನು ಅವುಗಳ ಹುರುಳಿನಿಂದ ಮೌಲ್ಯಮಾಪನ ಮಾಡೋಣ. ಅವುಗಳ ಲೇಬಲ್ಲುಗಳಿಂದಲ್ಲ (ತಲೆಪಟ್ಟಿ, ಹೆಸರು ಪಟ್ಟಿ). ನಾವು ವಿಪರೀತವಾದ ಭೀತಿಗಳಿಂದಲೂ ಅತ್ಯಾಸಕ್ತಿಗಳಿಂದಲೂ ಮುಕ್ತವಾಗಿರೋಣ. ಹಿಂದೂ ಧರ್ಮದ ಪ್ರಾಚೀನ ಮೌಲ್ಯಗಳನ್ನು ನಾಶಪಡಿಸಿ, ಇಸ್ಲಾಂ ಧರ್ಮದ ಅಥವಾ ಕ್ರಿಶ್ಚಿಯಾನಿಟಿಯ ಸಂಪ್ರದಾಯಗಳನ್ನು ತಮ್ಮ ಮೇಲೆ ಹೊರಿಸುವ ಹೇಯವಾದ ಸಂಚು ಎಂದು ಸಂಶಯಪಟ್ಟು, ಪ್ರತಿಯೊಂದು ಸಾಮಾಜಿಕ ಬದಲಾವಣೆಯನ್ನೂ ಪ್ರತಿರೋಧಿಸುವವರು ಭಾರತದಲ್ಲಿ ಇದ್ದಾರೆ. ಕಮ್ಯೂನಿಸಮ್ಮಿನ ವಿರುದ್ಧದ ಪವಿತ್ರವಾದ ಧರ್ಮಯುದ್ಧ ಎಂಬ ಭಾವನೆಯಲ್ಲಿ ಆರ್ಥಿಕ ಸುಧಾರಣೆಗಳನ್ನು ಪ್ರತಿರೋಧಿಸಲಾಗುತ್ತದೆ. ಇವೆಲ್ಲವೂ ಒಂದು ನಕಾರಾತ್ಮಕ ದೃಷ್ಟಿಕೋನವನ್ನು ಒಂದು ಸಿನಿಕತನ, ಆಶಾಭಂಗ ಮತ್ತು ನಿಷ್ಕ್ರಿಯತೆಯ ಭಾವವನ್ನು ಹುಟ್ಟುಹಾಕುತ್ತವೆ. ಜೀವನದಲ್ಲಿ ಸ್ಪಷ್ಟ ಧ್ಯೇಯ ಇಲ್ಲದವರ ಧೋರಣೆ ಇದು. ಒಂದು ಮುಕ್ತವಾದ ರಾಷ್ಟ್ರಕ್ಕೆ, ಒಂದು ಪ್ರಾಚೀನ ರಾಷ್ಟ್ರಕ್ಕೆ ಹಾಗೂ ಓಜಸ್ವಿಯಾದ ಜನಾಂಗಕ್ಕೆ ಇದು ಅನುಚಿತವಾದುದು. ನಮ್ಮ ಜನರ ಈ ಪುನರುಜ್ಜೀವನಕ್ಕೆ ತಕ್ಕ ಸಾಧನವಾಗಬೇಕು ಭಾರತೀಯ ಜನಸಂಘ. ನಾವು ಕೇವಲ ಒಂದು ಪಕ್ಷ ಕಟ್ಟುವುದಿಲ್ಲ. ಒಂದು ಚಳುವಳಿಯನ್ನು ಮುನ್ನಡೆಸಬೇಕಾಗಿದೆ.

ಇದು ಹೊಸ ಚಳವಳಿಯೇನಲ್ಲ. ಕಳೆದ ಶತಮಾನದಲ್ಲಿ ಮಹರ್ಷಿ ದಯಾನಂದ. ಸ್ವಾಮಿ ವಿವೇಕಾನಂದ, ಲೋಕಮಾನ್ಯ ತಿಲಕ್, ಡಾ. ಹೆಡ್ಗೆವಾರ್, ಮಹಾಮನ ಮದನ್ ಮೋಹನ್ ಮಾಲವೀಯ ಮತ್ತು ಮಹಾತ್ಮ ಗಾಂಧಿ ಅವರೆಲ್ಲ ಈ ಕ್ಷೇತ್ರದಲ್ಲಿ ಪ್ರವರ್ತಕರಾಗಿದ್ದಾರೆ. ಈ ಪರಂಪರೆಯನ್ನೇ ನಾವು ಮುಂದಕ್ಕೆ ಒಯ್ಯಬೇಕಾಗಿರುವುದು. ಅದು ನಮ್ಮ ಸ್ವಾತಂತ್ರ್ಯಕ್ಕೆ ಒಂದು ಅರ್ಥ ನೀಡಬಲ್ಲದು. ಹಾಗೂ ಏನನ್ನು ಒಪ್ಪಿಕೊಳ್ಳಬೇಕು, ಏನನ್ನು ನಿರಾಕರಿಸಬೇಕು ಮತ್ತು ಏನನ್ನು ಅಭಿವ್ಯಕ್ತಿಗೊಳಿಸಬೇಕು ಎಂದು ಅದೇ ನಿರ್ಧರಿಸುತ್ತದೆ. ಭಾರತೀಯ ಜನಸಂಘವು ಒಂದು ಜೀವಂತ ತತ್ತ್ವವಾಗಿರಬೇಕು. ಒಂದು ವೀರ್ಯವತ್ತಾದ ಚಳುವಳಿಯಾಗಬೇಕು. ಶಿಸ್ತು ಶ್ರದ್ಧೆಗಳ ನುರಿತ ತಂಡವುಳ್ಳ ಹಾಗೂ ಜನತೆಯಷ್ಟೇ ವಿಸ್ತಾರವಾದ ಬುನಾದಿಯುಳ್ಳ

ಜಾಗರೂಕ ಪಕ್ಷವಾಗಬೇಕು. ಅದೊಂದೇ ಅದರ ಅಸ್ಥಿತ್ವಕ್ಕೆ ಒಂದು ಅರ್ಥ ಮತ್ತು ಅದರ ಸಾಧನೆಗಳ ಅಳತೆಗೋಲು.

ಮೂಲ : ಆರ್ಗನೈಸರ್, ದೀಪಾವಳಿ, ೧೯೬೪

## ಕಮ್ಯೂನಿಸ್ಟ್ ಏಜೆಂಟರಿಂದ ಸೋಂಕಿಗೊಳಗಾದ ವಿದೇಶೀ ಕಾರ್ಯಾಲಯ

ಭಾರತ ಸರ್ಕಾರದ ಆಶಯಕ್ಕೆ ಮಣಿದು ನೇಪಾಳದ ರಾಜಾ ಮಹೇಂದ್ರ ಅವರು ನಾಗಪುರಕ್ಕೆ ಅವರ ಉದ್ದೇಶಿತ ಭೇಟಿಯನ್ನು ರದ್ದುಗೊಳಿಸಿದ್ದಾರೆ. ಭಾರತ ಮತ್ತು ನೇಪಾಳಗಳ ಜನತೆಯನ್ನು ಒಂದುಗೂಡಿಸುವ ಹಿಂದುತ್ವದ ಎಳೆಗಳನ್ನು ಬಲಪಡಿಸುವ ಅವಕಾಶವೊಂದನ್ನು ದೇಶ ಕಳೆದುಕೊಂಡಿದೆ. ಭಾರತ ಸರ್ಕಾರವು ಒಂದು ಅತ್ಯಂತ ಒರಟಾದ ಮತ್ತು ವ್ಯವಹಾರ ಜ್ಞಾನವಿಲ್ಲದ ರೀತಿಯಲ್ಲಿ ನಡೆದುಕೊಂಡಿದೆ. ಅದು ದೇಶದ ಹಿತರಕ್ಷಣೆಯ ಬಗ್ಗೆಯಾಗಲಿ ಅಥವಾ ಒಬ್ಬ ಸ್ನೇಹಪರ ವಿದೇಶಿ ಗಣ್ಯ ವ್ಯಕ್ತಿಗೆ ತೋರಿಸಬೇಕಾದ ಸಾಮಾನ್ಯ ಸೌಜನ್ಯದ ವಿಷಯದಲ್ಲಾಗಲಿ ಕಾಳಜಿ ವಹಿಸಿಲ್ಲ. ಎಲ್ಲಕ್ಕಿಂತಲೂ, ವಿದೇಶಿ ವ್ಯವಹಾರಗಳ ಸಚಿವಾಲಯುವು ವಿಷಯುದ ಅರಿವೇ ಇಲ್ಲದಂತೆ ನಟಿಸುತ್ತಿರುವುದು ಖಂಡನಾರ್ಹವಾಗಿದೆ; ಸತ್ಯಮೇವ ಜಯತೇ ಎಂಬುದನ್ನು ತನ್ನ ಧ್ಯೇಯ ವಾಕ್ಯವೆಂದು ಘೋಷಿಸುತ್ತಲೇ ಅದು ಸ್ಪಷ್ಟವಾದ ಸುಳ್ಳುಗಳಲ್ಲಿ ತೊಡಗಿದೆ.

ಹುಯಿಲೆಬ್ಬಿಸಿದ ಕಮ್ಯೂನಿಸ್ಟ್ ಪತ್ರಕರ್ತರ ತಾಳಕ್ಕೆ ತಕ್ಕಂತೆ ವಿದೇಶೀ ಕಚೇರಿಯು ಕುಣಿಯುತ್ತಿದೆ ಎಂಬುದು ಸ್ಪಷ್ಟವಾಗಿದೆ. ಭಾರತ ಮತ್ತು ನೇಪಾಳಗಳ ನಡುವಿನ ಸಂಬಂಧಗಳು ಸುಧಾರಿಸಲು ಪ್ರಾರಂಭವಾದಾಗಿನಿಂದ ಕಮ್ಯೂನಿಸ್ಟರಿಗೆ ಸಮಾಧಾನವೇ ಇಲ್ಲ. ಭಾರತ ಮತ್ತು ನೇಪಾಳ, ಎರಡು ಕಡೆಗಳಲ್ಲೂ ಅವರು ಭಾರತ ಸರ್ಕಾರಕ್ಕೆ ಕಾಟ ಕೊಡಲು ಪ್ರಯತ್ನಿಸುತ್ತಿದ್ದಾರೆ. ವಿದೇಶೀ ಕಚೇರಿಯೂ ಕೂಡ ಈ ಪೀಕಿಂಗ್ ದೇಶಭಕ್ತರಿಗೆ ಅನುಕೂಲವಾಗಿಯೇ ಇದೆ ಎಂಬುದು ನಮ್ಮ ತಿಳಿವಿಗೆ ಮೀರಿದ್ದು. ವಿದೇಶಾಂಗ ಸಚಿವಾಲಯವು ಅದರ ಎಲ್ಲ ಚಟುವಟಿಕೆಗಳಲ್ಲೂ ಸರ್ಕಾರದ ವಿದೇಶೀ ನೀತಿಯನ್ನು ದುರ್ಬಲಗೊಳಿಸಿ ಅದಕ್ಕೆ ಒಂದು ಕಮ್ಯೂನಿಸ್ಟ್ ಪರವಾದ ತಿರುವನ್ನು ನೀಡಿದೆಯಾದ್ದರಿಂದ ಅದರ ಸಂಪೂರ್ಣವಾದ ತಪಾಸಣೆ ನಡೆಸಬೇಕೆಂದು ನಾನು ಆಗ್ರಹಿಸುತ್ತೇನೆ.

ನಾಗಪುರದ ಸಂಘಟನೆಗೆ ಹಾಜರಿರಬಾರದೆಂದು ರಾಜರನ್ನು ತಡೆಯುವುದರ ಮುಖಾಂತರ ಭಾರತ ಸರ್ಕಾರವು ರಾಷ್ಟ್ರದ ಹಿತಕ್ಕೆ ಹಿನ್ನಡೆಯುಂಟು ಮಾಡಿದೆ. ಭಾರತ–ನೇಪಾಳಗಳ ಸೌಹಾರ್ದತೆಯ ಗತಿಯನ್ನು ಕುಂಠಿತಗೊಳಿಸಿದೆ ಮತ್ತು

ಭಾರತ, ನೇಪಾಳ ಮತ್ತು ವಿದೇಶಗಳಲ್ಲಿರುವ ಹಿಂದೂಗಳ ಭಾವನೆಗಳಿಗೆ ನೋವುಂಟು ಮಾಡಿದೆ. ಇದೇ ಸರ್ಕಾರವು ಪೋಪರನ್ನು ಸ್ವಾಗತಿಸಿ ಅತ್ಯಂತ ಹೇಸಿಕೆ ಹುಟ್ಟಿಸುವಂತೆ ವರ್ತಿಸಿತ್ತು. ಆದರೆ ಅದು ಹಿಂದೂಗಳ ಭಾವನೆಗಳನ್ನು ಸ್ವಲ್ಪವೂ ಗೌರವಿಸಿಲ್ಲ. ಸ್ವಾಭಾವಿಕವಾಗಿಯೇ ಸರ್ಕಾರದ ಈ ಧೋರಣೆಯ ಬಗ್ಗೆ ಜನತೆಯಲ್ಲಿ ಆಳವಾದ ಅಸಮಾಧಾನ ತಲೆದೋರಿದೆ. ಸರ್ಕಾರದ ಕಾರ್ಯನೀತಿಯನ್ನು ಹಾಗೂ ಅದರ ಕಾರ್ಯವಿಧಾನವನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಹಾಗೂ ಸರ್ಕಾರವು ರಾಜರಿಗೆ, ಆರ್.ಎಸ್.ಎಸ್. ಮುಖಂಡರಿಗೆ ಮತ್ತು ಎಲ್ಲ ಹಿಂದೂಗಳಿಗೆ ಸೂಕ್ತ ಕ್ಷಮಾಯಾಚನೆ ಸಲ್ಲಿಸಬೇಕೆಂದು ನಾನು ಆಗ್ರಹಿಸುತ್ತೇನೆ.

ಮೂಲ : ಆರ್ಗನೈಸರ್, ೧೮ ಜನರಿಗೆ ೧೯೬೫

## ಹಿಂದಿ ಬಂದಿದೆ

೧೯೬೫ರ ಜನವರಿ ೨೬ರಿಂದ ದೇವನಾಗರೀ ಲಿಪಿಯ ಹಿಂದಿಯು ಸಂಯುಕ್ತ ಭಾರತದ "ಪ್ರಮುಖ" ಭಾಷೆಯಾಗಲಿದೆ. ಸಂವಿಧಾನದ ಷರತ್ತುಗಳನ್ನು ಪಾಲಿಸಿದ್ದರೆ "ಪ್ರಮುಖ" ಎಂಬ ವಿಶೇಷಣವನ್ನು ಬಿಟ್ಟು ಹಿಂದಿಯು ರಾಷ್ಟ್ರದ ಏಕೈಕ ಅಧಿಕೃತ ಭಾಷೆಯಾಗಬೇಕಾಗಿತ್ತು. ಅದರೆ ಎಲ್ಲ ವಿಷಯಗಳಲ್ಲೂ ವಿದೇಶೀ ಸಹಕಾರದಲ್ಲಿ ನಂಬಿಕೆಯಿಟ್ಟಿರುವ ಸರ್ಕಾರವು ೧೯೬೫ರ ಜನವರಿ ೨೬ರ ನಂತರವೂ ಇಂಗ್ಲಿಷನ್ನು ಒಂದು ಸಹ ಭಾಷೆಯಾಗಿ ಮುಂದುವರೆಸಲು ನಿರ್ಧರಿಸಿತು. ರಾಷ್ಟ್ರೀಯತಾವಾದಿಗಳಿಗೆ ಲಭಿಸುವ ಒಂದೇ ಸಮಾಧಾನವೆಂದರೆ ಆ ದಿನದಿಂದ ಇಂಗ್ಲಿಷ್ ಕೇವಲ ಒಂದು ಸಹಭಾಷೆಯಾಗಲಿದೆ. ಆದರೆ ವಾಸ್ತವವಾಗಿ ಪ್ರಧಾನ ಭಾಷೆಗೆ ಸಂಬಂಧಿಸಿದಂತೆ ಸಹಭಾಷೆಯು ಯಾವ ಸ್ಥಾನದಲ್ಲಿ ಇರುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

**ಯಾಕೆ ಕೆಲವರು ಹಿಂದಿಯನ್ನು ವಿರೋಧಿಸುತ್ತಾರೆ**

ಹಿಂದಿಯ ಪರ ಮತ್ತು ವಿರೋಧದ ವಾದಗಳಿಗೆ ನಾನು ಹೋಗಬೇಕಿಲ್ಲ. ಹಿಂದಿಯನ್ನು ವಿರೋಧಿಸುವವರಿಗೆ ಮನವರಿಕೆ ಮಾಡಿಕೊಡುವುದು ಕಷ್ಟಸಾಧ್ಯ. ಅವರಲ್ಲಿ ಎರಡು ವರ್ಗಗಳು. ಒಂದು ವರ್ಗದವರು ವಿರೋಧಿಸುವುದು ಕೇವಲ ಹಿಂದಿಯನ್ನಲ್ಲ, ಏಕ ರಾಷ್ಟ್ರ, ಏಕ ಸಂಸ್ಕೃತಿ ಮತ್ತು ಏಕ ದೇಶಗಳ ವಿಚಾರವನ್ನೇ ಅವರು ವಿರೋಧಿಸುತ್ತಾರೆ. ಭಾರತ ಮತ್ತೊಮ್ಮೆ ಭಾಗವಾಗಲೆಂದು ಅವರು ಬಯಸುತ್ತಾರೆ. ಆದ್ದರಿಂದ ಅವರು ಹಿಂದಿಯನ್ನು ಭಾರತೀಯರ ಮೇಲೆ ಬಾರತೀಯರು ನಡೆಸುವ ಸಾಮ್ರಾಜ್ಯಶಾಹಿ ಆಡಳಿತದ ವಾಹಕವೆಂದು ಪರಿಗಣಿಸುತ್ತಾರೆ.

ಅವರಿಗೆ ಅವರದ್ದೇ ಆದ ರಾಜಕೀಯ ಆಕಾಂಕ್ಷೆಗಳಿವೆ. ಸೂಕ್ತ ಮಾರ್ಗದಲ್ಲಿ ನಿಶ್ಚಿತ ಪರಿಶ್ರಮದ ಅವಶ್ಯಕತೆಯಿರುವ ಅವರ ಪ್ರತ್ಯೇಕತಾವಾದಿ ಆಕಾಂಕ್ಷೆಗಳ ನಿರರ್ಥಕತೆಯನ್ನು ಅವರಿಗೆ ತಿಳಿಸಕೊಡದ ಹೊರತು ಅವರ ಮನವೊಲಿಸಲಾಗದು. ರಿಯಾಯಿತಿಗಳು ಅವರನ್ನು ಇನ್ನಷ್ಟು ಹುರಿದುಂಬಿಸುತ್ತವೆ. ಉಪಶಮನ ಮಾಡಲೆಳಸಿದರೆ ಅವರ ಬಯಕೆ ಇನ್ನಷ್ಟು ಕೆರಳುತ್ತದೆ. ಅವರೊಂದಿಗೆ ಹೋರಾಡಿ ಅವರನ್ನು ಸೋಲಿಸಲೇಬೇಕು.

ಅಂತರಂಗದಲ್ಲಿ ರಾಷ್ಟ್ರೀಯತಾವಾದಿಗಳಾಗಿರುವ, ವಿರೋಧಿಗಳ ಇನ್ನೊಂದು ವರ್ಗವಿದೆ. ಅವರಲ್ಲಿ ಕೆಲವರು ಸಂಸ್ಕೃತಕ್ಕಾಗಿ ವಾದಿಸುತ್ತಾರೆ. ಅವರ ವಾದದಲ್ಲಿ ಬಲವಾದ ಹುರುಳಿದೆ. ಆದರೆ ಹಿಂದಿಯನ್ನು ವಿರೋಧಿಸುವುದರಿಂದ, ಇಲ್ಲವೇ ಅದರ ಬಳಕೆಯನ್ನು ಮುಂದೂಡುವುದರಿಂದ ಅವರು ಸಂಸ್ಕೃತಕ್ಕೇನೂ ಅನುಕೂಲ ಮಾಡಿದಂತಾಗುವುದಿಲ್ಲ. ಸಂಸ್ಕೃತದ ಪರವಾಗಿ ಬಲವಾದ ಕಾರಣಗಳೇ ಇದ್ದರೂ ಇಂದಿನ ಸಂದರ್ಭದಲ್ಲಿ ಅದರ ಸ್ಥಾನ ಅತ್ಯಂತ ದುರ್ಬಲವಾಗಿದೆ. ಹಿಂದಿಯ ಬಗ್ಗೆಯಾದರೋ ಅದರ ಬದ್ಧ ದ್ವೇಷಿಗಳೂ ಕೂಡಾ ಅದನ್ನು ಕಲಿಯುತ್ತಿದ್ದಾರೆ. ಏಕೆಂದರೆ ಎಷ್ಟೋ ವರ್ಷಗಳಿಂದ ಅದು ಒಂದು ನಿರ್ದಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಅದನ್ನು ಯಾರೂ ಕಡೆಗಣಿಸಲಾಗದು. ವಸ್ತುಸ್ಥಿತಿ ಹೀಗಿರುವಾಗ ಇಂಗ್ಲಿಷ್ ಮುಂದುವರೆದು ಪ್ರಬಲವಾಗಲು ಅವಕಾಶ ನೀಡಿದರೆ, ಅಧ್ಯಯನದ ವಿಷಯಗಳಲ್ಲಿ ಸಂಸ್ಕೃತಕ್ಕೆ ಅತ್ಯಂತ ಕನಿಷ್ಠ ಸ್ಥಾನ ದೊರಕುತ್ತದೆ. ತ್ರಿಭಾಷಾ ಸೂತ್ರದಲ್ಲಿ ಹಿಂದಿ, ಇಂಗ್ಲಿಷ್ ಮತ್ತು ಪ್ರಾಂತೀಯ ಭಾಷೆಗಳು ಸಹಜವಾಗಿಯೇ ಸಂಸ್ಕೃತವನ್ನು ಹೊರದೂಡುತ್ತವೆ. ಅದು ಪ್ರಾಂತೀಯ ಭಾಷೆಗಳಿಗೂ ಹಾನಿಕಾರಕ. ಆದರೆ ಜನ ಮಾಡುತ್ತಿರುವುದು ಅದನ್ನೇ.

ಹಿಂದಿ ಬಳಕೆಗೆ ಬಂದರೆ, ಇಂಗ್ಲಿಷಿಗಾಗಿ ಈಗಿರುವ ಅವಶ್ಯಕತೆ ಇರುವುದಿಲ್ಲ. ಒಂದು ಅಧ್ಯಯನ ವಿಷಯವಾಗಿ ಇಂಗ್ಲಿಷನ್ನು ಕಲಿಸುವುದು ಮುಂದುವರೆದರೂ ಕೂಡ ಎಲ್ಲರಿಗೂ ಆ ಭಾಷೆಯ ಪ್ರಾವೀಣ್ಯದ ಅಗತ್ಯ ಇರುವುದಿಲ್ಲ. ಆಗ ಪ್ರಾಂತೀಯ ಭಾಷೆಯ ಜೊತೆಗೆ, ಹಿಂದಿ ಮತ್ತು ಸಂಸ್ಕೃತಗಳೆರಡನ್ನೂ ಹೊಂದಿರುವ ಒಂದು ಜಂಟೀ ವಿಷಯದ ರೂಪದಲ್ಲಿ ಕಲಿಸಬಹುದು.

ಎಲ್ಲ ಭಾಷೆಗಳೂ ರಾಷ್ಟ್ರೀಯ ಭಾಷೆಗಳೇ ಆದರೂ, ಸಂಸ್ಕೃತವು ಭಾರತದ ರಾಷ್ಟ್ರೀಯ ಭಾಷೆಯಾಗಿದೆ. ಆದರೆ ಹಿಂದಿ ಜನರು ಸಾಮಾನ್ಯವಾಗಿ ಬಳಸುವ ಸಂಪರ್ಕ ಭಾಷೆಯಾಗಿದೆ. ಹಾಗೂ ಕೇಂದ್ರಾಡಳಿತದ ಬಹುಪಾಲು ಕಚೇರಿ ಕೆಲಸಗಳಿಗೆ ಅದು ಮಾತ್ರ ಬಳಸಲ್ಪಡಬಹುದು. ರಾಜ್ಯಗಳ ಕಚೇರಿ ಕೆಲಸಗಳಿಗಂತೂ ಪ್ರಾಂತೀಯ ಭಾಷೆಗಳು ಬಳಸಲ್ಪಡುತ್ತವೆ. ಆದರೆ ಕೇಂದ್ರದ ಅನೇಕ ವಿಭಾಗಗಳಲ್ಲಿ ಒಂದು ರೀತಿಯ ದ್ವಿಭಾಷಾ ಪದ್ಧತಿ ಇರಲೇಬೇಕಾಗುತ್ತದೆ. ಅಂಚೆ ಮತ್ತು ತಂತೀ ವಿಭಾಗ,

ಕಂದಾಯ ಇಲಾಖೆ, ರೈಲ್ವೇ ಇಲಾಖೆ ಮುಂತಾದವುಗಳಲ್ಲಿ ಕೇಂದ್ರದ ಮತ್ತು ಪ್ರಾಂತ್ಯದ ಭಾಷೆಗಳಲ್ಲಿ ಕೆಲಸ ನಡೆಸಬೇಕಾಗುತ್ತದೆ. ಎಲ್ಲ ಔಪಚಾರಿಕ ಸಂದರ್ಭಗಳಿಗೆ ಹಾಗೂ ವಿದೇಶಗಳಲ್ಲಿ ಗೌರವ ಪ್ರದಾನ ಸಂದರ್ಭಗಳಲ್ಲಿ ಸಂಸ್ಕೃತವನ್ನು ಬಳಸಬೇಕು.

**ಪರ್ಶಿಯನ್ ತೆರಳಿದ ಮಾರ್ಗದಲ್ಲೇ ಏಕೆ ಹೋಗಬೇಕು.**

ಈ ವ್ಯವಸ್ಥೆಯ ಬಗ್ಗೆ ಹಾಗೂ ಮೂರು ಭಾಷೆಗಳ ಪರಸ್ಪರ ಸಂಬಂಧದ ಬಗ್ಗೆ ಯಾವುದೇ ಅನುಮಾನ ಬೇಡ. ವಾಸ್ತವವಾಗಿಯೂ ಇತಿಹಾಸವೇ ಇದನ್ನು ರೂಪಿಸಿದೆ. ಅಂತೆಯೇ ಮುಂದುವರೆದರಾಯಿತು. ಸರ್ಕಾರವು ಜನತೆಯನ್ನು ಅನುಸರಿಸುವುದಾದಲ್ಲಿ, ಜನ ಭಾಷೆಯ ಬಗ್ಗೆ ಏನು ಮಾಡುವರೋ ಸರ್ಕಾರವೂ ಅದನ್ನೇ ಮಾಡಬೇಕು. ಜನತೆಯಿಂದಾಗಿಯೇ ಸಂಸ್ಕೃತವು ಜೀವಂತವಾಗಿ ಉಳಿದಿದೆ ಹಾಗೂ ಅವರ ಬದುಕಿನಲ್ಲಿ ಒಂದು ಪ್ರಮುಖ ಸ್ಥಾನದಲ್ಲಿದೆ. ಜನತೆಯ ಪರಿಶ್ರಮದಿಂದಾಗಿಯೇ ಹಿಂದಿ ಭಾರತದ ಸಂಪರ್ಕಭಾಷೆಯಾಗಿದೆ. ಇಂಗ್ಲಿಷನ್ನು ಜನತೆಯ ಮೇಲೆ ಹೊರಿಸಲು ಸರ್ಕಾರವು ತನ್ನಿಂದ ಸಾಧ್ಯವಾದದ್ದನ್ನೆಲ್ಲ ಮಾಡಿತು. ಆದರೆ ೧೫೦ ವರ್ಷಗಳ ನಿರಂತರ ಪ್ರಯತ್ನದ ನಂತರವೂ ಎರಡು ಶತಾಂಶಕ್ಕಿಂತ ಹೆಚ್ಚು ಮಂದಿ ಅದನ್ನು ಕಲಿಯಲು ಸಾಧ್ಯವಾಗಲಿಲ್ಲ. ಆ ಪೈಕಿ ಮಾತನಾಡಬಲ್ಲವರು, ಕೆಲಸ ಮಾಡಬಲ್ಲವರು ಇನ್ನೂ ಕಡಿಮೆ.

ಸಂವಿಧಾನವನ್ನು ಅಳವಡಿಸಿಕೊಂಡಾಗಿನಿಂದ ಭಾರತದ ಜನ ತಮ್ಮ ರಾಷ್ಟ್ರ ನಿರ್ಮಾಣದ ಕೆಲಸವನ್ನು ನಿಧಾನ ಮಾಡಿದ್ದಾರೆ ಮತ್ತು ಎಲ್ಲವನ್ನೂ ಸರ್ಕಾರದ ಮೇಲೆ ಬಿಟ್ಟಿದ್ದಾರೆ. ಸರ್ಕಾರಗಳು ಎಂದೂ ರಾಷ್ಟ್ರ ನಿರ್ಮಾಣ ಮಾಡುವುದಿಲ್ಲ. ಅವರು ಅದನ್ನು ಒಳ್ಳೆಯ ಇಲ್ಲವೇ ಕೆಟ್ಟ ರೀತಿಯಲ್ಲಿ ಆಳಬಲ್ಲರು ಮಾತ್ರ. ರಾಷ್ಟ್ರ ಏನಿದ್ದರೂ ಜನರಿಂದಲೇ ರೂಪಿತವಾಗಬೇಕು. ಭಾಷೆಯ ವಿಷಯದಲ್ಲೂ ಅಷ್ಟೆ. ಒಂದು ನಿರ್ಣಾಯಕ ಪಾತ್ರ ವಹಿಸಬೇಕಾದವರು ಜನರೇ. ಅವರಾಡುವ ಮಾತೇ ಒಂದು ಭಾಷೆಯಾಗುತ್ತದೆ ಮತ್ತು ಸರ್ಕಾರ ಆ ಭಾಷೆಯನ್ನು ಬಳಸಲೇಬೇಕಾಗುತ್ತದೆ.

ಭಾಷೆಗಳ ವಿಷಯದಲ್ಲಿ ಸರ್ಕಾರ ಆದೇಶ ನೀಡಬಹುದಾಗಿದ್ದಲ್ಲಿ ಬಹಳ ಹಿಂದೆಯೇ ಪರ್ಶಿಯನ್ ಈ ದೇಶದ ಭಾಷೆಯಾಗುತ್ತಿತ್ತು. ಶತಮಾನಗಳ ಕಾಲ ದೆಹಲಿಯ ಆಡಳಿತಗಾರರು ಪರ್ಶಿಯನ್ ಭಾಷೆಯಲ್ಲಿ ವ್ಯವಹಾರ ನಡೆಸುತ್ತಿದ್ದರು. ಆದರೆ ಜನ ತಮ್ಮ ತಮ್ಮ ಭಾಷೆಗಳಲ್ಲೇ ಕಾರ್ಯ ನಿರ್ವಹಿಸುತ್ತಿದ್ದರು. ಕೊನೆಗೆ ಮುಘಲ್ ದೊರೆಗಳು ಜನತೆಯ ಭಾಷೆಯಾದ ಖರೀಬೋಲಿಯನ್ನು ಅಳವಡಿಸಿಕೊಳ್ಳಬೇಕಾಯಿತು; ಅದು ರಾಜಾಸ್ತಾನದ ಪ್ರಭಾವದಲ್ಲಿ ಹಿಂದಿಯ ಉರ್ದು ಎಂದು ಕರೆಯಲ್ಪಟ್ಟ ಒಂದು ಶೈಲಿಯಾಗಿ ಬೆಳೆಯಿತು. ಸರ್ಕಾರ ಮತ್ತು ರಾಜಾಸ್ಥಾನಗಳ ಈ ಬಲವಂತದ ಪ್ರಭಾವದಿಂದಾಗಿ ಉರ್ದು ಕೂಡಾ ಜನತೆಯ ಭಾಷೆಯಾಗುವುದು

ಸಾಧ್ಯವಾಗಲಿಲ್ಲ. ಹಾಗಾಗಿಯೇ ಜನತೆಗೆ ತಿಳುವಳಿಕೆ ನೀಡಲು ಹಾಗೂ ಅವರನ್ನು ಪ್ರೇರೇಪಿಸಲು ಸೂರ್ ಮತ್ತು ತುಳಸಿ ಅವರು ಬ್ರಜ್ ಮತ್ತು ಆವಧಿಯನ್ನು ಆಯ್ಕೆ ಮಾಡಿಕೊಂಡರು.

**ಹಿಂದಿ–ರಾಷ್ಟ್ರದ ಪ್ರತಿಭಟನೆಯ ಭಾಷೆ**

ಉರ್ದು ನಮ್ಮ ಸಾಹಿತ್ಯಕ್ಕೆ ಶ್ರೀಮಂತ ಕೊಡುಗೆಯನ್ನು ನೀಡಿದರೂ ರಾಷ್ಟ್ರದ ಪುನರುಜ್ಜೀವನದ ಭಾಷೆಯಾಗುವುದು ಅದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕಾಗಿ ನಮಗೆ ಜನತೆಯ ಭಾಷೆಯ ಅವಶ್ಯಕತೆಯಿತ್ತು. ಇದಕ್ಕೆ ಸಹಜವಾದ ಆಯ್ಕೆ ಹಿಂದಿ. ದೆಹಲಿಯ ಆಸುಪಾಸಿನಲ್ಲಿ ಬಳಕೆಯಲ್ಲಿರುವ ಖರೀಬೋಲಿಯನ್ನು ಆಧರಿಸಿದ ಹಿಂದಿ ಇಡೀ ಭಾರತದ ಭಾಷೆಯಾಗಿ ರೂಪು ತಳೆದ ಐತಿಹಾಸಿಕ ಬೆಳವಣಿಗೆಗೆ ದೆಹಲಿಯಲ್ಲಿ ರಾಜಧಾನಿ ಇರುವುದು ಕಾರಣವೇ ಎಂಬುದು ನನಗೆ ತಿಳಿಯದು. ಆದರೆ ಜನ ಅದನ್ನು ಒಪ್ಪಿಕೊಂಡರು. ಇಷ್ಟು ವರ್ಷಗಳೂ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಹಿಂದಿ ಸಾಧನವಾಗಿದೆ. ಅದು ನಮ್ಮ ಸ್ವಾತಂತ್ರ್ಯಕ್ಕೂ ವಿದೇಶಿ ಆಳುವವರಿಂದ ಭಿನ್ನವಾದ ನಮ್ಮ ವಿಶಿಷ್ಟ ವೈಯಕ್ತಿಕತೆಗೂ ಸಂಕೇತವಾಯಿತು. ಸಹಜವಾಗಿಯೇ ಸ್ವಾತಂತ್ರ್ಯ ಹೋರಾಟಗಾರರ ನಿರ್ಮಾಣಕಾರಿ ಕಾರ್ಯಕ್ರಮಗಳಲ್ಲಿ ಹಿಂದಿ ಪ್ರಚಾರವು ಸೇರಿಕೊಂಡಿತು.

ಕೇವಲ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಮಾತ್ರವಲ್ಲ. ಮುಘಲರ ವಿರುದ್ಧದ ಹೋರಾಟದಲ್ಲಿಯೂ ಕೂಡಾ ಈ ಅಂಶ ನಿಜವಾದುದು. ಶಿವಾಜಿಯ ಬಳಿ ಹಲವಾರು ಹಿಂದಿ ಕವಿಗಳಿದ್ದು ಅವರ ಪೈಕಿ ಭೂಷಣ ಚಿರಪರಿಚಿತನಾದವನು. ಬಾಜೀರಾಯನಿಗೆ ಸಹಾಯಕ್ಕಾಗಿ  ಕೋರಿಕೆ ಸಲ್ಲಿಸುವಾಗ ಛತ್ರಸಾಲ ಕೇವಲ ಈ ಹಿಂದಿ ದ್ವಿಪದಿಯನ್ನು ಕಳಿಸಿದ; ಓ ಬಾಜೀರಾಯ, ಆನೆ ಸಿಲುಕಿದಂತಹ ಸ್ಥಿತಿಯಲ್ಲೇ ನಾನಿರುವೆ. ಆಟದಲ್ಲಿ ಸೋಲು ಕಂಡಿದೆ. ನನ್ನ ನೆರವಿಗೆ ಬಂದು ನನ್ನ ಮಾನ ರಕ್ಷಿಸು.

ಪ್ರಜಾಪ್ರಭುತ್ವದ ಸರ್ಕಾರವಿದ್ದು, ಅದು ತನ್ನನ್ನು ಜನತೆಯ ಸರ್ಕಾರವೆಂದು ಕರೆದುಕೊಳ್ಳಬಹುದು. ಆದರೆ ಎಲ್ಲ ಸರ್ಕಾರದ ರೀತಿಯೂ ಒಂದೇ. ಈ ಸರ್ಕಾರ ಬ್ರಿಟಿಷ್ ಪರಂಪರೆಯ ವಾರಸುದಾರ ಎಂಬುದರ ಹೊರತಾಗಿಯೂ ಜನತೆ ಮಾಡಬೇಕದ್ದನ್ನು ಸರ್ಕಾರ ಮಾಡಲಾಗದು. ಜನ ತಮ್ಮ ಭಾಷೆಯನ್ನು ಅಲಕ್ಷಿಸುತ್ತಲೇ ಹೋದರೆ ಯಾವುದೇ ಸರ್ಕಾರ ಅದನ್ನು ರಕ್ಷಿಸಲು, ಸುಧಾರಿಸಲು ಸಾಧ್ಯವಿಲ್ಲ. ಕೇವಲ ಒಂದು ಸರ್ಕಾರದ ರಕ್ಷಣೆಯಲ್ಲಿ ಬೆಳೆದ ಭಾಷೆಯು ಜನತೆಯ ಭಾಷೆಯಾಗಿ, ಜನತೆಯನ್ನು ಪ್ರತಿಬಿಂಬಿಸುವ ಸಾಹಿತ್ಯವುಳ್ಳ ಜೀವಂತ ಭಾಷೆಯಾಗಿ ಉಳಿಯಲಾರದು. ಹಿಂದಿ ಉರ್ದು ಅಥವಾ ಸಂಸ್ಕೃತದ ರೀತಿ ಕಾಲಗಳ ಇತಿಹಾಸವನ್ನು ನಾವು ಮತ್ತೆ, ನಂತರದ ಕಾಲದಲ್ಲಿ ಪುನರುಚ್ಚರಿಸುವುದು ಬೇಡ. ಹಿಂದಿ

ಕಾರ್ಯಚಟುವಟಿಕೆಯ ಭಾಷೆಯಾಗಿ, ಪ್ರೇರಣೆ ನೀಡುವ ಭಾಷೆಯಾಗಿ ಮುಂದುವರೆಯಲಿ. ಬಹುಕಾಲ ಅದು ವಿದೇಶಿ ಆಳ್ವಿಕೆಯನ್ನು ಹೊರಗಟ್ಟಲು ಪಿತೂರಿ ಮಾಡುತ್ತಿದ್ದ ಜನರ ಭಾಷೆಯಾಗಿತ್ತು. ಈಗ ಜನ ಸರ್ಕಾರದ ವಿದೇಶಿ ಒಲವಿನ ವಿರುದ್ಧ ಪಿತೂರಿ ನಡೆಸುವಾಗಲೂ ಅದು ಹಾಗೆಯೇ ಇರಲಿ. ಹಿಂದಿ ಪ್ರತಿರೋಧದ ಭಾಷೆಯಾಗಿತ್ತು ಮತ್ತು ಅದು ಹಾಗಿರುವಷ್ಟು ಕಾಲವೂ ಅದರ ಅಭಿವೃದ್ಧಿಯಾಗುತ್ತದೆ.

**ನಾವು ಅಂಗಲಾಚುವುದಿಲ್ಲ, ನಾವು ಖಂಡಿಸುತ್ತೇವೆ**

ಜನ ದೀರ್ಘ ಕಾಲ ಸಹನೆಯಿಂದಿದ್ದಾರೆ. ಹಿಂದಿ ಹಾಗೂ ಇತರ ಪ್ರಾಂತೀಯ ಭಾಷೆಗಳನ್ನು ಬಳಸುವಂತೆ ಅವರು ಸರ್ಕಾರವನ್ನು ಅಂಗಲಾಚಬಾರದು, ಸರ್ಕಾರ ಹಾಗೆ ಮಾಡದಿದ್ದಲ್ಲಿ ಅದನ್ನು ಖಂಡಿಸಿ ಅದರ ಮೇಲೆ ದೋಷಾರೋಪಣೆ ಮಾಡಲು ಸಿದ್ಧರಾಗಿರಬೇಕು. ಅದು ನಿಮ್ಮ ಮಾತೃ ಭಾಷೆ. ಅದನ್ನು ದತ್ತು ಮಗುವೇನೋ ಎಂಬಂತೆ ಸರ್ಕಾರದ ಶುಶ್ರೂಷಾ ಗೃಹಕ್ಕೆ ಒಪ್ಪಿಸಬೇಡಿ. ಮುದಿಯಾಗಿ ಜರ್ಜರಿತರಾದ ತಂದೆತಾಯಿಯರನ್ನು ಕೂಡಾ ವೃದ್ಧಾಶ್ರಮಗಳಿಗೆ ಕಳಿಸುವುದು ನಮ್ಮ ಪರಂಪರೆಯಲ್ಲ, ನಾವೇ ಅವರ ಶುಶ್ರೂಷೆ ಮಾಡಬೇಕು.

ಭಾಷೆ ಎನ್ನುವುದು ನಿರ್ವಾತದಲ್ಲಾಗಲೀ, ಸರ್ಕಾರೀ ಕಡತಗಳಲ್ಲಾಗಲೀ ಅಭಿವೃದ್ಧಿ ಹೊಂದಲಾರದು. ಅದು ಜನರೊಟ್ಟಿಗೆ ಬೆಳೆಯುತ್ತದೆ. ಜನ ಅದರ ಮೂಲಕವೇ ಜೀವಿಸುತ್ತಾರೆ. ಆದ್ದರಿಂದ ೧೯೬೫ರ ಜನವರಿಗೆ ೨೬ರಿಂದ ನಾವು ಕೇವಲ ನಮ್ಮ ಭಾಷೆಗಳನ್ನು ಬಳಸುತ್ತೇವೆ ಎಂದು ನಾವು ದೃಢ ನಿಶ್ಚಯ ಮಾಡಬೇಕು. ನಾವು ಸರ್ಕಾರವನ್ನು ಅನುಸರಿಸುವುದಿಲ್ಲ. ಸರ್ಕಾರವೇ ನಮ್ಮನ್ನು ಹಿಂಬಾಲಿಸಲಿ. ಅದು ನಿರಾಕರಿಸಿದರೆ ಅದು ತನ್ನ ಬೇರುಗಳನ್ನು ಕತ್ತರಿಸಿಕೊಂಡಂತೆ. ಜನರನ್ನು ಹೊರತಾಗಿ ಬೇರಾರು ಸರ್ಕಾರವನ್ನು ಪೋಷಿಸಲು ಸಾಧ್ಯ? ನಾವು ಅನುಚಿತವಾಗಿ ಸಮ್ಮೋಹನಕ್ಕೊಳಗಾಗಿದ್ದೇವೆ ಮತ್ತು ಈ ಹದಿನೆಂಟು ವರ್ಷಗಳೂ ಕೂಡಾ ಸರ್ಕಾರವೇ ಜನರನ್ನು ಪೋಷಿಸುವುದು ಎಂಬ ಭ್ರಮೆಯಲ್ಲಿ ಹೆಣಗುತ್ತಿದ್ದೆವು. ಅದು ತಪ್ಪು, ನಾವು ನಮ್ಮನ್ನು ತಿದ್ದಿಕೊಳ್ಳೋಣ.

ಭಾಷೆಯ ವಿಷಯದಲ್ಲಿ ನಾವು ನಮ್ಮ ಜವಾಬ್ದಾರಿಯನ್ನು ಅರಿತುಕೊಂಡರೆ, ನಾವು ಸರ್ಕಾರದಲ್ಲಿ ಅಡ ಇಟ್ಟಿರುವ ನಮ್ಮ ಶಕ್ತಿಯನ್ನು ಮತ್ತೆ ಪಡೆಯುತ್ತೇವೆ. ಅದು ನಮ್ಮ ದೃಷ್ಟಿಕೋನವನ್ನು ಆಮೂಲಾಗ್ರವಾಗಿ ಮಾರ್ಪಡಿಸುತ್ತದೆ. ಈಗ ನಾವಿರುವ ಹೂಳಿನಿಂದ ಅದು ನಮ್ಮನ್ನು ಮೇಲಕ್ಕೆ ಎತ್ತುತ್ತದೆ. ಅದು ಜನರು ತಲೆಯೆತ್ತಿ ನೋಡುವಂತೆ ಮಾಡುತ್ತದೆ. ಸರ್ಕಾರದ ವೈಫಲ್ಯಗಳಿಗಾಗಿ ಇಂದು ಹತಾಶರಾಗಿ ಸೋತಂತಿರುವ ಜನ ತಮ್ಮ ಆತ್ಮವಿಶ್ವಾಸವನ್ನೂ ಕೆಚ್ಚನ್ನೂ ಮತ್ತೆ ಗಳಿಸುತ್ತಾರೆ. ಅದು ನಮ್ಮ ಇತಿಹಾಸದಲ್ಲಿ ಒಂದು ನಿರ್ಣಾಯಕ ತಿರುವಾಗುತ್ತದೆ.

ಈ ಗಣರಾಜ್ಯೋತ್ಸವವು ನಿಜವಾದ ಜನತೆಯ ದಿನವಾಗಲಿ. ಸರ್ಕಾರ ಸೋತಿದೆ, ಆದರೆ ಜನ ಸೋಲಲಾರರು. ನಾವು ಶ್ರಮಿಸೋಣ ಮತ್ತು ಸಫಲರಾಗೋಣ. ಹಿಂದಿ ಮತ್ತು ಇತರ ಪ್ರಾಂತೀಯ ಭಾಷೆಗಳು ನಮ್ಮ ರಾಷ್ಟ್ರೀಯ ಐಕ್ಯತೆ, ರಾಷ್ಟ್ರೀಯ ಪರಿಶ್ರಮ ಮತ್ತು ರಾಷ್ಟ್ರೀಯ ಸಾಧನೆಯ ಸಂಕೇತವಾಗಲಿ.

**ಮೂಲ : ಆರ್ಗನೈಸರ್, ಗಣರಾಜ್ಯ ವಿಶೇಷಾಂಕ, ೧೯೬೫**

## ಭಾಷಾ ಪ್ರತಿಗಾಮಿಗಳಿಗೆ ಶರಣಾಗತಿಯಿಲ್ಲ

ಅಧಿಕೃತ ಭಾಷೆಯ ವಿವಾದವನ್ನು ಮತ್ತೆ ಕೆದಕಲಾಗಿದೆ. ಇಂಗ್ಲಿಷ್ ಪ್ರತಿಪಾದಕರು ಹೊಸ ನಿಲುವನ್ನು ತಳೆದಿದ್ದಾರೆ. ಅವರು ತಮ್ಮ ಪಡೆಗಳ ಪುನರ್ವ್ಯವಸ್ಥೆಗೊಳಿಸಿದ್ದಾರೆ. ಕಳೆದ ಹಲವಾರು ವರ್ಷಗಳಲ್ಲಿ ಮುಂದುವರೆದಿರುವ ಕಾಂಗ್ರೆಸ್ಸಿನ ದುರಾಡಳಿತದಿಂದುಂಟಾದ ತೀರಾ ಪ್ರಕ್ಷುಬ್ಧವಾದ ಪರಿಸ್ಥಿತಿಯ ಲಾಭ ಪಡೆಯುತ್ತಾ, ಒಡಕುಂಟು ಮಾಡುವ ಡಿ.ಎಂ.ಕೆ. ನಂತಹ ಶಕ್ತಿಗಳೊಂದಿಗೆ, ಐದನೆಯ ದರ್ಜೆಯ ಕಮ್ಯೂನಿಸ್ಟರಂತಹ ಶಕ್ತಿಗಳೊಂದಿಗೆ ಹಾಗೂ ಸಮಾಜದ ಕಾಕಪೋಕರೊಂದಿಗೆ ಕೈವಶ ಮಾಡಿಕೊಂಡು ಮದ್ರಾಸ್ ರಾಜ್ಯದಲ್ಲೆಲ್ಲಾ ಅರಾಜಕತೆಯನ್ನು ಹರಡಿದರು. ರೋಗ ಇನ್ನೂ ಮುಂದಕ್ಕು ಹರಡುತ್ತಿರುವಂತಿದೆ. ಕೇಂದ್ರಸರ್ಕಾರವನ್ನು ಕಿತ್ತುಹಾಕುವ ಉದ್ದೇಶದಿಂದ ಇದನ್ನೆಲ್ಲಾ ಮಾಡಲಾಯಿತು. ಈಗ ಅವರು ಸಂವಿಧಾನದಲ್ಲಿ ತಿದ್ದುಪಡಿಯಾಗಬೇಕೆಂದು ವಸ್ತುತಃ ಅಲುಗಿನ ತುದಿ ತೋರಿಸಿ ಆಗ್ರಹಿಸುತ್ತಿದ್ದಾರೆ. ಅವರು ರಾಜ್ಯದ ಅಧಿಕಾರವನ್ನೇ ಪ್ರಶ್ನಿಸಿದ್ದಾರೆ. ಅವರ ಧೋರಣೆಯು ಬಂಡಾಯದ, ಪ್ರತಿಭಟನೆಯ ಧೋರಣೆಯಾಗಿದೆ. ಆಕ್ಷೇಪದ, ಮನವೊಲಿಕೆಯ ಮಿತಿಗಳನ್ನು ಅವರು ಮೀರಿದ್ದಾರೆ. ಅವರಿಗೆ ಚರ್ಚೆ ಮತ್ತು ಸಂವಾದಗಳು ಬೇಕಿಲ್ಲ. ನ್ಯಾಯ ಮತ್ತು ವಿವೇಚನೆಗಳು ಪ್ರತಿಪಕ್ಷದಲ್ಲೇ ಇರುವುದನ್ನು ಖಚಿತವಾಗಿ ತಿಳಿದಿದ್ದು ಅವರು ಮುಷ್ಟಿವಾದವನ್ನು ಹಿಡಿದಿದ್ದಾರೆ. ಈ ಪರಿಸ್ಥಿತಿಯಲ್ಲಿ ಅಧಿಕಾರದಲ್ಲಿರುವವರು ಒಂದು ನಿರ್ಣಾಯಕ ತೀರ್ಮಾನವನ್ನು ಕೈಗೊಳ್ಳಬೇಕು. ಈ ತೀರ್ಮಾನವು ಭಾರತದ ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಐಕ್ಯತೆಯ ವಿಧಿಯನ್ನು ನಿರ್ಧರಿಸುತ್ತದೆ. ಅವರು ಶರಣಾದರೆ ನಾವು ಪ್ರಜಾಪ್ರಭುತ್ವಕ್ಕೆ ವಿದಾಯ ಹೇಳುತ್ತೇವೆ ಹಾಗೂ ರಾಷ್ಟ್ರೀಯ ಐಕ್ಯತೆ ಎನ್ನುವುದು ಗತಕಾಲಕ್ಕೆ ಸೇರುತ್ತದೆ. ಅವರು ಪ್ರತಿರೋಧಿಸಿದರೆ ಅವರು ಪ್ರಜಾಪ್ರಭುತ್ವವನ್ನು ಇನ್ನೂ ಬಲಪಡಿಸುತ್ತಾರೆ ಹಾಗೂ ಐಕ್ಯತೆಯ ಬಲ ವರ್ಧಿಸುತ್ತಾರೆ.

**ಸಮಿತಿ ವಿರುದ್ಧ ಲಾಲ್ ಬಹಾದೂರ್**

ಎಷ್ಟೊಂದು ಸಂಗತಿಗಳು ಹಾಗೂ ಶಕ್ತಿಗಳು ಇಂದಿನ ಪರಿಸ್ಥಿತಿಯನ್ನು

ರೂಪಿಸಲು ಒಂದಾಗಿವೆ ಎಂದರೆ ಯಾವುದೇ ಅತಿ ಸರಳೀಕರಣವು ಅಪಾಯಕಾರಿಯಾಗಬಲ್ಲದು. ಪರಿಸ್ಥಿತಿಯನ್ನು ಸುಧಾರಿಸಲು ಕ್ರಮಗಳನ್ನು ನಿರ್ಧರಿಸಲು ಒಂದು ಸೂಕ್ತವಾದ ವಿಶ್ಲೇಷಣೆ ಅಗತ್ಯ. ಕಾಂಗ್ರೆಸ್ ಸಂಘಟನೆಯ ಆಂತರಿಕವಾದ ಅಧಿಕಾರ ಸಂಬಂಧಿ ಸಂಘರ್ಷಗಳಲ್ಲಿ ಈ ಇಡೀ ಚಳವಳಿಯ ಮೂಲವಿದೆ ಎಂದು ತೀವ್ರವಾಗಿ ಭಾಸವಾಗುತ್ತಿದೆ. ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕನಾಗಿ ಶ್ರೀ ಲಾಲ್ ಬಹಾದೂರ್ ಶಾಸ್ತ್ರಿ ಅವರ ಆಯ್ಕೆಗೆ ಕಾರಣವೆಂದು ಪರಿಗಣಿಸಲ್ಪಟ್ಟ ಸಮಿತಿಯು ಈಗ ಪ್ರಧಾನ ಮಂತ್ರಿಗಳೊಂದಿಗೆ ಘರ್ಷಣೆಯಲ್ಲಿ ತೊಡಗಿದೆ ಎಂದು ವರದಿಯಾಗಿದೆ. ಪ್ರಧಾನ ಮಂತ್ರಿಗಳ ಸ್ವತಂತ್ರ ವರ್ತನೆ ಅವರಿಗೆ ಹಿಡಿಸುತ್ತಿಲ್ಲ. ಅವರು ತಮ್ಮ ಕೈಗೊಂಬೆಯಾಗಿ ವರ್ತಿಸಲೆಂದು ಅವರು ಬಯಸುತ್ತಾರೆ. ಆದರೆ ಪ್ರಧಾನಿ ಆತ್ಮಸಮರ್ಥನೆಗೆ ಪ್ರಯತ್ನಿಸುತ್ತಿದ್ದಾರೆ. ಪ್ರಧಾನ ಮಂತ್ರಿಗಳು ಮಣ್ಣು ಮುಕ್ಕುವಂತೆ ಮಾಡಲು ಈಗ ಒಂದು ಅವಕಾಶ ದೊರೆತಿದೆ. ಈ ಕಾರಣಕ್ಕಾಗಿಯೇ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ ನಾಡರ್ ಮತ್ತು ಸಮಿತಿಯ ಇತರ ಸದಸ್ಯರು ಸರ್ಕಾರದ ಧೋರಣೆಗಳಿಗೆ ವಿರುದ್ಧವಾದ ಹೇಳಿಕೆಗಳನ್ನು ನೀಡುತ್ತಿದ್ದಾರೆ; ಅಷ್ಟು ಮಾತ್ರವಲ್ಲ, ಆ ಹೇಳಿಕೆಗಳು ಸರ್ಕಾರದ ವಿರುದ್ಧದ ಹಿಂಸಾತ್ಮಕ ಚಟುವಟಿಕೆಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬೆಂಬಲಿಸುತ್ತವೆ. ಕಾಂಗ್ರೆಸ್ಸಿನ ಆಂತರ್ಯದ ಗುಂಪು ಘರ್ಷಣೆಗಳ ಬಗ್ಗೆ ನಮಗೆ ಹೆಚ್ಚಿನ ಆಸಕ್ತಿಯೇನೂ ಇಲ್ಲ. ಆದರೆ ಈ ಅಧಿಕಾರಶಾಹಿ ರಾಜಕಾರಣಿಗಳು ತಮ್ಮನ್ನು ದುರುಪಯೋಗಪಡಿಸಿಕೊಳ್ಳಲು ಜನತೆ ಅವಕಾಶ ನೀಡದಿರುವುದು ಅವಶ್ಯಕ. ಗಲಭೆಗಳ ಸಂದರ್ಭದಲ್ಲಿ ಅಪಾರವಾದ ಜೀವಹಾನಿಯೂ, ಆಸ್ತಿ ನಾಶವೂ ಜರುಗಿವೆ. ಇದರ ಹೊಣೆಯನ್ನು ಯಾವು ವಹಿಸಿಕೊಳ್ಳಬೇಕು? ನಾವು ಭಾರತದ ಜನತೆ. ತಮಿಳಿನ ಜನ ಹಾಗೂ ರೈಲು ಬಂಡಿಗಳನ್ನು, ಅಂಚೆ ಕಚೇರಿಗಳನ್ನು ಹಾಗು ಬಸ್ಸುಗಳನ್ನು ಸುಟ್ಟುಹಾಕಿದ ಜನ. ಮುಂದಿನ ಬಜೆಟ್ಟಿನಲ್ಲಿ (ಮುಂಗಡ ಪತ್ರದಲ್ಲಿ) ನಷ್ಟವನ್ನು ಭರ್ತಿ ಮಾಡಲು ಹಾಗೂ ಯೋಜನೆಗಳ ಹೆಸರಿನಲ್ಲಿ ಈ ರಾಜಕಾರಣಿಗಳ ಮತ್ತು ಅವರ ಅನುಯಾಯಿಗಳ ಜೇಬುಗಳನ್ನು ತುಂಬಲು ಹೊಸ ತೆರಿಗೆಗಳಿರುತ್ತವೆ.

**ಹೇರುವಿಕೆಯ ಬಗೆಗಿನ ಈ ಅಸಂಬದ್ಧತೆ**

ಕೇವಲ ಹಿಂದಿ ಬಳಕೆಗೆ ಬರುತ್ತದೆ ಅಥವಾ ಇಂಗ್ಲಿಷ್ ಉಳಿಯುವುದಿಲ್ಲ ಎನ್ನುವ ಕಾರಣಕ್ಕಾಗಿ ಐಕ್ಯತೆಗೆ ಭಂಗ ತರಬೇಕೆಂದು ಚಿಂತಿಸುವ ಜನರೇನಾದರೂ ಇದ್ದಲ್ಲಿ ಅವರಿಗೆ ಖಂಡಿತವಾಗಿಯೂ ಐಕ್ಯತೆಯಲ್ಲಿ ವಿಶ್ವಾಸವಿಲ್ಲ. ಅವರು ಪ್ರತ್ಯೇಕವಾದಿಗಳು ಇಲ್ಲವೇ ಯೋಜಿತ ಪ್ರಚಾರಕ್ಕೆ ಬಲಿಯಾದವರು.

ಅಧಿಕೃತ ಭಾಷೆಯ ಪ್ರಶ್ನೆಗೆ ಸಂಬಂಧಿಸಿದಂತೆ ಈಗಿನ ವ್ಯವಸ್ಥೆಯು ಅಧಿಕೃತ ಭಾಷೆಯ ಕಾರ್ಯಜ್ಞಾನ ಇಲ್ಲದ ವರ್ಗಗಳ ಜನರ ಅವಶ್ಯಕತೆಗಳನ್ನು ಮತ್ತು

ಆತಂಕಗಳನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳುತ್ತದೆ. ರಾಷ್ಟ್ರದ ಆಕಾಂಕ್ಷೆಗಳ ಮತ್ತು ರಾಷ್ಟ್ರದ ಗೌರವದ ವಿಷಯಕ್ಕೆ ಬಂದರೆ ಸ್ವಾತಂತ್ರ್ಯ ಬಂದ ಮೇಲೆ ಒಂದು ದಿನದ ಮಟ್ಟಿಗೂ ಇಂಗ್ಲಿಷಿನ ಮುಂದುವರಿಕೆಯನ್ನು ಸಹಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಆದರೆ ಸಾರ್ವಜನಿಕ ಸೇವೆಗಳಲ್ಲಿ ಇರುವವರಿಗೆ ರಿಯಾಯಿತಿ ಎಂದು ೧೯೬೫ರ ಜನವರಿ ೨೬ರವರೆಗೆ ಜೀವಾವಧಿ ನೀಡಲಾಗಿತ್ತು. ಮತ್ತು ಈಗ ಅಧಿಕೃತ ಭಾಷಾ ಕಾಯಿದೆಯನ್ನು ಅಳವಡಿಸಿಕೊಳ್ಳುವಾಗ ಅನಿರ್ದಿಷ್ಟ ಕಾಲದವರೆಗೆ ಇಂಗ್ಲಿಷನ್ನು ಬಳಸಬಹುದೆಂದು ಅವಕಾಶ ನೀಡಲಾಗಿದೆ. ಅಧಿಕೃತ ಭಾಷೆಯನ್ನು ಅರಿಯದವರಿಗೆ ತೊಂದರೆಗಳನ್ನೋ ದೌರ್ಬಲ್ಯಗಳನ್ನೋ ಸೃಷ್ಟಿಸಲು ಯಾರೂ ಬಯಸರು. ಆದರೆ ಕೆಲವರು ತಾವೆಂದೂ ಅಧಿಕೃತ ಭಾಷೆಯನ್ನು ಕಲಿಯುವುದಿಲ್ಲ ಎಂದು ಹಟ ಮಾಡಿದರೆ ಅದನ್ನು ಅರ್ಥಮಾಡಿಕೊಳ್ಳಲಾಗದು. ಹಿಂದಿ ಕಲಿಸಲು ಸೌಕರ್ಯಗಳನ್ನು ಕಲ್ಪಿಸಿದರೆ, ಅದನ್ನು ಹಿಂದಿಯನ್ನು ಹೊರಿಸುವುದು ಎಂದು ಪರಿಗಣಿಸಲಾಗುತ್ತಿದೆ. ಅದು ಹೊರಿಸುವುದೇ ಆದಲ್ಲಿ, ಎಲ್ಲ ಶಾಲೆಗಳನ್ನೂ ಶಿಕ್ಷಣ ಸಂಸ್ಥೆಗಳನ್ನೂ ಕಾರಾಗೃಹಗಳೆಂದು ಪರಿಗಣಿಸಬೇಕಾಗುತ್ತದೆ. ಕಡ್ಡಾಯ ಶಿಕ್ಷಣ ಎನ್ನುವುದು ಸರ್ಕಾರಗಳು ಅನುಸರಿಸಲು ಅಪೇಕ್ಷಣೀಯವಾದ ಕಾರ್ಯನೀತಿ ಎನಿಸುವ ಹಾಗೂ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಯಾವುದೇ ರೀತಿಯಲ್ಲೂ ಅಡಚಣೆ ಎನಿಸದ ಕಾಲದಲ್ಲಿ, ಬದುಕಿನ ತಮ್ಮ ಜವಾಬ್ದಾರಿಗಳನ್ನು ಸೂಕ್ತವಾಗಿ ನಿರ್ವಹಿಸಲು ತಮಗೆ ಸಾಮರ್ಥ್ಯ ನೀಡಲು ಅವಶ್ಯಕವಾದ ಒಂದು ಭಾಷೆಯನ್ನು ಕಲಿಯುವುದಿಲ್ಲ ಎಂದು ವಿದ್ಯಾರ್ಥಿಗಳು ನಿರ್ಧರಿಸುವುದು ಇನ್ನೂ ಹೆಚ್ಚು ಆಶ್ಚರ್ಯಕರವಾಗಿದೆ.

ಅಖಿಲ ಭಾರತ ಸೇವೆಗಳ ಅವಕಾಶಗಳು ಕುಂಠಿತವಾಗುತ್ತಿರುವ ನಿರಾಶಾದಾಯಕ ಭವಿಷ್ಯವನ್ನು ತಮಿಳುನಾಡಿನ ವಿದ್ಯಾವಂತ ಯುವಜನತೆ ಇಂದು ಎದುರಿಸುತ್ತಿದ್ದರೆ, ಅದಕ್ಕೆ ಅವರ ಈ ಹಿಂದಿನ ನಾಯಕರ ಹಾಗೂ ಆಡಳಿತಗಾರರ ಸಮೀಪ ದೃಷ್ಟಿಯ ಕಾರ್ಯನೀತಿಯೇ ಮುಖ್ಯ ಕಾರಣವಾಗಿದೆ. ಮಹಾರಾಷ್ಟ್ರ ಅಥವಾ ಗುಜರಾತಿನ ಜನ ತಮ್ಮ ಭವಿಷ್ಯದ ಬಗ್ಗೆ ಭೀತರಾಗಿಲ್ಲ. ಸರ್ಕಾರಗಳು ಶಾಲೆಗಳಲ್ಲಿ ಹಿಂದಿ ಕಲಿಸಲು ಅವಕಾಶ ಒದಗಿಸಿದವು. ಹಾಗೂ ವಿದ್ಯಾರ್ಥಿಗಳು ಯಾವುದೇ ಹಿಂಜರಿಕೆಯಲ್ಲಿದೆ ಅದನ್ನು ಕಲಿತರು; ಇಂದು ಅವರಿಗೆ ವೈಕಲ್ಯದ ಭಾವವಿಲ್ಲ. ಆದರೆ ತಮಿಳುನಾಡಿನಲ್ಲಿ ಡಿ.ಎಂ.ಕೆ. ದೆಸೆಯಿಂದಾಗಿ ಸರ್ಕಾರವು ಹಿಂದಿ ಕಲಿಸಲು ಸೂಕ್ತ ವ್ಯವಸ್ಥೆಯನ್ನು ಮಾಡಲಿಲ್ಲ. ಅದೊಂದು ಮನವೊಲಿಕೆಯ ನೀತಿಯನ್ನನುಸರಿಸದ ರಾಜಕೀಯ ನಿರ್ಧಾರವಾಗಿತ್ತು. ಅದು ಅವರ ಆತ್ಮ ಸ್ಥೈರ್ಯದ ಅಭಾವವನ್ನು ಬಯಲು ಮಾಡಿತು. ಅವರು ಸರ್ಕಾರಕ್ಕೆ ಹಾಗೂ ರಾಜ್ಯದ ಯುವಜನತೆಗೆ ದ್ರೋಹವೆಸಗಿದರು. ಆದರೂ ಇಡೀ ರಾಷ್ಟ್ರವು, ಅದು ಅಧಿಕೃತ ಭಾಷಾ ಮಸೂದೆಯನ್ನು ಅಂಗೀಕರಿಸಿದಾಗ, ಅವರ ಹಿಂದಿನ ದೌರ್ಬಲ್ಯ ಬೇಗ

ನಿರ್ಮೂಲನಗೊಳ್ಳುವುದೆಂಬ ಭರವಸೆಯಿಂದ ಅವರ ಹಿಂದಿನ ನಡವಳಿಕೆಯನ್ನು ಮನ್ನಿಸಿತು. ಆದರೆ ಅವರು ತಿದ್ದಿಕೊಂಡಂತಿಲ್ಲ. ಬದಲಿಗೆ ಅವರು ಇಡೀ ರಾಷ್ಟ್ರದ ಮೇಲೆ ಇಂಗ್ಲಿಷನ್ನು ಹೊರಿಸಲು ಪ್ರಯತ್ನಿಸುತ್ತಿದ್ದಾರೆ. ಇಲ್ಲ, ಹಾಗೆ ಮಾಡಲು ಬಿಡುವುದಿಲ್ಲ.

**ಕ್ಲೈವ್ ಮತ್ತು ಮೆಕಾಲೆಯವರ ಅತ್ಯುಗ್ರ ಕನಸುಗಳನ್ನೂ ಮೀರಿ**

ತಮಿಳುನಾಡಿನ ಇಲ್ಲವೇ ಯಾವುದೇ ಪ್ರಾಂತ್ಯದ ಯುವ ಜನತೆಯು ತಮ್ಮ ಭವಿಷ್ಯದ ಬಗ್ಗೆ ಆತಂಕ ಪಡಬೇಕಿಲ್ಲ. ಅವರು ಈ ರಾಷ್ಟ್ರದ ಅಂಗವೇ ಆಗಿದ್ದಾರೆ. ಅವರ ರಾಷ್ಟ್ರೀಯ ಹಕ್ಕುಗಳನ್ನು ಯಾರು ಕಿತ್ತುಕೊಳ್ಳಬಲ್ಲರು? ಸಮೀಪ ದೃಷ್ಟಿಯಿಂದ ನರಳುತ್ತಿರುವ, ತಾವು ಬ್ರಿಟಿಷರ ಆಳ್ವಿಕೆಯಲ್ಲಿ ಇಂಗ್ಲಿಷ್ ಕಲಿತ ಗತಕಾಲದ ಬಗ್ಗೆ ಮಾತ್ರ ಚಿಂತಿಸಬಲ್ಲ ನಾಯಕರ ಮಾತಿಗೆ ಕಿವಿಗೊಡಲು ನಿರಾಕರಿಸುವುದಷ್ಟೇ ಅವರು ಮಾಡಬೇಕಾಗಿರುವುದು. ಅವರಿಗೆ ಹೆಚ್ಚು ಒಳ್ಳೆಯ ಇಂಗ್ಲಿಷ್ ಬರುವುದರಿಂದ ಇಂದು ಅವರು ನಿಮ್ಮ ಮೇಲೆ ದಬ್ಬಾಳಿಕೆ ನಡೆಸಬಹುದು. ಇಂಗ್ಲಿಷ್ ಹೋಗಿ, ತಮಿಳು ಮತ್ತು ಹಿಂದಿ ಬಂದರೆ ಅವರು ತಮ್ಮ ಸ್ಥಾನವನ್ನು ಕಳೆದುಕೊಳ್ಳುವೆವೆಂಬ ಭೀತಿ ಅವರಿಗೆ. ನಮಗೆ ಅವರ ಅಗತ್ಯವೂ ಇಲ್ಲ, ಅವರನ್ನು ಸಮಾಧಾನ ಪಡಿಸುವುದೂ ಬೇಕಿಲ್ಲ. ಹಳೆಯ ವ್ಯವಸ್ಥೆಯು ಬದಲಾಗಿ ಹೊಸದಕ್ಕೆ ದಾರಿ ಮಾಡಿಕೊಡಲೇಬೇಕು. ಯುವಜನತೆಯು ಹೊಸ ವ್ಯವಸ್ಥೆಯ ಸಂಕೇತಗಳಾಗಬೇಕು. ಯುವಜನತೆಯು ಯಾವಾಗಲೂ ರಾಷ್ಟ್ರೀಯ ಆಂದೋಲನಗಳ ಮುಂಚೂಣಿಯಲ್ಲಿರುವವರು. ಇಂದು ಅವರು ಪ್ರತಿಗಾಮಿಗಳಾದ ಮತ್ತು ರಾಷ್ಟ್ರ ವಿರೋಧಿಗಳಾದ ಚಳುವಳಿಗಳ ನಾಯಕತ್ವ ವಹಿಸಿರುವುದು ನಿಜವಾಗಿಯೂ ವೇದನೆಯುಂಟುಮಾಡುತ್ತದೆ. ಈ ಗೆಳೆಯರು ತಮಿಳಿಗಾಗಿ ಆಗ್ರಹಿಸಿ ತಮ್ಮ ಉತ್ಸಾಹವನ್ನು ತೋರಿದ್ದರೆ ನಾನು ಅವರನ್ನು ಅಭಿನಂದಿಸುತ್ತಿದ್ದೆ. ತಮಿಳು ಒಂದು ರಾಷ್ಟ್ರೀಯ ಭಾಷೆ. ತಮಿಳಿಗಾಗಿ ನಡೆಸುವ ಯಾವುದೇ ಚಳುವಳಿಯು ರಾಷ್ಟ್ರೀಯ ಸಂಸ್ಕಾರಗಳನ್ನೇ ಹುಟ್ಟುಹಾಕುತ್ತದೆ. ಆದರೆ ಇಂಗ್ಲಿಷಿಗಾಗಿ ಜನರನ್ನು ಕೊಲ್ಲುವುದು ಭಯಾನಕ. ಲಾರ್ಡ್ ಕ್ಲೈವ್ ಮತ್ತು ಮೆಕಾಲೆ ಅವರು ಕೂಡಾ ಭಾರತೀಯರು ಇಷ್ಟು ಬೇಗ ಅವನತಿಗೆ ಬರುತ್ತಾರೆಂದು ಭಾವಿಸಲು ಸಾಧ್ಯವಿರಲಿಲ್ಲ.

**ಮನವೊಲಿಕೆಯಿಲ್ಲ**

ಭಾರತದ ಐಕ್ಯತೆಗಾಗಿ ಇಂಗ್ಲಿಷನ್ನು ಮುಂದುವರೆಸಬೇಕೆಂದು ಆಗ್ರಹಿಸುವ ಕೆಲವರಿದ್ದಾರೆ. ಅವರು ಭಾರತದ ಐಕ್ಯತೆಯ ಪ್ರೇಮಿಗಳೇನೂ ಅಲ್ಲ. ದೇಶದ ಮುಗ್ಧ ಜನತೆಗೆ ಮೋಸಮಾಡಲು ಇದೊಂದು ಜಾಣ ತಂತ್ರ ಅಷ್ಟೆ. ಹಾಗೆ ಹೇಳುತ್ತಲೇ. ನೀವು ಇಂಗ್ಲಿಷನ್ನು ಮುಂದುವರೆಸದಿದ್ದಲ್ಲಿ ನಾವು ಬೇರೆ ಹೋಗುತ್ತೇವೆ ಎನ್ನುವ ನಯ ನುಡಿಯ ಮುಸುಕು ಹಾಕಿದ ಬೆದರಿಕೆಯನ್ನೂ ಅವರು

ಮುಂದಿಡುತ್ತಾರೆ. ಈ ಮುಸುಕನ್ನು ಹರಿದು ಹಾಕಬೇಕು. ರಾಷ್ಟ್ರೀಯ ಐಕ್ಯತೆ ಎನ್ನುವುದು ಶ್ರದ್ಧೆಯ ಒಂದು ವಿಷಯವೇ ಹೊರತು ಹೊಂದಾಣಿಕೆಯ ವಿಷಯವಲ್ಲ. ಕೇವಲ ಹಿಂದಿ ಬರುತ್ತದೆ ಅಥವಾ ಇಂಗ್ಲಿಷ್ ಉಳಿಯುವುದಿಲ್ಲ ಎನ್ನುವ ಕಾರಣಕ್ಕಾಗಿ ಐಕ್ಯತೆಗೆ ಭಂಗ ತರಬೇಕೆಂದು ಚಿಂತಿಸುವ ಜನರೇನಾದರೂ ಇದ್ದಲ್ಲಿ ಅವರಿಗೆ ಖಂಡಿತವಾಗಿಯು ಐಕ್ಯತೆಯಲ್ಲಿ ವಿಶ್ವಾಸವಿಲ್ಲ. ಅವರು ಪ್ರತ್ಯೇಕತಾವಾದಿಗಳು ಇಲ್ಲವೇ ಯೋಜಿತ ಪ್ರಚಾರಕ್ಕೆ ಬಲಿಯಾದವರು. ಒಬ್ಬ ಸ್ತ್ರೀಯ ಮಾನಹರಣ ಮಾಡಬೇಕೆಂದು ಬಯಸುವ ಗೂಂಡಾ, ಅವಳು ಶರಣಾಗದಿದ್ದರೆ ಅವಳಿಗೆ ಅಪಖ್ಯಾತಿಯುಂಟು ಮಾಡುವುದಾಗಿ ಬೆದರಿಕೆ ಹಾಕುತ್ತಾನೆ. ಅವಳು ಶರಣಾದರೆ ಅವಳು ಖಂಡಿತವಾಗಿಯೂ ತನ್ನ ಪಾವಿತ್ರ್ಯಕ್ಕಿಂತಲೂ ಖ್ಯಾತಿಗೇ ಹೆಚ್ಚು ಕಾಳಜಿಯುಳ್ಳವಳು. ಭಾರತದ ಐಕ್ಯತೆಯಲ್ಲಿ ಶ್ರದ್ಧೆಯುಳ್ಳವರು ಈ ತಂತ್ರಗಳಿಗೆ ಬಲಿಯಾಗುವುದು ಸಾಧ್ಯವಿಲ್ಲ. ನಾವು ಈ ಉಪದ್ರವವನ್ನು ಎದುರಿಸಿ ಹೋರಾಡಬೇಕು. ಅದಕ್ಕೆ ಶರಣಾಗುವುದಾಗಲೀ ಮನವೊಲಿಸುವುದಾಗಲೀ ಅಲ್ಲ.

ಮನವೊಲಿಕೆಯು ಇಂಗ್ಲಿಷ್ ಹುಚ್ಚರ ತೃಷೆಯನ್ನು ಇನ್ನಷ್ಟು ಚುರುಕುಗೊಳಿಸಿದೆ. ನಿಜವಾದ ಆತಂಕಗಳ ನಿರ್ಮೂಲನ ಮಾಡಬಹುದು, ಆದರೆ ಹಿನ್ನಡೆ ಸಾಧ್ಯವಿಲ್ಲ.

**ಹಿಂದಿ ಇಡೀ ರಾಷ್ಟ್ರಕ್ಕೆ ಸೇರಿದ್ದು**

ಅಧಿಕೃತ ಭಾಷೆಯ ಪ್ರಶ್ನೆಯು ಕೇವಲ ಹಿಂದಿ ಭಾಷಿಗರ ಮತ್ತು ಹಿಂದಿ ಮಾತನಾಡದವರ ನಡುವಿನ ಪ್ರಶ್ನೆಯಲ್ಲ. ವಾಸ್ತವವಾಗಿ ಭಾರತದಲ್ಲಿ ಹಿಂದಿ ಮಾತನಾಡುವವರಾಗಲೀ, ಹಿಂದಿ ಮಾತನಾಡದವರಾಗಲೀ ಒಬ್ಬರೂ ಇಲ್ಲ. ಈ ವಿಭಜನೆಯು ಅವಾಸ್ತವಿಕ ಹಾಗೂ ಅಪಾಯಕಾರಿಯಾದದ್ದು. ಹಿಂದಿ ತಿಳಿದ ಹಾಗೂ ಹಿಂದಿ ತಿಳಿಯದ ಜನರಿದ್ದಾರೆ ಎಂದಷ್ಟೇ ಹೇಳಬಹುದು. ಹಿಂದಿ ತಿಳಿಯದ ಜನರಿದ್ದರೆ ಅವರಿಗೆ ಹಿಂದಿ ಕಲಿಯಲು ಕಾಲಾವಕಾಶ ನೀಡಬೇಕು. ಬದಲಾವಣೆಯು ಹಂತಗಳಲ್ಲಿ ನಡೆಯಬಹುದು ಎಂದಷ್ಟೇ ಇದರ ಅರ್ಥ. ಆದರೆ ಪ್ರಕ್ರಿಯೆಯು ಈಗಲೇ ಇಲ್ಲೇ ಪ್ರಾರಂಭವಾಗಬೇಕು; ಅದರಲ್ಲಿ ವಿಳಂಬಮಾಡಲಾಗದು. ಹಿಂದಿಯೇತರರ ಬೇಡಿಕೆ ಸಲ್ಲಿಸಿದಾಗ ಹಿಂದಿ ಬರುತ್ತದೆ ಎನ್ನುವುದು ಒಂದು ತಪ್ಪು ಪದ್ಧತಿಯನ್ನು ಪರಿಚಯಿಸಿದಂತೆ; ಅದೂ ಕೂಡಾ ಜನರ ಅವಾಸ್ತವಿಕ ವಿಭಜನೆಯ ಆಧಾರದ ಮೇಲೆ. ಈ ಹಿಂದಿಯೇತರರು ಯಾರು? ಅವರು ತಮ್ಮ ಸಮ್ಮತಿಯನ್ನು ಹೇಗೆ ಸೂಚಿಸುವರು? ಒಂದು ಅವಿಧೇಯ ಅಲ್ಪ ಸಂಖ್ಯಾತ ವರ್ಗವು ರಾಷ್ಟ್ರದ ಪ್ರಗತಿಗೆ ತಡೆಯೊಡ್ಡಲು ಅವಕಾಶ ನೀಡಬೇಕೆ? ಹಿಂದಿ ಇಡೀ ರಾಷ್ಟ್ರದ ಭಾಷೆ ಮತ್ತು ಯಾರ ಮಾತೃಭಾಷೆಯೂ ಅಲ್ಲ. ಅದು ಹಾಗೆಯೇ ಬೆಳೆದು ಬಂದಿದೆ. ತಮ್ಮನ್ನು ತಾವು ಹಿಂದಿಯೇತರರೆಂದು ಕರೆದುಕೊಳ್ಳುವವರು ತಮ್ಮ ಕೀಳರಿಮೆಯನ್ನು ಕಳಚಿ ಹಾಕಬೇಕು. ಅವರಿಗೂ ಹಿಂದಿಯ ಮೇಲೆ

ಸಮಾನ ಹಕ್ಕಿದೆ. ಅವರು ಅದನ್ನು ಚಲಾಯಿಸಬೇಕು. ಯು.ಪಿ. (ಉತ್ತರ ಪ್ರದೇಶ) ಮತ್ತು ದೆಹಲಿಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮವನ್ನು ಹೆಚ್ಚು ವೀರಾವೇಶದಿಂದ ಕಾದಲಾಯಿತು ಎಂದಾಕ್ಷಣ ಅದು ಕೇವಲ ಉತ್ತರ ದೇಶದವರ ಯುದ್ಧವೆಂದು ಅರ್ಥವಲ್ಲ. ಈ ವಿಷಯದ ಮೇಲಿನ ಒಂದು ಸಾಕ್ಷ್ಯ ಚಿತ್ರವು ಹೆಚ್ಚಾಗಿ ಉತ್ತರದೇಶದ ದೃಶ್ಯಗಳನ್ನೇ ತೋರಿಸಿದಾಗ ದಕ್ಷಿಣದ ಘಟನೆಗಳನ್ನು ಬಿಟ್ಟಿರುವುದಕ್ಕಾಗಿ ನಮ್ಮ ದಕ್ಷಿಣದ ಗೆಳೆಯರು ಅಸಮಾಧಾನಗೊಂಡರು. ಅವರ ಅಸಮಾಧಾನವು ಖಂಡಿತವಾಗಿಯೂ ನ್ಯಾಯಬದ್ಧವಾಗಿತ್ತು. ಇಂದು ಉತ್ತರದ ಬಹುಪಾಲು ಜನರಿಗೆ ಹಿಂದಿ ತಿಳಿದಿರುವುದು ಒಂದು ಐತಿಹಾಸಿಕ ಆಕಸ್ಮಿಕದಿಂದಾಗಿಯೇ ಹೊರತು, ಆ ಭಾಷೆ ಕೇವಲ ಅವರಿಗೆ ಸೇರಿದ್ದು ಎಂಬ ಕಾರಣಕ್ಕಾಗಿಯಲ್ಲ, ಕಾಲವಿಳಂಬವನ್ನು ಸರಿದೂಗಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಬಹುದು. ಆದರೆ ಜನತೆಯ ಒಂದು ವರ್ಗವನ್ನು ಪರಂಪರಾನುಗತವಾಗಿ ಹಾಗೂ ಶಾಸನಬದ್ಧವಾಗಿ ಅವರದ್ದೇ ಆದ ಭಾಷೆಯಿಂದ ವಂಚಿಸುವಂತಹ ತಪ್ಪನ್ನು ನಾವು ಮಾಡಲಾಗುವುದಿಲ್ಲ.

**ಪ್ರಧಾನ ಮಂತ್ರಿಗಳು ವಿಚಾರಣೆಗೊಳಗಾಗಿದ್ದಾರೆ:**

ಪ್ರಧಾನ ಮಂತ್ರಿಗಳು ಖಚಿತವಾಗಿ ಹಾಗೂ ನಿರ್ಣಾಯಕವಾಗಿ ಕ್ರಮ ತೆಗೆದುಕೊಳ್ಳಬೇಕಾಗಿದೆ. ಅವರು ತಡವರಿಸದಿರಲಿ ಹಾಗೂ ತತ್ತರಿಸದಿರಲಿ. ಶಾಸ್ತ್ರಿ ಅವರು ಒಬ್ಬ ದುರ್ಬಲ ವ್ಯಕ್ತಿ ಎಂದು ಸಾಮಾನ್ಯ ಅಭಿಪ್ರಾಯವಿದೆ. ಆ ಅಭಿಪ್ರಾಯದಲ್ಲಿ ಹುರುಳಿಲ್ಲ ಎಂದು ತೋರಿಸಲು ಇದೊಂದು ಅವಕಾಶ. ಪ್ರಧಾನ ಮಂತ್ರಿಗೆ ಉಚಿತವಾದ ಸಾಮರ್ಥ್ಯವನ್ನು ಅವರು ತೋರಲಿ. ಈ ವಿವಾದವನ್ನು ಚರ್ಚಿಸಲು ಅವರು ಮುಖ್ಯ ಮಂತ್ರಿಗಳ ಸಭೆಯನ್ನು ಕರೆದಿದ್ದಾರೆ. ಸಂಸತ್ತಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಮುಖ್ಯಮಂತ್ರಿಗಳು ತಮಗೆ ಆರೋಪಿಸಿಕೊಳ್ಳಲು ಅವಕಾಶ ನೀಡಬೇಕೆ? ಅಲ್ಲದೆ ಈಗಷ್ಟೇ ತಾತ್ಕಾಲಿಕವಾಗಿ ನಿಲುಗಡೆಯಾಗಿರುವ ಚಳವಳಿಯ ಭೀತಿಯಲ್ಲಿ. ಇಷ್ಟು ಬೇಗನೇ ಈ ಪ್ರಶ್ನೆಯ ಯಾವುದೇ ಚರ್ಚೆಯು ಸಮಯೋಚಿತವಲ್ಲದಿರಬಹುದು ಹಾಗೂ ವಸ್ತುನಿಷ್ಠ ಚಿಂತನೆಗೆ ಪೂರಕವಲ್ಲದಿರಬಹುದು. ಕೇರಳದ ಚುನಾವಣೆಗಳು ಕೂಡಾ ವೈಚಾರಿಕತೆಯನ್ನು ಮಸುಕುಗೊಳಿಸುತ್ತವೆ. ಇಡೀ ವಿಷಯವನ್ನು ಸಧ್ಯಕ್ಕೆ ಮುಂದೂಡುವುದು ಅಪೇಕ್ಷಣೀಯ. ಮೊದಲು ಕಾನೂನು ಮತ್ತು ಸುವ್ಯವಸ್ಥೆಗಳ ಪಾಲನೆಯಾಗಬೇಕು. ಸಾಮಾನ್ಯ ಸ್ಥಿತಿ ಮರಳಬೇಕು ಹಾಗೂ ಸವಾಲೊಡ್ಡುವ ಶಕ್ತಿಗಳ ದಮನವಾಗಬೇಕು. ಸರ್ಕಾರದ ಇಂದಿನ ಕಾರ್ಯನೀತಿಯನ್ನು ಸೂಕ್ತವಾಗಿ ವಿವರಿಸಿ ತಪ್ಪು ಅಭಿಪ್ರಾಯಗಳ ನಿರ್ಮೂಲನೆಯಾಗಬೇಕು. ಈ ಕ್ರಮಗಳ ನಂತರ ಅವಶ್ಯಕವೆನಿಸಿದರೆ ಸಂಸತ್ತು ಸರ್ವಾನುಮತದಿಂದ ಅಳವಡಿಸಿಕೊಳ್ಳಬಹುದಾದ ಒಂದು ಭಾಷಾ ನೀತಿಯನ್ನು ರೂಪಿಸಲು ಒಂದು ಪ್ರಾತಿನಿಧಿಕ ಸಭೆಯನ್ನು ಅನೌಪಚಾರಿಕವಾಗಿ ಕರೆಯಬಹುದು.

ಮೂಲ : ಆರ್ಗನೈಸರ್, ೨೨ ಫೆಬ್ರವರಿ, ೧೯೬೩

## ಎಲ್ಲ ಭಾರತೀಯ ಭಾಷೆಗಳಿಗೂ ರಾಷ್ಟ್ರೀಯ ಸ್ಥಾನ ಮಾನ–ಪತ್ರಿಕಾ ವರದಿ

ನವದೆಹಲಿ, ೧೦ ಮಾರ್ಚ್. ಜನಸಂಘವು ಎಲ್ಲ ಭಾರತೀಯ ಭಾಷೆಗಳನ್ನೂ ರಾಷ್ಟ್ರೀಯ ಭಾಷೆಗಳೆಂದು ಪರಿಗಣಿಸುತ್ತದೆ. ಮತ್ತು ಅದು ಹಿಂದಿಯನ್ನು ರಾಷ್ಟ್ರೀಯ ಅಧಿಕೃತ ಭಾಷೆಯೆಂದು ಪರಿಗಣಿಸುತ್ತದೆ ಎಂದು ಇಂದು ಶ್ರೀ ದೀನದಯಾಳ್ ಉಪಾಧ್ಯಾಯ ಅವರು ಇಲ್ಲಿ ಹೇಳಿದರು. ಇತ್ತೀಚಿನ ಭಾಷಾ ಗೊಂದಲಗಳಿಗಿಂತಲು ಮೊದಲೇ ನಮ್ಮ ಕಾರ್ಯನೀತಿಯ ಹೇಳಿಕೆಯನ್ನು ಅಳವಡಿಸಿಕೊಳ್ಳಲಾಗಿತ್ತು. ಮತ್ತು ಭಾರತ ಸರ್ಕಾರವು ಯಾವುದೇ ಪತ್ರವನ್ನಾಗಲೀ ಯಾವ ಭಾಷೆಯಲ್ಲಿ ಸ್ವೀಕರಿಸಲಾಗಿದೆಯೋ ಅದೇ ಭಾಷೆಯಲ್ಲಿಯೇ ಆ ಪತ್ರಕ್ಕೆ ಉತ್ತರಿಸಬೇಕೆಂದು ಅದರಲ್ಲಿ ಹೇಳಲಾಗಿದೆ ಎಂದವರು ಹೇಳಿದರು.

**ಬಹುಪಾಲು ಉದ್ದೇಶಗಳಿಗೆ ಎಲ್ಲ ಭಾಷೆಗಳು**

ಸಂಸತ್ ಸದಸ್ಯರು ಯಾವುದೇ ಭಾರತೀಯ ಭಾಷೆಯಲ್ಲಿ ಮಾತನಾಡುವುದಕ್ಕೆ ಅವರ ಬೆಂಬಲವಿದೆಯೇ ಎಂದು ಕೇಳಿದಾಗ ಅವರೆಂದರು, ಖಂಡಿತವಾಗಿಯೂ. ಸಂಸತ್ತಿನಲ್ಲಿ ಮಾಡಿದ ಭಾಷಣಗಳ ಭಾಷಾಂತರಗಳನ್ನು ಏಕಕಾಲದಲ್ಲೇ ನಾವು ಒದಗಿಸಬಹುದು.

ಎಂದರೆ ಗುತ್ತಿಗೆದಾರರು, ಉದಾಹರಣೆಗೆ, ಕೇಂದ್ರೀಯ ಗುತ್ತಿಗೆಗಳಿಗಾಗಿ ಯಾವುದೇ ಭಾಷೆಯಲ್ಲಾಗಲೀ ಬೆಲೆಯನ್ನು ನಮೂದಿಸಬಹುದೆಂದೂ ಇದರರ್ಥವೇ? ಎಂದು ನಾನು ಕೇಳಿದೆ.

ಯಾಕಾಗಬಾರದು? ಎಂದರು ದೀನ್ ದಯಾಳ್‌ಜೀ.

ಅವರು ಮುಂದುವರೆಸಿದರು. ಎಲ್ಲ ಉದ್ದೇಶಗಳಿಗೂ ಎಲ್ಲ ಭಾಷೆಗಳು ಸಮಾನವಾಗಿರಬೇಕು. ಆದರೆ ಕೇಂದ್ರದ ಆಡಳಿತವನ್ನು ಹಿಂದಿಯಲ್ಲಿ ನಡೆಸಬೇಕು ಎಂದು ಜನಸಂಘವು ಬಯಸುತ್ತದೆ. ಇದು ಅತ್ಯವಶ್ಯಕ. ಏಕೆಂದರೆ ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಉದ್ಯೋಗಿಗಳು ಕರಡು ಸಿದ್ಧ ಮಾಡುವುದು, ಟಿಪ್ಪಣಿ ಮುಂತಾದವಕ್ಕೆ ಒಂದೇ ಕಚೇರಿಯಲ್ಲಿ ಬೇರೆ ಬೇರೆ ಭಾಷೆಗಳನ್ನು ಬಳಸಲು ಅವಕಾಶ ನೀಡಲಾಗುವುದಿಲ್ಲ. ಹಾಗೆ ಮಾಡಿದ್ದೇ ಆದರೆ ಎಲ್ಲ ಆಡಳಿತದ ಸಮಾಪ್ತಿಯಾಗುತ್ತದೆ. ಅದನ್ನು ಯಾರೂ ಬಯಸರು ಎಂದು ಆಶಿಸುತ್ತೇನೆ.

**ಎಡ ಕಮ್ಯೂನಿಸ್ಟ್ ಚುನಾಯಿತ ಎಂ.ಎಲ್.ಎ.ಗಳ ಮೊಕದ್ದಮೆಗಳು**

ಕೇರಳ ಶಾಸನ ಸಭೆಗೆ ಚುನಾಯಿತರಾದ ಎಡಪಂಥೀಯ ಅಪರಾಧ ಶಂಕಿತರ ಬಗ್ಗೆ ಮಾತನಾಡುತ್ತಾ. ಶ್ರೀ ದೀನ್ ದಯಾಳ್ ಅವರು, ಪ್ರಜಾಪ್ರಭುತ್ವವನ್ನು ರಾಷ್ಟ್ರೀಯ ಸುಭದ್ರತೆಯೊಂದಿಗೆ ಸಮನ್ವಯ ಮಾಡಿಕೊಳ್ಳುವ ಅತ್ಯುತ್ತಮ ಮಾರ್ಗವೆಂದರೆ,

ಪ್ರಕಟ ಮಾಡಲಾಗದೆಂದು ಸರ್ಕಾರ ಹೇಳುವ ಗುಪ್ತ ಮಾಹಿತಿಗಳೊಂದಿಗೆ ಯಾವುದಾದರೂ ನ್ಯಾಯಪೀಠಕ್ಕೆ ಅವರ ಮೊಕದ್ದಮೆಗಳನ್ನು ವಹಿಸುವುದು ಎಂದರು.

ಅಂತಹ ನ್ಯಾಯಪೀಠವು ರಾಷ್ಟ್ರೀಯ ಸುಭದ್ರತೆಗಾಗಿ ಅವರಲ್ಲಿ ಕೆಲವರ ಅಥವಾ ಎಲ್ಲರ ಬಂಧನ ಅವಶ್ಯಕ ಎಂದು ಅಭಿಪ್ರಾಯ ಪಟ್ಟರೆ ಸರ್ಕಾರವು ಅವರನ್ನು ಬಂಧನದಲ್ಲಿರಿಸುವುದು ಸಂಪೂರ್ಣವಾಗಿ ನ್ಯಾಯ ಸಮ್ಮತವಾಗುತ್ತದೆ. ಹಾಗಿಲ್ಲದೇ ಹೋದಲ್ಲಿ, ಅವರನ್ನು ಬಿಡುಗಡೆ ಮಾಡಬೇಕು.

ಮೂಲ : ಆರ್ಗನೈಸರ್, ೧೫ ಮಾರ್ಚ್ ೧೯೬೫

## ಡಿ.ಎಂ.ಕೆ. ಭಾಷಾ ಕೇಂದ್ರವನ್ನು ಬಯಸುತ್ತದೆ; ಬಿ.ಜೆ.ಎಸ್., ಏಕ–ಭಾಷಾಕೇಂದ್ರವನ್ನು ಬಯಸುತ್ತದೆ

(ಬಿಜೆಎಸ್ ಪ್ರಧಾನ ಕಾರ್ಯದರ್ಶಿ ದೀನ್ ದಯಾಳ್ ಉಪಾಧ್ಯಾಯ ಅವರೊಂದಿಗೆ ಮದ್ರಾಸಿನಲ್ಲಿ ನಡೆದ ವಿಶೇಷ ಸಂದರ್ಶನ)

**ಪ್ರ: ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ ಯಥಾಸ್ಥಿತಿಯನ್ನು ಮುಂದುವರೆಸಬಾರದೇಕೆ?**

ಉ: ಯಾವುದೇ ಸ್ವತಂತ್ರ ರಾಷ್ಟ್ರವಾದರೂ ಸ್ವಾತಂತ್ರ್ಯದ ಸವಾಲುಗಳನ್ನು ಎದುರಿಸಲೇಬೇಕು. ಉದಾಹರಣೆಗೆ ಸ್ವತಂತ್ರವಾಗಿದ್ದ ರಾಜಾಡಳಿತದ ರಾಜ್ಯಗಳನ್ನು ನಾವು ವಿಲೀನಗೊಳಿಸಿದೆವು. ರಕ್ಷಣಾ ಕ್ಷೇತ್ರದಲ್ಲಿ, ಚೀನಾದ ಆಕ್ರಮಣದ ನಂತರ, ನಾವು ಸೇನೆಯನ್ನು ಪುನಸ್ಸಂಘಟಿಸಿ, ಆಧುನೀಕರಿಸಲೇಬೇಕಾಯಿತು. ಯಥಾಸ್ಥಿತಿಗೆ ಕಟ್ಟುಬಿದ್ದು ಬೆಳವಣಿಗೆಯ ಸಮಸ್ಯೆಗಳನ್ನು ನಾವು ಪರಿಹರಿಸಿಕೊಳ್ಳಲಾಗುವುದಿಲ್ಲ. ನಾವೇ ಅವುಗಳನ್ನು ಎದುರಿಸಿ ಪರಿಹರಿಸಬೇಕಾಗುತ್ತದೆ.

**ಪ್ರ: ಇಂಗ್ಲಿಷ್ ವಿಶ್ವದ ಜ್ಞಾನಭಂಡಾರಕ್ಕೇ ಕಿಟಕಿಯಾಗಿದೆ. ಕಿಟಕಿಯನ್ನು ಮುಚ್ಚಿದರೆ ನಮ್ಮನ್ನು ನಾವು ಕೂಡಿ ಹಾಕಿಕೊಂಡಂತಲ್ಲವೇ?**

ಉ: ನಾವು ಯಾವಾಗಲೂ ಇತರರಿಂದ ಜ್ಞಾನವನ್ನು ಸ್ವೀಕರಿಸಬೇಕು ಎನ್ನುವ ಕೀಳರಿಮೆಯನ್ನು ಅದು ಸೂಚಿಸುತ್ತದೆ. ಅದು ಹತಾಶೆಯ ಚಿಂತನೆಯಾಗಿದೆ. ನಾವು ಕೂಡಾ ಅಭಿವೃದ್ಧಿ ಹೊಂದಿ ನಮ್ಮ ಜಗತ್ತಿಗೆ ನೀಡಬೇಕು. ನಮ್ಮ ಭಾಷೆಯ ಮೂಲಕವಷ್ಟೇ ನಾವು ಜಗತ್ತಿಗೆ ನೀಡಬಹುದಾದ ಉದಾತ್ತವಾದ ಸಂಸ್ಕೃತಿ ಮತ್ತು ಪರಂಪರೆ ನಮ್ಮಲ್ಲಿದೆ.

ವಿಶ್ವದ ಜ್ಞಾನಭಂಡಾರಕ್ಕೇ ಇಂಗ್ಲಿಷ್ ಒಂದು ಬೆಳಕಿಂಡಿ ಎನ್ನುವುದು ಸತ್ಯವಲ್ಲ. ಫ್ರೆಂಚ್, ಜರ್ಮನ್, ರಷ್ಯನ್ ಮುಂತಾದ ಭಾಷೆಗಳ ಜ್ಞಾನದಿಂದ ನಾವು ವಂಚಿತರಾಗಿದ್ದೇವೆ. ನಮ್ಮ ಲಕ್ಷಾಂತರ ಯುವಕರು ಕೇವಲ ಇಂಗ್ಲಿಷ್ ಕಲಿಯುತ್ತಿದ್ದಾರೆ.

ಅವರು ಇತರ ಭಾಷೆಗಳನ್ನು ಕಲಿತರೆ ಖಂಡಿತವಾಗಿಯೂ ನಮ್ಮ ಜ್ಞಾನವು ಇನ್ನು ಬಹುಪಾಲು ಹೆಚ್ಚಾಗುತ್ತದೆ.

**ಪ್ರ: ಹಿಂದಿ ರಾಜ್ಯಗಳಲ್ಲಿ ಕೂಡಾ ೮೦% ಕೆಲಸಗಳನ್ನು ಇಂಗ್ಲಿಷಿನಲ್ಲೇ ಮಾಡಲಾಗುತ್ತಿದೆ ಎನ್ನುವುದು ನಿಜವೇ?**

ಉ: ಈ ವಿಷಯದಲ್ಲಿ ಪ್ರತಿಯೊಂದು ರಾಜ್ಯ ಸರ್ಕಾರವೂ ಅಪರಾಧಿಯೇ. ಆದರೂ ಇತರ ಯಾವುದೇ ರಾಜ್ಯಗಳಲ್ಲಿ ಅವರವರ ಪ್ರಾಂತೀಯ ಭಾಷೆಗಳನ್ನು ಬಳಸುವುದಕ್ಕಿಂತ ಹಿಂದಿ ರಾಜ್ಯಗಳಲ್ಲಿ ಹಿಂದಿಯ ಬಳಕೆ ಬಹಳ ಹೆಚ್ಚಿನದು. ಈಗ ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ ಮತ್ತು ರಾಜಾಸ್ಥಾನಗಳಲ್ಲಿ ಕಾನೂನು ಸಂಬಂಧವಾದ ಎಲ್ಲ ಕೆಲಸಗಳನ್ನೂ ಹಿಂದಿಯಲ್ಲೇ ನಡೆಸಲಾಗುತ್ತಿದೆ. ಕಚೇರಿಗಳಲ್ಲಿ ಕೂಡಾ ಹಿಂದಿಯನ್ನು ಹೆಚ್ಚುಹೆಚ್ಚಾಗಿ ಬಳಸಲಾಗುತ್ತಿದೆ ಹಾಗೂ ಆಯಾ ಸರ್ಕಾರಗಳ ಆಶ್ವಾಸನೆಗಳಲ್ಲಿ ವಿಶ್ವಾಸವಿರಿಸಬಹುದಾದರೆ, ಒಂದೆರಡು ವರ್ಷಗಳಲ್ಲಿ ಹಿಂದಿ ಸಂಪೂರ್ಣವಾಗಿ ಇಂಗ್ಲಿಷಿನ ಸ್ಥಾನಕ್ಕೆ ಬರುತ್ತದೆ. ಅಲಹಾಬಾದ್ ಉಚ್ಚ ನ್ಯಾಯಾಲಯದಲ್ಲಿ ವಾದಗಳನ್ನು ಹಿಂದಿಯಲ್ಲಿ ಮಂಡಿಸಬಹುದು. ಹಾಗೂ ಅನೇಕ ಮೊಕದ್ದಮೆಗಳಲ್ಲಿ ಹಾಗೆಯೇ ಮಾಡಲಾಗುತ್ತಿದೆ. ೧೯೫೦ರಲ್ಲಿ ಸಂವಿಧಾನವನ್ನು ರೂಪಿಸುವುದಕ್ಕೆ ಮೊದಲೇ ಮಧ್ಯಭಾರತ ಉಚ್ಚ ನ್ಯಾಯಾಲಯದ ಎಲ್ಲ ಕೆಲಸ ಕಾರ್ಯಗಳೂ ಹಿಂದಿಯಲ್ಲೇ ನಡೆಯುತ್ತಿದ್ದವು. ಅಧಿಕೃತ ಭಾಷೆಯಾಗಿ ಬಳಸಲ್ಪಡಲು ಸಾಕಾಗುವ ಮಟ್ಟಿಗೆ ಹಿಂದಿ ಬೆಳೆದಿದೆ ಎಂದು ಇದು ತೋರಿಸುತ್ತದೆ. ತೊಂದರೆ ಏನಿದ್ದರೂ, ಅದು ಸರ್ಕಾರಕ್ಕೆ ಅವಶ್ಯಕ ಇಚ್ಛಾಶಕ್ತಿ ಇಲ್ಲ ಎಂಬುದೇ ಆಗಿದೆ ಮತ್ತು ಕೆಲವು ಸಂದರ್ಭಗಳಲ್ಲಿ ಸೇವಾ ಉದ್ಯೋಗಿಗಳಿಗೆ ಹಿಂದಿಯಲ್ಲಿ ಅವಶ್ಯಕ ಪರಿಣತಿ ಇಲ್ಲದಿರಬಹುದು.

**ಪ್ರ: ಹಿಂದಿಯನ್ನು ಏಕೈಕ ಅಧಿಕೃತ ಭಾಷೆಯನ್ನಾಗಿ ಮಾಡಿ, ಆ ಮೂಲಕ ಹಿಂದಿ ರಾಜ್ಯಗಳಿಗೆ ಹೆಚ್ಚುಗಾರಿಕೆ ನೀಡಿದರೆ ಹಿಂದಿಯೇತರ ರಾಜ್ಯಗಳಿಗೆ ನಷ್ಟವಾಗುವುದಿಲ್ಲವೇ?**

ಉ: ಕೇಂದ್ರ ಲೋಕಸೇವಾ ಆಯೋಗವು ವಿವಿಧ ಪ್ರಾಂತೀಯ ಭಾಷೆಗಳನ್ನು ಪರೀಕ್ಷಾ ಮಾಧ್ಯಮವಾಗಿ ಮಾಡಿದರೆ ನೇಮಕಾತಿಗೆ ಸಂಬಂಧಿಸಿದಂತೆ ಯಾವ ರಾಜ್ಯಕ್ಕೂ ನಷ್ಟವಾಗುವುದಿಲ್ಲ. ಎರಡನೆಯದಾಗಿ ಹಿಂದಿ ಬೋಧಿಸಲು ಸೂಕ್ತವಾದ ಮತ್ತು ಸಾಕಷ್ಟು ವ್ಯವಸ್ಥೆಗಳನ್ನು ಮಾಡಿದರೆ ಮತ್ತು ರಾಜಕಾರಣಿಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಹಿಂಜರಿಕೆಗಳನ್ನು ಹುಟ್ಟು ಹಾಕದಿದ್ದರೆ ಹಿಂದಿಯೇತರ ಜನ, ಅವರು ಇಂಗ್ಲಿಷಿನಲ್ಲಿ ಸಾಧಿಸಿರುವವರು ಎಂದು ಹೇಳಲಾಗಿರುವಂತೆಯೇ ಹಿಂದಿಯ ಬಳಕೆಯಲ್ಲಿಯೂ ಹಿಂದಿ ಭಾಷಿಗರನ್ನು ಮೀರಿಸುವರು ಎಂದು ನನಗೆ ಖಾತ್ರಿಯಿದೆ.

**ಪ್ರ: ಇಂಗ್ಲಿಷನ್ನು ತೆಗೆದು ಹಾಕಿದರೆ, ನಮ್ಮ ಐಕ್ಯತೆಗೆ ಧಕ್ಕೆಯುಂಟಾಗುವುದಿಲ್ಲವೇ?**

ಉ: ಜನತೆಯಲ್ಲಿ ಒಟ್ಟಾಗಿ ಬದುಕಬೇಕೆಂಬ ಇಚ್ಛೆ ಮತ್ತು ರಾಷ್ಟ್ರದಲ್ಲಿ ಅವರಿಗಿರುವ ಶ್ರದ್ಧೆ ಮತ್ತು ಏನೇ ಆದರೂ ಐಕ್ಯತೆಯನ್ನು ಉಳಿಸಿಕೊಳ್ಳಬೇಕೆಂದು ಜನರಲ್ಲಿ ಹಾಗೂ ಸರ್ಕಾರದಲ್ಲಿ ಇರುವ ನಿರ್ಧಾರಗಳನ್ನು ಐಕ್ಯತೆಯು ಅವಲಂಬಿಸುತ್ತದೆ. ೧೯೪೭ರಲ್ಲಿ ಈ ನಿರ್ಧಾರದ ಕೊರತೆಯಿದ್ದಾಗ ಅವುಗಳಲ್ಲಿ ಒಂದೇ ಭಾಷೆಯಿದ್ದರೂ ಕೂಡಾ ಪಂಜಾಬಾಗಲೀ ಬಂಗಾಳವಾಗಲೀ ಒಟ್ಟಾಗಿ ಇರಲು ಸಾಧ್ಯವಾಗಲಿಲ್ಲ. ಅಲ್ಲದೆ, ಒಂದು ಜೀವಿಯಲ್ಲಿ ಅದರ ಮೂಲ ಸ್ವಭಾವಕ್ಕೆ ವಿರುದ್ಧವಾದ ಅಂಶವೊಂದು ಇದ್ದರೆ ಅದು ನಾಶವಾಗಿಯೇ ತಿರುತ್ತದೆ. ಇಂಗ್ಲಿಷ್ ಅಂತಹ ಒಂದು ಬಾಹ್ಯ ಅಂಶ. ಬ್ರಿಟಿಷರ ಕೈಕೆಳಗೆ ಭಾರತದ ಐಕ್ಯತೆಯು ಕೇವಲ ಕೃತಕವೂ ನಕಾರಾತ್ಮಕವೂ ಆಗಿತ್ತು. ಸಕಾರಾತ್ಮಕ ಹಾಗೂ ಕ್ರಿಯಾಶೀಲ ಐಕ್ಯತೆಯು ನಮ್ಮ ಭಾಷೆಯ ಮೂಲಕ ಮಾತ್ರ ಸಾಧ್ಯ.

**ಪ್ರ: ಭಾಷೆಯು ಐಕ್ಯತೆಗಾಗಿ ಅವಶ್ಯಕವಲ್ಲದಿದ್ದರೆ ಹಿಂದಿಗಾಗಿ ಒತ್ತಾಯಿಸುತ್ತಿರುವವರಾರು? ನೀವು ಏಕರೂಪತೆಯನ್ನು ತರಲು ಪ್ರಯತ್ನಿಸುತ್ತಿಲ್ಲವೇ?**

ಉ: ಹಿಂದಿಯ ಅವಶ್ಯಕತೆಯಿರುವುದು ಭಾರತದ ಐಕ್ಯತೆಗಾಗಿಯಲ್ಲ; ಆದರೆ ಒಂದು ಸ್ವತಂತ್ರ ರಾಷ್ಟ್ರವಾಗಿ ನಮಗೆ ಒಂದು ಅಧಿಕೃತ ಭಾಷೆ ಬೇಕು; ಅದು ಐತಿಹಾಸಿಕ ಕಾರಣಗಳಿಗಾಗಿ ನಮ್ಮ ಭಾಷೆಯೇ ಆಗಿರಬೇಕು. ಹಿಂದಿ ಆ ಸ್ಥಾನದಲ್ಲಿದೆ. ಅಷ್ಟೇ ಅಲ್ಲ ಭಾಷೆಗಳ ಬಳಕೆಯೂ ಮುಂದುವರೆಯುವುದರಿಂದ ಏಕರೂಪತೆಯ ಪ್ರಶ್ನೆ ಉದ್ಭವಿಸುವುದಿಲ್ಲ. ರಾಜ್ಯ ಮಟ್ಟದವರೆಗೆ ಕಚೇರಿ ಕೆಲಸವು ಪ್ರಾಂತೀಯ ಭಾಷೆಗಳಲ್ಲೇ ನಡೆಯುವುದು. ಕೇಂದ್ರದ ಸಾರ್ವಜನಿಕರೊಂದಿಗೆ ನೇರವಾಗಿ ವ್ಯವಹರಿಸುವಂಥ ವಿಭಾಗಗಳೂ ಕೂಡಾ ಅಂತಹ ಕಾರ್ಯಗಳಿಗೆ ಪ್ರಾಂತೀಯ ಭಾಷೆಗಳನ್ನೇ ಬಳಸಬೇಕಾಗುತ್ತದೆ. ಹೀಗಾಗಿ ಈಗ ಇಂಗ್ಲಿಷಿನಲ್ಲಿ ನಡೆಯುತ್ತಿರುವ ಕೆಲಸದ ೫% ಭಾಗ ಮಾತ್ರ ಹಿಂದಿಯ ಮೂಲಕ ನಡೆಯುತ್ತದೆ. ಇಂಗ್ಲಿಷ್ ಹೋದರೆ ಅದರ ಸ್ಥಾನಕ್ಕೆ ಬರುವುದು ಕೇವಲ ಹಿಂದಿಯಲ್ಲ. ಆದರೆ ಭಾರತದ ಎಲ್ಲ ರಾಷ್ಟ್ರೀಯ ಭಾಷೆಗಳು.

**ಪ್ರ: ಇಂಗ್ಲಿಷನ್ನು ವಿದೇಶೀ ಭಾಷೆಯೆಂದು ಏಕೆ ಕರೆಯುತ್ತೀರಿ? ನಮ್ಮವರಲ್ಲಿ ಕೆಲವರು ಅದನ್ನು ತಮ್ಮ ಮಾತೃಭಾಷೆಯಾಗಿ ಮಾತನಾಡುತ್ತಾರೆ.**

ಉ: ಜನರ ಒಂದು ವರ್ಗ ಮಾತನಾಡುತ್ತೇವೆಂದು ಹೇಳಿದಾಕ್ಷಣ ಒಂದು ಭಾಷೆಯು ರಾಷ್ಟ್ರಭಾಷೆಯಾಗುವುದಿಲ್ಲ. ಅದರ ಆತ್ಮ, ಸಾಹಿತ್ಯ, ರಚನೆ, ಭಾಷಾರೂಪ, ಪ್ರತಿಮೆಗಳು, ಪದಗುಚ್ಛಗಳು, ಗಾದೆಗಳು ಮುಂತಾದವೆಲ್ಲ ನಾಡಿಗೆ ಮತ್ತು ಜನರಿಗೆ, ಅವರ ಸಂಸ್ಕೃತಿಗೆ ಮತ್ತು ಅವರ ಇತಿಹಾಸಕ್ಕೆ ಸಂಬಂಧ ಹೊಂದಿರಬೇಕು. ವಿವಿಧ ಭಾರತೀಯ ಭಾಷೆಗಳನ್ನು ನಿರ್ದಿಷ್ಟ ಪ್ರಾಂತ್ಯಗಳಲ್ಲಿ ಅವುಗಳನ್ನು ಮಾತನಾಡುತ್ತಿದ್ದರೂ ಕೂಡಾ, ಅವು ಈ ಅವಶ್ಯಕತೆಗಳನ್ನೂ ಪೂರೈಸುತ್ತವೆ ಮತ್ತು ಇದರಿಂದಾಗಿ

ಅವುಗಳ ದೃಷ್ಟಿಕೋನ ಮತ್ತು ಸಾಹಿತ್ಯದ ಮಟ್ಟಿಗೆ "ಅವು ಅಖಿಲ" ಭಾರತ. ಆದ್ದರಿಂದ ಅವುಗಳನ್ನು ಕೇವಲ ಪ್ರಾಂತೀಯ ಭಾಷೆಗಳೆಂದು ಪರಿಗಣಿಸಿಲ್ಲ.

**ಪ್ರ: ಸಂಗೀತದಂತೆ ವಿಜ್ಞಾನದಂತೆ, ಔಷಧಿಯಂತೆ ಭಾಷೆ ಕೂಡಾ ಒಂದು ಮಾಧ್ಯಮ. ಒಂದು ಭಾಷೆ ಹೇಗೆ ವಿದೇಶೀ ಆಗಬಲ್ಲದು?**

ಉ: ಭಾಷೆ ಎನ್ನುವುದು ಕೇವಲ ವಿಚಾರವನ್ನು ವ್ಯಕ್ತಪಡಿಸುವ ಮಾಧ್ಯಮವಲ್ಲ. ಅದು ವಿಚಾರವನ್ನು ರೂಪಿಸುತ್ತದೆ ಕೂಡಾ.

**ಪ್ರ: ಡಿ.ಎಂ.ಕೆ. ಯಿಂದ ನೀವು ಹೇಗೆ ಭಿನ್ನ?**

ಉ: ಡಿ.ಎಂ.ಕೆ. ಬಹುಭಾಷಾ ಕೇಂದ್ರವನ್ನು ಬಯಸುತ್ತದೆ. ನಾವು ಏಕ ಭಾಷೆಗಳನ್ನು ಬಯಸುತ್ತೇವೆ ಮತ್ತು ಯಾವುದೇ ನಿರ್ದಿಷ್ಟ ಭಾಷೆಗಳನ್ನು ಮಾತನಾಡುವವರ ತೊಂದರೆಗಳನ್ನು ನಿವಾರಿಸಬಯಸುತ್ತೇವೆ. ಸರ್ಕಾರದ ಎಲ್ಲ ವ್ಯವಹಾರವನ್ನೂ ಎಲ್ಲ ಹದಿನಾಲ್ಕು ಭಾಷೆಗಳಲ್ಲೂ ನಡೆಸುವುದೇ ಬೇರೊಂದು ವಿಷಯ. ಇಷ್ಟೊಂದು ಭಾಷೆಗಳಿರುವುದರಿಂದ ಇದು ಕಾರ್ಯಸಾಧ್ಯವಲ್ಲ. ಸ್ವಿಟ್ಜರ್ಲೆಂಡಿನಲ್ಲಿ ವಿಸ್ತೀರ್ಣ ಮತ್ತು ಜನಸಂಖ್ಯೆ ಚಿಕ್ಕದಾಗಿವೆ ಹಾಗೂ ಬಹಳ ಜನ ೩ ಭಾಷೆಗಳನ್ನೂ ಬಲ್ಲರು. ಆದರೆ ನಮ್ಮ ಮಟ್ಟಿಗೆ ಹೇಳುವುದಾದರೆ, ನಮ್ಮ ಭಾಷಾ ಸಮಸ್ಯೆಯು ಜಗತ್ತಿನಲ್ಲಿ ಬೇರೆಲ್ಲೂ ಕಂಡುಬರದು. ಜನಸಂಘದ ಭಾಷಾಸೂತ್ರವು ಹಿಂದಿ ಪ್ರಾಂತೀಯ ಭಾಷೆಗಳು ಹಾಗೂ ಪ್ರಮುಖ ವಿದೇಶಿ ಭಾಷೆಗಳು ಎಲ್ಲಕ್ಕೂ ನ್ಯಾಯ ಒದಗಿಸುತ್ತದೆ.

**(ಮೂಲ : ಆರ್ಗನೈಸರ್, ೨೬ ಏಪ್ರಿಲ್ ೧೯೬೫)**

**ಕಾಂಗ್ರೆಸ್ಸಿಗರ ಕೈಯಲ್ಲಿ ರಾಷ್ಟ್ರದ ಮಾನ ಸುರಕ್ಷಿತವಾಗಿಲ್ಲ.**

ಯು.ಕೆ. (ಯುನೈಟೆಡ್ ಕಿಂಗ್ಡಮ್, ಇಂಗ್ಲೆಂಡ್) ಮುಂದಿಟ್ಟಿರುವ ಸಂಧಾನ ಸೂತ್ರಗಳಿಗೆ ಭಾರತ ಸರ್ಕಾರ ನೀಡಿರುವ ಒಪ್ಪಿಗೆಯು ಸರ್ಕಾರದ ಘೋಷಣೆಗಳಿಗೂ, ಮತ್ತು ಹೋರಾಡುತ್ತೇವೆ ಎಂಬ ರಾಷ್ಟ್ರದ ನಿರ್ಧಾರಕ್ಕೂ ಹಾಗೂ ಆಕ್ರಮಣಕಾರರನ್ನು ನಮ್ಮ ಗಡಿಗಳಿಂದಾಚೆಗೆ ಒಗೆಯುತ್ತೇವೆಂಬ ವಾಗ್ದಾನಕ್ಕೂ ವ್ಯತಿರಿಕ್ತವಾಗಿದೆ. ಸರ್ಕಾರವು ಒತ್ತಾಯಕ್ಕೆ ಸಿಕ್ಕಿ ಈ ನಿಲುವಿಗೆ ಬಂದಿದೆ ಎನಿಸುತ್ತದೆ. ಉದ್ದಕ್ಕೂ ಅದು ವರ್ತಿಸಿರುವ ರೀತಿಯು ಗೊಂದಲದ ಹಾಗೂ ಉದ್ದೇಶರಾಹಿತ್ಯದ ಸ್ಥಿತಿಯನ್ನು ತೋರಿಸುತ್ತದೆ. ಮತ್ತೊಮ್ಮೆ ಸರ್ಕಾರವು ಅದರ ಮೇಲಿರಿಸಿರುವ ನಂಬಿಕೆಗೆ ದ್ರೋಹವೆಸಗಿದೆ. ರಾಷ್ಟ್ರದ ಮಾನ ಮತ್ತು ಸಮಗ್ರತೆಗಳು ಅವರ ಕೈಯಲ್ಲಿ ಸುರಕ್ಷಿತವಾಗಿಲ್ಲ ಎಂದು ಅವರು ತೋರಿಸಿದ್ದಾರೆ. ಇಂತಹ ಮುಖ್ಯ ವಿಷಯದಲ್ಲಿ ಸರ್ಕಾರವು ಜನತೆಯ ಭಾವನೆಯನ್ನು ಪ್ರತಿನಿಧಿಸುವಲ್ಲಿ ಮತ್ತು ಬಿಂಬಿಸುವಲ್ಲಿ ಸೋತಿದೆ.

**ಮೂಲ: ಆರ್ಗನೈಸರ್, ೧೦ ಮೇ ೧೯೬೫**

**ಬೇಕಾಗಿದೆ: ಭಾರತ-ಯು.ಎಸ್. ಸ್ನೇಹಕ್ಕೊಂದು ಗಟ್ಟಿಯಾದ ತಳಹದಿ**

ರಷ್ಯಾಕ್ಕೆ ಪ್ರಧಾನಮಂತ್ರಿ ಶಾಸ್ತ್ರಿಗಳ ಭೇಟಿಯಿಂದ ಭಾರತಕ್ಕೆ ಎಂತಹ ಲಾಭಕರವಾದ ಮತ್ತು ನಿವ್ವಳ ಆದಾಯಗಳು ಒದಗುತ್ತವೆ ಎಂಬುದನ್ನು ಕಾದುನೋಡಬೇಕಾಗಿದೆ. ಆದರೆ ಅಮೇರಿಕಾದ ಇತ್ತೀಚಿನ ನಿಲುವುಗಳಿಂದ ನೊಂದ ಭಾರತಕ್ಕೆ ಈ ಭೇಟಿಯು ಸಾಂತ್ವನ ನೀಡುವುದರಲ್ಲಿ ಸಂಶಯವಿಲ್ಲ. ದಗಾಕೋರ, ರಾಜತಂತ್ರ ಮತ್ತು ಕರಡಿ ಕಚಗುಳಿಗಳ ನಡುವಿನ ವೈರುಧ್ಯವನ್ನು ಶ್ರೀ ಸಾಮಾನ್ಯನು ಗುರುತಿಸದೇ ಇರಲಾರ. ರಾಷ್ಟ್ರದ ಈಗಿನ ಮನಸ್ಥಿತಿಯಲ್ಲಿ, ಈ ಎರಡನೆಯದರ ಅಪಾಯಕಾರೀ ಪರಿಣಾಮಗಳನ್ನು ಗ್ರಹಿಸುವವರು ವಿರಳ ಎಂದು ನಿರೀಕ್ಷಿಸಬಹುದು. ಭಾರತ-ಅಮೇರಿಕಾಗಳ ಸ್ನೇಹಕ್ಕೆ ಹಿನ್ನಡೆಯಾಗುವುದರಲ್ಲಿ ಆಶ್ಚರ್ಯವಿಲ್ಲ.

ಭಾರತ ಮತ್ತು ಅಮೇರಿಕಾದ ಸಂಬಂಧಗಳನ್ನು ಬಲಪಡಿಸಲು ಬಯಸುವ ಜನ ಭಾರತ ಮತ್ತು ಅಮೇರಿಕಾಗಳೆರಡರಲ್ಲೂ ಇದ್ದಾರೆ. ಈ ಎರಡು ದೇಶಗಳೂ ಕೂಡಾ ಪ್ರಜಾಪ್ರಭುತ್ವಕ್ಕೆ ಕಟ್ಟುಬಿದ್ದಿವೆ. ಪೂರ್ವ ಮತ್ತು ಪಶ್ಚಿಮಗಳಲ್ಲಿ ಇವು ಒಂದೊಂದೂ ಪ್ರಜಾಪ್ರಭುತ್ವದ ಪ್ರಬಲ ರಕ್ಷಕರಾಗಬಹುದು. ಆದರೆ ಈ ಸೈದ್ಧಾಂತಿಕ ಮೈತ್ರಿಯು ಸದೃಢವಾದ ಹಾಗೂ ತಾಳುವಂತಹ ಐಕ್ಯತೆಯು ಒಕ್ಕೂಟವನ್ನು ರೂಪಿಸಲು ತೀರಾ ತೆಳುವಾದುದು. ಸಿದ್ಧಾಂತವು ಅಂತರರಾಷ್ಟ್ರೀಯ ಧೋರಣೆಗಳಿಗೆ ಪೂರ್ಣವಾಗಿ ಅಪ್ರಸ್ತುತವಾಗಿರುವ ಅಸಂಖ್ಯಾತ ಉದಾಹರಣೆಗಳನ್ನು ಇತಿಹಾಸ ನೀಡುತ್ತದೆ. ಅಲ್ಲದೆ, ತಾನು ಹೋದಲ್ಲೆಲ್ಲ ಪ್ರಜಾಪ್ರಭುತ್ವವನ್ನು ಉಳಿಸಲು ಮತ್ತು ಬೆಳೆಸಲು ಅಮೆರಿಕಾ ಹೆಚ್ಚು ಗಮನ ಹರಿಸಿಯೇ ಇಲ್ಲ. ಸಾಮಾನ್ಯವಾಗಿ ಹೇಳುವುದಾದರೆ, ಪಶ್ಚಿಮ ಯೂರೋಪಿನ ರಾಷ್ಟ್ರಗಳನ್ನು ಹೊರತುಪಡಿಸಿದರೆ, ಅಮೆರಿಕಾದ ಎಲ್ಲ ಮಿತ್ರ ರಾಷ್ಟ್ರಗಳಲ್ಲೂ ಪ್ರಜಾಪ್ರಭುತ್ವ ನಾಶವಾಗಿದೆ. ಇದನ್ನು ಅಮೆರಿಕಾದ ಯಾವುದೇ ಟೀಕೆ ಎಂದು ನಮ್ಮ ಅರ್ಥವಲ್ಲ. ಪ್ರಜಾಪ್ರಭುತ್ವದ ಮೂಲ ಸ್ವಭಾವದಿಂದಾಗಿಯೇ ಅದನ್ನು ಸ್ಥಳಾಂತರಿಸಲು ಇಲ್ಲವೇ ಕೃತಕವಾಗಿ ಎತ್ತಿ ನಿಲ್ಲಿಸಲು ಸಾಧ್ಯವಿಲ್ಲ. ಜನರ ಜಾಯಮಾನವೇ ಅದನ್ನು ಪೋಷಿಸುವುದು. ಆದ್ದರಿಂದ ಅಮೆರಿಕಾದೊಂದಿಗೆ ಸ್ನೇಹ ಬಯಸುವವರು ಅಂತಹ ಸ್ನೇಹವನ್ನು ಹಾರೈಕೆಯ ಪ್ರಮೇಯಗಳ ಮೇಲೆ ಸ್ಥಾಪಿಸಲು ಸಾಧ್ಯವಿಲ್ಲ.

ರಾಷ್ಟ್ರೀಯ ಜೀವನದ ಕಠಿಣ ಸತ್ಯಗಳ ಆಧಾರಗಳ ಮೇಲೆಯೇ ಅಂತರರಾಷ್ಟ್ರೀಯ ಸಂಬಂಧಗಳನ್ನು ಬೆಳೆಸಬೇಕು. ಅಮೆರಿಕಾ ಮತ್ತು ಭಾರತಗಳು ಪರಸ್ಪರರಿಗೆ ಉಪಯುಕ್ತವಾಗಿ ಮತ್ತು ಲಾಭದಾಯಕವಾಗಿ ಇದ್ದಲ್ಲಿ, ನಾವು ಸ್ನೇಹಿತರಾಗಿ ಮುಂದುವರೆದು ಪರಸ್ಪರರಿಗೆ ಲಾಭವುಂಟು ಮಾಡಬಹುದು. ಹಾಗಿಲ್ಲದೆ ಪರಸ್ಪರರ ಹಿತಾಸಕ್ತಿಗಳಿಗೆ ಮುಜುಗರ ಉಂಟುಮಾಡುವ ಇಲ್ಲವೇ ಹಾನಿಯುಂಟು ಮಾಡುವ ಕಾರ್ಯನೀತಿಗಳನ್ನು ನಾವು ಅನುಸರಿಸಿದರೆ, ನಮ್ಮ ಸಂಬಂಧಗಳಲ್ಲಿ

ಬಿರುಕುಂಟಾಗುವುದು ಅನಿವಾರ್ಯ. ನಾವು ಪರಸ್ಪರರನ್ನು ಉಪೇಕ್ಷಿಸುವುದೂ ಬೇಡ. ಈ ಮೂಲವಾದ ತಪ್ಪು ಎರಡು ಪಕ್ಷಗಳಲ್ಲೂ ಆಗಿದೆ. ಅಮೇರಿಕಾದ ಕಚೇರಿಗಳು ಒಂದು ಉದಾಸೀನದ ಧೋರಣೆಯನ್ನು ಬೆಳೆಸಿಕೊಂಡಿದ್ದಾರೆ. ಇತರ ಮಿತ್ರ ರಾಷ್ಟ್ರಗಳೊಂದಿಗೆ ವರ್ತಿಸುವಂತೆಯೇ ಭಾರತದೊಂದಿಗೂ ವರ್ತಿಸುತ್ತಾರೆ. ಅಂತೆಯೇ ನಮ್ಮ ವಿದೇಶ ವ್ಯವಹಾರಗಳ ಸಚಿವಾಲಯ ಮತ್ತು ಸರ್ಕಾರಗಳು ತಮ್ಮ ಪಕ್ಷದ ನ್ಯಾಯಶೀಲ ವರ್ತನೆಯ ಬಗ್ಗೆ ಎಷ್ಟು ನಂಬಿಕೆಯಿಟ್ಟಿವೆ ಎಂದರೆ ಪ್ರತಿಯೊಬ್ಬರಿಂದಲೂ ನಿರಾಯಾಸ ಬೆಂಬಲವನ್ನು ಅವರು ನಿರೀಕ್ಷಿಸುತ್ತಾರೆ. ಇಂತಹ ವಿಷಯಗಳಲ್ಲಿ ರಾಜನೀತಿಯ ಅವಶ್ಯಕತೆ ಮತ್ತು ಸಾಧ್ಯತೆಗಳನ್ನು ನಾವು ಗುರ್ತಿಸುತ್ತಿಲ್ಲ. ನಾವು ನಮ್ಮ ನಡವಳಿಕೆಯನ್ನು ಬದಲಿಸಿಕೊಳ್ಳಬೇಕು.

ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸೂಕ್ಷ್ಮ ಸಂಬಂಧಗಳನ್ನು ಅರಿತುಕೊಳ್ಳುವುದರಲ್ಲಿ ಅಮೆರಿಕಾ ವಿಫಲವಾಗಿದೆ. ಕಮ್ಯುನಿಸಮ್ ಬಗ್ಗೆ ಅಮೆರಿಕಾದ ವಿಕೃತ ವಿರೋಧವನ್ನು ನಾವು ಗ್ರಹಿಸಿ ಗೌರವಿಸಲಾರೆವು. ಭಾರತ–ಅಮೆರಿಕಾ ಸಂಬಂಧಗಳನ್ನು ಇಕ್ಕಟ್ಟಿಗೆ ಸಿಕ್ಕಿಸಿರುವುದು ಏನಾದರೂ ಇದ್ದರೆ ಅದು ಪಾಕಿಸ್ತಾನಕ್ಕೆ ಅಮೇರಿಕಾದ ಪಕ್ಷಪಾತ. ಭಾರತವನ್ನು ವಿರೋಧಿಸುವ ಯಾವುದೇ ವಿಷಯದಲ್ಲಾಗಲಿ ಪಾಕಿಸ್ತಾನವು ಅಮೆರಿಕಾದ ಬೆಂಬಲದ ನೆಚ್ಚಿಕೆಯಿಡಬಹುದು. ವಿಶೇಷವಾಗಿ, ಚೀನಾದೊಂದಿಗಿನ ಪಾಕಿಸ್ತಾನದ ಮುಕ್ತ ಚಲ್ಲಾಟದ ನಂತರ ಅಮೇರಿಕಾದ ಇಂತಹ ನಡವಳಿಕೆಗೆ, ಭಾರತವು ಯಾವುದೇ ಸಂಭವನೀಯ ಸಮರ್ಥನೆಯನ್ನು ಕಾಣಲಾಗುವುದಿಲ್ಲ. ಪಾಕಿಸ್ತಾನದ ಬಗೆಗಿನ ಅಮೇರಿಕಾದ ಪ್ರೇಮವು ದಿವಂಗತ ಪಂಡಿತ್ ನೆಹರೂ ಅವರಿಗೆ ಕೃಷ್ಣಮೆನನ್ನರ ಬಗ್ಗೆ ಇದ್ದ ಪ್ರೇಮದಷ್ಟೇ ನಿಗೂಢವಾದ ರಹಸ್ಯ. ಅದೇ ರೀತಿ, ಸೋವಿಯೆತ್ ರಷ್ಯಾದ ತನ್ನ ವಿರೋಧಕ್ಕೆ ನಾವು ಬೆಂಬಲ ನಿಡಬೇಕೆಂದು ಅಮೆರಿಕಾ ಬಯಸುತ್ತದೆ. ಇದನ್ನು ಭಾರತ ಉದ್ದಕ್ಕೂ ನಿರಾಕರಿಸುತ್ತಿದೆ. ಕಮ್ಯುನಿಸಮ್ಮನ್ನು ವಿರೋಧಿಸುವವರೂ ಕೂಡಾ ಭಾರತ–ಸೋವಿಯೆತ್ ಸ್ನೇಹದ ಅವಶ್ಯಕತೆ ಮತ್ತು ಉಪಯುಕ್ತತೆಯನ್ನು ಗುರ್ತಿಸುತ್ತಾರೆ. ಕಮ್ಯುನಿಸಮ್ ಹಾಗೂ ರಷ್ಯಾಗಳನ್ನು ಅಮೇರಿಕಾದ ವಿರೋಧವು ಸ್ಟ್ಯಾಲಿನ್ ಯುಗವನ್ನು ಆಧರಿಸಿದೆ. ಸೋವಿಯೆತ್ ರಷ್ಯಾದ ಇತ್ತೀಚಿನ ಬದಲಾವಣೆಗಳಿಂದಾಗಿ ಮತ್ತು ರಷ್ಯಾ ಮತ್ತು ಚೀನಾಗಳ ನಡುವಿನ ಪರಸ್ಪರ ವೈಷಮ್ಯ ತಗ್ಗುತ್ತಿರುವುದರಿಂದ ಭಾರತದಲ್ಲಿ ರಷ್ಯಾದ ಬಗ್ಗೆ ಭೀತರಾದವರ ಸಂಖ್ಯೆಯು ಶೀಘ್ರವಾಗಿ ಕುಸಿಯುತ್ತಿದೆ. ಭಾರತ–ಸೋವಿಯೆತ್‌ಗಳ ನಡುವಿನ ಸ್ನೇಹವನ್ನು ಬಲಿಗೊಟ್ಟು ಅಮೇರಿಕಾದ ಸ್ನೇಹವನ್ನು ಗಳಿಸಬೇಕು ಎಂದಾದರೆ, ಈ ವ್ಯವಹಾರ ಸೂಕ್ತವೆಂದು ಪರಿಗಣಿಸುವವರು ವಿರಳ. ಕೆಲವು ಉಗ್ರವಾದಿಗಳನ್ನು ಹೊರತುಪಡಿಸಿ, ಸಾಮಾನ್ಯವಾಗಿ ಭಾರತೀಯರು ಅಮೇರಿಕಾ ಮತ್ತು ಯು.ಎಸ್.ಎಸ್.ಆರ್. ಎರಡರ ಜೊತೆಯಲ್ಲೂ ಸ್ನೇಹದಿಂದ

ಬಾಳಲು ಬಯಸುತ್ತಾರೆ. ಇದು ಕಷ್ಟವಾದದ್ದು ಮತ್ತು ಸೂಕ್ಷ್ಮವಾದದ್ದು. ಆದರೆ, ನಾವು ಕೆಲವು ಬೇಕು ಬೇಡಗಳನ್ನು (ವಿಧಿ ನಿಷೇಧಗಳನ್ನು) ಅನುಸರಿಸಿದರೆ, ಅಸಾಧ್ಯವೇನಲ್ಲ. ಮೊದಲನೆಯದಾಗಿ, ಕರಾರುವಾಕ್ಕಾಗಿ ಎರಡು ದೇಶಗಳಿಗೂ ಸಂಬಂಧಿಸಿದ ವಿಷಯಗಳಿಗೆ ಈ ಸಂಬಂಧವನ್ನು ನಿರ್ಬಂಧಿಸೋಣ. ಉಳಿದ ಎಲ್ಲ ವಿಷಯಗಳಲ್ಲೂ ನಾವು ತಟಸ್ಥರಾಗಿರಬಹುದು. ಇಲ್ಲವೇ ಇನ್ನೊಂದು ಪಕ್ಷದ ಹಿತಾಕಸ್ತಿಗಳಿಗೆ ಮಾರಕವಾಗದ ಕಾರ್ಯನೀತಿಯನ್ನು ಅನುಸರಿಸಬಹುದು. ನಮ್ಮ ಸಮಸ್ಯೆಗಳೇ ಸಾಕಷ್ಟು ಇರುವಾಗ ಸದ್ಯಕ್ಕಾದರೂ ಜಗತ್ತನ್ನು ಮರೆಯೋಣ. ಭಾರತವು ಬೋಧಕನ ಪಾತ್ರವನ್ನು ಬಿಟ್ಟುಕೊಡಲಿ. ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಮಧ್ಯವರ್ತಿಯ ಪಾತ್ರವನ್ನು ಅಮೇರಿಕಾ ಬಿಡಲಿ. ಅವರ ಮುಜುಗರಗಳನ್ನು ನಾವು ಗ್ರಹಿಸುವೆವಾಗಿ ಪಾಕಿಸ್ತಾನದೊಟ್ಟಿಗಿನ ನಮ್ಮ ಸಂಘರ್ಷಗಳಲ್ಲಿ ಆಂಗ್ಲೋ ಅಮೆರಿಕನ್ ಗುಂಪುಗಳಿಂದ ಯಾವುದೇ ಬೆಂಬಲವನ್ನು ನಾವು ಬಯಸುವುದಿಲ್ಲ. ಅವರು ತಮ್ಮ ಅನುಗ್ರಹಿಸುವ ಧೋರಣೆಯನ್ನು ಬಿಟ್ಟುಕೊಡಲಿ. ಇಬ್ಬರ ನಡುವೆ ಅವರು ಸಹಜವಾಗಿ, ತಟಸ್ಥವಾಗಿ ಇರಲು ಸಾಧ್ಯವಾದರೆ ಯಾರಿಗೂ ಅಸಮಾಧಾನಕ್ಕೆ ಕಾರಣವೇ ಇರುವುದಿಲ್ಲ. ಭಾರತವು ಈವರೆಗೆ ನಿರ್ವಹಿಸುತ್ತ ಬಂದಿರುವ ಶಾಂತಿದೂತನ ಪಾತ್ರವನ್ನೂ ಬಿಟ್ಟುಬಿಡಬಹುದು.

ಇತ್ತಿಚಿನ ಬೆಳವಣಿಗೆಗಳು ಭಾರತ ಮತ್ತು ಅಮೇರಿಕಾ ನಡುವಣ ಸಂಬಂಧಗಳಿಗೆ ತೀವ್ರ ಘಾಸಿಯುಂಟು ಮಾಡಿದೆ. ಕೆಲವೊಂದು ಸಾಮಾಜಿಕ ಪ್ರಯತ್ನಗಳನ್ನು ಕೈಗೊಳ್ಳದ ಹೊರತು ಹಿಂದಿನ ಸ್ಥಿತಿ ಮರಳಲಾರದು. ತಮ್ಮ ಅತಿ ದುಷ್ಟ ಚೇಷ್ಟೆಗಳನ್ನು ಮುಂದುವರೆಸಲು ಸಂದರ್ಭವನ್ನು ದುರುಪಯೋಗ ಪಡಿಸಿಕೊಳ್ಳುವವರು ದೇಶದಲ್ಲಿದ್ದಾರೆ. ಅಮೇರಿಕಾ ನಿಜವಾಗಿಯೂ ಕಮ್ಯೂನಿಸಮ್ಮನ್ನು ವಿರೋಧಿಸುವುದೇ ಆದಲ್ಲಿ ಅವರಿಗೆ ಸಹಾಯವಾಗುವ ಕೆಲಸಗಳನ್ನು ಅದು ಮಾಡಬಾರದು.

**ಮೂಲ : ಆರ್ಗನೈಸರ್, ೩೧ ಮೇ ೧೯೬೩**

## ಹಿಂದಿ ವಿರೋಧ ಚಳುವಳಿಗೆ ವಿದೇಶಿ ಪ್ರೋತ್ಸಾಹ

ಎಲ್ಲ ಭಾಷೆಗಳನ್ನೂ ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದನ್ನು ಜನಸಂಘವು ಒಪ್ಪುತ್ತದೆ ಎಂಬ ಮಟ್ಟಿಗೆ ಅದು ಕಾಂಗ್ರೆಸ್ ಕಾರ್ಯಕಾರಿಣಿಯ ಠರಾವಿಗೆ ಬೆಂಬಲ ಕೊಡುತ್ತದೆ. ಆದರೆ ಅನಿರ್ದಿಷ್ಟ ಕಾಲ ಇಂಗ್ಲಿಷನ್ನು ಉಳಿಸಿಕೊಳ್ಳುವ ಹಾಗೂ ಹಿಂದಿ ಬಳಕೆಗೆ ನಿರ್ಬಂಧಗಳನ್ನು ಹಾಕುವ ಠರಾವಿನ ಕರಾರುಗಳನ್ನು ವಿರೋಧಿಸುತ್ತದೆ ಎಂದವರು ಹೇಳಿದರು. ಇದಲ್ಲದೆ, ಕೇಂದ್ರ ಭಾಷಾ ಪ್ರಶ್ನೆಯು

ಸಂಸತ್ತಿನಲ್ಲಿ ತೀರ್ಮಾನವಾಗಬೇಕಾದ ವಿಷಯ ಮತ್ತು ರಾಜ್ಯಗಳಿಗೆ ಅದನ್ನು ಬಿಡಲಾಗುವುದಿಲ್ಲ ಎಂದು ಜನಸಂಘದ ಸಾಮಾನ್ಯ ಕಾರ್ಯದರ್ಶಿಗಳು ಹೇಳಿದರು.

ಹಿಂದಿ ಮತ್ತು ಹಿಂದಿಯೇತರರ ರಾಜ್ಯಗಳೆಂದು ವರ್ಗೀಕರಿಸುವುದು ಹಾದಿ ತಪ್ಪಿಸುತ್ತದೆ. ಹಿಂದಿ ರಾಜ್ಯವೆಂದು ಕರೆಯಲ್ಪಟ್ಟ ಮಧ್ಯಪ್ರದೇಶದಂತಹ ರಾಜ್ಯಗಳಿಗಿಂತಲು ಗುಜರಾತಿನ ಹಿಂದಿಯೇತರ ರಾಜ್ಯವು ಹೆಚ್ಚಾಗಿ ಹಿಂದಿಯನ್ನು ಬಳಸುತ್ತದೆ ಎಂದರು ಅವರು. ಹೀಗಿರುವಾಗ ಗುಜರಾತ್, ಮಹಾರಾಷ್ಟ್ರ ಮತ್ತು ಒರಿಸ್ಸಾಗಳಂತಹ ರಾಜ್ಯಗಳನ್ನು ಹಿಂದಿಯೇತರ ರಾಜ್ಯಗಳೆಂದು ತಮಿಳುನಾಡಿನೊಂದಿಗೆ ಗುರ್ತಿಸಲಾಗದು. ಹಿಂದಿಯ ವಿರೋಧಿಗಳು ಎಲ್ಲ ಕಾಲಕ್ಕೂ ಇಂಗ್ಲಿಷನ್ನು ಉಳಿಸಿಕೊಳ್ಳಲು ಬಯಸುತ್ತಾರೆ. ಕೇವಲ ಹಿಂದಿ ಅರಿಯದವರು ಇಂಗ್ಲಿಷನ್ನು ೧೦ ವರ್ಷಗಳ ಕಾಲ ಬಳಸಲು ಜನಸಂಘವು ಅನುಮತಿ ನೀಡುತ್ತದೆ.

ದಕ್ಷಿಣದಲ್ಲಿ ವಿದ್ಯಾರ್ಥಿಗಳ ಹಿಂದಿ ವಿರೋಧಿ ಚಳುವಳಿಗೆ ವಿದೇಶಿ ಮತ ಪ್ರಚಾರಕರು ಮತ್ತು ಇಂಗ್ಲಿಷ್ ಉತ್ತೇಜಿಸುವ ಬ್ರಿಟಿಷ್ ಕೌನ್ಸಿಲ್ ಸಹಾಯ ನೀಡುತ್ತಿವೆ ಎಂದು ಶ್ರೀ ಉಪಾಧ್ಯಾಯ ಅವರು ಹೇಳಿದರು. ಚಳುವಳಿಯಿಂದ ಡಿ.ಎಂ.ಕೆ. ಹಿಂದೆ ಸರಿದಿದೆ. ಆದರೆ ವಿದೇಶಿ ಘಟಕಗಳು ಚಳುವಳಿಗೆ ಆರ್ಥಿಕವಾಗಿಯೂ ಸಹಾಯ ಮಾಡುತ್ತಿವೆ ಮತ್ತು ಇದು ತೀವ್ರ ಆತಂಕದ ವಿಯಷವಾಗಿದೆ. ವಿದ್ಯಾರ್ಥಿಗಳದ್ದೆಂದು ಕರೆಯಲಾದ ಚಳವಳಿಯ ನಾಯಕರ ವಿಮಾನಯಾನಕ್ಕೂ ಈ ಘಟಕಗಳು ಹಣ ಒದಗಿಸಿವೆ.

**ಮೂಲ : ಆರ್ಗನೈಸರ್, ೧೪ ಜೂನ್ ೧೯೬೫**

## ಗಡಿಗಳಿಂದ ಪಾಕ್–ಬೆಂಬಲಿಗರನ್ನು ನಿರ್ಮೂಲನ ಮಾಡಿ ಮತ್ತು ನಿರಾಶ್ರಿತರನ್ನು ಅಲ್ಲಿ ನೆಲೆಗೊಳಿಸಿ

ಗಡಿಗಳ ಸಂರಕ್ಷಣೆಯನ್ನು ಕೇಂದ್ರಕ್ಕೆ ಬಿಟ್ಟುಕೊಡಬೇಕೆಂದು ರಾಜ್ಯ ಗೃಹಮಂತ್ರಿಗಳ ಸಮ್ಮೇಳನದಲ್ಲಿ ನಿರ್ಧರಿಸಿರುವುದು ಸ್ವಾಗತಾರ್ಹ. ಈ ವಿಷಯದಲ್ಲಿ ಜನಸಂಘದ ಬೇಡಿಕೆಯನ್ನು ಅದು ಪೂರೈಸುತ್ತದೆ. ನಿರಂತರವಾಗಿ ಹೆಚ್ಚಾಗುತ್ತಿರುವ ಪಾಕಿಸ್ತಾನದ ಗಡಿ ಉಲ್ಲಂಘನೆಗಳನ್ನು ಎದುರಿಸಲು ಈಗಿರುವ ಪೊಲೀಸರನ್ನು ಪುನರ್ ವ್ಯವಸ್ಥೆಗೊಳಿಸಿ, ಅವರಿಗೆ ಎಲ್ಲ ಆಯುಧಗಳನ್ನೂ ನೀಡಿ ಸಿದ್ಧಗೊಳಿಸುವುದು ಅವಶ್ಯಕ.

ಗಡಿ ಪ್ರದೇಶಗಳ ಪೌರಸಮುದಾಯಕ್ಕೂ ಆಯುಧಗಳ ಬಳಕೆಯ ತರಬೇತಿ ನೀಡಲು ಹಾಗೂ ಆಯುಧಗಳನ್ನು ಧಾರಾಳವಾಗಿ ಒದಗಿಸಲು ಗೃಹಮಂತ್ರಿಗಳು ನಿರ್ಧರಿಸಿದ್ದಾರೆ. ವರ್ತಮಾನ ಪರಿಸ್ಥಿತಿಯಲ್ಲಿ ರಾಷ್ಟ್ರ ವಿರೋಧಿ ಹಾಗೂ ಪಾಕಿಸ್ತಾನದ

ಪರವಾದ ಶಕ್ತಿಗಳು ಈ ಸಂದರ್ಭವನ್ನು ದೇಶದ ಭದ್ರತೆಯನ್ನು ತಲೆಕೆಳಗು ಮಾಡಲೆಂದೇ ಬಳಸಿಕೊಳ್ಳುವ ಸಾಧ್ಯತೆಯಿದೆ. ಗಡಿಯುದ್ದಕ್ಕೂ ಹತ್ತು ಮೈಲಿ ಅಗಲದ ಪಟ್ಟಿಯ ಗುಂಟ, ದೇಶದ ಬಗೆಗಿನ ನಿಷ್ಠೆಯನ್ನು ಶತ್ರುಗಳು ಸುಲಭವಾಗಿ ಅಲ್ಲಾಡಿಸಬಹುದಾದ ಎಲ್ಲ ಘಟಕಗಳನ್ನೂ ನಿವಾರಿಸಬೇಕು. ಈ ಜನರಿಗೆ ಒಳನಾಡಿನಲ್ಲಿ ಸೂಕ್ತ ಪುನರ್ವಸತಿ ಕಲ್ಪಿಸಬೇಕು. ಪೂರ್ವ ಬಂಗಾಳದ ಸ್ಥಳಾಂತರಗೊಂಡವರನ್ನು ಹಾಗೆ ಬರಿದುಗೊಳಿಸಿದಲ್ಲಿಗೆ ಆಯ್ಕೆ ಮಾಡಬೇಕು.

ಪಾಕಿಸ್ತಾನದ ಪತ್ರಿಕೆಗಳು ಹಾಗೂ ಆಡಳಿತಗಾರರು ಪೂರ್ವ ಬಂಗಾಳದ ನಿರಾಶ್ರಿತರಿಗೆ ತೀವ್ರಗೊಳ್ಳುತ್ತಿರುವ ಅಭದ್ರತೆಯ ಪರಿಸ್ಥಿತಿಯನ್ನು ಸೃಷ್ಟಿಸುತ್ತಿದ್ದಾರೆ. ಒಂದು ಹೊಸ ಮತೀಯ ಉನ್ಮಾದವನ್ನು, ಭಾರತಕ್ಕೆ ಹಿಂದೂಗಳ ಸಮೂಹ ವಲಸೆಯನ್ನೂ ಅವರು ಒತ್ತಾಯಿಸುವ ಸಾಧ್ಯತೆಯಿದೆ. ಪೂರ್ವ ಬಂಗಾಳದಲ್ಲಿ ಹಿಂದೂಗಳ ವಿರುದ್ಧದ ಯಾವುದೇ ಅಪರಾಧಗಳಿಗೆ ತಾನು ತಟಸ್ಥ ಪ್ರೇಕ್ಷಕನಾಗಿ ಇನ್ನು ಇರಲಾರೆ ಎಂದು, ಹಾಗೂ ವಲಸಿಗರನ್ನು ಸ್ವಾಗತಿಸುವ ಬದಲಾಗಿ ತನ್ನ ಗುರುತರವಾದ ಕರ್ತವ್ಯಗಳ ನಿರ್ವಹಣೆಗಾಗಿ ಪೊಲೀಸ್ ಚಟುವಟಿಕೆಯನ್ನು ಕೈಗೊಳ್ಳಬೇಕಾಗಿ ಬರುತ್ತದೆಂದೂ ಭಾರತ ಸರ್ಕಾರವು ಪಾಕಿಸ್ತಾನದ ಸರ್ಕಾರಕ್ಕೆ ಸ್ಪಷ್ಟವಾದ ಎಚ್ಚರಿಕೆ ನೀಡಬೇಕು.

ಈಗ ಪಾಕಿಸ್ತಾನದ ಹಟವಾದಿತನದಿಂದಾಗಿ ವಿಲ್ಸನ್ ಪ್ರಸ್ತಾಪಗಳು ನಿರ್ಜೀವ ಪತ್ರವಾಗಿರುವುದರಿಂದ ಆ ಪ್ರಸ್ತಾಪದ ಯಾವುದೇ ಕರಾರಿಗೂ ಭಾರತ ಸರ್ಕಾರವು ಏಕಪಕ್ಷೀಯವಾಗಿ ಬದ್ಧವಾಗಿರಬಾರದು. ಕಚ್‌ನ ವಾಸ್ತವ ಕದನ ನಿಲುಗಡೆಯ ಬದ್ಧತೆಯಿಂದಲೂ ತನ್ನನ್ನು ತಾನು ಮುಕ್ತವೆಂದು ಭಾವಿಸಬೇಕು, ಹಾಗೂ ನಷ್ಟವಾದ ಸೀಮೆಯನ್ನು ಮರಳಿ ಕೈವಶಮಾಡಿಕೊಳ್ಳಲು ಸೇನೆಗೆ ಮುಕ್ತವಾದ ಹಾಗೂ ಸಂಪೂರ್ಣ ಅವಕಾಶ ನೀಡಬೇಕು.

ಶ್ರೀ ಲಾಲ್ ಬಹಾದೂರ್ ಶಾಸ್ತ್ರಿ ಮತ್ತು ಚೀನಾದ ಪ್ರಧಾನಿ ಚೌ ಎನ್ ಲೈ ಅವರೊಂದಿಗೆ ಒಂದು ಭೇಟಿ ಏರ್ಪಡಿಸಲು ಅಧ್ಯಕ್ಷ ನಾಸ್ಸರ್ ಉದ್ದೇಶಿಸಿದ್ದಾರೆ ಎಂದು ವರದಿಯಾಗಿದೆ. ಈ ವಿಷಯದಲ್ಲಿ ಪ್ರತಿಕ್ರಿಯೆ ನೀಡಲು ಶ್ರೀ ಶಾಸ್ತ್ರಿ ಅವರು ನಿರಾಕರಿಸಿರುವುದು ಪ್ರಸ್ತಾಪಕ್ಕೆ ಅವರ ಮೌನ ಒಪ್ಪಿಗೆ ಎಂದು ತಪ್ಪಾಗಿ ಅರ್ಥವಾಗುವ ಸಾಧ್ಯತೆಯಿದೆ. ಕಮ್ಯುನಿಸ್ಟ್ ಚೀನಾ ನಮ್ಮ ಮೇಲೆ ಆಕ್ರಮಣ ಮಾಡಿದೆ ಹಾಗೂ ಅದು ಈಗಲೂ ನಮ್ಮ ಸೀಮೆಗಳನ್ನು ಕಾನೂನು ರಹಿತವಾಗಿ ತನ್ನ ವಶದಲ್ಲಿಟ್ಟುಕೊಂಡಿದೆ. ಅಲ್ಲದೆ, ಯು.ಎ.ಆರ್. ಕೂಡಾ ಭಾಗಿಯಾಗಿದ್ದ ಕೊಲಂಬೊ ಪ್ರಸ್ತಾಪಕ್ಕೆ ಅದರ ಸ್ಪಂದನವು ಎಂದೂ ಅನುಕೂಲಕರವಾಗಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಇಂತಹ ಸಭೆಯಿಂದ ಯಾವ ಪ್ರಯೋಜನಕಾರಿ ಉದ್ದೇಶವೂ ಈಡೇರುವ ಸಾಧ್ಯತೆಯಿಲ್ಲ. ಬದಲಿಗೆ ಇಡೀ ವಿಶ್ವದ ಜನರ ಎಣಿಕೆಯಲ್ಲಿ

ಭಾರತವನ್ನು ಕೆಳಕ್ಕಿಳಿಸುತ್ತದೆ, ನಮ್ಮ ಭೂ ಪ್ರದೇಶಗಳ ಸಮಗ್ರತೆಯನ್ನು ಮತ್ತೆ ಸ್ಥಾಪಿಸುವ ನಮ್ಮ ನಿರ್ಧಾರದ ಬಗ್ಗೆ ನಮ್ಮ ಗೆಳೆಯರಲ್ಲಿ ಅನುಮಾನಗಳನ್ನು ಹುಟ್ಟುಹಾಕುತ್ತದೆ ಹಾಗೂ ಆಕ್ರಮಣಕಾರರಿಗೆ ಪ್ರೋತ್ಸಾಹ ನೀಡುತ್ತದೆ. ಪ್ರಧಾನ ಮಂತ್ರಿ ಶಾಸ್ತ್ರಿಗಳು ಸರ್ಕಾರದ ಹಿಂದಿನ ನಿಲುವನ್ನೇ ಪುನರುಚ್ಚರಿಸಬೇಕು.

**ಮೂಲ : ಆರ್ಗನೈಸರ್, ೨೧ ಮಾರ್ಚ್ ೧೯೬೫**

**ಶಾಸ್ತ್ರಿ ಸರ್ಕಾರದ ಒಂದು ವರ್ಷ:**

ಕಳೆದ ಒಂದು ವರ್ಷದ ಆಗು ಹೋಗುಗಳ ಬಗ್ಗೆ ನೆಹರೂ ಇಲ್ಲದ ಒಂದು ವರ್ಷ ಎಂಬ ತಲೆಬರಹದ ಅಡಿಯಲ್ಲಿ ಬರೆಯುವಂತೆ ಪಂಡಿತ್ ಜವಾಹರಲಾಲರ ಪ್ರಥಮ ತಿಥಿಯು ಅನೇಕರನ್ನು ಪ್ರೇರೇಪಿಸಿದೆ. ವಿಷಯಗಳ ಬಗ್ಗೆ ಒಂದು ನಕಾರಾತ್ಮಕ ದೃಷ್ಟಿಕೋನವನ್ನು ಇದು ಸೂಚಿಸುತ್ತದೆ. ನಾನಾದರೆ ಸಕಾರಾತ್ಮಕ ತಲೆಬರಹವನ್ನು ಆರಿಸುತ್ತೇನೆ. ಶಾಸ್ತ್ರಿ ಅವರ ಆಳ್ವಿಕೆಯ ಒಂದು ವರ್ಷ. ಈ ವರ್ಷವು ಶಾಸ್ತ್ರಿ ಅವರ ಛಾಪನ್ನು ಪಡೆದಿದೆಯೋ ಇಲ್ಲವೋ ಎಂಬುದು ಚರ್ಚಾಸ್ಪದ ವಿಷಯವಾಗಿರಬಹುದು. ಆದರೆ ಭಾರತದ ಬಗ್ಗೆ ನೆಹರೂ ಯುಗದ ದೃಷ್ಟಿಯಿಂದ ಚಿಂತಿಸುವುದು ಅಂತ್ಯಗೊಂಡಿದೆ. ಹಿಂದಿನ ಜಡತ್ವದಿಂದ ನಾವು ಎಷ್ಟು ಬೇಗ ಆಚೆಗೆ ಬರುತ್ತೇವೋ ಅಷ್ಟು ಒಳ್ಳೆಯದು. ಭವಿಷ್ಯಕ್ಕಾಗಿ ನಾವು ವರ್ತಮಾನದಲ್ಲಿ ಬದುಕೋಣ.

**ಸುಬೇದಾರುಗಳ ಉದಯ**

ಲಾಲ್ ಬಹಾದೂರರು ಅಧಿಕಾರ ವಹಿಸಿಕೊಂಡದ್ದು ಸರ್ಕಾರವು ಹೆಮ್ಮೆ ಪಡುವಂತಹ ಸಾಧನೆಯಾಗಿದೆ. ಪಂಡಿತ್ ನೆಹರೂ ಅವರು ಮೃತರಾದ ಕೂಡಲೇ ಭಾರತಕ್ಕೆ ಪ್ರಳಯ ಉಂಟಾಗಲಿದೆಯೆಂದು ಭವಿಷ್ಯ ನುಡಿದವರು ದೇಶದ ಒಳಗೂ ಹೊರಗೂ ಇದ್ದರು. ಉತ್ತರಾಧಿಕಾರದ ಕದನವು ದೇಶವನ್ನು ಪ್ರತ್ಯೇಕ ಭಾಗಗಳಾಗಿ ಒಡೆಯುತ್ತದೆ ಎಂದು ಇವರು ಭಾವಿಸಿದ್ದರು. ಬದಲಾವಣೆಯು ಸಲೀಸಾಗಿ ನಡೆದಾಗ ಹತಾಶೆ ಮತ್ತು ಪ್ರಳಯಗಳ ಈ ಜ್ಯೋತಿಷಿಗಳು ಅಳಿವು, ಹತಾಶೆಗಳನ್ನು ಅನುಭವಿಸಿರಬೇಕು. ಸುಗಮವಾದ ಬದಲಾವಣೆಯ ಕಾರಣವನ್ನು ವಿಶ್ಲೇಷಿಸಲು ನಾನು ಬಯಸುವುದಿಲ್ಲ. ಆದರೆ, ಅಂತಿಮ ಮುಖಾಮುಖಿಗೆ ಒತ್ತಾಯಿಸದ ಶ್ರೀ ಮೊರಾರ್ಜಿ ದೇಸಾಯಿ ಅವರ ಆತ್ಮ ನಿರಾಕರಣೆಗಾಗಿ ಅವರನ್ನು ಪ್ರಶಂಸಿಸಲೇಬೇಕು. ಇದು, ವಿವೇಕವು ಶೌರ್ಯದ ಉತ್ತಮ ಅಂಶ ಎನ್ನುವ ಒಂದು ಸಂದರ್ಭವಾಗಿರಬಹುದು. ಆದರೆ ವಿವೇಕವೂ ಶ್ರೇಷ್ಠ ಸದ್ಗುಣವೆನ್ನಿಸುವ ಸಂದರ್ಭಗಳೂ ಇವೆ.

ಆದರೂ ಶಾಸ್ತ್ರಿ ಅವರನ್ನು ಆಯ್ಕೆ ಮಾಡಿದ ರೀತಿ ಮುಂದಿನ ಭಿನ್ನಾಭಿಪ್ರಾಯದ ಬೀಜ ಬಿತ್ತಿದೆ. ಸರ್ವಾನುಮತದ ವಿಧಾನವನ್ನು ಅನುಸರಿಸಲಾಯಿತು; ಶ್ರೀ ಕಾಮರಾಜ್ ಅವರು ಕೇವಲ ಕಾಂಗ್ರೆಸ್ ಸಂಸದೀಯ ಪಕ್ಷದ ಸದಸ್ಯರೊಂದಿಗೆ ಮಾತ್ರವಲ್ಲ. ಮುಖ್ಯಮಂತ್ರಿಗಳೊಂದಿಗೂ ಸಮಾಲೋಚನೆ ನಡೆಸಿದರು. ಮುಖ್ಯಮಂತ್ರಿಗಳ ಅಭಿಪ್ರಾಯ ನಿರ್ಣಾಯಕವಾಗಿತ್ತು ಎನ್ನಲಾಗಿದೆ. ಅವರು ತಮ್ಮ ಅಧಿಕಾರದ ಬಗ್ಗೆ ಜಾಗೃತರಾದರು. ಇದು ಪ್ರಧಾನ ಮಂತ್ರಿ ಮತ್ತು ಅವರ ಸರ್ಕಾರವು ಮುಖ್ಯ ಮಂತ್ರಿಗಳನ್ನು ಅವಲಂಬಿಸುವಂತೆ ಮಾಡಿದೆ. ಅಧಿಕಾರವು ನವದೆಹಲಿಯಿಂದ ರಾಜ್ಯಗಳ ರಾಜಧಾನಿಗಳಿಗೆ ವರ್ಗವಾಗಿದೆಯೆಂದು ವರ್ಷದುದ್ದಕ್ಕೂ ಒಂದಾದ ಮೇಲೆ ಒಂದು ಘಟನೆಯು ಸಾಧಿಸುತ್ತಾ ಬಂದಿದೆ. ಸಂವಿಧಾನವು ಏನೇ ವಿಧಿಸಿರಲಿ, ತುರ್ತು ಪರಿಸ್ಥಿತಿಯ ಘೋಷಣೆಯು ಯಾವುದೇ ಅಧಿಕಾರ ನೀಡಿರಲಿ, ಕೇಂದ್ರವು ಇಂದು ಯಾವುದೇ ರಾಜ್ಯಕ್ಕೂ ಅಸಮಾಧಾನ ಉಂಟುಮಾಡುವಂತಿಲ್ಲ!

**ಶಾಸ್ತ್ರಿ ಅವರು ಹೇಗೆ ಸಿಕ್ಕಿಬಿದ್ದರು**

ಶ್ರೀ ಶಾಸ್ತ್ರಿ ಅವರು ಚೆನ್ನಾಗಿಯೇ ಆರಂಭಿಸಿದರು. ಉನ್ನತ ಅಧಿಕಾರಕ್ಕೆ ಎತ್ತಲ್ಪಟ್ಟ ಸಾಮಾನ್ಯ ವ್ಯಕ್ತಿ ಅವರು. ಅವರು ವಿಷಯಗಳನ್ನು ಸಾಮಾನ್ಯ ಮನಷ್ಯನ ದೃಷ್ಟಿಕೋನದಿಂದ ಕಾಣಬಲ್ಲರೆಂದು ಅವರ ಹೇಳಿಕೆಗಳು ತೋರಿಸಿದವು. ಸಾಮಾನ್ಯ ಮನುಷ್ಯ ಒಂದು ಹೊಸ ಭರವಸೆಯಿಂದ ಸ್ಫೂರ್ತಿಗೊಂಡ. ಅದು ಖಚಿತವಾಗಿಯೂ ಇರಬೇಕಾಗಿತ್ತು. ಕೇಂದ್ರವು ದಾಸ್ ಆಯೋಗದ ವರದಿಯನ್ನು ಆಧರಿಸಿ ಕ್ರಮ ಕೈಗೊಂಡು ಸರ್ದಾರ್ ಪ್ರತಾಪ್ ಸಿಂಗ್ ಕೈರೋಂ ಅವರನ್ನು ಕೆಳಕ್ಕಿಳಿಸಿದ ರೀತಿ ಅವರಿಗೆ ಸಾರ್ವತ್ರಿಕ ಮೆಚ್ಚುಗೆ ಗಳಿಸಿತು. ಒರಿಸ್ಸಾದಲ್ಲಿಯೂ ಕೂಡಾ ಅವರು ಖಚಿತವಾಗಿರಲು ಉದ್ದೇಶಿಸಿದರು. ಆದರೆ ಇದೆಲ್ಲ ಅಲ್ಪಕಾಲದ್ದಾಗಿತ್ತು. ಬಹುಶಃ ಪಕ್ಷದೊಳಗಿನ ವಾತಾವರಣ ಅವರಿಗೇ ತೀರಾ ಬಿಸಿಯೆನಿಸಿರಬೇಕು. ಪರಿಣಾಮವೇನೆಂದರೆ ಭ್ರಷ್ಟಾಚಾರ ನಿರ್ಮೂಲನೆಯ ವಾಗ್ದಾನವು ಬರೀ ಒಂದು ಘೋಷಣೆಯಾಗಿದೆ. ಸದಾಚಾರ ಸಮಿತಿ ಮತ್ತು ಕಾವಲು ಆಯೋಗದ ಸ್ಥಾಪನೆಯ ಹೊರತಾಗಿ ವಾಗ್ದಾನವನ್ನು ಈಡೇರಿಸಲು ಖಚಿತವಾದ ಏನನ್ನೂ ಮಾಡಿಲ್ಲ.

ಪ್ರಾರಂಭದಲ್ಲಿ ಶಾಸ್ತ್ರಿಗಳು ನೆಹರೂ ಅವರ ಮಾರ್ಗವನ್ನು ಹಿಡಿಯಲಾರರು ಎನಿಸಿತ್ತು. ಆದರೆ ಕಮ್ಯುನಿಸ್ಟರು ಮತ್ತು ಸಹಪ್ರಯಾಣಿಕರು ಅವರನ್ನು ಬೆದರಿಸುವುದರಲ್ಲಿ ಯಶಸ್ವಿಯಾದರು. ಅವರು ಅಧಿಕಾರವನ್ನು ವಹಿಸಿಕೊಂಡ ಕೂಡಲೇ ಅವರ ಸರ್ಕಾರವು ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯವನ್ನು ಎದುರಿಸಬೇಕಾಗಿ ಬಂದಿತು. ನೆಹರೂ ಸರ್ಕಾರದ ವಿರುದ್ಧ ಇಂತಹ ನಿರ್ಣಯವನ್ನು ಬೆಂಬಲಿಸಲು ಒಲ್ಲದ ಕಮ್ಯುನಿಸ್ಟರು, ಈ ಬಾರಿ ಮುಖಂಡತ್ವ ವಹಿಸಿದರು. ವಾಸ್ತವವಾಗಿ ಅಂತಹ ನಿರ್ಣಯಕ್ಕೆ ಕಾರಣವಿರಲಿಲ್ಲ. ನೆಹರೂ ಪ್ರಭುತ್ವದ ವೈಫಲ್ಯಗಳಿಗೆ ಶಾಸ್ತ್ರಿ ಸರ್ಕಾರವನ್ನು

ಹೊಣೆ ಮಾಡಲಾಗದು. ಪರಿಸ್ಥಿತಿಯನ್ನು ಸುಧಾರಿಸಲು ಅವರಿಗೆ ಕಾಲಾವಕಾಶ ನೀಡಿರಲಿಲ್ಲ. ಆದರೆ ಕಮ್ಯುನಿಸ್ಟರಿಗೆ ಅವರದ್ದೇ ಆದ ಗುಪ್ತ ಹಂಚಿಕೆಗಳಿದ್ದವು. ನೆಹರೂ ಮಾರ್ಗದಿಂದ ಶಾಸ್ತ್ರಿ ದೂರ ಸರಿಯುತ್ತಿದ್ದಾರೆಂಬುದೇ ಅವರ ಹಾಡಿನ ತಿರುಳು. ವಿಫಲಗೊಂಡ ಕಾರ್ಯನೀತಿಗಳಿಗೆ ಹೊಸ ನಿರ್ದೇಶನ ನೀಡುವುದರ ಅಗತ್ಯವನ್ನು ಒಪ್ಪಿಕೊಂಡು ಅದಕ್ಕಾಗಿ ವಾದ ಮಾಡುವುದಕ್ಕೆ ಶಾಸ್ತ್ರಿ ಅವರಲ್ಲಿ ಕ್ರುಶ್ಚೇವ್ ಅಥವಾ ಕೊಸಿಗಿನ್ನರ ಧೈರ್ಯವಿರಲಿಲ್ಲ. ಬದಲಿಗೆ ಶಾಸ್ತ್ರಿ ಅವರು, ಅವರುಗಳ ಬೆದರಿಕೆ ಒತ್ತಡಕ್ಕೆ ಬಲಿಯಾದರು. ತಮ್ಮ ನಿಷ್ಠೆಯನ್ನು ಸಮರ್ಥಿಸಿಕೊಂಡರು ಮತ್ತು ಅಂದಿನಿಂದ ನೆಹರೂ ಅವರನ್ನೇ ಮೀರಿಸಲು ಯತ್ನಿಸುತ್ತಿದ್ದಾರೆ.

**ಸಂದರ್ಭದ ಒಡೆಯನಲ್ಲ**

ಹಲವಾರು ವಿಷಯಗಳ ಬಗ್ಗೆ ಶಾಸ್ತ್ರಿ ಸರ್ಕಾರವು ನಿರ್ಣಾಯಕ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿ ಬಂದಿದೆ. ಅವು ನೆಹರೂ ತೆಗೆದುಕೊಳ್ಳಬಹುದಾಗಿದ್ದ ತೀರ್ಮಾನಗಳಿಂದ ಭಿನ್ನವಾಗೇನೂ ಇಲ್ಲ. ಚೀನಾ ಒಂದು ಅಣುಬಾಂಬನ್ನು ಸಿಡಿಸಿದಾಗ ಭಾರತವು ಒಂದು ಅಣುಬಾಂಬನ್ನು ನಿರ್ಮಿಸಬೇಕೆಂದು ಇಡೀ ದೇಶವೇ ಆಗ್ರಹಿಸಿತು. ಆದರೆ ಶಾಸ್ತ್ರೀಜಿ ಹಿಂದೇಟು ಹಾಕಿದರು ಮತ್ತು ಸ್ವಯಂ ಸೃಷ್ಟಿಯ ಕಾಲ್ಪನಿಕ ಜಗತ್ತಿನಲ್ಲಿ ವಾಸಿಸುವ ದಾರ್ಶನಿಕ ನೆಹರೂ ಅವರಿಗೆ ವಿಶಿಷ್ಟವಾಗಿದ್ದ ನಿಲುವನ್ನು ತೆಗೆದುಕೊಂಡರು.

ಆರ್ಥಿಕ ಕ್ಷೇತ್ರದಲ್ಲಿ ಹಾಗೂ ಯೋಜನೆಗಳಿಗೆ ಸಂಬಂಧಿಸಿದಂತೆ ಯೋಜನಾ ಆಯೋಗದ ಮೇಲಾಗಲೀ ಅಥವಾ ಕಾರ್ಯ ನೀತಿಯ ವಿಷಯದಲ್ಲೇ ಆಗಲೀ ಯಾವುದೇ ಪ್ರಭಾವ ಬೀರುವುದರಲ್ಲಿ ಶಾಸ್ತ್ರಿ ಅವರು ವಿಫಲರಾಗಿದ್ದಾರೆ. ಅವರು ಆಹಾರ ವಲಯಗಳನ್ನು ಮೆಚ್ಚುವುದಿಲ್ಲ. ಆದರೆ ಅವುಗಳನ್ನು ಅವರು ನಿಷೇಧಿಸಲಾರರು. ಯೋಜನೆಗಳು ಮಿತವಾಗಿರಬೇಕು ಎಂದು ಅವರು ಭಾವಿಸುತ್ತಾರೆ. ಆದರೂ ನಾಲ್ಕನೆಯ ಯೋಜನೆಯನ್ನು ಅವರು ನಿಷೇಧಿಸಲಾರರು. ಯೋಜನೆಗಳು ಮಿತವಾಗಿರಬೇಕು ಎಂದು ಅವರು ಭಾವಿಸುತ್ತಾರೆ. ಆದರೂ ನಾಲ್ಕನೆಯ ಯೋಜನೆಯನ್ನು ಅವರು ಕಿರಿದುಗೊಳಿಸಲಾರರು. ಪ್ರಧಾನಿ ಶಾಸ್ತ್ರಿ ಹಾಗೂ ಯೋಜನಾ ಆಯೋಗದ ಅಧ್ಯಕ್ಷ ಶಾಸ್ತ್ರಿ–ಇವರಿಬ್ಬರೂ ವಿಭಿನ್ನ ವ್ಯಕ್ತಿತ್ವದವರೆಂದು ತೋರುತ್ತದೆ. ಸರ್ಕಾರದ ಆಹಾರ ನೀತಿಯು ವಿಫಲವಾಗಲು ಇದೇ ಬಹುಮಟ್ಟಿಗೆ ಕಾರಣವೆನ್ನಬಹುದು.

ಶಾಸ್ತ್ರಿ ಅವರು ಅಧಿಕಾರ ವಹಿಸಿಕೊಂಡಾಗ ಅವರು ಬೆಲೆ ಏರಿಕೆ ಮತ್ತು ಭ್ರಷ್ಟಾಚಾರಗಳನ್ನು ಸರ್ಕಾರದ ಪ್ರಮುಖ ಸಮಸ್ಯೆಗಳೆಂದು ಹೆಸರಿಸಿದ್ದರು. ಅವೆರಡನ್ನು ನಿಯಂತ್ರಿಸುವುದರಲ್ಲೂ ಸರ್ಕಾರ ಸೋತಿದೆ. ಅವರ ಚಿಂತನಾಕ್ರಮ ಮತ್ತು ಕಾರ್ಯಗಳು ಪಂಡಿತ್ ನೆಹರೂ ಅವರದ್ದಕ್ಕಿಂತ ಭಿನ್ನವಾಗಿಲ್ಲ.

**ಇದು ಹೊಂದಾಣಿಕೆಯ ಸರ್ಕಾರ**

ಪ್ರಧಾನ ಮಂತ್ರಿಯಾಗುವ ಮೊದಲೇ ಶಾಸ್ತ್ರೀಜಿ ಅವರು ಕಾಶ್ಮೀರ ಮತ್ತು ನಾಗಾಲ್ಯಾಂಡ್‌ಗಳನ್ನು ನಿರ್ವಹಿಸಿದ್ದರು. ಕಾರ್ಯನೀತಿಯ ದೃಷ್ಟಿಯಿಂದ ಯಾವುದೇ ಮೂಲ ವ್ಯತ್ಯಾಸ ಆಗಿರದಿದ್ದರೂ ವೇಗ ಕುಂಠಿತವಾಗಿದೆ. ಪಂಡಿತ್ ನೆಹರೂ ಅವರು ಜೀವಂತವಾಗಿದ್ದಾಗ ಅವರ ಹೆಸರಿನಲ್ಲಿ ಶಾಸ್ತ್ರಿ ಅವರು ತಮ್ಮ ಇಚ್ಛೆಯಂತೆ ನಡೆದುಕೊಳ್ಳಬಹುದಾಗಿತ್ತು. ಈಗಲಾದರೆ ಈ ವಿಷಯದಲ್ಲಿ ಅವರೊಬ್ಬರೇ ಇಡೀ ಜವಾಬ್ದಾರಿಯನ್ನು ವಹಿಸಬೇಕಾಗುತ್ತದೆ. ಮಂತ್ರಿಮಂಡಲದಲ್ಲಿ ಈ ವಿಷಯದಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳಿರುವುದರಿಂದ ಶ್ರೀ ಶಾಸ್ತ್ರಿ ಅವರು ಶೇಖ್ ಅಬ್ದುಲ್ಲಾ ಅವರನ್ನು ಭಿನ್ನವಾಗಿ ನಡೆಸಿಕೊಳ್ಳಬೇಕಾಗಿ ಬಂದಿದೆ. ಆದರೆ ಅವರಿಗೆ ತೋರಿರುವ ವಿಶೇಷ ಕಾಳಜಿ ಮತ್ತು ರಿಯಾಯಿತಿಗಳಿಗೆ ಅವರ ವೈಯಕ್ತಿಕ ಪಕ್ಷಪಾತಗಳೇ ಕಾರಣವಾಗಿವೆ. ಜಯಪ್ರಕಾಶ್ ಯೋಜನೆಯನ್ನು ಮುಂದುವರೆಸಲು ಸಾಧ್ಯವಾಗಿರದಿದ್ದರೆ ನೆಹರೂ ಅವರಿಗಿದ್ದ ಆತ್ಮವಿಶ್ವಾಸ ಶಾಸ್ತ್ರಿ ಅವರಿಗೆ ಇಲ್ಲದಿರುವುದೇ ಅದಕ್ಕೆ ಸರಳ ಕಾರಣವಾಗಿದೆ.

ಭಾಷಾ ಸಮಸ್ಯೆಯು ಸಂಪೂರ್ಣವಾಗಿ ಪಂಡಿತ್ ನೆಹರೂ ಅವರ ಸೃಷ್ಟಿ. ಆದರೆ ಪಂಡಿತ್ ನೆಹರೂ ಅವರು ಜೀವಂತವಾಗಿದ್ದರೆ ಯಾವುದೇ ಚಳವಳಿಗಳು ಮತ್ತು ಹಿಂಸಾತ್ಮಕ ಗಲಭೆಗಳು ಬಹುಶಃ ನಡೆಯುತ್ತಿರಲಿಲ್ಲ. ಶಾಸ್ತ್ರಿ ಸರ್ಕಾರವು ಹಿಂದಡಿಯಿಟ್ಟಿದೆ. ನೆಹರೂ ಅವರ ಕೈಕೆಳಗೆ ಹೀಗಾಗುತ್ತಿರಲಿಲ್ಲ. ತಮ್ಮ ಸ್ಥಾನದ ಬಗ್ಗೆ ಧೈರ್ಯವೇ ಇಲ್ಲದ ಅವರು ಅದನ್ನು ಉಳಿಸಿಕೊಳ್ಳಲು ಹಿಂದಿಯನ್ನು ಬಲಿ ಕೊಡಬಲ್ಲರು ಎಂದು, ಸನ್ನಿವೇಶವನ್ನು ಶಾಸ್ತ್ರಿ ಅವರು ನಿಭಾಯಿಸಿದ ರೀತಿಯು ತೋರಿಸಿದೆ ಅಷ್ಟೆ.

ಪಾಕಿಸ್ತಾನದ ಬಗ್ಗೆ ವ್ಯವಹರಿಸುವಾಗ ಶಾಸ್ತ್ರೀಜಿ ಕೇವಲ ನೆಹರೂ ಅವರನ್ನು ಅನುಕರಿಸಿದ್ದಾರೆ. ಇಡೀ ಪ್ರಸಂಗದಲ್ಲಿ ಸಮಾನವಾಗಿರುವುದು ಬಹಳ.

**ಇದು ನೆಹರೂ ಇಲ್ಲದ ನೆಹರುವಾದ**

ವಿದೇಶ ವ್ಯವಹಾರಗಳ ಮಟ್ಟಿಗೆ, ಪಂಡಿತ್ ನೆಹರೂ ಅವರ ಕಡೆಯ ದಿನಗಳಲ್ಲಿ ಕೂಡಾ ಭಾರತ ಬಹಳ ಕೆಳ ಮಟ್ಟದಲ್ಲಿತ್ತು. ವಿದೇಶ ವ್ಯವಹಾರಗಳ ಸಚಿವಾಲಯವನ್ನು ಒಬ್ಬ ಪ್ರತ್ಯೇಕ ಮಂತ್ರಿಗಳ ವಶಕ್ಕೆ ನೀಡಿದ್ದರೂ ಸನ್ನವೇಶವನ್ನು ಸುಧಾರಿಸಲು ಯಾವ ಕ್ರಮಗಳನ್ನೂ ಕೈಗೊಂಡಿರಲಿಲ್ಲ. ಸರ್ದಾರ್ ಸ್ವರ್ಣ ಸಿಂಗ್ ಅವರಿಗೆ ಯಾವುದೇ ಪ್ರಬಲ ಸ್ಥಾನದಿಂದ ವ್ಯವಹರಿಸಲು ಸಾಧ್ಯವಾಗಿಲ್ಲ. ಈ ವರ್ಷದಲ್ಲಿ ಪೂರ್ಣಗೊಂಡ ನಮ್ಮ ಒಪ್ಪಂದಗಳಲ್ಲಿ ಯಾವುದೇ ಸಮಾಧಾನಕರ ಅಂಶಗಳಿಲ್ಲ. ಯಾವ ದೇಶದೊಂದಿಗೂ ನಮ್ಮ ಸಂಬಂಧಗಳು ಸುಧಾರಿಸಿಲ್ಲ. ಸರ್ಕಾರವು ಎಡ ಕಮ್ಯುನಿಸ್ಟರನ್ನು ಬಂಧಿಸಿದಾಗ ಅವರು ಖಚಿತವಾಗಿರುವಂತೆ

ಕಂಡುಬಂದಿತು. ಆದರೆ ರಾಜಕೀಯ ಸೂಚ್ಯಾರ್ಥಗಳು ಇಲ್ಲವೆನ್ನುವಂತಿಲ್ಲ. ಇಡಿ ಪ್ರಸಂಗವು ಅರೆ ಮನಸ್ಸಿನ ಗೋಜಲಿನ ಒರಟು ಕಾರ್ಯವಾಗಿತ್ತು.

ಸರ್ಕಾರದ ಎಲ್ಲ ಕೃತಾಕತ ಕಾರ್ಯಗಳನ್ನು ನಾನಿಲ್ಲಿ ಪಟ್ಟಿ ಮಾಡಬೇಕಾಗಿಲ್ಲ. ಆದರೆ ದಿಕ್ಕು ತಪ್ಪುವುದು ಮತ್ತು ಅನಿಶ್ಚಿತತೆಗಳು ಎದ್ದು ಕಾಣುತ್ತಿವೆ. ಸರ್ಕಾರವು ನಿರ್ಧಾರಗಳನ್ನು ತೆಗೆದುಕೊಂಡಿದ್ದೇ ಆದರೆ, ಅವರನ್ನು ಸೋಲಿಸಲು ಸಾಧ್ಯವೇ ಇಲ್ಲ ಎಂಬ ಕಾರಣಕ್ಕಾಗಿ ಮಾತ್ರ ಸರ್ಕಾರವು ಖಚಿತವಾಗಿದೆ ಎಂದು ತೋರಿದರೆ, ಒಂದು ಹಳೆಯ ನೀತಿಯನ್ನು ಬದಲಿಸಲು ನಿರ್ಧರಿಸಿದೇ ಇದ್ದುದರಿಂದ ಅದಕ್ಕೆ ಕಟ್ಟುಬಿದ್ದಿರುವುದು ಎಂದರ್ಥ.

ಈ ವರ್ಷವು ಮಹತ್ವದ ಘಟನೆಗಳಿಂದ ಕೂಡಿದ್ದಾಗಿದೆ. ನೆಹರೂ ಪ್ರಭುತ್ವದ ದೀರ್ಘ ಇತಿಹಾಸವು ಒಂದೇ ವರ್ಷದಲ್ಲಿ ಮರುಕಳಿಸಿದೆ. ಪಂಡಿತ್ ನೆಹರೂ ಅವರ ಕಾರ್ಯನೀತಿಗಳು ಮತ್ತು ವಾಡಿಕೆಯ ಕಾರ್ಯಗಳ ಪರಿಣಾಮವಾಗಿ ಬಂದ ಶಕ್ತಿಗಳು ಈ ವರ್ಷದಲ್ಲಿ ತಲೆಯೆತ್ತಿದವು. ಸರ್ಕಾರದ ಪ್ರತಿಕ್ರಿಯೆ ಭಿನ್ನವಾಗೇನೂ ಇಲ್ಲ ಎಂದು ಮಾತ್ರ ಹೇಳಬಹುದು. ಶಾಸ್ತ್ರಿ ಅವರ ಸರ್ಕಾರವು ನೆಹರೂ ಜೊತೆಯ ಸರ್ಕಾರ, ಶಾಸ್ತ್ರೀಜಿ ಅವರು ಶತ್ರುಗಳನ್ನು ಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ. ಆದರೆ ಅವರಿಗೆ ವಿರೋಧಿಗಳಿಂದ ತಪ್ಪಿಸಿಕೊಳ್ಳಲಾಗುತ್ತಿಲ್ಲ. ಅವರು ಪ್ರಿಯರಾಗಬಹುದು, ಆದರೆ ಪರಿಣಾಮಕಾರಿಯಾಗಲಾರರು. ಶತಮಾನಗಳ ಕಾಲ ವಿದೇಶೀ ಆಕ್ರಮಣಗಳಿಗೆ ತುತ್ತಾಗಿದ್ದ ದೇಶದಲ್ಲಿ ಮತ್ತು ಸುಬೇದಾರರು ದುರಾಕ್ರಮಣ ಮಾಡಿ ಸ್ವಾತಂತ್ರ್ಯವನ್ನು ವಹಿಸಿಕೊಳ್ಳುತ್ತಿದ್ದ ದೇಶದಲ್ಲಿ ಕೇಂದ್ರದಲ್ಲಿನ ದೌರ್ಬಲ್ಯವು ವಿನಾಶಕಾರಿಯಾಗಬಲ್ಲದು. ಈಗಿನ ದೊಡ್ಡಿಯನ್ನು ಬರಿದುಗೊಳಿಸಲು ನಮಗೊಬ್ಬ ಹರ್ಕ್ಯುಲಿಸ್ಸನೇ ಬೇಕು. ಈ ಕಾರ್ಯಕ್ಕೆ ಶಾಸ್ತ್ರಿ ಅವರು ಸಮರ್ಥರೇ? ಅವರು ಪ್ರಯತ್ನಿಸಿದರೆ ಅವರ ಪಕ್ಷದವರು ಅವರನ್ನು ಮೆಚ್ಚಲಾರರು, ಆದರೆ ಅವರಿಗೆ ತಮ್ಮ ದೇಶಬಂಧುಗಳಿಂದ ಬೆಂಬಲ ದೊರೆಯುವುದು. ಅವರು ತಮ್ಮ ಗೆಳೆಯರನ್ನು ಮತ್ತು ಬೆಂಬಲಿಗರನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಮಯ ಬಂದಿದೆ.

ಮೂಲ : ಆರ್ಗನೈಸರ್, ೭ ಜೂನ್ ೧೯೬೫

**ಎರಡನೆಯ ಮತದಾನವಿಲ್ಲದೆ ಗೋವಾವನ್ನು ವಿಲೀನಗೊಳಿಸಬೇಕು**

ಪ್ರಧಾನಮಂತ್ರಿ ಲಾಲ್ ಬಹಾದೂರ್ ಶಾಸ್ತ್ರಿ ಅವರು ಗೋವಾ ವಿವಾದವನ್ನು ಕೆಡಿಸಿಬಿಟ್ಟಿದ್ದಾರೆ. ಒಂದು ಗಡಿಯ ಭವಿಷ್ಯಕ್ಕೆ ಸಂಬಂಧಿಸಿದಂತೆ ಚುನಾವಣೆಯ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳುವುದೆಂದರೆ ಪ್ರಜಾಪ್ರಭುತ್ವದ ತತ್ತ್ವವನ್ನು ತಪ್ಪಾಗಿ ಅಳವಡಿಸುವುದು. ಈವರೆಗಿನ ಸಾಮಾನ್ಯ ಅಭಿಪ್ರಾಯ ಹಾಗೂ ಕಳೆದ ಚುನಾವಣೆಯ ಫಲಿತಾಂಶಗಳು ಅಗತ್ಯವಾದ ನಿರ್ದೇಶನಗಳನ್ನು ನೀಡಿವೆ. ಹೊಸ ಚುನಾವಣೆಯ ಅವಶ್ಯಕತೆಯಿಲ್ಲ. ಆ ಪ್ರಕ್ರಿಯೆಗೆ ಇರಬೇಕಾದ ಖಚಿತತೆ ಮತ್ತು

ನಿಖರತೆಯ ಲಾಭ ಇಲ್ಲದಂತಹ ಜನಾಭಿಪ್ರಾಯ ಸಂಗ್ರಹ ಮಾಡಿದಂತಾಗುತ್ತದೆ. ಕೇಂದ್ರವು ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿದೆ.

ಯಾವುದೇ ಕಾರಣಕ್ಕೂ ಗೋವಾ ಪ್ರತ್ಯೇಕ ಘಟಕವಾಗಿ ಉಳಿಯಲು ಅವಕಾಶ ನೀಡಬಾರದು ಎನ್ನುವುದು ಖಂಡಿತ. ಅದನ್ನು ಅದರ ಅಕ್ಕಪಕ್ಕದ ಪ್ರದೇಶಗಳೊಂದಿಗೆ ವಿಲೀನಗೊಳಿಸಬೇಕಾದುದು ಒಂದು ಐತಿಹಾಸಿಕ ಮತ್ತು ರಾಜಕೀಯ ಅವಶ್ಯಕತೆಯಾಗಿದೆ. ಇದಕ್ಕಾಗಿ ಈ ಕ್ರಮವನ್ನು ಅನುಸರಿಸಬೇಕು:–

೧. ಗೋವಾ ಕೇಂದ್ರಾಡಳಿತ ಪ್ರಾಂತ್ಯವಾಗಿ ಉಳಿಲಾರದೆಂದು ಕೇಂದ್ರ ಸರ್ಕಾರವು ಘೋಷಿಸಬೇಕು.

೨. ರಾಜ್ಯಗಳ ಪುನರ್ ವ್ಯವಸ್ಥೆಗೆ ಅನುಸರಿಸಿದ ತತ್ತ್ವಗಳ ಆಧಾರದ ಮೇಲೆ ಅದನ್ನು ಅದರ ಅಕ್ಕಪಕ್ಕದ ಪ್ರದೇಶಗಳೊಂದಿಗೆ ವಿಲೀನಗೊಳಿಸಲು ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಒಂದು ಸಮಿತಿ ಅಥವಾ ಆಯೋಗವನ್ನು ರಚಿಸಬೇಕು.

ಹೊಸ ಚುನಾವಣೆಗಳ ಅವಶ್ಯಕತೆಯಿಲ್ಲ. ಆ ಪ್ರದೇಶದಲ್ಲಿ ಅಧಿಕಾರದಲ್ಲಿರುವ ಒಂದು ವಿರೋಧ ಪಕ್ಷದ ಮಂತ್ರಿಮಂಡಲವನ್ನು ಉಚ್ಚಾಟಿಸಲು ಪ್ರಧಾನ ಮಂತ್ರಿಗಳ ಜಾಣ ಷಡ್ಯಂತ್ರ ಇದು ಅಷ್ಟೆ. ಮತದಾರರ ಸಮುದಾಯದ ಬಹುಮತದ ಆಧಾರವಿಲ್ಲದೆ ವಿವಿಧ ಕಾಂಗ್ರೆಸ್ ಮಂತ್ರಿ ಮಂಡಲಗಳು ಜನತೆಯ ಇಚ್ಛೆಗಳನ್ನು ಪ್ರತಿನಿಧಿಸುವ ಹಕ್ಕನ್ನು ತಮಗೆ ತಾವೇ ಆರೋಪಿಸಿಕೊಳ್ಳಬಹುದಾದರೆ, ಬಂಡೋಡ್ಕರ್ ಮಂತ್ರಿಮಂಡಲಕ್ಕೂ ಅದೇ ಸವಲತ್ತನ್ನು ನೀಡಬಾರದೇಕೆ?

ಗೋವಾ ವಿವಾದಕ್ಕೆ ಮಹಾರಾಷ್ಟ್ರ ಮತ್ತು ಮೈಸೂರು ಸರ್ಕಾರಗಳು ಮತ್ತು ಕಾಂಗ್ರೆಸ್ ನಾಯಕರು ಪ್ರತಿಕ್ರಿಯೆ ನೀಡಿರುವ ರೀತಿಯು ಅವರ ಸಂಕುಚಿತ ಮನೋಭಾವವನ್ನು, ಅವರಲ್ಲಿ ಶಿಸ್ತು ತೀರಾ ಲೋಪವಾಗಿರುವುದನ್ನು ಪೂರ್ಣವಾಗಿ ಬಯಲುಮಾಡಿದೆ. ಮಹಾರಾಷ್ಟ್ರ ಮತ್ತು ಮೈಸೂರುಗಳ ನಡುವೆ ವ್ಯಾಜ್ಯಕ್ಕೆ ಗೋವಾ ಕಾರಣ ಎಂಬಂತೆ ತೋರಿಸಲು ಪ್ರಯತ್ನಿಸುತ್ತಿದ್ದಾರೆ. ವಾಸ್ತವವಾಗಿ ಅದೊಂದು ಪ್ರಾದೇಶಿಕ ಪ್ರಶ್ನೆಯೇ ಅಲ್ಲ. ಅದೊಂದು ರಾಷ್ಟ್ರೀಯ ವಿವಾದ ಮತ್ತು ಅಂತೆಯೇ ಅದನ್ನು ಕೇಂದ್ರದ ಮಟ್ಟದಲ್ಲೇ ಇತ್ಯರ್ಥಗೊಳಿಸಬೇಕು.

ಆಹಾರ, ಕಚ್ ಮುಂತಾದ ಹೆಚ್ಚು ತುರ್ತಾದ ಮತ್ತು ಮುಖ್ಯವಾದ ವಿಷಯಗಳಿಂದ ಜನರ ಮತ್ತು ಏಐಸಿಸಿಯ ಗಮನವನ್ನು ಬೇರೆಡೆಗೆ ಸೆಳೆಯಲೆಂದೇ ಗೋವಾ ವಿವಾದವನ್ನು ಪ್ರಧಾನ ಮಂತ್ರಿಗಳು ಕೆದಕಿದ್ದಾರೆ ಎಂದು ಭಾಸವಾಗುತ್ತದೆ. ಜನ ಮತ್ತು ಪಕ್ಷಗಳು ವಿವಿಧ ವಿವಾದಗಳ ಬಗ್ಗೆ ವ್ಯವಹರಿಸುವಾಗ ಸೂಕ್ತ ದೃಷ್ಟಿಕೋನದ ಮತ್ತು ಪ್ರಮಾಣದ ಪ್ರಜ್ಞೆಯನ್ನು ಕಳೆದುಕೊಳ್ಳುವುದಿಲ್ಲ ಎಂದು ನಾನು ಆಶಿಸುತ್ತೇನೆ.

**ಮೂಲ : ಆರ್ಗನೈಸರ್, ೨೫ ಜುಲೈ ೧೯೬೫**

## ಡಾ. ಶ್ಯಾಮಾ ಪ್ರಸಾದ್ : ಒಬ್ಬ ಆದರ್ಶ ನಾಯಕ

ಡಾ. ಶ್ಯಾಮಾ ಪ್ರಸಾದ್ ಮುಖರ್ಜಿ ಅವರು ಬಂಗಾಳದ ಹೊರಗೆ ಮಾಡಿದ ಸಾರ್ವಜನಿಕ ಭಾಷಣಗಳು ಬಹುತೇಕ ಹಿಂದಿಯಲ್ಲಿರುತ್ತಿದ್ದವು. ಹಿಂದೂ ಮಹಾಸಭೆಯ ಗೋಷ್ಠಿಯಲ್ಲಿ ಅವರು ಮೊದಲ ಬಾರಿ ಭಾಗವಹಿಸಿದಾಗ ಅವರಿಗೆ ಹಿಂದಿ ಮಾತನಾಡಲು ಬರುತ್ತಿರಲಿಲ್ಲ. ಆದರೆ ಆ ಭಾಷೆಯನ್ನು ಕಲಿಯುವುದಾಗಿ ಅವರು ಪಣ ತೊಟ್ಟರು ಮತ್ತು ಮಾರನೆಯ ವರ್ಷ ಅವರು ಹಿಂದಿಯಲ್ಲೇ ಮಾತನಾಡಿದರು. ವ್ಯಾಕರಣಬದ್ಧವಾದ ಹಿಂದಿಯನ್ನು ಅವರು ಬಳಸುವರೆಂದೇನೋ ನಿರೀಕ್ಷಿಸುವಂತಿರಲಿಲ್ಲ. ಆದರೆ ಅವರು ಯಾವಾಗಲೂ ಸರಿಯಾಗಿಯೇ ವ್ಯಕ್ತಪಡಿಸಲು ಸಮರ್ಥರಾಗಿದ್ದರು ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಸಾಕಷ್ಟು ಪರಿಣಾಮಕಾರಿಯಾಗಿಯೂ ಮಾತನಾಡುತ್ತಿದ್ದರು.

**ಹಿಂದಿಗಾಗಿ ಅವರು ಒತ್ತಾಯಿಸಿದ್ದು**

ಅವರು ಭಾರತೀಯ ಜನಸಂಘದ ಉದ್ಘಾಟನಾ ಸಮಾರಂಭದ ಅಧ್ಯಕ್ಷೀಯ ಭಾಷಣವನ್ನು ಇಂಗ್ಲಿಷಿನಲ್ಲಿ ಬರೆದಿದ್ದರು. ಆದರೆ ಅದನ್ನು ಹಿಂದಿಯಲ್ಲಿ ಪ್ರತಿನಿಧಿಗಳಿಗೆ ವಿತರಿಸಬೇಕೆಂದು ಅವರು ಬಯಸಿದರು. ಸಾಕಷ್ಟು ಕಾಲಾವಕಾಶವಿರಲಿಲ್ಲ. ಅಂದು ಅಕ್ಟೋಬರ್ ೨೦ನೇ ತಾರೀಖು. ಮಾರನೆಯ ದಿನ ಬೆಳಗ್ಗೆ ೧೦ ಗಂಟೆಗೆ ಭಾಷಣವನ್ನು ಓದಬೇಕಾಗಿತ್ತು. ಅಲ್ಲದೆ ೨೦ನೇ ತಾರೀಖಿನಂದೇ ವಿಷಯ ಸಮಿತಿಯೂ ಸಭೆ ಸೇರುವುದಿತ್ತು. ಆದರೆ ಈ ವಿಷಯದಲ್ಲಿ ಅವರು ಬಹಳ ಉತ್ಸುಕರಾಗಿದ್ದರು. ಪರಿಣಾಮವೇನೆಂದರೆ ಕೇವಲ ಅಧ್ಯಕ್ಷೀಯ ಭಾಷಣವನ್ನಷ್ಟೇ ಅಲ್ಲ. ಜೊತೆಗೆ ಪ್ರಣಾಳಿಕೆಯನ್ನೂ ಹಿಂದಿಗೆ ತರ್ಜುಮೆ ಮಾಡಲಾಯಿತು. ಅಲ್ಲದೆ, ಅರ್ಜುನ್ ಮುದ್ರಣಾಲಯದ ಕೆಲಸಗಾರರ ದಣಿವರಿಯದ ಹುರುಪಿನಿಂದಾಗಿ ಅವೆರಡನ್ನೂ ಸರಿಯಾದ ಸಮಯಕ್ಕೆ ಪ್ರತಿನಿಧಿಗಳಿಗೆ ನೀಡಲು ಅವೆರಡನ್ನೂ ಮುದ್ರಿಸುವುದೂ ಸಾಧ್ಯವಾಯಿತು. ಆದರೆ ಡಾ. ಮುಖರ್ಜಿ ಅವರು ಭಾಷಣವನ್ನು ಓದಲಿಲ್ಲ. ಅವರ ವಾಡಿಕೆಯಂತೆ ಆಶುಭಾಷಣ ಮಾಡಿದರು. ಅವರ ಭಾಷಣವು ಅನುವಾದಕ್ಕಿಂತಲೂ ಹೆಚ್ಚು ಪ್ರಭಾವಯುತವಾಗಿತ್ತು.

**ಸರ್ವನಾಶಕ್ಕೆ ಬದಲಾಗಿ ಅವರು ಖತರನಾಶ್ ಅನ್ನು ಆರಿಸಿಕೊಂಡರು**

ತಮ್ಮ ಹಿಂದಿ ಭಾಷಣಗಳಲ್ಲಿ ಡಾ. ಮುಖರ್ಜಿ ಅವರು ಸಂಸ್ಕೃತ ಪದಗಳನ್ನು ಮುಕ್ತವಾಗಿ ಬಳಸುತ್ತಿದ್ದರು. ಆದ್ದರಿಂದ ಸೂಕ್ತ ಪದಗಳನ್ನು ಹುಡುಕುವ ತೊಂದರೆಯೇ ಅವರಿಗಿರಲಿಲ್ಲ. ಸಂಸ್ಕೃತದಿಂದಾಗಿ ಅವರ ಶೈಲಿಯೂ ಪರಿಶುದ್ಧವಾಗಿತ್ತು. ಆದರೆ ಅವರು ಸರ್ವನಾಶ್ ಎಂಬ ಪದವನ್ನು ಉಪಯೋಗಿಸುತ್ತಿರಲಿಲ್ಲ. ಬದಲಿಗೆ ಖತರನಾಶ್ ಎನ್ನುತ್ತಿದ್ದರು. ಅದು ಅವರೇ ಟಂಕಿಸಿದ ಒಂದು ಪದವಾಗಿತ್ತು.

ತಾನು ಒಂದು ತಪ್ಪು ಪದಪ್ರಯೋಗವನ್ನು ಮಾಡುತ್ತಿದ್ದೇನೆಂದು ಅವರಿಗೆ ಯಾವಾಗಲೂ ಭಾಸವಾಗುತ್ತಿತ್ತು. ಆದರೆ ತಪ್ಪನ್ನು ಎತ್ತಿ ತೋರಿಸಲು ನಾವು ಹಿಂಜರಿದೆವು. ಒಂದು ದಿನ ಲೋಕಾಭಿರಾಮವಾದ ಹರಟೆಯಲ್ಲಿ ಭಾಷೆಯ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಖತರನಾಶ್ ಎನ್ನುವುದು ಸರಿಯಾದ ಪದ ಅಲ್ಲ ಎಂದು ನಾನು ಅವರಿಗೆ ಬೊಟ್ಟುಮಾಡಿ ತಿಳಿಸಿದೆ. ಅವರು ಸರ್ವನಾಶ್ ಅಥವಾ ಸತ್ಯನಾಶ್ ಎಂದು ಉಪಯೋಗಿಸಿದರೆ ಸರಿಯಾಗುತ್ತಿತ್ತು. ನನ್ನ ಸಲಹೆಗೆ ಅವರು ವಂದಿಸಿದರು. ಆದರೆ ಅವರೆಂದರು, ಖತರನಾಶ್ ಮತ್ತು ಸರ್ವನಾಶ್‌ಗಳ ನಡುವೆ ಸೂಕ್ಷ್ಮ ವ್ಯತ್ಯಾಸವಿದೆ ಎನಿವುಸುದಿಲ್ಲವೇ? ಹೌದು, ವ್ಯತ್ಯಾಸವೇನೋ ಇದೆ.

ಇದೇ ಡಾ. ಶ್ಯಾಮಾ ಪ್ರಸಾದ್ ಮುಖರ್ಜಿ ಅವರನ್ನು ದೇಶದ ಅನೇಕ ವಿರೋಧ ಪಕ್ಷದ ನಾಯಕರಿಂದ ವಿಶಿಷ್ಟರನ್ನಾಗಿ ಮಾಡಿದ್ದು. ಮುಖರ್ಜಿ ಅವರು ಎಚ್ಚರಿಕೆಯಿಂದಿರುತ್ತಿದ್ದರು ಮತ್ತು ಯವುದೇ ತಪ್ಪು ಕಾರ್ಯನೀತಿ ಅಥವಾ ಕ್ರಮದ ಅಪಾಯಕಾರೀ ಪರಿಣಾಮ ಸಾಧ್ಯತೆಗಳ ಬಗ್ಗೆ ಯಾವಾಗಲು ಸರ್ಕಾರದ ಮತ್ತು ಜನರ ಗಮನವನ್ನು ಸೆಳೆಯುತ್ತಿದ್ದರು. ಆದರೆ ಅವರು ವಿನಾಶದ ಜ್ಯೋತಿಷಿಯಾಗಲೀ, ಸಿನಿಕರಾಗಲೀ ಆಗಿರಲಿಲ್ಲ. ಆದ್ದರಿಂದಲೇ ಅವರು ಬಹುಶಃ ಪ್ರಜ್ಞಾಪೂರ್ವಕವಾಗಿಯೇ ಖತರನಾಶ ಎಂಬ ಹೊಸ ಪದವೊಂದನ್ನು ಟಂಕಿಸಿದರು. ಸರ್ವನಾಶ ಎಂದರೆ ಸಂಪೂರ್ಣ ನಶ, ಆದರೆ ಖತರನಾಶ್ ಎನ್ನುವುದು (ಪರ್ಶಿಯನ್ನಿನ ಖತ್ರ ಮತ್ತು ಸಂಸ್ಕರತದ ನಾಶ ಪದಗಳ ಹೈಬ್ರಿಡ್ ಪದ) ಅಪಾಯವನ್ನೂ, ಅದನ್ನು ತಪ್ಪಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳದಿದ್ದರೆ ಉಂಟಾಗಬಹುದಾದ ತೊಂದರೆಯ ಸಾಧ್ಯತೆಯನ್ನೂ ಸೂಚಿಸುತ್ತಿತ್ತು. ಈ ಭೇದವನ್ನು ಅರಿತು ಗೌರವಿಸಿದರೆ ವಿರೋಧದ ಉದ್ದೇಶ ಸರ್ಕಾರದ ನಿರರ್ಥಕ ಟೀಕೆಯಲ್ಲ, ಬದಲಿಗೆ ರಾಷ್ಟ್ರದ ಕಾರ್ಯನೀತಿಗಳನ್ನು ರೂಪಿಸವಲ್ಲಿ ಒಂದು ರಚನಾತ್ಮಕ ಕೊಡುಗೆಯಾಗುತ್ತದೆ. ಈ ಅರ್ಥದಲ್ಲಿ ಮಾತ್ರ ತನ್ನ ಅಸ್ತಿತ್ವವನ್ನು ವಿರೋಧ ಪಕ್ಷವು ಸಮರ್ಥಿಸಿಕೊಳ್ಳಬಹುದು. ವಿರೋಧ ಪಕ್ಷದ ಕೆಲಸವು ಹಾದಿ ತೋರಿಸುವುದೇ ಹೊರತು ಹಾದಿ ತಪ್ಪಿಸುವುದಲ್ಲ. ಅದರ ಕಾರ್ಯವಿಧಾನವು ನಕಾರಾತ್ಮಕವಾಗಿರಬಾರದು. ಸಕಾರಾತ್ಮಕವಾಗಿರಬೇಕು. ಸರ್ಕಾರವು ಆತ್ಮತೃಪ್ತಿಯಿಂದಾಗಲೀ ಅಸಡ್ಡೆಯಿಂದಾಗಲೀ ಇರಲು ಅದು ಅವಕಾಶ ಕೊಡಬಾರದು. ಆದರೆ ಅದು ಜನರಲ್ಲಿ ಭೀತಿಯನ್ನು ಉಂಟು ಮಾಡುವುದಾಗಲೀ ಅವರ ಸ್ಥೈರ್ಯಗೆಡಿಸುವುದಾಗಲೀ ಮಾಡಬಾರದು.

**ಕನಿಷ್ಠ ಪಕ್ಷ ಜನಸಂಘ ತಲೆ ಕೆಡಿಸಿಕೊಂಡಿಲ್ಲ**

ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಮತಗಳನ್ನು ಬಾಚಿಕೊಂಡಿತು. ವಿರೋಧ ಪಕ್ಷಗಳ ನಾಯಕರ ಪೈಕಿ ಹೆಚ್ಚಿನವರು ಸೋತಿದ್ದರು. ಜನತೆಗೆ ಸರ್ಕಾರ ಬದಲು ಮಾಡುವವೆಂದು ಆಶ್ವಾಸನೆ ನೀಡಿದ್ದ ಪಕ್ಷಗಳೂ ಉಚ್ಚಾಟನೆಗೊಂಡವು.

ಆ ಸಂದರ್ಭದಲ್ಲಿ ಒಬ್ಬ ಸದ್ಗೃಹಸ್ಥರು ಮುಖರ್ಜಿ ಅವರನ್ನು ಸಮೀಪಿಸಿ, ಭಾರತದಲ್ಲಿ ಪ್ರಜಾಪ್ರಭುತ್ವದ ಭವಿಷ್ಯವು ಕರಾಳವಾಗಿದೆ ಎಂದರು. ಅವರಿಗೆ ಡಾ. ಮುಖರ್ಜಿ ಅವರು ಎರಡು ಪ್ರಶ್ನೆಗಳನ್ನು ಕೇಳಿದರು. ನಿಮಗೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿದೆಯೇ?

ರಾಜಕೀಯದಲ್ಲಿ ಸಕ್ರಿಯವಾಗಿ ದುಡಿಯಲು ನೀವು ನಿರ್ಧರಿಸುವಿರಾ? ಈ ಎರಡು ಪ್ರಶ್ನೆಗಳಿಗೂ ಆ ಸದ್ಗೃಸ್ಥರು ಸಮ್ಮತಿ ಸೂಚಿಸಿದರು. ಅಂದ ಮೇಲೆ ಭಾರತದಲ್ಲಿ ಪ್ರಜಾಪ್ರಭುತ್ವದ ಭವಿಷ್ಯವು ಕರಾಳವಾಗಿರುವುದು ಹೇಗೆ ಸಾಧ್ಯ? ಎಂದು ಮುಖರ್ಜಿ ಅವರು ಮುಂದುವರೆಸಿದರು. "ನಾವು ಶ್ರಮ ವಹಿಸದಿದ್ದರೆ ಅಥವಾ ನಿಮಗೆ ವಿಶ್ವಾಸವಿಲ್ಲದಿದ್ದಲ್ಲಿ ಮಾತ್ರ ಅದು ಕರಾಳವಾಗಿರುತ್ತದೆ. ವಿಶ್ವಾಸವಿರುವಾಗ ಕತ್ತಲು ಇಲ್ಲ. ಅದು ಪ್ರಕಾಶಮಾನವಾಗಿರುತ್ತದೆ."

ನಿಜವಾಗಿಯೂ ನಾಯಕತ್ವ ವಹಿಸಬಲ್ಲವನು ಆತನೇ ಎಂದು ನಾನು ಕಂಡುಕೊಂಡೆ. ನಾಯಕರೆಂದು ಕರೆಯಲ್ಪಟ್ಟ, ಆದರೆ ಜನರಲ್ಲಿ ಧೈರ್ಯ ತುಂಬಲು ಅಶಕ್ಯರಾದವರನ್ನು ನಾವು ಆಗಾಗ ಭೇಟಿ ಮಾಡುವುದುಂಟು. ನೀವು ಯೌವನದ ಆತ್ಮಸ್ಥೈರ್ಯದೊಂದಿಗೆ ಅವರಲ್ಲಿಗೆ ಹೋದರೆ ಮುಪ್ಪಿನ ಹಿಂಜರಿಕೆಯೊಂದಿಗೆ ಹಿಂದಿರುಗಿ ಬರುವಿರಿ. ಡಾ. ಮುಖರ್ಜಿ ಅಂಥವರಲ್ಲಿ ಒಬ್ಬರಲ್ಲ. ನಾವು ಅವರನ್ನು ಭೇಟಿ ಮಾಡಿದಾಗ ಅವರು ಸೋಲಿನ ಬಗ್ಗೆ ಪ್ರಲಾಪಿಸಲಿಲ್ಲ. ನಾವು ಯಶಸ್ಸನ್ನು ಗಳಿಸಬೇಕಾದರೆ ಅದಕ್ಕಾಗಿ ನಾವು ಕೈಗೊಳ್ಳಬೇಕಾದ ಕಠಿಣ ಪರಿಶ್ರಮವನ್ನು ಅವರು ನಮಗೆ ನೆನಪು ಮಾಡಿಕೊಟ್ಟರು, ಮತ್ತು ಹೇಳಿದರು. ಜನಸಂಘವಾದರೂ ಸ್ವಲ್ಪ ವಾಸಿ. ಉಳಿದ ಎಲ್ಲ ಪಕ್ಷಗಳೂ ತಲೆ ಕಳೆದುಕೊಂಡಿವೆ. ಆದರೆ ನಿಮ್ಮ ಅಧ್ಯಕ್ಷರು ಸಫಲರಾಗಿದ್ದಾರೆ. ಹೌದು, ಉಳಿದಂತೆ ನಿರಾಶಾದಾಯಕವಾಗಿದ್ದ ಚಿತ್ರದಲ್ಲಿ ಅದೊಂದು ಪ್ರಕಾಶವಾದ ಭಾಗವಾಗಿತ್ತು. ಮತ್ತು ಅದು ನಮ್ಮ ಭವಿಷ್ಯವನ್ನು ಹೆಚ್ಚು ಆಶಾದಾಯಕವಾಗಿ ರೂಪಿಸಲು ನಮಗೆ ಸ್ಫೂರ್ತಿ ನೀಡಿತು.

**ಒಂದು ದಾರಿದೀಪ**

ಇಂದು, ಡಾ. ಮುಖರ್ಜಿ ಅವರು ಮೃತರಾಗಿ ಹನ್ನೆರಡು ವರ್ಷಗಳ ನಂತರ ದೇಶವು ಹೆಚ್ಚು ಕಠಿಣವಾದ ಕಾಲವನ್ನು ಕ್ರಮಿಸುತ್ತಿದೆ. ನಮ್ಮ ನಡುವೆ ಯಾವುದೇ ಮುಖರ್ಜಿ ಅವರು ಇಲ್ಲ. ಆದರೆ ಅವರ ಚೇತನ ಜೀವಂತವಾಗಿದೆ. ದೇಶಕ್ಕೆ ಒಂದು ಕರಾಳ ಭವಿಷ್ಯದ ಮುನ್ಸೂಚನೆ ಕೊಡುವ ರೀತಿಯಲ್ಲಿ ನಿಮ್ಮೊಂದಿಗೆ ಮಾತನಾಡುವವರು ಇದ್ದಲ್ಲಿ, ಅವರನ್ನು ವಿಶ್ವಾಸವಿಲ್ಲದ ಮತ್ತು ಉದ್ದೇಶರಹಿತ ಜನರೆಂದು ವಜಾ ಮಾಡಿಬಿಡಿ. ಏನಾದರೂ ನಮ್ಮ ಭವಿಷ್ಯವನ್ನು ನಿರ್ಮಿಸುವವರು ನಾವೇ. ನಾವು ಕೇವಲ ನಿರ್ಲಿಪ್ತ ಪ್ರೇಕ್ಷಕರಲ್ಲ. ಆದರೆ ರಾಷ್ಟ್ರದ ಇತಿಹಾಸವನ್ನು ನಿರ್ಮಿಸುವಲ್ಲಿ ಕ್ರಿಯಾಶೀಲರಾಗಿ ಭಾಗಿಗಳಾದವರು. ಅಧಿಕಾರದಲ್ಲಿರುವವರು ತಪ್ಪು ಮಾಡಿದರೆ ಅವರನ್ನು ತಿದ್ದುವುದು ನಮ್ಮ ಕರ್ತವ್ಯ. ಕೇವಲ ಅವರ ವೈಫಲ್ಯದಲ್ಲಿ

ಪೈಶಾಚಿಕ ತೃಪ್ತಿಯನ್ನು ಪಡೆಯುವುದೋ ಅಥವಾ ಅವರು ತಪ್ಪು ಮಾಡಿದ್ದಾರೆ ಎಂದು ಬೊಟ್ಟು ಮಾಡಿ ತೋರಿಸಿ ವಿರಮಿಸುವುದೋ ಅಲ್ಲ. ಈ ರಚನಾತ್ಮಕ ದೃಷ್ಟಿಕೋನವನ್ನು ಡಾ. ಮುಖರ್ಜಿ ಅವರು ನಮಗೆ ನೀಡಿದ್ದಾರೆ. ಜೊತೆಗೆ, ತನಗೆ ಒಪ್ಪಿಸಿದ ಜವಾಬ್ದಾರಿಯನ್ನು ನಿರ್ವಹಿಸಲು ಅದು ಅಸಮರ್ಥವಾದಂತೆ ಅದನ್ನು ಬದಲಾಯಿಸಲ ಪ್ರಜಾಪ್ರಭುತ್ವಕ್ಕೆ ಸೂಕ್ತವಾದ ಮಾರ್ಗದಲ್ಲಿ ಒತ್ತಾಯಿಸುವಂತೆ ಜನರ ಸಂಘಟನೆ ಮಾಡುವುದೂ ನಮ್ಮ ಕರ್ತವ್ಯ. ಅಧಿಕಾರ ನಡೆಸಬೇಕೆಂದು ಉದ್ದೇಶಿಸಿದ್ದ ವಿರೋಧ ಪಕ್ಷದ ನಾಯಕರಾಗಿದ್ದರು ಅವರು. ಆ ಉದ್ದೇಶವನ್ನು ನಾವು ನಿರಂತರವಾಗಿ ನಮ್ಮ ಮುಂದಿಟ್ಟುಕೊಂಡರೆ ಮತ್ತು ನಮ್ಮ ಗುರಿಯಲ್ಲಿ ನಮಗೆ ವಿಶ್ವಾಸವಿದ್ದರೆ, ವಿರೋಧ ಪಕ್ಷವು ಯಾವಾಗಲೂ ಜವಾಬ್ದಾರಿಯುತವಾಗಿರುತ್ತದೆ. ಅದು ಚಕ್ರಕ್ಕೆ ತೊಡರಾಗುವುದಿಲ್ಲ. ಆದರೆ ರಾಷ್ಟ್ರೀಯ ಆಡಳಿತಕ್ಕೆ ಒಂದು ಹೆಚ್ಚಿನ ಚಾಲಕ ಶಕ್ತಿಯಾಗುತ್ತದೆ. ಈ ಧೋರಣೆ ಮಾತ್ರ ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಮಾಡುತ್ತದೆ ಹಾಗೂ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸುತ್ತದೆ.

**ಮೂಲ : ಆರ್ಗನೈಸರ್, ೪ ಜುಲೈ ೧೯೬೫**

## ದೆಹಲಿ ಚಲೋ

ಭಾರತೀಯ ಜನಸಂಘದ ಸಾಮಾನ್ಯ ಕಾರ್ಯದರ್ಶಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರು, ಕಚ್ ಒಪ್ಪಂದವನ್ನು ವಿರೋಧಿಸುವ ಬೃಹತ್ ಸಾರ್ವಜನಿಕ ಪ್ರತಿಭಟನೆಗಾಗಿ ದೆಹಲಿಯಲ್ಲಿ ಲಕ್ಷಗಟ್ಟಲೆ ಜನರು ಜಮಾಯಿಸಬೇಕೆಂದು ಕರೆ ನೀಡಿದ್ದಾರೆ. ಜನಸಂಘದ ನಾಯಕರು ಒಪ್ಪಂದವನ್ನು ತೆಗೆದು ಎಸೆಯುವಂತೆ ಸಂಸತ್ ಸದಸ್ಯರಿಗೆ ಕಳಕಳಿಯ ಮನವಿಯನ್ನೂ ಮಾಡಿದ್ದಾರೆ. “ಕಮ್ಯುನಿಸ್ಟರು ಮತ್ತು ಸ್ವತಂತ್ರ ಪಕ್ಷ (ಸ್ಪಷ್ಟ ಕಾರಣಕ್ಕಾಗಿ)ಗಳನ್ನು ಹೊರತುಪಡಿಸಿ ಎಲ್ಲ ವಿರೋಧ ಪಕ್ಷಗಳೂ ಅದನ್ನು ವಿರೋಧಿಸಿವೆ. ಕಾಂಗ್ರೆಸ್ ಕೂಡಾ ಅದನ್ನು ಬೆಂಬಲಿಸಿಲ್ಲ” ಎಂದು ಶ್ರೀ ಉಪಾಧ್ಯಾಯ ಹೇಳಿದರು.

**ಅವರ ಹೇಳಿಕೆಯ ಪಠ್ಯ ಹೀಗಿದೆ:**

"ಅವಮಾನಕರ (ಹೀನ) ಕಚ್ ಒಪ್ಪಂದಕ್ಕೆ ೧೯೬೫ರ ಜೂನ್ ೩೦ರಂದು ಏಕಕಾಲದಲ್ಲಿ ನವದೆಹಲಿ ಮತ್ತು ರಾವಲ್ಪಿಂಡಿಗಳಲ್ಲಿ ಸಹಿ ಹಾಕಲಾಯಿತು. ರಾಷ್ಟ್ರೀಯ ಹಕ್ಕುಗಳು ಮತ್ತು ಹಿತಾಸಕ್ತಿಗಳ ವಿಷಯದಲ್ಲಿ ಇದೊಂದು ಕಣ್ಣು ಕುಕ್ಕುವಂತಹ ವಿಶ್ವಾಸಘಾತಕ ಕೃತ್ಯವಾಗಿತ್ತು. ಅದರ ಕರಾರುಗಳು ಆತ್ಮಗೌರವವುಳ್ಳ ರಾಷ್ಟ್ರಗಳಿಗೆ ಅವಮಾನ ಉಂಟುಮಾಡುತ್ತವೆ. ಭಾರತ ಸರ್ಕಾರವು ಒತ್ತಡಗಳಿಗೆ ಮಣಿದು ವಿಧಿಯಿಲ್ಲದೆ ಒಪ್ಪಂದಕ್ಕೆ ಸಹಿ ಹಾಕಿದೆ. ಸಂಸತ್ ಸದಸ್ಯರೇ ಕಚ್ ಒಪ್ಪಂದವನ್ನು ಹೊರಕ್ಕೆ ಎಸೆಯಿರಿ” ಎನ್ನುತ್ತಾರೆ ದೀನ್ ದಯಾಳ್ ಉಪಾಧ್ಯಾಯ.

**ಆಕ್ರಮಣದ ನಂತರ ಹಿಂದಿನ ಸ್ಥಿತಿ**

ಪಾಕಿಸ್ತಾನವು ಆಕ್ರಮಣ ನಡೆಸಿತು ಹಾಗೂ ತನಗೆ ಯಾವುದೇ ಘಾಸಿಯಾಗದೆ, ಭಾರತದ ಗಡಿಯಲ್ಲಿ ಪಹರೆ ನಡೆಸಲು ಹಕ್ಕು ನೀಡುವ ಒಪ್ಪಂದ ಹಾಗೂ ಕಚ್‌ನ ೩೫೦೦ ಚದರ ಮೈಲು ಪ್ರದೇಶದ ವಿವಾದವು ಅಂತರರಾಷ್ಟ್ರೀಯ ನ್ಯಾಯಪೀಠದ ಮಧ್ಯಸ್ಥಿಕೆಯಲ್ಲಿ ತೀರ್ಮಾನವಾಗುವುದು ಎನ್ನುವ ಗೆಲವಿನೊಂದಿಗೆ ಹಿಂದಕ್ಕೆ ಹೋಯಿತು. ಮತ್ತು ಭಾರತಕ್ಕೆ ಲಭಿಸಿದ್ದೇನು? ಜನವರಿ ೧೯೬೫ರಲ್ಲಿದ್ದ ಸ್ಥಿತಿಗೆ ವಾಪಸಾತಿ.

ಭಾರತ ಸರ್ಕಾರ ಈ ಬಗ್ಗೆ ಒತ್ತಾಯಿಸಿತ್ತು. ಅವರಿಗೆ ಅದು ಲಭಿಸಿತು. ಆದರೆ ಅದು ಆಕ್ರಮಣದ ಮೊದಲಿನ ಸ್ಥಿತಿಯಲ್ಲ. ಆಕ್ರಮಣದ ನಂತರದ ಸ್ಥಿತಿ. ೧೯೬೫ರ ಜನವರಿ ೧ಕ್ಕಿಂತ ಮೊದಲೇ ಪಾಕಿಸ್ತಾನವು ಆ ಪ್ರದೇಶಕ್ಕೆ ಅತಿಕ್ರಮ ಪ್ರವೇಶ ಮಾಡಿತ್ತೆಂದು ಈಗ ಹೇಳಲಾಗುತ್ತಿದೆ. ಸರ್ಕಾರಕ್ಕೆ ಇದರ ಅರಿವಿರಲಿಲ್ಲ. ಅಥವ ಅದು ಉದ್ದೇಶ ಪೂರ್ವಕವಾಗಿ ಜನತೆಗೆ ಮೋಸಮಾಡಿತು. ನಮ್ಮ ಗಡಿಗಳನ್ನು ಕಾಯುತ್ತಲೂ ಇರಲಿಲ್ಲ, ರಕ್ಷಿಸಿಕೊಳ್ಳಲೂ ಇಲ್ಲ. ಒಂದು ಪ್ರಾಥಮಿಕ ಕರ್ತವ್ಯದ ವಿಷಯದಲ್ಲಿ ಸರ್ಕಾರದ ಈ ಅಲಕ್ಷ್ಯ ಒಂದು ಅಪರಾಧವಾಗಿದೆ. ತನ್ನ ಗಡಿಗಳನ್ನು ರಕ್ಷಿಸಿಕೊಳ್ಳಲಾರದ ಸರ್ಕಾರಕ್ಕೆ ಅಸ್ತಿತ್ವದ ಹಕ್ಕೇ ಇಲ್ಲ.

ಒಪ್ಪಂದಕ್ಕೆ ಸಹಿ ಹಾಕಿದ ವಿಷಯದಲ್ಲಿ ರಾಷ್ಟ್ರವನ್ನು ಒಂದು ಸಮಾಧಾನ ಮತ್ತು ಸಾಧನೆಯ ಭಾವಕ್ಕೆ ಸಮ್ಮೋಹನಗೊಳಿಸಲು ಪ್ರಯತ್ನ ನಡೆಯುತ್ತಿದ್ದಾಗ ಭಾರತೀಯ ಜನಸಂಘವು ಒಪ್ಪಂದದ ನಿಜವಾದ ಸ್ವರೂಪವನ್ನು ಅದರ ಅಪಾಯಕಾರಿ ಪರಿಣಾಮಗಳನ್ನು (ಸೂಚ್ಯಾರ್ಥಗಳನ್ನೂ) ಕಾಣಬಲ್ಲದಾಗಿತ್ತು. ಈ ವಿಷಯದಲ್ಲಿ ತಬ್ಬಿಬ್ಬುಗೊಳ್ಳಲು ಇಲ್ಲವೇ ಜಡವಾಗಿರಲು ಅದು ನಿರಾಕರಿಸಿತು. ಒಪ್ಪಂದಕ್ಕೆ ವಿದೇಶಾಂಗ ಕಚೇರಿಯಲ್ಲಿ ಸಹಿ ಮಾಡಿದ ದಿನವೇ ಅದು ಚುರುಕಾಗಿ ಪ್ರತಿಕ್ರಿಯಿಸಿತು. ಶ್ರೀ ಅಟಲ್ ಬಿಹಾರಿ ವಾಜಪೇಯಿ, ಶ್ರೀ ಆರ್.ವಿ.ಬೇಡ್, ಇಬ್ಬರೂ ಸಂಸತ್ ಸದಸ್ಯರು ಹಾಗೂ ಇತರ ನಲವತ್ತು ಮಂದಿ ಬಂಧಿಸಲ್ಪಟ್ಟರು.

**ಜನರ ಬೃಹತ್ ಪ್ರತಿಭಟನೆ**

ಈ ಒಪ್ಪಂದಕ್ಕೆ ಜನರ ಪ್ರತಿಭಟನೆಯು ಜುಲೈ ೪ರಂದು ಪ್ರಾರಂಭವಾಯಿತು. ಒಪ್ಪಂದವನ್ನು ವಜಾ ಮಾಡಬೇಕೆಂದು ಆಗ್ರಹಿಸಿ ದೇಶದಾದ್ಯಂತ ಸಭೆಗಳು, ಪ್ರದರ್ಶನಗಳು ನಡೆದವು. ಜುಲೈ ೧೦–೧೧ರಂದು ಭಾರತೀಯ ಜನಸಂಘದ ಕಾರ್ಯ ಸಮಿತಿಯು ಜಬ್ಬಲ್ಪುರದಲ್ಲಿ ಸಭೆ ಸೇರಿ ಈ ರಾಷ್ಟ್ರ ವಿರೋಧಿ ಒಪ್ಪಂದದ ವಿರುದ್ಧ ಉಗ್ರ ಚಳುವಳಿ ನಡೆಸಲು ನಿರ್ಧರಿಸಿತು. ಪ್ರತಿಯೊಂದು ಲೋಕಸಭಾ ಚುನಾವಣಾ ಕ್ಷೇತ್ರದ ಮತದಾರರೂ ಅಭಿಪ್ರಾಯ ಕ್ರೋಢೀಕರಿಸಿ, ಈ ಒಪ್ಪಂದವು ಸಂಸತ್ತಿನ ಮುಂದೆ ಬಂದಾಗ ಅದನ್ನು ಹೊರಕ್ಕೆ ಎಸೆಯಲು ತಮ್ಮ ಪ್ರತಿನಿಧಿಗಳಿಗೆ ಆದೇಶ ನೀಡಬೇಕೆಂದು ಕೋರಲಾಯಿತು.

ಯಾವ ಬೆಲೆಯನ್ನಾದರೂ ತೆತ್ತು ರಾಷ್ಟ್ರದ ಸಮಗ್ರತೆಯನ್ನು ರಕ್ಷಿಸುವೆವೆಂದು ಜನರು ಬಹುಸಂಖ್ಯೆಯಲ್ಲಿ ಪ್ರಮಾಣ ವಚನಗಳನ್ನು ಕೈಗೊಂಡ ಅವಧಿಯೆಂದು ಜುಲೈ ೨೩ ರಿಂದ ಆಗಸ್ಟ್ ೧ರವರೆಗಿನ ಕಾಲವನ್ನು ಪ್ರಶಂಸಿಸಲಾಯಿತು. ಕ್ರಮವಾಗಿ ಈ ದಿನಗಳಲ್ಲಿ ಜನ್ಮದಿನ ಮತ್ತು ಪುಣ್ಯ ತಿಥಿಗಳು ಬರುವ ಲೋಕಮಾನ್ಯ ತಿಲಕರ ಅದಮ್ಯ ಚೇತನವು ಜನರಿಗೆ ಸ್ಫೂರ್ತಿಯನ್ನು ಮಾರ್ಗದರ್ಶನವನ್ನು ನೀಡಿದವು. ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು ಮತ್ತು ನಾವು ಅದನ್ನು ಪಡೆಯುತ್ತೇವೆ ಎಂಬ ಘೋಷಣೆಯನ್ನು ತಿಲಕರು ನಮಗೆ ನೀಡಿದರು. ಇಂದು ಜನರ ತುಂಬು ಕಂಠದ ಘೋಷಣೆಯೆಂದರೆ "ಸ್ವಾತಂತ್ರ್ಯ ನಮ್ಮ ಜನ್ಮಸಿದ್ದ ಹಕ್ಕು ಮತ್ತು ನಾವು ಅದನ್ನು ರಕ್ಷಿಸುತ್ತೇವೆ."

**ಸಂವಿಧಾನದ ಅತಿಕ್ರಮಣ**

ಈಗ ಬರಲಿದೆ ಈ ಕಾರ್ಯಕ್ರಮದ ಎರಡನೆಯ ಹಂತ. ಆಗಸ್ಟ್ ೧೬ರಂದು ಸಂಸತ್ತು ತನ್ನ ಮಳೆಗಾಲದ ಅಧಿವೇಶನವನ್ನು ಪ್ರಾರಂಭಿಸಿದಾಗ ಸಂಸತ್ತಿನ ಎದುರು ಪ್ರದರ್ಶನ ನಡೆಸಲು ರಾಷ್ಟ್ರದ ನಾಲ್ಕು ಮೂಲೆಗಳಿಂದಲೂ ಲಕ್ಷಾಂತರ ಜನ ಸೇರಲಿದ್ದಾರೆ. ಸಂಸತ್ತಿನ ಎದುರು ಈ ಹಿಂದೆಯೂ ಅನೇಕ ಪ್ರದರ್ಶನಗಳು ನಡೆದಿವೆ. ಆದರೆ ಈ ಪ್ರದರ್ಶನ ಭಿನ್ನವಾಗಿರುವುದು. ಆಗಸ್ಟ್ ೧೬ರಂದು ಅವರಿಂದ ಕಿತ್ತುಕೊಂಡಿರುವುದನ್ನು ಅನುಗ್ರಹಿಸಲು ಮತ್ತು ಪುನಃ ಸ್ಥಾಪಿಸಲು ಸಂಸತ್ತಿಗೆ ಜನ ಬರಲಿದ್ದಾರೆಯೇ ಹೊರತು ಭಿಕ್ಷಾಪಾತ್ರೆಯನ್ನು ಹಿಡಿದು ಅಂಗಲಾಚುತ್ತ ಬರುತ್ತಿಲ್ಲ. ಗಾತ್ರದಲ್ಲಿ ಈ ಹಿಂದೆ ಸಂಘಟಿಸಲ್ಪಟ್ಟ ಯಾವುದೇ ಪ್ರತಿಭಟನೆಗಿಂತಲೂ ಇದು ಬಹುಮಟ್ಟಿಗೆ ಹಿರಿದಾಗಿರುತ್ತದೆ. ಆದರೆ ಜನ ಒಂದುಗೂಡುತ್ತಿರುವ ಉದ್ದೇಶ ಮತ್ತು ಶಿಸ್ತು ಅದರ ವೈಶಿಷ್ಟ್ಯವಾಗಲಿದೆ. ೧೯೬೫ರ ಆಗಸ್ಟ್ ೧೬ ಪ್ರಜಾಸತ್ತೀಯ ಭಾರತದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಲಿದೆ.

**ಇದೊಂದು ವಿಭಿನ್ನ ಪ್ರತಿಭಟನೆಯಾಗಲಿದೆ**

ಕಚ್ ಒಪ್ಪಂದವು ಭಾರತದ ಸಾರ್ವಭೌಮತ್ವದ ಉಲ್ಲಂಘನೆ ಮಾತ್ರವಲ್ಲ, ಅದು ಭಾರತದ ಪ್ರಜಾಸತ್ತೀಯ ಸಂಸ್ಥೆಗಳನ್ನು ಅಲ್ಲಗಳೆಯುತ್ತದೆ. ಅದು ಸಂವಿಧಾನವನ್ನು ಅತಿಕ್ರಮಿಸಿದೆ. ಕಾರ್ಯಕಾರಿಣಿಯ ಸಂವಿಧಾನದ ಅನ್ವಯ ತನಗೆ ಇಲ್ಲದಂತಹ ಅಧಿಕಾರಗಳನ್ನು ತನಗೆ ಆರೋಪಿಸಿಕೊಂಡಿದೆ. ಭಾರತದ ಸಮಗ್ರತೆಯ ಹಕ್ಕುಗಳನ್ನು ಯಾವುದೇ ರಾಜ್ಯಕ್ಕೆ ವರ್ಗಾಯಿಸುವ ಸಾಮರ್ಥ್ಯವು ಸರ್ಕಾರಕ್ಕಾಗಲೀ ಸಂಸತ್ತಿಗಾಗಲೀ ಇಲ್ಲ ಎಂದು ಬಾರಿಬಾರಿ ಮತ್ತು ಇತರ ಪ್ರಾಂತ್ಯಗಳನ್ನು ಪಾಕಿಸ್ತಾನಕ್ಕೆ ವರ್ಗಾಯಿಸುವ ಭರವಸೆ ನೀಡುವ ನೆಹರೂ–ಜೂನ್ ಒಪ್ಪಂದವನ್ನು ಉಲ್ಲೇಖಿಸುವ ತನ್ನ ತೀರ್ಮಾನದಲ್ಲಿ ಸರ್ವೋಚ್ಚ ನ್ಯಾಯಾಲಯವು ಹೇಳಿದೆ. ಈ ರೀತಿ ಒಪ್ಪಂದವು ಸಂವಿಧಾನವನ್ನು ಅತಿಕ್ರಮಿಸುತ್ತದೆ.

ಕಾರ್ಯಕಾರಿಣಿಯ ಅಧಿಕಾರವನ್ನು ಅತ್ಯುಚ್ಚ ನ್ಯಾಯಾಲಯವು ಇಷ್ಟು ಸ್ಪಷ್ಟವಾಗಿ ಗುರ್ತಿಸಿರುವುದರಿಂದ, ತನ್ನ ಮಿತಿಯನ್ನು ಮೀರಿ ರಾಷ್ಟ್ರದ ಸಮಗ್ರತೆಗೆ ಕಳಂಕ ತಂದಿರುವುದಕ್ಕಾಗಿ ನಾವು ಸರ್ಕಾರವನ್ನು ಕ್ಷಮಿಸಲು ಸಾಧ್ಯವಿಲ್ಲ. ಅವರು ಅಜ್ಞಾನಿಗಳಲ್ಲ. ಆದರೆ ಆಕ್ರಮಣಕಾರರಿಗೆ ಸಲಿಗೆ ತೋರಿಸುತ್ತಿದ್ದಾರೆ. ಅವರಿಗೆ ಉಚಿತವಾದ ಸ್ಥಾನವನ್ನು ತೋರಿಸಬೇಕು. ಪಾಕಿಸ್ತಾನವು ಭಾರತದ ಗಡಿಯೊಳಗೆ ಪಹರೆ ಕಾಯಲು ಅವಕಾಶ ನೀಡುವುದೆಂದರೆ ಆ ಪ್ರದೇಶದಲ್ಲಿ ಅವರ ಸಾರ್ವಭೌಮತ್ವವನ್ನು ಗುರುತಿಸಿದಂತಾಗುತ್ತದೆ. ಯಾವುದೇ ಒಂದು ಪ್ರದೇಶದಲ್ಲಿ ಎರಡು ಸಾರ್ವಭೌಮತ್ವಗಳಿರುವುದು ಸಾಧ್ಯವಿಲ್ಲ. ನಮ್ಮದೇ ಗಡಿಯೊಳಗೆ ನಮ್ಮ ಸೇನೆಗಳನ್ನು ಕಳಿಸದಿರಲು ಒಪ್ಪಿಕೊಳ್ಳುವುದು ಅಥವಾ ನಮ್ಮ ಪೊಲೀಸ್ ನೆಲೆಗಳನ್ನು ಸ್ಥಾಪಿಸದಿರುವುದು ನಮ್ಮ ಸಮಗ್ರತೆಯಲ್ಲಿನ ಮಿತಿಯಾಗುತ್ತದೆ. ೩,೫೦೦ ಚದರ ಮೈಲುಗಳ ಮೇಲಿನ ನಮ್ಮ ಸಾರ್ವಭೌಮತ್ವದ ಹಕ್ಕುಗಳನ್ನು ಒಂದು ಪರಕೀಯ ಪ್ರಾಧಿಕಾರದ ಪರಿಶೀಲನೆಗೆ ಗುರಿಪಡಿಸಲು ಒಪ್ಪಿಕೊಳ್ಳುವುದೆಂದರೆ ನಮ್ಮ ಸಮಗ್ರತೆಯ ಸ್ಪಷ್ಟವಾದ ಶರಣಾಗತಿಯಾಗಿದೆ. ಇಲ್ಲ, ಇದಕ್ಕೆ ಅನುಮತಿ ನೀಡಲಾಗುವುದಿಲ್ಲ.

ಸರ್ಕಾರವು ಅಸಂವಿಧಾನಾತ್ಮಕವಾಗಿ ಮಾತ್ರವಲ್ಲ, ಮನಸೋ ಇಚ್ಛೆ ವರ್ತಿಸಿದೆ. ಸಂಸತ್ತಿನ ಅಭಿಮತವನ್ನು ಪಡೆದುಕೊಳ್ಳುವುದು ಸೂಕ್ತ ಎಂದೂ ಅದು ಭಾವಿಸಲಿಲ್ಲ. ಶ್ರೀ ವಾಜಪೇಯಿ ಅವರು ಸಂಸತ್ಸಭೆಯನ್ನು ಕರೆಯುವಂತೆ ಪ್ರಧಾನಮಂತ್ರಿಗಳಿಗೆ ಹೇಳಿದರು; ಪ್ರಧಾನ ಮಂತ್ರಿಗಳು ಈ ಸಲಹೆಯನ್ನು ತಳ್ಳಿಹಾಕಿದರು. ಒಪ್ಪಂದದ ಪ್ರಸ್ತಾಪಕ್ಕೆ ಮೊದಲು ವಿರೋಧ ಪಕ್ಷದ ನಾಯಕರೊಂದಿಗೆ ಸಮಾಲೋಚಿಸುವಂತೆ ಹೇಳಲಾಯಿತು; ಅದಕ್ಕೂ ಅವರು ಸ್ಪಂದಿಸಲಿಲ್ಲ. ಇಂತಹ ವರ್ತನೆಯನ್ನು ಒಂದು ನಿರಂಕುಶ ಪ್ರಭುತ್ವದಿಂದ ಮಾತ್ರ ನಿರೀಕ್ಷಿಸಬಹುದು.

ಸಂಸತ್ತನ್ನು ಕಡೆಗಣಿಸಲಾಗಿದೆ. ಅದನ್ನು ಕೇವಲ ಮೊಹರೊತ್ತುವ ಸಭೆಯ ಮಟ್ಟಕ್ಕೆ ಕೆಳಕ್ಕಿಳಿಸಲಾಗಿದೆ. ಸಂಸತ್ತಿನ ಗೌರವಾನ್ವಿತ ಸದಸ್ಯರು ಈ ಅವಹೇಳನಕಾರಿ ಒಪ್ಪಂದಕ್ಕೆ ಮೊಹರೊತ್ತುವ ಮೂಲಕ ತಾವೆಲ್ಲರೂ ತಮ್ಮ ಹಕ್ಕುಗಳನ್ನೂ, ವಿವೇಚನೆಯನ್ನೂ ಸಂಘಟಿತರಾಗಿರುವ ಕೆಲವರಿಗೆ ಒತ್ತೆ ಇಟ್ಟಿರುವವೆಂದು ಜಗತ್ತಿಗೇ ಪ್ರದರ್ಶಿಸುವರೇ? ಹಾಗೆ ಮಾಡಲು ಅವರು ಬಯಸಿದರೂ ಜನ ಅವರಿಗೆ ಅವಕಾಶ ನೀಡುವುದಿಲ್ಲ. ಈ ಕಾರಣಕ್ಕಾಗಿಯೇ ಜನತೆ ಆಗಸ್ಟ್ ೧೬ರಂದು ಸಂಸತ್ ಭವನಕ್ಕೆ ಬರಲಿದ್ದಾರೆ. ನಾವು ಪ್ರಜಾಪ್ರಭುತ್ವವನ್ನು ಪ್ರೀತಿಸಿದರೆ, ಅದರಲ್ಲಿ ವಿಶ್ವಾಸವಿಟ್ಟಿರುವುದೇ ಆದರೆ, ಸಂಸತ್ತಿನ ಸಂವಿಧಾನಾತ್ಮಕ ಅಧಿಕಾರಗಳನ್ನು ನಾವು ಮತ್ತೆ ಸ್ಥಾಪಿಸಬೇಕು. ಸಂಸತ್ ಭವನವು ಇಂದು ಕೇವಲ ಕಲ್ಲು ಗಾರೆಗಳ ಕಟ್ಟಡವಾಗಿದೆ ಮತ್ತು ಸರ್ಕಾರವು ಸಂಸತ್ ಸದಸ್ಯರನ್ನು ತನ್ನ ಸಂಬಳದಲ್ಲಿರುವ ಅನುಯಾಯಿಗಳು ಎಂಬಂತೆ ನಡೆಸಿಕೊಳ್ಳುತ್ತಿದೆ.

ಈ ಸಂಸ್ಥೆಯ ಚಿಂತನಶೀಲತೆಯು ಸೊರಗಲು ನಾವು ಬಿಡಬಾರದು. ಅದನ್ನು ನಾವು ರಕ್ಷಿಸಬೇಕು. ಆ ಹಾಳು ಒಪ್ಪಂದವನ್ನು ಹೊರಕ್ಕೆಸೆಯಿರಿ.

ಭಾರತೀಯ ಜನಸಂಘವು ಈ ಚಳವಳಿಯನ್ನು ಪ್ರಾರಂಭಿಸಿರಬಹುದು, ಆದರೆ ಅದು ಒಂದು ಪಕ್ಷದ ಕಾರ್ಯಕ್ರಮವಾಗಿ ಉಳಿದಿಲ್ಲ. ಅದೊಂದು ಸಾಮುದಾಯಿಕ ಚಳುವಳಿಯಾಗಿ ಬೆಳೆದಿದೆ. ಕಮ್ಯುನಿಸ್ಟರು ಮತ್ತು ಸ್ವತಂತ್ರ ಪಕ್ಷವನ್ನು (ಸ್ಪಷ್ಟ ಕಾರಣಗಳಿಗಾಗಿ) ಹೊರತುಪಡಿಸಿ ಉಳಿದ ಎಲ್ಲ ಪಕ್ಷಗಳೂ ಈ ಒಪ್ಪಂದವನ್ನು ತಿರಸ್ಕರಿಸಿವೆ. ಕಾಂಗ್ರೆಸ್ ಕೂಡಾ ಇದನ್ನು ಬೆಂಬಲಿಸಿಲ್ಲ. ಏಐಸಿಸಿಯ ಬೆಂಗಳೂರು ಸಭೆಯಲ್ಲಿ ಈ ವಿಷಯವಾಗಿ ಯಾವ ನಿರ್ಣಯಗಳನ್ನೂ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಸಂಸತ್ತಿನ ಕಾಂಗ್ರೆಸ್ ಸದಸ್ಯರು ಪಕ್ಷ ಶಿಸ್ತಿಗಾಗಿಯೂ ಈ ಒಪ್ಪಂದವನ್ನು ಬೆಂಬಲಿಸಲು ಬದ್ಧರಾಗಿಲ್ಲ ಎಂಬುದು ಸ್ಪಷ್ಟವಾಗಿದೆ. ಆದ್ದರಿಂದ ಯಾವ ಶಿಸ್ತು ನಿರೂಪವನ್ನೂ ನೀಡಬಾರದು. ಒಂದು ಮುಕ್ತವಾದ ಮತದಾನ ನಡೆಯಬೇಕು. ಅವರು ಒಪ್ಪಂದವನ್ನು ಹೊರಕ್ಕೆ ಎಸೆಯಲಿ. ಸರ್ಕಾರದ ಗತಿಯ ಬಗ್ಗೆ ಅವರು ಆತಂಕ ಪಡುವುದು ಬೇಡ. ರಾಷ್ಟ್ರವೇ ಪತನ ಹೊಂದುವುದಕ್ಕಿಂತ ಒಂದು ಸರ್ಕಾರ ಬೀಳುವುದು ಮೇಲು.

ಸರ್ಕಾರಗಳು ಬರುತ್ತವೆ, ಹೋಗುತ್ತವೆ, ಆದರೆ ದೇಶ ಎಂದೆಂದಿಗೂ ಉಳಿದಿರುತ್ತದೆ. ಸಂಸತ್ ಸದಸ್ಯರು ಬರುತ್ತಾರೆ. ಹೋಗುತ್ತಾರೆ. ಆದರೆ ಹಿರಿಯ ಸಂಸ್ಥೆಯು ಎಂದಿಗೂ ಜೀವಂತವಾಗಿರಬೇಕು. ಸಂಸತ್ತಿನ ಗೌರವಾನ್ವಿತ ಸದಸ್ಯರು ಸಂದರ್ಭಕ್ಕೆ ಉಚಿತವಾಗಿ ವರ್ತಿಸಲಿ. ಅವರು ಪ್ರತಿನಿಧಿಸುವ ಜನತೆಯ, ಅವರು ಸದಸ್ಯರಾಗಿರುವ ಮೇಲ್ಮನೆಯ, ಅವರು ಶ್ರದ್ಧೆಯಿರಿಸಿರುವವೆಂದು ಗಂಭೀರವಾಗಿ ಘೋಷಿಸಿರುವ ಸಂವಿಧಾನದ ಗೌರವವನ್ನು ಅವರು ಸಂರಕ್ಷಿಸಲಿ. ಪ್ರಧಾನ ಮಂತ್ರಿಗಳತ್ತ ತಿರುಗಿ ನೋಡದಿರಿ; ಎಲ್ಲ ಶಕ್ತಿ ಹಾಗೂ ಎಲ್ಲ ಸಾರ್ವಭೌಮತ್ವದ ಚಿಲುಮೆಗಳಾಗಿರುವ ಜನರತ್ತ ತಿರುಗಿ ನೋಡಿ. ನಿಮಗೆ ಭರವಸೆ ನೀಡಲು ಮತ್ತು ನಿಮಗೆ ಬೆಂಬಲ ನೀಡಲು ಜನ ಅಲ್ಲಿ ಎಲ್ಲ ಬಾಗಿಲುಗಳಲ್ಲೂ ಇದ್ದಾರೆ. ಅವರನ್ನು ವಂಚಿಸಬೇಡಿ. ರಾಷ್ಟ್ರವನ್ನು ವಂಚಿಸಬೇಡಿ.

ಆಗಸ್ಟ್ ೧೫ರಂದು ಕಚ್‌ನ ರಾನ್ ಹೊರತಾಗಿ ಬೇರೆ ಎಲ್ಲೆಡೆಗಳಲ್ಲಿಯೂ ರಾಷ್ಟ್ರಧ್ವಜವನ್ನು ಹಾರಿಸಲಾಗುವುದು. ಸರ್ದಾರ್ ಪೋಸ್ಟ್ ಮತ್ತು ವಿಗೋಕೋಟ್ ಮತ್ತು ಕಂಜಕೋರ್ಟ್‌ಗಳು ಭಾರತದ ಧ್ವಜವನ್ನು ಹಾರಿಸುವುದಿಲ್ಲ. ಕಂಜಾಕೋರ್ಟಿನಲ್ಲಿ ಬಹುಶಃ ಪಾಕಿಸ್ತಾನೀ ಧ್ವಜವನ್ನು ಹಾರಿಸಲಾಗುವುದು. ಇದೆಲ್ಲದರಿಂದಾಗಿ ನಮ್ಮ ಸ್ವಾತಂತ್ರ್ಯ ದಿನಾಚರಣೆಯು ಒಂದು ಪೊಳ್ಳು ಬಡಾಯಿ ಎನ್ನುವಂತಾಗುತ್ತದೆ. ಭಾರತ ನಿಜವಾಗಿಯೂ ಸ್ವತಂತ್ರವಾಗಿದೆಯೇ?

ನಾವು ನಿಜವಾಗಿಯೂ ಸ್ವತಂತ್ರರೇ? ಹಾಗಿದ್ದರೆ ನಾವು ಸ್ವತಂತ್ರವಾಗಿರಲು

ಬಯಸುತ್ತೇವೆ ಎಂದು ದೃಢವಾಗಿ ಹೇಳಲು ಆಗಸ್ಟ್ ೧೫ರಂದು ಸಂಸತ್ ಭವನಕ್ಕೆ ಬನ್ನಿ. ನಾವು ಕೇವಲ ಘೋಷಣೆಗಳಿಂದ ಸಮಾಧಾನಗೊಳ್ಳುವುದಿಲ್ಲ. ನಮಗೆ ಸ್ವಾತಂತ್ರ್ಯದ ನಿಜವಾದ ಸತ್ವ ಬೇಕು. ಬ್ರಿಟಿಷರು ತಮಗಾಗಿ ನಿರ್ಧರಿಸಿದುದನ್ನು ಕಾರ್ಯಗತ ಮಾಡುವ, ತಡವರಿಸುವ ಕೆಲವರ ಕೈವಶ ಮಾಡಲೆಂದು ನಾವು ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಿಲ್ಲ. ಭಾರತ ಮತ್ತು ಭಾರತ ಸರ್ಕಾರಗಳು ಅಂತರರಾಷ್ಟ್ರೀಯ ಒತ್ತಡಗಳಿಗೆ ಶರಣಾಗಲು ನಾವು ಬಿಡುವುದಿಲ್ಲ. ಪ್ರಧಾನ ಮಂತ್ರಿಗಳು ಆಂಗ್ಲೋ–ಅಮೆರಿಕನ್ ರಾಜನೀತಿಯ ಬಲೆಗೆ ಬಿದ್ದಿರಬಹುದು, ಆದರೆ ಜನ ಬಿದ್ದಿಲ್ಲ.

ಪ್ರಧಾನ ಮಂತ್ರಿಗಳು ಏನೆ ಹೇಳಲಿ, ಈ ಒಪ್ಪಂದವು ಅದು ಉಳಿದದ್ದೇ ಆದರೆ ಕಾಶ್ಮೀರ, ಲಡಖ್, ಮುಂತಾದೆಡೆಗಳಲ್ಲೂ ಇಂತಹುದೇ "ಒಪ್ಪಂದ"ಗಳಿಗೆ ಪೂರ್ವನಿದರ್ಶನವಾಗುತ್ತದೆ. ಆಸಕ್ತ ಶಕ್ತಿಗಳು ಈಗಾಗಲೇ ತಮ್ಮ ಒಳಸಂಚುಗಳನ್ನು ಆರಂಭಿಸಿವೆ. ಅವುಗಳಿಗೆ ಜನ ಅಡ್ಡಿಯೊಡ್ಡಲು ಕ್ರಮ ಕೈಗೊಳ್ಳದಿದ್ದರೆ ದೇಶದೊಳಗೆ ಮತ್ತು ವಿದೇಶಗಳಲ್ಲಿ ಅವು ಹೆಚ್ಚು ರಭಸಗೊಳ್ಳುವ ಸಾಧ್ಯತೆಯಿದೆ. ಸೂಕ್ತ ಸಮಯದಲ್ಲಿ ಹಾಕಿದ ಹೊಲಿಗೆ ಒಂಭತ್ತು ಹೊಲಿಗೆಗಳನ್ನು ಹಾಕುವುದನ್ನು ತಪ್ಪಿಸುತ್ತದೆ ಎಂಬ ಹಳೆಯ ಇಂಗ್ಲಿಷ್ ಗಾದೆಯೊಂದಿದೆ. ಭವಿಷ್ಯದಲ್ಲಿ ಒಂದು ಭಾರೀ ಅನಾಹುತವಾಗುವುದನ್ನು ತಪ್ಪಿಸಬೇಕಾದರೆ ನಾವಿಂದು ಎದ್ದು ನಿಲ್ಲೋಣ.

ನಡೆಯಲಿದ್ದ ಒಂದು ಯುದ್ಧವನ್ನು ಈ ಒಪ್ಪಂದವು ತಪ್ಪಿಸಿತೆಂದು ಭಾವಿಸುವವರು ಇದ್ದಾರೆ. ಅದು ಹಾಗೇನೂ ಮಾಡಿಲ್ಲ. ಅದು ಯುದ್ಧವನ್ನು ಇನ್ನಷ್ಟು ಸಮೀಪಕ್ಕೆ ಎಳೆದುತಂದಿದೆ, ಅಷ್ಟೆ. ಕಚ್ ವಿಷಯದಲ್ಲಿ ಯಾವುದೇ ಯುದ್ಧ ನಡೆಯುವ ಸಾಧ್ಯತೆಯಿರಲಿಲ್ಲ. ಆದರೆ ಖಂಡಿತವಾಗಿಯೂ ಕಾಶ್ಮೀರದ ಬಗ್ಗೆ ಯುದ್ಧವಾಗುತ್ತದೆ. ಕಚ್‌ನಲ್ಲಿ ಗಳಿಸಿದ ಲಾಭಗಳಿಂದ ಧೈರ್ಯಗೊಂಡ ಪಾಕಿಸ್ತಾನವು ಕಾಶ್ಮೀರದಲ್ಲೂ ಅಂತಹುದೇ ಮುಖಾಮುಖಿಗಾಗಿ ಹಾತೊರೆಯುತ್ತಿದೆ. ಅದನ್ನು ತಪ್ಪಿಸುವ ಮಾರ್ಗ ಯಾವುದು? ಖಚಿತವಾಗಿರುವುದು. ಓಲೈಸದಿರಿ. ಶರಣಾಗದಿರಿ. ಯುದ್ದ ನಡೆದರೆ ಅದರ ಬಗ್ಗೆ ಭಯ ಪಡಬೇಡಿ. ಹೆದರಲು ನಮಗಿಂತ ಪಾಕಿಸ್ತಾನಕ್ಕೆ ಹೆಚ್ಚಿನ ಕಾರಣ ಇದೆ. ನಾವು ಈ ಒಪ್ಪಂದವನ್ನು ಚೂರುಚೂರು ಮಾಡೋಣ.

ಗೆಳೆಯರೇ, ನಿಮಗೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿದೆ. ನೀವು ಸ್ವಾತಂತ್ರ್ಯವನ್ನು ಪ್ರೀತಿಸುತ್ತೀರ, ನಿಮಗೆ ಆತ್ಮ ಗೌರವವಿದೆ. ಅಂತರರಾಷ್ಟ್ರೀಯ ಪಿತೂರಿಗಳನ್ನು ನೀವು ಎದುರಿಸಲು ಬಯಸುತ್ತೀರ. ಹಾಗಾದರೆ ಬನ್ನಿ, ನಿಜವಾದ ಭಾರತ ಏನೆಂದು ಜಗತ್ತಿಗೆ ತೋರಿಸಿಕೊಡಲು ಆಗಸ್ಟ್ ೧೬ರಂದು ದೆಹಲಿಗೆ ಎಲ್ಲರೂ ಬನ್ನಿ. ದೆಹಲಿ ಚಲೋ!

**ಮೂಲ : ಆರ್ಗನೈಸರ್, ೮ ಆಗಸ್ಟ್ ೧೯೬೫**

## ಈ ಪಂಜಾಬೀ ಸೂಬಾ ವ್ಯವಹಾರ

ಪಂಜಾಬಿನಲ್ಲಿ ಒಂದು ಕೃತಕ ಚಳುವಳಿಯನ್ನು ಸಂಘಟಿಸಲಾಗುತ್ತಿದೆ. ತನ್ನ ಕಲ್ಪನೆಯ ಪಂಜಾಬೀ ಸೂಬಾ ರೂಪಿಸಲು ಸರ್ಕಾರವು ಸಮ್ಮತಿಸದಿದ್ದರೆ ಸೆಪ್ಟೆಂಬರ್ ೧೦ರಿಂದ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸುವ ಹಾಗೂ ಸೆಪ್ಟೆಂಬರ್ ೨೫ರಂದು ಆತ್ಮಾಹುತಿ ಮಾಡಿಕೊಳ್ಳುವ ತನ್ನ ಯೋಜನೆಗಳನ್ನು ಸಂತ ಫತೇ ಸಿಂಗ್ ಘೋಷಿಸಿದ್ದಾನೆ. ನಾವು ಬಲ್ಲಂತೆ, ಸಿಖ್ಖರಿಗೆ ಸ್ವಯಂನಿರ್ಧಾರಾಧಿಕಾರಕ್ಕಾಗಿ ಒತ್ತಾಯಿಸಲು ಆ ಹಿಂದೆ ಮಾಸ್ಟರ್ ತಾರಾ ಸಿಂಗ್ ಒಂದು ಮೆರವಣಿಗೆಯ ಬೆದರಿಕೆ ಹಾಕಿದಾಗ ಸಂತರಿಂದ ಈ ಯೋಜನೆ ನಿರ್ಧರಿಸಲ್ಪಟ್ಟಿತು. ಮಾಸ್ಟರನ್ನು ಪ್ರತಿರೋಧಿಸಲು ಸರ್ಕಾರವು ಸಂತರನ್ನು ಬೆಂಬಲಿಸಿತು. ಪ್ರಧಾನ ಮಂತ್ರಿಗಳೊಡನೆ ಒಂದು ಆತುರಾತುರದ ಸಭೆಯನ್ನು ಏರ್ಪಡಿಸಲಾಯಿತು. ಸಂತ ಫತೇಸಿಂಗರು ಕೆಲವು ಕುಂದು ಕೊರತೆಗಳನ್ನೂ ಬೇಡಿಕೆಗಳನ್ನು ಮುಂದಿಟ್ಟರು. ಪ್ರಧಾನ ಮಂತ್ರಿಗಳು ಅವನ್ನು ಪರಿಶೀಲಿಸುವುದಾಗಿ ಒಪ್ಪಿಕೊಂಡರು. ಮತ್ತು ಅಕಾಲಿ ದಳದ ಕಾರ್ಯಕಾರಿಣಿ ಸಭೆಯ ಪರಿಗಣನೆಗಾಗಿ ತಾವೇ ಒಂದು ಟಿಪ್ಪಣಿಯನ್ನು ಸಿದ್ಧಪಡಿಸಿದರು. ಸಮಿತಿಯು ಅವರ ಟಿಪ್ಪಣಿಯನ್ನು ತಿರಸ್ಕರಿಸಿತು ಮತ್ತು ಬದಲಿಗೆ ಪಂಜಾಬಿ ಸೂಬಾದ ಬೇಡಿಕೆಯನ್ನು ಮುಂದಿಟ್ಟಿತು ಮತ್ತು ಸಂತರು ಉಪವಾಸ ಮತ್ತು ಆತ್ಮಾಹುತಿಗಳ ಬಗೆಗಿನ ತಮ್ಮ ನಿರ್ಧಾರವನ್ನು ಪ್ರಕಟಿಸಿದರು.

ಈ ಬೆದರಿಕೆಯು ಸರ್ಕಾರಕ್ಕೆ ಬಹಳ ದಿಗಿಲು ಹುಟ್ಟಿಸಿತು. ದಿಗಿಲು ನಿಜವಾದುದೋ ಅಥವಾ ತೋರಿಕೆಯದೋ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಅದು ಅನವಶ್ಯಕವಾದುದು ಮತ್ತು ಅನುಚಿತವಾದುದು ಎಂದು ಖಂಡಿತವಾಗಿಯೂ ಹೇಳಬಹುದು. ತಮ್ಮ ವಿಚಾರವನ್ನು ಕೈಬಿಡಬೇಕೆಂದು ಸಂತರಿಗೆ ಎಲ್ಲ ರೀತಿಯ ಮನವಿಗಳನ್ನೂ ಮಾಡಲಾಗುತ್ತಿದೆ. ಹಲವಾರು ಮಧ್ಯಸ್ಥಿಕೆಯ ಸೂತ್ರಗಳನ್ನು ಸೂಚಿಸಲಾಗಿದೆ. ಸಂತ ಫತೇ ಸಿಂಗರು ಅವನ್ನೆಲ್ಲಾ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಅವರು ಹೆಚ್ಚಿನ ಹಟಮಾರಿತನ ತೋರುತ್ತಿದ್ದಾರೆ.

ಪಂಜಾಬಿನ ಜನ ಈ ಎಲ್ಲ ಬೆಳವಣಿಗೆಗಳನ್ನು ಕಂಡು ಚಕಿತರಾಗಿದ್ದಾರೆ. ಹಿಂದಿನ ಅನುಭವಗಳಿಂದಾಗಿ ಹಾಗೂ ಕಾಂಗ್ರೆಸ್ ನಾಯಕರ ಹೇಳಿಕೆಗಳಲ್ಲಿ ವಿಶ್ವಾಸವಿಲ್ಲದಿರುವುದರಿಂದಾಗಿ ಅವರು ಆತಂಕ ಪಡುತ್ತಿದ್ದಾರೆ. ವಿವಿಧ ನಾಯಕರ ಆಡಂಬರ ಮತ್ತು ಬೂಟಾಟಿಕೆಗಳಿಂದಾದ ದಿಗ್ಭ್ರಮೆಯ ಸ್ಥಾನವನ್ನು ಕಳವಳ ಮತ್ತು ಅನಿಶ್ಚಿತತೆಗಳು ಕ್ರಮೇಣ ಆಕ್ರಮಿಸುತ್ತಿವೆ.

ವಿಷಮ ಪರಿಸ್ಥಿತಿಯಲ್ಲಿ ಸ್ವಹಿತವನ್ನು ಸಾಧಿಸಿಕೊಳ್ಳಲು ಯಾವಾಗಲೂ ಸಿದ್ಧವಾಗಿರುವ ಕಮ್ಯುನಿಸ್ಟರ ಹಾಗೇ ಇತರ ವಿಧ್ವಂಸಕ ಶಕ್ತಿಗಳು ಚುರುಕಾಗಿವೆ.

ಸಂತನಿಗೆ ಏನಾದರೂ ಅಕಸ್ಮಾತ್ ದುರಂತ ಸಂಭವಿಸಿ ಜನ ರೊಚ್ಚಿಗೆದ್ದರೆ ಲೂಟಿ ಹೊಡೆಯಲು, ಕಿಚ್ಚು ಹೊತ್ತಿಸಲು ಮತ್ತು ಹಿಂಸಾಚಾರಗಳನ್ನು ನಡೆಸಲು ಯೋಜನೆಗಳನ್ನು ಅವರು ರೂಪಿಸುತ್ತಿದ್ದಾರೆ.

ಕೇಂದ್ರ ಸರ್ಕಾರವು ತಾನೇ ತನ್ನ ಯೋಜನೆಗಳಿಗೆ ಬಲಿಪಶುವಾಗಿದೆ. ಅದು ಸಂತರನ್ನು ಮೇಲಕ್ಕೆ ಏರಿಸಿತು. ಅವರ ಹೇಳಿಕೆಗಳು ಈಗ ಅವರಿಗೇ ಹಿಂತಿರುಗಿ ಅಪ್ಪಳಿಸುತ್ತಿವೆ. ಅಕಾಲಿ ವೃತ್ತಗಳು ಹಾಗೂ ಕಾಂಗ್ರೆಸ್ಸಿನ ಭಿನ್ನಮತೀಯ ಸದಸ್ಯರು ಸಂತ ಫತೇ ಸಿಂಗರು ಮರಣಹೊಂದಿದರೆ ಬಹಳ ಗಂಭೀರವಾದ ಪರಿಸ್ಥಿತಿ ಉದ್ಭವಗೊಳ್ಳುತ್ತದೆಂದು ಗೃಹಮಂತ್ರಿಗಳ, ಪ್ರಧಾನ ಮಂತ್ರಿಗಳ ಹಾಗೂ ಇನ್ನೂ ಇತರರ ಕಿವಿಗಳಲ್ಲಿ ಗಟ್ಟಿಯಾಗಿ ಬೊಬ್ಬೆ ಹಾಕುತ್ತಿದ್ದಾರೆ. ದುರಂತವನ್ನು ತಪ್ಪಿಸಲು ಏನಾದರೂ ಮಾಡಲು ಅವರನ್ನು ಪುಸಲಾಯಿಸುತ್ತಿದ್ದಾರೆ. ಮುತ್ಸದ್ಧಿತನವೆಂಬುದು ಓಲೈಸುವುದರಲ್ಲಿ ಹಾಗೂ ಶರಣಾಗತಿಯಲ್ಲಿ ಇದೆಯೇನೋ ಎಂಬಂತೆ ಅವರ ಮುತ್ಸದ್ಧಿತನಕ್ಕೂ ಮನವಿ ಮಾಡಲಾಗುತ್ತಿದೆ.

ರಾಜ್ಯ ಸರ್ಕಾರವು ವಿಭಜಿತಗೊಂಡಿದೆ. ಮುಖ್ಯ ಮಂತ್ರಿಗಳು ಮತ್ತು ಗೃಹ ಮಂತ್ರಿಗಳು ಒಮ್ಮತದಲ್ಲಿಲ್ಲ. ಯಾವುದೇ ಪರಿಸ್ಥಿತಿಯನ್ನು ನಿಭಾಯಿಸುವುದಾಗಿ ತನ್ನ ದೃಢ ನಿಶ್ಚಯವನ್ನು ಗೃಹ ಮಂತ್ರಿಗಳು ಘೋಷಿಸಿದ್ದರೂ ಯಾವುದೇ ಏಕರೂಪಿಯಾದ ಕ್ರಮ ಕೈಗೊಳ್ಳುವ ಬಗ್ಗೆ ಜನಕ್ಕೆ ಖಾತ್ರಿ ಇಲ್ಲ. ಮಂತ್ರಿ ಮಂಡಲದಲ್ಲಿ ಪ್ರತಿಯೊಬ್ಬರಿಗೂ ತಮ್ಮ ಸ್ವಂತದ್ದೇ ಆದ ಆಕಾಂಕ್ಷೆಗಳಿವೆ. ಹಾಗೂ ತಮ್ಮ ವೈಯಕ್ತಿಕ ಉದ್ದೇಶಗಳಿಗೆ ಅನುಕೂಲವಾಗುವುದಾದರೆ ಪಿಶಾಚಿಗೆ ಒಂದು ಮುಕ್ತ ಅವಕಾಶ ನೀಡಲು ಅವರು ಹೇಸಲಾರರು.

ಈಗಿನ ಬೆಳವಣಿಗೆಗಳ ಮೂಲವು ಅಕಾಲಿ ದಳ ಮತ್ತು ಕಾಂಗ್ರೆಸ್ಸುಗಳ ಹಳೆಯ ಪೈಪೋಟಿಗಳಲ್ಲಿದೆ ಎಂದು ಕೆಲವರು ನಂಬುತ್ತಾರೆ. ರಾಜ್ಯದ ಮುಖ್ಯಮಂತ್ರಿ ಒಬ್ಬ ಸಿಖ್ ಆಗಿದ್ದಿದ್ದರೆ ಈ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ ಎಂದು ಕೆಲವು ಹಿರಿಯರು ಮುಕ್ತವಾಗಿ ಒಪ್ಪಿಕೊಳ್ಳುತ್ತಾರೆ. ಈ ಆಧಾರದ ಮೇಲೆಯೇ ಬಹುಶಃ ಸರ್ದಾರ್ ಜೇಇಲ್ ಸಿಂಗರನ್ನು ರಾಜ್ಯದ ಹಂಗಾಮಿ ರಾಜ್ಯಪಾಲರಾಗಿ ನೇಮಿಸಲಾಗಿದೆ. ರಾಜ್ಯದ ಒಳಗಿನವರನ್ನು ರಾಜ್ಯಪಾಲರಾಗಿ ಮಾಡದೇ ಇರುವ ವಾಡಿಕೆಯನ್ನು ಕೈಬಿಡಲಾಗಿದೆ.

೧೯೬೭ರ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಸಿಖ್ಖರ ಬೆಂಬಲವನ್ನು ಪಡೆಯಲೆಂದೇ ಹಾಗೂ ರಾಜ್ಯದಲ್ಲಿ ವಿರೋಧ ಪಕ್ಷಗಳಲ್ಲಿ ಹೆಚ್ಚುತ್ತಿರುವ ಐಕಮತ್ಯವನ್ನು ಹಾಳು ಮಾಡಲೆಂದೇ ಈ ಇಡೀ ವಿಷಯವನ್ನು ಯೋಜಿಸಿ ಬೆಳೆಸಲಾಗಿದೆ ಎಂದು ಜನರಿಗೆ ಅನುಮಾನವಿದೆ. ಪಂಜಾಬಿನಲ್ಲಿ ಕಾಂಗ್ರೆಸ್ ಯಾವಾಗಲೂ ಸಿಖ್ಖರ ಮತೀಯ ಬೆಂಬಲವನ್ನು ಆಶ್ರಯಿಸಿದೆ. ಬ್ರಿಟಿಷ್ ಸರ್ಕಾರದಂತೆಯೇ ಇದಕ್ಕೂ

ಕೂಡಾ ಸಿಖ್ಖರು ಹಾಗೂ ಇತರರ ನಡುವೆ ಸೌಹಾರ್ದಯುತ ಸಂಬಂಧಗಳು ರುಚಿಸಲಾರವು. ರಾಜ್ಯಗಳ ಪುನರ್ ವ್ಯವಸ್ಥೆಯ ನಂತರದ ಈ ಕೆಲವು ವರ್ಷಗಳಲ್ಲಿ ಅವರಿಬ್ಬರೂ ಸಮೀಪವಾಗುತ್ತಿದ್ದರು. ಪರಸ್ಪರರ ಬಗ್ಗೆ ಬೆಳೆದು ಬಂದಿದ್ದ ಪೂರ್ವಗ್ರಹಗಳು ಕರಗುತ್ತಿದ್ದವು. ಸಿಖ್ಖರು ಜನಸಂಘವನ್ನು ಸಿಖ್–ವಿರೋಧಿ ಎಂದು ಕಾಣುತ್ತಿರಲಿಲ್ಲ ಮತ್ತು ಅಕಾಲಿಗಳು ಸಿಖ್ಖೇತರರ ಕಣ್ಣುಗಳಲ್ಲಿ ಹಿಂದೂ ವಿರೋಧಿಗಳಾಗಿ ಉಳಿದಿರಲಿಲ್ಲ. ಹಿಂದೂ ಸಮಾಜದಲ್ಲಿ ಹಿಂದಿನ ಮೈತ್ರಿಭಾವವನ್ನು ಪುನರುಜ್ಜೀವನಗೊಳಿಸುವಲ್ಲಿ ರಾಜ್ಯಗಳ ನಡುವಿನ ಮೈತ್ರಿಗಳು ಸಹಾಯ ಮಾಡಿದವು ಹಾಗೂ ಸಾಮಾಜಿಕ ವಾತಾವರಣವೂ ಸುಧಾರಿಸಿತು. ಕೇವಲ ಮತೀಯತೆಯ ಆಧಾರದ ಮೇಲೆ ಬೆಳೆಯುವ ಪಕ್ಷಗಳಿಗೆ ಕಳವಳವುಂಟಾಯಿತು. ಕಾಂಗ್ರೆಸ್ ಹೆದರಿತು. ಪ್ರದೇಶದಲ್ಲಿ ಸಾಮಾನ್ಯ ಪರಿಸ್ಥಿತಿ ಅದಕ್ಕೆ ಬೇಕಾಗಿಲ್ಲ. ಹಾಗಾಗಿ ಅದು ಬಹುಕಾಲದ ಮೊದಲೇ ಇತ್ಯರ್ಥವಾಗಿದ್ದ ವಿಷಯಗಳನ್ನು ಕೆದಕಿತು.

ಪಂಜಾಬೀ ಸೂಬಾದ ವಿವಾದವನ್ನು ಮತ್ತೆ ಪರೀಕ್ಷಿಸುವ ಅವಶ್ಯಕತೆಯಿಲ್ಲ. ಅದನ್ನು ಎಲ್ಲ ಮಟ್ಟಗಳಲ್ಲೂ ಚರ್ಚಿಸಿ ಕ್ರಮ ಕೈಗೊಳ್ಳಲಾಗಿದೆ. ಎಸ್.ಆರ್.ಸಿ. ಅದನ್ನು ವಜಾ ಮಾಡಿತು, ಸರ್ಕಾರ ಅದನ್ನು ತಿರಸ್ಕರಿಸಿತು ಮತ್ತು ಅಕಾಲಿ ದಳವೂ ಅದನ್ನು ಖಂಡಿಸಿತು. ಪ್ರಾಂತೀಯ ಸಮಿತಿ ಸೂತ್ರವನ್ನು ಕೇವಲ ಒಂದು ಹೊಂದಾಣಿಕೆಯ ಉಪಾಯವಾಗಿ ರೂಪಿಸಲಾಯಿತು. ಆದರೆ ಅಕಾಲಿ ದಳದ ಪ್ರತಿಸ್ಪರ್ಧಿಗಳಿಗೆ ಸಿಖ್ ಸಮುದಾಯವನ್ನು ತೊನೆದಾಡಿಸಲು ಬೇರಾವುದೇ ಘೋಷಣೆ ತೋಚುವುದಿಲ್ಲ ಎನಿಸುತ್ತದೆ. ಆದರೆ ಜನಸಮುದಾಯಗಳಿಗೂ ಈಗ ಭ್ರಮನಿರಸನವಾಗಿದೆ. ಪಂಜಾಬೀ ಸೂಬಾ ಎನ್ನುವುದು ಕೇವಲ ಒಂದು ಭ್ರಾಂತು ಎಂದು ಅವರು ಬಲ್ಲರು. ಅವರ ನಿಜವಾದ ಸಮಸ್ಯೆಗಳಿಗೂ ಅದಕ್ಕೂ ಇರುವ ಸಂಬಂಧ ಅತ್ಯಲ್ಪ.

ರಾಜ್ಯಗಳ ಪುನರ್ ವ್ಯವಸ್ಥೆ ಮುಕ್ತಾಯಗೊಂಡಿದೆ. ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ಹೊಂದಾಣಿಕೆಗಳನ್ನು ಹೊರತುಪಡಿಸಿ ಹೊಸ ಪ್ರಾಂತ್ಯಗಳನ್ನು ರೂಪಿಸುವ ಪ್ರಕ್ರಿಯೆಯನ್ನು ನಾವು ಮತ್ತೆ ಪ್ರಾರಂಭಿಸಲು ಸಾಧ್ಯವಿಲ್ಲ. ಪಂಜಾಬಿನ ವಿವಾದವನ್ನು ಯಾವುದೇ ಪುನರ್ ಪರಿಶೀಲಿಸುವುದು ತಾಪತ್ರಯ ಕರಂಡವನ್ನೇ ತೆರೆಯುತ್ತದೆ. ಇತ್ಯರ್ಥವಾದ ವಿಷಯಗಳನ್ನು ನಮಗೆ ಮತ್ತೆ ಕೆದಕುವುದಕ್ಕಾಗುವುದಿಲ್ಲ.

ಮಹಾರಾಷ್ಟ್ರ, ಆಂಧ್ರ ಮುಂತಾದವುಗಳ ಮಾದರಿಯಲ್ಲಿಯೇ ತನಗೊಂದು ಭಾಷಾವಾರು ಪ್ರಾಂತ್ಯ ಬೇಕೆಂದು ಹೇಳುತ್ತ ಅಕಾಲಿ ದಳವು ಇತರ ರಾಜ್ಯಗಳ ಜನರಲ್ಲಿ ಗೊಂದಲ ಹುಟ್ಟುಹಾಕಲು ಪ್ರಯತ್ನಿಸುತ್ತಿದೆ. ಪಂಜಾಬಿನ ಭೌಗೋಳಿಕ, ಭಾಷಾ ಸಂಬಂಧದ ಮತ್ತು ಧಾರ್ಮಿಕ ಪರಿಸ್ಥಿತಿಗಳಂತಹ ಮೂಲ ವಿವರಗಳನ್ನು ಅದು ಸುಖವಾಗಿ ಮರೆಮಾಚುತ್ತದೆ. ಸಂವಿಧಾನದ ಎಂಟನೆಯ ಪಟ್ಟಿಯಲ್ಲಿ

ಕಾಣಿಸಲಾದ ಭಾಷೆಗಳಲ್ಲಿ ಪಂಜಾಬು ಕೂಡಾ ಒಂದಾಗಿದ್ದರೂ ಆ ಭಾಷೆಯನ್ನು ಮಾತನಾಡುವವೆನ್ನುವವರ, ಒಂದೇ ಕಡೆಯಿದ್ದು ಕಾರ್ಯಸಾಧ್ಯವಾದ ಪ್ರಾಂತೀಯ ಘಟಕವೊಂದನ್ನು ರೂಪಿಸುವುದು ಸಾಧ್ಯವಿಲ್ಲ. ಏಕೆಂದರೆ ಪಂಜಾಬಿನ ಹಿಂದಿ ಮಾತನಾಡುವವರು ಹರಿಯಾನಾ ಪ್ರದೇಶದಲ್ಲೂ,. ದೆಹಲಿಯಲ್ಲಿಯೂ ಕೂಡಾ ಲಕ್ಷಾಂತರ ಮಂದಿ ಪಂಜಾಬಿಯನ್ನು ಮಾತನಾಡುತ್ತಾರೆ. ಹಾಗಾಗಿ ಇಡೀ ಪಂಜಾಬ್ ಒಂದು ದ್ವಿಭಾಷಾ ಪ್ರಾಂತ್ಯವಾಗಿದೆ. ಅದನ್ನು ಭಾಷೆಯ ಆಧಾರದ ಮೇಲೆ ಪ್ರಾಂತೀಯವಾಗಿ ವಿಭಜಿಸಲು ಸಾಧ್ಯವಿಲ್ಲ. ರಾಜಕೀಯ ಕಾರಣಗಳಿಗಾಗಿ ಪಂಜಾಬನ್ನು ವಿವಿಧ ಸೂತ್ರಗಳ ಮೇಲೆ ವಿಭಜಿಸಲು ಹಿಂದೆ ಪ್ರಯತ್ನಗಳು ನಡೆದಿವೆ. ಅವು ಕೃತ ಕಾರಣಗಳನ್ನು ಆಧರಿಸಿದ್ದುದರಿಂದಲೇ ಅವು ವಿಫಲವಾದವು. ಜನಸಂಘವು ಅವುಗಳನ್ನು ವಿರೋಧಿಸಿತ್ತು. ಅದರ ನಿಲುವು ಸರಿಯಾದುದೆಂದು ಬೆಳವಣಿಗೆಗಳು ತೋರಿಸಿವೆ ಅಷ್ಟೆ.

ಪಂಜಾಬು ಸೂಬಾ ಎನ್ನುವುದು ಮಾಸ್ಟರ್ ತಾರಾಸಿಂಗರ ಸಿಖ್ ರಾಜ್ಯಕ್ಕೆ ಒಂದು ಅಪಪ್ರಯೋಗ ಎನ್ನುವುದನ್ನು ಮತ್ತೆ ಹೇಳಬೇಕಾಗಿಲ್ಲ. ಸಂತ ಫತೇಸಿಂಗ್ ಏನೆ ಹೇಳಲಿ, ಇಡೀ ಚಳವಳಿಯು ಮತೀಯ ಆಕರ್ಷಣೆಯ ಮೇಲೆ ನಿಂತಿದೆ. ಗುರುಚರಣರ ಧಾರ್ಮಿಕ ವೇದಿಕೆಗಳಿಂದಲೇ ಅದನ್ನು ಸಾರ್ವಜನಿಕವಾಗಿ ನಡೆಸುತ್ತಿರುವುದು. ಆದ್ದರಿಂದಲೇ ಈ ಸೂಬಾ ಎನ್ನುವುದು ಭಾರತದಲ್ಲೊಂದು ಧಾರ್ಮಿಕ ರಾಜ್ಯವಾಗುತ್ತದೆ. ನಾವು ಅದಕ್ಕೆ ಅವಕಾಶ ಕೊಡಲಾಗುವುದಿಲ್ಲ.

ಸಂತ ಫತೇಸಿಂಗ್ ಒಬ್ಬ ಧಾರ್ಮಿಕ ನಾಯಕರು. ಅವರಿಗೆ ಯಾವುದೇ ರಾಜಕೀಯ ಸ್ಥಾನಮಾನವಿಲ್ಲ. ಅವರೊಂದಿಗೆ ರಾಜಕೀಯ ವಿವಾದಗಳನ್ನು ಚರ್ಚಿಸುವುದು ಸರ್ಕಾರದ ಕಡೆಯಿಂದ ತಪ್ಪಾಗುತ್ತದೆ. ಧರ್ಮ ಮತ್ತು ರಾಜಕೀಯವನ್ನು ಒಂದುಗೂಡಿಸಲಾಗದು. ನಾವು ಆಕ್ರಮಣಕಾರರೊಂದಿಗೆ ಕಾಶ್ಮೀರದಲ್ಲಿ ರಕ್ತಸಿಕ್ತ ಕದನದಲ್ಲಿ ತೊಡಗಿರುವ ಈ ಸಮಯದಲ್ಲೇ ಸರ್ಕಾರದ ಮೇಲೆ ಒತ್ತಡ ಹಾಕಲು ಅತ್ಯಂತ ಸೂಕ್ತವೆಂದು ಸಂತ ಫತೇಸಿಂಗ್ ಪರಿಗಣಿಸಿರುವುದು ಪಂಜಾಬೀ ಸೂಬಾ ಚಳುವಳಿಯ ರಾಷ್ಟ್ರದ್ರೋಹಿ ಲಕ್ಷಣಕ್ಕೆ ಸ್ಪಷ್ಟವಾದ ಸಾಕ್ಷಿಯಾಗಿದೆ.

ಈ ಸಂದರ್ಭದಲ್ಲಿ ಜನ ಮತ್ತು ಸರ್ಕಾರ ಮಾಡಬೇಕಾದದ್ದೇನು? ಖಂಡಿತವಾಗಿಯೂ ಅವರು ಮಣಿದು ಶರಣಾಗಲು ಸಾಧ್ಯವಿಲ್ಲ. ವಿದೇಶದ ಆಕ್ರಮಣಕಾರರೊಂದಿಗೆ ಯಶಸ್ವಿಯಾಗಿ ಹೋರಾಡಬೇಕಾದರೆ ಸ್ವದೇಶದಲ್ಲಿ ದೃಢವಾಗಿರಬೇಕು ಮತ್ತು ಶಕ್ತಿಯುತವಾಗಿರಬೇಕು. ಪಂಜಾಬಿನಲ್ಲಿ ಶಕ್ತಿಶಾಲಿಗಳಾಗಿರುವುದು ಇಡೀ ದೇಶಕ್ಕೆ ಒಗ್ಗಟ್ಟಾಗಿ ಎದ್ದು ನಿಲ್ಲಲು ಹಾಗೂ ಸದೃಢರಾಗಿರಲು ಶಕ್ತಿ ನೀಡುತ್ತದೆ. ಸರ್ಕಾರ ತತ್ತರಿಸದಿರಲಿ.

ಪಂಜಾಬಿನ ಜನರೂ ಕೂಡಾ ಸಂದರ್ಭಕ್ಕೆ ತಕ್ಕಂತೆ ನಡೆದುಕೊಳ್ಳಬೇಕು.

ಸಿಖ್ಖರ ಖ್ಯಾತಿಯೇ ಪರೀಕ್ಷೆಗೊಳಗಾಗಿದೆ. ರಾಷ್ಟ್ರದ ಆಪತ್ಕಾಲದಲ್ಲಿ ಅದರ ಬೆನ್ನಿಗೆ ಚೂರಿ ಹಾಕಿ ಕೈಬಿಟ್ಟರು ಎಂದು ದಾಖಲಿಸಲು ಭವಿಷ್ಯದ ಇತಿಹಸಕಾರರಿಗೆ ಅವರು ಕಾರಣ ಕೊಡುವರೇ? ಇಲ್ಲ, ಹಿರಿಯ ಗುರುಗಳ ಮಾರ್ಗ ಇದಲ್ಲ. ಗುರು ತೇಘ್ ಬಹಾದೂರರು ಕಾಶ್ಮೀರವನ್ನು ಉಳಿಸಲು ಹುತಾತ್ಮರಾದರು. ಕಾಶ್ಮೀರವು ಮತ್ತೊಮ್ಮೆ ಗುರು ತೇಗ ಬಹಾದೂರರ ಅನುಯಾಯಿಗಳಲ್ಲಿ ಮೊರೆಯಿಟ್ಟಿದೆ. ಅವರು ಆ ಕರೆಗೆ ಓಗೊಡುವರೇ? ಅವರು ಗುರು ತೇಗ ಬಹಾದೂರರ ಮೇಲ್ಪಂಕ್ತಿಯನ್ನು ಅನುಸರಿಸುವರೋ ಅಥವಾ ಸಂತ ಫತೇಸಿಂಗರನ್ನು ಹಿಂಬಾಲಿಸುವರೋ? ಒಬ್ಬರನ್ನು ಅವರು ಆಯ್ಕೆ ಮಾಡಿಕೊಳ್ಳಬೇಕು, ಅವರ ಆಯ್ಕೆಯಲ್ಲಿಯೇ ಪಂಥದ ಭವಿಷ್ಯವು ನಿಂತಿದೆ.

ಸಿಖ್ಖರು ರಾಷ್ಟ್ರೀಯವಾದಿಗಳೆಂದು ಮತ್ತು ಅದರಿಂದಾಗಿಯೇ ಅವರು ಸಂತ ಫತೇಸಿಂಗರ ಈ ಉಪವಾಸದ ವಿಷಯವನ್ನು ಮೆಚ್ಚುವುದಿಲ್ಲವೆಂದು ನಾನು ಬಲ್ಲೆ. ಆದರೆ ಅವರು ಈ ಮುಂದೆ ಸುಲಭದ ಭಾವಾತಿರೇಕದ ವಿರುದ್ಧವೂ ಎಚ್ಚರಿಕೆ ವಹಿಸಬೇಕು. ಭಾರತ ಸಜೀವವಾಗಿದ್ದರೆ ಪಂಥವೂ ಜೀವಂತವಾಗಿರುತ್ತದೆ; ಭಾರತ ನರಳುತ್ತಿದ್ದರೆ ಪಂಥ ಅಭಿವೃದ್ಧಿ ಹೊಂದಲಾರದು.

ಒಂದು ಅವಿಧೇಯ ಹಾಗೂ ಭೇದ ಕಲ್ಪಿಸುವ ಅಲ್ಪಸಂಖ್ಯಾತ ವರ್ಗವು ರಾಷ್ಟ್ರದ ಶಾಂತಿಯನ್ನು ಕದಡಿ, ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯನ್ನು ತಂದೊಡ್ಡಲು ಭಾರತದ ಜನತೆ ಮತ್ತು ಸರ್ಕಾರವು ಅವಕಾಶ ನೀಡುವುದಿಲ್ಲ. ಆತ್ಮಾಹುತಿಯ ಬೆದರಿಕೆ ಹಾಕಿ ಅದನ್ನು ಮಣಿಯುವಂತೆ ಒತ್ತಾಯಿಸುವುದು ಸಾಧ್ಯವಿಲ್ಲ. ಅದು ಶರಣಾದರೆ ಒಂದು ಸರಣಿ ಚಟುವಟಿಕೆಗೇ ಕಾರಣವಾಗುತ್ತದೆ ಅದು ದೃಢವಾಗಿರಲೇಬೇಕು. ಯಾವುದೇ ಅಂಗಲಾಚುವಿಕೆಯಿಲ್ಲ, ಯಾವುದೇ ರಿಯಾಯಿತಿಯಿಲ್ಲ, ಯಾವುದೇ ಹೊಂದಾಣಿಕೆಯಿಲ್ಲ. ಪಂಜಾಬಿನ ಭಾಷಾಸಂಬಂಧಿಯಾದ ಹಾಗೂ ರಾಜಕೀಯ ಯಥಾಸ್ಥಿತಿಯನ್ನು ಬದಲಾಯಿಸಬಾರದು. ಕೆಲವರು ಗೊಂದಲ ಉಂಟು ಮಾಡಿದರೆ ಅವರ ಮೇಲೆ ಆಡಳಿತಾತ್ಮಕವಾಗಿ ಹಾಗೂ ದೃಢವಾಗಿ ಕ್ರಮ ಜರುಗಿಸಬೇಕು. ಈ ಮಧ್ಯೆ ಬುಡಮೇಲು ಮಾಡುವ ಯೋಜನೆಗಳಿಗೆ ಕಾವು ಕೊಡುತ್ತಿರುವ ಕಮ್ಯುನಿಸ್ಟರು ಮತ್ತು ಅಕಾಲಿ ನಾಯಕರನ್ನು ಬಂಧಿಸಬೇಕು. ತನ್ನದೇ ತಪ್ಪು ಯೋಜನೆಗಳನ್ನು ಕೈಗೊಳ್ಳದಂತೆ ತಡೆಯುವ ಬೆಳಕನ್ನು ಶ್ರೇಷ್ಠ ಗುರುಗಳಿಂದ ಪಡೆಯುವಂತೆ ಸಂತ ಫತೇ ಸಿಂಗರನ್ನು ಗುರುದ್ವಾರಾದಲ್ಲಿ ಇರಿಸಬೇಕು.

ಭಾರತದ ಐಕ್ಯತೆಗೆ ಅತ್ಯವಶ್ಯಕವಾಗಿರುವ ಪಂಜಾಬಿನ ಐಕ್ಯತೆಯನ್ನು ರಕ್ಷಿಸಲು ಜನಸಂಘವು ರಾಷ್ಟ್ರೀಯತಾವಾದಿ ಶಕ್ತಿಗಳನ್ನು ಚಲನಗೊಳಿಸಿ ಸಂಘಟಿಸಬೇಕು. ಈವರೆಗಿನಂತೆ ತನ್ನ ಪವಿತ್ರ ಕಾರ್ಯದಲ್ಲಿ ಅದು

ಯಶಸ್ವಿಯಾಗುವೆದೆಂಬ ಖಾತ್ರಿಯಿದೆ ನನಗೆ.

ಮೂಲ : ಆರ್ಗನೈಸರ್, ೮ ಆಗಸ್ಟ್ ೧೯೬೫

ಏಪ್ರಿಲ್ ೧೭
ಆರ್ಗನೈಸರ್

## ಈ ವರ್ಷದ ಯೋಜನೆ ಒಂದು ರಜಾದಿನದ ಯೋಜನೆಯಾಗಿದೆ

ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯು ೧೯೬೬ರ ಮಾರ್ಚ್ ೩೧ಕ್ಕೆ ಮುಕ್ತಾಯವಾಯಿತು. ಏಪ್ರಿಲ್ ೧ರಿಂದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಪ್ರಾರಂಭವಾಗಿದೆ. ಆದರೆ ಈ ಯೋಜನೆಯು ಇನ್ನೂ ಕಾಲಗರ್ಭದಲ್ಲಿದೆ. ಅದರ ಸ್ವರೂಪವನ್ನಾಗಲೀ ಗಾತ್ರವನ್ನಾಗಲಿ ಯಾರೂ ಅರಿಯರು. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ೧೯೬೫ರ ಸೆಪ್ಟೆಂಬರ್ ೫–೬ರಲ್ಲಿ ನಡೆದ ತನ್ನ ಸಭೆಯಲ್ಲಿ, ಒಟ್ಟು ೨೧,೫೦೦ಕೋಟಿ ರೂಪಾಯಿಗಳಲ್ಲಿ–ಸಾರ್ವಜನಿಕ ವಲಯದಲ್ಲಿ ೧೪,೫೦೦ ಕೋಟಿ ರೂಪಾಯಿಗಳು ಮತ್ತು ಖಾಸಗಿ ವಲಯದಲ್ಲಿ ೭,೦೦೦ ಕೋಟಿ ರೂಪಾಯಿಗಳ–ಯೋಜನೆಗೆ ಅಂಗೀಕಾರ ನೀಡಿತ್ತು. ಆದರೆ ಪಾಕಿಸ್ತಾನದ ಆಕ್ರಮಣವು ಉಂಟುಮಾಡಿದ ತುರ್ತು ಪರಿಸ್ಥಿತಿಯಿಂದಾಗಿ ಯೋಜನೆಯನ್ನು ಪುನರ್ರೂಪಿಸಬೇಕೆಂದು ಅದು ಭಾವಿಸಿತ್ತು. ಆದ್ದರಿಂದಲೇ ಕೌನ್ಸಿಲ್ಲಿನ ಅಧ್ಯಕ್ಷ ಸ್ಥಾನದಿಂದ ಪ್ರಧಾನಮಂತ್ರಿಗಳು ಸೂಕ್ತ ಹೊಂದಾಣಿಕೆಗಳನ್ನು ಮಾಡಲು ಅಧಿಕಾರ ನೀಡಿತ್ತು.

## ಮುನ್ನೋಟದ ಯೋಜನೆಯಿಂದ ಹಿನ್ನೋಟದ ಯೋಜನೆಯತ್ತ

ಸಾಮಾನ್ಯವಾಗಿ ಯೋಜನೆಗಳ ಬಗ್ಗೆ ಹಾಗೂ ನಿರ್ದಿಷ್ಟವಾಗಿ ನಾಲ್ಕನೆಯ ಯೋಜನೆಯ ಬಗ್ಗೆ ಅಂದಿನ ಪ್ರಧಾನ ಮಂತ್ರಿಗಳಿಗೆ ಅವರದ್ದೇ ಆದ ಅಭಿಪ್ರಾಯವಿತ್ತು. ಪಾಕಿಸ್ತಾನದೊಂದಿಗಿನ ಘರ್ಷಣೆಯಿಂದಾಗಿ ಉದ್ಭವಿಸಿದ ಪರಿಸ್ಥಿತಿ ಮತ್ತು ವಿದೇಶಗಳಿಂದ ಎಲ್ಲ ಸಹಾಯಧನಗಳ ನಿಲುಗಡೆಗಳು ಆರ್ಥಿಕ ಬೆಳವಣಿಗೆಯ ಸಮಸ್ಯೆಗಳ ವಿಷಯದಲ್ಲಿ ಅವರ ಸಾಮಾನ್ಯ ಜ್ಞಾನದ ಮುನ್ನಡೆಯನ್ನು ಸಮರ್ಥಿಸಿದ್ದವು ಹಾಗೂ ಯೋಜನಾ ಆಯೋಗದ ಸಿದ್ಧಾಂತಿಗಳನ್ನು ತಮ್ಮ ಅಭಿಪ್ರಾಯಕ್ಕೆ ಕಿವಿಗೊಡಲು ಒತ್ತಾಯಿಸುವ ಅಧಿಕಾರವನ್ನು ಅವರಿಗೆ ನೀಡಿದ್ದವು. ಅಂತೆಯೇ ಅವರು ನಾಲ್ಕನೆಯ ಯೋಜನೆಯನ್ನು ಪುನರ್ರೂಪಿಸುವಂತೆ ಆಯೋಗವನ್ನು ನಿರ್ದೇಶಿಸಿದ್ದರು.

ಆದರೆ ತಾಷ್ಕೆಂಟಿನ ಅವರ ಅಕಾಲ ಮರಣವು ಇಡೀ ಕಥೆಗೆ ಮುಕ್ತಾಯ ಹಾಕಿತು. ಅಲ್ಲದೆ ಪಾಕಿಸ್ತಾನದೊಂದಿಗಿನ ಶಾಂತಿ ಮತ್ತು ಸೌಹಾರ್ದಗಳ ಯುಗಕ್ಕೆ ಮುನ್ಸೂಚಿ ಎಂದು ಪರಿಗಣಿಸಲ್ಪಟ್ಟಿದ್ದ ತಾಷ್ಕೆಂಟ್ ಘೋಷಣಾ ಪ್ರಣಾಳಿಕೆಯು ಯೋಜಕರ ಕನಸುಗಳಿಗೆ ಪುನಶ್ಚೇತನ ನೀಡಿತು ಹಾಗೂ ಯವುದೇ ಗಂಭೀರ

ಪುನರ್ ಮೌಲ್ಯಮಾಪನವನ್ನು ಕೈಬಿಟ್ಟಂತೆ ಕಂಡುಬಂದಿತು. ವಾಸ್ತವವಾಗಿಯೂ ಯೋಜನಾ ಆಯೋಗದ ಉಪಾಧ್ಯಕ್ಷರೂ ಯೋಜನಾ ಮಂತ್ರಿಗಳೂ ಆದ ಶ್ರೀ ಅಶೋಕ ಮೆಹ್ತಾ ಅವರು ಯೋಜನೆಯ ಗಾತ್ರವನ್ನು ಉಳಿಸಿಕೊಳ್ಳಲು ಗಂಭೀರ ಪ್ರಯತ್ನ ಮಾಡುತ್ತಿದ್ದಾರೆ. ವಿದೇಶಿ ಸಹಾಯಧನದ ವಿಷಯದಲ್ಲಿ ಇನ್ನೂ ಅನಿಶ್ಚಿತತೆಯ ಕತ್ತಿ ತೂಗುತ್ತಿದೆ. ಇಲ್ಲದೇ ಹೋಗಿದ್ದರೆ ಅಕ್ಟೋಬರ್ ೧೯೬೪ರಲ್ಲಿ ಸಲ್ಲಿಸಿದ ನಾಲ್ಕನೆಯ ಯೋಜನೆಯ ಕರಡಿನ ಅನೌಪಚಾರಿಕ ಪತ್ರ(ಕರಾರು ದಸ್ತೈವಜು)ದ ಮೂಲ ಸ್ವರೂಪದಲ್ಲಿಯೇ ನಾಲ್ಕನೆಯ ಯೋಜನೆಯ ಕರಡು ಪ್ರತಿಯನ್ನು ಸಿದ್ಧಗೊಳಿಸಲಾಗುತ್ತಿತ್ತು. ಈಗಿನ ಪರಿಸ್ಥಿತಿಯಲ್ಲಿ ಕರಡು ಇನ್ನೂ ಸಿದ್ಧವಾಗಬೇಕಾಗಿದೆ. ಹೀಗಾಗಿ ಮುನ್ನೋಟದ ಯೋಜನೆಯ ಸ್ಥಾನದಲ್ಲಿ ನಾವು ಹಿನ್ನೋಟದ ಯೋಜನೆಯತ್ತ ಚಲಿಸುತ್ತಿದ್ದೇವೆ.

ಬಹುಮಟ್ಟಿಗೆ ವಿದೇಶಿ ಬೆಂಬಲದ ಅಭಿಮುಖವಾಗಿದ್ದ ಮತ್ತು ಮಹತ್ವಾಕಾಂಕ್ಷೆಯ ಹಳೆಯ ಯೋಜನೆಯನ್ನು ಸಂಪೂರ್ಣವಾಗಿ ಕೈಬಿಡಲು ಒಲ್ಲದ, ಯೋಜನಾ ಆಯೋಗವು ಹೊಸ ಯೋಜನೆಯನ್ನು ಸಿದ್ಧಗೊಳಿಸಲಿಲ್ಲ. ಆದರೆ ಬದಲಾದ ಪರಿಸ್ಥಿತಿಯಲ್ಲಿ ಹಿಂದಿನ ಯೋಜನೆಯನ್ನು ಅವರು ಒತ್ತಾಯವಾಗಿ ಹೊರಿಸುವಂತಿರಲಿಲ್ಲ. ಆದ್ದರಿಂದ ಅವರು ಒಂದು ವರ್ಷದ ಯೋಜನೆಯೊಂದನ್ನು ರೂಪಿಸುವ ಮಧ್ಯ ಮಾರ್ಗವೊಂದನ್ನು ಸೃಷ್ಟಿಸಿದ್ದಾರೆ; ಪರಿಸ್ಥಿತಿಯು ಸುಧಾರಿಸಿ ಹಿಂದಿನ ಗಾತ್ರ ಮತ್ತು ಸ್ವರೂಪಗಳ ಯೋಜನೆಯನ್ನು ಸಲ್ಲಿಸಲು ಸಾಧ್ಯವಾಗುವುದೆಂದು ಆಸೆಯಿಂದ ಎದುರು ನೋಡುತ್ತಿದ್ದಾರೆ. ಇದಕ್ಕೆ ಅನುಗುಣವಾಗಿ ೧೯೬೬–೬೭ನೇ ವರ್ಷಕ್ಕೆ ಕಾರ್ಯಕ್ರಮಗಳನ್ನು ಸಿದ್ಧಗೊಳಿಸಲು ಯೋಜನಾ ಆಯೋಗವು ರಾಜ್ಯ ಸರ್ಕಾರಗಳಿಗೆ ಹಾಗೂ ಕೇಂದ್ರದ ವಿವಿಧ ಸಚಿವಾಲಯಗಳಿಗೆ ನಿರ್ದೇಶನ ನೀಡಿದೆ. ಈ ಕಾರ್ಯಕ್ರಮಗಳನ್ನು ಯೋಜಿಸುವಲ್ಲಿ ಕೃಷಿ ಉತ್ಪಾದನೆ ಮತ್ತು ಕುಟುಂಬ ಯೋಜನೆಗಳಿಗೆ ಸಂಬಂಧಿಸಿದಂತೆ ಶೀಘ್ರವಾಗಿ ಫಲ ನೀಡುವ ವ್ಯವಸ್ಥೆಗಳಿಗೆ ಆದ್ಯತೆ ನೀಡಬೇಕೆಂದು ಹೇಳಲಾಗಿತ್ತು. ಉಳಿದ ಕ್ಷೇತ್ರಗಳಲ್ಲಿಯಾದರೋ, ವಿವರಗಳನ್ನು ಪೂರ್ತಿಯಾಗಿ ಸಿದ್ಧಗೊಳಿಸಿದ್ದು ಅವಶ್ಯಕವಾದ ಆಂತರಿಕ ಮತ್ತು ಬಾಹ್ಯ ಸಂಪನ್ಮೂಲಗಳ ಆಶ್ವಾಸನೆಯಿರುವಂತಹ ಯೋಜನೆಗಳನ್ನು ಇಲ್ಲವೇ ಈಗಾಗಲೇ ನಡೆಯುತ್ತಿರುವ ಯೋಜನೆಗಳನ್ನು ಸೇರಿಸಬಹುದು ಎಂದಿತ್ತು. ವಾರ್ಷಿಕ ಯೋಜನೆಯ ಒಟ್ಟಾರೆ ಬಂಡವಾಳವು ಸುಮಾರು ೨,೮೦೦ ಕೋಟಿ ರೂಪಾಯಿಗಳು ಎಂದೂ ನಿರ್ಧರಿಸಲಾಗಿತ್ತು.

ರಾಜ್ಯ ಸರ್ಕಾರಗಳು ಹಾಗೂ ಕೇಂದ್ರದ ಸಚಿವಾಲಯಗಳು ಸಿದ್ಧಪಡಿಸಿದ ಯೋಜನೆಗಳ ಬಂಡವಾಳವು ೨,೮೦೦ ಕೋಟಿ ರೂಪಾಯಿಗಳನ್ನು ಬಹುವಾಗಿ ಮೀರುತ್ತಿತ್ತು. ಆದ್ದರಿಂದ ಆಯೋಗವು ಅವುಗಳನ್ನು ತುಂಡರಿಸಿತು. ೧೯೬೬ರ

ಏಪ್ರಿಲ್ ೭ರಂದು, ಸಂಸತ್ತಿನ ಅಧಿವೇಶನ ಆರಂಭವಾದ ಏಳು ದಿನಗಳ ನಂತರ ಈ ತುಂಡರಿಸಿದ ಯೋಜನೆಯನ್ನು ಸಂಸತ್ತಿನ ಮುಂದಿರಿಸಲಾಯಿತು.

**ಹಣ ಇನ್ನು ಮುಂದೆ ಹೆಣ್ಣು ಕುದುರೆಯನ್ನು ಓಡಿಸಲಾರದು**

ಅನೌಪಚಾರಿಕ ಪತ್ರದ ಆಧಾರದ ಮೇಲೆ ಮುಂದೆ ಸಲ್ಲಿಸಲಾಗುವ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ವಿಸ್ತಾರವಾದ ಚೌಕಟ್ಟಿನ ಒಳಗೇ ವಾರ್ಷಿಕ ಯೋಜನೆಯನ್ನು ಕಾಣಬೇಕೆಂದು ಯೋಜನಾ ಆಯೋಗವು ಬಯಸುತ್ತದಾದರೂ ಅದನ್ನು ಒಂದು ತಿದ್ದುಪಡಿ ತರುವ ಯೋಜನೆಯಾಗಿ ರೂಪಿಸುವುದೂ ಪರಿಗಣಿಸುವುದೂ ಅಪೇಕ್ಷಣೀಯ. ಅರ್ಥವ್ಯವಸ್ಥೆಯಲ್ಲಿನ ಒತ್ತಡಗಳನ್ನೂ ಏರುಪೇರುಗಳನ್ನೂ ನಿವಾರಿಸುವಂತೆ ನಾಲ್ಕನೆಯ ಯೋಜನೆಯನ್ನು ರೂಪಿಸಬೇಕೆಂದು ನಾವು ಆಗ್ರಹಿಸಿದ್ದೆವು. ಬಹಳ ಸೀಮಿತವಾದ ಮಟ್ಟದಲ್ಲಿ, ಅನುಮಾನಗಳೊಂದಿಗೆ ಮತ್ತು ಬಹಳ ತಾತ್ಕಾಲಿಕ ರೀತಿಯಲ್ಲಿ ಅಂತಹ ಏನನ್ನೋ ಮಾಡಲು ಯೋಜನಾ ಆಯೋಗವು ಪ್ರಯತ್ನಿಸಿದಂತಿದೆ. ನಾಲ್ಕನೆಯ ಯೋಜನೆಯ ಅನೌಪಚಾರಿಕ ಪತ್ರದ ಅನವಶ್ಯಕವಾದ ಗೀಳು ಅವರಿಗೆ ಅಂಟಿಕೊಂಡಂತಿದೆ.

ಮೂರನೆಯ ಯೋಜನಾ ಅವಧಿಯ ಅನೇಕ ಅನಿರೀಕ್ಷಿತ ಘಟನೆಗಳಿಂದ ಅರ್ಥವ್ಯವಸ್ಥೆಯಲ್ಲಿ ಉದ್ಭವಿಸಿರುವ ಒತ್ತಡಗಳನ್ನು ೧೯೬೬–೬೭ರ ಯೋಜನೆಯು ಗಣನೆಗೆ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಅದೇ ವೇಳೆಯಲ್ಲಿ ನಾಲ್ಕನೆಯ ಯೋಜನಾ ಅವಧಿಯ ಅಭಿವೃದ್ಧಿ ಪ್ರಯತ್ನಗಳಿಗೆ ಮೂಲಾಧಾರವಾಗಿರುವ ಉದ್ದೇಶಗಳು ಮತ್ತು ಕಾರ್ಯನೀತಿಗಳೊಂದಿಗೂ ಸಾಮರಸ್ಯಕ್ಕೆ ಅದು ಪ್ರಯತ್ನಿಸಬೇಕು. ಮುಂದೆ ವಿವರಿಸಲಿರುವಂತೆ, ತತ್‌ಕ್ಷಣದ ಒತ್ತಡಗಳ ಪರಿಹರಿಸುವ ಹಾಗೂ ನಮ್ಮ ದೀರ್ಘಕಾಲಾವಧಿಯ ಗುರಿಗಳನ್ನು ಈಡೇರಿಸಲು ಅವಶ್ಯಕ ಚಾಲನೆಯ ಭರವಸೆ ನೀಡುವ ಈ ಎರಡು ಪರಿಶೀಲನೆಗಳ ನಡುವೆ ಸಮತೋಲನ ಸಾಧಿಸುವುದು ಸುಲಭವಾಗಿಲ್ಲ. ಅವರು ಹೀಗೆ ಬರೆದಿರುವುದರಲ್ಲೇ ಅವರ ಗೀಳು ಸ್ಪಷ್ಟವಾಗಿದೆ.

ವಾರ್ಷಿಕ ಯೋಜನೆಯನ್ನು ಒಂದು ರಜಾದಿನದ ಯೋಜನೆ ಎಂದು ಕರೆಯುವುದು ಒಳ್ಳೆಯದು. ವಾರದ ದಿನಗಳಲ್ಲಿ ಕೆಲಸವನ್ನು ಶೇಖರಿಸಿ ಇಟ್ಟುಕೊಂಡವರು ಅದನ್ನು ಮುಗಿಸಲು ಭಾನುವಾರಗಳಂದು ದುಡಿಯುತ್ತಾರೆ. ಈ ಬೆಳಕಿನಲ್ಲೇ ಈ ಯೋಜನೆಯನ್ನು ಪರೀಕ್ಷಿಸಬೇಕು. ಅರ್ಥವ್ಯವಸ್ಥೆಯಲ್ಲಿ ಎಷ್ಟೊಂದು ಒತ್ತಡಗಳು ಮತ್ತು ಸೆಳೆತಗಳು ಇವೆಯೆಂದರೆ ಅವುಗಳನ್ನೆಲ್ಲಾ ಒಂದೇ ವಾರ್ಷಿಕ ಯೋಜನೆಯಲ್ಲಿ ಪರಿಹರಿಸುವುದು ತಪ್ಪಾಗುತ್ತದೆ. ಯೋಜನಾ ಆಯೋಗವು ಆ ಬಗ್ಗೆ ಮಾತನಾಡುತ್ತಿದ್ದರೆ ಅದು ಅಭ್ಯಾಸ ಬಲದಿಂದ ಅಥವಾ ಚುನಾವಣಾ ವರ್ಷದಲ್ಲಿ ರಾಜಕೀಯ ಲಾಭಕ್ಕಾಗಿ ಅಷ್ಟೆ. ಈ ವರ್ಷದಲ್ಲಿ ಆಯೋಜಕರು ಪ್ರವೃತ್ತಿಗಳಿಗೆ ಅಡ್ಡಿಯೊಡ್ಡಿ ಹಿಂದಕ್ಕೆ ತಿರುಗಿಸುವುದರಲ್ಲಿ ಯಶಸ್ವಿಯಾದರೆ ಸಾಕು,

ನಮಗೆ ಸಮಾಧಾನವಾಗುತ್ತದೆ. ಈ ಯೋಜನೆಯ ಆದ್ಯತೆಗಳು ಸರಿಯಾಗಿದ್ದರೂ ಕಾರ್ಯಕ್ರಮಗಳು ನಿರೀಕ್ಷಿತ ಪರಿಣಾಮಗಳನ್ನು ಸಾಧಿಸುವ ಸಂಭವ ಇಲ್ಲ. ಆರ್ಥಿಕ ಮತ್ತು ಭೌತಿಕ ಗುರಿಗಳಲ್ಲಿ ಹೊಂದಾಣಿಕೆಯಿಲ್ಲ. ಅವಶ್ಯಕ ಫಲಿತಾಂಶಗಳಿಗಾಗಿ ಹಣವನ್ನು ಹೇಗೆ ವಿನಿಯೋಗ ಮಾಡಬೇಕೆಂದು ಆಯೋಗವು ಇನ್ನೂ ಕಂಡುಕೊಂಡಿಲ್ಲ. ಸರ್ಕಾರಿ ಯಂತ್ರವನ್ನೇ ಅದು ಸಂಪೂರ್ಣವಾಗಿ ಅವಲಂಬಿಸುತ್ತದೆ. ಆದರೆ ಅಲ್ಲಿ ಹಣವಿದ್ದಲ್ಲಿಗೆ ಹೆಣ್ಣು ಕುದುರೆಯನ್ನು ಒಯ್ಯಬಹುದು ಎಂಬ ಗಾದೆಗೆ ಜೀವವಿಲ್ಲ. ಹಣ ವೆಚ್ಚವಾಗಿದೆ, ಆದರೆ ಹೆಣ್ಣು ಕುದುರೆ ಚಲಿಸುವುದಿಲ್ಲ.

ವ್ಯವಸಾಯಕ್ಕೆ ಮೊದಲ ಆದ್ಯತೆ ನೀಡಲಾಗಿದೆ. ವ್ಯವಸಾಯಕ್ಕಾಗಿ ೩೨೨.೫೫ ಕೋಟಿ ರೂಪಾಯಿಗಳನ್ನು ಮೀಸಲಿಡಬೇಕೆಂದು ಪ್ರಸ್ತಾಪಿಸಲಾಗಿದೆ. ಸಮುದಾಯ ಅಭಿವೃದ್ಧಿ ಮತ್ತು ಸಹಕಾರವೂ ಅದರಲ್ಲಿ ಸೇರಿವೆ. ೧೯೬೫–೬೬ರಕ್ಕಿಂತ ಸುಮಾರು ೧೮ ಕೋಟಿ ಕಡಿಮೆ ಮೊತ್ತವು ಸಿ.ಡಿ. ಕಾರ್ಯಕ್ರಮಕ್ಕೆಂದು ನಿಗದಿಯಾಗಿದೆ. ಈ ಬಾಬತ್ತು ವ್ಯರ್ಥವೆಂದು ಆಯೋಗವೂ ಅರಿತುಕೊಂಡಿದೆ ಎಂದು ಇದು ತೋರಿಸುತ್ತದೆ. ಅದನ್ನು ಇನ್ನಷ್ಟು ಕಡಿಮೆ ಮಾಡಬಹುದು. ಉತ್ಪತ್ತಿಯನ್ನು ಹೆಚ್ಚಿಸುವುದಾಗಲೀ, ಅಥವಾ ಬದುಕಿನ ಮಟ್ಟಗಳನ್ನು ಉತ್ತಮ ಪಡಿಸುವುದೇ ಆಗಲಿ, ಸಿ.ಡಿ. ಕಾರ್ಯಕ್ರಮವು ಗ್ರಾಮೀಣ ಜನತೆಗೆ ಯಾವ ಸಹಾಯವನ್ನೂ ಒದಗಿಸಿಲ್ಲ ಎಂದು ವಿವಿಧ ಮೌಲ್ಯಮಾಪನ ವರದಿಗಳು ಸ್ಪಷ್ಟವಾಗಿ ತೋರಿಸಿವೆ.

**ನೂತನ ಕಾರ್ಯ ತಂತ್ರವು ನೂತನ ಅಲ್ಲವೇ ಅಲ್ಲ**

ವ್ಯವಸಾಯಕ್ಕಾಗಿ ಒಂದು ನೂತನ ಕಾರ್ಯ ತಂತ್ರವನ್ನು ಕಂಡುಕೊಂಡಿದ್ದೇವೆಂದು ಆಯೋಗವು ಹೇಳುತ್ತಿದೆ. ವ್ಯವಸಾಯದ ಉತ್ಪಾದನೆಯನ್ನು ಹೆಚ್ಚಿಸುವುದರ ಸಮಸ್ಯೆಯಿರುವುದು ಆಧುನಿಕ ಸಾಧನಗಳಾದ ರಸಗೊಬ್ಬರಗಳು, ನೀರಾವರಿ, ಕ್ರಿಮಿನಾಶಕಗಳು ಮತ್ತು ಸಿದ್ಧ ತಳಿ ಸಾಧ್ಯತೆಯುಳ್ಳ ಹೊಸ ಪೈರು ವಿಧಗಳು ಮುಂತಾದವುಗಳ ಕೊರತೆಯೇ ಹೊರತು ರೈತನ ಜಡತ್ವವಲ್ಲ ಎನ್ನುವ ಪ್ರಮೇಯದ ಆಧಾರದ ಮೇಲೆ ವ್ಯವಸಾಯದ ನೂತನ ತಂತ್ರ ನಿಂತಿದೆ; ಅದೇ ಹೊಸ ಧೋರಣೆಯ ಮುಖ್ಯ ಅಂಶವಾಗಿದೆ.

ಈ ನೂತನ ತಂತ್ರದ ವಿಷಯಕ್ಕೆ ಬಂದರೆ, ಅದು ನೂತನವೇ ಅಲ್ಲ. ಅದನ್ನು ಈಗಾಗಲೇ ಪ್ಯಾಕೇಜ್ ಜಿಲ್ಲೆಯಲ್ಲಿ ಅಳವಡಿಸಲಾಗಿದೆ. ಮುಖ್ಯವಾದ ಸಮಸ್ಯೆ ಇರುವುದೇ ಈ ಸಾಧನಗಳನ್ನು ಹೇಗೆ ಒದಗಿಸುವುದು ಎನ್ನುವುದರಲ್ಲಿ ಬೇಕಾದಷ್ಟು ಆಂತರಿಕ ಉತ್ಪಾದನೆಯಿಲ್ಲ ಮತ್ತು ವಿದೇಶಿ ವಿನಿಮಯದ ಕೊರತೆಯು ಧಾರಾಳವಾದ ಆಮದಿಗೆ ತಡೆಯೊಡ್ಡುತ್ತದೆ. ನಂತರ ಏಳುವ ಪ್ರಶ್ನೆಯೆಂದರೆ ಆಂತರಿಕ ಮತ್ತು ಸಾಮಾಜಿಕ ಸಂಪನ್ಮೂಲಗಳದ್ದು. ಸರ್ಕಾರದ ಹಣಕಾಸಿನ ಕಾರ್ಯನೀತಿಗಳು ರೈತನಿಗೆ ಅತ್ಯಲ್ಪ ಸ್ವಾತಂತ್ರ್ಯ ನೀಡುತ್ತವೆ. ಸರ್ಕಾರೀ ವಾಣಿಜ್ಯದ ಕಾರ್ಯ ನೀತಿಗಳು

ಹಾಗೂ ಯೋಜನೆಗಳು ಉತ್ಸಾಹಭಂಜಕಗಳಾಗಿ ಕೆಲಸ ಮಾಡುತ್ತವೆ. ಭೂಕಾಯಿದೆಗಳು ಹಾಗೂ ಸಮಾಜವಾದೀ ಘೋಷಣೆಗಳು ಬಂಡವಾಳವನ್ನು ಹೆದರಿಸಿ ಓಡಿಸುತ್ತವೆ. ಸಾಲ ನೀಡುವ ಸಂಸ್ಥೆಗಳು ತೀರಾ ಕಡಿಮೆಯಿವೆ ಹಾಗೂ ಅಸಮರ್ಥವಾಗಿವೆ. ರೈತರಿಗೆ ಸಂಪನ್ಮೂಲಗಳನ್ನು ದೊರಕಿಸಿಕೊಡುವಲ್ಲಿ ಸರ್ಕಾರ ವಿಫಲವಾಗಿದೆ. ಈ ಕಾರಣಗಳಿಂದಾಗಿಯೇ ಕಳೆದ ದಶಕದಲ್ಲಿ ನಮ್ಮ ವ್ಯವಸಾಯವು ಜಡವಾಗಿದೆ. ಸ್ಥಳೀಯ ಸಂಪನ್ಮೂಲಗಳನ್ನು ಮತ್ತು ಸಾಧನಗಳನ್ನು ಬಳಕೆ ಮಾಡದ ಹಾಗೂ ವರ್ಧಿಸದ ಹೊರತು, ಮೇಲೆ ಹೇಳಿದ ಕಾರ್ಯತಂತ್ರವು ಯಶಸ್ವಿಯಾಗುವ ಸಂಭವ ಇಲ್ಲ.

**ಪಿ.ಎಲ್. ೪೮೦ರ ವಿಷಾದಕರ ಕಥೆ**

ಭೌತಿಕ ಗುರಿಗಳನ್ನು ನಿರ್ಧರಿಸುವಾಗ ಆಯೋಗವು ಹಿಂದಿನ ಅನುಭವವನ್ನು ಸಂಪೂರ್ಣವಾಗಿ ಅಲಕ್ಷಿಸಿರುವುದು ಆಶ್ಚರ್ಯಕರವಾಗಿದೆ. ಗುರಿಗಳು ಇಚ್ಛಾಸೂಚಕವಾಗಿವೆಯೇ ಹೊರತು ವಾಸ್ತವವಾಗಿಲ್ಲ. ೧೯೬೬–೬೭ರಲ್ಲಿ ಆಹಾಧಾನ್ಯಗಳ ಉತ್ಪಾದನೆಯನ್ನು ೯೭ ಮಿಲಿಯ ಟನ್ನುಗಳಿಗೆ ಏರಿಸಬೇಕಾಗಿದೆ. ೧೯೬೫–೬೬ರ ಅಂದಾಜು ಉತ್ಪಾದನೆ ಸುಮಾರು ೭೬ ಮಿಲಿಯ ಟನ್ನುಗಳು. ಬರದ ಪರಿಸ್ಥಿತಿಯಿಂದಾಗಿ ಅದು ಅಸಾಮಾನ್ಯವಾದ ಕೆಳಮಟ್ಟದಲ್ಲಿದೆ ಎಂದು ಪರಿಗಣಿಸಿದರೂ, ಮೂರನೆಯ ಯೋಜನಾ ಅವಧಿಯ ಗರಿಷ್ಠ ಉತ್ಪಾದನೆಯು ೧೯೬೪–೬೫ರಲ್ಲಿ ೮೮ ಮಿಲಿಯ ಟನ್ನುಗಳಾಗಿತ್ತು. ಅದಕ್ಕೆ ಮೊದಲು ವಾರ್ಷಿಕ ಉತ್ಪಾದನೆಯು ೮೦ ಮಿಲಿಯ ಟನ್ನುಗಳ ಆಸುಪಾಸಿನಲ್ಲಿರುತ್ತಿತ್ತು. ಒಂದು ಸಾಮಾನ್ಯ ವರ್ಷದ ಉತ್ಪಾದನಾ ಸಾಧ್ಯತೆಯು ಸುಮಾರು ೮೨ ಮಿಲಿಯ ಟನ್ನುಗಳು. ೧೫ ಮಿಲಿಯ ಟನ್ನುಗಳ ದಾಪುಗಾಲನ್ನು ನಾವು ಒಂದೇ ವರ್ಷದಲ್ಲಿ ಹಾಕುವುದಾದರೂ ಹೇಗೆ?

ಮತ್ತು ಇದು ಕೇವಲ ಆಹಾರ ಧಾನ್ಯಗಳ ವಿಷಯವಲ್ಲ, ವ್ಯವಸಾಯದ ಇತರ ಎಲ್ಲ ಬೆಳೆಗಳ ವಿಷಯ........

* * * * *

# ಆಹಾರ ಮತ್ತು ರೈತ : ಸರ್ಕಾರದಿಂದ ಕಡೆಗಣನೆಗೆ ಒಳಗಾಗುತ್ತಿರುವ ಬೇಸಾಯ

ವ್ಯವಸಾಯ ಎಲ್ಲಾ ತೆರನಾದ ಆರ್ಥಿಕ ಅಭಿವೃದ್ಧಿಯ ಮೂಲ. ಭಾರತದಲ್ಲಿ ವ್ಯವಸಾಯ ಶೇ.೭೨ಕ್ಕಿಂತ ಹೆಚ್ಚಿನ ಜನರ ಜೀವನ ನಿರ್ವಹಣೆಗೆ ಆದಾಯದ ಮೂಲ. ಜೊತೆಗೆ, ನಮ್ಮ ದೇಶದ ರಾಷ್ಟ್ರೀಯ ಆದಾಯದ ಶೇ.೫೦ ವ್ಯವಸಾಯ ಕ್ಷೇತ್ರದಿಂದಲೆ ಬರುತ್ತಿದೆ. ಈ ಕಾರಣದಿಂದಾಗಿ, ಸಹಜವಾಗಿಯೇ, ವ್ಯವಸಾಯ ರಂಗವು ನಮ್ಮ ಪ್ರಥಮ ಹಾಗೂ ಪ್ರಮುಖ ಆದ್ಯತೆಯ ಕ್ಷೇತ್ರವಾಗಬೇಕು.

ಆದರೆ, ರಾಷ್ಟ್ರದ ವ್ಯವಸ್ಥಿತ ಆರ್ಥಿಕ ಪ್ರಗತಿಗಾಗಿ ವ್ಯವಸಾಯ ಕ್ಷೇತ್ರಕ್ಕೆ ನಮ್ಮ ರಾಜಕೀಯ ಚಿಂತಕರು ಹಾಗೂ ಆರ್ಥಿಕ ಯೋಜನೆಯನ್ನು ರೂಪಿಸಿದವರು ಸೂಕ್ತ ಪ್ರಾಮುಖ್ಯವನ್ನು ಇನ್ನೂ ನೀಡಿಲ್ಲ. ಅವರು ಭಾರತದಲ್ಲಿನ ಕೈಗಾರಿಕೀಕರಣದ ಸಮಸ್ಯೆಗಳತ್ತಲೇ ಗಮನ ಕೇಂದ್ರೀಕರಿಸುತ್ತಿದ್ದಾರೆ. ಭಾರತದಲ್ಲಿನ ಬಡತನದ ಬೇರು ಕೈಗಾರಿಕೆಗಳ ಕೊರತೆಯಲ್ಲಿದೆ ಎನ್ನುವುದು ಅವರ ಆಲೋಚನೆ, ಇದು ಸ್ವಲ್ಪ ಮಟ್ಟಿಗೆ ನಿಜವೂ ಹೌದು.

ಆದರೆ, ವ್ಯವಸಾಯ ರಂಗದಲ್ಲಿನ ಬೆಳವಣಿಗೆಯಿಲ್ಲದೆ ಕೈಗಾರಿಕೆಗಳು ಅಭಿವೃದ್ಧಿಯಾಗದು ಎನ್ನುವುದನ್ನು ಅವರು ಮರೆತಿದ್ದಾರೆ. ವ್ಯವಸಾಯವು ಏರುತ್ತಲೇ ಇರುವ ಜನಸಂಖ್ಯೆಗೆ ಕೇವಲ ಆಹಾರವನ್ನು ಮಾತ್ರವೇ ನೀಡುವುದಿಲ್ಲ. ಬದಲಿಗೆ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನೂ ಒದಗಿಸುತ್ತವೆ. ಶ್ರೀಮಂತ ಬೇಸಾಯಗಾರರ ವರ್ಗವೊಂದೇ ಕೈಗಾರಿಕಾ ಉತ್ಪನ್ನಗಳಿಗೆ ವಿಶಾಲ ಮಾರುಕಟ್ಟೆಯನ್ನು ಒದಗಿಸಿಕೊಡಬಲ್ಲದು. ಈ ರಂಗವನ್ನು ಕಡೆಗಣಿಸಿದ್ದೇ ಆದಲ್ಲಿ, ಕೈಗಾರಿಕಾ ಕ್ಷೇತ್ರವು ಕಚ್ಚಾ ಸಾಮಗ್ರಿಗಳಿಗಾಗಿ ಪರಿತಪಿಸಿ ಸೊರಗಬಹುದು, ಇಲ್ಲವೇ ಬೇಡಿಕೆಯ ಕೊರತೆಯಿಂದಾಗಿ ಬಲವಂತವಾಗಿ ಬಾಗಿಲು ಮುಚ್ಚಿಕೊಳ್ಳಬೇಕಾಗಬಹುದು.

ಇದೇ ಕಾರಣದಿಂದಾಗಿ ಎರಡನೇ ಯೋಜನೆ ದಯನೀಯವಾಗಿ ವಿಫಲವಾಯಿತು. ಈ ಯೋಜನೆಯಲ್ಲಿ ಎಲ್ಲಾ ಪ್ರಾಮುಖ್ಯತೆಯನ್ನು ಕೈಗಾರಿಕೆಗಳ ಮೇಲೆ, ಅದರಲ್ಲಿಯೂ ಬೃಹತ್ ಕೈಗಾರಿಕೆಗಳ ಮೇಲೆ ನೀಡಲಾಯಿತು. ಈ

---

* ಆರ್ಗನೈಸರ್ ೨೯.೦೧.೧೯೬೨

ಅಸಮತೋಲನವನ್ನು ಮೂರನೇ ಯೋಜನೆಯಲ್ಲಿ ಹೋಗಲಾಡಿಸುವುದಾಗಿ ಭರವಸೆ ನೀಡಲಾಗಿತ್ತು. ಆದರೆ ಯೋಜನೆಯನ್ನು ಗಮನಿಸಿದರೆ ಈ ಬಾರಿಯೂ ಈ ಬಗ್ಗೆ ಅರ್ಥೈಸಿಕೊಳ್ಳುವಲ್ಲಿ ವಿಫಲವಾಗಿರುವ ಅಂಶ ಎದ್ದು ಕಾಣುತ್ತದೆ. ಇದರಿಂದ, ವ್ಯವಸಾಯ ಕ್ಷೇತ್ರವನ್ನು ಅಭಿವೃದ್ಧಿಪಡಿಸದೆ ಕೈಗಾರೀಕರಣವನ್ನು ಮುಂದುವರೆಸುತ್ತಿದ್ದೇವೆ. ಮುಂದುವರಿಯಬಹುದು.

**ವ್ಯವಸಾಯ ಕ್ಷೇತ್ರದ ಎರಡು ಸಮಸ್ಯೆಗಳು:**

ವ್ಯವಸಾಯ ರಂಗದಲ್ಲಿ ಸಮಸ್ಯೆಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು ನೆಲದ ಮೇಲಿನ ನಿಯಂತ್ರಣ ಹಾಗೂ ಇನ್ನೊಂದು ವಾಸ್ತವವಾಗಿ ವ್ಯವಸಾಯ ಚಟುವಟಿಕೆಗಳನ್ನು ಕೈಗೊಳ್ಳಲು ರೈತನಿಗೆ ಅಗತ್ಯವಾದ ಸೌಕರ್ಯಗಳು. ಈ ಎರಡೂ ಒಂದಕ್ಕೊಂದು ಪೂರಕ ಸಂಬಂಧಗಳನ್ನು ಹೊಂದಿವೆ. ಆದರೆ, ಕಳೆದ ಹದಿನೈದು ವರ್ಷಗಳಿಂದ ವಿವಿಧ ರಾಜಕೀಯ ಪಕ್ಷಗಳು ಭೂಸುಧಾರಣಾ ವಿಷಯಗಳಿಗೆ ಮಹತ್ವ ನೀಡುತ್ತಿದ್ದು ಭೂ ನಿರ್ವಹಣಾ ವಿಚಾರವನ್ನು ಕಡೆಗಣಿಸಿವೆ.

ಕೃಷಿಯೋಗ್ಯ ಭೂಮಿಯಿಂದ ಉತ್ತಮ ಆರ್ಥಿಕ ಪ್ರಗತಿ ತರಲು ಆಲೋಚಿಸದೆ ಭೂಸುಧಾರಣೆಗೆ ಒತ್ತು ನೀಡುವುದರಿಂದ ರಾಜಕೀಯ ಪಕ್ಷಗಳ ಉದ್ದೇಶ ವಿಫಲವಾಗಲಿದೆ. ಪ್ರತಿಯೊಂದು ಭೂಸುಧಾರಣೆಗಳ ಉದ್ದೇಶವೂ ಅಂತಿಮವಾಗಿ ಅತ್ಯಧಿಕ ವ್ಯವಸಾಯೋತ್ಪನ್ನದ ಉದ್ದೇಶದೊಂದಿಗೆ ಕೊನೆಗೊಳ್ಳುತ್ತದೆ. ಇತರ ಸಾಮಾಜಿಕ ಮತ್ತು ರಾಜಕೀಯ ಪಕ್ಷಗಳು ಭೂನಿರ್ವಹಣೆಗಿಂತ ಭೂಸುಧಾರಣೆ ಕುರಿತ ಪ್ರಶ್ನೆಗಳಿಗೇ ಮಹತ್ವ ನೀಡುವುದರಲ್ಲಿ ತಲ್ಲೀನವಾಗಿವೆ. ಮೂಲ ಉದ್ದೇಶಕ್ಕೆ ಧಕ್ಕೆ ತಂದು ಯಶಸ್ಸನ್ನು ಮೊಟಕುಗೊಳಿಸುತ್ತವೆ ಎನ್ನುವುದಾದಲ್ಲಿ ಇತರ ಸಾಮಾಜಿಕ ಹಾಗೂ ರಾಜಕೀಯ ಉದ್ದೇಶಗಳನ್ನು, ಅವು ಆಕರ್ಷಕವಾಗಿದ್ದರೂ ಸಹ ತರಬಾರದು.

ಗರಿಷ್ಠ ಮಟ್ಟದ ಕೃಷಿ ಚಟುವಟಿಕೆಗಳ ಮೂಲಕ ಭಾರತದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಬಹುದು ಎನ್ನುವುದು ಜನಜನಿತ. ತೀವ್ರತೆರನಾದ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಕೃಷಿಕನ ವೈಯಕ್ತಿಕ ಆಸಕ್ತಿಯ ಸಂಗಡ ಭೂಮಿಯನ್ನು ಅಭಿವೃದ್ಧಿ ಪಡಿಸಲು ಅಗತ್ಯವಾದ ಹೂಡಿಕೆಯೂ ಬೇಕು. ಭೂಮಾಲಿಕತ್ವದ ಭದ್ರತೆ ಇಲ್ಲದೆ ಇದನ್ನು ಸಾಧಿಸುವುದು ಅಸಾಧ್ಯ. ಉಳುವವನಿಗೇ ಮಾಲಿಕತ್ವವನ್ನು ನೀಡಬೇಕೆಂಬ ಎಲ್ಲಾ ಭೂ ಕಾಯ್ದೆಯ ತಿರುಳೂ ಇದೇ ಆಗಿದೆ.

ಜಮೀನ್ದಾರಿ ಮತ್ತು ಜಹಗೀರುದಾರಿ ಪ್ರದೇಶಗಳಲ್ಲಿ ಮಧ್ಯವರ್ತಿಗಳನ್ನು ಇಲ್ಲವಾಗಿಸಲಾಗಿದ್ದು, ಭೂಮಿಯನ್ನು ರಾಷ್ಟ್ರೀಕರಣಗೊಳಿಸಲಾಗಿದೆ. ಟೆನೆನ್ಸಿ ಕಾಯ್ದೆಗಳ ಮೂಲಕ ಶಾಶ್ವತ ಭೂಮಿ ನಿರ್ವಹಣೆಯ ಹಕ್ಕನ್ನು ಸರ್ಕಾರ ಉಳುವವನಿಗೆ ವರ್ಗಾಯಿಸಿದೆ.

**ಭೂ ಸುಧಾರಣೆಗಳಿಂದ ನೊಂದವರು:**

ಆದರೆ, ರೈತವಾರಿ ಪದ್ಧತಿ ಇರುವ ರಾಜ್ಯಗಳಲ್ಲಿ ಸಮಸ್ಯೆಗಳು ಇಂದಿಗೂ ಮುಂದುವರೆದಿದೆ. ಕಾನೂನಿನ ಪ್ರಕಾರ ರೈತನೇ ಭೂಮಿಯ ಒಡೆಯ. ಆದರೆ, ಅನೇಕ ಪ್ರಕರಣಗಳಲ್ಲಿ ಮಾಲೀಕ ಉಳುವವನಲ್ಲ. ಮಾಲೀಕ ಕಣ್ಣಿಗೆ ಕಾಣಿಸದ ಜಮೀನ್ದಾರನಾಗಿರುತ್ತಾನೆ. ಬಾಡಿಗೆ ವಸೂಲಿದಾರರ ವರ್ಗವೊಂದು ಅಲ್ಲಿ ಉದ್ಭವವಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಬಾಡಿಗೆಯು ದುಬಾರಿ, ಅಂದರೆ ಉತ್ಪನ್ನದ ಅರ್ಧದಷ್ಟನ್ನು ಬಾಡಿಗೆಯನ್ನಾಗಿ ನೀಡಬೇಕಾಗುತ್ತದೆ. ನ್ಯಾಯ ಸಮ್ಮತ ಬಾಡಿಗೆಯನ್ನು ನಿರ್ಧರಿಸುವ ಯತ್ನಗಳು ನಡೆಯುತ್ತಿದ್ದು ಕೆಲವೆಡೆಗಳಲ್ಲಿ ಆ ಯತ್ನಗಳು ಯಶಸ್ಸನ್ನು ಕಂಡಿವೆ. ಆದರೆ, ಇನ್ನೂ ಅನೇಕ ರಾಜ್ಯಗಳಲ್ಲಿ ಈ ಕುರಿತು ಯಾವುದೇ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ.

ಜೀವನ ನಿರ್ವಹಣೆಗಾಗಿ ನಗರಗಳಿಗೆ ವಲಸೆ ಹೋಗಿ ಅಲ್ಲಿಯೇ ನೆಲೆಸಿದ್ದರೂ ಗ್ರಾಮಗಳಿಂದ ಬರುವ ಆದಾಯವನ್ನೂ ನೆಚ್ಚಿಕೊಂಡಿರುವ ವರ್ಗಗಳನ್ನು ನೀತಿಗಳ ನೇರ ಅಡ್ಡ ಪರಿಣಾಮ ಇಂತಹ ವರ್ಗಗಳ ಮೇಲೆ ಆಗುತ್ತದೆ. ಎರಡೂ ವರ್ಗಗಳ ಅಪೇಕ್ಷೆಗಳನ್ನು ಈಡೇರಿಸುವಲ್ಲಿ ರಾಜ್ಯಗಳು ಹರಸಾಹಸ ಪಡುತ್ತಿವೆ. ಏರುತ್ತಿರುವ ಬೆಲೆಗಳು ಹಾಗೂ ಇಳಿಮುಖವಾಗುತ್ತಿರುವ ಆದಾಯದಿಂದಾಗಿ ಮಧ್ಯಮ ವರ್ಗ ತತ್ತರಿಸುತ್ತಿದೆ. ಉತ್ತಮ ಉಡುಪು ಹಾಗೂ ಶಿಕ್ಷಣದ ಅಡಿಯಲ್ಲಿ ಈ ತತ್ವಾರವನ್ನು ಮರೆಮಾಚಲು ಈ ವರ್ಗಗಳು ಹರಸಾಹಸ ಪಡುತ್ತಿವೆ.

ಇದೆಲ್ಲವೂ, ನಿಜವಾದ ಉಳುಮೆದಾರನಿಗೆ ಮಾಲಿಕತ್ವದ ಹಕ್ಕುಗಳನ್ನು ನೀಡಲು ಎಡೆ ಮಾಡಿಕೊಡುವ ಭೂ ಸುಧಾರಣೆಯನ್ನು ಮುಂದೂಡುವ ಇಲ್ಲವೇ ತಿರಸ್ಕರಿಸಲು ಬಯಸುವ ಕೆಲವು ವ್ಯಕ್ತಿಗಳಿಗೆ ಸೂಕ್ತ ಸಮರ್ಥನೆಗಳಾಗಿವೆ. ಆದರೆ, ಆ ಮೂಲಕ ತಾವು, ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಒದಗಿಸಬಲ್ಲ ಆರ್ಥಿಕ ವ್ಯವಸ್ಥೆಯಲ್ಲಿನ ಏರುಪೇರುಗಳಿಗೆ ಕಾರಣವಾಗುತ್ತಿದ್ದೇವೆ ಎನ್ನುವುದನ್ನು ಮರೆಯುತ್ತಿದ್ದಾರೆ.

ಸ್ವತಂತ್ರ ಪಕ್ಷವು ಈ ವರ್ಗದ ಭಾವನೆಗಳನ್ನು ಶೋಷಿಸುವ ಯತ್ನಗಳನ್ನು ಮಾಡುತ್ತಿದ್ದು, ಆ ಮೂಲಕ ಭೂ ಮಾಲೀಕರ ಒಲವನ್ನು ಗಳಿಸಲು ಯತ್ನಿಸುತ್ತಿದೆ. ಆದರೆ, ಭೂ ಮಾಲೀಕ ಈಗಾಗಲೇ ಭೂಮಿಯನ್ನು ಕಳೆದುಕೊಂಡಿದ್ದು, ಅದರಿಂದ ಬರುವ ಬಾಡಿಗೆಯನ್ನು ಹೊರತುಪಡಿಸಿದರೆ ನೆಲದ ಮೇಲೆ ಬೇರೆ ಯಾವುದೇ ಒಲವನ್ನೂ ಇರಿಸಿಕೊಂಡಿಲ್ಲ ಎನ್ನುವುದನ್ನು ಅವರು ಮರೆತಂತಿದೆ.

**ಸ್ವತಂತ್ರ ಮನೋಭಾವ:**

ಸ್ವತಂತ್ರ ಪಕ್ಷವು ಭೂ ಸುಧಾರಣೆಯನ್ನು ಬಲವಂತವಾಗಿ ಕಸಿದುಕೊಳ್ಳುವುದು ಎಂದು ಪರಿಗಣಿಸಿದೆ. ಕೆಲ ರಾಜ್ಯಗಳಲ್ಲಿ ಭೂಮಿಯನ್ನು ಸಾರ್ವಜನಿಕ ಆಸ್ತಿ

ಎಂದು ಪರಿಗಣಿಸಲಾಗಿದ್ದು, ಆ ಆಧಾರದ ಮೇಲೆ ಭೂಮಿಯನ್ನು ವರ್ಗಾಯಿಸಬಹುದು ಎನ್ನುವ ನಿಲುವನ್ನು ಪಕ್ಷವು ತಾಳುತ್ತಿದೆ. ತಾತ್ವಿಕ ಚರ್ಚೆಗಳಿಗೆ ಅವಕಾಶ ನೀಡದೆ ಖಾಸಗಿ ಆಸ್ತಿಯನ್ನು ವಶಪಡಿಸಿಕೊಳ್ಳುವ ಮುನ್ನ, ಸೂಕ್ತ ಪರಿಹಾರ ನೀಡಿದ ಬಳಿಕವಷ್ಟೇ ಆಸ್ತಿಯ ಮೇಲಿನ ವೈಯಕ್ತಿಕ ಹಕ್ಕುಗಳನ್ನು ವರ್ಗಾಯಿಸಿಕೊಳ್ಳಬಹುದು ಎನ್ನುವುದನ್ನು ಪಕ್ಷವು ಒಪ್ಪಿಕೊಳ್ಳಬೇಕು. ದೇಶದ ಆರ್ಥಿಕ ಅಭಿವೃದ್ಧಿಯ ಹಿತಾಸಕ್ತಿಯಿಂದ ಈ ಬಗ್ಗೆ ತಿದ್ದುಪಡಿ ಅತ್ಯಗತ್ಯವಾಗಿದೆ. ಪ್ರಾಯಃ ಸ್ವತಂತ್ರ ಪಕ್ಷವು ಈ ಹಕ್ಕನ್ನು ಬಹಿರಂಗವಾಗಿ ಆಕ್ಷೇಪಿಸುವುದಿಲ್ಲ. ಆದರೆ ನಿಸ್ಸಂದೇಹವಾಗಿಯೂ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿರುವಂತೆ 'ಪಕ್ಷವು ಭೂಮಾಲೀಕರ ಆಸ್ತಿ ಹಕ್ಕನ್ನು ಗೌರವಿಸುತ್ತದೆ. ಆತ ಸಣ್ಣ ರೈತನೇ ಆಗಿರಲಿ ಅಥವಾ ದೊಡ್ಡ ರೈತನಾಗಿರಲಿ, ಪಕ್ಷವು ಅನಿಶ್ಚಿತತೆಗಳನ್ನು ಹೋಗಲಾಡಿಸಿ, ಸೂಕ್ತ ಪ್ರೋತ್ಸಾಹಗಳನ್ನು ನೀಡುತ್ತದೆ.'

ಆ ಮೂಲಕ ಸ್ವತಂತ್ರ ಪಕ್ಷಕ್ಕೆ ಭೂಮಿಯನ್ನು ಹೊಂದುವುದರ ಮೇಲೆ ಯಾವುದೇ ಮಿತಿಯನ್ನು ಹೇರುವುದು ಬೇಕಿಲ್ಲ, ಜೊತೆಗೆ ಉಳುವವನಿಗೆ ಭೂಮಿಯ ಮೇಲಿನ ಮಾಲಿಕತ್ವದ ಹಕ್ಕುಗಳನ್ನು ನೀಡುವುದೂ ಬೇಕಾಗಿಲ್ಲ.

ಆದರೆ ಈ ವಿಚಾರದಲ್ಲಿ ಇತರೆಲ್ಲಾ ಪಕ್ಷಗಳು ಸ್ವತಂತ್ರ ಪಕ್ಷಕ್ಕಿಂತ ಭಿನ್ನವಾಗಿವೆ. ಆ ಎಲ್ಲಾ ಪಕ್ಷಗಳು ಭೂಮಿಯನ್ನು ಹೊಂದುವುದರ ಮೇಲೆ ಮಿತಿಯನ್ನು ಹೇರುವುದಕ್ಕೆ ಹಾಗೂ ಉಳುವವನಿಗೆ ಭೂಮಿಯ ಹಕ್ಕನ್ನು ನೀಡುವುದಕ್ಕೆ ಬದ್ಧವಾಗಿವೆ. ಕಾಂಗ್ರೆಸ್ ಸರ್ಕಾರಗಳು ಈಗಾಗಲೇ ಭೂಮಿತಿ ಮಸೂದೆಗಳನ್ನು ಸದನಗಳಲ್ಲಿ ಮಂಡಿಸಿವೆ. ಆದರೆ ಈ ಕಾಯ್ದೆಗಳಲ್ಲಿ ಅನೇಕ ನ್ಯೂನ್ಯತೆಗಳಿವೆ. ಕಾಂಗ್ರೆಸ್‌ಗೆ ಈ ಮಸೂದೆಗಳನ್ನು ಪಾಸು ಮಾಡಿಸಲು ಹತ್ತು ವರ್ಷಗಳೇ ಬೇಕಾಯಿತು. ಇವುಗಳನ್ನು ಜಾರಿಗೆ ತರಲು ಇನ್ನೊಂದು ದಶಕವೇ ಬೇಕಾದೀತು. ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ 'ಇದನ್ನು ಸಾಧ್ಯವಾದಷ್ಟು ಬೇಗ ಎಲ್ಲಾ ರಾಜ್ಯಗಳಲ್ಲಿ ಜಾರಿಗೆ ತರುವುದಾಗಿ' ಭರವಸೆ ನೀಡಿದೆ. ಆದರೆ ಅದನ್ನು ಜಾರಿಗೆ ತರುವ ಬಗ್ಗೆ ಯಾವುದೇ ನಿರ್ದಿಷ್ಟ ಕಾಲ ಮಿತಿಯನ್ನು ನಿಗದಿಪಡಿಸಿಲ್ಲ. ಸಹಜವಾಗಿಯೇ ಇದು, ಅನಿಶ್ಚಿತ ಸ್ಥಿತಿಯ ದ್ಯೋತಕವಾಗಿದ್ದು ವ್ಯವಸಾಯ ಕ್ಷೇತ್ರದ ಅಭಿವೃದ್ಧಿಯನ್ನು ತಡವಾಗಿಸುತ್ತಿದೆ.

**ಪಿಎಸ್‌ಪಿ:**

ಪಿಎಸ್‌ಪಿ ತನ್ನ ಪ್ರಣಾಳಿಕೆಯಲ್ಲಿ ಈ ವಿಚಾರವನ್ನು ಹೀಗೆ ವರ್ಣಿಸಿದೆ–ಭೂ ಸುಧಾರಣೆಗಳು ಅನೇಕ ನ್ಯೂನ್ಯತೆಗಳೊಂದಿಗೆ ಕೂಡಿದ್ದು ಗ್ರಾಮಗಳಿಗೆ ಅಲ್ಪ ನ್ಯಾಯವನ್ನು ಒದಗಿಸಿವೆ. ಅದನ್ನು ಪಾಸು ಮಾಡುವಲ್ಲಿ ಹಾಗೂ ಜಾರಿ ಮಾಡುವಲ್ಲಿ ಗೊಂದಲಗಳಿವೆ. ಪಿಎಸ್‌ಪಿಯು ಭೂಸುಧಾರಣೆಯನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಹೊಣೆಯನ್ನು ಜಿಲ್ಲಾ ಸಮಿತಿಗಳಿಗೆ ಒಪ್ಪಿಸಲು ಉದ್ದೇಶಿಸಿದೆ.

**ಸಿಪಿಐ:**

ಕಮ್ಯುನಿಸ್ಟ್ ಪಾರ್ಟಿ ಸಹ ಈ ವಿಚಾರದಲ್ಲಿ ಕಠಿಣ ನಿಲುವನ್ನು ಹೊಂದಿದೆ. ಇತ್ತೀಚಿನ ದಿನಗಳಲ್ಲಿ ನಡೆದ ಎಲ್ಲಾ ಭೂ ವರ್ಗಾವಣೆಗಳನ್ನು ಪುನರ್ವಿಶ್ಲೇಷಿಸಬೇಕು. ಅಲ್ಲದೆ, ನಕಲಿ ವರ್ಗಾವಣೆಗಳನ್ನು ಅನೂರ್ಜಿತಗೊಳಿಸಬೇಕು. ಪ್ರಸ್ತುತ ಜಾರಿಯಲ್ಲಿರುವ ಎಲ್ಲಾ ಭೂ ಕಾಯ್ದೆಗಳಲ್ಲಿ ಇರುವ ನ್ಯೂನ್ಯತೆಗಳನ್ನು ಹೋಗಲಾಡಿಸಬೇಕು. ವಿಶೇಷವಾಗಿ ಭೂಮಿ ಹೊಂದುವುದರ ಮೇಲಿರುವ ಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಬೇಕು. ಭೂಮಿಯನ್ನು ಬಡರೈತರು ಹಾಗೂ ಭೂ ರಹಿತ ವರ್ಗಕ್ಕೆ ಹಂಚಬೇಕು ಎಂದು ಸಿ.ಪಿ.ಐ. ಹೇಳುತ್ತಿದೆ.

**ಬಿಜೆಎಸ್**

ಜನಸಂಘವು ಭೂಸುಧಾರಣೆಗೆ ಸಂಬಂಧಿಸಿದಂತೆ ವಿಸ್ತಾರವಾದ ಹಾಗೂ ನೈಜ ಕಾರ್ಯಕ್ರಮಗಳನ್ನು ರೂಪಿಸಿದೆ. ಕೇವಲ ಘೋಷಣೆಗಳಲ್ಲಿ ಮಾತ್ರವೇ ತೊಡಗಿಸಿಕೊಳ್ಳದೆ ಜನಸಂಘವು ತನ್ನ ಭೂ ನೀತಿಯನ್ನು ಪ್ರಣಾಳಿಕೆಯಲ್ಲಿ ಈ ರೀತಿಯಾಗಿ ವ್ಯಾಖ್ಯಾನಿಸಿದೆ–ಜನಸಂಘವು ರೈತನನ್ನೇ ಭೂಮಾಲಿಕನನ್ನಾಗಿ ಮಾಡಲಿದೆ. ಎಲ್ಲಾ ನ್ಯೂನ್ಯತೆ–ಕೊರತೆಗಳನ್ನು ಹೋಗಲಾಡಿಸಿ ಇರುವ ಪ್ರಸ್ತುತ ಕಾಯ್ದೆಯನ್ನೇ ಜನಸಂಘವು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಿದೆ.

ಭಾರತೀಯ ಜನಸಂಘವು ಭೂಮಿಯ ಬಾಡಿಗೆದಾರರನ್ನು ಬಲವಂತವಾಗಿ ಹೊರಹಾಕದೆ, ಅಕ್ರಮವಾಗಿ ಹಾಗೂ ಅಸಮರ್ಪಕವಾಗಿ ಹೊರಹಾಕಿದ ಪ್ರಕರಣಗಳನ್ನು ಅನೂರ್ಜಿತಗೊಳಿಸಲಿದೆ.

ಆದರೂ ಜನಸಂಘವು ಕೆಲವು ವರ್ಗಗಳಿವೆ, ಅಂದರೆ ಆರ್ಥಿಕವಾಗಿ ಸಶಕ್ತರಲ್ಲದ ಹಾಗೂ ಕಡಿಮೆ ಭೂಮಿಯನ್ನು ಹೊಂದಿರುವವರಿಗೆ ಭೂಮಿಯನ್ನು ಗುತ್ತಿಗೆಗೆ ನೀಡುವ ಹಕ್ಕನ್ನು ನೀಡಲಿದೆ. ಜನಸಂಘದ ಪ್ರಣಾಳಿಕೆಯು–ಐದು ಎಕರೆವರೆಗಿನ ಭೂಮಿಯನ್ನು ಹೊಂದಿರುವವರಿಗೆ, ವಿಧವೆಯರಿಗೆ, ಅಂಗವಿಕಲರಿಗೆ, ಅನಾಥರಿಗೆ, ಸೈನಿಕರಿಗೆ ಮತ್ತು ದತ್ತಿ ನಿಧಿ ಮತ್ತು ಸಂಸ್ಥೆಗಳಿಗೆ ಭೂಮಿಯನ್ನು ಗುತ್ತಿಗೆಗೆ ನೀಡುವ ಹಕ್ಕನ್ನು ನೀಡಲಿದೆ.

ಇದು ನೈಜ ಸ್ಥಿತಿಯನ್ನು ಆಧರಿಸಿ ನೀಡಿದ ರಿಯಾಯಿತಿಯಾಗಿದ್ದು, ಪ್ರಣಾಳಿಕೆಯಲ್ಲಿ ಸೇರಿಸಲಾಗಿದೆ. ಹಿಡುವಳಿದಾರ ತನ್ನಲ್ಲಿರುವ ಅಲ್ಪ ಭೂಮಿಯಿಂದ ಉತ್ತಮ ಆದಾಯ ನಿರೀಕ್ಷಿಸದ ಕಾರಣ ವ್ಯವಸಾಯದಿಂದ ವಿಮುಖನಾಗುತ್ತಾನೆ. ಭೂಮಿಯನ್ನು ಗುತ್ತಿಗೆಗೆ ನೀಡುವುದನ್ನು ನಿಷೇಧಿಸಿದಲ್ಲಿ, ಸಣ್ಣ ಹಿಡುವಳಿದಾರ ನೆಪಮಾತ್ರಕ್ಕೆ ವ್ಯವಸಾಯ ಚಟುವಟಿಕೆಯನ್ನು ನಡೆಸಿದರೂ ಪೂರ್ಣ ಪ್ರಮಾಣದ

ಆಸಕ್ತಿಯನ್ನು ವ್ಯವಸಾಯದ ಮೇಲೆ ತೋರಲಾರ. ಇದು ಭೂಮಿಯ ಮೇಲಿನ ಗುತ್ತಿಗೆದಾರನ ಹಿಡಿತವನ್ನು ಕುಗ್ಗಿಸುತ್ತದೆ ಮಾತ್ರವಲ್ಲದೆ ಆತನ ಆರ್ಥಿಕ ಸ್ಥಿತಿಯನ್ನು ಕುಂಠಿತಗೊಳಿಸುತ್ತದೆ. ಹೊಸ ಕಾಯ್ದೆಯ ಬಳಿಕ ಇಂತಹ ಪ್ರಸಂಗಗಳು ಹೆಚ್ಚುತ್ತಲಿವೆ. ಆ ಕಾರಣದಿಂದಾಗಿ ಭೂಮಿಯನ್ನು ಗುತ್ತಿಗೆಗೆ ನೀಡುವ ಕುರಿತು ಇರುವ ನಿಷೇಧದಿಂದ ಸಣ್ಣ ಹಿಡುವಳಿದಾರಿಗೆ ವಿನಾಯಿತಿ ನೀಡುವುದು ಸಣ್ಣ ರೈತರ ಅಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ. ಉಳಿದಂತೆ ಇತರ ವಿನಾಯಿತಿಗಳ ಬಗ್ಗೆ ವಿವರಣೆಯ ಅಗತ್ಯವಿಲ್ಲ.

ಆದರೆ ಕೆಲವು ದಕ್ಷಿಣ ರಾಜ್ಯಗಳಲ್ಲಿ ಇಂತಹ ಭೂ ಸುಧಾರಣೆಗಳಿಂದ ದತ್ತಿ ಸಂಸ್ಥೆಗಳು ಮತ್ತು ದೇವಸ್ಥಾನಗಳು ಸಂಕಷ್ಟಕ್ಕೆ ಸಿಲುಕಿವೆ. ಸಹಜವಾಗಿಯೇ ಉಳುಮೆಗಾಗಿ ಭೂಮಿಯನ್ನು ಉಳಿಸಿಕೊಳ್ಳುವುದನ್ನು ದೇವರಿಂದ ಅಪೇಕ್ಷಿಸಲಾಗದು. ದೇವರ ಭೂಮಿಯನ್ನು ದೇವರ ಪರವಾಗಿ ಇತರರು ಉಳುಮೆ ಮಾಡುತ್ತಾರೆ. ಭೂಮಿಯನ್ನು ದೇವಸ್ಥಾನದ ಅರ್ಚಕ ವೃಂದ ಅಥವಾ ದತ್ತಿ ಸಂಸ್ಥೆಯ ವ್ಯವಸ್ಥಾಪಕ ಉಳುಮೆ ಮಾಡುವುದರ ಬದಲು ಬಾಡಿಗೆದಾರ ವ್ಯವಸಾಯ ಮಾಡುವುದು ಒಳಿತು.

**ಯಾಂತ್ರೀಕೃತ ಬೇಸಾಯ ತಡೆಗೆ ನಿರ್ಬಂಧ ಅಗತ್ಯ**

ಜನಸಂಘವು ಭೂ ಮಿತಿಯ ನಿಲುವು ತಾಳಿದೆ. ಉಪಗುತ್ತಿಗೆಯನ್ನು ನಿರ್ಬಂಧಿಸಿದ್ದೇ ಆದಲ್ಲಿ ಭೂಮಿಯನ್ನು ಹೊಂದುವ ಬಗ್ಗೆ ಮಿತಿ ಹೇರುವುದೂ ಒಳಿತು. ಇಲ್ಲದಿದ್ದಲ್ಲಿ ನಾವು ಯಾಂತ್ರೀಕೃತ ಬೇಸಾಯದ ಹೊಲಗಳನ್ನು ಹೊಂದಬೇಕಾದೀತು. ಸ್ವತಂತ್ರ ಪಕ್ಷವು ವ್ಯವಸಾಯವನ್ನು ಅಮೆರಿಕಾ ಮಾದರಿಯಲ್ಲಿ ಯಂತ್ರಗಳ ಸಹಾಯದಿಂದ ಮಾಡಬೇಕಾದ ಅಗತ್ಯತೆಯನ್ನು ಒತ್ತಿಹೇಳಿದೆ. ಆದರೆ ಭಾರತದಲ್ಲಿ ಪ್ರತಿಯೊಂದು ತುಂಡು ಭೂಮಿಯಿಂದಲೂ ಗರಿಷ್ಠ ಇಳುವರಿಯನ್ನು ಪಡೆಯಬೇಕಾಗಿದೆಯೇ ಹೊರತು ಪ್ರತಿಯೊಬ್ಬ ಕಾರ್ಮಿಕನಿಂದ ಗರಿಷ್ಠ ಮಟ್ಟದ ಉತ್ಪಾದನೆಯನ್ನು ನಿರೀಕ್ಷಿಸಬಾರದು. ಇದನ್ನು ಅವರು ಮರೆತಂತಿದೆ. ಆದ್ದರಿಂದ ಯಾಂತ್ರೀಕೃತ ಬೇಸಾಯ ನಮ್ಮ ವ್ಯವಸಾಯೋದ್ಯಮಕ್ಕೆ ಸೂಕ್ತವಲ್ಲ. ಹೊಲಗದ್ದೆ ನಿರ್ವಹಣೆಗೆ ಸಾಕಾಗುವಷ್ಟು ವಿಸ್ತೀರ್ಣಸಿರಬೇಕು. ಆ ಕಾರಣದಿಂದಾಗಿ ಭೂಮಿಯನ್ನು ಹೊಂದುವುದರ ಮೇಲೆ ಮಿತಿ ಹೇರಬೇಕಾದದ್ದು ಅನಿವಾರ್ಯ.

ಆದರೂ, ಭೂಮಿತಿ ಹೇರಿಕೆಗೆ ಸಂಬಂಧಿಸಿದಂತೆ ಸಾಮಾಜಿಕ ಮತ್ತು ರಾಜಕೀಯ ಆಲೋಚನೆಗಳನ್ನು ನಾವು ಅಗೌರವಿಸಬಾರದು, ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ದ್ವಂದತೆಯ ಭಾವನೆಯನ್ನು ಉಂಟು ಮಾಡಬಾರದು. ಭೂಮಿತಿ ಹೇರಿಕೆಯನ್ನು ಅಸಮಾನತೆಯನ್ನು ಹೋಗಲಾಡಿಸುವ ಕ್ರಮ ಎಂದು

ಸಮರ್ಥಿಸಿಕೊಳ್ಳುವ ವರ್ಗ, ತಮ್ಮ ಗ್ರಾಮೀಣ ಮತ್ತು ನಗರದಲ್ಲಿನ ಆದಾಯವನ್ನು ಕುರಿತ ತಮ್ಮ ಮತ್ತೊಂದು ನಿಲುವನ್ನು ಸಮರ್ಥಿಸಿಕೊಳ್ಳುವುದಿಲ್ಲ. ಅಂತಿಮವಾಗಿ ಸಾಮಾಜಿಕ ನ್ಯಾಯವನ್ನು ಕೃಷಿ ಆದಾಯ ತೆರಿಗೆಯನ್ನು ಹೇರುವ ಮೂಲಕ ಸಾಧಿಸಬಹುದು. ಆದರೆ, ಅದರಿಂದ ಕೃಷಿ ಉತ್ಪಾದನೆ ಕಡಿಮೆಯಾಗಲಿದೆ.

ಪ್ರಸ್ತುತ ಇರುವ ಕಾಯ್ದೆಗಳು ನ್ಯೂನ್ಯತೆಗಳಿಂದ ಕೂಡಿದ್ದು ಅದನ್ನು ಜಾರಿಗೊಳಿಸಲು ದೀರ್ಘ ಸಮಯ ಬೇಕಾಗಿದೆ ಎನ್ನುವುದನ್ನು ಮತ್ತೆ ಹೇಳಬೇಕಾಗಿಲ್ಲ. ಜನಸಂಘ ಪ್ರಣಾಳಿಕೆ ಈ ರೀತಿ ಹೇಳುತ್ತದೆ–'ಭೂಮಿತಿ ನಿರ್ಧರಿಸುವ ಕಾಯ್ದೆಯನ್ನು ಈಗಾಗಲೇ ಬಹಳಷ್ಟು ರಾಜ್ಯಗಳಲ್ಲಿ ಜಾರಿಗೆ ತರಲಾಗಿದೆ. ಆದರೆ, ಕಾಯ್ದೆಯು ತನ್ನಲ್ಲಿರುವ ನ್ಯೂನ್ಯತೆಗಳು ಹಾಗೂ ಪ್ರಸ್ತುತ ಸಚಿವರುಗಳು ಉದ್ದೇಶಪೂರ್ವಕವಾಗಿ ಅದರ ಅನುಷ್ಠಾನವನ್ನು ನಿಧಾನಗೊಳಿಸುತ್ತಿರುವುದರಿಂದ ಕಾಯ್ದೆಯು ಸೊರಗುತ್ತಿದೆ. ಸಹಜವಾಗಿಯೇ ರೈತರ ಮನದಲ್ಲಿ ಅನಿಶ್ಚಿತತೆ ಕಾಡುತ್ತಿದ್ದು ಇದರಿಂದಾಗಿ ವ್ಯವಸಾಯ ಉತ್ಪನ್ನದ ಮೇಲೆ ಅಡ್ಡ ಪರಿಣಾಮವಾಗುತ್ತಿದೆ.'

ನ್ಯೂನತೆಗಳನ್ನು ಸರಿಪಡಿಸಿ ಕಾಯ್ದೆಯನ್ನು ಒಂದು ವರ್ಷದಲ್ಲಿ ಜಾರಿಗೊಳಿಸುವುದಾಗಿ ಜನಸಂಘವು ಹೇಳಿದೆ.

ಇತರೆಲ್ಲಾ ಪಕ್ಷಗಳು ಭೂಮಿತಿ ನಿರ್ಬಂಧ ಪರ ಒಲವು ತೋರಿದರೂ ಆದಾಯವಿಲ್ಲದ ಭೂಮಿಯಿಂದ ಆರ್ಥಿಕ ಉತ್ಪನ್ನ ಪಡೆಯುವ ಸಂಬಂಧ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಬದಲಿಗೆ, ರೈತನ ಜಮೀನಿನಲ್ಲಿ ಸಹಕಾರಿ ಕೃಷಿ ಪದ್ಧತಿ ಜಾರಿಗೆ ತರುವತ್ತ ಒಲವು ತೋರುತ್ತಿವೆ.

ಮೇಲಾಗಿ, ಸಹಕಾರಿ ಕೃಷಿ ಪದ್ಧತಿಯಿಂದಾಗಿ ಕೃಷಿ ಇಳುವರಿ ಗಮನಾರ್ಹ ಪ್ರಮಾಣದಲ್ಲಿ ಕುಸಿತ ಕಾಣಲಿದೆ. ಪ್ರಸ್ತುತ ನಮ್ಮಲ್ಲಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಯಶಸ್ವಿಗೊಳಿಸುವಲ್ಲಿನ ನಿರ್ವಹಣಾ ಕೌಶಲ್ಯದ ಕೊರತೆಯಿದೆ.

ಜನಸಂಘ ಮತ್ತು ಸ್ವತಂತ್ರ ಪಕ್ಷ ಇವೆರಡೂ ಸಹಕಾರಿ ಕೃಷಿ ಪದ್ಧತಿಗೆ ವಿರೋಧ ವ್ಯಕ್ತಪಡಿಸುತ್ತಿವೆ. ಇದು ಭೂಮಿಯ ಮಾಲಿಕತ್ವ ಬದಲಾವಣೆಯಲ್ಲದೆ ಮತ್ತೇನೂ ಅಲ್ಲ. ಸಹಕಾರಿ ಕೃಷಿ ಸಂಬಂಧ ಕಾಂಗ್ರೆಸ್ ನಾಗಪುರ ಅಧಿವೇಶನದಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿದೆ. ಆದರೆ, ಇದೀಗ ಕಾಂಗ್ರೆಸ್ ಸ್ವಯಂಪ್ರೇರಿತ ಸಹಕಾರಿ ಕೃಷಿ ಪದ್ಧತಿಯ ಬಗ್ಗೆ ಮಾತನಾಡುತ್ತಿದೆ. ಆದರೆ ಒಂದೊಮ್ಮೆ ರಾಜ್ಯ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುತ್ತಿದ್ದಂತೆಯೇ, ಅದು ಮಿತಿಯನ್ನು ನಿಗದಿಪಡಿಸುತ್ತದೆ ಹಾಗೂ ಆ ಆಧಾರದಲ್ಲಿ ವಿಭಾಗಿಸುತ್ತದೆ. ಆ ಕಾರಣದಿಂದಲೇ ಒತ್ತಡ ಉಂಟಾಗುತ್ತದೆ.

ಆದರೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಈ ರೀತಿಯಾಗಿ ತಿಳಿಸಿದೆ–ಗ್ರಾಮೀಣ ಪ್ರದೇಶಗಳಾದ್ಯಂತ ಸಾಧ್ಯವಾದಲ್ಲೆಲ್ಲಾ ಸಹಕಾರಿ ಸೇವೆಗಳನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ. ಆ ಮೂಲಕ ಸಮ್ಮತ ದೊರೆತಲ್ಲಿ ಸಹಕಾರಿ ಕೃಷಿಯನ್ನು

ಜಾರಿಗೆ ತರಲು ಉದ್ದೇಶಿಸಲಾಗಿದೆ.

ಸಹಜವಾಗಿಯೇ ಕಾಂಗ್ರೆಸ್‌ಗೆ ಸಹಕಾರಿ ಕೃಷಿ ಜಮೀನನ್ನು ಯಾಂತ್ರೀಕೃತಗೊಳಿಸಬೇಕಾಗಿದೆ. ಆ ಕಾರಣದಿಂದಾಗಿಯೇ ಪ್ರಣಾಳಿಕೆ ಈ ರೀತಿಯಾಗಿ ಮುಂದುವರಿಯುತ್ತದೆ–'ಸಹಕಾರಿ ಕೃಷಿ, ಆಧುನಿಕ ಕೃಷಿ ತಂತ್ರ ಮತ್ತು ಪಶು ಸಂಗೋಪನೆಯಲ್ಲಿ ರೈತರು ಹಾಗೂ ಕಾರ್ಮಿಕರಿಗೆ ತರಬೇತಿಯ ಅಗತ್ಯವಿದೆ. ಅಂತಹ ತರಬೇತಿಯನ್ನು ದೊಡ್ಡ ಪ್ರಮಾಣದಲ್ಲಿ ನೀಡಬೇಕಾದ ಅಗತ್ಯವಿದೆ.'

ಈ ಮೂಲಕ ಸಹಕಾರಿ ಕೃಷಿ ಪದ್ಧತಿಯನ್ನು ದೊಡ್ಡ ಮಟ್ಟದಲ್ಲಿ ಸ್ವಯಂ ಆಯ್ಕೆಗೆ ಅವಕಾಶ ನೀಡದೆ, ಜಾರಿಗೆ ತರುವ ಸಲುವಾಗಿ ತರಬೇತಿಯನ್ನು ನೀಡಲಾಗುವುದು ಎಂಬ ಸೂಚನೆಯನ್ನು ಈ ಮೂಲಕ ಸ್ಪಷ್ಟವಾಗಿ ನೀಡಲಾಗುತ್ತಿದೆ.

ಪಿಎಸ್‌ಪಿ ಸಹ ಅನುಪಯುಕ್ತ ಭೂಮಿಗೆ ಪರಿಹಾರ ಎಂಬಂತೆ ರಸವತ್ತಾದ ಪರಿಹಾರವನ್ನು ಘೋಷಿಸಿದೆ. ಅಗತ್ಯ ಪ್ರೋತ್ಸಾಹ ಮತ್ತು ಸವಲತ್ತುಗಳನ್ನು ಒದಗಿಸುವ ಮೂಲಕ ಸಣ್ಣ ಪ್ರಮಾಣದ ಭೂಮಿಯನ್ನು ಹೊಂದಿರುವವರನ್ನು ಸಹಕಾರಿ ಪದ್ಧತಿಗೆ ಆಹ್ವಾನಿಸಲಾಗುವುದು. ಸವಲತ್ತುಗಳನ್ನು ಒಟ್ಟುಗೂಡಿಸಿ ಒದಗಿಸುವುದರಿಂದ ಭೂಮಿಯನ್ನು ಒಟ್ಟುಗೂಡಿಸಿ ಕೃಷಿ ಉತ್ಪಾದನೆ ಮಾಡಬಹುದು.

ಕಮ್ಯೂನಿಸ್ಟರು ಚುನಾವಣಾ ಪ್ರಣಾಳಿಕೆಯಲ್ಲಿ ಸಹಕಾರಿ ಕೃಷಿ ಪದ್ಧತಿಯ ಬಗ್ಗೆ ಏನನ್ನೂ ಪ್ರಸ್ತಾಪಿಸಿಲ್ಲ. ಅವರ ಬೆಂಬಲ ನಿಚ್ಚಳವಾಗಿದ್ದು ಈ ಸಂಬಂಧದ ಅವರ ಮೌನ ಯಾರನ್ನೂ ದಿಕ್ಕುತಪ್ಪಿಸುವಂತಿಲ್ಲ.

ಜನಸಂಘವು ಪ್ರಣಾಳಿಕೆಯಲ್ಲಿ ಸಹಕಾರಿ ಕೃಷಿಯನ್ನು ವಿರೋಧಿಸುವ ನಿಲುವನ್ನು ಪುನರುಚ್ಚರಿಸಿದೆ. ಅದು ಈ ರೀತಿ ಹೇಳಿದೆ–ಭಾರತೀಯ ಜನಸಂಘವು ಜಂಟಿ ಸಹಕಾರಿ ಕೃಷಿಯನ್ನು ಪ್ರಜಾಪ್ರಭುತ್ವ ವಿರೋಧಿ ಎಂದು ಪರಿಗಣಿಸಿದೆ. ಅಲ್ಲದೆ ಸಹಕಾರಿ ಕೃಷಿಯಿಂದ ಭೂಮಿಯಲ್ಲಿ ಹೆಚ್ಚು ಆಹಾರ ಉತ್ಪಾದನೆ ಅಸಾಧ್ಯ. ಈ ಎಲ್ಲಾ ಅಂಶಗಳು ರೈತನಿಗೆ ತನ್ನ ಜಮೀನಿನ ಮೇಲಿನ ಹಕ್ಕುಗಳನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಸರ್ಕಾರದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಯಾವುದೇ ತಾರತಮ್ಯ ಇಲ್ಲದೆ ಎಲ್ಲಾ ರೈತರಿಗೂ ನೀಡಲಾಗುತ್ತದೆ.

ನಿಮ್ಮ ಮತ–೮ (ಮುಂದುವರೆದುದು)

## ಆಹಾರ ಮತ್ತು ರೈತ : ಸರ್ಕಾರದಿಂದ ಕಡೆಗಣನೆಗೆ ಒಳಗಾಗುತ್ತಿರುವ ಬೇಸಾಯ

ಸ್ವತಂತ್ರ ಪಕ್ಷವು ಸಹಕಾರಿ ಕೃತಿಯನ್ನು ವಿರೋಧಿಸುತ್ತಿದ್ದು ಈ ರೀತಿಯಾಗಿ ಹೇಳುತ್ತದೆ–'ಸ್ವತಂತ್ರ ಪಕ್ಷವು ಭೂ ಸುಧಾರಣೆಯ ಪರ ನಿಲುವು ಹೊಂದಿದೆ. ಆದರೆ ಭೂಮಿಯನ್ನು ಬಲವಂತವಾಗಿ ಅಥವಾ ಜಂಟಿ ಸಹಕಾರಿ ಕೃಷಿ ಹೆಸರಿನಲ್ಲಿ ಸರ್ಕಾರಿ ನಿಯಂತ್ರಣಕ್ಕೊಳಪಡಿಸುವಂತಹ ಸಾಮೂಹಿಕ ಕೃಷಿಯ ಮೂಲಕ ಅದನ್ನು ವಶಪಡಿಸಿಕೊಳ್ಳಬಾರದು ಎಂಬುದು ಸ್ವತಂತ್ರ ಪಕ್ಷದ ನಿಲುವು.' ಈ ಮೂಲಕ ದೊಡ್ಡ ಭೂ ಎಸ್ಟೇಟ್‌ಗಳನ್ನು ಪ್ರೋತ್ಸಾಹಿಸುವ ಹಾಗೂ ಭೂ ಮಿತಿ ನಿರ್ಬಂಧವನ್ನು ವಿರೋಧಿಸುವ ಮೂಲಕ ದೊಡ್ಡ ಫಾರ್ಮ್‌ಗಳತ್ತ ತನ್ನ ಒಲವನ್ನು ಸೂಚಿಸುತ್ತಿದೆ.

ಈ ಮೊದಲೇ ತಿಳಿಸಿದಂತೆ ಅನುಪಯುಕ್ತ ಭೂಮಿಯನ್ನು ಆದಾಯ ಯೋಗ್ಯವನ್ನಾಗಿ ರೂಪಿಸಲು ಯಾವುದೇ ಯೋಜನೆಗಳನ್ನು ಈ ಪಕ್ಷಗಳು ಹೊಂದಿಲ್ಲ. ಆರ್ಥಿಕ ಬಂಡವಾಳದ ಸ್ವರೂಪವನ್ನು, ಭೂಮಿಯ ವಿಸ್ತಾರ ಹಾಗೂ ಅನುಸರಿಸುತ್ತಿರುವ ಕೃಷಿ ಪದ್ಧತಿಗಳು ನಿರ್ಧರಿಸುತ್ತದೆ.

ಪ್ರಸ್ತುತ ಸನ್ನಿವೇಶದಲ್ಲಿ ಉತ್ತಮ ನೀರಾವರಿ ಸೌಲಭ್ಯವನ್ನು ಹೊಂದಿರುವ ಐದು ಎಕರೆ ಭೂಮಿಯನ್ನು ಆರ್ಥಿಕ ಆಸ್ತಿ ಎಂದು ಪರಿಗಣಿಸಬೇಕು ಎನ್ನುವುದು ಭಾರತೀಯ ಜನಸಂಘದ ನಿಲುವು. ಆ ಕಾರಣದಿಂದಾಗಿ ರೈತ ಕನಿಷ್ಠ ಆ ಪ್ರಮಾಣದ ಭೂಮಿಯನ್ನಾದರೂ ಹೊಂದುವ ಸನ್ನಿವೇಶವನ್ನು ನಿರ್ಮಿಸಲು ಅದು ಯತ್ನಿಸುತ್ತದೆ.

ಆ ಕಾರಣದಿಂದಾಗಿ ವಿಭಜನೆ ಹಾಗೂ ಉಪ ವಿಭಾಗಿಸುವುದಕ್ಕೆ ತಡೆ ನೀಡಬೇಕೆಂದು ಅಭಿಪ್ರಾಯ ಪಡುತ್ತದೆ. ಭೂಮಿ ಕುರಿತಂತೆ ಟೆನೆನ್ಸಿ ಕಾಯ್ದೆ ಹಾಗೂ ಹಿಂದೂ ಉತ್ತರಾಧಿಕಾರ ಕಾಯ್ದೆಗಳಿಗೆ ತಿದ್ದುಪಡಿ ತರಬೇಕಾದ ಅಗತ್ಯವಿದೆ.

ಹೆಚ್ಚುವರಿ ಭೂಮಿಯನ್ನು ವಿತರಿಸುವ ಸಂದರ್ಭ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕಾದ ಜರೂರಿದೆ. ಭೂಮಿಯನ್ನು ಅನಗತ್ಯವಾಗಿ ವಿತರಿಸಿ ಅನುತ್ಪಾದಕಗೊಳಿಸುವ ಬದಲು, ಜಮೀನು ಮಾಲಿಕತ್ವ ನೀಡುವುದು ಉತ್ತಮ. ಈ ವಿಚಾರದಲ್ಲಿ ಐದು ಎಕರೆಗಿಂತ ಕಡಿಮೆ ವಿಸ್ತೀರ್ಣದ ಭೂಮಿ ಹೊಂದಿರುವವರಿಗೆ

ವಿನಾಯ್ತಿ ನೀಡಬೇಕೆಂಬುದಕ್ಕೆ ಇದೇ ಕಾರಣ. ಕೃಷಿಯನ್ನು ಸದೃಢಗೊಳಿಸಲು ಈ ಕ್ರಮಗಳು ಅವಶ್ಯಕ. ಆದಾಯ ತರುವ ವ್ಯವಹಾರವಾಗಿ ಪರಿವರ್ತಿಸಿದರೆ ಮಾತ್ರ ಕೃಷಿಯನ್ನು ಉಳಿಸಿಕೊಳ್ಳಲು ಸಾಧ್ಯ.

ರೈತರಿಗೆ ಸವಲತ್ತುಗಳನ್ನು ಒದಗಿಸುವ ವಿಚಾರದಲ್ಲಿ ಎಲ್ಲಾ ಪಕ್ಷಗಳೂ ಉದಾರವಾದ ನಿಲುವುಗಳನ್ನು ತಾಳಿವೆ. ಆದಾಗ್ಯೂ, ಕಾಂಗ್ರೆಸ್ ಅಭಿವೃದ್ಧಿ ಕರ ಮತ್ತು ನೀರಾವರಿ ದರ ಹೆಚ್ಚಿಸುವ ನಿಲುವು ತಾಳಿದೆ. ವ್ಯವಸಾಯದ ಮೂಲ ಅವಶ್ಯಕತೆಯಾಗಿರುವ ನೀರಾವರಿಯನ್ನು ವಾಣಿಜ್ಯ ಉದ್ದೇಶದಿಂದ ನೋಡಬಾರದು ಎನ್ನುವುದು ಭಾರತೀಯ ಜನಸಂಘದ ಆಶಯ. ನೀರಾವರಿ ದರವನ್ನು ಇಳಿಸಬೇಕು ಹಾಗೂ ಆ ಇಲಾಖೆಯನ್ನು ವ್ಯವಸಾಯ ಚಟುವಟಿಕೆಗಳಿಗೆ ಅನುಗುಣವಾಗಿ ಪುನರ್ರಚಿಸಬೇಕು ಎಂಬುದು ಜನಸಂಘದ ಅಪೇಕ್ಷೆ.

ಇತರೆಲ್ಲಾ ಪಕ್ಷಗಳೂ ಭಾರೀ ನೀರಾವರಿ ಯೋಜನೆಗಳತ್ತ ಒಲವು ತೋರಿದರೆ, ಜನಸಂಘವು ಸಣ್ಣ ನೀರಾವರಿ ಯೋಜನೆಗಳ ಅಗತ್ಯತೆಯನ್ನು ಒತ್ತಿ ಹೇಳುತ್ತಿದೆ. ಅನೇಕ ಭಾರಿ ನೀರಾವರಿ ಯೋಜನೆಗಳು ಮುಕ್ತಾಯದ ಹಂತ ಸಮೀಪಿಸುತ್ತಿದ್ದರೂ, ಸಣ್ಣ ಯೋಜನೆಗಳನ್ನು ಬೃಹತ್ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳಬೇಕಾದ ಅಗತ್ಯವಿದೆ. ಸಮರ್ಪಕ ಯೋಜನೆ ಹಾಗೂ ಪ್ರವಾಹ ತಡೆ ಉದ್ದೇಶದಿಂದ ದೇಶದಾದ್ಯಂತ ನೀರಾವರಿ ಮಾಡಬೇಕೆನ್ನುವುದು ಜನಸಂಘದ ಅಪೇಕ್ಷೆ. ಸಹಕಾರಿ ಸೇವೆಗಳ ವಿಚಾರದಲ್ಲಿ ಯಾವುದೇ ಪಕ್ಷಗಳಿಂದಲೂ ವಿರೋಧವಿಲ್ಲ. ಆದರೆ ಇದು ಅಧಿಕಾರಿಗಳ ನಿಯಂತ್ರಣದಿಂದ ಮುಕ್ತವಾಗಿರಬೇಕು ಹಾಗೂ ಸ್ವಯಂಪ್ರೇರಿತ ಪದ್ಧತಿಯ ಅನುಸಾರ ಬೆಳವಣಿಗೆ ಕಾಣಬೇಕು ಎನ್ನುತ್ತದೆ ಜನಸಂಘ.

**ಸ್ವತಂತ್ರ ಪಕ್ಷದ ಘೋಷಣಾನೀತಿ**

ಸ್ವತಂತ್ರ ಪಕ್ಷವು 'ಮಾಲಿಕತ್ವ ದಾಖಲಾತಿಗಳ ನಿರ್ವಹಣಾ ಉದ್ದೇಶಕ್ಕಾಗಿ' ಹೊರತುಪಡಿಸಿ ಇನ್ನಾವುದಕ್ಕೂ ಭೂ ತೆರಿಗೆಯನ್ನು ವಿಧಿಸುವುದನ್ನು ವಿರೋಧಿಸಿ ಘೋಷಣೆ ಹೊರಡಿಸಿದೆ. ಈ ವಿನಾಯ್ತಿಯು ಘೋಷಣೆಯಲ್ಲದೆ ಮತ್ತೇನೂ ಅಲ್ಲ ಎನ್ನುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅಲ್ಪ ಮೊತ್ತದ ಪರಿಹಾರವನ್ನು ನೀಡಿ ಭೂಮಿಯನ್ನು ವಶಪಡಿಸಿಕೊಳ್ಳುವ ಅವಕಾಶವನ್ನು ಕಾಯ್ದೆಯೇ ನೀಡಿರುವಾಗ ಸಂವಿಧಾನಕ್ಕೆ ತಿದ್ದುಪಡಿ ತಂದು ಇಷ್ಟೊಂದು ಭಾರಿ ಮೊತ್ತದ ವಿನಾಯ್ತಿ ನೀಡುವ ಕ್ರಮ ಹೇಗೆ ಸಾಧ್ಯ?

ಸ್ವತಂತ್ರ ಪಕ್ಷವು ಭೂ ಮಾಲೀಕನಿಗೆ ತನ್ನ ಭೂಮಿಯನ್ನು ಉಪ–ಬಾಡಿಗೆಗೆ ನೀಡಿ ಬಾಡಿಗೆ ಪಡೆದುಕೊಳ್ಳಲು ಅವಕಾಶ ನೀಡುತ್ತದೆಯೇ ವಿನಃ ಮಾಲೀಕರು ತೆರಿಗೆ ಪಾವತಿಸಲು ಬಯಸುತ್ತಿಲ್ಲ.

'ಭೂ ದಾಖಲೆಗಳನ್ನು ನಿರ್ವಹಿಸಲು ಹೊರತುಪಡಿಸಿ' ಭೂ ತೆರಿಗೆಯಿಂದ ವಿನಾಯ್ತಿ ನೀಡುವ ಪ್ರಸ್ತಾವನೆಯನ್ನು ಸ್ವತಂತ್ರ ಪಕ್ಷವು ಚೆನ್ನಾಗಿ ಲೆಕ್ಕ ಹಾಕಿದ್ದ ಈ ವಿಚಾರದ ಜನಕರಾದ ಜನತಾ ಪಕ್ಷದ ನಾಯಕರಿಂದ ಎತ್ತಿಕೊಂಡಿದೆ.

ಆದರೂ ಭೂಮಿಯ ಮೇಲಿನ ಬಾಡಿಗೆಯನ್ನು ಕಡಿಮೆಗೊಳಿಸಲು ಸಾಧ್ಯವಿದೆ. ಭೂಮಿಯ ಉಪ–ಬಾಡಿಗೆಗೆ ಅವಕಾಶ ಇರುವ ರೈತವಾರಿ ಪ್ರದೇಶಗಳಲ್ಲಿ ಭೂಮಿಯ ಮೇಲಿನ ಬಾಡಿಗೆಯನ್ನು ಕಡಿಮೆಗೊಳಿಸಬೇಕು. ಜಮೀನ್ದಾರಿ ಪ್ರದೇಶಗಳಲ್ಲಿ, ಸರ್ಕಾರವು ಆ ಪದ್ಧತಿಯನ್ನು ನಿಷೇಧಿಸಿದ ಬಳಿಕದಿಂದ ಬಾಡಿಗೆಯನ್ನು ಸಂಪೂರ್ಣವಾಗಿ ತಾನೇ ಪಡೆದುಕೊಳ್ಳುತ್ತಿದೆ. ಇದರಿಂದ ಬಡಪಾಯಿ ಬಾಡಿಗೆದಾರ ಯಾವುದೇ ಲಾಭವನ್ನೂ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಕೆಲವು ಪ್ರಕರಣಗಳಲ್ಲಿ ಬಾಡಿಗೆಯನ್ನು ಹೆಚ್ಚಿಸಲಾದ ಪರಿಣಾಮ ಸರ್ಕಾರದ ಆದಾಯವು ಕಳೆದ ದಶಕಕ್ಕೆ ಹೋಲಿಸಿದಾಗ ದುಪ್ಪಟ್ಟಾಗಿದೆ. ಈ ಪ್ರದೇಶಗಳಲ್ಲಿ ಬಾಡಿಗೆಯನ್ನು ಅರ್ಧಕ್ಕೆ ಇಳಿಸಬೇಕು ಹಾಗೂ ಭೂ ಕಂದಾಯದ ಸ್ವಲ್ಪ ಭಾಗವನ್ನು ಪಂಚಾಯಿತಿಗಳಿಗೆ ನೀಡಬೇಕು ಎನ್ನುತ್ತದೆ ಜನಸಂಘ.

ದೇಶದ ಯೋಜನಾ ಆಯೋಗ ಮತ್ತದರ ಸಲಹೆಗಾರರು ಭೂ ಕಂದಾಯ ಅಥವಾ ಬಾಡಿಗೆಯನ್ನು ಹೆಚ್ಚಿಸಬೇಕು ಎಂದು ಬಯಸುತ್ತಾರೆ. ಗ್ರಾಮೀಣ ಪ್ರದೇಶದ ಜನರಿಗೆ ಸೂಕ್ತ ಪ್ರಮಾಣದಲ್ಲಿ ತೆರಿಗೆಯನ್ನು ವಿಧಿಸುತ್ತಿಲ್ಲ ಆ ಕಾರಣದಿಂದಾಗಿ ಅವರು ಇನ್ನೂ ಹೆಚ್ಚುವರಿ ಹೊರೆಯನ್ನು ಹೊರಲು ಶಕ್ತರು ಎಂಬ ತಪ್ಪು ಕಲ್ಪನೆ ಅವರಲ್ಲಿದೆ. ಇದು ಆಧಾರ ರಹಿತ ಮಾತ್ರವಲ್ಲ ಅಪಾಯಕಾರಿಯೂ ಹೌದು. ಕೇವಲ ಕೈಗಾರಿಕೆಗಳ ಬೆಳವಣಿಗೆಗೆ ಮಾತ್ರವಲ್ಲದೆ ಕೃಷಿ ಅಭಿವೃದ್ಧಿಗಾಗಿಯೂ ನಮಗೆ ಬಂಡವಾಳದ ಅಗತ್ಯವಿದೆ. ಹೆಚ್ಚುವರಿ ತೆರಿಗೆ ಹೇರಿಕೆಯು ನಮ್ಮ ಆರ್ಥಿಕತೆಯ ಪ್ರಮುಖ ರಂಗಗಳಲ್ಲಿನ ಆದಾಯಕ್ಕೆ ತೊಂದರೆ ನೀಡುವುದಷ್ಟೇ ಅಲ್ಲದೆ, ಈಗಾಗಲೇ ಕೆಳ ಮಟ್ಟದ ಜೀವನ ನಡೆಸುತ್ತಿರುವ ಜನವರ್ಗವನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಲಿದೆ.

ಮಾರುಕಟ್ಟೆಯ ಪ್ರಶ್ನೆಗೂ ವ್ಯವಸಾಯಕ್ಕೂ ಹತ್ತಿರದ ಸಂಬಂಧವಿದೆ. ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವಾದಾಗ ರೈತನ ಆದಾಯವೇನೂ ಹೆಚ್ಚುತ್ತಿಲ್ಲ. ಈ ವಿಚಾರದಲ್ಲಿ ಕೃಷಿಕ ದುರ್ಬಲ ಹಂತದಲ್ಲಿರುತ್ತಾನೆ. ಸುಗ್ಗಿಯ ಸಮಯದಲ್ಲಿ ಕೊಳ್ಳುವವರು ಹಾಗೂ ಮಾರಾಟಗಾರರು ನಿಯಂತ್ರಿಸುತ್ತಾರೆ. ಆ ಕಾರಣದಿಂದಾಗಿ ಉತ್ಪಾದಕ ಮತ್ತು ಗ್ರಾಹಕ ಇಬ್ಬರೂ ನಷ್ಟ ಅನುಭವಿಸುತ್ತಾರೆ. ವಿಶಾಲ ಪ್ರಮಾಣದಲ್ಲಿ ಉಗ್ರಾಣಗಳನ್ನು ಸ್ಥಾಪಿಸುವುದರಿಂದ ಹಾಗೂ ಸಹಕಾರಿ ಸಂಘಗಳ ಸಂಘಟನೆಯಲ್ಲಿ ಇದಕ್ಕೆ ಪರಿಹಾರವಿದೆ. ಆದ್ದರಿಂದ ಜನಸಂಘವು ಪ್ರಣಾಳಿಕೆಯಲ್ಲಿ ಈ ಭರವಸೆ ನೀಡಿದೆ.

ಭಾರತೀಯ ಜನಸಂಘವು ಕೃಷಿಕನು ತನ್ನ ಉತ್ಪಾದನೆಗೆ ಉತ್ತಮ ಆದಾಯ

ಪಡೆಯುವುದರ ಕಡೆಗೆ ಗಮನ ನೀಡಲಿದೆ. ಉಗ್ರಾಣಗಳನ್ನು ದೊಡ್ಡ ಪ್ರಮಾಣದಲ್ಲಿ ಎಲ್ಲೆಡೆ ಸ್ಥಾಪಿಸಲಾಗುವುದು. ಉತ್ಪನ್ನಗಳನ್ನು ಸರ್ಕಾರವೇ ಬೇಸಾಯದ ಸಮಯದಲ್ಲಿಯೇ ಬೆಂಬಲ ಬೆಲೆಯನ್ನು ಘೋಷಿಸಿ ಪಡೆದುಕೊಳ್ಳುವ ವ್ಯವಸ್ಥೆ ಮಾಡಲಾಗುವುದು. ಬೆಂಬಲ ಬೆಲೆಯನ್ನು ನಿರ್ಧರಿಸುವಾಗ, ರೈತನಿಗೆ ಅವನ ವೆಚ್ಚವಲ್ಲದೆ, ಸ್ವಲ್ಪಮಟ್ಟಿನ ಲಾಭವಾಗುವಂತೆ ನಿರ್ಧರಿಸಲಾಗುವುದು.

ಈ ವಿಚಾರವಾಗಿ ಸರ್ಕಾರವು ನೆರವು ನೀಡುವಂತೆ ಮಾಡಲಾಗುವುದು ಎಂದು ಐ.ಎಸ್.ಪಿ. ಆಶ್ವಾಸನೆ ನೀಡಿದೆ. ಕಾಂಗ್ರೆಸ್ ಮತ್ತು ಕಮ್ಯುನಿಸ್ಟರು ಈ ವಿಚಾರದಲ್ಲಿ ಮೌನವಾಗಿದ್ದಾರೆ. ಆದರೆ ಸ್ವತಂತ್ರ ಪಕ್ಷವು ಏಕರೂಪ ದರ ವಿಚಾರವಾಗಿ ಮಾತನಾಡುತ್ತಿದೆ.

ಭಾರತದಲ್ಲಿನ ಕೃಷಿಯು ಹಸು ಮತ್ತು ಎತ್ತುಗಳನ್ನು ಅವಲಂಬಿಸಿದೆ. ಏನೇ ಆದರೂ ಈ ನೆಲದಲ್ಲಿ ಗೋವುಗಳ ಬಗ್ಗೆ ಎಲ್ಲೆಡೆ ಪೂಜ್ಯ ಭಾವನೆಯಿದೆ. ಇದು ರಾಷ್ಟ್ರೀಯ ಭಾವನೆಯ ಪ್ರತೀಕ. ಸ್ವತಂತ್ರ ಭಾರತವು ಎಂದಿನಿಂದಲೂ ಗೋಹತ್ಯೆ ಮತ್ತು ಅದಕ್ಕೆ ಸಂಬಂಧಿಸಿದ ಅಂಶಗಳನ್ನು ವಿರೋಧಿಸುತ್ತಿದೆ. ದುರದೃಷ್ಟಕರ ಸಂಗತಿಯೆಂದರೆ ಪ್ರಸ್ತುತ ಸರ್ಕಾರವು ಈ ನಿಯಮಕ್ಕೆ ವಿನಾಯ್ತಿಯನ್ನು ರೂಪಿಸುತ್ತಿದೆ.

ಭಾರತೀಯ ಸಂಘವನ್ನು ಹೊರತುಪಡಿಸಿದರೆ ಇತರೆಲ್ಲಾ ಪಕ್ಷಗಳು ಗೋ–ಹತ್ಯೆ ಮುಂದುವರಿಕೆಗೆ ಸಮ್ಮತಿಯನ್ನು ವ್ಯಕ್ತಪಡಿಸುತ್ತಿವೆ. ಗೋಹತ್ಯೆ ಮತ್ತು ಅದಕ್ಕೆ ಸಂಬಂಧಿಸಿದ ಅಂಶಗಳ ನಿಷೇಧದ ಸಂಬಂಧದಲ್ಲಿ ಸಂವಿಧಾನ ತಿದ್ದುಪಡಿ ತರುವ ವ್ಯವಸ್ಥೆಯನ್ನು ಜನಸಂಘವು ನೀಡಿದೆ.

ಆ ಮೂಲಕ, ಭಾರತೀಯ ಜನಸಂಘವು ಕೃಷಿ ಅಭಿವೃದ್ಧಿಯನ್ನು ರೈತ ಮಾಲಿಕತ್ವ ಹಾಗೂ ಸಣ್ಣ ಯೋಜನೆಗಳಿಗೆ ಮಹತ್ವ ನೀಡುವ ಮೂಲಕ ಮಾಡಲು ಒತ್ತು ನೀಡುತ್ತದೆ. ಅಲ್ಲದೆ, ಕೆಲವು ಸಂದರ್ಭ ಹೊರತುಪಡಿಸಿ ಯಾಂತ್ರೀಕೃತ ವ್ಯವಸಾಯಕ್ಕೆ ವಿರೋಧ ವ್ಯಕ್ತಪಡಿಸುತ್ತದೆ.

ಜನಸಂಘಕ್ಕೆ ಮತ ಹಾಕುವುದೆಂದರೆ ಸಣ್ಣ ರೈತರಿಗೆ, ಸಮೃದ್ಧಿಗೆ ಹಾಗೂ ಮುಕ್ತತೆಗೆ ಮತ ಹಾಕಿದಂತೆ. ಜನಸಂಘಕ್ಕೆ ಮತ ಹಾಕುವುದೆಂದರೆ ಭೂ ಒಟ್ಟುಗೂಡಿಸುವಿಕೆಗೆ ಅವಕಾಶ ನೀಡುವ ಸಹಕಾರಿ ಕೃಷಿ ಪದ್ಧತಿಯ ವಿರುದ್ಧ ಮತ ಹಾಕಿದಂತೆ.

ಸ್ವತಂತ್ರ ಪಕ್ಷಕ್ಕೆ ಮತ ಹಾಕುವುದು ಸಹಕಾರಿ ಕೃಷಿ ಪದ್ಧತಿಯ ವಿರುದ್ಧವಾಗಿದ್ದರೂ ಖಾಸಗಿ ಅಥವಾ ಜಂಟಿ ಪಾಲು ನಿರ್ವಹಣಾ ಸಂಸ್ಥೆಯ ಮೂಲಕ ಭಾರಿ ಪ್ರಮಾಣದಲ್ಲಿ ಯಾಂತ್ರೀಕೃತ ಕೃಷಿ ಪದ್ಧತಿಗೆ ಮತ ಹಾಕಿದಂತೆ, ಕಾಂಗ್ರೆಸ್, ಪಿಎಸ್‌ಪಿ, ಎಸ್ ಪಿ, ಕಮ್ಯುನಿಸ್ಟ ಅಪ್ಷೇಕೆ, ಹಿಂದೂ ಮಹಾಸಭೆಗೆ ಮತಹಾಕಿದರೆ ಸಹಕಾರಿ ಕೃಷಿ ಪದ್ಧತಿಗೆ ಮತ ಹಾಕಿದಂತೆ.

ರೈತನ ಸ್ವಾತಂತ್ರ್ಯವನ್ನು ರಕ್ಷಿಸಬೇಕಾದಲ್ಲಿ ಜನಸಂಘವನ್ನು ಬೆಂಬಲಿಸಿ ಮತ ಹಾಕಬೇಕು.

## ಉಪಾಧ್ಯಾಯರು ಉತ್ತರಿಸುತ್ತಾರೆ

**ನಾಗನಾಥನ್, ಪರಮ್ಕುಡಿ**

ಸಿ.ಪಿ.ಐ. ಅಥವಾ ಮುಸ್ಲಿಂ ಲೀಗ್ ಪಕ್ಷಗಳಲ್ಲಿ ಯಾವುದು ಅತಿ ಕೆಟ್ಟದು ಮತ್ತು ಯಾವ ಪಕ್ಷವನ್ನು ಮೊದಲು ಸೋಲಿಸಬೇಕು?

ಉಪ್ಯಾಧ್ಯಾಯ: ಪ್ಲೇಗಿನಿಂದ ಮತ್ತು ಕಾಲರಾದಿಂದಾಗಬಹುದಾದ ಸಾವುಗಳ ನಡುವೆ ಆಯ್ಕೆ ಮಾಡುವುದು ಕಷ್ಟ. ಆದರೂ, ಪರಿಚಯವಿಲ್ಲದವರಿಗಿಂತ ಪರಿಚಯವಿರುವ ಶತ್ರು ಕಡಿಮೆ ಅಪಾಯಕಾರಿ.

**ಓ. ರಾಜಗೋಪಾಲ್, ಪಾಲಘಾಟ್**

ಮೂಲಭೂತವಾಗಿ ಪಕ್ಷಗಳು (ಬಹುಶಃ ಭಾರತೀಯ ಜನ ಸಂಘ ಎಂದು ಅರ್ಥ) ಭಾರತವನ್ನು ೨೦೦ ವರ್ಷಗಳಷ್ಟು ಹಿಂದಕ್ಕೆ ಕರೆದೊಯ್ಯುತ್ತಾ, ವಿದೇಶಿ ಆಕ್ರಮಣಕಾರರಿಗೆ ಸುಲಭದ ತುತ್ತಾಗುವಂತಹ ಒಂದು ದುರ್ಬಲ ದೇಶವನ್ನಾಗಿ ಮಾಡಿವೆ ಎಂದು ನೆಹರುರವರು ಪಾಟ್ನಾ ಕಾಂಗ್ರೆಸ್ ಸಭೆಯಲ್ಲಿ ಟೀಕಿಸಿದ್ದಾರೆ. ಇದಕ್ಕೆ ನಿಮ್ಮ ಉತ್ತರವೇನು? ನಮ್ಮ ಸಂಸ್ಕೃತಿಯು ಉತ್ತುಂಗ ಮಟ್ಟದಲ್ಲಿದ್ದಾಗಲೂ ವಿದೇಶಿ ಧಾಳಿಯ ಸವಾಲನ್ನು ಎದುರಿಸಲು ಬಲಿಷ್ಠವಾದ ಸಂಘಟಿತ ದೇಶವಾಗಿರಲಿಲ್ಲ. ನಮ್ಮ ಸಂಸ್ಕೃತಿ ಅಂತಹ ಸ್ಥಿತಿ ತಲುಪದಿರಲು ಕಾರಣವೇನು? ದಯಮಾಡಿ ವಿವರಿಸಿ.

ಉಪಾಧ್ಯಾಯ: ಇಡೀ ಪ್ರಪಂಚದಲ್ಲಿ ಸೋಲುಗಳನ್ನು ಅನುಭವಿಸದ ರಾಷ್ಟ್ರಗಳೇ ಇಲ್ಲ. ಒಂದು ದೇಶದ ಪೌರುಷ ತನ್ನನ್ನು ಮರುಸಂಘಟನೆಗೊಳಿಸುವಲ್ಲಿ ಮತ್ತು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವುದರಲ್ಲಿ ಇರುತ್ತದೆ. ಇಡೀ ಪ್ರಪಂಚದಲ್ಲಿ ನಾವು ಎದುರಿಸಿದಷ್ಟು ದಾಳಿಗಳನ್ನು ಎದುರಿಸಿದವರಿಲ್ಲವೆಂದು ನಾವು ಹೆಮ್ಮೆಯಿಂದ ಹೇಳಬಹುದು. ಆದರೆ ನಾವು ದಾಳಿಗಳನ್ನು ಎದುರಿಸಿ ಹಿಮ್ಮೆಟ್ಟಿಸಲಿಲ್ಲವೆಂದು ಹೇಳುವುದು ಸರಿಯಲ್ಲ. ವಾಸ್ತವವಾಗಿ ಇತ್ತೀಚೆಗಿನ ಒಂದು ಸಾವಿರ ವರ್ಷಗಳನ್ನು ಬಿಟ್ಟರೆ ಇತಿಹಾಸದುದ್ದಕ್ಕೂ ನಾವು ಸ್ವತಂತ್ರ ಅಸ್ತಿತ್ವವನ್ನು ಹೊಂದಿದ್ದೇವೆ. ಆ ಅವಧಿಯಲ್ಲೂ ಸಹ ಭಾರತ ತನ್ನನ್ನು ಗುಲಾಮಗಿರಿಗೆ ಅರ್ಪಿಸಿಕೊಳ್ಳಲಿಲ್ಲ ಹಾಗೂ ವಿದೇಶಿ ದೊರೆಗಳ ವಿರುದ್ಧ ಎಡೆಬಿಡದೆ ಉಗ್ರ ಹೋರಾಟ ಮುಂದುವರೆದಿತ್ತು.

---

* ಮೂಲ ಆಕರ : ಆರ್ಗನೈಸರ್, ಗಣರಾಜ್ಯ ದಿನದ ವಿಶೇಷಾಂಕ, ೧೯೬೨ರ ಜನವರಿ. ಪುಟ ೨೦–೨೩ (ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವಿಷಯಗಳಲ್ಲಿ ಆಸಕ್ತರಾದ ಓದುಗರ ಪ್ರಶ್ನೆಗಳಿಗೆ ಪಂ. ದೀನದಯಾಳ್‌ರು ನೀಡಿದ ಉತ್ತರಗಳಿವು–ಸಂ.)

**ಮದನ್‌ಲಾಲ್ ಧಿಂಗ್ರಾರಂತಹವರ ಪರಂಪರೆ ಎಲ್ಲಿಯವರೆಗೆ ಮುಂದುವರೆಯುತ್ತಿತ್ತೋ, ಅಲ್ಲಿಯವರೆಗೆ ಜಲಿಯನ್ ವಾಲಾಬಾಗ್ ನಮ್ಮ ದೌರ್ಬಲ್ಯವನ್ನು ಖಂಡಿತ ಪ್ರತಿಬಿಂಬಿಸಲಿಲ್ಲ.**

ನಾವು ದೇಶವನ್ನು ಎರಡು ನೂರು ವರ್ಷಗಳಷ್ಟು ಹಿಂದಕ್ಕೆ ಕರೆದೊಯ್ಯಲು ಬಯಸುತ್ತೇವೆ ಎಂದು ಪಂಡಿತ್ ನೆಹರುರವರು ಹೇಳಿರುವುದು ತಪ್ಪು. ವಾಸ್ತವವಾಗಿ ನಾವು ದೇಶವನ್ನು ಇನ್ನೂ ಸಾವಿರಾರು ವರ್ಷಗಳಷ್ಟು ಹಿಂದಕ್ಕೆ ಕರೆದೊಯ್ಯಲು ಬಯಸುತ್ತೇವೆ. ನೆಹರುರವರು ಭಾವಿಸಿರುವಂತೆ ನಮಗೆ ನಮ್ಮ ಇತಿಹಾಸವು ಭಾರವಲ್ಲ. ಈ ಹೊರೆಯನ್ನು ನಾವು ಹೊತ್ತೊಯ್ಯಬಹುದು, ಅದಕ್ಕಿಂತ ಮಿಗಿಲಾಗಿ ಈ ಹೊರೆ ದೇಶದ ಆಹ್ಲಾದಕರ ಮತ್ತು ಸನ್ನಡತೆಯ ಸ್ಮರಣೆಯಾಗಿದೆ.

ಆಕ್ರಮಣಕಾರನನ್ನು ಆಕ್ರಮಣಕಾರನೆಂದು ಕರೆಯಬಹುದಾಗಿದ್ದ ಮತ್ತು ಶತ್ರುಗಳನ್ನು ಹಿಮ್ಮೆಟ್ಟಿಸುವ ಪರಮ ತ್ಯಾಗಕ್ಕಾಗಿ ನಮ್ಮನ್ನು ನಾವು ತಯಾರು ಮಾಡಿಕೊಳ್ಳುತ್ತಿದ್ದ ಆ ಹಿಂದಿನ ದಿನಗಳು ನಿಜವಾಗಿಯೂ ಉತ್ತಮವಾಗಿದ್ದವು. ನಾವು ಆ ಸಂಪ್ರದಾಯವನ್ನು ಮರೆಯಬೇಕೆಂದು ಪಂಡಿತ್ ನೆಹರು ಬಯಸುತ್ತಾರೆ. ಭಾರತವನ್ನು ಜೋರಾವರ್ ಸಿಂಹರ ದಿನಗಳಿಗೆ ಕೊಂಡೊಯ್ದರೆ ಹಿಮಾಲಯದ ಚಳಿಗೆ ಹೆದರುವ ರಕ್ಷಣಾ ಮಂತ್ರಿಯನ್ನು ಇರಿಸಿಕೊಳ್ಳಲು ಪಂಡಿತ್ ನೆಹರುರವರಿಗೆ ಕಷ್ಟವಾಗಬಹುದು. ನಾವು ಹರಿಸಿಂಗ್ ನಲ್ವರ ದಿನಗಳಿಗೆ ಮರಳಿದರೆ, ವಿಭಜನೆಯ ನಂತರವೂ ಉಜ್ವಲ ಭಾರತದ ಬಗ್ಗೆ ಪಂಡಿತ್ ನೆಹರುರವರು ಹೇಗೆ ಬಡಾಯಿ ಕೊಚ್ಚಿಕೊಳ್ಳಬಲ್ಲರು? ಪಂಡಿತ್ ನೆಹರುರವರಿಗೆ ಇತಿಹಾಸವು ಯಾತನೆಯಾಗಿರಬಹುದು, ನಮಗೆ ಅಷ್ಟು ಅಲ್ಲ.

ಪ್ರಶ್ನೆ : ಇದು ಗಮನಾರ್ಹ ಸಂಗತಿಯಲ್ಲವೇನಂದಲ್ಲ ಆದರೆ, ಮುಂಬರುವ ಚುನಾವಣೆಯ ಯಾವುದಾದರೂ ಸ್ಥಾನಗಳಿಗೆ ಬಿ.ಜೆ.ಎಸ್.ನಿಂದ ಮುಸ್ಲಿಂ ಅಥವ ಕ್ರಿಶ್ಚಿಯನ್ ಅಭ್ಯರ್ಥಿಯನ್ನು ಗೊತ್ತುಪಡಿಸಿದ್ದೀರಾ?

ಉಪಾಧ್ಯಾಯ : ನಾವು ಯಾವುದೇ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಅಭ್ಯರ್ಥಿಯನ್ನು ಗೊತ್ತುಪಡಿಸಿಲ್ಲ. ನಮ್ಮ ಎಲ್ಲಾ ಅಭ್ಯರ್ಥಿಗಳು ಜನ ಸಂಘದ ಅಭ್ಯರ್ಥಿಗಳು. ಅವರುಗಳಲ್ಲಿ ಕೆಲವರು ಈ ರೀತಿಯ ನಂಬಿಕೆಯನ್ನು ಹೊಂದಿರಬಹುದು. ಅಭ್ಯರ್ಥಿಗಳ ಮತೀಯ ಗುರುತಿನ ಕುರಿತು ನಾವೇನೂ ತಲೆಕೆಡಿಸಿಕೊಂಡಿಲ್ಲ.

**ಎಂ.ಎನ್.ವೆಂಕಟೇಶ್ವರನ್, ಒಲವಕ್ಕೊರ್**

ಪ್ರಶ್ನೆ : ಭಾರತೀಯ ಜನ ಸಂಘದ ನಿಯಮದಡಿ ಹಿಂದೂ ಸಂಸ್ಕೃತಿಯನ್ನು ಪುನರ್ ಸ್ಥಾಪಿಸಿದಾಗ ಇತರೆ ರಿಲಿಜನ್‌ಗಳಾದ ಕ್ರೈಸ್ತ ಮತ್ತು ಇಸ್ಲಾಂಗಳಿಗೂ ಹಿಂದೂಇಸಂಗೆ ನೀಡಿದಷ್ಟೆ ಸಮಾನ ಸ್ಥಾನಮಾನ ನೀಡಲಾಗುತ್ತದೆಯೇ?

ಉಪಾಧ್ಯಾಯ : ಹಿಂದೂಇಸಂ ಒಂದು ರಿಲಿಜನ್ ಅಲ್ಲ. ಅದು ರಿಲಿಜನ್‌ಗಳ ಒಕ್ಕೂಟ. ಕ್ರೈಸ್ತ ರಿಲಿಜನ್ ಮತ್ತು ಇಸ್ಲಾಂ ರಿಲಿಜನಗಳು ಹಿಂದೂಇಸಂನ ಇತರ ಪಂಥಗಳೊಂದಿಗೆ ಮುಂದುವರೆಯುವುದರಿಂದ ಯಾವುದೇ ಅಪಾಯವಿಲ್ಲ. ವಾಸ್ತವವಾಗಿ, ಹಿಂದೂಇಸಂ ನಮ್ಮ ರಾಷ್ಟ್ರೀಯ ಜೀವನದ ಒಂದು ಪ್ರಬಲವಾದ ಚಿಹ್ನೆಯಾಗಿರುವವರೆಗೆ ಮಾತ್ರ ಅವು ಅಸ್ತಿತ್ವದಲ್ಲಿರಬಹುದು. ಇಲ್ಲದಿದ್ದರೆ ಅವರೆಲ್ಲ ಕ್ರುಸೇಹಿನ ಅಥವ ಸ್ಪೇನಿನವರ ಇತಿಹಾಸವನ್ನು ಮರುಕಳಿಸಬಹುದು. ಏನೆ ಆಗಲಿ, ಅವರ ಅನುಯಾಯಿಗಳು ಪ್ರತ್ಯೇಕತಾ ಮನೋಭಾವ ಅಥವಾ ದೇಶಾತೀತ ನಿಷ್ಠಾವಂತಿಕೆಯನ್ನು ಪ್ರೋತ್ಸಾಯಿಸಬಾರದು. ರಾಷ್ಟ್ರೀಯ ಪ್ರವಾಹದೊಳಗೆ ಅವರೆಲ್ಲ ಒಂದಾಗಬೇಕು.

**ರಾಜ್ ಸಿಂಘಾನಿ ಚಂದರ್ ಆರ್, ಉಲ್ಹಾಸ್ ನಗರ್**

ಪ್ರಶ್ನೆ : ಗ್ರಾಮೀಣ ಸಮಸ್ಯೆಗಳಿಗೆ ವಿಶೇಷ ಗಮನ ನೀಡಲಾಗುವುದು ಎಂದು ಕಾಂಗ್ರೆಸಿನ ಚುನಾವಣಾ ಪ್ರಣಾಳಿಕೆ ಹೇಳುತ್ತದೆ. ನೀವು ಏನು ಹೇಳುವಿರಿ?

ಉಪಾಧ್ಯಾಯ : ನಮಗೆ ಗ್ರಾಮೀಣ ಭಾರತವೇ ನಿಜವಾದ ಭಾರತ. ಪಾಶ್ಚಾತ್ಯ ಪ್ರವೃತ್ತಿಯ ನಗರೀಕರಣವನ್ನು ನಾವು ಇಷ್ಟಪಡುವುದಿಲ್ಲ. ಹಳ್ಳಿಗಳಲ್ಲಿ ಹಿಂದೆ ಇದ್ದ ವೈಭವ ಮತ್ತು ಸಮೃದ್ಧತೆಯನ್ನು ಮತ್ತದೇ ಪೂರ್ವಸ್ಥಿತಿಗೆ ನಾವು ತರಬೇಕು.

ಪ್ರಶ್ನೆ : ನಿಮ್ಮ ಅಭಿಪ್ರಾಯದ ಪ್ರಕಾರ ಅಖಂಡ ಭಾರತ ಎಂಬ ಬಿ.ಜೆ.ಎಸ್.ನ ಮೂಲ ತತ್ತ್ವವನ್ನು ಪಂಡಿತ್ ನೆಹರುರವರು ಒಪ್ಪದಂತೆ ತಡೆದದ್ದು ಯಾವುದು?

ಉಪಾಧ್ಯಾಯ : ಜೂನ್, ೩ ೧೯೪೭ರಂದು ನೆಹರುರವರು ವಿಭಜನೆಗೆ ಒಪ್ಪಿರಬೇಕಾದರೆ ಹೇಗೆ ತಾನೆ ಅಖಂಡ ಭಾರತವನ್ನು ಅವರು ಒಪ್ಪಲು ಸಾಧ್ಯ? ಒಂದೇ ತತ್ವವನ್ನು ಒಪ್ಪುವುದು ಮತ್ತು ಒಪ್ಪದಿರುವುದು ಎರಡೂ ಸಾಧ್ಯವಿಲ್ಲ. ಮತ್ತು ಹಿಮಾಲಯದಂತಹ ಪ್ರಮಾದವನ್ನು ಒಪ್ಪಿಕೊಳ್ಳಲು ಹಿಮಾಲಯದಷ್ಟೇ ಹಿರಿಮೆಯ ಅಗತ್ಯವಿದೆ.

**ಬಿ.ಎನ್.ಗುಪ್ತಾ, ಕಾನ್ಪುರ**

ಪ್ರಶ್ನೆ : ರಾಮ ಮತ್ತು ಕೃಷ್ಣರ ಈ ನಾಡು ಏಕೆ ಇಂದು ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿದೆ?

ಏಕೆಂದರೆ ಜನರು ರಾಮ ಮತ್ತು ಕೃಷ್ಣರನ್ನು ಮರೆಯುತ್ತಿದ್ದಾರೆ ಮತ್ತು ಅವರನ್ನು ಸ್ಮರಿಸುವವರು ಕೂಡ ತಮ್ಮ ದೌರ್ಬಲ್ಯಗಳ ಹೊರತಾಗಿಯೂ ಮೋಕ್ಷದೆಡೆಗೆ ಕೊಂಡೊಯ್ಯುವ ದೇವರು ಎಂದಷ್ಟೆ ನೆನೆಸಿಕೊಂಡಿದ್ದಾರೆ.

ಪ್ರಶ್ನೆ : ಭಾರತ ಸರ್ಕಾರವು ವೀರ ಸಾವರ್ಕರ್‌ರಿಗೆ ಏಕೆ ತಕ್ಕ ಗೌರವ ನೀಡಲಿಲ್ಲ?

ತಮ್ಮ ತ್ಯಾಗವನ್ನು ನಗದೀಕರಿಸಿಕೊಂಡ ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯಿಂದ ಸಾವರ್ಕರನ್ನು ಕೈಬಿಟ್ಟು ಸರ್ಕಾರ ಈಗಾಗಲೇ ಅವರಿಗೆ ಗೌರವ ತೋರಿದೆ. ಅವರೊಬ್ಬ ಕ್ರಾಂತಿಕಾರಿಯೇ ಹೊರತು ಹಣಕ್ಕಾಸೆ ಪಡುವವರಲ್ಲ.

**ಶಿವಭಗವಾನ್ ತೋಶ್ನಿವಾಲ್, ಕಲ್ಕತ್ತ**

ಪ್ರಶ್ನೆ : ಜನಸಂಘ ಅಧಿಕಾರ ಪಡೆದಲ್ಲಿ ಇದರ ಸಂಸದರು ಆದರ್ಶಮಯ ಜೀವನ ನಡೆಸುವರು ಎಂಬುದಕ್ಕೆ ಮತ್ತು ಇಂದು ಅಧಿಕಾರದ ಚುಕ್ಕಾಣಿಯಲ್ಲಿರುವವರಿಗಿಂತ ಉತ್ತಮವಾಗಿ ವರ್ತಿಸುತ್ತಾರೆ ಎಂಬುದಕ್ಕೆ ಭರವಸೆ ಏನು?

ಉಪಾಧ್ಯಾಯ : ಹಿಂದಿಯಲ್ಲಿ ಶಕ್ ಕಿ ದವಾ ಹಕೀಂ ಲುಕಮಾನ್ ಕೆ ಪಾಸ್ ಭೀನಹೀ ಪೈಂ (ಅನುಮಾನಕ್ಕೆ ಔಷಧಿಯು ವೈದ್ಯರ ಬಳಿಯೂ ಇಲ್ಲ) ಸಂದೇಹಿಯನ್ನು ಯಾರೂ ಗುಣಪಡಿಸಲಾರರು. ನಂಬಿಕೆಯಿರಲಿ, ಸಿನಿಕರಾಗಬೇಡಿ.

ಪ್ರಶ್ನೆ : ಚುನಾವಣೆಯಲ್ಲಿ ಐವತ್ತು ಸಾವಿರ ರೂಪಾಯಿ ವೆಚ್ಚ ಮಾಡಲು ತಯಾರಿರುವ ಜನ ಸಂಘದ ಅಭ್ಯರ್ಥಿ ಸಂಸತ್ತಿನ ಸದಸ್ಯನಾಗಿ ನಿಸ್ವಾರ್ಥ ಮನೋಭಾವದಿಂದ ಜನರ ಸೇವೆ ಮಾಡುವ ಒಂದೇ ಆಶಯ ಇಟ್ಟುಕೊಂಡಿರುತ್ತಾನೆಂದು ನಿಮಗನಿಸುತ್ತದೆಯೇ?

ಉಪಾಧ್ಯಾಯ : ಯಾವುದೇ ಜನಸಂಘದ ಅಭ್ಯರ್ಥಿ ಚುನಾವಣೆಗಾಗಿ ಐವತ್ತು ಸಾವಿರ ರೂಪಾಯಿ ವೆಚ್ಚ ಮಾಡಲು ಶಕ್ತನಾಗಿದ್ದಾನೆಂದು ಯಾರು ನಿಮಗೆ ಹೇಳಿದ್ದು? ಹಾಗಾದರೆ, ಆಳವಾದ ಆದರ್ಶಗಳನ್ನು ಇಟ್ಟುಕೊಂಡಿರುವವರು ಇದ್ದಾರೆ ಎಂಬುದನ್ನು ನೀವು ಏಕೆ ಮರೆಯಬೇಕು. ತಾಯ್ನಾಡಿನ ಸೇವೆಗಾಗಿ ತನ್ನ ಶ್ರೀಮಂತಿಕೆಯನ್ನೆಲ್ಲ ಧಾರೆಯೆರೆದು ಕೊಟ್ಟ ಭಾಮಷಾಹನಿಗೆ ಸಿಕ್ಕಿದ್ದೇನು? ಹಣಕ್ಕಿಂತಲೂ ಮಿಗಿಲಾದ ಸಂಗತಿಗಳು ಬಹಳಷ್ಟಿವೆ.

ಪ್ರಶ್ನೆ : ಚುನಾವಣಾ ಪ್ರಣಾಳಿಕೆಗಳನ್ನು ಓದುವ ಗೋಜಿಗೆ ಹೋಗದ ಶೇಕಡಾ ೯೦ರಷ್ಟು ಮತದಾರರಿರುವಾಗ ಮತ್ತು ಸಾಮಾನ್ಯವಾಗಿ ವೈಯಕ್ತಿಕ ಭೇಟಿಯಿಂದ ಅಥವಾ ಪೂರ್ವಾಗ್ರಹ ಪೀಡಿತ ಕಲ್ಪನೆಗಳಿಂದ ಮತ ನೀಡುವ ಈ ದೇಶದಲ್ಲಿ ಪ್ರಣಾಳಿಕೆಗಳನ್ನು ಪ್ರಕಟಿಸುವುದರಿಂದ ಉಪಯೋಗವಿದೆ ಎಂದು ನಿಮಗನಿಸುತ್ತದೆಯೇ?

ಉಪಾಧ್ಯಾಯ : ಅದು ಇಂದಿನ ಪರಿಸ್ಥಿತಿಯಾಗಿರಬಹುದು. ಆದರೆ, ಪ್ರಣಾಳಿಕೆಗಳನ್ನು ಪ್ರಕಟಿಸಿದೆ ಇದ್ದಲ್ಲಿ ಮುಂಬರುವ ಎಲ್ಲಾ ಸಮಯದಲ್ಲೂ ಆ ರೀತಿಯಲ್ಲೆ ಮತ ನೀಡುವುದನ್ನು ಮುಂದುವರೆಸುತ್ತಾರೆ. ನಾವು ಮತದಾನದ ಈ ವರ್ತನೆಯನ್ನು ಬದಲಾಯಿಸಬೇಕು.

ಪ್ರಶ್ನೆ : ಪಾಟ್ನಾ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ನಡೆದ ಗಲಾಟೆಗಳಿಗೆ ವಿರೋಧ ಪಕ್ಷಗಳ ಒಳಸಂಚೇ ಕಾರಣ ಎಂಬ ಪಂಡಿತ್ ನೆಹರುರವರ ಹೇಳಿಕೆಯನ್ನು ಒಪ್ಪುವಿರಾ?

ಉಪಾಧ್ಯಾಯ : ಇದು ಒಪ್ಪುವ ಪ್ರಶ್ನೆಯಲ್ಲ. ಆದರೆ ವಾಸ್ತವಕ್ಕೆ ಸಂಬಂದಪಟ್ಟ ಪ್ರಶ್ನೆ. ದಯಮಾಡಿ ೧೫-೦೧-೬೨ರ ಆರ್ಗನೈಸರ್ (ಪತ್ರಿಕೆಯ) ವರದಿಯನ್ನು ಪರಿಶೀಲಿಸಿ.

**ಮಧುಕರ್ ಮೋದಕ್, ಬಾಂಬೆ**

ಆಚಾರ್ಯ ಕೃಪಲಾನಿಯವರ ತಮ್ಮ ಚುನಾವಣಾ ಪ್ರಚಾರದ ಕೆಲವು ಸಭೆಗಳನ್ನು ಉದ್ದೇಶಿಸಿ ಮಾಡಿದ ಭಾಷಣಗಳಲ್ಲಿ ನಾನು ಭಾಗವಹಿಸಿದ್ದೆ. ಆಚಾರ್ಯರು ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದಕ್ಕೆ ಕಾರಣಗಳನ್ನು ವಿವರಿಸುತ್ತ ಒಂದು ಅಂಶವನ್ನು ಒತ್ತಿ ಹೇಳಿದರು. ಈ ಚುನಾವಣೆಯು ಎರಡು ತತ್ವಗಳ ನಡುವಿನ ಯುದ್ಧ, ಅವುಗಳೆಂದರೆ– ಕಮ್ಯುನಿಸಂ ಮತ್ತು ಗಾಂಧಿವಾದ. ಜನರಿಗೆ ಕಮ್ಯುನಿಸಂ ಬೇಕಿದ್ದರೆ ಕೃಷ್ಣ ಮೆನನ್‌ರವರಿಗೆ ಮತ ನೀಡಬೇಕು ಅಥವಾ ಗಾಂಧಿವಾದ ಬೇಕಿದ್ದರೆ ನನಗೆ ಮತ ನೀಡಬೇಕು ಎಂದರು.

ಈಗ ಬಿ.ಜೆ.ಎಸ್. ಆಚಾರ್ಯರರ ಪರ ಸಕ್ರಿಯವಾಗಿ ಪ್ರಚಾರ ಮಾಡುತ್ತಿರುವುದು ಸ್ಪಷ್ಟವಾಗಿದೆ. ಹಾಗಾಗಿ ಬಿ.ಜೆ.ಎಸ್.ಗೆ ಗಾಂಧಿ ಸಿದ್ಧಾಂತದ ಮೇಲೆ ನಂಬಿಕೆ ಇದೆ ಎಂದುಕೊಳ್ಳಬಹುದೆ? ಇಲ್ಲ ಇದು ಕಡಿಮೆ ಕೇಡಿನ ಆಯ್ಕೆಯೇ? ಎರಡನೆಯದೇ ಹೌದಾದರೆ, ಚುನಾವಣಾ ಕ್ಷೇತ್ರಗಳಲ್ಲಿ ಒಬ್ಬ ಕೇಂದ್ರ ಮಂತ್ರಿಯ ವಿರುದ್ಧ ಪ್ರತಿಸ್ಪರ್ಧಿಯಾಗಿ ಕಣಕ್ಕಿಳಿಯಲಿರುವ ಕೆಲವು ಸ್ವತಂತ್ರ ಅಭ್ಯರ್ಥಿಗಳು ಮತ್ತು ಬಿ.ಜೆ.ಎಸ್. ತನ್ನ ಅಭ್ಯರ್ಥಿಗಳನ್ನು ಹೊಂದಿಲ್ಲದ ಕ್ಷೇತ್ರಗಳಲ್ಲಿ ಇದೇ ಸಿದ್ಧಾಂತವನ್ನು ಪ್ರಯೋಗಿಸಬಾರದೇಕೆ?

ಇರುವುದು ಒಬ್ಬರೇ ಕೃಷ್ಣ ಮೆನನ್ ಮತ್ತು ಒಬ್ಬರೇ ಕೃಪಲಾನಿ.

**ಆದಿತ್ಯ ಜ್ಯೋತಿ ರಾಯ್, ಕಲ್ಕತ್ತ**

ಕೆಲವು ದಿನಗಳ ಹಿಂದೆ ಕಲ್ಕತ್ತ ಮೈದಾನದಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಭಾರತ ಸರ್ಕಾರದ ಆರ್ಥಿಕ ನೀತಿಯನ್ನು ವಿಮರ್ಶಿಸುತ್ತ ಬೃಹತ್ ಅಥವಾ ಪ್ರಧಾನ ಕೈಗಾರಿಕೆಗಳ ಮೇಲೆ ಒತ್ತಡ ಹೇರುವುದು ವಿವೇಕದಿಂದ ಕೂಡಿದ್ದಲ್ಲ ಎಂದಿರಿ. ಸಾಲ, ಹಣಕಾಸಿನ ನೆರವು ಇತ್ಯಾದಿಗಳಿಗಾಗಿ ನಾವು ಹೆಚ್ಚಾಗಿ ಬೇರೆ ರಾಷ್ಟ್ರಗಳ ಮೇಲೆ ಅವಲಂಬಿತರಾಗಿರುವುದರಿಂದ ಉಪಭೋಗಿ ಕೈಗಾರಿಕೆಗಳಿಗೆ ಅತಿ ಹೆಚ್ಚಿನ ಪ್ರಾಧಾನ್ಯತೆ ನೀಡುವುದನ್ನು ಗಣನೆಗೆ ತೆಗೆದುಕೊಂಡು ಕೈಗಾರಿಕಾ

ನೀತಿಯನ್ನು ರೂಪಿಸುವುದು ಬುದ್ಧಿವಂತಿಕೆ ಎಂದು ನೀವು ಭಾವಿಸಿದ್ದೀರಿ. ನೀವು ಗಮನಿಸಿರುವಂತೆ ಪ್ರತಿ ಕ್ಷಣಕ್ಕೂ ಪ್ರಪಂಚದ ಸನ್ನಿವೇಶ ಬದಲಾಗುತ್ತಿದೆ, ಆದುದರಿಂದ ಬೇರೆ ದೇಶಗಳನ್ನು ಅತಿ ಕಡಿಮೆ ಅವಲಂಬಿಸುವಂತೆ ನಮ್ಮ ಅರ್ಥ ವ್ಯವಸ್ಥೆಯನ್ನು ಯೋಜಿಸುವುದು ಸರಿ ಎಂಬುದು ನಿಮ್ಮ ಅಭಿಪ್ರಾಯವೆನ್ನಿಸುತ್ತದೆ.

ನೀವು ಹೇಳಿದಂತೆ ಬೃಹತ್ ಕೈಗಾರಿಕೆಗಳ ಮೇಲೆ ಒತ್ತಡ ಹೇರುವುದರಿಂದ ಭಾರತದ ಸಾಲದ ಹೊರೆ ಕಡಿಮೆಯಾಗುತ್ತದೆ ಎಂಬುದನ್ನು ಒಪ್ಪುತ್ತೇನೆ. ಆದರೂ ಬೃಹತ್ ಕೈಗಾರಿಕೆಗಳು ಮಾತ್ರ ಉತ್ಪಾದಿಸಬಹುದಾದ ಉತ್ಪಾದನಾ ವಸ್ತುಗಳ ವಿಷಯದಲ್ಲಿ ನಾವು ಸ್ವಾವಲಂಬನೆ ಹೊಂದದೆ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಹೇಗೆ ಬಲಪಡಿಸುವುದು ಎಂಬುದು ತಿಳಿಯುತ್ತಿಲ್ಲ. ನಮ್ಮ ಗ್ರಾಹಕ ಕೈಗಾರಿಕೆಗಳನ್ನು ಮಾತ್ರ ಅಭಿವೃದ್ಧಿಗೊಳಿಸುತ್ತಾ ಬೃಹತ್ ಕೈಗಾಗಿಕೆಗಳಿಗೆ ಅಗತ್ಯ ಪ್ರಾಮುಖ್ಯತೆಯನ್ನು ನೀಡದೆ ಹೋದಲ್ಲಿ, ಉತ್ಪಾದಕರ ವಸ್ತುಗಳಾದ ಯಂತ್ರಗಳು ಇತ್ಯಾದಿಗಳಿಗೆ ವಿದೇಶಗಳ ಮೇಲೆ ನಾವು ಹೆಚ್ಚಾಗಿ ಮತ್ತು ಮಿತಿಯಿಲ್ಲದ ಅವಧಿಗೆ ಅವಲಂಬಿತರಾಗಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಈ ಅವಲಂಬನೆಯು ಹಣಕಾಸಿನ ಸಾಲಗಾರರಾಗುವುದಕ್ಕಿಂತ ಹೆಚ್ಚು ಅಪಾಯಕಾರಿ ಮತ್ತು ವಿನಾಶಕಾರಿ. ದಯಮಾಡಿ ತಾವು ತಮ್ಮ ಅಂಶವನ್ನು ಸ್ಪಷ್ಟೀಕರಿಸುವಿರಾ?

ಪ್ರಾಶಸ್ತ್ಯ ವರ್ಗಾವಣೆಯ ಪ್ರಶ್ನೆ ಪ್ರಸ್ತುತ ಯೋಜನೆಗಳಿಗೆ ಸಂಬಂಧಿಸಿದ್ದು. ವಾಸ್ತವವಾಗಿ ಯಾವುದೇ ಅಭಿವೃದ್ಧಿಶೀಲ ಅರ್ಥವ್ಯವಸ್ಥೆಯಲ್ಲಿ ಪ್ರಧಾನ, ಬೃಹತ್ ಉತ್ಪಾದಕ ವಸ್ತುಗಳ ಮತ್ತು ಗ್ರಾಹಕ ವಸ್ತುಗಳ ಕೈಗಾರಿಕೆಗಳ ಕೇಂದ್ರೀಕೃತ ಮತ್ತು ಸಮತೋಲದ ಯೋಜನೆಯಿರಬೇಕು. ಅವುಗಳ ಅನುಪಾತವು ಪ್ರಸ್ತುತ ಉಪಭೋಗದ ಅವಶ್ಯಕತೆ ಮತ್ತು ಸ್ವದೇಶ ಮತ್ತು ವಿದೇಶದ ಬಂಡವಾಳಗಳ ಲಭ್ಯತೆಯ ಆಧಾರದ ಮೇಲೆ ನಿರ್ಧಾರಿತವಾಗಿರಬೇಕು. ಪ್ರಸ್ತುತ ಉಪಭೋಗವನ್ನು ತಗ್ಗಿಸಲು ಅಥವಾ ಮುಂದೂಡಲು ಒಂದು ಮಿತಿಯಿದೆ. ವಿದೇಶಿ ಸಾಲ ಮಾಡುವುದಕ್ಕೆ ಆರ್ಥಿಕ ಮಿತಿಗಳೂ ಇವೆ. ವಿದೇಶಿ ಸಾಲ ಲಭ್ಯವಿದ್ದರೂ ಅದನ್ನು ಸ್ವದೇಶಿ ಬಂಡವಾಳದ ಜೊತೆ ಹೊಂದಿಸಬೇಕು. ಹಾಗಾದರೆ ನಮ್ಮ ಪಾವತಿ ಶಿಲ್ಕಿನ ಏರುಪೇರುಗಳನ್ನು ಸರಿದೂಗಿಸಲು ರಫ್ತಿಗೆ ಹೆಚ್ಚು ಪ್ರಾಶಸ್ತ್ಯ ನೀಡುವುದು ಅಗತ್ಯ. ಇದು ಬಲವಂತದ ಉಳಿತಾಯಕ್ಕೆ ದಾರಿಯಾಗುತ್ತದೆ. ಇವೆಲ್ಲವುಗಳಿಂದ ಬೆಲೆ ಏರಿಕೆ ಮತ್ತು ವೇತನ ಹೆಚ್ಚಳ ಬೇಡಿಕೆ ಹೆಚ್ಚಾಗುತ್ತದೆ. ಯೋಜನೆಗಳ ಅಂದಾಜು ವೆಚ್ಚ ಮೇಲೇರುತ್ತದೆ ಮತ್ತು ತೀಕ್ಷ್ಣದರ ಕೂಲಿಯನ್ನು ಬೆನ್ನಟ್ಟುವುದು ಪ್ರಾರಂಭವಾಗುತ್ತದೆ. ಇದನ್ನು ನಿಯಂತ್ರಿಸಬೇಕಾದರೆ ನಾವು ಮಾಡುತ್ತಿರುವ ಹಾಗೆ ಅನುಭೋಗಿ ಸರಕುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕು. ಎರಡನೆಯ ಯೋಜನಾ ಅವಧಿಯಲ್ಲಿ ಸುಮಾರು ೭೮೦ ಕೋಟಿ ರೂ. ಬೆಲೆಯ ಆಹಾರ ಧಾನ್ಯಗಳನ್ನು ಆಮದು

ಮಾಡಿಕೊಳ್ಳಲಾಯಿತು. ಆದ್ದರಿಂದ ಕೂಲಿ ಸರಕುಗಳ ಉತ್ಪಾದನೆಗೆ ಆದ್ಯತೆ ಸಿಗಬೇಕು ಮತ್ತು ಉಳಿದೆಲ್ಲಾ ಉದ್ಯಮಗಳನ್ನು ಸ್ಥಿರ ದರ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುವ ಅವಶ್ಯಕತೆಗೆ ಸರಿಹೊಂದಿಸಬೇಕು.

**ಸಿ.ಜಿ.ಜೋಶಿ, ಕಲ್ಯಾಣ್**

ಸಾಮಾನ್ಯ ದೃಷ್ಟಿಯಲ್ಲಿ ಜನಸಂಘ ಮತ್ತು ಹಿಂದೂ ಮಹಾಸಭಾ ಎರಡೂ ದೇಶದ ಬಗ್ಗೆ ಒಂದೇ ಗುರಿಯನ್ನಿಟ್ಟುಕೊಂಡಿವೆ. ಅವರಲ್ಲಿ ಯಾಕೆ ಪರಸ್ಪರ ಹೊಂದಾಣಿಕೆಯಿಲ್ಲ?

ಸಾಮಾನ್ಯವಾಗಿ ದೇಶದ ಕಲ್ಯಾಣವೇ ಎಲ್ಲಾ ಪಕ್ಷಗಳ ಗುರಿ. ಆದರೆ ವಿವರಣೆ, ಸಾಧನೆ, ವಿಧಾನ ಮತ್ತು ನಿಲುವುಗಳಲ್ಲಿ ವ್ಯತ್ಯಾಸಗಳಿವೆ. ಎರಡೂ ಪಕ್ಷಗಳ ಪ್ರಣಾಳಿಕೆಗಳನ್ನು ಹೋಲಿಸಿ ನೋಡಿದಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಒಂದು ಅವನತಿಯತ್ತ ಸಾಗುತ್ತಿದ್ದರೆ ಮತ್ತೊಂದು ಪ್ರಗತಿಯತ್ತ ಸಾಗುತ್ತಿದೆ. ಜೊತೆಗಿರಬೇಕೆಂಬ ಕಾರಣಕ್ಕೆ ಮಂದಗತಿಯವರೊಂದಿಗಿದ್ದರೆ, ದೇಶಕ್ಕೆ ಸೇವೆ ಸಲ್ಲಿಸುವುದು ಅಸಾಧ್ಯ.

**ದೇಶ್ ರಾಜ ಕಾಯಿಸ್ಥಾ, ಪಠಾನ್ ಕೋಟ್**

ಪ್ರಶ್ನೆ : ಪ್ರಚಲಿತ ಇರುವ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಜಾತಿವಾದ ಇತ್ಯಾದಿಗಳನ್ನು ತೊಡೆದುಹಾಕಲು ಜನಸಂಘ ಯಾವ ಕ್ರಮಗಳನ್ನು ತೆಗೆದುಕೊಂಡಿದೆ? ಅದು ಪ್ರಸ್ತುತ ಶಿಕ್ಷಣ ಪದ್ಧತಿಯನ್ನು ಯಾವ ರೀತಿ ಬದಲಾಯಿಸಲಿದೆ? ಪ್ರಸಕ್ತ ಆಹಾರ ಸಮಸ್ಯೆಯನ್ನು ಹೇಗೆ ಪರಿಹರಿಸಲಾಗುತ್ತದೆ?

ಉಪಾಧ್ಯಾಯ : ದೇಶವನ್ನು ಸಂಘಟಿಸಿ ಮತ್ತು ಆದರ್ಶೀಕರಿಸಿದರೆ ಎಲ್ಲಾ ಕೆಡಕುಗಳು ನಿರ್ಮೂಲನೆಗೊಳ್ಳುತ್ತವೆ.

ಪ್ರಶ್ನೆ : ಪಾಕಿಸ್ತಾನವು ಭಾರತ ಮಾತೆಯ ದೇಹದಲ್ಲಿ ಒಂದು ಹುಣ್ಣಿದ್ದಂತೆ. ಅದು ಈಗ ಬೇರೆಯೇ ಒಂದು ರಾಜಕೀಯ ಅಸ್ತಿತ್ವವನ್ನು ಹೊಂದಿದೆ. ಪಾಕಿಸ್ತಾನವು ಭಾರತವನ್ನು ತನ್ನ ಮೊದಲನೇ ಶತ್ರು ಎಂದು ಪರಿಗಣಿಸಿದೆ. ತನ್ನ ಗುರಿಯಾದ ಅಖಂಡ ಭಾರತವನ್ನು ಜನಸಂಘ ಹೇಗೆ ಈಡೇರಿಸಲಿದೆ?

ಉಪಾಧ್ಯಾಯ : ಧರ್ಮ ಒಂದು ರಾಷ್ಟ್ರವನ್ನು ಮತ್ತು ದೇಶವನ್ನು ವಿಭಜಿಸಬಾರದೆಂದು ಭಾರತದ ಜನರಿಗೆ ಮನಗಾಣಿಸುವ ಮೂಲಕ.

ಪ್ರಶ್ನೆ : ಕುಟುಂಬ ಯೋಜನೆ ಮತ್ತು ಜನಸಂಖ್ಯಾ ನಿಯಂತ್ರಣದ ಬಗ್ಗೆ ಜನಸಂಘದ ಅಭಿಪ್ರಾಯವೇನು? ನಮ್ಮ ಆರ್ಥಿಕ ವ್ಯವಸ್ಥೆಗೆ ಅಡ್ಡಿಯಾಗಿ ಹೆಚ್ಚುತ್ತಿರುವ ಜನಸಂಖ್ಯಾ ಸಮಸ್ಯೆಯನ್ನು ಬಗೆಹರಿಸಲು ಜನಸಂಘ ಯಾವ ಸಲಹೆಯನ್ನು ಕೊಡುತ್ತದೆ?

ಉಪಾಧ್ಯಾಯ : ಈ ಪ್ರಶ್ನೆಯ ಬಗ್ಗೆ ನಿರ್ಧಾರ ಕುಟುಂಬಗಳಿಗೆ ಬಿಟ್ಟಿದ್ದು. ಆದರೆ ನಮ್ಮ ಆರ್ಥಿಕ ದುಸ್ಥಿತಿಗೆ ಹೆಚ್ಚುತ್ತಿರುವ ಜನಸಂಖ್ಯೆ ಕಾರಣ ಎಂಬುದನ್ನು

ಜನಸಂಘ ನಂಬುವುದಿಲ್ಲ. ಆರ್ಥಿಕ ದುಃಸ್ಥಿತಿಗೆ ಕುಟುಂಬ ಯೋಜನೆಯೇ ಕಾರಣ. ಈಗಿರುವ ಆಡಳಿತಗಾರರು ಮತ್ತು ಅವರ ನಿಲುವು ಹೀಗೆ ಮುಂದುವರೆದಲ್ಲಿ ಕಾಂಗ್ರೆಸಿಗರನ್ನು ಬಿಟ್ಟು ಎಲ್ಲರೂ ಅಂತ್ಯಗೊಂಡರೂ ಸಾಕಾಗುವುದಿಲ್ಲ.

**ಪುಟ್ಟಿ ಲಾಲ್ ಯಾದವ್, ಕನ್ನು**

ಪ್ರಶ್ನೆ : ಜನಸಂಘವು ಭೂಮಿ ಮತ್ತು ಸಂಪತ್ತನ್ನು ಇಲ್ಲದವರಿಗೆ ಮರುವಿತರಿಸಲು ಬಯಸುತ್ತದೆ. ಈ ಉದ್ದೇಶ ವೈಯಕ್ತಿಕ ಖಾಸಗಿ ಆಸ್ತಿ ಹಕ್ಕಿಗೆ ಹೊಂದುತ್ತದೆಯೇ?

ಖಾಸಗಿ ಆಸ್ತಿಗೆ ಪರಿಪೂರ್ಣ ಮಾಲೀಕತ್ವ ಎಂಬುದು ಇಲ್ಲ. ಮಾಲೀಕತ್ವ ಯಾವಾಗಲೂ ಸಮಾಜದ ಮಿತಿಗಳ ಷರತ್ತಿಗೊಳಪಟ್ಟಿರುತ್ತದೆ.

ಪ್ರಶ್ನೆ : ಪಂಡಿತ್ ನೆಹರುರವರು ಮುಂಬರುವ ಸಾರ್ವತ್ರಿಕ ಚುನಾವಣೆಯನ್ನು ಗೆಲ್ಲಲು ೨೦ ಕೋಟಿ ಭಾರತೀಯ ಮತದಾರರಿಗೆ ಗೋವಾವನ್ನು ಲಂಚವಾಗಿ ನೀಡಿದ್ದಾರೆ ಎಂದು ಡಾ. ಲೋಹಿಯಾ ಹೇಳುತ್ತಾರೆ. ನೀವು ಒಪ್ಪುವಿರಾ?

ಉಪಾಧ್ಯಾಯ : ಅವರ ಉದ್ದೇಶ ಅದೇ ಇರಬಹುದು. ಆದರೆ ಪ್ರಭಾವಕ್ಕೆ ಮಣಿಯುವುದಕ್ಕೆ ಜನರೇನು ಕಾಂಗ್ರೆಸ್ಸಿನವರಲ್ಲ.

ಪ್ರಶ್ನೆ ಕಮ್ಯುನಿಸ್ಟರೊಂದಿಗೆ ನೇರ ಸ್ಪರ್ಧೆಯಲ್ಲಿರುವ ಕಾಂಗ್ರೆಸ್ ಅಭ್ಯರ್ಥಿಗೆ ಜನಸಂಘ ಬೆಂಬಲ ನೀಡುವುದೆ?

ಉಪಾಧ್ಯಾಯ : ಈ ಪ್ರಶ್ನೆ ಊಹಾತ್ಮಕವಾದ್ದಾಗಿದೆ. ಜನಸಂಘ ಕಮ್ಯುನಿಸಂಗೆ ವಿರುದ್ಧವಾಗಿರುವುದು ವಿವರಣೆಯ ಅಗತ್ಯವಿಲ್ಲದೆ ಚೆನ್ನಾಗಿ ತಿಳಿದೇ ಇರುವ ವಿಚಾರ.

**ಯು.ಬಾಬಣ್ಣ ಭಟ್, ಮಂಗಳೂರು**

ಪ್ರಶ್ನೆ : ಜನಸಂಘ ಅಧಿಕಾರಕ್ಕೆ ಬಂದಲ್ಲಿ ಇಂಗ್ಲಿಷ್ ಭಾಷೆಯ ಸ್ಥಾನಮಾನ ಏನಾಗಬಹುದು? ಇದರ ಅಧ್ಯಯನವನ್ನು ಶಾಲಾ ಕಾಲೇಜುಗಳಲ್ಲಿ ಸಂಪೂರ್ಣವಾಗಿ ನಿಲ್ಲಿಸಲಾಗುವುದೆ?

ಉಪಾಧ್ಯಾಯ : ಇಂಗ್ಲಿಷನ್ನು ಅಧ್ಯಯನ ಮಾಡಲು ಆಯ್ಕೆ ಮಾಡಿಕೊಂಡವರಿಗೆ ಬೋಧನೆಯನ್ನು ಮುಂದುವರೆಸಲಾಗುವುದು.

ಪ್ರಶ್ನೆ : ಪ್ರೊ. ಬಾಲ್‌ರಾಜ್ ಮಧೋಕ್‌ರವರ ಪ್ರಕಾರ ಹಿಂದೂ ಮತ್ತು ಮುಸ್ಲಿಂ ಎಂಬ ಹೆಸರುಗಳನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಮತ್ತು ಅಲಿಗಡ್ ಮುಸ್ಲಿಂ ವಿಶ್ವವಿದ್ಯಾಲಯದಿಂದ ಅಳಿಸಬೇಕಾಗಿದೆ. ಇದು ಶ್ರೀ ಮಧೋಕ್‌ರವರ ವೈಯುಕ್ತಿಕ ಅಭಿಪ್ರಾಯುವೆ ಅಥವಾ ಜನಸಂಘದ ಅಭಿಪ್ರಾಯವೇ?

ಉಪಾಧ್ಯಾಯ : ಈ ಪ್ರಶ್ನೆಗೆ ಸಂಬಂಧಿಸಿದಂತೆ ತಪ್ಪು ವರದಿಯ

ಸ್ಪಷ್ಟೀಕರಣವನ್ನು ನೀವು ಗಮನಿಸಿಲ್ಲ ಎನಿಸುತ್ತದೆ.

**ಏ.ಕೆ. ಖಾಲಾಡ್ಕರ್, ಪೂನಾ**

ಬಿ.ಜೆ.ಎಸ್. ಕೇಂದ್ರೀಕೃತ ಅಧಿಕಾರವನ್ನು ಒಳಗೊಂಡಿರುವ ಏಕೀಕೃತ ರಾಷ್ಟ್ರದ ಪರಿಕಲ್ಪನೆಯನ್ನು ಒಪ್ಪುತ್ತದೆ. ಹಾಗಾದರೆ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಪರಿಕಲ್ಪನೆಯನ್ನು ತನ್ನ ಪ್ರಣಾಳಿಕೆಯಲ್ಲಿ ಸೇರಿಸಿರುವ ಉದ್ದೇಶವೇನು? ಏಕೀಕೃತ ರಾಷ್ಟ್ರ ಎಂದರೆ ಕೆಂದ್ರೀಕೃತ ರಾಷ್ಟ್ರ ಎಂಬ ಅರ್ಥವಲ್ಲ. ಒಂದು ಏಕೀಕೃತ ರಾಷ್ಟ್ರ ಅಥವಾ ಸಂಯುಕ್ತ ರಾಷ್ಟ್ರದ ಪರಿಕಲ್ಪನೆಯೊಂದಿಗೆ ಕೇಂದ್ರೀಕರಣ ಅಥವಾ ವಿಕೇಂದ್ರಿಕರಣವನ್ನು ಹೋಲಿಸಬೇಕಾಗಿಲ್ಲ. ಈಗ ಅಧಿಕಾರವನ್ನು ಜಿಲ್ಲಾ ಸಮಿತಿಗಳಿಗೆ ವಿಕೇಂದ್ರೀಕರಿಸಲಾಗಿದೆ. ಹಾಗಾದರೆ ಭಾರತದಲ್ಲಿರುವ ರಾಜ್ಯಗಳನ್ನು ಜಿಲ್ಲೆಗಳ ಒಕ್ಕೂಟಗಳಾಗಿ ಮಾರ್ಪಡಿಸಲಾಗಿದೆ ಎಂದರ್ಥವೆ?

**ಏ.ಎಸ್. ದೇಸಾಯಿ, ಕೊಲ್ಹಾಪುರ**

ಭಾರತದ ಬಹುತೇಕ ಎಲ್ಲ ರಾಜಕೀಯ ಪಕ್ಷಗಳೂ ಸಾಮಾನ್ಯವಾಗಿ ಸಮಾಜದ ಸಮಾಜವಾದಿ ಆದರ್ಶವನ್ನು ಸ್ವೀಕರಿಸುತ್ತವೆ. ಆದರೆ ಬಿ.ಜೆ.ಎಸ್. ಇದನ್ನು ಒಪ್ಪುವುದಿಲ್ಲ. ಬಿ.ಜೆ.ಎಸ್.ನ ಆರ್ಥಿಕ ನೀತಿ ಎಲ್ಲಿಯವರೆಗೆ ಮೇಲಿನ ಆದರ್ಶದೊಂದಿಗೆ ಸರಿಹೊಂದುತ್ತದೆ ಮತ್ತು ಭಿನ್ನವಾಗುತ್ತದೆ ಸ್ಪಷ್ಟಪಡಿಸಿ?

ಭಾರತೀಯ ಜನಸಂಘ ಸಮಾಜದವಾದವನ್ನು ನಂಬುವುದಿಲ್ಲ. ಏಕೆಂದರೆ ಇದು ಅಂತಿಮವಾಗಿ ಸರ್ಕಾರಿ ಬಂಡವಾಳ ಶಾಹಿಯಾಗಲು ಮತ್ತು ಪ್ರಜಾಪ್ರಭುತ್ವದ ಅವನತಿಗೆ ಎಡೆಮಾಡಿಕೊಡುತ್ತದೆ. ಅದೇನೆ ಇರಲಿ, ನಾವು ಕೆಲವು ಮೂಲ ಕೈಗಾರಿಕೆಗಳ ಮತ್ತು ಅತಿ ಹೆಚ್ಚು ಬಂಡವಾಳ ಹೂಡಿರುವ ಕೈಗಾರಿಕೋದ್ಯಮಿಗಳ ಸ್ಥಾನವನ್ನು ತೆಗೆದುಕೊಳ್ಳುವ ಅಗತ್ಯತೆಯನ್ನು ಒಪ್ಪುತ್ತೇವೆ.

ಸಮಾಜವಾದಿ ಪಕ್ಷಗಳು ಕೂಡ ಪ್ರಸ್ತುತ ವೈಯಕ್ತಿಕ ಉದ್ಯಮಗಳಿಗೆ ಸ್ವಲ್ಪ ಮಟ್ಟಿನ ಅವಕಾಶ ಕೊಡಲು ಒಪ್ಪಿಕೊಳ್ಳುತ್ತವೆ. ಅನುಷ್ಠಾನದಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸವಿದ್ದರು, ಎರಡೂ ರೀತಿಯ ಕೈಗಾರಿಕಾ ವಲಯಗಳು ಇರಬೇಕೆನ್ನುವ ವಿಚಾರದಲ್ಲಿ ಇಬ್ಬರಲ್ಲೂ ಸಹಮತವಿದೆ. ಆದರೆ ಪ್ರಮುಖ ವ್ಯತ್ಯಾಸವಿರುವುದು ನಿಲುವುಗಳಲ್ಲಿ. ಬೇರೆಯಾರೂ ಈ ಜವಾಬ್ದಾರಿಯನ್ನು ನಿಭಾಯಿಸಲು ಸಾಧ್ಯವಿಲ್ಲವಾದ್ದರಿಂದ ಕೈಗಾರಿಕೆಗಳ ಜವಾಬ್ದಾರಿಯನ್ನು ಸ್ವಲ್ಪಮಟ್ಟಿಗೆ ಸರ್ಕಾರವೇ ಹೊರಬೇಕು ಎನ್ನುವುದು ನಮ್ಮ ನಿಲುವು. ಪ್ರಸಕ್ತ ಪರಿಸ್ಥಿತಿಯಲ್ಲಿ ಸರ್ಕಾರವೇ ಎಲ್ಲವನ್ನೂ ನಿಭಾಯಿಸುವುದು ಅಸಾಧ್ಯವಾದ್ದರಿಂದ ವೈಯಕ್ತಿಕ ಉದ್ಯಮಗಳಿಗೆ ಅವಕಾಶ ನೀಡಬೇಕೆಂಬುದು ಅವರ ವಾದ.

ಆದರೆ, ಪ್ರತಿಪಕ್ಷ ಸ್ಥಾನದಲ್ಲಿರುವ ಸಮಾಜವಾದಿ ಪಕ್ಷಗಳು ವ್ಯವಹಾರಿಕವಾಗಿ ಪರಿಶೀಲನೆ ಮಾಡುವುದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಖಾಸಗಿ ವಲಯದ ಹಲವಾರು ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಧರಣಿ ಮುಂದುವರೆಸಿವೆ. ತನ್ನ ಸಮಾಜವಾದಿ ಉನ್ಮಾದವನ್ನು ತಣಿಸಿಕೊಳ್ಳಲು ಕಾಂಗ್ರೆಸ್ ಮುಂದೆ ಬಂದು ಖಾಸಗಿ ವಲಯದ ಆ ರೀತಿಯ ಕೈಗಾರಿಕೆಗಳನ್ನು ಉತ್ತಮವಾಗಿ ಸ್ಥಾಪಿತವಾಗಿವೆ ಎಂಬಂತೆ ರಾಷ್ಟ್ರೀಕರಣಗೊಳಿಸಿದೆ.

ಸಮಾಜವಾದಿ ಪಕ್ಷಗಳು ಉತ್ಪಾದನೆಯ ಬಗ್ಗೆ ಯೋಚಿಸದೆ ವರ್ಗ ಸಂಘರ್ಷ ಮತ್ತು ರಾಷ್ಟ್ರೀಯ ವರಮಾನ ಹಾಗೂ ಸಂಪತ್ತಿನ ಹಂಚಿಕೆಯ ಬಗ್ಗೆ ಹೆಚ್ಚಿನ ಒತ್ತು ನೀಡುತ್ತಿವೆ. ಭಾರತೀಯ ಜನಸಂಘವೂ ಕೂಡ ಕನಿಷ್ಟ ವೇತನ ಹೆಚ್ಚಳ ಮತ್ತು ಹೆಚ್ಚು ವ್ಯಯ ಮಾಡಬಹುದಾದ ವರಮಾನವನ್ನು ಬಯಸುತ್ತದೆ. ಆದರೆ ನಮ್ಮ ಪ್ರಕಾರ ಇದು ಏರಿಕೆ ಉತ್ಪಾದನೆಯ ದೃಷ್ಟಿಯಿಂದ ಆಗಬೇಕು. ಇದೊಂದು ಆರ್ಥಿಕ ನೀತಿಯೇ ಹೊರತು ಉಪದೇಶವಲ್ಲ.

ಸಮಾಜವಾದಿಗಳು ಭೂಮಿ ಇಲ್ಲದವರ ಭೂ ಹಸಿವನ್ನು ನೀಗಿಸಲಷ್ಟೇ ಭೂ ಮಿತಿಯ ಹಕ್ಕೊತ್ತಾಯ ಮಾಡುತ್ತಿದ್ದಾರೆ. ಜನಸಂಘವು ಈ ಮಿತಿಗಳು ಭಾರಿ ಜಮೀನ್ದಾರಿಗಳಾಗುವುದನ್ನು ತಪ್ಪಿಸುವುದನ್ನು ಬಯಸುತ್ತದೆ. ಏಕೆಂದರೆ ಇದರಿಂದ ಭೂಮಿಯ ತಲಾ ಎಕರೆ ಉತ್ಪಾದನೆ ಇಳಿಮುಖವಾಗುತ್ತದೆ. ಸಾಂದ್ರ ಬೇಸಾಯದ ಉದ್ದೇಶಗಳಿಗೆ ಈ ಭೂಮಿ ಬಳಕೆಯಾಗಬೇಕು ಎಂಬುದು ಜನಸಂಘದ ಆಶಯ. ಭೂಮಿಯ ಮರುಹಂಚಿಕೆ ಮಾಡುವಾಗ ಲಾಭದಾಯಕವಲ್ಲದ ಹಿಡುವಳಿಗಳನ್ನು ಲಾಭದಾಯಕ ಹಿಡುವಳಿಗಳಾಗಿ ಮಾಡುವುದಕ್ಕೆ ಜನಸಂಘ ಆದ್ಯತೆ ನೀಡುತ್ತಿದ್ದರೆ, ತಮ್ಮ ರಾಜಕೀಯ ಪರಿಗಣನೆಗೆ ಒಳಗಾಗಿರುವ ಸಮಾಜವಾದಿಗಳು ಈ ರೀತಿಯ ಯಾವುದಕ್ಕೂ ತಯಾರಾಗಿಲ್ಲ.

ಯುವರ್ ವೋಟ್ (ನಿಮ್ಮ ಮತ)ಸರಣಿಯಲ್ಲಿ ನಾನು ಈ ಅಂಶದ ಬಗ್ಗೆ ಬಹಳ ವಿವರವಾಗಿ ವಿವರಿಸಲು ಪ್ರಯತ್ನಿಸಿದ್ದೇನೆ.

ಪ್ರಶ್ನೆ : ಒಂದು ದೇಶ, ಒಂದು ರಾಷ್ಟ್ರ ಮತ್ತು ಒಂದು ಸಂಸ್ಕೃತಿ ಎಂಬ ಧ್ಯೇಯವಾಕ್ಯದ ಅರ್ಥವೇನು? ಬಿ.ಜೆ.ಎಸ್. ಅತಿಯಾಗಿ ಒತ್ತಿಹೇಳುತ್ತಿರುವ ಭಾರತೀಯ ಸಂಸ್ಕೃತಿಯ ಹಿಂದಿರುವ ಧೋರಣೆಗಳೇನು ಎಂಬುದನ್ನು ದಯವಿಟ್ಟು ಸ್ಪಷ್ಟೀಕರಿಸುವಿರಾ?

ಒಂದು ದೇಶ, ಒಂದು ರಾಷ್ಟ್ರ ಮತ್ತು ಒಂದು ಸಂಸ್ಕೃತಿ ಎಂಬುದೊಂದು ಧ್ಯೇಯವಾಕ್ಯವಲ್ಲ, ಇದೊಂದು ವಾಸ್ತವ. ಭಾರತವು ಬೇರೆ ಬೇರೆ ಸಂಸ್ಕೃತಿಗಳನ್ನು ಒಳಗೊಂಡ, ಅನೇಕ ರಾಷ್ಟ್ರೀಯತೆಗಳನ್ನು ಒಳಗೊಂಡ ಒಂದು ಉಪಖಂಡ ಎಂಬ ಮಿಥ್ಯಾ ವಾದವನ್ನು ಇದು ಖಂಡಿಸುತ್ತದೆ. ನಮ್ಮ ರಾಷ್ಟ್ರೀಯ ಜೀವನದ

ವೈವಿಧ್ಯತೆಗಳು ತೋರಿಕೆಗೆ ಮಾತ್ರ ಮತ್ತು ಅಂತರ್ನಿಹಿತ ಐಕ್ಯತೆ ನಿಜವಾದದ್ದು.

ಭಾರತೀಯ ಸಂಸ್ಕೃತಿಯನ್ನು ವ್ಯಾಖ್ಯಾನಿಸುವುದು ಕಷ್ಟ. ಆದರೆ ಅದನ್ನು ಅರಿತುಕೊಳ್ಳಬಹುದು. ಏನೆ ಆಗಲಿ, ಜೀವನ ಮತ್ತು ಸೃಷ್ಟಿಯ ಬಗೆಗಿನ ನಮ್ಮ ನಿಲುವುಗಳ ಮೂಲಕ ಅದು ಅಭಿವ್ಯಕ್ತಿಗೊಂಡಿದೆ. ಇದು ಸತ್ಯವನ್ನು ಅನ್ವೇಷಿಸಲು ಮತ್ತು ಆಗಲೇ ಶೋಧಿಸಿರುವ ಸತ್ಯಗಳೊಂದಿಗೆ ಸಮನ್ವಯಗೊಳಿಸಲು ಇರುವ ಎಡೆಬಿಡದ ಒಂದು ಪ್ರೇರಣೆ. ಇದರ ಪ್ರಾಶಸ್ತ್ಯವು ವಿಭಜನಶೀಲತೆಗಿಂತ ಐಕ್ಯತೆಯ ಮೇಲೆಯೇ ಹೆಚ್ಚು ಅವಲಂಬಿತ. ಇದು ಹಕ್ಕುಗಳಿಗಿಂತ ಕರ್ತವ್ಯಕ್ಕೆ ಮಹತ್ವವನ್ನು ಕೊಟ್ಟಿದೆ. ಇದು ವ್ಯಕ್ತಿಯ ವ್ಯಕ್ತಿತ್ವವನ್ನು ನಾಶಮಾಡದೆ ಸಾಮಾಜಿಕ ಪ್ರಜ್ಞೆ ಮೂಡಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ಇದು ಒಬ್ಬ ವ್ಯಕ್ತಿಯಿಂದ ಸನ್ಯಾಸಿ ಆಗುವವರೆಗಿನ ವಿಕಾಸ ಮಾರ್ಗ. ಭಾರತೀಯ ಸಂಸ್ಕೃತಿಯೊಂದೆ ಭಾರತೀಯರನ್ನ ಒಟ್ಟಾಗಿ ಸೇರಿಸಬಹುದು, ಗೌರಾವಾದರ ಬೋಧನೆ ಮಾಡಬಹುದು ಮತ್ತು ತಾಯ್ನಾಡಿನ ಬಗ್ಗೆ ಒಲವು ಮತ್ತು ನಮ್ಮ ಜೀವನ ಹಾದಿಯಲ್ಲಿ ಇಲ್ಲಿಯವರೆಗೆ ಕಳೆದುಕೊಂಡಿರುವ ಎಲ್ಲದರ ಬಗ್ಗೆ ವೈಭವ ಪ್ರಜ್ಞೆ ಮೂಡಿಸುತ್ತದೆ. ಯಾವುದನ್ನು ಸ್ವೀಕರಿಸಬೇಕು ಮತ್ತು ಯಾವುದನ್ನು ನಿರಾಕರಿಸಬೇಕು ಎಂಬುದರ ಬಗ್ಗೆ ಭಾರತೀಯ ಸಂಸ್ಕೃತಿ ಮಾತ್ರ ವಿವೇಚನೆಯುಳ್ಳವರನ್ನಾಗಿ ಮಾಡಬಲ್ಲದು.

ಪ್ರಶ್ನೆ : ಡಾ. ರಾಧಾಕೃಷ್ಣನ್ ಮತ್ತು ಶ್ರೀ ರಾಮಸ್ವಾಮಿ ಮುದಲಿಯಾರ್‌ರಂತಹ ಹೆಸರಾಂತ ವ್ಯಕ್ತಿಗಳು ಮುಖ್ಯಸ್ಥರಾಗಿರುವಂತಹ ಹಲವಾರು ಸಮಿತಿಗಳು ಯುವಕರಿಗೆ ಧಾರ್ಮಿಕ ತರಬೇತಿಯನ್ನು ನೀಡುವುದರ ಅಗತ್ಯತೆಯನ್ನು ಒತ್ತಿ ಹೇಳಿವೆ. ಬಿ.ಜೆ.ಎಸ್. ಇದನ್ನು ಒಪ್ಪುತ್ತದೆಯೇ? ಹಾಗಾದಲ್ಲಿ ಈ ಶಿಫಾರಸ್ಸುಗಳನ್ನು ಜಾರಿಗೊಳಿಸಿದರೆ ದೇಶದ ಜಾತ್ಯಾತೀತ ಭಾವನೆಗಳೊಡನೆ ಸಂಘರ್ಷ ಉಂಟಾಗುವುದಿಲ್ಲವೆ? ಯುವಕರು ಹಲವಾರು ಧರ್ಮ ಮತ್ತು ಪಂಥಗಳಿಗೆ ಸೇರಿರುವ ಕುಟುಂಬಗಳಿಂದ ಬರುವ ಅಂಶವನ್ನು ಗಣನೆಗೆ ತೆಗೆದುಕೊಂಡಲ್ಲಿ ಈ ಯೋಜನೆಯನ್ನು ಜಾರಿಗೆ ತರುವುದಾದರೂ ಹೇಗೆ?

ಉಪಾಧ್ಯಾಯ : ಶಾಲೆಗಳಲ್ಲಿ ಮತೀಯ ಬೋಧನೆ ಮಾಡುವುದು ಸಾಧ್ಯವಾಗದಿರಬಹುದು. ಆದರೆ ಖಂಡಿತವಾಗಿ ಧರ್ಮದ ತತ್ವಗಳನ್ನು ಬೋಧಿಸಬಹುದು ಮತ್ತು ಯಾವುದೇ ರೀತಿಯಲ್ಲಿ ಜಾತ್ಯಾತೀತತೆಗೆ ಧಕ್ಕೆ ಬಾರದಂತೆ ಎಲ್ಲಾ ಮತೀಯ ನಾಯಕರುಗಳ ಜೀವನದ ಬಗ್ಗೆ ತಿಳಿಸಬಹುದು.

ಪ್ರಶ್ನೆ : ಗುಡಿ ಕೈಗಾರಿಕೆಗಳು ಲಕ್ಷಾಂತರ ಜನರಿಗೆ ಉದ್ಯೋಗ ನೀಡಬೇಕೆಂದು ಬಿ.ಜೆ.ಎಸ್. ಸಾಕಷ್ಟು ಒತ್ತಿ ಹೇಳಿದೆ. ಈ ವಿಷಯದಲ್ಲಿ ನೀವು ಗಾಂಧೀಜಿ ಮತ್ತು ವಿನೋಭಾಜಿಯವರಿಗಿಂತ ಮೂಲಭೂತವಾಗಿ ಭಿನ್ನವೆ? ರಾಮ್ ಮನೋಹರ ಲೋಹಿರಾಯವರು ಚಾಲ್ತಿಗೆ ತಂದ ಚಿಕ್ಕ ಗಾತ್ರದ ಯಂತ್ರದ ಸಿದ್ಧಾಂತವನ್ನು

ನೀವು ಒಪ್ಪುವಿರಾ?

ಉಪಾಧ್ಯಾಯ : ಉಪಭೋಗಿ ಘಟಕದೊಂದಿಗೆ ಒಂದು ಕುಟುಂಬವನ್ನು ಉತ್ಪಾದಕ ಘಟಕವಾಗಿ ಪರಿವರ್ತಿಸುವ ಸಾಮರ್ಥ್ಯ ಹೊಂದಿರುವ ಹೊಸ ತಂತ್ರಜ್ಞಾನವನ್ನು ನಾವು ಬೆಂಬಲಿಸುತ್ತೇವೆ.  ಸಣ್ಣ ಪ್ರಮಾಣದ ಯಾಂತ್ರೀಕೃತ ಕೈಗಾರಿಕೆಗಳು ನಮ್ಮ ಕೈಗಾರಿಕೀಕರಣದ ಬುನಾದಿಯಾಗಿರಬೇಕು.

ಪ್ರಶ್ನೆ : ವಿದೇಶಿ ಆಕ್ರಮಣದ ವಿರುದ್ಧ ಬಹುತೇಕ ಎಲ್ಲ ರಾಜಕೀಯ ಪಕ್ಷಗಳು ಸಂಘಟನೆಯಿಂದ ಎದುರಿಸುವ ಬಗ್ಗೆ ಮಾತನಾಡುತ್ತವೆ. ಶಾಂತಿ ಸಮಯದಲ್ಲೂ ಕೂಡ ಬಲವಾಗಿ ಬೇರೂರಿರುವ ಬಡತನ, ಎಲ್ಲೆಡೆ ಹರಡಿರುವ ನಿರುದ್ಯೋಗ, ಅಸ್ಪೃಷ್ಯತೆ ಮತ್ತು ಇತರೆ ಸಾಮಾಜಿಕ ಕೆಡುಕುಗಳ ವಿರುದ್ಧ ಸೆಣೆಸಾಡಲು ಈ ರೀತಿಯ ಸಂಘಟನೆಗಳ ಅಗತ್ಯವಿಲ್ಲವೆ?

ವಿದೇಶಿ ಆಕ್ರಮಣದ ವಿರುದ್ಧ ಸಂಘಟಿತ ಹೋರಾಟದ ಅಗತ್ಯವಿದೆ ಮತ್ತು ಸಾಧ್ಯವಿದೆ ಏಕೆಂದರೆ, ಆಕ್ರಮಣಗಳನ್ನು ಕೊನೆಗೊಳಿಸುವ ಸೇನೆಯ ಹೋರಾಟಗಳನ್ನು ಮಾಮೂಲಾಗಿ ಪರಿಗಣಿಸಲಾಗುತ್ತದೆ. ಅದಲ್ಲದೆ ಇದು ಯಾವಾಗಲೂ ತಾತ್ಕಾಲಿಕ ವ್ಯವಹಾರವಾಗಿರುತ್ತದೆ ಮತ್ತು ಆಕ್ರಮಣ ಕೊನೆಗೊಂಡ ಅವಧಿಯನ್ನು ನಮೂದಿಸಬಹುದು. ಆದರೆ ಆಂತರಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಈ ರೀತಿಯ ಒಪ್ಪಂದ ಸಾಧ್ಯವೇ ಇಲ್ಲ. ಈ ಸಮಸ್ಯೆಗಳನ್ನು ಪರಿಹರಿಸಲು ವಿಭಿನ್ನ ಮಾರ್ಗಗಳಿವೆ. ಬಡತನ ಯಾವಾಗ ಕೊನೆಗೊಂಡಿತೆಂದು ಅವಧಿಯನ್ನು ನೀವು ಸ್ಪಷ್ಟವಾಗಿ ನಮೂದಿಸಲಾಗುವುದಿಲ್ಲ. ಈ ರೀತಿಯ ಸ್ವಭಾವವಿರುವ ಸಂಘಟಿತ ಪಕ್ಷಗಳು ಅಂತಿಮವಾಗಿ ಒಂದು ಪಕ್ಷದ ಅಸ್ತಿತ್ವವನ್ನು ಮತ್ತು ಏಕಮುಖಿ ಮನಃಸ್ಥಿತಿಯ ನಿರ್ಮಾಣಕ್ಕೆ ದಾರಿ ಮಾಡಿಕೊಡುತ್ತವೆ. ಇದರ ಆಧಾರದ ಮೇಲೆ ಕಮ್ಯುನಿಸ್ಟರು ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಎತ್ತಿಹಿಡಿಯುತ್ತಾರೆ. ಸೋವಿಯತ್ ರಷ್ಯಾದಲ್ಲಿ ಅದು ಕಳೆದ ನಲವತ್ತು ವರ್ಷಗಳಿಂದ ಅಸ್ತಿತ್ವದಲ್ಲಿದೆ, ಆದರೂ ಅದು ಕೊನೆಗಾಣುವ ಯಾವುದೇ ಲಕ್ಷಣಗಳಿಲ್ಲ.

**ರೂಪ್‌ಲಾಲ್ ದಾದ್, ಭಿಲ್ವಾರ**

ಪ್ರಶ್ನೆ : ಬಿ.ಜೆ.ಎಸ್.ನ ಪ್ರಸ್ತುತ ವೇಗವು ಪ್ರಾದೇಶಿಕ ಭದ್ರತೆ ಮತ್ತು ಪಾಕಿಸ್ತಾನ ಚೀನಾಗಳ ಬೆದರಿಕೆಯಿಂದ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಲು ಶಕ್ತವಾಗಿದೆಯೆ?

ಉಪಾಧ್ಯಾಯ : ನಾನು ನಿಮ್ಮ ಕಾಳಜಿಯನ್ನು ಪ್ರಶಂಸಿಸುತ್ತೇನೆ. ದಯಮಾಡಿ ಭಯಭೀತರಾಗದೆ ನಡಿಗೆಯ ವೇಗವನ್ನು ಹೆಚ್ಚಿಸಿಕೊಳ್ಳಿ.

ಪ್ರಶ್ನೆ : ನಿಪುಣ ಕ್ರಾಂತಿಕಾರಿ ವೀರ್ ಸಾರ್ವಕರ್‌ರನ್ನು ಬಿ.ಜೆ.ಎಸ್. ಇಲ್ಲಿಯವರೆಗೂ ತನ್ನ ಸಂಘಟನೆಗೆ ಮಾರ್ಗದರ್ಶನ ನೀಡಲು ಕೇಳಿಕೊಂಡಿಲ್ಲ.

ಏಕೆ?

ಉಪಾಧ್ಯಾಯ : ನಮಗೆ ಅಗತ್ಯವಿರುವುದು ಪ್ರೇರಣೆ. ನಮ್ಮ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಆ ಮಹಾತ್ಮರ ಜೀವನ ಹಾಗೂ ಕಾಯಕಗಳಿಂದ ನಾವು ವಿಫುಲವಾಗಿ ಪ್ರೇರಿತರಾಗಿದ್ದೇವೆ. ಪ್ರಜಾಪ್ರಭುತ್ವದ ಒಂದು ಸಂಘಟನೆ ಒಬ್ಬ ವ್ಯಕ್ತಿಯ ಮಾರ್ಗದರ್ಶನಕ್ಕೆ ಕಟ್ಟುಬೀಳಲು ಹೇಗೆ ಸಾಧ್ಯ? ಈ ಇಳಿ ವಯಸ್ಸಿನಲ್ಲಿ ನಾವು ಅವರಿಗೆ ತೊಂದರೆ ಕೊಡುವುದು ಸರಿಯೆನಿಸುತ್ತದೆಯೇ?

ಪ್ರಶ್ನೆ : ಚೀನಾದ ದಾಳಿ, ಪಾಕಿಸ್ತಾನದ ಹಗೆತನ, ಕಾಂಗ್ರೆಸ್ಸಿನ ಕೀಳುಸ್ಥಿತಿ, ಸರ್ಕಾರದ ಭ್ರಷ್ಟಾಚಾರ ಮತ್ತು ಸಿ.ಪಿ.ಐ.ನ ಚಟುವಟಿಕೆಗಳು ಸೃಷ್ಟಿಸಿರುವ ದೇಶದ ರಾಜಕೀಯ ವಾತಾವರಣವು ಇನ್ನಾವುದೇ ಪ್ರತಿಪಕ್ಷಕ್ಕಿಂತ ಹೆಚ್ಚಿನ ಉತ್ತಮ ವಾತಾವರಣವನ್ನು ಬಿ.ಜೆ.ಎಸ್.ಗೆ ತಂದುಕೊಟ್ಟಿವೆ. ಆದರೂ ಬಿ.ಜೆ.ಎಸ್. ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದು ಸಮರ್ಥ ಪರ್ಯಾಯ ಸರ್ಕಾರವನ್ನು ನೀಡುತ್ತದೆ ಎಂಬುದನ್ನು ಇದುವರೆಗೂ ಜನರಲ್ಲಿ ಮನವರಿಕೆ ಮಾಡಲು ಸಾಧ್ಯವಾಗಿಲ್ಲ. ಕಾರಣಗಳೇನು?

ಉಪಾಧ್ಯಾಯ : ಹೆಚ್ಚು ಹೆಚ್ಚು ಜನರು ಸಹಮತ ವ್ಯಕ್ತಪಡಿಸುತ್ತಿದ್ದಾರೆ. ಅಂಥವರನ್ನು ಒಪ್ಪಿಸಲು ಸ್ವಲ್ಪ ಸಮಯ ಹಿಡಿಯುತ್ತದೆ. ಅಂತರ್ಯ ತಿಳಿಯಲಾರದವರು ಮತ್ತು ಹಠಮಾರಿಗಳು ಕೆಲವರು ಇರಬಹುದು.

ದೌರ್ಬಲ್ಯವೇ ಸಾವು ಎಂದು ವಿವೇಕಾನಂದ ಹೇಳಿದ್ದಾರೆ. ಟಿಬೆಟನ್ನು ಆಕ್ರಮಿಸಲಾಯಿತು, ೧೨ ಸಾವಿರ ಮೈಲುಗಳಷ್ಟು ಉತ್ತರ ಪ್ರಾಂತ್ಯವನ್ನು ಕಳೆದುಕೊಂಡಿತು ಮತ್ತು ಬೆರುಬಾರಿ ಪಟ್ಟಣವನ್ನು ಹಸ್ತಾಂತರಿಸಲಾಯಿತು. ಈ ಅವಧಿಯಲ್ಲಿ ಬಿ.ಜೆ.ಎಸ್. ಅಸ್ತಿತ್ವದಲ್ಲಿತ್ತು. ಈ ಘಟನೆಗಳನ್ನು ಬಿ.ಜೆ.ಎಸ್. ಏಕೆ ತಡೆಯಲಿಲ್ಲ. ಬಿ.ಜೆ.ಎಸ್. ದುರ್ಬಲವಾಗಿದ್ದರೆ ಅಸ್ತಿತ್ವದಲ್ಲಿರುವ ಯಾವುದೇ ಹಕ್ಕಿಲ್ಲ. ದಯವಿಟ್ಟು ವಿವರಿಸಿ.

ಯಾವುದೇ ಪಕ್ಷದ ಚಟುವಟಿಕೆಗಳ ಮೇಲೆ ಸರ್ಕಾರ ಹೇರುವ ಮಿತಿಗಳು ನಿಮಗೆ ಗೊತ್ತಿರಬೇಕು. ಪ್ರಜಾಪ್ರಭುತ್ವವು ಕೆಲಸ ಮಾಡುವ ಒಂದು ವಿಧಾನವನ್ನು ಹೊಂದಿದೆ ಮತ್ತು ಪ್ರಜಾಪ್ರಭುತ್ವವನ್ನು ಸ್ವೀಕರಿಸಿರುವುದರಿಂದ ನಾವು ಅದರ ಕಾರ್ಯವಿಧಾನಗಳಿಗೆ ಬದ್ಧರಾಗಿರಬೇಕು.

**ಎಂ.ಸೂರ್ಯನಾರಾಯಣ ಮೂರ್ತಿ, ನಾದೇರ್‌ಗುಲ್**

ಮುಸ್ಲಿಂ ಲೀಗ್ ನೊಂದಿಗಿನ ಕಾಂಗ್ರೆಸ್ಸಿನ ಮೈತ್ರಿ ಸರಿಯಲ್ಲ ಎಂದು ಶ್ರೀ ಮೊರಾರ್ಜಿ ದೇಸಾಯಿಯವರು ಒಪ್ಪಿಕೊಂಡಿದ್ದಾರೆ.. ಹೀಗೆ ಹೇಳುವುದು ಎದೆಗಾರಿಕೆಯಲ್ಲವೆ?

ಕಾಂಗ್ರೆಸ್ ಯಾವಾಗಲೂ ತನ್ನ ತಪ್ಪುಗಳಿಂದಲೆ ಯಶಸ್ಸನ್ನು ಕಂಡಿದೆ.

ಪ್ರಶ್ನೆ : ಇಂದಿನ ದಿನಗಳಲ್ಲಿ ವಿಶ್ವ ಶಾಂತಿಯನ್ನು ಸಾಧಿಸಲು ಇರುವ ಷಾರ್ಟ್–ಕಟ್ ಏನು?

ಉಪಾಧ್ಯಾಯ : ಎಲ್ಲರನ್ನು ಷಾರ್ಟ್ ಆಗಿ ಕಟ್ ಮಾಡಿ, ಕತ್ತರಿಸಿ, ಪ್ರಪಂಚವು ಚೂರುಗಳಿಂದ ಆವರಿಸಿಕೊಳ್ಳುವವರೆಗೂ! (Cut everybody short, until the world is filled with-pieces!)

ಪ್ರಶ್ನೆ : ೧೨ ವರ್ಷಗಳ ಗಣರಾಜ್ಯದ ಬಗ್ಗೆ ಏನಾದರು ವಿಮರ್ಶೆ?

ಉಪಾಧ್ಯಾಯ : ಭಾವೋದ್ರೇಕವೇ ಹೊರತು, ಐತಿಹಾಸಿಕವೆನ್ನುವಂತಹದ್ದೇನಿಲ್ಲ.

**ಸೌ.ಸುಮನ್ ಆರ್. ದೇಶಪಾಂಡೆ**

ಪ್ರಶ್ನೆ : ಜನಸಂಘ ಅಧಿಕಾರಕ್ಕೆ ಬಂದರೆ ಪ್ರಧಾನ ಮಂತ್ರಿ ಯಾರಾಗಲಿದ್ದಾರೆ?

ಉಪಾಧ್ಯಾಯ : ಪಂಡಿತ್ ನೆಹರು ಅಲ್ಲ.

ಪ್ರಶ್ನೆ : ಒಬ್ಬ ಸಂಪಾದಕ ಮತ್ತು ರಾಜಕೀಯದ ನಡುವಿನ ಸಂಬಂಧವೇನು?

ಉಪಾಧ್ಯಾಯ : ಸಂಪಾದಕರು ಅನೇಕ ವೇಳೆ ನಾವೇ ರಾಜಕೀಯ ಮಾಡುವುದು ಎಂದು ಭಾವಿಸಿರುತ್ತಾರೆ; ಆದರೆ, ರಾಜಕೀಯವು ಸಂಪಾದಕರು ಪದೇ ಪದೇ ಅದೇ ತಪ್ಪುಗಳನ್ನು ಮಾಡುವಂತೆ ಮಾಡುತ್ತದೆ.

ಪ್ರಶ್ನೆ : ಜನಸಂಘ ಮತ್ತು ಇತರೆ ಪಕ್ಷಗಳ ಆರ್ಥಿಕ ನೆಲೆಗಟ್ಟನ್ನು ಹೋಲಿಸಿ ಮತ್ತು ಎರಡರ ವ್ಯತ್ಯಾಸಗಳನ್ನು ತಿಳಿಸಿ.

ಉಪಾಧ್ಯಾಯ : ಜನಸಂಘವು ರಾಷ್ಟ್ರ ಬದುಕುವುದಕ್ಕಾಗಿ ತಿನ್ನಬೇಕು ಎಂದರೆ, ಇತರೆ ಪಕ್ಷಗಳು ಮತ್ತೆಲ್ಲವನ್ನೂ ಬಿಟ್ಟು ತಿನ್ನುವುದಕ್ಕಾಗಿಯೇ ಬದುಕಬೇಕು ಎನ್ನುತ್ತಾರೆ. ಮತ್ತೇನಕ್ಕೂ ಅಲ್ಲ.

**ರುಕ್ಮಿಣಿ ಮೋತಿಯಾನಿ, ನವದೆಹಲಿ**

ದೇಶಕ್ಕೆ ಬಲ, ಸ್ಥಿರತೆ ಮತ್ತು ಸಮೃದ್ಧತೆಯನ್ನು ನೀಡಲು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ಇತ್ತೀಚೆಗೆ ಪಂಡಿತ್ ನೆಹರುರವರು ಹೇಳಿದ್ದಾರೆ. ತಲೆಯನ್ನು ಅಲುಗಾಡಿಸಲು ತನಗೆ ಶಕ್ತಿಯಿದೆ ಎಂದು ಬಾಲ ಹೇಳಿದಂತೆ, ಅಥವಾ ಚಕ್ರದ ಮೇಲಿನ ಪುಕ್ಕವೊಂದು ನಾನೇ ಈ ಚಕ್ರ ಉರುಳುವಂತೆ ಮಾಡಿದ್ದು ಎಂದು ಕಲ್ಪಿಸಿಕೊಂಡಂತೆ.

**ಓ.ಪಿ.ಶರ್ಮ, ದೆಹಲಿ**

ನಮ್ಮ ದೇಶಬಾಂಧವರು, ಮುಖ್ಯವಾಗಿ ಪತ್ರಿಕಾ ವರದಿಗಾರರು ಉತ್ತರದಲ್ಲಿ

ಚೀನಾದ ದಾಳಿಯ ಬಗ್ಗೆ ಚಿಂತಿತರಾಗುವುದು ಬಿಟ್ಟು ಕ್ರಿಕೆಟ್ ಪಂದ್ಯವನ್ನು ಗೆಲ್ಲುವುದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿದ್ದಾರೆ. ಯಾಕೆ?

ಏಕೆಂದರೆ, ಪತ್ರಿಕಾ ವರದಿಗಾರರು ಹೊಟ್ಟೆಪಾಡಿಗೆ ಬದುಕುತ್ತಾರೆ ಮತ್ತು ಪ್ರತಿದಿನಕ್ಕೂ ಕೆಲವು ಹೊಸ ತಲೆಬರಹಗಳನ್ನು ಅವರು ಹುಡುಕಬೇಕಾಗುತ್ತದೆ. ಕೂತೂಹಲಗಳಿಗಾಗಿ ಹಾತೊರೆಯುವ ಮೈಗಳ್ಳರು ಮತ್ತು ಅಧಿಕ ಪ್ರಸಂಗಿಗಳು ಪ್ರತಿ ರಾಷ್ಟ್ರದಲ್ಲೂ ಇದ್ದಾರೆ. ಇಂಗ್ಲೆಂಡಿನಲ್ಲಿ ಟೆಡ್ಡಿ ಬಾಯ್ಸ್, ರಷ್ಯಾದಲ್ಲಿ ಅವರನ್ನು ಸ್ಟಿಲ್ಯಾಗಿ ಎನ್ನುತ್ತಾರೆ, ಇನ್ನು ಅಮೇರಿಕಾದಲ್ಲಿ ಅವರು ಹಲವಾರು ಬೇರೆ ಹೆಸರುಗಳನ್ನು ಹೊಂದಿದ್ದಾರೆ. ಅವರು ಕೈಗಾರಿಕಾ ನಾಗರೀಕತೆಯ ನಿರುಪಯುಕ್ತ ಉಪ ಉತ್ಪನ್ನಗಳು. ನಾವು ವೇಗವಾಗಿ ಕೈಗಾರೀಕರಣ ಹೊಂದುತ್ತಿರುವಂತೆ, ನಾವು ಅವರನ್ನೂ ಉತ್ಪಾದಿಸುತ್ತಿದ್ದೇವೆ.

ಈ ವಾರ ಇಂಗ್ಲೆಂಡ್ ವಿರುದ್ಧ ಭಾರತ ಎರಡನೆಯ ಟೆಸ್ಟ್ ಗೆಲ್ಲುವುದರೊಂದಿಗೆ ಮೂರು ಪಂದ್ಯಗಳ ಸರಣಿಯನ್ನು ತನ್ನದಾಗಿಸಿಕೊಂಡಾಗ ರಾಜಧಾನಿಯ ಪ್ರಮುಖ ಇಂಗ್ಲಿಷ್ ದಿನಪತ್ರಿಕೆಯು ತನ್ನ ಮುಖಪುಟದಲ್ಲಿ ಕೆಲವು ಯುವಕರು ಭಾಂಗ್ರಾ (ಪಂಜಾಬಿನ ಆನಂದಪರವಶೆಯ ನೃತ್ಯ) ನೃತ್ಯ ಮಾಡುತ್ತಿರುವ ಛಾಯಾಚಿತ್ರವನ್ನು ಹಾಕಿತ್ತು. ನಮ್ಮ ಸೈನಿಕರು ಜಯಶಾಲಿಗಳಾಗಿ ಗೊವಾಕ್ಕೆ ಹೆಜ್ಜೆ ಹಾಕಿದಾಗ ಇದೇ ರೀತಿಯ ಛಾಯಾಚಿತ್ರವನ್ನು ನೋಡಲು ನಾವು ಬಯಸಿದ್ದೆವು!

ಪ್ರಶ್ನೆ : ನಮ್ಮ ಸರ್ಕಾರವು ಜನವರಿ ಒಂದನೇ ತಾರೀಕಿನ ರಜೆಯನ್ನು ತೆಗೆದುಹಾಕಿದೆ. ಹಾಗಾದರೆ ಯಾವ ದಿನವನ್ನು ಹೊಸ ವರ್ಷದ ದಿನವಾಗಿ ಆಚರಿಸಬೇಕು?

ಉಪಾಧ್ಯಾಯ : ವಿಕ್ರಮ ವರ್ಷ ಪ್ರತಿಪದೆಯನ್ನು ರಜೆ ಎಂದು ಘೋಷಿಸಿದರೆ ಅದೇ ನಿಜವಾಗಿ ಒಂದು ಹೊಸ ವರ್ಷವಾಗುತ್ತದೆ.

ಪ್ರಶ್ನೆ : ಮುಂಬರುವ ಸಾಮಾನ್ಯ ಚುನಾವಣೆಯ ಬಗ್ಗೆ ನಿಮ್ಮ ಮುನ್ಸೂಚನೆ ಏನು?

ಉಪಾಧ್ಯಾಯ : ಇದರಿಂದ ನಾಲ್ಕಕ್ಕಿಂತ ಹೆಚ್ಚು ಜಾತಿಗಳು ಅಸ್ತಿತ್ವಕ್ಕೆ ಬರುತ್ತವೆ.

**ಮನೋಹರ್, ದೆಹಲಿ**

ಅಮೆರಿಕಾದಲ್ಲಿ ಎಲ್ಲಾ ವಿ.ಐ.ಪಿ.ಗಳಿಗೂ ಅವರ ಭಾಷಣಗಳನ್ನು ಬರೆದುಕೊಡಲು ಭೂತ ಬರಹಗಾರಿದ್ದಾರೆ ಎಂದು ಹೇಳುವರು.

ಉಪಾಧ್ಯಾಯ : ನೀವೇಕೆ ಆಶ್ಚರ್ಯಚಕಿತರಾಗುವಿರಿ? ಭಾರತದ ನಮ್ಮ ಕೆಲವು ವಿ.ಐ.ಪಿ.ಗಳು ಅವರಿಗಿಂತ ಇನ್ನೂ ಒಂದು ಹೆಜ್ಜೆ ಮುಂದಿದ್ದಾರೆ. ವಿ.ಐ.ಪಿ.ಗಳಿಗಾಗಿ ಅವರ ಚುನಾವಣೆಗಳನ್ನು ಎದುರಿಸುವ ಭೂತ ಹೋರಾಟಗಾರರೂ ಇದ್ದಾರೆ!

**ಜಿ. ಸುಬ್ರಮಣ್ಯಮ್, ಹೈದರಾಬಾದ್**

ಶ್ರೀ ಕೃಪಲಾನಿಯವರನ್ನು ಉತ್ತರ ಬಾಂಬೆಯಲ್ಲಿ ನೀವು ಯಾಕೆ ಬೆಂಬಲಿಸುತ್ತಿರುವಿರಿ?

ಯಾಕೆಂದರೆ ಇವರು ಯಾವುದೇ ತಲೆಪಟ್ಟಿಯಿಲ್ಲದ ರಾಷ್ಟ್ರೀಯವಾದಿ.

ಪ್ರಶ್ನೆ : ನಮ್ಮ ಜ್ಯೋತಿಷ್ಯದಲ್ಲಿ ನಿಮಗೆ ನಂಬಿಕೆಯಿದೆಯೇ? ಮುಂದಿನ ತಿಂಗಳು ಎಂಟು ಗ್ರಹಗಳು ಸಂಧಿಸಿದಾಗ ಏನಾಗುತ್ತದೆ?

ಉಪಾಧ್ಯಾಯ : ನಿಮಗೆ ನಂಬಿಕೆಯಿದ್ದಲ್ಲಿ ಸಾಕ್ಷ್ಯಗಳು ಅಗತ್ಯವಿಲ್ಲ. ಪ್ರಾಮಾಣಿಕರು ಪ್ರಕೃತಿ ಅಥವ ದೇವರಿಗೆ ಭಯಪಡುವಂತದ್ದೇನಿಲ್ಲ. ಮುಂದೆ ಏನಾಗುತ್ತದೆ ಎಂಬುದರ ಬಗ್ಗೆ, ಒಬ್ಬ ಜ್ಞಾನಿ ಹೇಳಿದ ಮಾತನ್ನು ಉಲ್ಲೇಖಿಸುತ್ತೇನೆ; ಪರಿಸ್ಥಿತಿಗಳು ಹೇಗೆ ಇದ್ದರೂ ಅವುಗಳ ಪರಿಣಾಮ ಏನಾಗಬೇಕು ಎಂದಿರುತ್ತದೆಯೋ ಹಾಗೆ ಆಗುತ್ತದೆ. ಇದಂತೂ ಶುದ್ಧ ವಿಜ್ಞಾನವಾಗಿದ್ದು, ನೀವು ಒಪ್ಪಲೇ ಬೇಕು.

ಪ್ರಶ್ನೆ : ಶ್ರೀ ನೆಹರುರವರ ನಂತರ ಶ್ರೀಮತಿ ಇಂದಿರಾ ಗಾಂಧಿಗೆ ಉಜ್ವಲ ಭವಿಷ್ಯವಿದೆ ಎಂದು ಊಹಿಸುವಿರಾ?

ಉಪಾಧ್ಯಾಯ : ದೇಶಕ್ಕೆ ಸರಿಯಾದ ಭವಿಷ್ಯವಿದೆಯೇ ಎಂಬುದನ್ನು ಯೋಚಿಸುವುದನ್ನು ಬಿಟ್ಟರೆ ಮತ್ತೇನು ಯೋಚಿಸಲು ನಮಗೆ ಸಮಯವಿಲ್ಲ.

**ಕೆ.ಡಿ.ಲುಲ್ಲಾ, ಕಲ್ಯಾಣ್**

ಪ್ರಶ್ನೆ : ಕೆಲವು ಮಂತ್ರಿಗಳು ಕ್ಯಾಡಿಲಾಕ್ ಕಾರನ್ನು ಬಳಸುತ್ತಾರೆ ಅಥವಾ ಹವಾನಿಯಂತ್ರಿತ ರೈಲುಗಳಲ್ಲಿ ಪ್ರಯಾಣಿಸುತ್ತಾರೆ, ಆದರೂ ಭಾರತದ ಬಡ ಜನರ ಬಗ್ಗೆ ಮಾತನಾಡುತ್ತಾರೆ.

ಉಪಾಧ್ಯಾಯ : ಶ್ರೀಮಂತರು ಮಾತ್ರ ಬಡವರ ಬಗ್ಗೆ ಯೋಚಿಸಬಲ್ಲರು, ಹಾಗಾಗಿ ಅವರನ್ನು ಬಡವರನ್ನಾಗಿಯೇ ಇಡಲು ಸ್ನೇಹದಿಂದ ನಡೆದುಕೊಳ್ಳುತ್ತಾರೆ.

ಪ್ರಶ್ನೆ : ಎಂಟು ಗ್ರಹಗಳ ಸಂಗಮದಿಂದ ಕೆಡುಕು ಉಂಟಾಗಬಹುದೆ?

ಉಪಾಧ್ಯಾಯ : ಒಳ್ಳೆಯದರಿಂದ ಹೆಚ್ಚು ಕೆಡುಕು ಬಂದಿರುವ ಹಾಗೆಯೇ ಕೆಡುಕಿನಿಂದ ಒಳ್ಳೆಯದು ಹೊರಹೊಮ್ಮಬಹುದು.

**ಮದೆ, ಹೆಚ್.ಜಿ., ಪೂನಾ**

ಪ್ರಶ್ನೆ : ನಾವು ಇಂದೂ ಸಮಾಜವಾದವನ್ನು ಹೊಂದಬಹುದೇ?

ಉಪಾಧ್ಯಾಯ : ಹಿಂದೂಗಳು ಯಾವಾಗಲೂ ಸಮಾಜವಾದವನ್ನೇ ಅನುಸರಿಸುತ್ತಾ ಬಂದಿದ್ದೇವೆ, ಆದರೆ ಧರ್ಮದ ಆಧಾರದ ಮೇಲೆ. ಆಧುನಿಕ ಶೈಲಿಯಾಗಿರುವ ಅರ್ಧಮದ ಆಧಾರದ ಮೇಲಲ್ಲ.

ಪ್ರಶ್ನೆ : ಸಂಭವನೀಯತೆ ಅಥವಾ ನಿಶ್ಚಿತತೆ–ಇವೆರಡರಲ್ಲಿ ರಾಜಕಾರಣಿಗೆ ಯಾವುದು ಉತ್ತಮ?

ಉಪಾಧ್ಯಾಯ : ಶ್ರದ್ಧೆಯಲ್ಲಿ ನಿಶ್ಚಿತತೆ, ವಿಫಲತೆಗಳ ಸಂಭವನೀಯತೆ, ಈ ಎರಡೂ ಗುಣಗಳು ಒಬ್ಬನಲ್ಲಿಯೇ ಕಂಡುಬಂದರೆ ಅವನೊಬ್ಬ ಮುತ್ಸದ್ಧಿ.

**ವಿ.ಪಿ.ಧಿಂಗ್ರ, ನವದೆಹಲಿ**

ಕಾವಲು ನಾಯಿಯಂತೆ ಕಾರ್ಯನಿರ್ವಹಿಸುತ್ತ ದೇಶದ ಶಾಸನ ಸಭೆಗಳನ್ನು ಎಚ್ಚರದಿಂದ ಗಮನಿಸಲು ಶ್ರಮಿಸುತ್ತೇವೆ ಎಂದು ಸಮಾಜವಾದಿ ಪಕ್ಷ ಹೇಳುತ್ತದೆ.

ಬೊಗಳುವ ನಾಯಿಗಳು ಕಚ್ಚುವುದಿಲ್ಲ ಮತ್ತು ಬಹಳಷ್ಟು ಸಾರಿ ಇವು ಅನುಮತಿ ಪಡೆದು ಬೊಗಳುತ್ತವೆ.

ಹೊಸವರ್ಷದ ಸಂದರ್ಭದಲ್ಲಿ ನೀವು ನಮಗೆ ಯಾವುದೇ ಸಂದೇಶವನ್ನು ಕೊಡಲಿಲ್ಲ. ಏಕೆಂದರೆ ಜನವರಿ ಒಂದನೇ ತಾರೀಕು ಹೊಸ ವರ್ಷದ ದಿನವಲ್ಲ. ಪ್ರಕೃತಿಯಲ್ಲಿ ಉದುರುವ ಎಲೆಗಳಿಂದ ಇದು ವರ್ಷದ ಕೊನೆಯಾಗಿದೆ. ವಸಂತ ಕಾಲದ ಆಗಮನದೊಂದಿಗಿನ ನಮ್ಮ ಹೊಸ ವರ್ಷವು ಹೆಚ್ಚು ಸಮರ್ಥನೀಯವಾದದ್ದು ಮತ್ತು ಸ್ವಾಭಾವಿಕವಾದದ್ದು.

ಪ್ರಶ್ನೆ : ತಮ್ಮ ಮಕ್ಕಳ ಬಗ್ಗೆ ಕಾಳಜಿ ವಹಿಸುವ ತಾಯಂದಿರು ಡಾಲ್ಡಾ ಉಪಯೋಗಿಸುತ್ತಾರೆ ಎಂದು ಒಂದು ಜಾಹೀರಾತು ಹೇಳುತ್ತದೆ.

ಉಪಾಧ್ಯಾಯ : ಡಾಲ್ಡಾ ಬಗ್ಗೆ ಕಾಳಜಿ ವಹಿಸುವ ಬೇರೆಯವರು ಎಲ್ಲಾ ಚತುರ ಮಾರ್ಗೋಪಾಯಗಳಿಂದ ಅದನ್ನು ಮಾರುತ್ತಾರೆ.

ಗೋವಾ, ದಿಯು ಮತ್ತು ದಾಮನ್‌ಗಳಿಗೆ ವಿಶೇಷ ಸ್ಥಾನಮಾನ ಕಲ್ಪಿಸಿಕೊಡಲು ಭಾರತ ಸರ್ಕಾರವು ಯಾಕಷ್ಟು ಕಾಳಜಿ ವಹಿಸಿದೆ?

ವಸಾಹತುವಾದವನ್ನು ದ್ವೇಷಿಸುತ್ತೇವೆಂದು ಸ್ವಯಂಘೋಷಣೆ ಮಾಡಿಕೊಂಡ ಕಾಂಗ್ರೆಸ್ ಅದನ್ನೇ ಇಷ್ಟಪಡುತ್ತಿದೆ. ಅಥವಾ ಹೆಸರನ್ನು ಮಾತ್ರ ಬದಲಾಯಿಸಿಕೊಂಡು ಜನರು ಅದನ್ನೇ ಇಷ್ಟಪಡುತ್ತಿದ್ದಾರೆ.

**ಸುಖನ್ ರಾಜ್ ಸಿ. ಹುಂಡಿಯಾ, ಬಳ್ಳಾರಿ**

ಪ್ರಶ್ನೆ : ಆಕಾಶಕಾಯಗಳಾದ ಅಷ್ಟಗ್ರಹಗಳಲ್ಲಿ ಅಥವಾ ಕಾಂಗ್ರೆಸ್ಸಿನ ದುಷ್ಟಗ್ರಹಗಳಲ್ಲಿ ಯಾವುದು ದೇಶಕ್ಕೆ ಹೆಚ್ಚು ಅಪಾಯಕಾರಿ?

ಉಪಾಧ್ಯಾಯ : ಯಾವುದೂ ಅಲ್ಲ, ಒಟ್ಟಾದ ನಂತರ ಅಷ್ಟಗ್ರಹಗಳು ಚೆದುರಿ ಹೋದಂತೆ ದುಷ್ಟಗ್ರಹಗಳೂ ಕೂಡ ಚೆದುರಿ ಹೋಗುವುದನ್ನು ನಾವು ನೋಡಬಹುದು.

**ಎನ್.ವಿ.ಸತ್ಯನಾರಾಯಣಮೂರ್ತಿ, ಕೋತಪೆಟ್ಟ (ಆಂಧ್ರಪ್ರದೇಶ)**

ನೆಹರುರವರು ಸ್ವದೇಶಕ್ಕೆ ಮರಳಿದ ನಂತರ ಅಮೇರಿಕಾದಲ್ಲಿ ಶ್ರೀ ಮೆನನ್‌ರವರು ನೀಡಿದ ಹೇಳಿಕೆ ಸರಿ ಎಂದಿದ್ದಾರೆ. ನಿಮ್ಮ ಅಭಿಪ್ರಾಯವೇನು?

ಅನೇಕ ವಿಷಯಗಳು ಸರಿಯಿಲ್ಲದಿರುವ ಸತ್ಯವಾಗಿರಬಹುದು. ಶ್ರೀ ಮೆನನ್‌ರವರು ಪಂಡಿತ್ ನೆಹರುರವರಿಗಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಮಾತನಾಡಿದ್ದರು. ಆದರೆ, ಅಮೇರಿಕದಲ್ಲಿದ್ದಾಗ ಅವರಿಬ್ಬರಲ್ಲಿ ಯಾರು ಅಧ್ಯಕ್ಷ ಕೆನಡಿಯವರಿಗೆ ಹಾಗೆ ಹೇಳಿದ್ದಾರೆ ಎಂಬ ಸಂಶಯವಿದೆ. ಶ್ರೀ ಮೆನನ್ ರವರು ಅಧ್ಯಕ್ಷರನ್ನು ವಾಗ್ದಂಡನೆಗೆ ಆಹ್ವಾನಿಸಿದ್ದರೊ ಅಥವಾ ಅಧ್ಯಕ್ಷರಿಂದ ಇವರು ವಾಗ್ದಂಡನೆಗೆ ಗುರಿಯಾದರೋ ಅಥವಾ ಯಾರು ಸಂದರ್ಶನ ಬಯಸಿದರೋ ನಮಗೆ ತಿಳಿಯದು.

ಪ್ರಶ್ನೆ : ಭಾರತದಲ್ಲಿ ವಾಸಿಸುವವನಿಗೆ ಇರಬೇಕಾದ ಮುಖ್ಯ ಅರ್ಹತೆಗಳಾವುವು?

ಉಪಾಧ್ಯಾಯ: ಅವನು ಇಂಗ್ಲಿಷ್ ವರ್ಣಮಾಲೆಯನ್ನು ಕಲಿಯಬೇಕು, ಮಾರ್ಕ್ಸ್ ವಾದವನ್ನು ಓದಬೇಕು, ಇಂಗ್ಲಿಷ್ ಮತ್ತು ಅಮೇರಿಕಾ ವಿಶ್ವವಿದ್ಯಾಲಯಗಳಿಗೆ ಹೋಗಬೇಕು, ತನ್ನಿಂದ ಪ್ರಾರಂಭಗೊಂಡು, ದೇಶದ ಅಭಿವೃದ್ಧಿ ಮಾಡುವ ಕುರಿತು ಜೀವನಪೂರ್ತಿ "ಯೋಜನೆ" ಮಾಡುತ್ತಿರಬೇಕು. ಇದು ಅವನ ಜೀವನದ ಹೆಚ್ಚಿನ ಸಮಯ ಭಾರತದಿಂದ ಹೊರಗಿರುವುದನ್ನು ಸಾಧ್ಯವಾಗಿಸುತ್ತದೆ. ಇನ್ನು ಭಾರತದಲ್ಲಿ ಉಳಿದವರು ಪ್ರತಿ ಐದು ವರ್ಷಕ್ಕೊಮ್ಮೆ ಮತ ಚಲಾಯಿಸುವ ಸುಯೋಗವನ್ನು ಹೊಂದಿದ್ದಾರೆ.

**ವೇಲಂಪಲ್ಲಿ ಕೃಷ್ಣಮೂರ್ತಿ, ಓಂಗೊಲೆ**

ಪ್ರಶ್ನೆ : ಬಿ.ಜೆ.ಎಸ್. ನಾಯಕರು ಸಂಸತ್ತಿನ ಒಳ ಹೊರಗೆ ವಿದೇಶಿ ವ್ಯವಹಾರಗಳ ಬಗ್ಗೆ ಯಾಕೆ ಮಾತನಾಡುತ್ತಿಲ್ಲ?

ಉಪಾಧ್ಯಾಯ : ಮತ್ತು ಪಂಡಿತ್ ನೆಹರುರವರನ್ನು ತಮ್ಮ ಮುಖ್ಯ ಕಾರ್ಯದಿಂದ ವಂಚಿತಗೊಳಿಸುತ್ತಿಲ್ಲ?

**ದೌಲತ್ ರಾಮ್, ಅಂಬಾಲಾ**

ಪ್ರಶ್ನೆ : ನೆಹರೂವಾದ ಮತ್ತು ಸಮಾಜವಾದಗಳ ನಡುವಿನ ವ್ಯತ್ಯಾಸಗಳೇನು?

ಉಪಾಧ್ಯಾಯ : ನೆಹರೂವಾದ ನೆಹರುವರನ್ನು ಉಳಿಸುವುದಿಲ್ಲ ಮತ್ತು ಸಮಾಜವಾದ ಸಮಾಜವನ್ನು ಉಳಿಸುವುದಿಲ್ಲ.

ಪ್ರಶ್ನೆ : ಒಬ್ಬ ಸರ್ಕಾರಿ ನೌಕರ ಆರ್.ಎಸ್.ಎಸ್.ಸೇರಬಹುದೆ?

ಉಪಾಧ್ಯಾಯ :ನಮಗೆ ತಿಳಿದಿರುವಂತೆ ಸರ್ಕಾರಿ ನೌಕರರು ಯಾವುದೇ

ರಾಜಕೀಯ ಸಂಘಟನೆಯನ್ನು ಸೇರಬಾರದು ಎಂಬುದೊಂದೆ ನಿರ್ಬಂಧ ಇರುವುದು. ಆರ್.ಎಸ್.ಎಸ್. ರಾಜಕೀಯ ಸಂಘಟನೆ ಅಲ್ಲ, ಇದು ತಮಗೆ ತಿಳಿದಿರಬೇಕು.

**ಸಿ.ವಿ.ಮರಾಠೆ, ಪೂನಾ**

ಅಲಹಾಬಾದಿನಲ್ಲಿ ಶ್ರೀ ನೆಹರುರವರು ಬರಿಯ ಘೋಷಣೆಗಳು ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ ಎಂದರು. ಅದು ಮತ್ತೊಂದು ಘೋಷಣೆಯಲ್ಲವೇ?

ಉಪಾಧ್ಯಾಯ : ಹೌದು, ಅದು ಹೇಳಿದವರ ಮನಸ್ಸಿಗೆ ಸಮಾಧಾನ ನೀಡುತ್ತದೆ.

ನಿಮ್ಮ ಮತ–೭

## ಯೋಜನೆಯತ್ತ ಭಾರತೀಯ ಜನಸಂಘದ ವಿಭಿನ್ನ ನಡೆ

ತಮ್ಮ ಪ್ರಬುದ್ಧ ವಾದಸರಣಿಯನ್ನು ಮುಂದುವರೆಸುತ್ತಾ ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಯೋಜನೆಯ ಬಗೆಗೆ ಇರುವ ಪಕ್ಷದ ಮನೋಧರ್ಮಗಳನ್ನು ಸಾಮಾನ್ಯವಾಗಿ ಹಾಗೂ ಭಾರತೀಯ ಯೋಜನೆಯ ಬಗ್ಗೆ ನಿರ್ದಿಷ್ಟವಾಗಿ ತುಲನಾತ್ಮಕವಾಗಿ ಅಧ್ಯಯನ ನಡೆಸಿದ್ದಾರೆ. ಸಮಾಜವಾದಿಗಳು ಸಮಾಜ ಪಾಶ್ಚಿಮಾತ್ಯ ತಂತ್ರಜ್ಞಾನಕ್ಕೆ ಹೊಂದಿಕೊಳ್ಳಬೇಕು ಎಂದು ಬದಲಾವಣೆ ಬಯಸಿದರೆ, ಸ್ವತಂತ್ರ ಪಕ್ಷದವರು ಸಮಾಜ ಯಾವುದೇ ಸಾಮಾಜಿಕ ಬದಲಾವಣೆ ಇಲ್ಲದೆ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು ಎಂದು ಬಯಸುತ್ತಾರೆ ಎಂದವರು ಹೇಳಿದ್ದಾರೆ.

ಭಾರತೀಯ ಜನಸಂಘ ಇವರಿಬ್ಬರಿಗಿಂತಲೂ ಭಿನ್ನವಾಗಿದೆ. ನಮ್ಮ ಸಾಮಾಜಿಕ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ತಂತ್ರಜ್ಞಾನವನ್ನು ವಿಕಾಸಗೊಳಿಸಲು ಜನಸಂಘ ಬಯಸುತ್ತದೆ. ಹಾಗೂ ದೇಶದ ಶಾಶ್ವತ ಮೌಲ್ಯಗಳಿಗೆ ಒಪ್ಪುವ ರೀತಿ ಅಂತಹ ತಂತ್ರಜ್ಞಾನ ಸಾಮಾಜಿಕ ಸಂಸ್ಥೆಗಳನ್ನು ಸುಧಾರಿಸಬೇಕು ಎಂದು ಆಶಿಸುತ್ತದೆ.

ಭಾರತದಲ್ಲಿ ಯೋಜನೆಯ ಇತಿಹಾಸವನ್ನು ದಾಖಲಿಸುತ್ತಾ, ಅನ್ವೇಷಿಸುತ್ತಾ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹೀಗೆ ಹೇಳುತ್ತದೆ–"ಸ್ವಾತಂತ್ರ್ಯ ನಂತರ ಭಾರತಕ್ಕೆ ಮಾರ್ಗದರ್ಶಕವಾಗಿರುವ ಎರಡು ಧ್ಯೇಯಗಳಿವೆ. ಸಂಸದೀಯ ವ್ಯವಸ್ಥೆಯನ್ನು ಆಧರಿಸಿದ ಸರ್ಕಾರವನ್ನು ರಚಿಸಿ ತನ್ಮೂಲಕ ಪ್ರಜಾಪ್ರಭುತ್ವ ರಾಜಕೀಯ ರಚನೆಯನ್ನು ಬಲವಾಗಿ ಸ್ಥಾಪಿಸುವುದು ಹಾಗೂ ಶೀಘ್ರ ವಿಸ್ತಾರವಾಗುತ್ತಿರುವ ಮತ್ತು ತಾಂತ್ರಿಕವಾಗಿ ಪ್ರಗತಿಶೀಲ ಆರ್ಥಿಕತೆಗಾಗಿ ಪ್ರಜಾತಾಂತ್ರಿಕ ಮಾರ್ಗವನ್ನು ಸೃಷ್ಟಿಸುವುದು. ಪ್ರತಿ ನಾಗರಿಕನಿಗೂ ಸಮಾನಾವಕಾಶ ಕಲ್ಪಿಸುವ ಹಾಗೂ ನ್ಯಾಯವನ್ನೊದಗಿಸುವ ತಳಹದಿಯ ಮೇಲೆ ಹೊಸ ವ್ಯವಸ್ಥೆಯೊಂದನ್ನು ರೂಪಿಸುವುದು. ಈ ಧ್ಯೇಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಪ್ರಥಮ ಪಂಚ ವಾರ್ಷಿಕ ಯೋಜನೆಯನ್ನು ಆರಂಭಿಸಲಾಗಿದೆ."

ಪ್ರಜಾ ಸೋಷಯಲಿಸ್ಟ್ ಪಕ್ಷವೂ ಪ್ರಜಾತಾಂತ್ರಿಕ ಸಮಾಜವಾದದ ಬಗೆಗೆ

ಮಾತನಾಡುತ್ತದೆ. ಆದರೆ ಯೋಜನೆ ಪ್ರಜಾತಾಂತ್ರಿಕ ಆದರ್ಶಗಳಿಗೆ ವಿರುದ್ಧವಾಗಿ ಮುಂದುವರಿಯಲು ಬಿಡಬೇಕೆಂದು ಬಹಿರಂಗವಾಗಿ ಅಭಿವ್ಯಕ್ತಪಡಿಸಿಲ್ಲ.

ಸ್ವತಂತ್ರ ಪಕ್ಷ ಸಂವಿಧಾನದ ಮಿತಿಯೊಳಗೆ, ಅದು ಖಾತ್ರಿ ನೀಡಿರುವ ಸ್ವಾತಂತ್ರ್ಯದೊಳಗೆ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು ಎಂದು ಹೇಳಿದೆ. ಕಾಂಗ್ರೆಸ್ಸಿಗೆ ಹಾಗೂ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಗೆ ಅಂತಹ ಸೀಮಿತತೆಗಳು ಬೇಕಿಲ್ಲ.

ಸಂವಿಧಾನ ನೀಡಿರುವ ಖಾತ್ರಿಗಳನುಗುಣವಾಗಿ ಯೋಜನೆಗಳನ್ನು ತಿದ್ದುಪಡಿಗೊಳಿಸುವುದಕ್ಕಿಂತ ಅವು ಸಂವಿಧಾನಗಳನ್ನು ತಿದ್ದಲು ಬಯಸುತ್ತದೆ.

ಯೋಜನೆಯ ತಂತ್ರ ಹಾಗೂ ನೀತಿ–ನಿಯಮಗಳು ಪ್ರಶ್ನೆಗಳ ಆಧಾರದ ಮೇಲೆ ಯೋಜನೆಯ ಅವಶ್ಯಕತೆಯನ್ನು ಗುರುತಿಸಲಾಗಿದೆ. ಈ ತಳಹದಿಯ ಮೇಲೆಯೇ ಯಾವುದೇ ಸ್ವರೂಪ ಹಾಗೂ ಅನುಷ್ಠಾನ ಅವಲಂಬಿತವಾಗಿದೆ. ಕಮ್ಯುನಿಸ್ಟ್ ಪಕ್ಷವೊಂದನ್ನು ಬಿಟ್ಟು ಉಳಿದೆಲ್ಲಾ ಪಕ್ಷಗಳು ಯೋಜನೆಯು ಷರತ್ತುಬದ್ಧವಾಗಿರಬೇಕು ಎಂದು ಒಪ್ಪುತ್ತವೆ. ಆರ್ಥಿಕ ಅಂಶಗಳಿಲ್ಲದೇ ಕೆಲವು ಗುರುತಿಸಲಾದ ಸಾಮಾಜಿಕ ಹಾಗೂ ರಾಜಕೀಯ ಮೌಲ್ಯಗಳಿಂದ ಷರತ್ತುಬದ್ಧವಾಗಿರಬೇಕು.

**ಹೊಸ ವ್ಯವಸ್ಥೆ ಎಂತಹುದು?**

ಕಾಂಗ್ರೆಸ್ಸಿನವರು ಪ್ರತಿಪಾದಿಸುತ್ತಿರುವ ಹೊಸ ವ್ಯವಸ್ಥೆಯು ಈಗಿನ ಸಾಮಾಜಿಕ ವ್ಯವಸ್ಥೆಯ ಸ್ಥಾನ ತುಂಬಲಿದೆ. ಇದೇ ಅವರಿಗೆ ಬೇಕಾಗಿರುವುದು. ಈ ಹೊಸ ವ್ಯವಸ್ಥೆ ಹೇಗಿರಬೇಕು ಎಂದು ಕೇಳಿದರೆ ಅವರು ವ್ಯಾಖ್ಯಾನಿಸಲು ವಿಫಲರಾಗುತ್ತಾರೆ.

೧೯೫೭ರ ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆಯು ಸಮಾಜವಾದದ ಬಗ್ಗೆ ಹೀಗೆ ಹೇಳಿದೆ–ಸಮಾಜವಾದ ಎಂದರೆ ಕೇವಲ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸುವುದು ಅಲ್ಲ. ಆಲೋಚಿಸುವಿಕೆಯ ಹಾಗೂ ಬದುಕಿನ ದಾರಿಗಳನ್ನು ಕೇವಲ ಬದಲಾಯಿಸುವುದು ಕೂಡಾ ಇಲ್ಲ.

ಕಾಂಗ್ರೆಸ್ ಯಾವುದೇ ಸಾಮಾಜಿಕ ಬದಲಾವಣೆ ತರಲು ವಿಫಲವಾಗಿದೆ ಎಂದು ಪ್ರಜಾ ಸೋಷಿಯಲಿಸ್ಟ್ ಪಕ್ಷ ಆರೋಪಿಸುತ್ತದೆ. ಸಮಾಜವಾದದ ಆಧಾರದ ಮೇಲೆ ಸಮಾಜ ಕಟ್ಟುವ ಉದ್ದೇಶವಿದ್ದರೂ, ಕಾಂಗ್ರೆಸ್ ಪಕ್ಷ ಇದನ್ನು ಒಪ್ಪಿದ್ದರೂ, ಆ ಪಕ್ಷದ ಸರ್ಕಾರಗಳು ಇದನ್ನು ಅಳವಡಿಸಿಕೊಂಡಿದ್ದರೂ ಅವರ ಸಮಾಜವಾದದ ಕಲ್ಪನೆ ಹೊಸ ಉತ್ಪಾದನೆಯ ತಂತ್ರಗಳ ಅಳವಡಿಕೆಗೆ ಸೀಮಿತವಾದಂತೆ ತೋರುತ್ತದೆ. ಹಾಗೆಯೇ ತಿಳಿವಳಿಕೆಯಿಲ್ಲದೆ ಈಗಿನ ಸಾಮಾಜಿಕ ವ್ಯವಸ್ಥೆ ಹಾಗೂ ಸಾರ್ವಜನಿಕ ರಂಗದ ವಿಸ್ತರಣೆಗೆ ಧಕ್ಕೆ ಬರದಂತೆ ಕಲ್ಯಾಣ ಕಾರ್ಯಕ್ರಮಗಳನ್ನು ಅನುಕೂಲಕರವಾಗಿ

ಒಪ್ಪುವುದಕ್ಕಷ್ಟೇ ಅದು ಸೀಮಿತವಾಗಿದೆ.

ಸಮಾಜವಾದಿಗಳಿಗೆ ಸಮಾಜ ನವ ತಂತ್ರಜ್ಞಾನಗಳಿಗೆ, ಅಂದರೆ ಪಾಶ್ಚಿಮಾತ್ಯ ತಂತ್ರಜ್ಞಾನಕ್ಕೆ ಹೊಂದುವಂತೆ ಬದಲಾಯಿಸುವುದು ಬೇಕಿದ್ದರೆ ಸ್ವತಂತ್ರದವರಿಗೆ ಯಾವುದೇ ಬದಲಾವಣೆ ಇಲ್ಲದೆ ಸಮಾಜ ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವುದು ಬೇಕಾಗಿದೆ. ಆದರೆ, ಜನಸಂಘದ ನಿಲುವು ಭಿನ್ನ. ದೇಶದಲ್ಲಿ ಲಭ್ಯವಿರುವ ಕಡಿಮೆ ಸಂಪನ್ಮೂಲಗಳನ್ನು ಬಳಸಿ ಕನಿಷ್ಠ ಕಾಲದಲ್ಲಿ ಹೆಚ್ಚಿಗೆ ಉತ್ಪಾದನೆ ಮಾಡುವ ಕುರಿತು ಜನಸಂಘದ ಪ್ರಣಾಳಿಕೆ ಎಚ್ಚರಿಕೆ ನೀಡುತ್ತದೆ. ಆದರೆ ಯೋಜನೆ ಒಂದು ಮಾರ್ಗವೇ ಹೊರತು ಅದೇ ಅಂತ್ಯವಲ್ಲ. ದೇಶದ ವಾಸ್ತವಿಕ ಅವಶ್ಯಕತೆಗಳು ಮತ್ತು ಸಾಮರ್ಥ್ಯ ನಿಷ್ಕರ್ಷೆಯ ಆಧಾರದ ಮೇಲೆ ಯೋಜನೆ ರೂಪಿತವಾಗಿರಬೇಕು.

ಕೈಗಾರಿಕಾ ಯೋಜನಾ ತಂತ್ರಗಳ ಬಗೆಗೆ ಜನಸಂಘದ ಚುನಾವಣಾ ಪ್ರಣಾಳಿಕೆ ಹೀಗೆ ಸ್ಪಷ್ಟವಾಗಿ ನುಡಿದಿದೆ–ಯುಕ್ತ ಮತ್ತು ಶೀಘ್ರ ಕೈಗಾರಿಕೀಕರಣಕ್ಕಾಗಿ ಜನಸಂಘದ ಅಭಿಪ್ರಾಯವೆಂದರೆ ನಾವು ನಮ್ಮದೇ ಆದ ತಂತ್ರ ವಿಧಾನಗಳನ್ನು ರೂಪಿಸಿಕೊಳ್ಳುವುದು, ಪಾಶ್ಚಿಮಾತ್ಯ ಪದ್ಧತಿಯನ್ನು ನಕಲು ಮಾಡುವುದಲ್ಲ. ಪ್ರತಿ ದೇಶದಲ್ಲಿಯೂ ಅಪೇಕ್ಷಣೀಯ ಅನುಕೂಲಕರ ಅಂಶಗಳು ಬೇರೆಬೇರೆ ಆಗಿರುತ್ತವೆ. ಜೊತೆಗೆ ನಮ್ಮ ಸಾಂಸ್ಕೃತಿಕ ಸಂಪ್ರದಾಯಗಳು, ಸಾಮಾಜಿಕ ಮೌಲ್ಯಗಳು ಹಾಗೂ ಈಗಿನ ಭೌತಿಕ ವಸ್ತುಸ್ಥಿತಿಯು ಪಾಶ್ಚಿಮಾತ್ಯ ಪದ್ಧತಿಯ ಆರಂಭಕ್ಕಾಗಲಿ ಅಥವಾ ಅದರ ಹೇರುವಿಕೆಗಾಗಲೀ ಹೊಂದುವುದಿಲ್ಲ. ನಮ್ಮ ಪರಿಸ್ಥಿತಿಯೇ ಬೇರೆ. ಅಂತಹುದೇನಾದರೂ ಆದರೆ ಯಾವುದೇ ಸ್ವಾವಲಂಬಿ, ಸ್ವಉತ್ಪಾದಕ ಆರ್ಥಿಕತೆಯನ್ನು ಸೃಷ್ಟಿಸುವುದೂ ಇಲ್ಲ. ಭಾರತೀಯ ಜನಸಂಘ ವಿಕೇಂದ್ರೀಕೃತ ಆರ್ಥಿಕತೆಯ ಆಧಾರದ ಮೇಲೆ ಪ್ರತಿ ಕುಟುಂಬವೂ ಉತ್ಪಾದಕ ಘಟಕವಾಗುವ ರೀತಿ ಹೊಸ ತಂತ್ರವೊಂದನ್ನು ವಿಕಾಸಗೊಳಿಸಲಿದೆ. ಈ ತಂತ್ರವು ತಂತಾನೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ ಹಾಗೂ ಸಂಪತ್ತು ಮತ್ತು ಆದಾಯಗಳನ್ನು ಸಮನಾಗಿ ಹಂಚುತ್ತದೆ.

## ಮೂಲ ವೈಚಾರಿಕ ಹರಿವು

ಯೋಜನಾ ಆದ್ಯತೆಗಳ ಗುರುತಿಸುವಿಕೆ ಹಾಗೂ ವಿವಿಧ ರಂಗಗಳಿಗೆ ಕಾರ್ಯನಿಯೋಜಿಸುವ ನಿರ್ಧಾರದೃಢತೆ ಅಗತ್ಯ. ಸೋವಿಯತ್ ಮಾದರಿಯನ್ನು ಆಧರಿಸಿದ ಪ್ರಥಮ ಪಂಚವಾರ್ಷಿಕ ಯೋಜನೆಯು ಕೈಗಾರಿಕೆಗಳು, ಅದರಲ್ಲಿಯೂ ಮೂಲ ಮತ್ತು ಹೆಚ್ಚು ಬಂಡವಾಳ ಬೇಕಿರುವ ಕೈಗಾರಿಕೆಗಳಿಗೆ ಆದ್ಯತೆ ನೀಡಿದೆ. ಇದರ ಪರಿಣಾಮ ಕೇವಲ ವಸ್ತುಗಳ ತೀವ್ರ ಕೊರತೆ ಅಲ್ಲ, ನಿರುದ್ಯೋಗ, ಬೆಲೆ ಹಾಗೂ ತೆರಿಗೆ ಹೆಚ್ಚಳವೂ ಆಗಿದೆ. ಈ ಅಸಮತೋಲನವನ್ನು ಸರಿಪಡಿಸಬೇಕಿದೆ. ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆ ಸಾಮಾನ್ಯವಾಗಿ ಹಾಗೂ ಮೂರನೇ

ಪಂಚವಾರ್ಷಿಕ ಯೋಜನೆಯು ವಿಶೇಷವಾಗಿ ಈ ಆದ್ಯತೆಗಳಲ್ಲಿ ಯಾವ ಬದಲಾವಣೆಯನ್ನು ಪ್ರಸ್ತಾಪಿಸಿಲ್ಲ. ಭಾರೀ ಕೈಗಾರಿಕೆಗಳು ಹಾಗೂ ಕೃಷಿಯಲ್ಲಿ ಹೆಚ್ಚು ಬಂಡವಾಳ ತೊಡಗಿಸುವುದಕ್ಕೆ ತದ್ವಿರುದ್ಧವಾಗಿ ಒತ್ತು ನೀಡಿವೆ.

ಪ್ರಜಾ ಸೋಷಿಯಲಿಸ್ಟ್ ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷ ಇದೆಲ್ಲವನ್ನು ಲಕ್ಷಿಸಿ ಈ ಬಗ್ಗೆ ಯಾವ ಬದಲಾವಣೆಯನ್ನೂ ಪ್ರಸ್ತಾಪಿಸಿಲ್ಲ. ಪ್ರಜಾ ಸೋಷಿಯಲಿಸ್ಟ್ ಪಕ್ಷದ ಪ್ರಣಾಳಿಕೆ ಸಣ್ಣ ಪ್ರಮಾಣದ ವಿಕೇಂದ್ರೀಕೃತ ಕೈಗಾರಿಕೆಗಳ ಬಗ್ಗೆ ಮೃದುವಾಗಿ ಹೇಳಿದೆ. ಆಧುನಿಕ ಅಭಿವೃದ್ಧಿ ಮತ್ತು ಕರಕುಶಲಗಾರರ ಕಸುಬುಗಳೆರಡೂ ಜೊತೆಜೊತೆಗೆ ಇರುತ್ತವೆ ಎಂದು ವಿಷಾದಿಸಿದೆ. ಇವರಿಗೆ ಸಣ್ಣಕೈಗಾರಿಕೆ ಅವಶ್ಯಕತೆಯಿರುವುದು ಉತ್ಪಾದನೆಗಳ ಆದ್ಯತೆಗಳನ್ನು ದಾಖಲಿಸುವುದಕ್ಕಲ್ಲ. ಬದಲಿಗೆ, ಅಧಿಕಾರ ಹಾಗೂ ಸಂಪತ್ತಿಗೆ ತಡೆಗೋಡೆಯಾಗಿ ಅಷ್ಟೇ. ಕಮ್ಯೂನಿಸ್ಟ್ ಪ್ರಣಾಳಿಕೆಯಂತೂ ಬಹಿರಂಗವಾಗಿ ತಕ್ಷಣಕ್ಕೆ ಸಾರ್ವಜನಿಕ ರಂಗಕ್ಕೆ ಮುಂದಾಳು ಪಾತ್ರ ಹಾಗೂ ಬಂಡವಾಳ ಬೇಡುವ ಮತ್ತು ಕೈಗಾರಿಕೆಗಳಿಗೆ ಹೆಮ್ಮೆಯ ಸ್ಥಾನ ನೀಡುವ ಕೈಗಾರಿಕಾ ಶಾಸನಗಳ ಸಮಗ್ರ ಕಾರ್ಯಕ್ರಮ ಬೇಕು ಎಂದಿದೆ.

ಭಾರತೀಯ ಜನಸಂಘ ಮತ್ತು ಸ್ವತಂತ್ರ ಪಕ್ಷಗಳು ನಿರ್ದಿಷ್ಟವಾಗಿ ಆದ್ಯತೆಗಳಲ್ಲಿ ಬದಲಾವಣೆ ಬಯಸಿವೆ. ಕೃಷಿಗೆ ಆದ್ಯತೆ ನೀಡಬೇಕು ಹಾಗೂ ಸುಸ್ಥಿರ ಕೈಗಾರಿಕಾ ರಂಗದ ಬೆಳವಣಿಗೆಗೆ ಬೇಕಾದ ಸ್ವಾಭಿವೃದ್ಧಿಯ ಆಧಾರದ ಮೇಲೆ ಅದನ್ನು ನಿಲ್ಲಿಸಬೇಕೆಂದು ಸ್ವತಂತ್ರ ಪಕ್ಷದ ಪ್ರಣಾಳಿಕೆ ಹೇಳುತ್ತದೆ. ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಸ್ವತಂತ್ರ ಪಕ್ಷ ಬಂಡವಾಳ ಬೇಡುವ ಕೈಗಾರಿಕೆಗಳ, ವ್ಯವಸ್ಥಿತ ಗ್ರಾಹಕ ವಸ್ತು, ಕೈಗಾರಿಕೆಗಳು ಹಾಗೂ ಕೃಷಿ ಉತ್ಪನ್ನ ಸಂಸ್ಕರಣೆಗಳಿಗೆ ಪೂರಕವಾಗುವ ಗ್ರಾಮೀಣ ಕೈಗಾರಿಕೆಗಳ ಸಮತೋಲಿತ ಅಭಿವೃದ್ಧಿಗೆ ನಿಂತಿದೆ. ಸಂಪನ್ಮೂಲಗಳ ಲಭ್ಯತೆಗೆ ಅನುಗುಣವಾಗಿ ಮೂಲ ಹಾಗೂ ಭಾರಿ ಕೈಗಾರಿಕೆಗಳ ಅಭಿವೃದ್ಧಿಗೆ ವಿರುದ್ಧವಾಗಿರದ ಈ ಪಕ್ಷವು ಕೃಷಿಯನ್ನು ಕಡೆಗಣಿಸಿ ಭಾರೀ ಕೈಗಾರಿಕೆಗಳಿಗೆ ಒತ್ತು ನೀಡುವ ದೋಷಪೂರಿತ ಆದ್ಯತೆಯನ್ನು ತಿರಸ್ಕರಿಸುತ್ತದೆ. ಕಡಿಮೆ ಆದಾಯದ ಜನರಿಗೆ ಅನುಕೂಲ ಹಾಗೂ ಅವರ ಬದುಕನ್ನು ಸುಖಿಗೊಳಿಸುವ ಉತ್ಪನ್ನಗಳನ್ನು ತಯಾರಿಸುವ ಗ್ರಾಹಕ ವಸ್ತುಗಳ ತಯಾರಿಕೆಯಲ್ಲಿ ತೊಡಗಿರುವ ಗುಡಿ ಹಾಗೂ ವ್ಯವಸ್ಥಿತ ಕೈಗಾರಿಕೆಗಳ ಅಲಕ್ಷಿಸುವಿಕೆಯನ್ನು ವಿರೋಧಿಸಿದೆ.

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಬದಲಾವಣೆ ಬಯಸುತ್ತಾ ಜನಸಂಘ ಹೀಗೆ ಪ್ರಣಾಳಿಕೆಯಲ್ಲಿ ಹೇಳಿದೆ–"ಆಹಾರ ಉತ್ಪಾದನೆ ಹಾಗೂ ಕೃಷಿಗೆ ಬೇಕಾಗುವ ಕಚ್ಚಾವಸ್ತುಗಳ ಉತ್ಪಾದನೆಗೆ ನೆರವಾಗುವ ಕೃಷಿಗೆ ಮೊದಲ ಆದ್ಯತೆ ಇರಬೇಕು ಹಾಗೂ ಎರಡನೆಯ ಆದ್ಯತೆ ಸಣ್ಣ ಪ್ರಮಾಣದ ಕೈಗಾರಿಕೆಗಳ ಹಾಗೂ ಗ್ರಾಹಕ ವಸ್ತುಗಳ ಕೈಗಾರಿಕೆಗಳ ವ್ಯಾಪಕ ಸ್ಥಾಪನೆಗೆ ಸಿಗಬೇಕು."

**ಎರಡು ಅತಿರೇಕಗಳು**

ದೇಶ ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳತ್ತ ವಾಸ್ತವಿಕ ನಿಲುವಿಲ್ಲದೆ ತಾತ್ವಿಕತೆಗಳು ಇರುವುದರಿಂದ ಸಾಕಷ್ಟು ಗೊಂದಲಗಳು ಇವೆ. ಎಲ್ಲಿ ವಾಸ್ತವಿಕತೆ ಇರಬೇಕೋ ಅಲ್ಲಿ ಸಿದ್ಧಾಂತಗಳು ರಾರಾಜಿಸುತ್ತವೆ. ಈ ಗೊಂದಲಗಳಲ್ಲಿ ಎರಡು ಅತಿರೇಕಗಳಿವೆ. ಒಂದರಲ್ಲಿ ಸ್ವತಂತ್ರ ಪಕ್ಷದವರು ಸರ್ಕಾರ ಕೈಗಾರಿಕೆ ಮತ್ತು ವ್ಯಾಪಾರದಲ್ಲಿ ಭಾಗಿಯಾಗಿ ಜವಾಬ್ದಾರಿಗಳನ್ನು ಹೊರಬಾರದೆಂದು ಹೇಳುತ್ತಾರೆ.

ಇನ್ನೊಂದು ತುದಿಯಲ್ಲಿ ಕಮ್ಯುನಿಸ್ಟ್ ಪಕ್ಷದವರು ಮತ್ತು ಮೂಲಭೂತವಾಗಿ ಸಮಾಜವಾದಿಗಳು ಖಾಸಗಿ ರಂಗದ ಸಂಪೂರ್ಣ ದಿವಾಳಿತನ ಬಯಸುತ್ತವೆ. ಸ್ವತಂತ್ರ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಸರ್ಕಾರದ ಪಾತ್ರವನ್ನು ವ್ಯಾಖ್ಯಾನಿಸುತ್ತಾ ಸರ್ಕಾರ ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಸಹಾಯಕವಾಗಿರಬೇಕೇ ಹೊರತು ಭಾಗೀದಾರನಾಗಿರಬಾರದು. ಸರ್ಕಾರದ ಕೆಲಸ ವ್ಯವಹಾರವಲ್ಲ, ವ್ಯಾಪಾರವಲ್ಲ. ಇನ್ನೊಂದೆಡೆ ಕಮ್ಯುನಿಸ್ಟರು ಸರ್ಕಾರ ಯೋಜನೆಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಸಾರ್ವಜನಿಕ ರಂಗವನ್ನು ವಿವಿಧ ಕ್ಷೇತ್ರಗಳಿಗೆ ವೇಗವಾಗಿ ವಿಸ್ತರಿಸಬೇಕು ಎನ್ನುತ್ತಾರೆ. ಇದಕ್ಕಾಗಿ ಹೊಸ ಉದ್ಯಮಗಳನ್ನು ಸ್ಥಾಪಿಸಬೇಕು ಹಾಗೂ ಈಗಿರುವ ಖಾಸಗಿ ಕೈಗಾರಿಕೆಗಳು/ವ್ಯಾಪಾರ ವ್ಯವಹಾರದಲ್ಲಿ ತೊಡಗಿರುವ ಸಂಸ್ಥೆಗಳನ್ನು ತಾವು ಸೂಚಿಸಿದಂತೆ ರಾಷ್ಟ್ರೀಕರಣಗೊಳಿಸಬೇಕು.

ಕಂದಾಯದ ಪ್ರಧಾನ ಮೂಲವಾಗಿ ಆಂತರಿಕ ಮಾರುಕಟ್ಟೆಯಲ್ಲಿ ಸರ್ಕಾರ ವ್ಯಾಪಾರವನ್ನು ಅಭಿವೃದ್ಧಿಪಡಿಸಬೇಕೆನ್ನುತ್ತಾರೆ. ಪ್ರಜಾ ಸೋಷಿಯಲಿಸ್ಟರ ಮಾರ್ಗದ ಅರ್ಥವೆಂದರೆ ಸ್ವತಂತ್ರ ವ್ಯಾಪಾರಿ ಹಾಗೂ ಕರಕುಶಲಗಾರರ ದಿವಾಳಿತನ. ತನ್ನ ತಕ್ಷಣದ ರಾಷ್ಟ್ರೀಕರಣದ ಪ್ರಣಾಳಿಕೆಯಲ್ಲಿ ಬ್ಯಾಂಕಿಂಗ್, ಸಾಮಾನ್ಯ ವಿಮೆ, ಕಬ್ಬಿಣ ಮತ್ತು ಉಕ್ಕು, ಕಲ್ಲು ಮತ್ತು ಇತರ ಗಣಿಗಾರಿಕೆ, ತೈಲ, ಸಕ್ಕರೆ, ಸೆಣಬು, ಚಹಾ ತೋಟಗಳು (ವಿದೇಶಿ ಅಧೀನದಲ್ಲಿರುವವು) ಹಾಗೂ ರಫ್ತು ಉದ್ಯಮಗಳಲ್ಲಿ ಹೆಸರಿಸಿದೆ. ಬ್ಯಾಂಕಿಂಗ್ ರಾಷ್ಟ್ರೀಕರಣವಂತೂ ಅತಿ ತುರ್ತಾಗಿ ಆಗಬೇಕಾಗಿದ್ದು, ತಡ ತರವಲ್ಲ ಎಂದು ಒತ್ತಿ ಹೇಳಿದೆ.

ಕಾಂಗ್ರೆಸ್ ಮತ್ತು ಪ್ರಜಾ ಸೋಷಿಯಲಿಸ್ಟ್ ಪಕ್ಷಗಳೆರಡೂ ಅಂತಿಮವಾಗಿ ರಾಷ್ಟ್ರೀಕರಣಕ್ಕೆ ಕಟಿಬದ್ಧವಾಗಿ ನಿಂತಿವೆ. ಆದರೆ, ಕಾಂಗ್ರೆಸ್ ಈ ಕಾರ್ಯದಲ್ಲಿರುವ ಕಷ್ಟಗಳನ್ನು ಸಂಪೂರ್ಣವಾಗಿ ಮನಗಂಡು ಖಾಸಗಿ ರಂಗದ ಬಗೆಗೆ ಮೃದುವಾಗಿ ಹೀಗೆ ನುಡಿದಿದೆ–"ನಮ್ಮ ಸಮಾಜವಾದದ ದೃಷ್ಟಿಯ ಪ್ರಕಾರ ಸಾರ್ವಜನಿಕ ರಂಗ ಕ್ಷಿಪ್ರವಾಗಿ ವಿಸ್ತಾರಗೊಂಡು ಕೈಗಾರಿಕೀಕರಣಕ್ಕೆ ವೇಗವಾಗಿ ಬೆಳೆಯಲು ಇಂಬು ನೀಡುವುದು ಮತ್ತು ಪೂರಕ ಸಂಪನ್ಮೂಲಗಳನ್ನು ವೃದ್ಧಿಸುವುದರ ಉದ್ದೇಶದಿಂದ ಪ್ರಮುಖ ಪಾತ್ರ ವಹಿಸಲಿದೆ." ಆದರೆ ಅವರು ಖಾಸಗಿ ರಂಗವನ್ನು ಸಹಿಸಬಲ್ಲರು

ಹಾಗೆಯೇ "ಉತ್ಪಾದನೆ, ಅವಶ್ಯಕ ಮತ್ತು ಖಾಸಗಿ ರಂಗವನ್ನು ಕೆಲವು ನಿರ್ದಿಷ್ಟ ಕ್ಷೇತ್ರಗಳಲ್ಲಿ ಉತ್ತೇಜಿಸಬಹುದು. ಕಳೆದ ಹತ್ತು ವರ್ಷಗಳಲ್ಲಿ ಕಾರ್ಪೊರೇಟ್ ಖಾಸಗಿ ರಂಗದ ಬೆಳವಣಿಗೆ ಹೊಸ ಸಮಸ್ಯೆಗಳನ್ನು ಸೃಷ್ಟಿಸಿದೆ. ಸಾಧಾರಣವಾಗಿ ಬೃಹತ್ ಉದ್ದಿಮೆಗಳು ಸಾರ್ವಜನಿಕ ರಂಗದಲ್ಲಿರಬೇಕು" ಎಂದು ಪ್ರಣಾಳಿಕೆಯಲ್ಲಿ ತಿಳಿಸಿದೆ.

(೧೯೫೬ರ ಕೈಗಾರಿಕಾ ನೀತಿ ನಿರ್ಣಯದಿಂದ ಉಲ್ಲಂಘಿತವಾಗಿರುವುದನ್ನು ಗಮನಿಸಬಹುದು)

## ಭಾರತೀಯ ಜನಸಂಘ : ಯೋಜನೆಗೆ ವಾಸ್ತವಿಕ ಮಾರ್ಗ

### ಪ್ರಜಾ ಸೋಷಿಯಲಿಸ್ಟ್ ಪಕ್ಷದ ಮುನಿಸಿಪಲ್ ಸಮಾಜವಾದ

ಸ್ಥಳೀಯ ಸಂಸ್ಥೆಗಳು ಸಾಮಾಜಿಕ ಸನ್ನೆಗೆ ನಿಯಂತ್ರಕಗಳಾಗಿರಬೇಕು ಎಂದು ಪ್ರಜಾ ಸೋಷಿಯಲಿಸ್ಟ್ ಪಕ್ಷ ಸೂಚಿಸುತ್ತದೆ ಹಾಗೂ ಅವುಗಳ ಬಳಕೆಗೆ ಹೆಚ್ಚಿನ ಒತ್ತು ನೀಡಿದೆ. ಅದು ಒಂದು ರೀತಿಯ ಮುನಿಸಿಪಲ್ ಸಮಾಜವಾದದ ಪರವಾಗಿದೆ. ವಿಕೇಂದ್ರೀಕರಣವೇ ಹೆಚ್ಚಾಗಿರುವ ಈ ಕಾಲದಲ್ಲಿ ಮುನಿಸಿಪಲ್ ಸಮಾಜವಾದ ಆಕರ್ಷಕವಾಗಿ ತೋರಬಹುದು. ಆದರೆ, ಪರಿಣಾಮದಲ್ಲಿ ಮುನಿಸಿಪಲ್ ಸಮಾಜವಾದ ಹಾನಿಕಾರಕವಾದುದು. ಇದು ಆರ್ಥಿಕತೆಯನ್ನು ಕೇಂದ್ರೀಕರಣ ಮತ್ತು ವ್ಯಕ್ತಿಗತ ಪ್ರಯತ್ನಗಳೆರಡರಿಂದಲೂ ವಂಚಿತಗೊಳಿಸುತ್ತದೆ. ಎಲ್ಲಕ್ಕಿಂತ ಮೇಲಾಗಿ ಈಗಿನ ಪರಿಸ್ಥಿತಿಯಲ್ಲಿ ಈ ಸ್ವರೂಪದ ಯಾವುದೇ ಕಾರ್ಯಕ್ರಮ ಸ್ವತಂತ್ರ ವರ್ತಕ ಮತ್ತು ಕರಕುಶಲಕರ್ಮಿಗಳನ್ನು ದಿವಾಳಿಗೊಳಿಸುತ್ತದೆ. ಪ್ರಜಾತಾಂತ್ರಿಕವಾಗಿ ವ್ಯವಸ್ಥಿತ ಜಿಲ್ಲಾಡಳಿತಗಳಿಗೆ ಆರ್ಥಿಕ ಯೋಜನೆ ಕಾರ್ಯಗಳನ್ನು ನೀಡುವ ಆ ಪಕ್ಷದ ಕಾರ್ಯಕ್ರಮವನ್ನು ಈಗಾಗಲೇ ಚರ್ಚಿಸಲಾಗಿದೆ. ಕೈಗಾರಿಕೆಗಳ ಹಂಚಿಕೆ ಬೆಂಬಲಿಸುವುದಿಲ್ಲ. ಗ್ರಾಮೀಣ ಜನರನ್ನು ಕೈಗಾರಿಕೀಕರಣದಲ್ಲಿ ತೊಡಗಿಸಲು ಅತ್ಯಗತ್ಯವೆಂದು ನಂಬಿದೆ. ಸಂಸ್ಕರಿತ ಉದ್ದಿಮೆಗಳು, ಗ್ರಾಹಕ ವಸ್ತುಗಳ ತಯಾರಿಕೆ ಹಾಗೂ ಲಘು ಎಂಜಿನಿಯರಿಂಗ್ ಕೈಗಾರಿಕೆಗಳನ್ನು–ಗ್ರಾಮೀಣ ಜನರ ಮತ್ತು ನೀರಾವರಿ ಸೇರಿದಂತೆ ಕೃಷಿ ಅಭಿವೃದ್ಧಿಗಾಗಿ ಅಗತ್ಯ ಪೂರೈಸಲು–ಜಿಲ್ಲಾ ಸಮಿತಿಗಳಿಗೆ ನೀಡಲಾಗುವುದು. ಈ ಸಮಿತಿಗಳು ಇಂತಹ ಕೈಗಾರಿಕೆಗಳನ್ನು ಒಡೆತನದಲ್ಲಿಟ್ಟುಕೊಂಡು ನಡೆಸುತ್ತವೆ. ಸುಗಮ ಕಾರ್ಯನಿರ್ವಹಣೆಗೆ ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಕೈಗಾರಿಕೆಗಳಿಗೆ ಸಹಾಯ ಮಾಡುತ್ತವೆ. ಈ ಕೆಲಸಗಳನ್ನು ಜಿಲ್ಲಾ ಸಮಿತಿಗಳು ಕೆಳಸ್ತರದ ಘಟಕಗಳಾದ ಬ್ಲಾಕ್ ಪಂಚಾಯತ್‌ಗಳಿಗೆ ಮತ್ತು ಜಿಲ್ಲಾ ಪಂಚಾಯಿತಿಗಳ ಗುಂಪುಗಳಿಗೆ ವಹಿಸಬಹುದು. ಸ್ಪಷ್ಟವಾಗಿ, ಇಂತಹ ಕಾರ್ಯಕ್ರಮವೇನಾದರೂ ಜಾರಿಗೊಂಡಲ್ಲಿ ಅಕ್ಕಿ ಗಿರಣಿಗಳು, ಹಿಟ್ಟಿನ ಗಿರಣಿಗಳು, ಬಿಸ್ಕತ್ ತಯಾರಿಕೆಗಳು ಇತರೆ ಎಲ್ಲಾ ಈ ಸಂಸ್ಥೆಗಳಿಂದಲೇ ಒಡತನದಲ್ಲಿದ್ದು ನಡೆಸಲ್ಪಡುತ್ತವೆ.

ಪ್ರಜಾ ಸೋಷಿಯಲಿಸ್ಟ್ ಪಕ್ಷ ೧೯೫೬ರ ಕೈಗಾರಿಕಾ ನೀತಿ ನಿರ್ಣಯದಲ್ಲಿ

ಪ್ರಣೀತವಾದ ನೀತಿ–ರೀತಿಯಲ್ಲಿ ಆಂತರಿಕ ವ್ಯಾಪಾರದ ರಾಷ್ಟ್ರೀಕರಣವಾಗಿರಬೇಕು ಎಂದು ಬಯಸುತ್ತದೆ.

ಕೆಲವು ವಿಶೇಷ ರಂಗಗಳನ್ನು ರಾಜ್ಯ ವ್ಯಾಪಾರ ನಿಗಮದ ಅಡಿಯೂ ಇಟ್ಟುಕೊಳ್ಳಬೇಕು. ಸಾಮಾನ್ಯ ಬಳಕೆಯ ಹಾಗೂ ಕೈಗಾರಿಕೆಯ ಕಚ್ಚಾವಸ್ತುಗಳ ಮಾರುಕಟ್ಟೆಗಳಲ್ಲಿರುವ ಅಸಮತೋಲನವನ್ನು ಸರಿಪಡಿಸಲು ಸರ್ಕಾರ ಮಧ್ಯ ಪ್ರವೇಶಿಸಲು ರಂಗವೊಂದನ್ನು ನಿಗದಿಪಡಿಸಲಾಗುವುದು. ಅಂತಹ ವಿಷಮ ಪರಿಸ್ಥಿತಿ ಮಾರುಕಟ್ಟೆಗಳಲ್ಲಿ ನಿರ್ಮಾಣವಾದಾಗಲಷ್ಟೇ ಸರ್ಕಾರ ಮಧ್ಯಪ್ರವೇಶಿಸಲಿದೆ. ಪರಿಣಾಮಕಾರಿ ಸಾಲ ಸೌಲಭ್ಯಗಳು, ಪರವಾನಗಿ ಮತ್ತು ಆರ್ಥಿಕ ನೀತಿಗಳನ್ನು ಬಳಸಿ ಇತರ ರಂಗಗಳನ್ನು ಸರ್ಕಾರ ನಿಯಂತ್ರಿಸಬಹುದು. ಶ್ರೀ ಅಶೋಕ್ ಮೆಹ್ತಾರ ಆಹಾರ ಧಾನ್ಯಗಳ ಸರ್ಕಾರಿ ವ್ಯಾಪಾರ ಯೋಜನೆಯ ಬೆಂಬಲಕ್ಕಾಗಿ ಸಮನ್ವೀಕರಿಸಿ ಹೇಳಲಾಗಿದೆ. ಗಣಿಗಾರಿಕೆಯ ಪ್ರಸ್ತಾವಿತ ನೇರ ರಾಷ್ಟ್ರೀಕರಣಕ್ಕೆ ಬದಲಾಗಿ ಪಕ್ಷವು ಈ ಕಾರ್ಯದಲ್ಲಿ ತೊಡಗಿರುವ ಘಟಕಗಳಿಗೆ ಕಠಿಣ ದಕ್ಷತಾ ಮಟ್ಟಗಳನ್ನು ಸೂಚಿಸುತ್ತದೆ. ಖನಿಜ ಸಂಪತ್ತಿನ ಯುಕ್ತ ಉಪಯೋಗಕ್ಕೆ ಈ ಮಟ್ಟಗಳನ್ನು ವಿಧಿಸಬೇಕು. ಇವುಗಳನ್ನು ಪಾಲಿಸದ ಘಟಕಗಳನ್ನು ರಾಷ್ಟ್ರೀಕರಿಸಬೇಕು.

### ಒಂದು ಹೆಜ್ಜೆ ಹಿಂದಕ್ಕೆ

ಈ ದಿಸೆಯಲ್ಲಿ ಅದರ ೧೯೫೭ರ ನೀತಿಗಿಂತ ಆ ಪಕ್ಷ ಎಂದು ಹೆಜ್ಜೆ ಹಿಂದಕ್ಕೆ ಇಟ್ಟಿದೆ. ಎರಡನೇ ಸಾಮಾನ್ಯ ಚುನಾವಣೆಯಲ್ಲಿ ಪ್ರಜಾ ಸೋಷಿಯಲಿಸ್ಟ್ ಪಕ್ಷವು ರಾಷ್ಟ್ರೀಕರಣದ ಬಗೆಗೆ ಚುನಾವಣಾ ಪ್ರಣಾಳಿಕೆಯಲ್ಲಿ ಹೀಗೆಂದಿತ್ತು–"ಯೋಜಿತ ಆರ್ಥಿಕ ಬೆಳವಣಿಗೆಗಾಗಿ ಬ್ಯಾಂಕಿಂಗ್, ಗಣಿಗಾರಿಕೆ, ಖನಿಜ ಮತ್ತು ತೈಲರಂಗಗಳನ್ನು ರಾಷ್ಟ್ರೀಕರಣಗೊಳಿಸುವುದು ಅತ್ಯಗತ್ಯವೆಂದು ಪಕ್ಷವು ನಂಬಿದೆ. ಹೆಚ್ಚಿನ ಬಂಡವಾಳ ಕ್ರೋಢೀಕರಿಸಲು ಸರ್ಕಾರ ಶೀಘ್ರವಾಗಿ ದೊಡ್ಡ ತೋಟಗಳು, ವ್ಯಾಪಾರ, ಸಗಟು ಮತ್ತು ವಿದೇಶಕ್ಕೆ ರಫ್ತು ಮಾಡುವ ಆಯ್ದ ಪದಾರ್ಥಗಳ ಕೈಗಾರಿಕೆಗಳನ್ನು ವಹಿಸಿಕೊಳ್ಳಬೇಕು."

### ಜನಸಂಘದ ವಾಸ್ತವಿಕ ಮಾರ್ಗ

ಭಾರತೀಯ ಜನಸಂಘವು ತನ್ನ ಉತ್ಪಾದನಾ ಕಾರ್ಯಕ್ರಮವನ್ನು ಸೈದ್ಧಾಂತಿಕ ಅಥವಾ ಆದರ್ಶ ಪರಿಗಣನೆಗೆ ಜೋಡಿಸಲು ಬಯಸುವುದಿಲ್ಲ. ಆದರೆ, ದೇಶದ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಮೌಲ್ಯಗಳನ್ನು ಸಂರಕ್ಷಿಸಲು ಕಾರ್ಯಕ್ರಮಗಳು (ಪ್ರಾಯೋಗಿಕವಾಗಿ) ವಾಸ್ತವಿಕವಾಗಿರಬೇಕು. ಆದ್ದರಿಂದ ಪಕ್ಷವು ಜನರ ಸೃಜನಾತ್ಮಕ ಶಕ್ತಿಯನ್ನು ಕುಂಠಿತಗೊಳಿಸಲು ಬಯಸುವುದಿಲ್ಲ. ಇದೇ

ಸಮಯದಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ಪಾತ್ರಗಳು ನಿರ್ವಹಿಸಲು ಇಲ್ಲ ಎಂಬುದನ್ನು ಪಕ್ಷವು ಒಪ್ಪುವುದಿಲ್ಲ. ನಿಜವಾಗಿ ಅಭಿವೃದ್ಧಿ ಕಡಿಮೆ ಇರುವ ಆರ್ಥಿಕತೆಯಲ್ಲಿ ವಾಸ್ತವಿಕ ಉದ್ಯಮಿಗಳ ಕೊರತೆ ಇರುವ ಪರಿಸ್ಥಿತಿಯಲ್ಲಿ ಸರ್ಕಾರವೇ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳಬೇಕು. ಹಿಂದಿನ ಮೈಸೂರು ಸಂಸ್ಥಾನವು ಸರ್.ಎಂ.ವಿಶ್ವೇಶ್ವರಯ್ಯ ಅವರ ದಿವಾನರ ಆಡಳಿತದಡಿ ಹಲವಾರು ಹೊಸ ಕೈಗಾರಿಕೆಗಳನ್ನು ಆರಂಭಿಸಿತು. ಆದರೆ, ಈ ಕ್ರಮಗಳು ಸಮಾಜವಾದದ ಕೂಗನ್ನಾಗಲಿ ಅಥವಾ ಬಂಡವಾಳ ಹೂಡಿಕೆದಾರರ ಅವಕಾಶಗಳನ್ನಾಗಲಿ ಕಸಿದುಕೊಳ್ಳಲಿಲ್ಲ. ಸಮಾಜವಾದಿಗಳಿಗೂ ತೊಂದರೆ ಆಗಲಿಲ್ಲ. ಹೂಡಿಕೆದಾರರ ಅವಕಾಶಗಳನ್ನೂ ಕಿತ್ತುಕೊಳ್ಳಲಿಲ್ಲ.

ಆದರೆ, ಸರ್ಕಾರದ ಚಟುವಟಿಕೆಯ ಕ್ಷೇತ್ರವನ್ನು ಆಡಳಿತದ ಸಾಮರ್ಥ್ಯ ಮತ್ತು ಜನರ ಅವಶ್ಯಕತೆಗಳ ವಾಸ್ತವಿಕ ಪರಿಶೀಲನಾ ನಂತರ ನಿರ್ಧರಿಸಬೇಕು. ರಕ್ಷಣಾ ರಂಗವನ್ನು ಸರ್ಕಾರವೇ ನಿರ್ವಹಿಸಬೇಕು ಎಂದು ಪಕ್ಷವು ನಂಬುತ್ತದೆ. ವಿಸ್ತರಣೆಗಿಂತ ಹೆಚ್ಚಾಗಿ, ಮೂರನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಏಕತ್ರೀಕರಣಕ್ಕೆ ಗಮನ ನೀಡಬೇಕು. ಈ ಬಗೆಗೆ ಪಕ್ಷದ ಪ್ರಣಾಳಿಕೆಯಲ್ಲಿ ಹೀಗೆನ್ನಲಾಗಿದೆ– "ಸಾರ್ವಜನಿಕ ರಂಗದಲ್ಲಿ ವಿಸ್ತರಣೆಗಿಂತ ಏಕತ್ರೀಕರಣಕ್ಕೆ ಹೆಚ್ಚಿನ ಒತ್ತು ಸಿಗಬೇಕು. ಸಿದ್ಧಾಂತ ವಿಸ್ತರಣೆ ಮಾಡಲು ಇದನ್ನು ಬಳಸಿಕೊಳ್ಳಬಾರದು. ಹಿಂದಿನ ಯೋಜನಾವಧಿಯಲ್ಲಿ ಕೈಗೊಂಡ ಯೋಜನೆಗಳನ್ನು ಕ್ಷಿಪ್ರವಾಗಿ ಮುಗಿಸಬೇಕು. ಮುಂದೆ ಸರ್ಕಾರ ಮೂಲ ಸ್ವರೂಪದ ಹಾಗೂ ಕೃಷಿ, ಇನ್ನಿತರ ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಕೈಗಾರಿಕೆಗಳನ್ನಷ್ಟೇ ಪ್ರಾರಂಭಿಸಬೇಕು."

ಭಾರತೀಯ ಜನಸಂಘವು ರಕ್ಷಣಾ ಮತ್ತು ಮೂಲ ಕೈಗಾರಿಕೆಗಳ ರಾಷ್ಟ್ರೀಕರಣದ ಪರವಾಗಿದೆ, ಕಟಿಬದ್ಧವಾಗಿದೆ. ಆದರೆ, ನಿಕಟ ಭವಿಷ್ಯದಲ್ಲಿ ಸರ್ಕಾರ ರಕ್ಷಣಾ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಗಷ್ಟೇ ತೊಡಗಿರಬೇಕೆಂದು ಪಕ್ಷವು ಭಾವಿಸುತ್ತದೆ. ಮೂಲ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಸರ್ಕಾರ ತನ್ನ ಸಂಪನ್ಮೂಲಗಳನ್ನು ರೈಲ್ವೆ, ಖನಿಜ, ತೈಲ, ಜಲವಿದ್ಯುತ್ ಮತ್ತು ಅಣುಶಕ್ತಿಯ ಯುಕ್ತ ಅಭಿವೃದ್ಧಿಗಾಗಿ ಬಳಸಿಕೊಳ್ಳಬಹುದು. ಖಾಸಗಿ ಉದ್ಯಮಗಳನ್ನು ಇತರ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಬಹುದು.

# ಪ್ರತಿ ಮತದಾರನೂ ನಿರ್ವಹಿಸಬೇಕಾದ ಪಾತ್ರವೊಂದಿದೆ

ಈ ಸರಣಿಯಲ್ಲಿ ಈವರೆಗೆ ಹಲವಾರು ಚುನಾವಣಾ ಪ್ರಣಾಳಿಕೆಗಳ ಮುಖ್ಯ ಲಕ್ಷಣಗಳನ್ನು ವಿವರಿಸಲಾಗಿದೆ. ಆದರೂ ವಿವರವಾದ ಪ್ರಶ್ನೆಗಳು ಉಳಿಯುತ್ತವೆ. ಬಹುತೇಕ ಪ್ರಣಾಳಿಕೆಗಳು ಯಾವ ವಿವರಗಳನ್ನೂ ನೀಡುವುದಿಲ್ಲ. ಪಕ್ಷಗಳ ನೀತಿಗಳಿಂದ ಅಥವಾ ಅವುಗಳ ಮನೋಧರ್ಮಗಳಿಂದ ಅಥವಾ ಅವುಗಳ ವಕ್ತಾರರು ಕಾಲದಿಂದ ಕಾಲಕ್ಕೆ ನೀಡುವ ಹೇಳಿಕೆಗಳಿಂದ ವಿವರಗಳನ್ನು ತಿಳಿಯಬೇಕು. ಆರ್ಗನೈಸರ್‌ನ ಗಣರಾಜ್ಯದ ಸಂಚಿಕೆಯಲ್ಲಿ ವಿವಿಧ ಪಕ್ಷಗಳ ಚುನಾವಣಾ ಕಾರ್ಯಕ್ರಮಗಳನ್ನು ಸಾರಾಂಶ ರೂಪದಲ್ಲಿ ನೀಡಲಾಗಿದೆ. ಇದು ತಿಳಿದುಕೊಳ್ಳಲು ಇಚ್ಛಿಸುವವರಿಗೆ ಮತ್ತು ಚುನಾವಣಾ ಪ್ರಣಾಳಿಕೆಗಳ ಆಧಾರದ ಮೇಲೆ ಮತದಾನ ಮಾಡುವವರಿಗೆ ಮಾರ್ಗದರ್ಶನ ನೀಡುವುದಕ್ಕೆ ಸಾಕಷ್ಟಾಗುತ್ತದೆ ಎಂದು ನಾನು ನಂಬಿದ್ದೇನೆ. ಆದರೆ, ಚುನಾವಣಾ ಕ್ಷೇತ್ರಕ್ಕೆ ಇಂತಹ ಹಲವಾರು ವಿಷಯಗಳನ್ನು ವಿಶೇಷವಾಗಿ ತಂದಿದೆ. ಈ ವಾದಗಳತ್ತಲೂ ಬೆಳಕು ಚೆಲ್ಲಿ ಆಲೋಚಿಸುವುದು ಅಪೇಕ್ಷಣೀಯ.

**ಬಾಹ್ಯ ವಿಚಾರಗಳು**

ಸಾಮಾನ್ಯವಾಗಿ ಕಾಂಗ್ರೆಸ್ ನಾಯಕರು ಮತದಾರರ ಬಳಿಗೆ ಹೋಗುವುದಿಲ್ಲ. ಅವರ ಕಾರ್ಯಕ್ರಮಗಳನ್ನು ವಿವರಿಸುವುದಿಲ್ಲ. ಆದರೆ ಬಾಹ್ಯ ವಿಷಯಗಳನ್ನು ತರುತ್ತಾರೆ. ಜೊತೆಗೆ ಜಾತಿಗಳ ಸೂಕ್ಷ್ಮ ಸಂಗತಿಗಳು, ವರ್ಗೀಯ ಭಾವನೆಗಳು, ಸಾಮಾನ್ಯವಾಗಿ ಜನರಲ್ಲಿ ಭವಿಷ್ಯದ ಬಗೆಗೆ ಆತಂಕ ಮತ್ತು ಕೆಲವು ಸಮುದಾಯಗಳಿಗೆ ಭಯ ಹುಟ್ಟಿಸುತ್ತಾರೆ. ಕಾಂಗ್ರೆಸ್ ಈ ಭಯದ ಭಾವನೆಯ ಮೇಲೆಯೇ ಬೆಳೆಯುವಂತಿದೆ ಮತ್ತು ಆದ್ದರಿಂದಲೇ ತೀವ್ರ ದ್ವೇಷ ಪ್ರಚಾರದಲ್ಲಿ ತೊಡಗಿಕೊಂಡಿದೆ. ಕಾಂಗ್ರೆಸ್‌ಗೆ ಸೇರಿದವರಿಗೆ ಮುಸ್ಲಿಮರಿಗೆ ಹಾಗೂ ಕ್ರೈಸ್ತರಿಗೆ ಕಾಂಗ್ರೆಸ್ ಹೋಗಿ ಜನಸಂಘ ಬಂದರೆ ಅವರೆಲ್ಲ ಎಲ್ಲಿಯೂ ಇರುವುದಿಲ್ಲ. ನಾಶ ಖಂಡಿತ ಎಂದು ಹೇಳುತ್ತಾರೆ.

---

* **ಮೂಲ ಆಕರ : ಆರ್ಗನೈಸರ್ : ೧೨.೦೨.೧೯೬೨**

ಪಂಜಾಬಿನಲ್ಲಿ ಅವರು ಸಿಖ್ಖೇತರರಿಗೆ ತಮಗೆ ಮತ ನೀಡಿ, ಅಕಾಲಿಗಳು ಬರಬಾರದು ಎಂದು ಕೋರುತ್ತಾರೆ. ಸಹಕಾರ ಕೃಷಿ ನೆಪದಲ್ಲಿ ತಾವು ವಶಪಡಿಸಿಕೊಳ್ಳಲಿರುವ ಜಮೀನಿನ ಮಾಲೀಕರಾದ ರೈತರಿಗಂತೂ ಅವರು ಸ್ವತಃ ತಾವೇ ಕೃಷಿಕರ ರಕ್ಷಕರೆಂದು ಘೋಷಿಸಿಕೊಂಡು ಹಿಂದಿನ ಜಮೀನುದಾರರ ಮತ್ತು ತಹಸೀಲ್ದಾರರ ಕಲ್ಪನಾ ಜಮೀನುಗಳ ಕೊಡುಗೆದಾರರೆಂದು ಹೇಳುತ್ತಾರೆ. ಇದೆಲ್ಲವೂ ತಾವು ಅಧಿಕಾರಕ್ಕೆ ಮರಳಿ ಬರಲು ಹೂಡಿರುವ ತಂತ್ರ. ಬಡವರ ಬಳಿಗೆ ಹೋಗಿ ಶ್ರೀಮಂತರನ್ನು ಬೈದು ತಾವು ಸಮಾಜವಾದದ ಯುಗವನ್ನು ಆರಂಭಿಸುವುದಾಗಿ ಪ್ರಮಾಣ ಮಾಡುತ್ತಾರೆ. ಆದರೆ, ಶ್ರೀಮಂತರ ಬಳಿಗೆ ಹೋಗಿ ಕಾಂಗ್ರೆಸ್ ಅವರ ಆಸ್ತಿಯನ್ನು ಲೂಟಿ ಮಾಡುತ್ತದೆ ಮತ್ತು ವಶಪಡಿಸಿಕೊಳ್ಳುತ್ತದೆ ಎಂದು ಹೇಳಿಕೊಳ್ಳುತ್ತಾರೆ, ಕಾಂಗ್ರೆಸ್ ಕೆಟ್ಟದ್ದು ಎಂದು ನಾಚಿಕೆ ಇಲ್ಲದೆ ಒಪ್ಪಿಕೊಳ್ಳುತ್ತಾರೆ. ಆದರೆ, ಹೆಚ್ಚು ಕೆಡುಕಾಗದಿರಲು ಕಾಂಗ್ರೆಸ್ಸೇ ಅಧಿಕಾರಕ್ಕೆ ಬರಬೇಕು ಎಂದು ಹೇಳುತ್ತಾರೆ. ಹೀಗೆ ಅನಿಶ್ಚಿತ ಭವಿಷ್ಯದ ಲಾಭ ಪಡೆಯುತ್ತಾರೆ.

ಆದರೆ, ಜನರು ಕಾಂಗ್ರೆಸ್ ನಿರ್ಗಮನಕ್ಕೆ ತಮ್ಮನ್ನು ಸ್ಥಿರಪಡಿಸಿಕೊಳ್ಳಬೇಕಾದ ಪರಿಸ್ಥಿತಿ ಇಂದು ಇದೆ. ಜನರು ಕಾಂಗ್ರೆಸ್ ತಮ್ಮ ಪಕ್ಷವಲ್ಲ ಎಂಬುದನ್ನು ಅರಿಯಬೇಕಿದೆ. ತಮ್ಮನ್ನು ತಾವು ರಕ್ಷಿಸಿಕೊಳ್ಳಬೆಕು. ಬ್ರಿಟಿಷರು ಇಂತಹುದೇ ವಾದಗಳನ್ನು ಬಳಸುತ್ತಿದ್ದರು. ಆದರೆ, ಅವರು ಕೇವಲ ಕೆಲವರ ಹಾಗೂ ಪಟ್ಟಭದ್ರ ಹಿತಾಸಕ್ತಿಗಳನ್ನು ಹುಟ್ಟು ಹಾಕಿದರು. ಈಗ ಕಾಂಗ್ರೆಸ್ ಅಂತಹುದೇ ಕಳಪೆ ತಂತ್ರಗಳಲ್ಲಿ ತೊಡಗಿದೆ. ಆದರೆ, ಪಟ್ಟಭದ್ರ ಹಿತಾಸಕ್ತಿಗಳೆಂದಿಗೂ ಅಂತಿಮ ವಿಜಯಿಗಳಾಗಲಾರವು ಎಂಬುದನ್ನು ಅದು ಮರೆತಿದೆ.

**ಕಾಂಗ್ರೆಸ್ ಸರ್ಕಾರ ಸ್ಥಿರವೇ?**

ಕಾಂಗ್ರೆಸ್ ಹೋದರೆ ಗೊಂದಲ–ಗಡಿಬಿಡಿಗಳು ಆಗುತ್ತವೆ ಎಂದು ಆಲೋಚಿಸಬೇಡಿರಿ. ಅಸಲು ವಿಷಯವೆಂದರೆ, ಕಾಂಗ್ರೆಸ್ ಇರುವುದರಿಂದಲೇ ಗೊಂದಲ–ಗಡಿಬಿಡಿಗಳು ಆಗಿವೆ. ಕಾಂಗ್ರೆಸ್ ದೇಶಕ್ಕೆ ಸ್ಥಿರ ಸರ್ಕಾರ ನೀಡುವುದಾಗಿ ಹೇಳಿಕೊಳ್ಳುತ್ತಿದೆ. ನಾವೂ ಸ್ಥಿರ ಸರ್ಕಾರವನ್ನೇ ಬಯಸುತ್ತೇವೆ. ಆದರೆ, ಸುತ್ತಲೂ ಕಂದಕಗಳನ್ನು ತೋಡಿಕೊಂಡ ಮತ್ತು ಇಷ್ಟು ವರ್ಷಗಳ ತನಕ ನಿರಂಕುಶ ಅಧಿಕಾರ ಅನುಭವಿಸಿದ ಕಾಂಗ್ರೆಸ್ ಯಾವ ಕಾಲಕ್ಕೂ ದೇಶದಲ್ಲಿ ಪ್ರಜಾಪ್ರಭುತ್ವ ಕಾರ್ಯನಿರ್ವಹಣೆಗೆ ಸಹಾಯವಾಗಿ ಇರುವುದಿಲ್ಲ. ರಾಜರ ಪ್ರಭುತ್ವವೇ ಅತ್ಯಂತ ಸ್ಥಿರ ಸರ್ಕಾರ. ಹಾಗಾದರೆ, ಅಂದ ಮಾತ್ರಕ್ಕೆ ನಾವು ಅದಕ್ಕೆ ಪ್ರಾಶಸ್ತ್ಯ ನೀಡಬೇಕೇನು?

ಎಲ್ಲಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ಸಿನ ಸ್ಥಿರತೆ ನಾದ ಕೇವಲ ತೋರಿಕೆಯಷ್ಟೆ, ಪೊಳ್ಳು. ಉತ್ತರ ಪ್ರದೇಶ, ಪಂಜಾಬ್, ಬಿಹಾರ್ ಮತ್ತು ಆಂಧ್ರಪದ್ರೇಶಗಳಲ್ಲಿ ಸ್ಥಿರ

ಸರ್ಕಾರಗಳು ಇವೆಯೇ? ಮಂತ್ರಿ ಮಂಡಲಗಳನ್ನು ರಚಿಸಲಾಗಿದೆ ಹಾಗೂ ಪುನರ್ರಚಿಸಲಾಗಿದೆ. ಹೆಚ್ಚು ಸಂಖ್ಯೆಯಿಂದಲೇ ಅಥವಾ ಅದರ ಕಾರಣದಿಂದಲೋ ಅಲ್ಲೆಲ್ಲಾ ಪ್ರತಿವರ್ಷ ಅವಿಶ್ವಾಸ ನಿರ್ಣಯಗಳಾಗಿವೆ.

ಕಾಂಗ್ರೆಸ್ಸಿನಲ್ಲಿರುವ ಗುಂಪುಗಾರಿಕೆಗಳು ಸ್ಥಿರತೆಯ ಲಕ್ಷಣವಲ್ಲ. ಪಕ್ಷದ ನಾಯಕರು ಸರಕಾರಗಳನ್ನು ಬದಲಾಯಿಸುವುದಕ್ಕಿಂತ ಜನರು ಹಾಗೆ ಮಾಡುವುದು ಉತ್ತಮ. ಪಕ್ಷದ ಶಿಸ್ತು ಮತ್ತು ಏಕತೆಗೆ ಧಕ್ಕೆ ತರುವ ಗುಂಪುಗಳನ್ನು ಜನತೆ ಬದಲಾಯಿಸಿದರೆ ಇನ್ನೂ ಒಳಿತು. ಒಳಜಗಳದಲ್ಲಿ ನಿರತವಾಗಿರುವ ಕಾಂಗ್ರೆಸ್ ಸ್ಥಿರ ಸರ್ಕಾರ ನೀಡುವುದಿಲ್ಲ. ಆದ್ದರಿಂದ ಪರ್ಯಾಯವೊಂದನ್ನು ರೂಪಿಸಬೇಕಾಗಿದೆ.

ಪ್ರಜಾಪ್ರಭುತ್ವವನ್ನು ಕೇವಲ ಜನರ ಸರ್ಕಾರವಲ್ಲ, ಜನರಿಗಾಗಿ ಜನರಿಂದಲೇ ಇರುವ ಸರ್ಕಾರ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ ನಮಗೆಲ್ಲಾ ತಿಳಿದಿರುವಂತೆ ಇಂದು ಜನಪ್ರತಿನಿಧಿಗಳಿಂದ ನಿರ್ದೇಶಿತ ಮತ್ತು ನಿಯಂತ್ರಿತ ಶಾಶ್ವತ ಸೇವೆಗಳ ಆಡಳಿತವಿದೆ. ಶಾಶ್ವತ ಸೇವೆಯಲ್ಲಿರುವ ಜನರ ಮನೋಧರ್ಮ ಒಂದು ತೆರನಾದದ್ದು. ಅಧಿಕಾರಿ ಮನೋಧರ್ಮವು ಅಧಿಕಾರಿ ಜನರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಆತ ಕೇವಲ ಸರ್ಕಾರದಷ್ಟನ್ನೇ ಆಲೋಚಿಸುತ್ತಾನೆ. ಬಯಸಿದರೆ ಆತ ಜನರ ಕಷ್ಟಗಳನ್ನು ತಿಳಿಯಬಹುದು. ಆದರೆ, ಆತನ ತರಬೇತಿ ಮತ್ತು ಬದುಕು ಅವನನ್ನು ಜನಪ್ರತಿನಿಧಿಗಳಿಂದ ದೂರ ಕೊಂಡೊಯ್ಯುತ್ತದೆ.

ಆದರೆ, ಜನಪ್ರತಿನಿಧಿಗಳ ಸ್ಥಿತಿ ಅಂತಹುದ್ದಲ್ಲ. ಅವರು ಜನರನ್ನು ಅತಿ ಹತ್ತಿರದಿಂದ ಬಲ್ಲರು. ಆದರೂ ಈ ಪ್ರತಿನಿಧಿಗಳು ದೀರ್ಘಕಾಲದ ತನಕ ಅಧಿಕಾರದಲ್ಲಿ ಮುಂದುವರಿಯುತ್ತಾರೆ, ನಿಧಾನವಾಗಿ ಅಂತಹ ಮನೋಧರ್ಮ ಬೆಳೆಸಿಕೊಳ್ಳುತ್ತಾರೆ. ಜನಪ್ರತಿನಿಧಿಗಳು ಜನಸೇವೆಗಾಗಿ ಅಥವಾ ಅವರು ಮಾಡಿರುವ ಕಾರ್ಯಗಳಿಗಾಗಿ ಬದಲಾಗಿ ನಿರ್ದಿಷ್ಟ ಪಕ್ಷವೊಂದರ ಅಭ್ಯರ್ಥಿಗಳೆಂದು ಚುನಾಯಿತರಾದರೆ ಅವರು ನಿರ್ಧಾರಗಳನ್ನು ಕೈಗೊಳ್ಳುವಾಗ ಜನರ ಹಿತ ಆಲೋಚಿಸುವುದು ಅಪರೂಪ.

ಕಾಂಗ್ರೆಸ್ ಇಂದು ಕೇವಲ ಅಧಿಕಾರಿಗಳ ಗುಂಪಾಗಿದೆ. ಅವರಲ್ಲಿ ದೋಷಗಳೆಲ್ಲಾ ಇವೆ, ಒಂದೂ ಗುಣವಿಲ್ಲ. ಹತ್ತು ವರ್ಷಗಳ ಕಾಲಾವಧಿ ನಿಗದಿಗೊಳಿಸುವ ಪಕ್ಷದ ಅಧ್ಯಕ್ಷರ ಪ್ರಸ್ತಾಪದಿಂದ ಆ ಪಕ್ಷಕ್ಕೂ ಮತ್ತು ದೇಶಕ್ಕೂ ಒಳ್ಳೆಯದಾಗುತ್ತಿತ್ತು. ಕಾಂಗ್ರೆಸ್ ಪುನರುಜ್ಜೀವನಗೊಳ್ಳುತ್ತಿತ್ತು. ಆದರೆ ಕಾಂಗ್ರೆಸ್ಸಿನ ಪಟ್ಟಭದ್ರ ಹಿತಾಸಕ್ತಿಗಳು ಪಕ್ಷವನ್ನು ಕಾಪಾಡಿಕೊಂಡವು ಹಾಗೂ ಬೆಳೆದವು. ಕಾಂಗ್ರೆಸ್ ಹೈಕಮಾಂಡ್ ತನ್ನನ್ನು ತಾನು ದೃಢವಾಗಿ ಇರಿಸಿಕೊಳ್ಳಲಾಗಲಿಲ್ಲ.

ಈಗ ಜನರು ದೃಢವಾಗಿರಲಿ. ಹೊಸ ಶಾಸಕರ ಗುಂಪು, ಹೊಸ ಪಕ್ಷವೊಂದು ಜನರ ದುಮ್ಮಾನಗಳ ನೇರ ಅನುಭವ ಪಡೆದು ಅಲ್ಲಿಗೆ ಹೋಗಿ, ಜನರಿಂದಾದ ಸರ್ಕಾರವು ಜನರಿಗಾಗಿ ಕೆಲಸ ಮಾಡುವಂತೆ ಆಗುತ್ತದೆ.

## ಗೋವಾದ ಶೋಷಣೆ

ಕಾಂಗ್ರೆಸ್ ನಾಯಕರು ಚುನಾವಣಾ ಚರ್ಚೆ ರಾಷ್ಟ್ರೀಯ ವಿಷಯಗಳನ್ನು ಎಳೆತರಲು ಪ್ರಯತ್ನಿಸುತ್ತಿದ್ದಾರೆ. ಗೋವಾದ ವಿಮೋಚನೆ ಒಂದು ವೈಚಾರಿಕ ವಿಚಾರ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದರ ಮೂಲಕ ಬಹುದಿನಗಳ ರಾಷ್ಟ್ರೀಯ ಬೇಡಿಕೆಯೊಂದನ್ನು ಸರ್ಕಾರ ಈಡೇರಿಸಿದೆ. ಇದರ ಖ್ಯಾತಿಯನ್ನು ಕಾಂಗ್ರೆಸ್ಸಿಗೆ ನೀಡಲು ನಾವು ತಯಾರಾಗಿದ್ದೇವೆ. ಕಾಂಗ್ರೆಸ್ ಸರ್ಕಾರ ಬ್ಯಾಲೆನ್ಸ್‌ಶೀಟ್ ಅನ್ನು ತಯಾರಿಸಿದಾಗ ಈ ಖ್ಯಾತಿಯನ್ನು ಅದಕ್ಕೆ ನೀಡುತ್ತೇವೆ. ಕಾಶ್ಮೀರದ ಕೆಲಭಾಗಗಳಲ್ಲಿ ಪಾಕಿಸ್ತಾನ ಹಾಗೂ ಚೀನಾದ ಆಕ್ರಮಣ ಮುಂದುವರಿದರೆ ಅದು ಗುಣಾಂಶಗಳ ಪಾಲಿಗೆ ಸೇರುತ್ತದೆ. ಗೋವಾ ವಿಷಯ ಕಾಂಗ್ರೆಸ್ಸಿನ ಒಳ್ಳೆಯ ವಿಷಯಗಳ ಕಡೆಗೆ ಹೋಗುತ್ತದೆ.

ಆದರೆ, ಸರ್ಕಾರದ ಕ್ರಮವನ್ನು ಬೆಂಬಲಿಸುತ್ತಾರೆ ಎಂದು ವಿಶ್ವಕ್ಕೆ ತೋರಿಸಲು ಕಾಂಗ್ರೆಸ್ಸಿಗೆ ಮತ ನೀಡಬೇಕು ಎಂದು ಪ್ರಧಾನಮಂತ್ರಿಗಳು ಹೇಳಿದರೆ, ಅವರು ತಪ್ಪು ಹೇಳುತ್ತಿದ್ದಾರೆ. ಬ್ಲಿಟ್ಜ್ ಪತ್ರಿಕೆ ಗೋವಾಗೆ ಸಂಬಂಧಿಸಿದಂತೆ ನಮ್ಮ ಕ್ರಮಗಳ ಬಗ್ಗೆ ಪಾಶ್ಚಿಮಾತ್ಯ ಪ್ರಪಂಚದ ಪ್ರತಿಕೂಲ ಪ್ರತಿಕ್ರಿಯೆಗಳ ಬಗ್ಗೆ ವ್ಯಂಗ್ಯಚಿತ್ರಗಳನ್ನು ಪ್ರಕಟಿಸಿದೆ. ಈ ಪ್ರತಿಕ್ರಿಯಾಕಾರರಿಗೆ ತಕ್ಕ ಉತ್ತರ ನೀಡಲು ಕೃಷ್ಣ ಮೇನನ್ನರಿಗೆ ಮತ ನೀಡಬೇಕು ಎಂದು ಜನರನ್ನು ಅದು ಕೋರಿದೆ. ಇದರ ಅರ್ಥವೆಂದರೆ ಆಂತರಿಕ ನೀತಿಗಳಲ್ಲಿ ವಿದೇಶ ವ್ಯವಹಾರಗಳನ್ನು ತರುವುದು. ಚುನಾವಣಾ ಸ್ಪರ್ಧೆಯೇನು ಅಮೆರಿಕನ್ನರು ಮತ್ತು ಭಾರತೀಯ ನಡುವೆ ನಡೆಯುತ್ತಿಲ್ಲ. ಇಂತಹ ಹೇಳಿಕೆಗಳು/ಭಿನ್ನಾಂಶಗಳ ವಿಚಾರಗಳೆಲ್ಲವೂ ಗೊಂದಲಗಳನ್ನು ಉಂಟು ಮಾಡುತ್ತವೆ. ಹಾಗೆಯೇ, ರಾಷ್ಟ್ರೀಯ ಐಕ್ಯಮತವನ್ನು ಕಡೆಗಣಿಸುತ್ತವೆ. ಜೊತೆಗೆ, ಕೆಲವು ಆಲೋಚನಾಹೀನ ಮತ್ತು ಅವಿವೇಕಿ ಜನರು ಮುಂದೆ ಬಂದು ಸರ್ಕಾರವನ್ನು ಟೀಕಿಸಿದರೆ ಶತ್ರುಗಳಿಗೆ ಪ್ರಚಾರಕ್ಕೆ ಬಲ ನೀಡಿದಂತಾಗುತ್ತದೆ. ಇದೆಲ್ಲವನ್ನೂ ನಿಲ್ಲಿಸಬೇಕು. ಆದ್ದರಿಂದ ಪ್ರಧಾನಮಂತ್ರಿಗಳು, ಕಾಂಗ್ರೆಸ್ ನಾಯಕರು ಹಾಗೂ ಇತರ ಪಕ್ಷಗಳ ನಾಯಕರು ಈ ವಿಷಯಗಳಲ್ಲಿ ಇತರ ದೇಶಗಳು–ಪಾಕಿಸ್ತಾನ, ಚೀನಾ, ಅಮೇರಿಕಾ ಅಥವಾ ಇಂಗ್ಲೆಂಡ್–ಯಾವುದನ್ನೂ ತಮ್ಮ ಚುನಾವಣಾ ಭಾಷಣಗಳಲ್ಲಿ ಸೇರಿಸಬಾರದು. ದೇಶದಲ್ಲಿ ಒಂದು ಪಕ್ಷದಿಂದ ಇನ್ನೊಂದು ಪಕ್ಷವನ್ನು ಬೇರ್ಪಡಿಸುವ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳೋಣ.

## ನೀತಿ ಸಂಹಿತೆಗಳ ಪ್ರಧಾನ ಉಲ್ಲಂಘಕ

ನೀತಿ ಸಂಹಿತೆಗಳ ನಡುವೆಯೂ ಪಂಡಿತ ಜವಾಹರಲಾಲ್ ನೆಹರೂರವರ ಮುಂದಾಳತ್ವದಲ್ಲಿಯೇ ಕಾಂಗ್ರೆಸ್ಸಿಗರು ಉಗ್ರರಾಗುವುದರಲ್ಲಿ ಹಾಗೂ ನಿಂದಿಸುವುದರಲ್ಲಿ

ವಿಶೇಷ ಆನಂದ ಪಡೆಯುತ್ತಿರುವಂತಿದೆ. ಪಂಡಿತ ನೆಹರೂರವರು ಸ್ವತಂತ್ರ ಪಕ್ಷದ ಅರ್ಥಶಾಸ್ತ್ರವನ್ನು ಕೆಟ್ಟ ಅರ್ಥಶಾಸ್ತ್ರ ಎಂದು ಕರೆದಾಗ ಅವರು ಜನರನ್ನೇನು ಬುದ್ಧಿವಂತರನ್ನಾಗಿ ಮಾಡಲಿಲ್ಲ.

ಅದೊಂದು ದಿನ ಜನಸಂಘದವರನ್ನು ಜಿನ್ನಾದ ಶಿಷ್ಯರೆಂದು ಸಂಬೋಧಿಸಿದ್ದರು. ಇದು ಅವರು ಇರುವ ಉನ್ನತ ಸ್ಥಾನಕ್ಕೆ ತಕ್ಕುದೆ? ಜಿನ್ನಾ ಪಾಕಿಸ್ತಾನದ ಶಿಲ್ಪಿ ಎಂದು ಎಲ್ಲರಿಗೂ ಗೊತ್ತಿದೆ ಮತ್ತು ಭಾರತೀಯ ಜನಸಂಘ ದೇಶದ ವಿಭಜನೆಗೆ ವಿರೋಧಿಯಾಗಿತ್ತು. ಎರಡೂ ತಿಳಿದಿದೆ. ಹಾಗೂ ದೇಶದ ಏಕತೆಯನ್ನು ಬಯಸುತ್ತದೆ. ಹೀಗಿದ್ದಾಗ ಶಿಷ್ಯರು ಹೇಗೆ ಗುರು ಸಾಧಿಸಿದ ಕಾರ್ಯಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಾರೆ ಎಂದು ನಂಬುವುದು ಹೇಗೆ?

ಮತ್ತು ಪಂಡಿತ್‌ಜಿರವರು ತಮ್ಮನ್ನು ಜಿನ್ನಾರ ವಿರೋಧಿ ಎಂದು ಕರೆದುಕೊಳ್ಳುತ್ತಾರೆ. ಇತಿಹಾಸವನ್ನು ಕೆದಕುವುದು ಬೇಡ. ಅದೇ ಭಾಷಣದಲ್ಲಿ ಅವರು, ಪಾಕಿಸ್ತಾನದ ಜನರು ಬಯಸಿದರೂ ಪಾಕಿಸ್ತಾನವನ್ನು ಮರಳಿ ಭಾರತಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದು ಜನಸಂಘದ ಬಗ್ಗೆ ಮಾತನಾಡುವಾಗ ಹೇಳಿದ್ದರು. ಹಾಗಾಗಿ ಜಿನ್ನಾ ಮಾಡಿದ ಕೆಲಸವನ್ನು ಸಫಲವಾಗಿಸುವ ಉದ್ದೇಶವುಳ್ಳ ವಿರೋಧಿಯೊಬ್ಬನಿದ್ದಾನೆ ಎಂದಾಯಿತು.

ಆದ್ದರಿಂದ ಜನರು ಅಂತಹ ಹೇಳಿಕೆಗಳಿಗೆ ಮರುಳಾಗದೇ ಚುನಾವಣಾ ಪ್ರಚಾರ ಸಮಯದಲ್ಲಿ ಪಕ್ಷಗಳು ಪಾಲಿಸುವ ಮಟ್ಟಗಳ ಮೇಲೆ ಅವುಗಳನ್ನು ವೀಕ್ಷಿಸಿ ತೀರ್ಪು ನೀಡಲು ಪ್ರಯತ್ನಿಸಬೇಕು. ಕ್ಷೇತ್ರವಾರು ನಿರ್ಧಾರಗಳನ್ನು ಕೈಗೊಳ್ಳಲು ಎಲ್ಲೆಡೆಯೂ ಪಕ್ಷಗಳ ಅಭ್ಯರ್ಥಿಗಳಿಲ್ಲ. ನಿಮ್ಮ ಕ್ಷೇತ್ರದಲ್ಲಿ ರಾಷ್ಟ್ರೀಯವಾದಿ ಅಭ್ಯರ್ಥಿಯಿದ್ದರೆ ಅವರಿಗೆ ಮತ ನೀಡಿ ಮತ್ತು ಕಾಂಗ್ರೆಸ್ಸನ್ನು ಸೋಲಿಸಿ. ಕಾಂಗ್ರೆಸ್ ಮತ್ತು ಕಮ್ಯುನಿಸ್ಟರ ನಡುವೆ ಸೆಣೆಸಾಟವಿದ್ದರೆ ಕಮ್ಯುನಿಸ್ಟರು ಸೋಲುವರೆ ಎಂಬುದನ್ನು ಖಾತ್ರಿ ಮಾಡಿಕೊಳ್ಳಿ. ಇಂತಹ ಸಂದರ್ಭಗಳಲ್ಲಿ ವಿರೋಧಿಗಳಿಗೆ ಮತ ಹಾಕಿದರೆ–ಇಲ್ಲಿ ಕಮ್ಯುನಿಸ್ಟರು–ಪ್ರಜಾಪ್ರಭುತ್ವ ಬಲಗೊಳ್ಳುತ್ತದೆ ಎಂದು ಹೇಳುವ ವಾದಗಳಿಂದ ದಾರಿ ತಪ್ಪಬೇಡಿ. ನಿಜವೆಂದರೆ ಕಮ್ಯುನಿಸ್ಟರಿಂದ ಪ್ರಜಾಪ್ರಭುತ್ವ ಗಟ್ಟಿಗೊಳ್ಳುವುದಿಲ್ಲ. ಏಕೆಂದರೆ ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯೇ ಇಲ್ಲ. ಆದ್ದರಿಂದ ಕಮ್ಯುನಿಸ್ಟರಿಗೆ ಮತ ಹಾಕುವ ತಪ್ಪು ಮಾಡಬೇಡಿ.

ಬಹುಮುಖಿ ಸ್ಪರ್ಧೆಗಳಿದ್ದರೆ ರಾಷ್ಟ್ರೀಯ ಪ್ರಜಾಪ್ರಭುತ್ವವಾದಿಯನ್ನು ಬೆಂಬಲಿಸಿ ಮತ ನೀಡಿ ನಿಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲು ಪ್ರಯತ್ನಿಸಿ. ಆದರೆ ಅಭ್ಯರ್ಥಿ ಸೋತರೆ ನಿಮ್ಮ ಮತ ವ್ಯರ್ಥವಾಯಿತು ಎಂದು ಆಲೋಚಿಸಬೇಡಿರಿ. ಅದೆಂದಿಗೂ ವಿಫಲವಾಗುವುದಿಲ್ಲ. ಮುಂದೆ ರಚನೆಯಾಗಲಿರುವ ಸರ್ಕಾರದ ನೀತಿಗಳು ಹಾಗೂ ಮನೋಧರ್ಮಗಳನ್ನು ಅದು ಪ್ರಭಾವಿತಗೊಳ್ಳುತ್ತದೆ.

ಆದ್ದರಿಂದ ಸರ್ಕಾರವನ್ನು ಹೆಚ್ಚು ಸಮಾಜವಾದಿಯನ್ನಾಗಿಸುವ ಸಮಾಜವಾದಿ ಪಕ್ಷಗಳಿಗೆ ಮತ ನೀಡಿ. ಹೀಗಾಗಿ ರಾಷ್ಟ್ರೀಯ ಹಾಗೂ ಮಾನವತಾವಾದಿ ಪಕ್ಷಕ್ಕೆ ಹಾಕಿದ ಒಂದು ಮತ ಸರ್ಕಾರವು ರಾಷ್ಟ್ರೀಕರಣದ ಮೇಲೆ ಯೋಜಿಸುವ ಸಾಹಸೀ ಕಾರ್ಯಕ್ರಮಗಳನ್ನು ಆರಂಭಿಸುವ ಮುನ್ನ ಎರಡೆರಡು ಬಾರಿ ಆಲೋಚಿಸುವಂತೆ ಮಾಡುತ್ತದೆ. ಭಾರತೀಯ ಜನಸಂಘ ವಿರೋಧ ಪಕ್ಷದ ಸಿದ್ಧಾಂತದಲ್ಲಿ ನಂಬಿಕೆ ಇಡುವುದಿಲ್ಲ. ಅದು ಪರ್ಯಾಯ ಶಕ್ತಿಯೊಂದನ್ನು ನಿರ್ಮಿಸುತ್ತಿದೆ. ತನ್ನನ್ನು ತಾನು ಪರ್ಯಾಯವಾಗಿ ನಿರ್ಮಿಸಿಕೊಳ್ಳುತ್ತಿದೆ. ಆದರೆ ಈ ಪರ್ಯಾಯಶಕ್ತಿ ಮಂತ್ರದಂಡದಿಂದ ನಿರ್ಮಾಣವಾಗುವುದಿಲ್ಲ. ಮತದಿಂದ ಮತ ಹಾಗೂ ಸ್ಥಾನದಿಂದ ಸ್ಥಾನ ಹೆಚ್ಚಿಸಿಕೊಳ್ಳುತ್ತ ವಿಕಸಿತವಾಗಬೇಕಾಗಿದೆ.

ಆದ್ದರಿಂದ ನಿಮ್ಮ ಮತ ರಚನಾತ್ಮಕವಾಗಿ ಉಪಯೋಗವಾಗಲಿ. ಈಗಿನ ಅಧೋಗತಿಯ, ಕ್ಷೀಣಿಸುತ್ತಿರುವ ಮತ್ತು ಭ್ರಷ್ಟ ಸರ್ಕಾರಕ್ಕೆ ಪರ್ಯಾಯವೊಂದನ್ನು ಬೆಳೆಸಲಿ. ಪ್ರತಿ ಮತದಾರನೊಬ್ಬನಿಗೂ ನಿರ್ವಹಿಸಬೇಕಾದ ಪಾತ್ರವಿದೆ. ನೀವು ಇದನ್ನು ಯೋಗ್ಯವಾಗಿ, ಪ್ರಜಾಪ್ರಭುತ್ವಕ್ಕೆ ತಕ್ಕುದಾದ ರೀತಿಯಲ್ಲಿ ಅದರ ರಾಷ್ಟ್ರೀಯ ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ಮತ್ತು ಭವ್ಯಭವಿತ್ಯವನ್ನು ನಿರ್ಮಿಸಲು ಬಳಸಿ. ಈ ಭವಿತವ್ಯ ಹಿಂದಿನ ವೈಭವಯುತ ಗತಕ್ಕಿಂತ ಹೆಚ್ಚು ಭವ್ಯವಾಗಿರಲಿ.

# ಅವರು ಹೇಗೆ ಬದುಕಬೇಕು ಎನ್ನುವುದನ್ನು ಜನರಿಗೆ ಕಲಿಸಿಕೊಟ್ಟರು*

ನಿಜವಾದ ಅರ್ಥದಲ್ಲಿ ಡಾ. ಕೇಶವ ಬಲಿರಾಮ್ ಹೆಡ್ಗೇವಾರ್ ಹುಟ್ಟು ದೇಶಭಕ್ತ. ಪ್ರತಿಕ್ರಿಯೆಯಾಗಲಿ ಜಿಗುಪ್ಸೆಯಾಗಲಿ ಅವರನ್ನು ರಾಷ್ಟ್ರೀಯ ಕೆಲಸಗಳಿಗೆ ಎಳೆದು ತರಲಿಲ್ಲ. ಅವರು ಬ್ರಿಟಿಷ್ ಆಡಳಿತದ ವಿರುದ್ಧವಿದ್ದರು ಹಾಗೂ ಸಾಧ್ಯವಾದ ಯಾವುದೇ ಮಾರ್ಗಗಳಿಂದಲಾದರೂ ಬ್ರಿಟಿಷ್ ಆಳ್ವಿಕೆಗೆ ಅಂತ್ಯ ಹಾಡಬೇಕೆಂದು ಅವರು ಬಯಸುತ್ತಿದ್ದರು. ಇದರಲ್ಲಿ ಎರಡು ಮಾತಿಲ್ಲ.

ಒಮ್ಮೆ ಅವರು ತಾಯ್ನಾಡಿಗೆ ಸ್ವಾತಂತ್ರ್ಯ ತಂದು ಕೊಡಲು ನಾನು ಬ್ರಿಟಿಷರ ಬೂಟು ಪಾಲೀಷು ಮಾಡಲೂ ಸಿದ್ಧ, ಅಗತ್ಯ ಬಿದ್ದಾಗ ಅದೇ ಬೂಟಿನಿಂದ ಅವರನ್ನು ಹೊರಹಾಕಲೂ ಸಿದ್ಧ ಎಂದು ತಿಳಿಸಿದ್ದರು.

ಸ್ವಾತಂತ್ರ್ಯ ಕೇಶವ ಅವರಿಗೆ ಕೇವಲ ಮೋಹವಾಗಿರಲಿಲ್ಲ, ಬದಲಿಗೆ ಅವರು ಲೋಕಮಾನ್ಯ ತಿಲಕರಂತೆ ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸಿದ್ದರು. ಕೇಶವರು ಎಲ್ಲಾ ಸ್ವಾತಂತ್ರ್ಯ ಚಳವಳಿಗಳಲ್ಲಿ ಪಾಲ್ಗೊಂಡಿದ್ದರು, ಮಾತ್ರವಲ್ಲದೆ ಸ್ವಾತಂತ್ರ್ಯ ಹೋರಾಟಗಳಲ್ಲಿ ಪಾಲ್ಗೊಂಡ ಎಲ್ಲರನ್ನೂ ಹುರಿದುಂಬಿಸಿ ಸ್ವಾತಂತ್ರ್ಯದ ಮಹತ್ವವನ್ನು ಮನದಟ್ಟು ಮಾಡಿಕೊಡುತ್ತಿದ್ದರು. ದೇಶವು ಸಂಕೋಲೆಯಲ್ಲಿ ಬಿಗಿಯಲ್ಪಟ್ಟಿದೆ ಎನ್ನುವ ಕಾರಣ ಮಾತ್ರದಿಂದಲೇ ಕೇಶವ ದೇಶವನ್ನು ಪ್ರೀತಿಸುತ್ತಿರಲಿಲ್ಲ. ಅವರ ಪ್ರಕಾರ ತಾಯ್ನಾಡನ್ನು ಪ್ರೀತಿಸುವುದು ಮಾನವನ ಮನೋಸಹಜ ಸ್ಥಿತಿ. ಸಾರ್ವತ್ರಿಕ ದೇಶಪ್ರೇಮವು ವ್ಯಕ್ತಿಯಲ್ಲಿನ ಅಸಾಮಾನ್ಯ ಕೊಡುಗೆಯಲ್ಲ, ಬದಲಿಗೆ ಸಾಮಾಜಿಕ ಹಾಗೂ ಸಂಸ್ಕೃತಿಯಿಂದ ಕೂಡಿರುವ ಮನುಷ್ಯನಲ್ಲಿನ ಸಾಮಾನ್ಯ ಗುಣಗಳು. ಮನುಷ್ಯ ಸಾಮಾಜಿಕ ಪ್ರಜ್ಞೆಯನ್ನು ಕಳೆದುಕೊಂಡು ಸ್ವ–ಕೇಂದ್ರೀಕೃತನಾದರೆ ಭ್ರಮಾ ಲೋಕದಲ್ಲಿ ತೇಲಲಾರಂಭಿಸುತ್ತಾನೆ. ಆ ಕಾರಣದಿಂದಾಗಿ ಡಾ. ಹೆಡ್ಗೇವಾರ್ ಅವರು ಮನುಷ್ಯನನ್ನು ಅಟ್ಟಕ್ಕೇರಿಸುವಂತಹ ದೇಶ ಭಕ್ತ ಪದವನ್ನು ಎಂದಿಗೂ ಇಷ್ಟಪಡುತ್ತಿರಲಿಲ್ಲ.

ನಿರ್ದಿಷ್ಟ ವ್ಯಕ್ತಿಗಳಿಗೆ ಈ ಹೆಸರನ್ನು ಬಳಸುವುದು ಸಾಮಾನ್ಯ ಜನರಲ್ಲಿ ಈ

---

* ಮೂಲ ಆಕರ : ಆರ್ಗನೈಸರ್, ೦೨.೦೪.೧೯೬೨

ಗುಣ ಇಲ್ಲ ಎನ್ನುವುದನ್ನು ಸೂಚಿಸುವುದರ ಧ್ಯೋತಕ. ಜನಸಾಮಾನ್ಯರಲ್ಲಿ ಇಂತಹ ಗುಣ ಮೂಡಬೇಕಾದಲ್ಲಿ ಇತರರಲ್ಲಿನ ತೀವ್ರಗಾಮಿ ಗುಣ ಅಥವಾ ವಿದೇಶಿ ನಿಯಮದ ಅಸ್ತಿತ್ವ ಅಗತ್ಯವಲ್ಲ. ದೇಶಪ್ರೇಮ ಧನಾತ್ಮಕ ಆಸ್ತಿಯೇ ಹೊರತು ಅಪರಿಚಿತ ಸಮಾಜದಲ್ಲಿ ಕೆಡುಕನ್ನು ಉಂಟು ಮಾಡಬಲ್ಲ ಋಣಾತ್ಮಕ ಪ್ರತಿಕ್ರಿಯೆಯಲ್ಲಿ ಎನ್ನುವುದು ಅವರ ಭಾವನೆಯಾಗಿತ್ತು.

ಅಲ್ಲಿ ಔರಂಗಾಜೇಬ್ ಇರದಿದ್ದಲ್ಲಿ ಶಿವ ಇರುತ್ತಿರಲಿಲ್ಲವೆ? ಎಂದು ಅವರು ಒಮ್ಮೆ ತಮ್ಮ ಸುತ್ತ ಮಾತುಕತೆಗಾಗಿ ಸುತ್ತುವರಿದಿದ್ದ ಸ್ವಯಂ ಸೇವಕರನ್ನು ಪ್ರಶ್ನಿಸಿದ್ದರು.

ನಮ್ಮಲ್ಲಿ ಕೆಲವರು ಇಲ್ಲ ಎಂದಿದ್ದೆವು. ಛತ್ರಪತಿ ಶಿವಾಜಿಯು ನಡೆಸಿದ ಹೋರಾಟವು ಔರಂಗಾಜೇಬನ ನಿರಂಕುಶ ಪ್ರಭುತ್ವ ಮತ್ತು ಧಾರ್ಮಿಕ ಸಂಕುಚಿತತೆಯ ವಿರುದ್ಧವಾಗಿತ್ತು. ನಿಜಕ್ಕೂ ಆತ ಉತ್ತಮ ಆಡಳಿತ ನೀಡಿದ್ದೇ ಆಗಿದ್ದಲ್ಲಿ ಆತ ಅದೇಕೆ ದೆಹಲಿಯಲ್ಲಿ ಅಷ್ಟೊಂದು ಸಮಸ್ಯೆಗಳನ್ನು ಎದುರಿಸುತ್ತಿದ್ದ?

ಆದರೆ ಡಾಕ್ಟರರ ಉತ್ತರ ಸ್ಪಷ್ಟವಾಗಿತ್ತು. ಶಿವಾಜಿಯು ಔರಂಗಜೇಬನ ಹಾಗೂ ಮಹಾರಾಣಾ ಪ್ರತಾಪನು ಅಕ್ಬರನ ವಿರುದ್ಧ ನಡೆಸಿದ ಹೋರಾಟಗಳು ಐತಿಹಾಸಿಕ ಕಾಕತಾಳೀಯಗಳಾಗಿದ್ದವು. ಅಲ್ಲದೆ ದೆಹಲಿಯಲ್ಲಿ ಮೊಘಲ್ ಆಡಳಿತ ಇಲ್ಲದಿದ್ದರೂ ಭಾರತ ಮಾತೆಯ ಈ ಪುತ್ರರು ಜನಸೇವೆ ಮಾಡಿಕೊಂಡು ತಾಯ್ನಾಡಿನ ಹಿರಿಮೆಯನ್ನು ಎತ್ತಿ ಹಿಡಿಯುತ್ತಿದ್ದರು. ಸಹಜವಾಗಿಯೇ, ಅವರು ಸೇವೆಗಾಗಿ ಆಯ್ದುಕೊಂಡ ಮಾರ್ಗ ವಿಭಿನ್ನವಾಗಿರುತ್ತಿದ್ದವು. ದೇಶಸೇವೆಯನ್ನು ಕೇವಲ ಯೋಧ ಅಥವಾ ಮುತ್ಸುದ್ದಿಯೇ ಮಾತ್ರವಲ್ಲ, ಜಾಡಮಾಲಿಗಳು ಮತ್ತು ಸಂತರೂ ಮಾಡಬಲ್ಲರು.

ಇದನ್ನೇ ದೃಷ್ಟಿಯಲ್ಲಿರಿಸಿಕೊಂಡು ಒಮ್ಮೆ ಅವರು 'ಸಾಯುವುದು ಹೇಗೆ ಎಂಬುದನ್ನು ನನಗೆ ತಿಳಿಸು' ಎಂದು ಇದ್ದ ಚಿತ್ರವೊಂದರ ಶೀರ್ಷಿಕೆಯನ್ನು ಬದುಕುವುದು ಹೇಗೆಂಬುದನ್ನು ನನಗೆ ಕಲಿಸು ಎಂದು ಬದಲಿಸಿದ್ದರು. ನಿಜವಾಗಿ, ಅವರು ಬದುಕುವುದು ಹೇಗೆ ಎನ್ನುವುದನ್ನು ಜನಸಾಮಾನ್ಯರಿಗೆ ತಿಳಿಸಿಕೊಟ್ಟರು.

**ಋಣಾತ್ಮಕ ರಾಷ್ಟ್ರೀಯತೆಯ ಫಲಗಳು**

ರಾಷ್ಟ್ರೀಯತೆಯ ಧನಾತ್ಮಕ ಪರಿಕಲ್ಪನೆಯು ಅವರಿಗೆ ಹಿಂದೂ ಧರ್ಮದ ಮೇಲೆ ಹೆಚ್ಚು ಮಹತ್ವ ನೀಡುವಂತೆ ಮಾಡಿತು. ಬ್ರಿಟಿಷರ ವಿರುದ್ಧದ ಹೋರಾಟಕ್ಕೆಂದು ಆಯ್ದುಕೊಂಡಿದ್ದ ಅಸಹಕಾರ ಮತ್ತು ಖಿಲಾಫತ್ ಎಂಬ ಹೋರಾಟ ವಿಧಾನಗಳಿಂದಾಗಿ ಇಡೀ ರಾಷ್ಟ್ರೀಯ ಹೋರಾಟ–ರಾಷ್ಟ್ರದ ಬಗೆಗಿನ ನಮ್ಮ ದೃಷ್ಟಿಕೋನ ಗೊಂದಲಗಳಿಗೆ ಎಡೆ ಮಾಡಿಕೊಟ್ಟಿತು.

ಅಸಹಕಾರವು ನಿಜಕ್ಕೂ ಋಣಾತ್ಮಕವಾಗಿತ್ತು. ಅದು ಸಹಜವಾಗಿಯೇ ಬ್ರಿಟಿಷರ

ಎಲ್ಲಾ ಕಾಯ್ದೆಗಳನ್ನು ಬಹಿಷ್ಕರಿಸಲು ಸಲಹೆ ನೀಡಿದರೂ ಅದು ನಮ್ಮ ರಾಷ್ಟ್ರೀಯ ಸ್ವಭಾವದ ಯಾವುದೇ ಧನಾತ್ಮಕ ರೀತಿಗಳನ್ನೂ ಅನುಷ್ಠಾನಕ್ಕೆ ತರಲಿಲ್ಲ. ಖಿಲಾಫತ್, ಖುಲ್ಲಂಖುಲ್ಲಾ ಭೂಪ್ರದೇಶಾತೀತ ಪಂಥೀಯ ನಿಷ್ಠೆಯ ಹೋರಾಟವಾಗಿತ್ತು. ಅದು ಮುಸ್ಲಿಮರನ್ನು ಈ ನೆಲದ ನಿಯಮಗಳಿಗೆ ಒಳಗಾಗುವಂತೆ ಪ್ರೇರೇಪಿಸುತ್ತಿರಲಿಲ್ಲ. ಬದಲಿಗೆ ಸ್ವಲ್ಪ ಮಟ್ಟಿಗೆ ಸಂಪ್ರದಾಯ ಮತ್ತು ಪರಿಸರಗಳಿಂದಾಗಿ ಅವರು ಬೆಳೆಸಿಕೊಂಡಿದ್ದ ನಿಷ್ಠೆಯನ್ನು ದುರ್ಬಲಗೊಳಿಸಿತು. ಇದು ಎಷ್ಟೆಂದರೆ ಅನೇಕ ಪ್ರಮುಖ ಮುಸ್ಲಿಮರು, ಆಫ್ಘಾನಿಸ್ತಾನವನ್ನು ಇಸ್ಲಾಮಿನ ರಾಷ್ಟ್ರ ಎಂದೇ ಬಗೆದು ಅಲ್ಲಿ ನೆಲೆಸಲು ತೆರಳಲು ಯೋಚಿಸಿದ್ದರು. ಖಿಲಾಫತ್ ಮತ್ತು ಕಾಂಗ್ರೆಸ್ ನಾಯಕರ ನಡುವೆ ಏನಾದರು ಸಂಬಂಧಗಳು ಇದ್ದದ್ದೇ ಅದಲ್ಲಿ ಅದು ಕೇವಲ ತಾತ್ಕಾಲಿವಾದವುಗಳಾಗಿದ್ದವು. ಪ್ರತಿಯೊಬ್ಬರೂ, ಬಹುಶಃ ಒಬ್ಬರು ಮತ್ತೊಬ್ಬರನ್ನು ಶೋಷಿಸಲು ಬಯಸುತ್ತಿದ್ದರು. ಬ್ರಿಟಿಷರನ್ನ ಹೊರದಬ್ಬಲು ಬಯಸಿದ್ದ ಕಾಂಗ್ರೆಸ್ ನಾಯಕರು, ೧೮೫೭ರ ನಂತರ ಮೊಟ್ಟಮೊದಲ ಬಾರಿಗೆ ಖಿಲಾಫತ್‌ನಲ್ಲಿ ಬ್ರಿಟಿಷರು ಮಾಡಿದ ವಿಶ್ವಾಸ ದ್ರೋಹದಿಂದ ಅವರ ವಿರುದ್ಧ ಕೋಪಿಸಿಕೊಂಡಿದ್ದ ಮುಸ್ಲಿಮರ ಸಂಗಡ ಒಪ್ಪಂದಕ್ಕೆ ಮುಂದಾಗಿದ್ದರು. ಆದರೆ ಕಮಲ್ ಅಟಾತುರ್ಕ್ ಸ್ವತಃ ಖಿಲಾಫತ್‌ಗೆ ಅಂತ್ಯ ಹಾಡುತ್ತಿದ್ದಂತೆಯೇ ಬ್ರಿಟಿಷರ ವಿರುದ್ಧವಾಗಿರುವುದಕ್ಕೆ ಮುಸ್ಲಿಮರಿಗಿದ್ದ ಕಾರಣಗಳೇ ಮುಗಿದುಹೋದವು.

ಆದರೂ ಕಾಂಗ್ರೆಸ್ ನಾಯಕರು ಬದಲಾದ ಸನ್ನಿವೇಶಗಳನ್ನು ಅರ್ಥೈಸಿಕೊಳ್ಳಲಿಲ್ಲ. ಸಹಜ ರಾಷ್ಟ್ರೀಯ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸುವ ಹಾಗೂ ಕ್ರೋಢೀಕರಿಸುವ ಬದಲು ಒಗ್ಗೂಡಿಸುವ ಕ್ರಮವನ್ನು ಪೂರ್ಣಗೊಳಿಸಲು ಮುಂದಾದರು. ಇದು ತಲೆಮಾರುಗಳಿಂದ ನಡೆದುಕೊಂಡು ಬಂದಿದ್ದ ರಾಷ್ಟ್ರೀಯತೆಯ ಅಂಶಗಳ ಬದಲಿಗೆ ಹೊಸ ಅಂಶಗಳನ್ನು ಅಳವಡಿಸಿಕೊಳ್ಳುವ ಈ ಕ್ರಮಗಳು ಯಾರನ್ನೂ ಉತ್ತೇಜಿಸಲಿಲ್ಲ. ಇಂತಹ ಪರಿಸ್ಥಿತಿಗಳಿಂದಾಗಿಯೇ ಡಾ. ಹೆಡ್ಗೇವಾರ್ ಅವರು ಹಿಂದೂ ರಾಷ್ಟ್ರದ ಬಗೆಗಿನ ನಮ್ಮ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಮಂಡಿಸಬೇಕಾಯಿತು.

# ಸಂಯುಕ್ತ ರಾಷ್ಟ್ರೀಯತೆ ಪರಿಕಲ್ಪನೆಯ ಬಂಜೆತನ

ಕಳೆದ ನಲವತ್ತು ವರ್ಷಗಳಿಂದ ನಿಜವಾದ ರಾಷ್ಟ್ರೀಯತೆ ಹಾಗೂ ನಕಲಿ ರಾಷ್ಟ್ರೀಯತೆ ನಡುವಣ ತಿಕ್ಕಾಟ ನಡೆಯುತ್ತಲೇ ಇದೆ. ಸಂಯುಕ್ತ ರಾಷ್ಟ್ರೀಯತೆಯ ಕೇಂದ್ರ ಸ್ಥಾನದಲ್ಲಿರುವ ಮಂದಿ ಸಂಯುಕ್ತ ರಾಷ್ಟ್ರೀಯತೆಯ ಉಳಿವಿಗಾಗಲಿ ಮತ್ತು ಜನರನ್ನು ಉತ್ತೇಜಿಸಲಾಗಲಿ ಏನನ್ನೂ ಮಾಡಲು ಅಶಕ್ತರಾಗಿದ್ದಾರೆ. ಆದರೆ ಖಂಡಿತವಾಗಿಯೂ ಅವರು ಜನಸಾಮಾನ್ಯರನ್ನು ಗೊಂದಲಕ್ಕೆ ಕೆಡವುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ಸಂಯುಕ್ತ ರಾಷ್ಟ್ರೀಯತೆಯ ಗುಣಲಕ್ಷಣಗಳಿಂದಾಗಿ ಮಾತೆಯ ಕೀರ್ತಿಯನ್ನು ನಾಶ ಮಾಡಿ ಹೆಸರಿಗೆ ಕಳಂಕ ತಂದಿದ್ದಾರೆ. ಅಲ್ಲದೆ ಅವರು ರಾಷ್ಟ್ರೀಯತೆಯ ನೈಜ ಸ್ಥಿತಿಯನ್ನೇ ಹೀಯಾಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪರಿಣಾಮ ಪ್ರಸ್ತುತ ಪರಿಸ್ಥಿತಿಯು ರಾಷ್ಟ್ರದ ಸಂಪೂರ್ಣ ಭಾವೈಕ್ಯತೆ ಮತ್ತು ನಾಗರಿಕತೆಯನ್ನೇ ನಾಶ ಮಾಡುತ್ತಿದೆ. ಆದರೆ, ಆರ್.ಎಸ್.ಎಸ್. ಏಕೈಕ ಆಶಾಕಿರಣವಾಗಿದೆ. ನಮ್ಮ ಭವಿಷ್ಯ ಯಾವುದು ಇರಬೇಕು ಎಂದು ಎಲ್ಲರು ಚಿಂತಿಸಬೇಕು. ಡಾ. ಹೆಡ್ಗೇವಾರ್ ತಮ್ಮ ದೂರದೃಷ್ಟಿಯಿಂದ ನಮ್ಮ ರಾಷ್ಟ್ರೀಯತೆಯ ನೈಜ ಸ್ವರೂಪವನ್ನು ಸಂರಕ್ಷಿಸುವ ಮತ್ತು ಪ್ರಚುರಪಡಿಸುವ ಉದ್ದೇಶದಿಂದ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

ಡಾ. ಹೆಡ್ಗೇವಾರ್ ಕೇವಲ ವಿಚಾರವಂತ ಮಾತ್ರವಲ್ಲ, ಮಾದರಿ ವ್ಯಕ್ತಿಯೂ ಹೌದು. ಅವರೊಬ್ಬ ಕನಸುಗಾರ, ತನ್ನ ಕನಸುಗಳನ್ನು ನನಸನ್ನಾಗಿಸಲೇ ಇದ್ದವರು. ಅವರು ತಮ್ಮ ಪ್ರಯತ್ನಗಳ ಫಲವಾಗಿ ನಮಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಎಂಬ ಮಹತ್ವದ ಸಂಸ್ಥೆಯನ್ನು ನೀಡಿದರು. ಆರ್.ಎಸ್.ಎಸ್.ನ ದೃಷ್ಟಿಕೋನದ ಮೂಲಕ ಅವರು ಅರ್ಥಪೂರ್ಣ ಬದುಕನ್ನು ಸಾಗಿಸಬಲ್ಲ ಸಾಮರ್ಥ್ಯವುಳ್ಳ ಸಂಘಟಿತ ಸಮಾಜವನ್ನು ನೋಡಬಯಸಿದ್ದರು.

ಹಿಂಸಾತ್ಮಕ ಹಾಗೂ ಸಂಕುಚಿತ ದೃಷ್ಟಿಕೋನವನ್ನು ಹೊಂದಿರುವ ಮಂದಿ ಆರ್.ಎಸ್.ಎಸ್. ಅನ್ನು ತಮ್ಮನ್ನು ಹತ್ತಿಕ್ಕುವ ವಿರೋಧಿ ಸಂಘಟನೆ ಎಂದೇ ಪರಿಗಣಿಸುತ್ತಿದ್ದಾರೆ. ಆದರೆ ಅವರು ತಪ್ಪುಕಲ್ಪನೆ ಹೊಂದಿದ್ದಾರೆ. ಆರ್.ಎಸ್.ಎಸ್. ಸೀಮಿತ ಉದ್ದೇಶಗಳನ್ನು ಹೊಂದಿದ ಸಂಘಟನೆ ಅಲ್ಲ. ತನ್ನ ದೃಷ್ಟಿಕೋನದ ಮೂಲಕ ದೇಶದ ಜನರನ್ನು ಒಟ್ಟಾಗಿ ಕರೆದೊಯ್ಯುವುದು ಆರ್.ಎಸ್.ಎಸ್.

ಧ್ಯೇಯ. ಆರ್.ಎಸ್.ಎಸ್. ಪರ ಕಾಳಜಿ ಹೊಂದಿರುವ ಕೆಲವರು ಸಹ ಸಂಘಟನೆಯ ಬಗ್ಗೆ ತಪ್ಪು ಕಲ್ಪನೆಯನ್ನು ಹೊಂದಿದ್ದಾರೆ. ಅವರು ಸಣ್ಣ ಅಂಶಗಳನ್ನು ದೊಡ್ಡದಾಗಿ ಬಿಂಬಿಸಿ ತಪ್ಪು ಕಲ್ಪನೆ ಹುಟ್ಟಿಸುತ್ತಿದ್ದಾರೆ.

**ಸುಧಾರಣಾ ಚಳವಳಿ ಇಲ್ಲ**

ಡಾ. ಹೆಡ್ಗೇವಾರ್ ಸುಧಾರಣಾ ಚಳವಳಿ ಅಲ್ಲ. ಸುಧಾರಣಾ ನೇತಾರ ಸಾಂಸ್ಥಿಕ ಬದಲಾವಣೆ ಬಳಸಿ ಅಂತಹ ಬದಲಾವಣೆಗಳ ಮೂಲಕ ಜನ ಮತ್ತು ಸಮಾಜವನ್ನು ಬದಲಿಸಲು ಒತ್ತು ನೀಡುತ್ತಾನೆ. ಇಂತಹ ಪರಿಸ್ಥಿತಿಗಳಲ್ಲಿ ಸುಧಾರಣಾ ನೇತಾರನನ್ನು ಸಮರ್ಥಿಸಿಕೊಳ್ಳಬಹುದು. ಆದರೆ, ನಮಗೆ ಸುಧಾರಣೆಗಳು ಮುಖ್ಯವಲ್ಲ, ಸಂಘಟನೆ ಮುಖ್ಯ ಎನ್ನುತ್ತಾರೆ ಡಾ. ಹೆಡ್ಗೇವಾರ್. ವ್ಯಕ್ತಿ ಮತ್ತು ಸಮಾಜದ ನಡುವಿನ ಮೂಲ ಸಂಬಂಧವನ್ನು ಪುನರುಜ್ಜೀವನಗೊಳಿಸದೆ ಇದ್ದಲ್ಲಿ ಸಾಂಸ್ಥಿಕ ವ್ಯವಸ್ಥೆ ಅಥವಾ ಸುಧಾರಣಾ ನೇತಾರನ ಆಸಕ್ತಿ ನಮ್ಮ ಯಾವುದೇ ಉದ್ದೇಶವನ್ನು ಈಡೇರಿಸವು. ಅದು ಸ್ಮೃತಿ ಮತ್ತು ಶಾಸ್ತ್ರ ಹಾಗೂ ಆ ಮೂಲಕ ಸಮಾಜದಲ್ಲಿ ಸದಾ ಉಳಿದುಕೊಳ್ಳುವ ಧರ್ಮ ಇದ್ದಂತೆ.

ಇಂದು ನಾವು ಹಿಂದಿರುಗಿ ನೋಡಿದಾಗ, ಡಾ. ಹೆಡ್ಗೇವಾರ್ ಅವರ ಮಹಾನ್ ವ್ಯಕ್ತಿತ್ವ ಮತ್ತು ಅವರ ದೂರದೃಷ್ಟಿಕೋನ ಅಚ್ಚರಿ ಹುಟ್ಟಿಸುತ್ತದೆ. ಆದರೆ ಅವರೊಟ್ಟಿಗೆ ಇದ್ದವರು ಎಂದಿಗೂ ತಾವು ತಮಗಿಂತ ಮೇಲಿನ ಸ್ಥರದ ವ್ಯಕ್ತಿಯ ಸಂಗಡ ಇದ್ದೇವೆ ಎನ್ನುವ ಭಾವನೆಯನ್ನೇ ಹೊಂದುತ್ತಿರಲಿಲ್ಲ. 'ಅವರು ಕೇವಲ ಒಂದೇ ಹೆಜ್ಜೆ ಮುಂದಿರುತ್ತಿದ್ದರು' ಎನಿಸುತ್ತಿತ್ತು ಎನ್ನುತ್ತಾರೆ ಡಾ. ಹೆಡ್ಗೇವಾರ್ ಅವರಲ್ಲಿ ವಿದ್ಯಾರ್ಥಿಯಾಗಿ ಬಹುಸಮಯ ಕಳೆದಿದ್ದ ಶ್ರೀ ಬಾಲಾ ಸಾಹೇಬ್ ಜೀವರಸ್. ಅವರು ಎಲ್ಲ ಸ್ವಯಂಸೇವಕರ ಸಂಗಡ ಅತಿ ಹತ್ತಿರದಿಂದ ಬೆರೆತು ಸ್ಫೂರ್ತಿಯ ಸೆಲೆಯಾಗಿದ್ದರು. ಆದರೆ ನೀವು ಮುಂದಡಿ ಇಡುತ್ತಿದ್ದಂತೆಯೇ ನಿಮ್ಮ ನೆರಳಿನಂತೆ ನೀವು ಅವರಿಂದ ಸ್ವಲ್ಪ ದೂರದಲ್ಲಿಯೇ ಇರುತ್ತೀರಿ. ಆದರೆ ಕೇವಲ ಸ್ವಲ್ಪ ಮುಂದೆ ಮಾತ್ರ. ಈ ರೀತಿಯಾಗಿ ಅವರು ಜನಸಾಮಾನ್ಯರಿಗೆ ಹತ್ತಿರವಾಗಿದ್ದರು. ಸಾಮಾನ್ಯ ಜನರಿಂದ ಹಿಡಿದು ಮಹಾನ್ ಆಯೋಜಕರವರೆಗೂ ಡಾ. ಹೆಡ್ಗೇವಾರ್ ಅವರ ಆಲೋಚನೆಗಳನ್ನು ದೇಶದ ಮೂಲೆಮೂಲೆಗಳಿಗೆ ಕೊಂಡೊಯ್ದರು. ಇಂದು ನಾವು ಅವರನ್ನು ಮೆಚ್ಚಿಸಲು ಅವರನ್ನು ಆರಾಧಿಸಬೇಕಿಲ್ಲ, ಆದರೆ ಅವರ ಧ್ಯೇಯಗಳ ಸಂಗಡ ಜೀವಿಸಬೇಕು.

# ಗೋವಾದಲ್ಲಿನ ಚಟುವಟಿಕೆಗಳು ವಿಶ್ವಸಂಸ್ಥೆಯನ್ನು ಬಲಪಡಿಸುತ್ತವೆ, ದುರ್ಬಲಗೊಳಿಸುವುದಿಲ್ಲ*

ಮದ್ರಾಸ್, ೨೭ ಡಿಸೆಂಬರ್. ಗೋವಾದಲ್ಲಿನ 'ಭಾರತ ಸರ್ಕಾರ ಆ್ಯಕ್ಷನ್' ದೇಶದ ಪ್ರತಿಷ್ಠೆಯನ್ನು ಹೆಚ್ಚು ಮಾಡಿ, ದೇಶದ ಆತ್ಮವಿಶ್ವಾಸವನ್ನು ವೃದ್ಧಿಸುವ ಮೂಲಕ ಜನಸಾಮಾನ್ಯರಲ್ಲಿ ಆಶಾಭಾವನೆಯನ್ನು ಉಂಟು ಮಾಡುತ್ತದೆ. ಕೆಲ ವರ್ಗಗಳಲ್ಲಿ ವರದಿಯಾಗಿರುವಂತೆ ಅದು ವಿಶ್ವಸಂಸ್ಥೆಯನ್ನು ದುರ್ಬಲಗೊಳಿಸುವುದಿಲ್ಲ. ಬದಲಿಗೆ ಬಲವರ್ಧನೆಗೊಳಿಸುತ್ತದೆ ಎಂದು ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಇಂದು ಇಲ್ಲಿ ಹೇಳಿದರು.

"ವಿಶ್ವಸಂಸ್ಥೆಯು ಸಣ್ಣ ರಾಷ್ಟ್ರಗಳನ್ನು ಅವುಗಳ ಸ್ವಾತಂತ್ರ್ಯದಿಂದ ವಂಚಿತರನ್ನಾಗಿಸುವ ಆಯುಧವಾಗಿ ಬಳಕೆಯಾಗಕೂಡದು. ರಾಜಕೀಯ ಗುಲಾಮಗಿರಿ, ಆರ್ಥಿಕ ಶೋಷಣೆ, ಸಾಮಾಜಿಕ ತಾರತಮ್ಯ ಮತ್ತು ಅಧಿಕಾರ ದಾಹ ಇರುವವರೆಗೂ ಶಾಶ್ವತ ಶಾಂತಿ ಅಸಾಧ್ಯ. ವಿಶ್ವಸಂಸ್ಥೆಯ ಬಗ್ಗೆ ಪಾಶ್ಚಿಮಾತ್ಯ ಶಕ್ತಿಗಳಿಗೆ ಗೌರವ ಇದ್ದದ್ದೇ ಆದಲ್ಲಿ ಅವು ಈ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಅಂತ್ಯಹಾಡಲು ಪ್ರಭಾವ ಬೀರಬೇಕು" ಎಂದು ಶ್ರೀ ಉಪಾಧ್ಯಾಯ ತಿಳಿಸಿದರು.

**ಪ್ರಧಾನ ಮಂತ್ರಿಗಳ ಎಚ್ಚರಿಕೆಯ ನುಡಿಗಳು**

ಕಾಶ್ಮೀರ ಕುರಿತ ಪ್ರಧಾನಮಂತ್ರಿಗಳ ಮಾತುಗಳನ್ನು ಟೀಕಿಸುತ್ತ ಉಪಾಧ್ಯಾಯ ಅವರು ಈ ರೀತಿಯಾಗಿ ಹೇಳುತ್ತಾರೆ: ಈಗ ಗೋವಾ ವಿಷಯ ಇತ್ಯರ್ಥವಾಗಿದೆ. ಈಗ ನಮ್ಮ ಪ್ರಯತ್ನಗಳು ಉತ್ತರದಲ್ಲಿನ ಸವಾಲುಗಳನ್ನು ಎದುರಿಸುವತ್ತ ಹೊರಳಬೇಕು. ಕಾಶ್ಮೀರ ಕುರಿತ ಪ್ರಧಾನಮಂತ್ರಿಗಳ ಇತ್ತೀಚಿನ ಹೇಳಿಕೆಗಳು ಬೆದರಿಕೆಕಾರಿ. ಹಿಂಸೆಯನ್ನು ತ್ಯಜಿಸುವಂತೆ ಪಾಕಿಸ್ತಾನವನ್ನು ಆಗ್ರಹಿಸುವ ಬದಲು ಅವರು ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಹಾಗೂ ಹೊಂದಾಣಿಕೆಗಳನ್ನು ಮಾಡಿಕೊಳ್ಳುವಂತೆ ಮಾತನಾಡುತ್ತಿದ್ದಾರೆ. ಇದು ನಿಸ್ಸಂದೇಹವಾಗಿ ತಪ್ಪು ನಡೆ ಹಾಗೂ ಕಾಶ್ಮೀರ ವಿಚಾರವಾಗಿ ದೇಶದಲ್ಲಿ ಅನಿಶ್ಚಿತತೆಗಳನ್ನು ಉಂಟು ಮಾಡುತ್ತಿರುವ ನಿಷ್ಠೆ ಇಲ್ಲದ ಶಕ್ತಿಗಳನ್ನು ಉತ್ತೇಜಿಸುವ ಕ್ರಮ. ಭಾರತದ ಜನತೆಯು ಎಂದಿಗೂ ಇದನ್ನು ಸಹಿಸಿಕೊಳ್ಳುವುದಿಲ್ಲ ಹಾಗೂ ಈ ವಿಚಾರದಲ್ಲಿ ಶರಣಾಗುವುದಿಲ್ಲ ಎಂದು ಜನಸಂಘ ಎಚ್ಚರಿಸುತ್ತದೆ.

*** ಮೂಲ ಆಕರ: ಆರ್ಗನೈಸರ್, ೪.೦೬.೧೯೬೨**

# ಇದು ರಾಷ್ಟ್ರೀಯತೆಯೇ?*

ಪತ್ರಿಕಾ ತುಣುಕುಗಳನ್ನು ಗಮನಿಸುತ್ತಿದ್ದಾಗ, ೨೭ ಮಾರ್ಚ್, ೧೯೬೨ರ ನ್ಯಾಷನಲ್ ಹೆರಾಲ್ಡ್ ಸಂಚಿಕೆಯಲ್ಲಿನ ಡಾ. ರಾಮ ಮನೋಹರ್ ಲೋಹಿಯಾ ಅವರು ಅಲಹಾಬಾದ್‌ನಲ್ಲಿ ಭಾಷಣ ಮಾಡಿದ್ದ ವರದಿ ಕಂಡಿತು. ಭಾಷಣದಲ್ಲಿ ಡಾ. ಲೋಹಿಯಾ ಅವರು ಕೋಮು ಸಾಮರಸ್ಯದ ಅಗತ್ಯತೆಯನ್ನು ಒತ್ತಿ ಹೇಳಿದ್ದರು. ಮುಂದುವರಿದ ಡಾ. ಲೋಹಿಯಾ, ಜನಸಂಘವು ಕೋಮುವಾದಿ ಸಂಸ್ಥೆಯೇ ಅಥವಾ ಇಲ್ಲವೇ ಎನ್ನುವ ವಿವಾದದಲ್ಲಿ ಪ್ರವೇಶಿಸಲು ಇಚ್ಛಿಸಲಿಲ್ಲ. ಬದಲಿಗೆ ಜನಸಂಘವು ತನ್ನ ನೀತಿ ಮತ್ತು ಚಟುವಟಿಕೆಗಳ ಮೂಲಕ ಹಿಂದೂಗಳು ಮತ್ತು ಮುಸ್ಲಿಮರ ನಡುವಣ ಅಂತರ ಹೆಚ್ಚಿಸುತ್ತಿದೆ ಎಂಬ ಭಾವನೆ ವ್ಯಕ್ತಪಡಿಸಿದ್ದರು.

ಪ್ರಕಟವಾಗಿದ್ದ ವರದಿಯು ಈ ಅಂಶವನ್ನು ವಿಶದವಾಗಿ ವಿವರಿಸಿರಲಿಲ್ಲ. ಆದರೆ, ಜನಸಂಘ ಕುರಿತ ಈ ಆರೋಪಗಳಿಗೆ ಡಾ. ಲೋಹಿಯಾ ಆಧಾರಗಳನ್ನು ಕೇಳುಗರಿಗೆ ನೀಡಿದರೇ ಎನ್ನುವುದು ನನಗೆ ಅರಿಯದು. ಇಂತಹ ನಿರ್ದಿಷ್ಟ ಅಂಶಗಳ ಗೈರಿನ ಹಿನ್ನೆಲೆಯಲ್ಲಿ ಇಂತಹ ಟೀಕೆಗಳು ಅಪ್ರಸ್ತುತ ಹಾಗೂ ಡಾ. ಲೋಹಿಯಾರಂತಹ ನಾಯಕರಿಗೆ ಶೋಭೆ ತರುವುದಿಲ್ಲ. ಪಂಡಿತ್ ನೆಹರೂ ಹಾಗೂ ಇತರ ಕಾಮ್ರೇಡ್‌ಗಳ ಆಲೋಚನಾ ಲಹರಿಗಳನ್ನು ಗಿಳಿಗಳಂತೆ ಡಾ. ಲೋಹಿಯಾರಂತಹ ನಾಯಕರು ಪುನರುಚ್ಚರಿಸಬಾರದು ಎನ್ನುವ ಭಾವನೆ ನನ್ನದು.

ಇದುವರೆವಿಗೂ ಅವರು ಜನಸಂಘವನ್ನು ಹಿಂದಿಯನ್ನು ತಮ್ಮಂತೆ ಪ್ರಚಾರ ಮಾಡದ ಹಾಗೂ ಬ್ರಹ್ಮಪುತ್ರ ನದಿಯನ್ನು ಭಾರತ–ಚೀನಾ ನಡುವಣ ಗಡಿ ಎಂದು ನಿರ್ದಿಷ್ಟವಾಗಿ ಒತ್ತಿ ಹೇಳದ ಕಾರಣಗಳಿಂದಾಗಿ ಟೀಕಿಸುತ್ತಲೇ ಇದ್ದರು. ಆದರೆ ಈ ಬಾರಿ ಅವರು ಬಳಲಿದಂತೆ ಹಾಗೂ ತಪ್ಪು ಮಾಹಿತಿಗಳನ್ನು ತುತ್ತೂರಿಯಂತೆ ಉಚ್ಚರಿಸುತ್ತಲೇ ಇದ್ದಾರೆ. ಬಹುಶಃ ಈ ಭಾಷಣವು ಡಾ. ಲೋಹಿಯಾ ಅವರ ಮುಕ್ತ ಮನಸ್ಥಿತಿ ಹೊಂದಿಲ್ಲದ ಅವರ ಕೆಲವು ಶಿಷ್ಯವೃಂದವನ್ನು ಕುರಿತು ಮಾಡಿದ್ದಿರಬಹುದು. ಈ ಮಾತುಗಳನ್ನು ಒಪ್ಪದ ಶಿಷ್ಯವೃಂದ ಶ್ರೀ ನಾನಾ

---

* **ಮೂಲ ಆಕರ : ಆರ್ಗನೈಸರ್, ೩೦.೦೪.೧೯೬೨, ಪೊಲಿಟಿಕಲ್ ಡೈರಿ ಲೇಖನ.**

ದೇಶಮುಖ್ ಅವರ ಗಂಭೀರ ಹಾಗೂ ಕ್ರಿಯಾಶೀಲ ನಾಯಕತ್ವ ಹಾಗೂ ಅವರ ಆಲೋಚನೆಗಳನ್ನು ಮೆಚ್ಚಿ ಪತ್ರದಲ್ಲಿ ಪ್ರಕಟಿಸಿದ್ದರು.

**ಲೋಹಿಯಾರ ಸಲಹೆ**

ಎಲ್ಲಾ ಭಾರತೀಯ ಸಾಮಾನ್ಯ ಅನುವಂಶೀಯ ಪರಂಪರೆ ಹಾಗೂ ಸಾಮಾನ್ಯ ಇತಿಹಾಸವನ್ನು ಪ್ರತಿಯೊಬ್ಬರೂ ಸ್ವೀಕರಿಸಬೇಕು ಎಂದು ಡಾ. ಲೋಹಿಯಾ ಒತ್ತಿಹೇಳುತ್ತಲೇ ಇದ್ದಾರೆ. ಇದರ ಹೊರತಾಗಿಯೂ ಅವರು, ಕಳೆದ ನಾಲ್ಕು ದಶಕಗಳಿಂದ ಮುಂದುವರಿಯುತ್ತಿರುವ ಮುಸ್ಲಿಮರ ಸಮಸ್ಯೆಗಳು ಹಾಗೂ ಮುಸ್ಲಿಮರ ಕುರಿತು ತಮ್ಮ ತಪ್ಪು ಗ್ರಹಿಕೆಗಳಿಂದಾಗಿ ಬಹುಶಃ ಅವರು ಹೊರಬರಲು ಆಗುತ್ತಿಲ್ಲ ಎನ್ನಿಸುತ್ತದೆ.

ಅಖಂಡ ಭಾರತ ನಿರ್ಮಾಣ ಕುರಿತು ತಮ್ಮ ಭಾಷಣದಲ್ಲಿ ಡಾ. ಲೋಹಿಯಾ, ಭಾರತದಲ್ಲಿನ ಜನರು ಪಾಕಿಸ್ತಾನದಲ್ಲಿರುವ ಮುಸ್ಲಿಂ ಬಾಂಧವರನ್ನು ಆಕರ್ಷಿಸಬೇಕಾದಲ್ಲಿ, ಸಂವಿಧಾನದಲ್ಲಿ ತಿದ್ದುಪಡಿ ತಂದು ಭಾರತದ ರಾಷ್ಟ್ರಪತಿ ಅಥವಾ ಪ್ರಧಾನಮಂತ್ರಿಯ ಹುದ್ದೆಗಳಲ್ಲಿ ಒಂದನ್ನು ಕಡ್ಡಾಯವಾಗಿ ಮುಸ್ಲಿಮರಿಗೆ ಮೀಸಲಿಡಬೇಕು ಎಂದು ಪ್ರಸ್ತಾಪಿಸಿದ್ದಾರೆ.

ಈ ಪ್ರಸ್ತಾಪವು ಭಾರತ ಮತ್ತು ಭಾರತೀಯರ ಕೋಮು ಸಾಮರಸ್ಯ ಮತ್ತು ಐಕ್ಯತೆಗೆ ವಿರುದ್ಧ. ಅಖಂಡ ಭಾರತವು ಒಂದು ಸಾಂಸ್ಕೃತಿಕ ಪರಿಕಲ್ಪನೆ. ಮಿಗಿಲಾಗಿ, ಭಾರತೀಯರ ಹೃದಯಗಳನ್ನು ಒಗ್ಗೂಡಿಸುವ ಮೂಲಕ ಇದು ಸಾಧ್ಯವೇ ಹೊರತು ರಾಜಕೀಯ ತೇಪೆಗಳಿಂದ ಸಾಧ್ಯವಿಲ್ಲ. ಐಕ್ಯತೆಯು ಸವಮಾನತೆಯುಲ್ಲಿ ಹೊರಹೊಮ್ಮುತ್ತದೆ, ಯಾವುದೇ ಸಮಾಜವು ಐಕ್ಯತೆಗೆ ಪ್ರತಿಫಲವನ್ನು ಬಯಸದು. ಅಲ್ಲದೆ, ಏಕತೆಯು ಕೆಲವು ಕಾರಣಗಳಿಂದಾಗಿ ಕುಸಿದು ಬಿದ್ದರೆ, ಯಾವುದೇ ಬೆಲೆಯು ಆ ವರ್ಗದಲ್ಲಿ ಏಕತೆಯನ್ನು ಉಂಟು ಮಾಡಲಾರದು.

ಸಮುದಾಯಗಳನ್ನು ರಾಜಕೀಯ ಶಕ್ತಿಗಳನ್ನು ನೀಡುವುದರ ಮೂಲಕ ಗೆಲ್ಲುತ್ತೇವೆ ಎಂದು ನೀವು ಆಲೋಚಿಸಿದಾಕ್ಷಣವೇ ಅದು ವಿಭಜನೆಯ ಬೀಜಗಳನ್ನು ಬಿತ್ತಿದಂತೆ. ಕಳೆದ ನಲವತ್ತು ವರ್ಷಗಳ ಇತಿಹಾಸವೇ ಇದಕ್ಕೆ ಅಪರಿಮಿತ ಸಾಕ್ಷಿಗಳನ್ನು ಒದಗಿಸುತ್ತದೆ. ಈಗಾಗಲೇ ಮುಸ್ಲಿಮರನ್ನು, ಅವರು ದೇಶದ ಸಂಗಡ ಗುರುತಿಸಿಕೊಳ್ಳುವಂತೆ ಮಾಡಲು, ಓಲೈಸುವಲ್ಲಿ ಅನೇಕ ಆಮಿಷಗಳನ್ನು ಒಡ್ಡಲಾಗಿತ್ತಾದರೂ ಇದರಲ್ಲಿ ಯಶಸ್ವಿಯಾಗಿಲ್ಲ. ಕಾಂಗ್ರೆಸ್ ನಾಯಕರ ಉದ್ದೇಶ ಕೆಟ್ಟದ್ದಾಗಿರಲಿಲ್ಲ. ಅವರು ಬ್ರಿಟಿಷರ ಬಲೆಗೆ ಬಿದ್ದರು, ಹಿಂದೂಗಳ ವಿಚಾರ ಬಂದಾಗ ಅವರು ರಾಷ್ಟ್ರೀಯ ಸ್ವಾತಂತ್ರ್ಯದ ನೆಲೆಯಲ್ಲಿ ಮಾತನಾಡಿದರೆ, ಮುಸ್ಲಿಮರನ್ನು ಅನೇಕ ಷರತ್ತುಗಳು ಹಾಗೂ ಭರವಸೆಗಳ ಮೂಲಕ ಓಲೈಸಿದರು. ಇದು ಇತರರಿಗೆ

ತಾರತಮ್ಯ ಮಾಡದಿದ್ದರೂ ಮುಸ್ಲಿಮರಿಗೆ ತಾರತಮ್ಯ ಎಸಗಿದಂತೆ.

ಆದರೆ ಇದು ಎಲ್ಲರಿಗೂ ತಾರತಮ್ಯವೇ. ಇದು ಮುಸ್ಲಿಮರನ್ನು ಆಕರ್ಷಿಸುವಲ್ಲಿ ವಿಫಲವಾಗಿದೆ. ಅಷ್ಟಕ್ಕೂ ದೇಶಭಕ್ತ ಮತ್ತು ವ್ಯಾಪಾರಿಯ ನಡುವೆ ವ್ಯತ್ಯಾಸಗಳಿವೆ. ಕಾಂಗ್ರೆಸ್ ಎಂದಿಗೂ ಮುಸ್ಲಿಮರಲ್ಲಿ ದೇಶಭಕ್ತನನ್ನು ಗುರುತಿಸಲಿಲ್ಲ. ಬದಲಿಗೆ ರಾಜಕೀಯ ಶಕ್ತಿಗಾಗಿ ಚೌಕಾಶಿ ಮಾಡುವ ವ್ಯಾಪಾರಿಯನ್ನೇ ಕಾಣುತ್ತಿದೆ. ಮತ್ತೊಂದು ಬದಿಯಲ್ಲಿ ಜಿನ್ನಾ ರಾಷ್ಟ್ರೀಯತೆಯಲ್ಲಿ ಜಿನ್ನಾ ರಾಷ್ಟ್ರೀಯತೆಯ ಹೊಸ ಸಿದ್ಧಾಂತವನ್ನು ರೂಪಿಸಿದ್ದರು. ಎಷ್ಟೇ ಹುಚ್ಚಾಗಿ ಕಂಡರೂ ಅದು ಮುಸ್ಲಿಂ ಸಮುದಾಯದಲ್ಲಿ ಉತ್ಸಾಹ ತುಂಬಿತ್ತು ಮತ್ತು ಲೀಗ್‌ನ ಪಾಕಿಸ್ತಾನ ತತ್ವವನ್ನು ಹುರಿದುಂಬಿಸಿತು.

ಜಿನ್ನಾ ಮುಸ್ಲಿಮರಲ್ಲಿ ಪಾಂಥಿಕ ವ್ಯತ್ಯಾಸಗಳನ್ನು ಗುರುತಿಸಲಿಲ್ಲ. ಅವರ ಸ್ಥಾನದಲ್ಲಿ ಡಾ. ಲೋಹಿಯಾ ಇದ್ದಿದ್ದಲ್ಲಿ, ಬಹುಶಃ ಪಾಕಿಸ್ತಾನದ ಪ್ರಧಾನಮಂತ್ರಿ ಅಥವಾ ಅಧ್ಯಕ್ಷರಾಗಿ ಶಿಯಾ ಅಥವಾ ಸುನ್ನಿ ಇಬ್ಬರಲ್ಲಿ ಒಬ್ಬರನ್ನು ಕಡ್ಡಾಯವಾಗಿಸುತ್ತಿದ್ದರು. ಆದರೆ ಜಿನ್ನಾ ಈ ಸಂಬಂಧ ಕಾಲಹರಣ ಮಾಡಲಿಲ್ಲ. ಅಷ್ಟಲ್ಲದೆ, ಜಿನ್ನಾ ಯಾವ ತೆರನಾದ ಪಾಕಿಸ್ತಾನ ಬೇಕೆಂದಾಗಲಿ ಅಥವಾ ಪಾಕಿಸ್ತಾನದಲ್ಲಿ ವಿವಿಧ ಘಟಕಗಳ ನಡುವಿನ ಸಂಬಂಧ ಇರಬೇಕಾದ ಬಗ್ಗೆಯಾಗಲಿ ಜನರಿಗೆ ತಿಳಿಸಲಿಲ್ಲ. ಅವರು ತಾವು ಮುಸ್ಲಿಮರಾಗಿ ಅವರ ಸಂಗಡ ಚರ್ಚಿಸಿದರು ಮತ್ತು ಕಾಂಗ್ರೆಸ್ ಸಹ ಅವರೊಡನೆ ಮುಸ್ಲಿಮರಾಗಿಯೇ ಮಾತನಾಡಿತು.

ಜಿನ್ನಾ ಮುಸ್ಲಿಮರನ್ನು ದೇಶದ ಸ್ಥಾನಕ್ಕೆ ಮೇಲೆತ್ತಲು ಪ್ರಯತ್ನಿಸಿದರೆ, ಕಾಂಗ್ರೆಸ್‌ನ ವಿಧಾನ ಮುಸ್ಲಿಮರನ್ನು ಕೇವಲ ಅಲ್ಪಸಂಖ್ಯಾತರೆಂಬ ದೃಷ್ಟಿಯಿಂದಲೇ ನೋಡಿತು. ಈ ಮನೋಭಾವದಲ್ಲಿ ದರ್ಪದ ಗಾಳಿಯೂ, ಓಲೈಕೆಯೂ ಇತ್ತು. ವಾಸ್ತವವಾಗಿ ಅದು ತುಷ್ಟೀಕರಣದ ನೀತಿಯಾಗಿತ್ತು. ಅದರಲ್ಲಿ ನಿಜಕ್ಕೂ ಸಮಾನತೆ ಇರಲಿಲ್ಲ.

## ಇದು ರಾಷ್ಟ್ರೀಯತೆಯೇ?

ಇವತ್ತಿಗೂ ಸಾಮಾನ್ಯ ಬಗೆಯ ರಾಷ್ಟ್ರೀಯತೆಯು ಈ ರೀತಿಯಾಗಿಯೇ ಯೋಚಿಸುತ್ತದೆ. ರಾಷ್ಟ್ರೀಯ ಏಕತೆಯೆಂದರೆ ಕಳೆದ ನಲ್ವತ್ತು ವರ್ಷಗಳಲ್ಲಿ ಪಾಂಥಿಕತೆ ಮತ್ತು ಕೋಮುವಾಗಿ ರಾಜಕೀಯಕ್ಕೆ ಸಿಲುಕಿರುವ ಭಾರತೀಯರ ಅಡ್ಡಾದಿಡ್ಡಿ ಸಮಸ್ಯೆಗೆ ಒಂದಿಷ್ಟು ಪರಿಹಾರ ಎಂದಾಗಿದೆ.

ಡಾ. ಲೋಹಿಯಾ ದೇಶದ ಪ್ರಧಾನಮಂತ್ರಿ ಅಥವಾ ಅಧ್ಯಕ್ಷರಲ್ಲಿ ಒಂದು ಸ್ಥಾನವನ್ನು ಮುಸ್ಲಿಮರಿಗೆ ಮೀಸಲಿಡಬೇಕೆಂದು ಬಯಸುತ್ತಾರೆ. ಆದರೆ ಇತರ ಧರ್ಮಗಳ ಪಾಡೇನು? ಕ್ರೈಸ್ತರು, ಪಾರ್ಸಿಗಳು ಮತ್ತು ಯಹೂದಿಗಳು ಇದ್ದಾರೆ.

ಅಲ್ಲದೆ, ಸೀಮಿತ ಮತ್ತು ಸಂಕುಚಿತ ಅರ್ಥದಲ್ಲಿ ಹಿಂದೂ ಪದದ ಹಿಂದೂಗಳಲ್ಲಿ ಅನೇಕ ಪಂಥಗಳಿವೆ. ಅವರೆಲ್ಲಾ ಮೀಸಲಾತಿಗಳಿಗಾಗಿ ಬೇಡಿಕೆಗಳನ್ನು ಇರಿಸುತ್ತಾರೆಯೇ? ಇದು ಹಿಂದಿನ ಶತಶತಮಾನಗಳಿಂದ ಜತನದಿಂದ ರೂಪಿಸಿದ್ದ ರಾಷ್ಟ್ರೀಯತೆಯ ನೇಯ್ಗೆಯನ್ನು ಎಳೆ ಎಳೆಯಾಗಿ ನಾಶ ಮಾಡುತ್ತದೆ.

ಈ ಬಗ್ಗೆ ನಮಗೆ ಅರಿವಿಲ್ಲ. ಧಾರ್ಮಿಕ ಆಲೋಚನೆಗಳ ಪರಿಣಾಮವಾಗಿಯೇ ಕೆಲವು ವಿವಿಧ ದೊಡ್ಡ ಹುದ್ದೆಗಳಿಗೆ ಕಾಂಗ್ರೆಸ್ ನಾಮಕರಣಗಳ ಆಯ್ಕೆ ಎಂದು ಅನೇಕರು ನಿಸ್ಸಂದೇಹವಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಈ ಭಾವನೆ ಉಂಟು ಮಾಡುವುದರಲ್ಲಿ ಅವರು ನಿಸ್ಸೀಮರು.

ಹಿಂದೂ ರಾಷ್ಟ್ರಪತಿಯ ಆಯ್ಕೆಯನ್ನು ಮುಸ್ಲಿಂ ಉಪ ರಾಷ್ಟ್ರಪತಿ, ರಾಜ್ಯಸಭೆಗೆ ಕ್ರೈಸ್ತ ಉಪಾಧ್ಯಕ್ಷ ಮತ್ತು ಲೋಕಸಭೆಗೆ ಸಿಖ್ ಸ್ಪೀಕರ್ ಆಯ್ಕೆಗಳ ಮೂಲಕ ಸರಿದೂಗಿಸಬೇಕು. ಈ ವೃತ್ತವನ್ನು, ಅದು ಇದ್ದಂತೆಯೇ ಪೂರ್ಣಗೊಳಿಸಲು ವಿರೋಧ ಪಕ್ಷಗಳಿಗೆ ಶ್ರೀ ಸ್ಪೀಕರ್ ಸ್ಥಾನಗಳನ್ನು ನಾಮಕರಣ ಮಾಡಬೇಕು. ಆದರೆ ಇಷ್ಟೆಲ್ಲಾ ಮಾಡಿದರೂ ಈ ವೃತ್ತ ಪೂರ್ಣವಾಗುವುದೇ?

ಜನಸಂಘವು ಈ ಕಲ್ಪನೆ (ಐಡಿಯಾ)ಯನ್ನು ವಿರೋಧಿಸುತ್ತದೆ. ಹುದ್ದೆಗಳು ಅರ್ಹತೆಗಳನ್ನು ಆಧರಿಸಿ ಭರ್ತಿಯಾಗಬೇಕೇ ಹೊರತು ಧರ್ಮಗಳನ್ನು ಆಧರಿಸಿ ಅಲ್ಲ. ಈ ವಿಚಾರದಲ್ಲಿ ಧರ್ಮಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಪಾಕಿಸ್ತಾನವನ್ನು ಅನುಸರಿಸಿದಂತೆ. ಪಾಕಿಸ್ತಾನ ಹೊಂದಿರುವ ಸಂವಿಧಾನವು, ಮುಸ್ಲಿಮರು ಮಾತ್ರವೇ ದೇಶದ ಮುಖ್ಯಸ್ಥರಾಗಬಹುದು ಎನ್ನುತ್ತದೆ. ಮುಸ್ಲಿಮೇತರರು

ಅಲ್ಲಿ ದ್ವಿತೀಯ ದರ್ಜೆಯ ನಾಗರೀಕರು. ನಮ್ಮ ಸಂವಿಧಾನದ ಪ್ರಕಾರ ಭಾರತದಲ್ಲಿ ಹುದ್ದೆಗಳ ನೇಮಕ ವಿಚಾರವಾಗಿ ಯಾವುದೇ ರಿಲಿಜನ್ ಸಂಬಂಧಿ ನಿರ್ಬಂಧಗಳಿಲ್ಲ. ರಾಷ್ಟ್ರೀಯ ಭಾವೈಕಯತೆಯ ಕಾರಣಗಳಿಂದಾಗಿ ನಮ್ಮಲ್ಲಿ ಇದೇ ವ್ಯವಸ್ಥೆ ಮುಂದುವರಿಯಲಿ ಬಿಡಿ. ಉಪ ರಾಷ್ಟ್ರಪತಿ ಹುದ್ದೆಗೆ ಜನಸಂಘವು ಶ್ರಿ ಜಾಕಿರ್ ಹುಸೇನ್ ಅಥವಾ ಲೋಕಸಭೆಯ ಸ್ಪೀಕರ್ ಹುದ್ದೆಗೆ ಶ್ರೀ ಹಕೀಂ ಸಿಂಗ್ ಅವರನ್ನು ಬೆಂಬಲಿಸುತ್ತದೆ. ಈ ನಾಯಕರನ್ನು ಅವರ ರಿಲಿಜನ್ನಿನ ಕಾರಣಗಳಿಗಾಗಿಯಲ್ಲದೆ ಅವರ ಅರ್ಹತೆಯ ಆಧಾರದಿಂದ ಜನಸಂಘವು ಬೆಂಬಲಿಸುತ್ತದೆ. ಆದರೆ ಕಾಂಗ್ರೆಸ್ ವಿವಿಧ ಹುದ್ದೆಗಳಿಗೆ ಧರ್ಮಾಧಾರಿತ ಮೀಸಲುಗಳನ್ನು ಬಯಸುವ ಮೂಲಕ ಕೋಮುವಾದವನ್ನು ಸಾಂಸ್ಥೀಕರಿಸುತ್ತಿದೆ. ಇದು ಖಂಡಿತವಾಗಿಯೂ ಸರಿಯಲ್ಲ. ಈ ತೆರನಾದ ನಡೆಗಳನ್ನು ಜನಸಂಘವು ಖಂಡಿತವಾಗಿ ವಿರೋಧಿಸುತ್ತದೆ.

**ಪಟ್ಟಭದ್ರ ಹಿತಾಸಕ್ತಿಗಳು ವಾತಾವರಣವನ್ನು ಮಲಿನಗೊಳಿಸುತ್ತಿವೆ**

ಜನಸಂಘವು ಶುದ್ಧ ಹಾಗೂ ಸರಳ ರಾಷ್ಟ್ರೀಯತೆಯನ್ನು ಬಯಸುತ್ತದೆ. ಜನಸಂಘದ ಈ ನೇರ ಹಾಗೂ ಸ್ಪಷ್ಟ ನಿಲುವಿನಿಂದ ಮುಸ್ಲಿಂ ಆಡಳಿತ ಕುರಿತು ಒಲವನ್ನು ಬೆಳೆಸಿಕೊಂಡಿರುವ ಕೆಲವು ವ್ಯಕ್ತಿಗಳು ಕೂಗನ್ನೆಬ್ಬಿಸುತ್ತಿದ್ದಾರೆ. ಇಂತಹ ವ್ಯಕ್ತಿಗಳೇ ಜನಸಂಘಕ್ಕೆ ಮುಸ್ಲಿಂ ವಿರೋಧಿ ಎನ್ನುವ ಬಣ್ಣ ಬಳಿಯುತ್ತಿವೆ. ಇದು ಜನಸಂಘವು ಮುಸ್ಲಿಂ ವಿರೋಧಿ ಭಾವನೆ ಹೊಂದಿದೆ ಎನ್ನುವುದಕ್ಕಾಗಿ ಅಲ್ಲ, ಬದಲಿಗೆ ಇದು ಅಂತಹ ರಾಜಕಾರಣಗಳಲ್ಲಿ ಹೆದರಿಕೆಗಳನ್ನು ಹುಟ್ಟಿಸುತ್ತಿರುವುದರಿಂದ. ಇರಲಿ ಬಿಡಿ, ಈ ತಪ್ಪು ಎಚ್ಚರಿಕಾ ಗಂಟೆಯ ಬಗ್ಗೆ ಹೆದರುವುದು ಬೇಡ. ಜನಸಂಘವು ಅಂತರವನ್ನು ಹೆಚ್ಚಿಸುತ್ತಿಲ್ಲ. ಬದಲಿಗೆ ಅಂತರವೇ ಉಳಿಯಬಾರದು ಎಂಬ ಕಾರಣಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಡಾ. ಲೋಹಿಯಾ ಅವರ ಹಿಂದೂ ಪ್ರೇಮವನ್ನು ಇಂಗ್ಲಿಷ್ ವ್ಯಾಮೋಹದ ಪಟ್ಟಭದ್ರ ಹಿತಾಸಕ್ತಿಗಳು ಮೆಚ್ಚುವುದಿಲ್ಲ. ಅಲ್ಲದೆ, ಅವರು ಇಡೀ ವಿಷಯವನ್ನೇ ಉತ್ತರ ಮತ್ತು ದಕ್ಷಿಣದ ನಡುವಿನ ವಿಷಯವನ್ನಾಗಿ ತಿರುಚಲು ಯತ್ನಿಸುತ್ತಾರೆ. ಈ ನಿಟ್ಟಿನಲ್ಲಿ ಡಾ. ಲೋಹಿಯಾ ಅವರ ನೀತಿಗಳು ಉತ್ತರ ಮತ್ತು ದಕ್ಷಿಣದ ನಡುವಿನ ಅಂತರವನ್ನು ಹೆಚ್ಚಿಸುತ್ತಿವೆ ಎನ್ನಬಹುದಲ್ಲವೇ?

ರಾಜಕೀಯದಲ್ಲಿ ಎಷ್ಟೋ ವೇಳೆ ನಿರ್ಧಾರಗಳನ್ನು ವಾಸ್ತವಿಕ ನೆಲೆಗಟ್ಟಿನ ಆಧಾರದಲ್ಲಿ ತೆಗೆದುಕೊಳ್ಳಲಾಗುತ್ತದೆ. ಆಧರೂ ಅಂಥ ನಿರ್ಣಯಗಳಿಗೆ ಬರಲೇಬೇಕಾದ ತಥ್ಯಗಳಿರದಿದ್ದಲ್ಲಿ ಹೊಗಳಿಕಾಗಿಯೋ ಇಲ್ಲವೇ ತೆಗಳಲಿಕ್ಕಾಗಿಯೋ ನಿರ್ಧಾರಗಳನ್ನು ಕಲ್ಪಿಸುವ ಮತ್ತು ರೂಪಿಸುವ ವ್ಯವಸ್ಥೆಯು ಇದೆ. ಆದರೆ ಕೆಲವು ನಿರ್ದಿಷ್ಟ ನಿಯಮಗಳನ್ನು ಕಾಪಾಡಿಕೊಳ್ಳಬೇಕಾದ ಅಗತ್ಯವಿದೆ. ಕೋಮುವಾದಗಳಿಗೆ

ಅಂತ್ಯ ಹಾಡಬೇಕಾದಲ್ಲಿ ಕೋಮುವಾದದ ಸಾಮಾನ್ಯೀಕರಣವನ್ನು ತಡೆಗಟ್ಟಬೇಕಾಗಿದೆ.

ಸೋಷಿಯಲಿಸ್ಟ್ ಪಕ್ಷಕ್ಕೆ ಸಂಬಂಧಿಸಿದಂತೆ ಉದಾಹರಣೆಯೊಂದನ್ನು ತೆಗೆದುಕೊಳ್ಳುತ್ತೇನೆ. ಶ್ರೀ ತಾತಾರಿ ಅವರು ಸೋಷಿಯಲಿಸ್ಟ್ ಪಕ್ಷದ ಟಿಕೆಟ್‌ನಿಂದ ಉತ್ತರ ಪ್ರದೇಶ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು. ಈ ಬಾರಿ ಅವರಿಗೆ ಟಿಕೆಟ್ ನೀಡಲಿಲ್ಲ. ಅವರು ಮುಸ್ಲಿಮರು ಎಂಬ ಕಾರಣಕ್ಕಾಗಿ ಟಿಕೆಟ್ ನಿರಾಕರಿಸಲಾಯಿತು ಎಂಬ ನಿರ್ಣಯಕ್ಕೆ ನಾವು ಬರಹುದೇ? ಅಥವಾ ಆರು ವರ್ಷಗಳ ಹಿಂದೆ ಈ ಸ್ಥಾನಕ್ಕೆ ಮುಸ್ಲಿಮರನ್ನು ಪರಿಗಣಿಸಿದ್ದ ಸೋಷಿಯಲಿಸ್ಟ್ ಪಕ್ಷವು ತನ್ನ ನೀತಿಯನ್ನು ಬದಲಿಸಿಕೊಂಡಿತು ತಿಳಿಯಬಹುದೇ? ಅಂಥ ಯಾವುದೇ ನಿರ್ಧಾರಗಳು ಸಾಧುವಲ್ಲ ಎಂದು ನಾನು ಯೋಚಿಸುತ್ತೇನೆ.

ನಾವು ಕೋಮುವಾದಕ್ಕೆ ಅಂತ್ಯ ಹಾಡುವುದೇ ಆದರೆ, ರಾಜಕಾರಣಿಗಳು ಮುಸ್ಲಿಮರು, ಕ್ರೈಸ್ತರು, ಪಾರ್ಸಿಗಳು, ಜೈನರು, ಸಿಖ್ಖರು, ಆರ್ಯ ಸಮಾಜದವರು ಮತ್ತು ಲಿಂಗಾಯಿತರ ಬಗ್ಗೆ ಮಾತನಾಡುವುದನ್ನು ನಿಲ್ಲಿಸಲಿ. ಈ ಹೊಣೆ ವಿವಿಧ ರಿಲಿಜನ್ನಿನ ಪಂಥಗಳ ಮುಖ್ಯಸ್ಥರಿಗೆ ಸೀಮಿತವಾಗಿರಲಿ. ಕ್ಲೆರ್ಜಿ, ಗ್ರಂಥಿ ಮತ್ತು ಮೌಲ್ವಿಗಳು ರಾಜಕೀಯ ರಂಗ ಪ್ರವೇಶಿಸುವುದನ್ನು ನಾವು ಬಯಸುವುದಿಲ್ಲವಾದರೆ, ನಾವೂ ಅವರ ಪವಿತ್ರ ರಂಗದಲ್ಲಿ ಮೂಗು ತೋರಿಸುವುದನ್ನು ನಿಲ್ಲಿಸೋಣ.

# ಸರ್ಕಾರದ ಆರ್ಥಿಕ ನೀತಿಯ ಸ್ವಯಂ–ಸೋಲು*

ಕಲ್ಕತ್ತಾ, ೩೦ ಏಪ್ರಿಲ್. ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಯಾದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರು, ನೂತನ ಆಯವ್ಯಯದಲ್ಲಿ ಅಡಕವಾಗಿರುವ ತೆರಿಗೆ ಪ್ರಸ್ತಾಪವನ್ನು ಬಲವಾಗಿ ಖಂಡಿಸಿ, ತೆರಿಗೆ ಪ್ರಸ್ತಾಪವು ಸರ್ಕಾರದ ಆರ್ಥಿಕತೆಯ ತೀವ್ರ ದುಷ್ಪರಿಣಾಮ ಬೀರುತ್ತದೆ ಎಂದು ತಿಳಿಸಿದರು.

ಹಿಂದೂಸ್ತಾನ್ ಕ್ಲಬ್ ಶ್ರೀ ಉಪಾಧ್ಯಾಯ ಅವರನ್ನು ಸನ್ಮಾನಿಸಲು ಏರ್ಪಡಿಸಿದ್ದ ಸಮಾರಂಭದಲ್ಲಿ, ಚಹಾ ಕೂಟದಲ್ಲಿ ನೆರೆದಿದ್ದ ಅಸಂಖ್ಯಾತ ಅತಿಥಿಗಳನ್ನು ಉದ್ದೇಶಿಸಿ ಉಪಾಧ್ಯಾಯ ಅವರು ಮಾತನಾಡುತ್ತಿದ್ದರು. ಖ್ಯಾತ ಉದ್ಯಮಿ ಶ್ರೀ ಎಸ್.ಎಸ್.ಕೊಥಾರಿ ಸಮಾರಂಭವನ್ನು ಆಯೋಜಿಸಿದ್ದರು.

ಡಾ. ಆರ್.ಸಿ. ಮಜುಂದಾರ್, ಆಚಾರ್ಯ ಡಿ.ಪಿ.ಘೋಷ್, ಶ್ರೀ ಎಚ್.ಎಲ್. ಸರ್ಕಾರ್ ಮತ್ತು ಶ್ರೀ ಎಚ್.ಆರ್. ಶುಕ್ಲಾ ಸೇರಿದಂತೆ ಅನೇಕ ಪ್ರಮುಖರು ನೆರೆದಿದ್ದರು.

ಶ್ರೀ ಉಪಾಧ್ಯಾಯ ಅವರು ಸರ್ಕಾರದ ಆರ್ಥಿಕ ನೀತಿಗಳನ್ನು ಸರ್ಕಾರದ ಸ್ವಯಂಕೃತ ಸೋಲು ಎಂದೇ ಬಣ್ಣಿಸಿದರು. ಶ್ರೀ ಉಪಾಧ್ಯಾಯ ಅವರು, ಕೇಂದ್ರ ಸರ್ಕಾರದ ನೌಕರರ ಸಂಬಳ ಹೆಚ್ಚಿಸುವ ಪ್ರಸ್ತಾಪವು, ಮತ್ತಷ್ಟೂ ಹೆಚ್ಚು ಸಂಬಳ ಬೇಕು ಎಂಬ ಆಶಯವನ್ನು ಹುಟ್ಟು ಹಾಕುವ, ಬದುಕನ್ನು ದುಬಾರಿಯಾಗಿರುವ ಮತ್ತು ಜನರ ಮೇಲೆ ಮತ್ತಷ್ಟು ತೆರಿಗೆಯನ್ನು ಹೇರುವ ಕ್ರಮ ಎಂದು ಬಣ್ಣಿಸಿದರು.

ಕಾಂಗ್ರೆಸ್ಸಿನಿಂದ ಅತೃಪ್ತಿಗೆ ಒಳಗಾಗಿರುವ ಜನತೆ ರಾಷ್ಟ್ರದಾದ್ಯಂತ ಪರ್ಯಾಯ ಪಕ್ಷವೊಂದಕ್ಕಾಗಿ ಅನ್ವೇಷಣೆಯನ್ನು ನಡೆಸುತ್ತಿದ್ದು, ಭಾರತೀಯ ಜನಸಂಘವು ಆ ಸ್ಥಾನವನ್ನು ತುಂಬಲಿದೆ. ತನ್ನ ಪರಿಚಿತವಲ್ಲದ ಬೇರುಗಳ ಮೂಲಕ ಜನರ ಭಾವನೆ ಮತ್ತು ಸಂಪ್ರದಾಯಗಳಿಂದ ವಿಮುಖವಾಗಿರುವ ಕಮ್ಯುನಿಸ್ಟ್ ಪಕ್ಷವನ್ನು ಜನರು ಒಪ್ಪಿಕೊಳ್ಳುವುದಿಲ್ಲ ಎಂದು ತಿಳಿಸಿದರು.

---

* **ಮೂಲ ಆಕರ : ಆರ್ಗನೈಸರ್, ೭.೫.೧೯೬೨**

ಈ ಭೇಟಿಯ ಸಂದರ್ಭ ಶ್ರೀ ಉಪಾಧ್ಯಾಯ ಅವರು ಅನೇಕ ಸಂಘ ಸಂಸ್ಥೆಗಳ ಸಭೆಗಳಲ್ಲಿ ಅಸಂಖ್ಯಾತ ಮಂದಿಯನ್ನು ಉದ್ದೇಶಿಸಿ ಮಾತನಾಡಿದರು. ಇವುಗಳಲ್ಲಿ ಮಂಡಲ ಕಾರ್ಯದರ್ಶಿಗಳು, ಕಳೆದ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ ಭಾರತೀಯ ಜನಸಂಘದ ಅಭ್ಯರ್ಥಿಗಳು ಮತ್ತು ಜನಸಂಘದ ಪ್ರಮುಖ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಮುಸ್ಲಿಮರು ಮತ್ತು ಮುಸ್ಲಿಮೇತರರ ಆಧಾರದಲ್ಲಿ ಜಿನ್ನಾ ವಿಭಜನೆ ಬಯಸಿದ್ದರು*

ಕಾಶ್ಮೀರದ ಸೆಕ್ಯೂರಿಟಿ ಕೌನ್ಸಿಲ್‌ನಲ್ಲಿ ಕಾಶ್ಮೀರ ವಿಷಯ ಕುರಿತು ಶ್ರೀ ಮೊಹಮ್ಮದ್ ಜಫ್ರುಲ್ಲ ಮಾಡಿದ ಭಾಷಣಗಳು ಜಾಗತಿಕ ಶಕ್ತಿಗಳಿಗೆ ವಾಸ್ತವಾಂಶವನ್ನು ಕುರಿತು ಅಲ್ಪ ಮಾಹಿತಿಯನ್ನು ನೀಡಬಹುದು.

ಉದ್ದುದ್ದ ಭಾಷಣ ಪೂರಾ ಟೀಕೆಗಳು ಮತ್ತು ಬೆದರಿಕೆಗಳಿಂದ ಕೂಡಿದ್ದು, ಜಾಗತಿಕ ನ್ಯಾಯಾಲಯದ ನ್ಯಾಯಾಧೀಶ ಗೌರವಕ್ಕೆ ಪಾತ್ರವಾಗಿದ್ದ ಶ್ರೇಷ್ಠ ವ್ಯಕ್ತಿತ್ವಕ್ಕೆ ಅಲ್ಪ ಗೌರವ ಸಲ್ಲಿಸುವಂತಿತ್ತು. ಅದು ಬಹುಶಃ ಭಾವನೆಗಳ ಉದ್ದೇಶಪೂರ್ವಕ ಪ್ರದರ್ಶನ ಎನ್ನಬಹುದು. ಏಕೆಂದರೆ, ಕೇವಲ ಕಾರಣ ಮತ್ತು ವಾದಗಳ ಆಧಾರದಲ್ಲಿ ಕಾಶ್ಮೀರ ಕುರಿತ ಪಾಕಿಸ್ತಾನದ ಪ್ರಕರಣದಲ್ಲಿ ಮನವಿ ಮಾಡಿಕೊಳ್ಳಲಾಗದು. ಈ ಮುನ್ನ ಪಾಕಿಸ್ತಾನ ಮಂಡಿಸಿದ್ದ ಏಕೈಕ ಮನವಿಯೆಂದರೆ, ಕಾಶ್ಮೀರದಲ್ಲಿ ಬಹುಸಂಖ್ಯಾತರು ಮುಸ್ಲೀಮರಾಗಿರುವ ಕಾರಣ ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಬೇಕು ಎಂಬುದಾಗಿತ್ತು. ಇದು ಭಾರತವು ಮುಸ್ಲಿಂ ಮತ್ತು ಮುಸ್ಲಿಮೇತರರು ಎನ್ನುವ ಆಧಾರದಲ್ಲಿ ವಿಭಜನೆಯಾಗಿದೆ ಹಾಗೂ ಭಾರತ ಒಕ್ಕೂಟದಲ್ಲಿ ಮುಸ್ಲೀಮರೇ ಇಲ್ಲ ಎನ್ನುವ ತಪ್ಪು ಕಲ್ಪನೆಯನ್ನು ತಂದೊಡ್ಡುತ್ತದೆ. ಅದು ಆದಾದ್ದೇ ಆದಲ್ಲಿ, ಭಾರತದಲ್ಲಿ ಒಬ್ಬೇ ಒಬ್ಬ ಮುಸ್ಲಿಮರೂ ಪಾಕಿಸ್ತಾನದಲ್ಲಿ ಯಾರೊಬ್ಬ ಹಿಂದೂಗಳೂ ಇರುತ್ತಿರಲಿಲ್ಲ. ಜಿನ್ನಾ ವಿಭಜನೆಯನ್ನು ಈ ಆಧಾರದಲ್ಲಿ ಬಯಸಿದ್ದರು. ಅವರು ಪಾಕಿಸ್ತಾನವನ್ನು ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾಗಿರಬಹುದು. ಆದರೆ ಪಾಕಿಸ್ತಾನದ ಕಲ್ಪನೆಯ ಆಧಾರದಲ್ಲಿ ಅದನ್ನು ಪಡೆದುಕೊಂಡಿಲ್ಲ. ಈಗ ಪಾಕಿಸ್ತಾನದ ನಿರ್ಧಾರವು. ಕಾಶ್ಮೀರವನ್ನು ಧರ್ಮದ ಆಧಾರದ ಮೇಲೆ ಕೇಳುವುದರಿಂದ ಬದಲಾಗಿ ಕಾಶ್ಮೀರ ಯಾರ ಪಾಲಾಗಬೇಕು ಎಂಬುದನ್ನು ಸ್ವತಃ ಅಲ್ಲಿನ ಜನತೆಯ ನಿರ್ಧಾರಕ್ಕೆ ಬಿಡಬೇಕು ಎನ್ನುವುದರತ್ತ ಹೊರಳಿದೆ.

ಆದ್ದರಿಂದ, ಸಾಮರ್ಥ್ಯ ಮತ್ತು ಅಗತ್ಯತೆ ಮೊದಲಾದವುಗಳ ಬಗ್ಗೆ ಆಲೋಚಿಸದೆ ಪಾಕಿಸ್ತಾನ ಇಂತಹ ನಿರ್ಧಾರವನ್ನು ತೆಗೆದುಕೊಳ್ಳುವುದರ ಹಿಂದೆ

---

* ಮೂಲ ಆಕರ : ಆರ್ಗನೈಸರ್ ೧೪.೦೫.೧೯೬೨

ನಿಸ್ಸಂದೇಹವಾಗಿಯೂ ಯಾವುದೇ ಸಮರ್ಥನೀಯ ಅಂಶಗಳಿಲ್ಲ. ಭಾರತದ ಜನತೆಯ ನಡುವೆ ಎಂತಹ ಸಂಬಂಧ ಉಳಿದುಕೊಳ್ಳಲಿದೆ ಹಾಗೂ ತನ್ನ ಸಾರ್ವಭೌಮತ್ವದ ವಿಚಾರವಾಗಿ ಭಾರತ ಯಾವ ನಿರ್ದಾರಗಳನ್ನು ತೆಗೆದುಕೊಳ್ಳಲಿದೆ ಎನ್ನುವುದು ಮುಖ್ಯ. ಯಾವುದೇ ಶಕ್ತಿಗಳಿಂದ ಅತಿಕ್ರಮಣ ಅಥವಾ ಮಧ್ಯಪ್ರವೇಶವನ್ನು ಸಹಿಸಲಾಗದು.

ಪಾಕಿಸ್ತಾನವು ಕಾಶ್ಮೀರವನ್ನು ಕುರಿತ ತನ್ನ ಹಿಂಸಾಧೋರಣೆಯನ್ನು ಆ ಆಧಾರದ ಮೇಲೆ ಸಮರ್ಥಿಸಿಕೊಳ್ಳಲಾಗದು. ಪಾಕಿಸ್ತಾನವು ಯಾವುದೇ ಇಂಪ್ರೆಷನ್ ಅನ್ನು ರೂಪಿಸುವುದರಲ್ಲಿ ವಿಫಲವಾಗಿರಬಹುದು. ಆದರೆ ಘಟನೆಗಳು, ನಡಾವಳಿಗಳು ಮತ್ತು ಕಾಶ್ಮೀರ ಕುರಿತ ಚರ್ಚೆಗಳಿಂದಾಗಿ ಜಾಗತಿಕ ಶಕ್ತಿಗಳು ಮತ್ತು ಭಾರತದ ಜನತೆ ಈ ಬಗೆಗೆ ಮತ್ತೊಮ್ಮೆ ಆಲೋಚಿಸಬೇಕಾದ ಅಗತ್ಯ ಇದೆ.

ಪಾಕಿಸ್ತಾನವು ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳಿಂದ ನಿರಂತರ ಸಹಕಾರ ಮತ್ತು ಕರುಣೆಯನ್ನು ಗಳಿಸಿಕೊಳ್ಳುತ್ತಿದ್ದು, ಇವೇ ಅದರ ಪಾಲಿಗೆ ಪ್ರಮುಖ ಅಂಶವಾಗುತ್ತಿದೆ. ಆದರೆ ಈ ಬಲವೇ ಪಾಕಿಸ್ತಾನಕ್ಕೆ ನೆರವಾಗಲಾರದು, ಸೋವಿಯತ್ ರಷ್ಯಾ ಭಾರತದ ಪರ ಒಲವನ್ನೇ ಹೊಂದಿದೆ. ಕಳೆದ ಬಾರಿಯ ರಷ್ಯಾದ ನಿರಾಕರಣೆಯ ಕಾರಣದಿಂದಾಗಿ ಕಾಶ್ಮೀರದಲ್ಲಿ ವಿಶ್ವಸಂಸ್ಥೆಯ ಭದ್ರತಾಪಡೆಯನ್ನು ಇರಿಸುವ ಪಾಕಿಸ್ತಾನದ ಪಿತೂರಿ ವಿಫಲವಾಗಿತ್ತು. ಈ ಬಾರಿಯೂ ಸೋವಿಯತ್ ನಿಯೋಗ ಒಕ್ಕೊರಲಿನಿಂದ ಭಾರತದ ನಡೆಯನ್ನು ಬೆಂಬಲಿಸಿತ್ತು. ಪಾಕಿಸ್ತಾನ ಪಾಶ್ಚಿಮಾತ್ಯ ರಾಷ್ಟ್ರಗಳ ಮಿಲಿಟರಿ ಮಿತ್ರನಾಗಿದ್ದು, ಸಹಜವಾಗಿಯೇ ಆ ರಾಷ್ಟ್ರಗಳಿಂದ ಕನಿಕರವನ್ನು ಗಳಿಸಿಕೊಳ್ಳುತ್ತಿದೆ. ಆದರೆ, ಎಷ್ಟೆಲ್ಲಾ ಅರ್ಹತೆಗಳಿದ್ದರೂ ಭಾರತಕ್ಕೆ ಅಧಿಕಾರಗಳಿಂದ ಪಡೆಯಬಹುದಾದ ಸಹಕಾರಗಳು ಈ ರಾಷ್ಟ್ರಗಳಿಂದ ಸಿಗುತ್ತಿಲ್ಲ. ವಿಶ್ವಸಂಸ್ಥೆಯಲ್ಲಿ ಸದಾ ಭಾರತವನ್ನು ಪ್ರತಿನಿಧಿಸುತ್ತಿರುವ ಶ್ರೀ ವೈ.ಕೆ.ಕೃಷ್ಣ ಮೆನನ್ ವಿರುದ್ಧ ಆ ರಾಷ್ಟ್ರಗಳು ಹೊಂದಿರುವ ವೈಯಕ್ತಿಕ ಪೂರ್ವಾಗ್ರಹ ಪೀಡಿತ ಭಾವನೆಗಳಿಂದಾಗಿ ವಿಶ್ವಸಂಸ್ಥೆಯಲ್ಲಿನ ಭಾರತದ ಹೋರಾಟ ಪಾಕಿಸ್ತಾನದ ಕುತಂತ್ರದಿಂದ ಮೆನನ್ ಸತತವಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಈ ರೀತಿಯಾಗಿ ಕಾಶ್ಮೀರವನ್ನು ಎರಡು ಪ್ರಮುಖ ಶಕ್ತಿ ರಾಷ್ಟ್ರಗಳ ನಡುವಿನ ಶೀತಲ ಸಮರಕ್ಕೆ ಅನಾವಶ್ಯಕವಾಗಿ ಎಳೆದು ತರಲಾಗುತ್ತಿದೆ.

ಆದರೂ ಕಾಶ್ಮೀರ ವಿಚಾರ ಕುರಿತ ಇಂತಹ ನೀತಿ–ನಡೆಗಳಿಂದ ಭಾರತದ ಜನತೆಯ ಕನಿಕರವನ್ನು ಮಾತ್ರವೇ ಕಳೆದುಕೊಳ್ಳಬಹುದು ಎಂದು ಬಹುಶಃ ಪಾಶ್ಚಿಮಾತ್ಯ ಪ್ರಜಾತಾಂತ್ರಿಕ ಶಕ್ತಿಗಳು ಮನವರಿಕೆ ಮಾಡಿಕೊಂಡಂತಿದೆ.

ರಷ್ಯಾದ ಉದ್ದೇಶಗಳೇನೇ ಇರಲಿ, ರಷ್ಯಾ ಭಾರತಕ್ಕೆ ನೀಡುತ್ತಿರುವ ಬೆಂಬಲವು ದೇಶದಲ್ಲಿರುವ ಕಮ್ಯುನಿಸ್ಟರಿಂದ ದುರ್ಬಳಕೆಗೆ ಒಳಗಾಗಬಹುದು. ಅಲ್ಲದೆ ಇಡೀ

ವಿಶ್ವದಲ್ಲಿ ಭಾರತಕ್ಕೆ ರಷ್ಯಾ ಮಾತ್ರವೇ ಗೆಳೆಯ ಎಂಬ ಭಾವನೆಯನ್ನು ದೇಶದಲ್ಲಿನ ಜನಸಾಮಾನ್ಯರಲ್ಲಿ ಮೂಡಿಸಬಹುದು.

ಬಹುಶಃ ಈ ಕಾರಣದಿಂದಾಗಿಯೇ ಪಾಶ್ಚಿಮಾತ್ಯ ಶಕ್ತಿಗಳು ಭದ್ರತಾ ಸಮಿತಿಯಲ್ಲಿ ಕಾಶ್ಮೀರವನ್ನು ಕುರಿತ ವಿಚಾರವನ್ನು ಪಾಕಿಸ್ತಾನವು ಪುನರ್ ಪ್ರಸ್ತಾಪಿಸುವ ಪ್ರಯತ್ನಕ್ಕೆ ತಡೆಯೊಡ್ಡಿದವು. ಆದರೆ ಪಾಕಿಸ್ತಾನವು ಇದಕ್ಕೆ ಸೊಪ್ಪು ಹಾಕಲಿಲ್ಲ. ಸಹಜವಾಗಿಯೇ ಇದರಿಂದ ಪಾಕಿಸ್ತಾನದ ಬಗ್ಗೆ ಪಾಶ್ಚಿಮಾತ್ಯಗಳು ಹೊಂದಿದ್ದ ವಿಶ್ವಾಸ ಮರೆಯಾಯಿತು.

ಪಾಕಿಸ್ತಾನವು ತನ್ನ ಮಿತ್ರರಾಷ್ಟ್ರಗಳ ಸಲಹೆಯನ್ನು ತಿರಸ್ಕರಿಸುವುದರ ಜೊತೆಗೆ ಬ್ಲ್ಯಾಕ್‌ಮೇಲ್ ಮಾಡುವ ಉದ್ದೇಶದಿಂದ ಸಿಂಕಿಂಗ್ ಮತ್ತು ತನ್ನ ಅಧೀನದಲ್ಲಿರುವ ಕಾಶ್ಮೀರದ ನಡುವಣ ಗಡಿಯ ಸಲುವಾಗಿ ಕಮ್ಯುನಿಸ್ಟ್ ಚೀನಾದೊಂದಿಗೆ ಒಪ್ಪಂದ ಮಾಡಿಕೊಳ್ಳುವ ಪಿತೂರಿ ನಡೆಸಿತು. ಇಂತಹ ಸಂಧಾನದ ಸಲುವಾಗಿ ಕಮ್ಯುನಿಸ್ಟ್ ಚೀನಾ ರೂಪಿಸಿದ ಪ್ರಸ್ತಾವನೆಯು ಕೆಲವು ತಿಂಗಳ ಹಿಂದೆ ಬೆಳಕಿಗೆ ಬಂದಿತು. ಆದರೂ ಪಾಕಿಸ್ತಾನವು ಆ ಪ್ರಸ್ತಾವನೆಯನ್ನು ಅಂಗೀಕರಿಸಲಿಲ್ಲ. ಆದರೆ ಭದ್ರತಾ ಸಮಿತಿಯಲ್ಲಿ ಕಾಶ್ಮೀರ ಕುರಿತ ಚರ್ಚೆ ಆರಂಭವಾಗುತ್ತಿದ್ದಂತೆಯೇ ಪಾಕಿಸ್ತಾನವು ಆ ಪ್ರಸ್ತಾವನೆಯನ್ನು ಒಪ್ಪಿಕೊಳ್ಳುವುದರ ಕುರಿತು ಅಧಿಕೃತವಾಗಿ ಘೋಷಣೆಯೊಂದನ್ನು ಮಾಡಿತು.

ಕಾಶ್ಮೀರವನ್ನು ಕೈವಶ ಮಾಡಿಕೊಳ್ಳುವ ವಿಚಾರದಲ್ಲಿ ಸೋಲನ್ನಪ್ಪುತ್ತಿದ್ದಂತೆಯೇ ಕಮ್ಯುನಿಸ್ಟ್ ಚೀನ ಸಂಗಡ ಕೈಜೋಡಿಸುವ ಪಾಕಿಸ್ತಾನದ ನಿರ್ಧಾರ ಸಹಜವಾಗಿಯೇ ಪಾಶ್ಚಿಮಾತ್ಯ ಜಗತ್ತಿಗೆ ಅಪಾಯಕಾರಿಯೇ. ಸುಹ್ರಾವಾರ್ಡಿ ಪಾಕಿಸ್ತಾನದ ಪ್ರಧಾನಮಂತ್ರಿ ಆಗಿದ್ದಾಗಲೂ ಕಾಶ್ಮೀರ ವಿಚಾರವಾಗಿ ಚೀನಾ ಸಹಕಾರಕ್ಕೆ ಪ್ರಯತ್ನಿಸಿದ್ದರು ಎನ್ನುವುದನ್ನು ಇಲ್ಲಿ ಸ್ಮರಿಸಬಹುದು. ಆದರೆ, ಆಗ ಭಾರತ ಮತ್ತು ಚೀನಾ ನಡುವಣ ಸಂಬಂಧ ಈಗಿನಂತಿರಲಿಲ್ಲ, ವಿಭಿನ್ನವಾಗಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಚೀನಾ ಮತ್ತು ಪಾಕಿಸ್ತಾನ ಒಟ್ಟಾಗಿ ಕಾಶ್ಮೀರದ ಮೇಲೆ ಆಕ್ರಮಣ ಮಾಡಿ ಲೂಟಿ ಮಾಡುವ ಎಲ್ಲಾ ಸಾಧ್ಯತೆಗಳಿವೆ. ಇದು ಅಧಿಕೃತ ಘೋಷಣೆಯಲ್ಲದಿದ್ದದ್ದರೂ ಆ ಬಗ್ಗೆ ಸೂಚನೆಗಳಿವೆ. ಚೀನಾ ಪಾಕಿಸ್ತಾನಕ್ಕೆ ತಲೆಬಾಗುವಂತಿದ್ದು ಈಚೆಗೆ ಲಡಾಕ್‌ನಲ್ಲಿನ ಕೆಲವು ಚೆಕ್‌ಪೋಸ್ಟ್‌ಗಳನ್ನು ತೆರವು ಮಾಡದಿದ್ದರೆ ಶಸ್ತ್ರಾಸ್ತ್ರ ಹೋರಾಟ ನಡೆಸುವ ಬಗ್ಗೆ ಭಾರತಕ್ಕೆ ಎಚ್ಚರಿಕೆಯ ಸಂದೇಶ ಕಳುಹಿಸಿದೆ. ಈ ಎಲ್ಲಾ ಘಟನೆಗಳನ್ನು ಕಾಕತಾಳೀಯ ಎಂದು ತಳ್ಳಿಹಾಕಲಾಗದು. ವಾಸ್ತವ ಅಂಶವೆಂದರೆ ಭಾರತದ ವಿರುದ್ಧದ ದಾಳಿಗೆ ಚೀನಾ ಮತ್ತು ಪಾಕಿಸ್ತಾನಗಳೆರಡೂ ಕೈಜೋಡಿಸಿವೆ.

ಇದೇ ದೃಷ್ಟಿಯಿಂದ ಪಾಕಿಸ್ತಾನವು ಬಂಗಾಲದ ಪ್ರಾಂತಗಳಾದ ಢಾಕಾ ಮತ್ತು ರಾಜಶಾಹಿಗಳಲ್ಲಿ ಹಿಂಸಾಚಾರಗಳನ್ನು ನಡೆಸಿದಂತೆಯೇ ಇಡೀ ಪ್ರದೇಶದಲ್ಲಿ

ಹಿಂಸಾಚಾರಗಳನ್ನು ನಡೆಸಲು ಯತ್ನಿಸುತ್ತಿದೆ. ಇಡೀ ಪ್ರಾಂತದಲ್ಲಿ ಶಾಂತಿ ಕದಡುವ ಸರ್ ಮೊಹಮ್ಮದ್ ಜಫ್ರುಲ್ಲಾ ಎಚ್ಚರಿಕೆ ಇದರ ಸೂಚನೆ. ರಾಜಶಾಹಿ ಮತ್ತು ಢಾಕಾಗಳಲ್ಲಿ ನಡೆದ ದೊಂಬಿ–ಹಿಂಸಾಚಾರ ಯಾವುದೇ ಜನತೆಯ ಪ್ರತಿಭಟನೆಗಳ ಫಲವಲ್ಲ, ಬದಲಿಗೆ ಉನ್ನತ ಮಟ್ಟದಲ್ಲಿ ಹೆಣೆದ ಪಿತೂರಿಗಳ ಭಾಗವಾಗಿತ್ತು. ಪಾಕಿಸ್ತಾನದ ಅಧ್ಯಕ್ಷ ಮತ್ತು ಪೂರ್ವ ಬಂಗಾಲದ ಗವರ್ನರ್, ಹಿಂದೂಗಳ ವಿರುದ್ಧ ಪ್ರಚೋದನಾಕಾರಿ ಭಾಷಣಗಳನ್ನು ಮಾಡಿ ಜನತೆಯನ್ನು ಎತ್ತಿಕಟ್ಟಿ ದೊಂಬಿಗೆ ಕಾರಣರಾದರು. ಮೈಡಾ ಘಟನೆಗಳಿಗೆ ಸಂಬಂಧಿಸಿದಂತೆ ಉತ್ಪ್ರೇಕ್ಷಿತ ಮತ್ತು ತಪ್ಪು ವರದಿಗಳೂ ಮಾಧ್ಯಮಗಳಲ್ಲಿ ಪ್ರಕಟಗೊಂಡವು. ಮೈಡಾ ಘಟನೆಗಳ ಹಿಂದೆ ಪಾಕಿಸ್ತಾನದ ಕೈವಾಡ ಇತ್ತೆಂಬುದು ಈಗ ಎಲ್ಲರಿಗೂ ತಿಳಿದ ಅಂಶ. ಪಾಕಿಸ್ತಾನದ ಉಪ ರಾಯಭಾರಿ ಈ ವಿಚಾರವಾಗಿ ನಡೆದುಕೊಂಡ ರೀತಿ ಆಕ್ಷೇಪಾರ್ಹ ಮಾತ್ರವಲ್ಲ, ಸಂಶಯಾಸ್ಪದವೂ ಆಗಿತ್ತು.

ಹಿಂದೂಗಳ ವಿರುದ್ಧ ಪೂರ್ವ ಬಾಂಗ್ಲಾದಲ್ಲಿ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಆಯೋಜಿಸಿ ಭಾರತದಲ್ಲಿ ಬಿಕ್ಕಟ್ಟುಗಳನ್ನು ಸೃಷ್ಟಿ ಮಾಡಲು ಪಾಕಿಸ್ತಾನ ನಿರ್ಧರಿಸಿತ್ತು. ಮನೋಹರ್ ಕಹಾನಿವನ್ ವಿರುದ್ಧ ಪೂರ್ವನಿರ್ಧಾರಿತವಲ್ಲದ ಪ್ರತಿಭಟನಾ ಪ್ರದರ್ಶನವನ್ನು ಕಲ್ಕತ್ತಾದಲ್ಲಿ ಆಯೋಜಿಸಲಾಯಿತು. ಪರಿಣಾಮವೆಂದರೆ ಅನೇಕ ಹಿಂಸಾತ್ಮಕ ಘಟನೆಗಳು ಪ್ರದರ್ಶಕರಿಂದ ನಡೆದವು. ಆದರೆ ಕಲ್ಕತ್ತಾದಲ್ಲಿನ ಅಧಿಕಾರಿ ವರ್ಗ ಎಚ್ಚರಿಕೆಯಿಂದ ಇದ್ದದ್ದು ಮಾತ್ರವಲ್ಲ ಪರಿಸ್ಥಿತಿಯನ್ನು ನಿಯಂತ್ರಿಸಿದರು. ಆದರೆ ಮೈಡಾದಲ್ಲಿ ಪಾಕಿಸ್ತಾನದ ಅಂಶಗಳು ಸರಳ ಆದಿವಾಸಿಗಳು ಅವರ ಮಹಿಳೆಯರ ವಿರುದ್ಧದ ಅಗೌರವಕ್ಕೆ ಪ್ರತಿ ಧಾಳಿ ಮಾಡುವಂತೆ ಅವರನ್ನು ಎತ್ತಿಕಟ್ಟಿ ಸಮಸ್ಯೆಗಳನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಯಿತು. ಸತ್ಯವೆಂದರೆ ಇಲ್ಲಿ ಹಿಂದೂಗಳೂ ಹೆಚ್ಚಿಗೆ ಅಲ್ಲದಿದ್ದರೂ ಸಮಪ್ರಮಾಣದಲ್ಲೆ ಹಿಂಸಾಚಾರದಿಂದ ಬಳಲಿದರು. ಆದರೆ ಪಾಕಿಸ್ತಾನದ ಪತ್ರಿಕೆಗಳು ಘಟನಾವಳಿಗಳ ಬಗ್ಗೆ ವಾಸ್ತವಾಂಶಗಳನ್ನು ತಿರುಚಿ ಕಪೋಲಕಲ್ಪಿತ ವರದಿಗಳನ್ನು ಪ್ರಕಟಿಸಿದವು.

ಆದರೆ ಅದ್ಭುತ ಬೆಳವಣಿಗೆಗಳೆಂದರೆ, ಈಗ ಪಾಕಿಸ್ತಾನ ಸರ್ಕಾರವು ಢಾಕಾದಲ್ಲಿನ ನಮ್ಮ ಡೆಪ್ಯೂಟಿ ಹೈಕಮೀಷನರ್ ವಿರುದ್ಧ ರಾಜಸ್ತಿಯಲ್ಲಿ ಅವರು ಕೋಮುವಾದಿ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂದು ಆರೋಪಿಸಿ ತನಿಖೆಯನ್ನು ನಡೆಸಲು ಮುಂದಾಗಿದೆ. ಇದೆಲ್ಲವೂ, ಭಾರತದ ಮಾಧ್ಯಮಗಳು ಕಲ್ಕತ್ತಾದಲ್ಲಿನ ಪಾಕಿಸ್ತಾನದ ಡೆಪ್ಯೂಟಿ ಹೈಕಮೀಷನರ್ ನಡೆಸುತ್ತಿರುವ ರಾಜತಾಂತ್ರಿಕವಲ್ಲದ ಚಟುವಟಿಕೆಗಳ ಬಗ್ಗೆ ವಿಸ್ತಾರ ವರದಿಗಳನ್ನು ಪ್ರಕಟಿಸಿದ ಫಲ.

ಢಾಕಾ ತಲುಪುವ ಸಲುವಾಗಿ ಫಿಜೋ ಅವರನ್ನು ಭೇಟಿ ಮಾಡುವ

ಸಲುವಾಗಿ ನಾಗಾ ತೀವ್ರಗಾಮಿಗಳು ಪಾಕಿಸ್ತಾನ ತಲುಪಿದ್ದಾರೆ ಎನ್ನುವ ಮಾಹಿತಿ ನಮಗೆ ಸಿಕ್ಕಿದೆ. ಒಂದೆಡೆ ಈ ಬೆಳವಣಿಗೆಗಳಿಗೆ ಪಾಕಿಸ್ತಾನವೇ ಕಾರಣವಾಗಿದ್ದರೂ ಮತ್ತೊಂದೆಡೆ ಈ ಬೆಳವಣಿಗೆಯನ್ನು ವಿರೋಧಿಸಿದೆ. ಇವೆಲ್ಲವು ಕಮ್ಯುನಿಸ್ಟ್ ಚೀನಾ ಮತ್ತು ಪಾಕಿಸ್ತಾನ ಯಾವ ಹಂತಕ್ಕೆ ಹೋಗಬಹುದು ಎನ್ನುವುದನ್ನು ತೋರಿಸುತ್ತದೆ. ಅಂತರರಾಷ್ಟ್ರೀಯ ರಾಜಕೀಯ ರಂಗದಲ್ಲಿ ತಮಗಿರುವ ವಿವಿಧ ಸಮುದಾಯಗಳ ಬೆಂಬಲದ ಸಂಗಡ ಈ ಎರಡೂ ರಾಷ್ಟ್ರಗಳು ಭಾರತದ ವಿರುದ್ಧ ಕೈಜೋಡಿಸಿರಬಹುದು, ಒಂದಾಗಬಹುದು. ಅಮೆರಿಕಾ ಪಾಕಿಸ್ತಾನದ ಚಟುವಟಿಕೆಗಳ ವಿರುದ್ಧ ತಡೆಒಡ್ಡುವಂತಹ ಕ್ರಮಗಳನ್ನು ಕೈಗೊಳ್ಳುವುದಿಲ್ಲ ಎನ್ನುವುದು ಸ್ಪಷ್ಟ. ಅದೇ ರೀತಿ ಸೋವಿಯತ್ ರಷ್ಯಾ ಸಹ ಸೋಲಬಹುದು. ಪಾಕಿಸ್ತಾನಕ್ಕೆ ನೀಡಿದ ಮಿಲಿಟರಿ ನೆರವು ಕಮ್ಯುನಿಸ್ಟ್ ರಾಷ್ಟ್ರದ ವಿರುದ್ಧ ಬಳಸುವ ಬದಲು ಪ್ರಜಾಪ್ರಭುತ್ವ ರಾಷ್ಟ್ರ ಭಾರತದ ವಿರುದ್ಧ ಉಪಯೋಗವಾಗಬಹುದು ಎನ್ನುವ ಭಾರತದ ಭೀತಿ ನಿಜವಾಗುತ್ತಿದೆ. ಇದು ಪಾಶ್ಚಿಮಾತ್ಯ ರಾಷ್ಟ್ರಗಳು ಪಾಕಿಸ್ತಾನಕ್ಕೆ ನೆರವು ನೀಡುವ ತಮ್ಮ ನೀತಿಗಳ ಬಗ್ಗೆ ಮತ್ತೊಮ್ಮೆ ಆಲೋಚಿಸಬೇಕಾದ ಸಮಯ.

೧೯೪೭ರಿಂದಲೂ ಸಂಪೂರ್ಣ ತೀವ್ರಗಾಮಿ ಮುಸ್ಲಿಂ ನಾಯಕರಿಗೆ ಭಾರತದಲ್ಲಿ ಆಶ್ರಯ ನೀಡುತ್ತಿರುವುದನ್ನು ನೋಡುತ್ತಿರುವವರಿಗೆ ಈ ಒಕ್ಕೂಟ ಆಶ್ಚರ್ಯ ಎನಿಸುವುದಿಲ್ಲ. ಕಮ್ಯುನಿಸ್ಟ್ ಮತ್ತು ಕೋಮುವಾದಿಗಳ ನಡುವಣ ಪಿತೂರಿಗಳು ಯಾರೊಬ್ಬರ ಸ್ವತ್ತಲ್ಲ. ಮುಸ್ಲಿಂ ಕೋಮುವಾದಿಗಳಿಗೆ ನೀಡುತ್ತಿರುವ ಹೆಚ್ಚಿನ ಮನ್ನಣೆಗೆ ಈಗ ವಿವರಣೆ ಬೇಕಾಗಿಲ್ಲ. ಜಬಲ್ಪುರವೇ ಆಗಿರಲಿ ಅಥವಾ ಭೋಪಾಲ್ ಆಗಿರಲಿ, ಕೋಮು ಸಮಸ್ಯೆ ತಂದೊಡ್ಡುವಲ್ಲಿ ಕಮ್ಯುನಿಸ್ಟರು ಸದಾ ಮುಂಚೂಣಿಯಲ್ಲಿ ಇರುತ್ತಾರೆ.

ಕಮ್ಯುನಿಸ್ಟ್ ಎಂಎಲ್ಎ ಒಬ್ಬರು ಮುಸ್ಲಿಂ ಪಿತೂರಿಗಾರರ ಸಂಗಡ ಕೈಜೋಡಿಸಿ ಗಲಭೆಪೀಡಿತ ಮೈಡಾದಲ್ಲಿನ ಪ್ರದೇಶಗಳಿಗೆ ಭೇಟಿ ನೀಡಿದ್ದರು ಎನ್ನುವುದು ಗುಟ್ಟಾಗಿ ಉಳಿದಿಲ್ಲ. ವಿಷಯಗಳು ಸ್ಪಷ್ಟವಾಗೇ ಇವೆ.

ಪಾಕಿಸ್ತಾನಿ ಅಧಿಕಾರಿಗಳ ಮತ್ತು ಶಕ್ತಿಗಳ ಈ ಘಟನೆಗಳು ಮತ್ತು ದುಷ್ಕೃತ್ಯಗಳ ಭಾರತದಲ್ಲಿ ಕಮ್ಯುನಿಸ್ಟ್ ಚೀನಾದ ಹಾಗೂ ಅದರ ಬೆಂಬಲಿಗರು ಸೇರಿ ನಡೆಸುತ್ತಿರುವ ಉಗ್ರ ಕೃತ್ಯಗಳೊಂದಿಗೆ ಬೆರೆತು ದೇಶದಾದ್ಯಂತ ವಾಸ್ತವತೆಯ ಹಾಗೂ ತುರ್ತಿನ ಭಾವನೆಯನ್ನು ಎಬ್ಬಿಸಿ ಪ್ರಜಾತಾಂತ್ರಿಕ ಶಕ್ತಿಗಳನ್ನು ಜಾಗೃತಗೊಳಿಸಬಲ್ಲವು. ಹಾಗೆಯೇ, ಕಾಶ್ಮೀರದ ಬಗ್ಗೆ ನಮ್ಮ ಚರ್ಚೆಯು ನಮ್ಮನ್ನು ಹೆಚ್ಚು ವಿವೇಕಿಗಳನ್ನಾಗಿಸಬಲ್ಲದು.

ಇದೊಂದೇ, ಭಾರತದ ಜನತೆಗೆ ಪ್ರಜಾಸತ್ತಾತ್ಮಕ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ಸಮರ್ಥಿಸಿಕೊಳ್ಳುವ ಅಗತ್ಯ ದೃಢತೆ ಮತ್ತು ಮನೋಬಲವನ್ನು ಒದಗಿಸಿಕೊಡುತ್ತದೆ.

**ಅಮೆರಿಕಾದ ಆರ್ಥಿಕ ನೆರವು ಕಡಿತದಿಂದ ಕಲಿಯಬೇಕಾದ ಪಾಠ**

# ಬೃಹತ್ ಪ್ರಮಾಣದ ವಿದೇಶಿ ನೆರವಿನ ವಿರುದ್ಧ ಉಪಾಧ್ಯಾಯರ ಎಚ್ಚರಿಕೆ*

ಮೇ ೨೫, ಕೋಟಾ–ಆರ್ಥಿಕ ನೆರವಿನಲ್ಲಿ ಯಾವುದೇ ನಿರ್ದಿಷ್ಟ ಷರತ್ತುಗಳು ಇಲ್ಲದಿದ್ದರೂ ನಮ್ಮ ಅಭಿವೃದ್ಧಿ ಯೋಜನೆಯಲ್ಲಿ ವಿದೇಶಿ ಬಂಡವಾಳ ಯಾವುದೇ ರೀತಿಯ ಪಾತ್ರ ವಹಿಸಿದರೂ ವಿದೇಶಿ ಪ್ರಭಾವವನ್ನು ಧ್ವನಿಸುತ್ತದೆ ಎಂದು ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಭಾರತೀಯ ಸಂಘದ ಕೇಂದ್ರೀಯ ಕಾರ್ಯಕಾರಿಣಿ ಸದಸ್ಯರಿಗೆ ನೀಡಲಾದ ಸಾರ್ವಜನಿಕ ಸ್ವಾಗತ ಸಮಾರಂಭದಲ್ಲಿ ಹೇಳಿದರು.

ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಯವರು ಭಾರತ ಸೋವಿಯತ್ ಒಕ್ಕೂಟದಿಂದ ಸೂಪರ್ ಸಾನಿಕ್ ವಿಮಾನಗಳನ್ನು ಖರೀದಿಸುವುದರ ಬಗೆಗೆ ಅಮೆರಿಕ ತಳೆದಿರುವ ಮನೋಧರ್ಮವನ್ನು ತೀವ್ರ ಅಸಮಾಧಾನದಿಂದ ಬಣ್ಣಿಸಿದರು.

ಯಾವ ಭಾರತೀಯ ರಾಷ್ಟ್ರವಾದಿಯೂ ಈ ಮನೋಧರ್ಮವನ್ನು ಒಪ್ಪಲಾರ. ಅಮೆರಿಕಾ ವಿದೇಶಿ ನೆರವಿನಲ್ಲಿ ಕಡಿತ ಮಾಡಿರುವುದಕ್ಕೆ ಭಾರತ ಸೋವಿಯತ್ ರಷ್ಯಾ ಒಕ್ಕೂಟದಿಂದ ಎಂಐಜಿ ಸೂಪರ್‌ಸಾನಿಕ್ ವಿಮಾನಗಳನ್ನು ಖರೀದಿಸುವುದೆಂಬ ನಿರ್ಣಯದ ವರದಿಗಳೇ ಕಾರಣ. ಈ ನಿರ್ಣಯಕ್ಕೆ ಅಮೆರಿಕಾ ಹೀಗೆ ಪ್ರತಿಕ್ರಿಯಿಸಿದೆ. ನಾವು ಬೃಹತ್ ಪ್ರಮಾಣದ ವಿದೇಶಿ ಧನಸಹಾಯದ ಆಧಾರದ ಮೇಲೆ ರೂಪಿಸಿರುವ ನಮ್ಮ ಅಭಿವೃದ್ಧಿ ಯೋಜನೆಗಳಿಗೆ ನೆರವು ಪಡೆಯಲು ನಮ್ಮ ರಾಜಕೀಯ ನಿರ್ಧಾರಗಳ ಮೇಲೆ ಕೆಲವು ರೀತಿಯ ಕಟ್ಟಳೆಗಳನ್ನು ವಿದೇಶಗಳು ಹೇರುತ್ತವೆ. ವಿದೇಶಿ ವಿನಿಮಯ ರಂಗದಲ್ಲಿ ಈಗ ಹೇಗಾದರೂ ಸಂಕಷ್ಟಗಳನ್ನು ಪರಿಹರಿಸಬಹುದು. ಆದರೂ ವಿದೇಶಿ ಹೂಡಿಕೆಗಳಿಗೆ ಸಂಬಂಧಪಟ್ಟಂತೆ ನಮ್ಮ ನಿರ್ಧಾರವನ್ನು ಪುನರಾವಲೋಕಿಸಬಹುದು ಎಂದು ಹೇಳಿದರು.

ವಿದೇಶೀ ನೆರವಿನ ಮೂಲವಿವರಗಳನ್ನು ಪ್ರಸ್ತಾಪಿಸುತ್ತಾ, ಅದರಲ್ಲಿ

---

* ಮೂಲ ಆಕರ : ಆರ್ಗನೈಸರ್ ೦೪.೦೬.೧೯೬೭

ಅಂತರ್ಗತವಾಗಿರುವ ರಾಜಕೀಯ ಪ್ರಭಾವದ ಜೊತೆಗೆ ವಿದೇಶಿ ಬಂಡವಾಳವೂ ಸಹ ನಮ್ಮ ಆರ್ಥಿಕ ಬೆಳವಣಿಗೆಯ ದಿಕ್ಕನ್ನು ನಿರ್ಧರಿಸುತ್ತದೆ. ವಿದೇಶಿ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವುದರಿಂದ ಉತ್ಪಾದನೆ ಮತ್ತು ಬಳಕೆಯ ಅವಶ್ಯಕತೆಗಳ ನಡುವೆ ತೀವ್ರ ಕಂದಕ ಉಂಟಾಗುವುದರ ಜೊತೆಗೆ ಉಪಯೋಗಿಸದಿರುವ ಸಂಪನ್ಮೂಲಗಳು ಹೆಚ್ಚಳವಾಗಲಿವೆ. ಈ ಕಾರಣದಿಂದಲೇ ಕಳೆದ ಹದಿನಾಲ್ಕು ವರ್ಷಗಳಿಂದ ಒಂದೆಡೆ ಬೃಹತ್ ಪ್ರಮಾಣದಲ್ಲಿ ನಿರುದ್ಯೋಗ ಸಮಸ್ಯೆ ಹಾಗೂ ಮತ್ತೊಂದೆಡೆ ಬಂಡವಾಳ ಹೂಡಿಕೆಯ ಹೀನತೆಯಿದೆ ಎಂದು ಶ್ರೀ ಉಪಾಧ್ಯಾಯರು ನುಡಿದರು. ಬಾಕಿ ಉಳಿದಿರುವುದನ್ನು ರೂಪಾಯಿ ಪದ್ಧತಿ ಮೂಲಕ ಸದ್ಯಕ್ಕೆ ಪಾವತಿಸಿ ಈಗಿನ ಕಷ್ಟಗಳನ್ನು ಬಗೆಹರಿಸಬಹುದು. ಆದರೆ ಈ ಒಪ್ಪಂದಗಳಡಿ ಖರೀದಿಸಲು ನಿಗದಿಪಡಿಸಿರುವುದರಲ್ಲಿ ಭೇದಭಾವ ತೋರಿ ದೇಶದ ರಾಜಕೀಯ ಜೀವನವನ್ನು ಪ್ರಭಾವಿಸುವ ಮತ್ತೊಂದು ಸಾಧನವನ್ನು ವಿದೇಶಿ ಶಕ್ತಿಗಳಿಗೆ ನೀಡಿದಂತಾಗಿದೆ ಎಂದು ಅವರು ಹೇಳಿದರು.

# ಮುಖರ್ಜಿ ಮತ್ತು ಟಂಡನ್*

ವಿಭಿನ್ನವಾಗಿರುವ ವಿಶ್ವದಲ್ಲಿ, ವೈಯಕ್ತಿಕ ಗುಣಗಳಲ್ಲಿ ಹಾಗೂ ಲಕ್ಷಣಗಳಲ್ಲಿ ಬೆಳೆದಿರುವ ವ್ಯಕ್ತಿಗಳನ್ನು ಹೋಲಿಕೆ ಮಾಡುವುದಾಗಲೀ ಸರಿಯೂ ಅಲ್ಲ, ಸರುಕ್ಷಿತವೂ ಅಲ್ಲ. ಏಕೆಂದರೆ, ಒಬ್ಬೊಬ್ಬ ಶ್ರೇಷ್ಠ ವ್ಯಕ್ತಿಯೂ ತಮಗೆ ತಾವೇ ಸಾಟಿ. ಅವರಿಗೆ ಅವರೇ ಉದಾಹರಣೆ. ಆದರೆ, ಪುರುಷೋತ್ತಮ್‌ದಾಸ್ ಟಂಡನ್ ಮತ್ತು ಡಾ. ಶ್ಯಾಮಪ್ರಸಾದ್ ಮುಖರ್ಜಿ ದೂರದಿಂದ ಶ್ರೇಷ್ಠವಾಗಿ ಕಾಣುವ ಗುಂಪಿಗೆ ಸೇರಿದವರಷ್ಟೇ ಅಲ್ಲ ಸನಿಹಕ್ಕೆ ಹೋದಷ್ಟೂ ಹೆಚ್ಚು ಶ್ರೇಷ್ಠರಾಗಿ ಕಾಣುತ್ತಾರೆ. ಕೃತ್ರಿಮವಾಗಿ ಅಂತಹ ಶ್ರೇಷ್ಠ ಸ್ಥಾನಕ್ಕೆ ಏರಿದವರ ಗುಂಪೇ ಇಂದು ಇದೆ ಮತ್ತು ಅದು ಹೆಚ್ಚುತ್ತಿದೆ. ಅವರು ಮಾಧ್ಯಮಗಳ ಮತ್ತು ಪ್ರಚಾರದ ಹಾಗೂ ನಾಯಕತ್ವ ಕಲೆಯನ್ನು ಅನುಸರಿಸಿ ಅಂಥವರು ದೊಡ್ಡವರಾಗುತ್ತಾರೆ.

ನೀವು ಸನಿಹಕ್ಕೆ ಹೋಗಿ ಗುರುತಿರುವ ಪರಿಚಿತ ದೃಷ್ಟಿಯಿಂದ ನೋಡುವ ತನಕ ಅವರು ದೊಡ್ಡವರಾಗಿಯೇ ಇರುತ್ತಾರೆ. ಆದರೆ ಹತ್ತಿರದಿಂದ ನೋಡಿದರೆ ಈ ಟೈಟಾನ್‌ಗಳು ಸಣ್ಣವರಂತೆ ಕಾಣುತ್ತಾರೆ. ಅಂತಹವರ ಜೊತೆ ನೀವು ನಿಟಕ ಸಂಪರ್ಕದಲ್ಲಿದ್ದರೆ ನಿಮಗೆ ಜೀವನದಲ್ಲಿ ಆಸಕ್ತಿ ಹುಟ್ಟುವುದಿಲ್ಲ, ಸಿನಿಕರಾಗಿ ಬಿಡುತ್ತೀರ. ಇನ್ನೊಂದೆಡೆಗೆ ಕವಿ ಗ್ರೇ ತನ್ನ ಕಾವ್ಯದಲ್ಲಿ ವಿಷಾದಿಸಿರುವಂಥ ಪುಣ್ಯಾತ್ಮರೂ ಇದ್ದಾರೆ. ಅವರ ನಿರ್ಗಮನ ಶೋಕದಾಯಕವಾಗಿದೆ. ಅವರು ಶ್ರೇಷ್ಠರು, ಶುದ್ಧ ಬೆಳಕಿನ ಕಿರಣದಂತಹ ನಿರ್ಮಲ ಪ್ರಾಂಜಲ ಮೇಧಾವಿಗಳೂ ಇರುತ್ತಾರೆ. ತಾವಿರು ಕಡಲಗರ್ಭದ ದುರ್ಗಮ ಆಳದೊಳಗೆ ಕಾರ್ಯ ನಿರ್ವಹಿಸಿ ಬದುಕುತ್ತಾ ಅನಾಮಧೇಯರಾಗಿ ಸಾಯುತ್ತಾರೆ. ಡಾ. ಮುಖರ್ಜಿ ಮತ್ತು ಟಂಡನ್ ಈ ಯಾವ ಗುಂಪಿಗೂ ಸೇರಿದವರಲ್ಲ. ನಿಜವಾದ ಯೋಗ್ಯತೆಯೊಂದಿಗೆ ಜನಮನ್ನಣೆ ಹಾಗೂ ಖ್ಯಾತಿಗಳೆರಡೂ ಅವರಿಗಿತ್ತು. ವಾಸ್ತವವಾಗಿ ಅವರ ಶ್ರೇಷ್ಠತೆ ಮತ್ತು ಸೇವಾಕಾರ್ಯಗಳು ನಿಜಕ್ಕೂ ಗುರುತಿಸಲ್ಪಡಲಿಲ್ಲ. ಅವರು ಎಂತಹ ಸ್ಥಾನಕ್ಕೇ ಬಂದರೂ ಅದರಲ್ಲಿ ಪರಿಣತರಾಗಿರುತ್ತಿದ್ದರು.

ನಿಜವಾದ ಹೇಳಬೇಕಾದ ವಿಷಯವೆಂದರೆ ಇಂಥವರಿಗೆ ಅವರ ಸ್ಥಾನಗಳು

---

* **ಮೂಲ ಆಕರ : ಆರ್ಗನೈಸರ್, ೧೬.೦೬.೧೯೬೨**

ಘನತೆ ತಂದುಕೊಡುವುದಿಲ್ಲ, ಬದಲಿಗೆ ಅವರೇ ಆ ಸ್ಥಾನಗಳಿಗೆ ಘನತೆ ತಂದುಕೊಡುತ್ತಾರೆ. ಡಾ. ಮುಖರ್ಜಿಯವರಿಗೆ ಕೇಂದ್ರ ಸಚಿವ ಸಂಪುಟದ ಮಂತ್ರಿಯ ಗೌರವ ಸಂದಿತ್ತು. ಆದರೆ ಅವರು ಸಂಪುಟದಿಂದ ಹೊರಬಂದಾಗ ಜನರ ಗೌರವ ಸಂಭಾವನೆಯಲ್ಲಿ ಅವರು ಇನ್ನೂ ಮೇಲ್ಮಟ್ಟಕ್ಕೇರಿದರು.

**ನೈಜ ಕರ್ಮಯೋಗಿಯಂತೆ**

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾದಾಗ ಟಂಡನ್ನರು ಆ ಸ್ಥಾನಕ್ಕೊಂದು ಭವ್ಯತೆಯನ್ನು ತಂದುಕೊಟ್ಟರು ಎಂಬುದನ್ನು ಇಂದು ಯಾರೂ ಒಪ್ಪಲು ತಯಾರಿಲ್ಲ. ಆ ವರ್ಷ ತೀವ್ರ ಸ್ಪರ್ಧೆ ಇತ್ತು. ಸಂಘಟನೆಯಲ್ಲಿ ತಾವು ಗಮನಾರ್ಹವಾದ ವಿಶ್ವಾಸಾರ್ಹತೆ ಹೊಂದಿದ್ದುದನ್ನು ಟಂಡನ್ನರು ಗೆಲ್ಲುವ ಮೂಲಕ ಸ್ಪಷ್ಟಪಡಿಸಿದರು. ಆ ಸ್ಥಾನ ತ್ಯಜಿಸಿದಾಗ ತಮ್ಮ ಔನ್ನತ್ಯದ ಪರಿಚಯದ ಕುರುಹು ನೀಡಿದರು. ಅವರು ಬಾಯಿ ಮಾಡಲಿಲ್ಲ, ಆದರೆ ಅವರು ನೈಜ ಕರ್ಮಯೋಗಿಯಂತೆ ಯಾವುದೇ ಮೋಹಪಾಶ ಬಂಧನಗಳಿಲ್ಲದೆ ಸ್ಪರ್ಧೆಯಲ್ಲಿ ತಮ್ಮದೆಲ್ಲವನ್ನೂ ಪಣಕ್ಕಿಟ್ಟಿದ್ದರು. ಆದರೆ ನಂತರ ತಮಗೇನೂ ಸಂಬಂಧವಿಲ್ಲ ಎಂಬಂತೆ ಜಯಿಸಿದ್ದ ಪಾರಿತೋಷಕವನ್ನು ತ್ಯಜಿಸಿದರು.

ಟಂಡನ್‌ಜಿಯವರು ಉತ್ತರ ಪ್ರದೇಶದ ವಿಧಾನಸಭಾಧ್ಯಕ್ಷರಾಗಿ (ಸ್ಪೀಕರ್) ದೊಡ್ಡವರಾಗಿದ್ದರು, ಆದರೆ ಮಾಜಿ ಸಭಾಧ್ಯಕ್ಷರಾಗಿ ಇನ್ನೂ ದೊಡ್ಡವರಾದರು. ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಅವರು ಶ್ರೇಷ್ಠರಾದರು. ಅದರ ಮಾಜಿ ಅಧ್ಯಕ್ಷರಾಗಿ ಇನ್ನೂ ಹೆಚ್ಚು ಶ್ರೇಷ್ಠರಾದರು.

ಟಂಡನ್‌ಜಿ ಮತ್ತು ಮುಖರ್ಜಿ ಇಬ್ಬರೂ ಭಾರತೀಯ ಸಂಸ್ಕೃತಿ ಮತ್ತು ಮರ್ಯಾದೆಯನ್ನು ಎತ್ತಿ ಹಿಡಿಯಲು ಹೋರಾಡಿದರು ಮತ್ತು ಅದನ್ನು ಪ್ರತಿನಿಧಿಸಿದರು. ಯಾವುದೋ ಹೈಬ್ರಿಡ್ ತಳಿಯೊಂದನ್ನು ಭಾರತದ ನೈಜ ಸಂಸ್ಕೃತಿಯ ಸ್ಥಾನದಲ್ಲಿ ಪಲ್ಲಟಿಸುವ ಯತ್ನ ನಡೆದಿತ್ತು. ಟಂಡನ್‌ಜಿ ಮತ್ತು ಮುಖರ್ಜಿ ಇಬ್ಬರೂ ಈ ಪ್ರಯತ್ನದ ವಿರುದ್ಧವಿದ್ದರು. ಒಬ್ಬರು ಕಾಂಗ್ರೆಸ್ಸಿನೊಳಗಿನಿಂದ ಹಾಗೂ ಇನ್ನೊಬ್ಬರು ಹೊರಗಿನಿಂದ ಈ ಪ್ರಯತ್ನವನ್ನು ವಿರೋಧಿಸಿದರು. ಹಿಂದೂ ಮಹಾಸಭಾದ ಮೂಲಕವಾಗಲಿ ಅಥವಾ ಬದಲಾದ ಪರಿಸ್ಥಿತಿಯಲ್ಲಿ ಜನಸಂಘದ ಮೂಲಕವಾಗಲಿ ಬೆಳೆಸಿದರು. ಟಂಡನ್‌ಜಿಯವರು ಹಿಂದಿಯ ಹೆಸರಿನಲ್ಲಿ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾ ನಂತರ ಈ ಹೋರಾಟ ನಡೆಸಿದರು.

**ಟಂಡನ್‌ಜಿ ಮತ್ತು ಭಾಷೆ**

ವಿಶೇಷವಾಗಿ ಹಿಂದಿಯೇತರರಲ್ಲಿ ಟಂಡನ್‌ಜಿಯವರು ಹಿಂದಿಯ ಸಮರ್ಥನೆಗೆ ನಿಂತಿರುವ ಬಗ್ಗೆ ಸಾಕಷ್ಟು ತಪ್ಪು ತಿಳುವಳಿಕೆ ಇದೆ. ಇತರರಲ್ಲಿಯೂ

ಅಂತಹುದೇ ತಪ್ಪು ತಿಳುವಳಿಕೆಗಳು ಇವೆ. ಹಿಂದಿಯನ್ನು ಶತ್ರುವಂತೆ ದೇಶದಾದ್ಯಂತ ಹೇರಲಾಗುತ್ತಿದೆ ಮತ್ತು ಅಂತಿಮವಾಗಿ ಪ್ರಾದೇಶಿಕ ಭಾಷೆಯ ಸ್ಥಾನವನ್ನು ಹಿಂದಿಯು ಗಳಿಸಲಿದೆ ಎಂದು ಅವರು ತಿಳಿಸಿದ್ದಾರೆ. ನಿಜ ಹೇಳಬೇಕೆಂದರೆ, ವಿಚಾರ ಇದಲ್ಲ, ವಿಚಾರ ಇರುವುದು ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳ ನಡುವೆಯಲ್ಲಿ. ಬದಲಿಗೆ ಹಿಂದಿ ವಿರುದ್ಧ ಹಿಂದೂಸ್ತಾನಿ ಮತ್ತು ಪ್ರಾದೇಶಿಕ ಭಾಷೆಗಳ ವಿರುದ್ಧ ಇಂಗ್ಲಿಷ್. ಈ ಬಗ್ಗೆ ಇಂಗ್ಲಿಷಿನ ಪ್ರತಿಪಾದಕರು ಇಂಗ್ಲಿಷ್ ಅಖಿಲ ಭಾರತ ಭಾಷೆಯೆಂದು, ಅದು ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಹಾನಿ ಉಂಟುಮಾಡುವುದಿಲ್ಲ ಎಂದು ತಪ್ಪಾಗಿ ಭಾವಿಸಿದ್ದಾರೆ. ಇಂಗ್ಲಿಷ್ ದೇಶದೆಲ್ಲೆಡೆ ಆಕ್ರಮಿಸಿದರೆ ಪ್ರಾದೇಶಿಕ ಭಾಷೆಗಳ ಅವನತಿಯ ದಿನಗಳನ್ನು ಎಣಿಸಬೇಕಾಗುತ್ತಲಿದೆ.

ಇಂಗ್ಲಿಷ್ ಉನ್ಮತ್ತರು ಏನೆ ಹೇಳಲಿ, ಸಮೃದ್ಧ ಭಾಷೆಗಳು ದೇಶದಲ್ಲಿ ವೀರ್ಯವತ್ತಾಗಿ ಇರುವ ತನಕ ಯಾವ ಶಕ್ತಿಯೂ ಅದನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ. ಇಂಗ್ಲಿಷನ್ನು ನೇಣಿಗೆ ಹಾಕುವುದು ನಿಧಾನವಾಗಿರಬಹುದು, ಆದರೆ ಬ್ರಿಟಿಷರು ಭಾರತವನ್ನು ಬಿಟ್ಟ ದಿನವೇ ಅದರ ತೀರ್ಪು ನೀಡಲಾಗಿದೆ.

**ಹಿಂದೂಸ್ತಾನಿ ಪ್ರತ್ಯೇಕತಾವಾದದೊಂದಿಗೆ ರಾಜಿ**

ನಿಜವಾದ ವಿವಾದಾಂಶವಿರುವುದು ಹಿಂದಿ ಮತ್ತು ಹಿಂದೂಸ್ತಾನಿಯ ಮಧ್ಯೆ. ಹಿಂದೂಸ್ತಾನಿ ಎಂಬ ಯಾವ ಭಾಷೆಯೂ ಇರಲಿಲ್ಲ, ಇಲ್ಲವೂ ಇಲ್ಲ. ಪಾಕಿಸ್ತಾನದ ಹುಟ್ಟಿಗೆ ಕಾರಣರಾದ ಪ್ರತ್ಯೇಕತಾವಾದಿಗಳು ಮತ್ತು ರಾಷ್ಟ್ರವಿರೋಧಿ ಶಕ್ತಿಗಳನ್ನು ತುಷ್ಟೀಕರಿಸಿ ಅವುಗಳೊಂದಿಗೆ ರಾಜಿ ಮಾಡಿಕೊಳ್ಳಲು ಉಪಯೋಗವಾಗುತ್ತಿರುವ ನೀತಿಯ ಒಂದು ಉತ್ಪನ್ನ.

ಒಂದು ಭಾಷೆ ಕೇವಲ ಅಭಿವ್ಯಕ್ತಿಯ ಮಾಧ್ಯಮವಲ್ಲ. ಆ ಭಾಷೆಯನ್ನು ಬಳಸುತ್ತಿರುವ ಜನರ ಜೀವನ ಮೌಲ್ಯಗಳಿಗೆ ಸಂಬಂಧಿಸಿದ್ದಾಗಿದೆ. ಈ ದಿಸೆಯಲ್ಲಿ ಭಾರತದ ರಾಷ್ಟ್ರೀಯ ಭಾಷೆಗಳು ಎಷ್ಟು ಪರಿಪೂರ್ಣವಾಗಿವೆ ಎಂದರೆ ನೀವು ನಿಮ್ಮ ಸಾಂಸ್ಕೃತಿಕತೆಯನ್ನು ಬಿಡದೆ ಅವುಗಳಲ್ಲಿ ಯಾವುದನ್ನಾದರೂ ಉಪಯೋಗಿಸಬಹುದು. ಮಥುರಾದ ಒಬ್ಬ ವ್ಯಕ್ತಿ ಮದ್ರಾಸಿಗೆ ಹೋಗಿ ನೆಲೆಸಿ ಕಾಲಕ್ರಮೇಣ ಆತ ಹಿಂದಿ ಬದಲು ತಮಿಳು ಮಾತನಾಡತೊಡಗಿದರೆ ಅವನೇನೂ ಕಳೆದುಕೊಳ್ಳುವುದಿಲ್ಲ. ಅಂತಿಮ ಫಲಿತಾಂಶ ಆಗಿರುತ್ತದೆ. ಆದರೆ ಇಂಗ್ಲಿಷಿನ ಅಥವಾ ಫ್ರೆಂಚಿನ ವಿಷಯದಲ್ಲಿ ಹೀಗಾಗುವುದಿಲ್ಲ.

ಇಷ್ಟಕ್ಕೂ ಹಿಂದೂಸ್ತಾನಿ ಎಂದರೇನು? ಎಸ್ಪೆರಾಂಟೋ ಭಾಷೆಯಂತೆ ಇದೊಂದು ಅಭಿವ್ಯಕ್ತಿಯ ಮಾಧ್ಯಮ. ಇದು ಅಖಿಲ ಭಾರತ ಭಾಷೆಯಲ್ಲ. ಹೆಚ್ಚು ಅರೇಬಿಕ್ ಮತ್ತು ಪರ್ಷಿಯನ್ ಪದಭಂಡಾವುಳ್ಳ ಕೇವಲ ಉತ್ತರ ಭಾರತದ

ಜನರಿಗೆ ಅನುಕೂಲರವಾಗಿರುವಂತಹುದ್ದು. ಅಂತಹ ಭಾಷೆ ಕೃತಕವಾಗಿ ಮೇಲಿರಬಹುದು. ಆದರೆ ಇಂಗ್ಲಿಷಿನಂತೆ ಜನಮಾನಸದಿಂದ ದೂರವಾಗಿಯೇ ಇರುವುದು. ಎಲ್ಲಾ ಹಿಂದಿ ಭಾಷಿಕರಿಗೂ ಮತ್ತು ಹಿಂದಿಯೇತರ ಜನರಿಗೂ ಅದು ಗ್ರೀಕ್ ಮತ್ತು ಲ್ಯಾಟಿನ್‌ನಂತೆಯೇ ಕಬ್ಬಿಣದ ಕಡಲೆ ಆಗಲಿದೆ. ಎಲ್ಲಕ್ಕಿಂತ ಮಿಗಿಲಾಗಿ ಹಿಂದೂಸ್ತಾನಿ ಭಾರತಿಯರನ್ನು ಅಭದ್ರರನ್ನಾಗಿಸುವ ಭಾರೀ ತಂತ್ರಗಳ ಅಂಗವಾಗಿದೆ. ಹಿಂದುಸ್ತಾನಿಯೇನಾದರೂ ಹಿಂದಿಯ ಸ್ಥಾನವನ್ನು ಆಕ್ರಮಿಸಿದರೆ ಅದು ಇತರ ಭಾಷೆಗಳನ್ನು ಮುಟ್ಟದೇ ಇರಲಾರದು. ಹಿಂದೂಸ್ತಾನಿ ಗೆದ್ದರೆ ಒಳ್ಳೆಯದಾಗಲಾರದು. ಹಿಂದಿಯಂತೆಯೇ ಇತರ ಎಲ್ಲ ಭಾಷೆಗಳಿಗೂ ರೂಪುರೇಷೆಯಿಂದ ನಿಧಾನವಾಗಿ ಹಂತಹಂತವಾಗಿ ಸರ್ವನಾಶ ಮಾಡುವ ಪ್ರಕ್ರಿಯೆ. ಸಂಯುಕ್ತ ಸಂಸ್ಕೃತಿಯ ಮುಂದಾಳುಗಳು ಬಂಗಾಳಿ, ಕನ್ನಡ, ಮರಾಠಿ ಮತ್ತು ತಮಿಳು ಭಾಷೆಗಳು ಅರಾಬಿಕ್ ಮತ್ತು ಪರ್ಷಿಯನ್ ಪದಗಳ ಭಾರವನ್ನು ಹೊರಬೇಕು ಹಾಗೂ ಹಿಂದೂಸ್ತಾನಿಯನ್ನೇಕೆ ಎರಡು ಲಿಪಿಗಳಲ್ಲಿ ಬರೆಯಬೇಕೆಂದು ಬೇಡಿಕೆ ಮುಂದಿಡಬಹುದಲ್ಲವೇ? ಟಂಡನ್‌ಜಿಯವರು ಒಂದು ಸಂಸ್ಕೃತಿಯಲ್ಲಿ ನಂಬಿಕೆ ಹೊಂದಿದ್ದರು. ಆದ್ದರಿಂದಲೇ ಹಿಂದಿಯನ್ನು ಸಮರ್ಥಿಸಿದರು. ಏಕೆಂದರೆ, ಹಿಂದಿಯ ಕಾರಣವೆಂದರೆ ಎಲ್ಲಾ ಭಾಷೆಗಳ ಕಾರಣ.

ಈಗ ಅಂತಹ ಧೀರೋದಾತ್ತ ಪುರುಷರಿಲ್ಲ. ಶ್ರೇಷ್ಠ ಕಾರಣಗಳಿಗೆ ಹೋರಾಡುವ ಜನರು ನಮ್ಮ ನಡುವಿಲ್ಲ. ಆದರೆ ಅಂತಹ ಹೋರಾಟಗಳು ಕೊನೆಗೊಳ್ಳುವುದಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಕೀಳಾಗಿಸುವ ಯತ್ನಗಳ ವಿರುದ್ಧ ಪ್ರಬಲ ಹಾಗೂ ಸಮರ್ಥವಾಗಿ ಹೋರಾಡುವ ಸಂಘಟನೆಯನ್ನು ಬಿಟ್ಟು ಹೋಗಿದ್ದಾರೆ. ಡಾ. ಶ್ಯಾಮಪ್ರಸಾದ್ ಮುಖರ್ಜಿ ಕಾಂಗ್ರೆಸ್ಸಿನೊಳಗಡೆಯಿಂದ ಹೋರಾಡುತ್ತಿದ್ದ ಟಂಡನ್‌ಜಿಯವರು ದುರಾದೃಷ್ಟವಾಗಿ ಅಂತಹ ವ್ಯವಸ್ಥಿತ ಸಂಘಟನೆಯೊಂದನ್ನು ಬಿಟ್ಟು ಹೋಗಿಲ್ಲ. ಅವರಿರುವ ತನಕ ಅವರ ಹಿಂದೆ ಕಾಂಗ್ರೆಸ್ಸಿಗರು ಇದ್ದರು. ಆದರೆ ಇಂದು ಅಂತಹ ಕೇಂದ್ರ ವ್ಯಕ್ತಿಗಳ್ಯಾರೂ ಇಲ್ಲ.

**ಪೌರಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡಿ ; ಉಪಾಧ್ಯಾಯ**

# ಕಾನ್ಪುರದಲ್ಲಿ ಭಾರತೀಯ ಜನಸಂಘದ ನಾಯಕರಿಗೆ ಸ್ವಾಗತ

ಕಾನ್ಪುರ, ಆಗಸ್ಟ್ ೧೭–ಸ್ಥಳೀಯ ಆಡಳಿತದಲ್ಲಿ ಯಾವುದೇ ರೀತಿಯ ಯಶಸ್ಸು ಸಾಧಿಸಬೇಕಾದರೆ ಪೌರಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ ಸಿಗಬೇಕೆಂದು ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದೀನದಯಾಳ್ ಉಪಾಧ್ಯಾಯ ಹೇಳಿದರು.

ಕಾರ್ಪೊರೇಷನ್ ಭವನದಲ್ಲಿ ನಾಗಪುರ ಮಹಾನಗರ ಪಾಲಿಕೆ ನೀಡಿದ ಸ್ವಾಗತ ಸಮಾರಂಭದಲ್ಲಿ ಉತ್ತರಿಸಿ ಮಾತನಾಡಿದ ಅವರು, ಸ್ಥಳೀಯ ಆಡಳಿತ ಪ್ರಜಾಪ್ರಭುತ್ವ ಸರ್ಕಾರದ ಆಧಾರ ಮತ್ತು ಅವುಗಳ ಯಶಸ್ಸಿನ ಮೇಲೆಯೇ ಪ್ರಜಾಪ್ರಭುತ್ವದ ಯಶಸ್ಸು ನಿಂತಿದೆ ಎಂದರು.

ಸ್ವಾಗತ ಭಾಷಣದಲ್ಲಿ ಮೇಯರ್ ಡಾ. ಧೀರೇಂದ್ರನಾಥ ಬ್ಯಾನರ್ಜಿ, ಉಪಾಧ್ಯಾಯರನ್ನು ಭಾರತದ ಪ್ರಾಚೀನ ಸಂಸ್ಕೃತಿ ಮತ್ತು ಪರಂಪರೆಗಳ ಭಕ್ತ ಎಂದು ಕರೆದರು. ಇದಕ್ಕೆ ಸಂಬಂಧಿಸಿದ ಚಳವಳಿಗಳಿಗೆ ತಮ್ಮನ್ನು ತಾವು ಅವರು ಸಮರ್ಪಿಸಿಕೊಂಡಿದ್ದಾರೆ ಎಂದು ಹೇಳಿದರು.

ಡಾ. ಬ್ಯಾನರ್ಜಿಯವರು ಕಾನ್ಪುರದಲ್ಲಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಮಾತನಾಡಿ ಮಹಾನಗರ ಪಾಲಿಕೆಯು ಅವುಗಳನ್ನು ಬಗೆಹರಿಸಲು ನಿಷ್ಪಕ್ಷಪಾತವಾಗಿ ಪ್ರಯತ್ನಿಸುತ್ತಿದೆ ಎಂದು ಹೇಳಿದರು.

ಈ ಕಾರ್ಯದಲ್ಲಿ ನಾವು ನಿಮ್ಮ ಶುಭಾಕಾಂಕ್ಷೆಗಳನ್ನು ಬಯಸುತ್ತೇವೆ ಎಂದು ಉಪಾಧ್ಯಾಯರಿಗೆ ತಿಳಿಸಿದರು.

ಸ್ವಾಗತ ಭಾಷಣಕ್ಕೆ ಉತ್ತರಿಸಿ ಮಾತನಾಡಿದ ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಯವರು, ತಮಗೆ ನೀಡಿರುವ ಆಹ್ವಾನದ ಹಿಂದಿರುವ ವಿಶ್ವಾಸ ಹಾಗೂ ಮನೋವಿಶಾಲತೆಯೇ ಪ್ರಜಾಪ್ರಭುತ್ವದ ಯಶಸ್ಸಿನ ಆಧಾರ

---

* ಮೂಲ ಆಕರ : ಆರ್ಗನೈಸರ್, ೨೭.೦೮.೨೯೬೨

ಎಂದರು. ವಿಶ್ವಾಸ ಸಂಬಂಧಗಳಲ್ಲಿ ರಾಜಕೀಯ ಭೇದಗಳು ತೊಡಕಾಗಬಾರದು. ಒಬ್ಬರು ಇನ್ನೊಬ್ಬರ ದೃಷ್ಟಿಕೋನ ಅರಿಯಲು ಅವಕಾಶಗಳನ್ನು ಸೃಷ್ಟಿಸಬೇಕು. ನಾಗರಿಕ ವಿಷಯಗಳಲ್ಲಿ ಆಗ ರಾಜಕೀಯ ಭೇದಗಳಿಗೆ ಪ್ರಾಮುಖ್ಯತೆ ಇರುವುದಿಲ್ಲ ಎಂದರು.

ಪಂಡಿತ್ ನೆಹರೂರವರು ಕೈಗಾರಿಕೆಗಳನ್ನು ಆಧುನಿಕ ಭಾರತದ ಯಾತ್ರಾ ಸ್ಥಳಗಳೆಂದು ಕರೆದಿರುವುದನ್ನು ಪ್ರಸ್ತಾಪಿಸಿದ ಅವರು, ಈ ಹಿನ್ನೆಲೆಯಲ್ಲಿ ಕಾನ್ಪುರವು ರಾಜ್ಯದಲ್ಲಿಯೇ ಅತಿದೊಡ್ಡ ಪುಣ್ಯಕ್ಷೇತ್ರ ಹಾಗೂ ಅನೇಕಾನೇಕ ಸ್ವಾತಂತ್ರ್ಯ ಹೋರಾಟಗಾರರ ಕರ್ಮಭೂಮಿಯಾಗಿದೆ ಎಂದರು.

**ಏಕದೈವ**

ಕಾನ್ಪುರ ಒಂದು ಕೈಗಾರಿಕಾ ನಗರವಾಗಿ ಬಾಂಬೆ, ಅಹಮದಾಬಾದ್ ಮತ್ತು ಬೆಂಗಳೂರಿನ ದರ್ಜೆಯಲ್ಲಿಯೇ ಇದೆ. ಈ ನಗರಗಳಿಗೆ ಬಂದಿರುವ ಬಹುತೇಕರಿಗೆ ಒಂದೇ ಗುರಿ, ಒಂದೇ ಅಭಿಲಾಷೆ, ಅವರೆಲ್ಲರ ದೈವವೆಂದರೆ ರೂಪಾಯಿ. ಅದರಲ್ಲಿಯೇ ಆಧುನಿಕ ಜೀವನದ ಚಿಹ್ನೆಯಿದೆ. ಈ ಸಮಸ್ಯೆ–ಅನಾಹುತವೇ ನಗರಗಳಲ್ಲಿ ಸದಾ ಇರುವುದು. ಕ್ರಮೇಣ ಈ ನಗರವಾಸಿಗಳು ಸಾಂಸ್ಕೃತಿಕ–ಪಾರಂಪಾರಿಕ ನೆಲೆಗಳಿಂದ ಹೊರಹೋಗಿ ಮಮೋನನ ಆರಾಧಕರಾಗುತ್ತಾರೆ.

ಪೌರಸಂಸ್ಥೆಯೊಂದು ಇಂತಹ ಅಂಶಗಳ ಬಗೆಗೂ ಗಮನಹರಿಸಬೇಕು ಹಾಗೂ ಇಂತಹ ಪಿಡುಗನ್ನು ತಡೆಗಟ್ಟಲು ಏನಾದರೂ ಮಾಡಬಹುದೆಂಬುವ ದಿಸೆಯತ್ತ ಕಾರ್ಯಪ್ರವೃತ್ತವಾಗಬೇಕು. ತಾವು ಉತ್ತರ ಪ್ರದೇಶದಲ್ಲಿ ಪ್ರವಾಸದಲ್ಲಿದ್ದಾಗ, ಅದರಲ್ಲಿಯೂ ಪೂರ್ವಭಾಗಗಳಲ್ಲಿ ಜನರನ್ನು ಮಾತನಾಡಿಸಿ ಎಲ್ಲಿಗೆ ಹೋಗುತ್ತೀರಿ ಎಂದು ಕೇಳಿದರೆ ಕಾನ್ಪುರ ಎನ್ನುವ ಉತ್ತರವೇ ಬರುತ್ತಿತ್ತು. ಆದ್ದರಿಂದ ಕಾನ್ಪುರದ ಜನಸಂಖ್ಯೆ ಹೆಚ್ಚಾಗಿರುವುದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಪೌರಸಂಸ್ಥೆಗೆ ಇದೊಂದು ಭಾರೀ ಹೊರೆ ಎಂದರು.

ನಗರಪಾಲಿಕೆ ಒಂದು ಗುಂಪಾಗಿ ಸ್ಫೂರ್ತಿಯಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದ ಬಿಜೆಎಸ್ ಮುಖಂಡರು, ಎಲ್ಲಾ ಪಕ್ಷಗಳ ಸಹಕಾರದಲ್ಲಿ ಕೆಲಸ ಮಾಡಿ ನಾಗರಿಕ ಆಡಳಿತದಲ್ಲಿ ಆರೋಗ್ಯಕರ ಸಂಪ್ರದಾಯ ಸ್ಥಾಪಿಸಿದೆ ಎಂದು ಹೇಳಿದರು.

ಕಾರ್ಪೊರೇಷನ್ ತನ್ನ ಅಭಿವೃದ್ಧಿ ಯೋಜನೆಗಳಿಗೆ ಸ್ವತಂತ್ರ ಆದಾಯ ಮೂಲಗಳನ್ನು ತುರ್ತಾಗಿ ಶೋಧಿಸಬೇಕೆಂದು ಅವರು ಒತ್ತಿ ಹೇಳಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅನುದಾನದ ಮೇಲೆ ಹೆಚ್ಚು ಆಧಾರಿತವಾಗಬಾರದು ಎಂದು ಎಚ್ಚರಿಸಿದರು. ಪೌರಸಂಸ್ಥೆಗಳಿಗೆ ಸಂವಿಧಾನದಲ್ಲಿ

ಶಾಸನಬದ್ಧ ಸ್ಥಾನವಿರಬೇಕು. ರಾಜ್ಯದ ಶಾಸನಗಳಿಗೆ ಅದರ ಅಧಿಕಾರ ಸೀಮಿತವಾಗಬಾರದು ಎಂದು ಅಭಿಪ್ರಾಯಪಟ್ಟರು.

ಸ್ಥಳೀಯ ಕಾರ್ಪೊರೇಷನ್ ಭವನದಲ್ಲಿ ನಡೆದ ಈ ಸಮಾರಂಭದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಆಹ್ವಾನಿತರಿದ್ದರು.

**ಪಾಶ್ಚಾತ್ಯವಾದ, ತಾಟಸ್ಥ್ಯವಾದ ಮತ್ತು ಧನ ಬಲದ ಬಗ್ಗೆ***

ಪ್ರಸ್ತುತ ಪಾಶ್ಚಾತ್ಯವಾದದ ಅಲೆ ಎಷ್ಟು ಗಂಭೀರವಾಗಿದೆ? ವಾಸ್ತುಶಿಲ್ಪ ಔಷಧಿ ಮತ್ತು ನ್ಯಾಯ ಪದ್ಧತಿ ಎಷ್ಟು ಉತ್ತಮವಾಗಿವೆ? ಭಾರತದಲ್ಲಿ ಹಣ ಬಲದ ಪ್ರಭಾವವೇನು? ಇಂತಹ ಕೆಲವು ಪ್ರಶ್ನೆಗಳನ್ನು ನಾವು ಮಂಡಿಸಿದೆವು ಮತ್ತು ಶ್ರೀ ದೀನ್ ದಯಾಳ್ ಉಪಾಧ್ಯಾಯರು ಅವುಗಳಿಗೆ ಹೀಗೆ ಉತ್ತರಿಸಿದ್ದಾರೆ.

**ಸಂಪಾದಕ****

ಪ್ರಶ್ನೆ : ಪಾಶ್ಚಾತ್ಯವಾದವು (ವೆಸ್ಟ್ರ್ನಿಸಂ) ದೇಶವ್ಯಾಪಿ ಆವರಿಸಿಕೊಂಡಿದೆ. ಅದರ ಬಗ್ಗೆ ಏನು ಮಾಡಬಹುದು?

ಉತ್ತರ : ನನ್ನ ಪ್ರಕಾರ ಅದೊಂದು ತಾತ್ಕಾಲಿಕ ವಿದ್ಯಾಮಾನವಾಗಿದೆ. ಅದು ಬಹುದೂರ ಸಾಗದಂತೆ ಮಾಡುವ ಭರವಸೆ ಇದೆ.

ಪ್ರಶ್ನೆ : ಪಾಶ್ಚಾತ್ಯವಾದದ ವಿವಿಧ ದೃಷ್ಟಿಕೋನಗಳಿಗೆ ನಮ್ಮದೇ ಆದ ಪರ್ಯಾಯ ಅಂಶಗಳಿವೆಯೇ?

ಉತ್ತರ : ನನ್ನ ಪ್ರಕಾರ ಹೌದು. ಮೊದಲಿಗೆ ಔಷಧ ಶಾಸ್ತ್ರದ ನಿದರ್ಶನವನ್ನು ತೆಗೆದುಕೊಳ್ಳೋಣ. ತಲೆಡಮೈಡ್ ಎಂಬ ಔಷಧಿ ಅಲೋಪತಿ ಚಿಕಿತ್ಸಾ ಪದ್ಧತಿಯನ್ನು ವಿನಾಶಮಾಡಿದೆ ಎಂದು ಇತ್ತೀಚೆಗಷ್ಟೆ ಗೊತ್ತಾಗಿದೆ. ಪೆನ್ಸಿಲಿನ್ ಕೂಡ ಸಂಶಯಕ್ಕೀಡಾಗಿದೆ. ಮತ್ತೊಂದೆಡೆ ಆಯುರ್ವೇದವು ಒಂದು ಪ್ರಾಚೀನ ಮತ್ತು ಸುಪರೀಕ್ಷಿತ ಪದ್ಧತಿಯಾಗಿದೆ. ಆಧುನಿಕ ವಿಜ್ಞಾನದಲ್ಲಿ ಆಯುರ್ವೇದವನ್ನು ಪರಿಗಣಿಸಿ ಪರಿಷ್ಕರಿಸಿ ಭಾರತದಲ್ಲಿ ಔಷಧೋಪಚಾರಕ್ಕೆ ಪ್ರಧಾನ ಅಂಶವಾಗಿ ಉಪಯೋಗಿಸದಿರಲು ಕಾರಣಗಳೇ ತಿಳಿಯುತ್ತಿಲ್ಲ.

ಪ್ರಶ್ನೆ : ಭಾರತೀಯ ವಾಸ್ತುಶಿಲ್ಪದ ವಿಷಯದಲ್ಲೂ ಹೀಗೆಯೇ ಹೇಳುವಿರೆ?

ಉತ್ತರ : ಖಂಡಿತವಾಗಿಯು ಹೌದು. ಇಂದಿನ ಗಗನಚುಂಬಿ ಕಟ್ಟಡಗಳು ನೆಲಸಮವಾಗಿ ಹೋದರೂ ನಮ್ಮ ಪ್ರಾಚೀನ ಸ್ಮಾರಕಗಳು ಹಾಗೆಯೇ ಇರುತ್ತವೆ.

---

* ಮೂಲ ಆಕರ : ಆರ್ಗನೈಸರ್, ದೀಪಾವಳಿ ಸಂಚಿಕೆ, ೧೯೬೨, ಪುಟ ೧೨

** ಸಂಪಾದಕರೆಂದರೆ ಆರ್ಗನೈಸರ್ ಪತ್ರಿಕೆಯ ಸಂಪಾದಕರು (–ಸಂ.)

ಸಿಮೆಂಟು ನಮ್ಮ ವಾತಾವರಣಕ್ಕೆ ಒಗ್ಗುತ್ತಿಲ್ಲ ಎಂದು ತಿಳಿದು ಕೂಡ ಅದನ್ನು ಯಥೇಚ್ಛವಾಗಿ ಬಳಸುತ್ತಿದ್ದೇವೆ. ನಮ್ಮ ಇಂದಿನ ಮನೆಗಳು ಅಗತ್ಯಕ್ಕಿಂತ ಹೆಚ್ಚು ತೆರೆದುಕೊಂಡಿದ್ದು ಹೆಚ್ಚಿನ ಗಾಳಿ, ಧೂಳು ಮತ್ತು ಗಲೀಜು ಒಳನುಗ್ಗಲು ಅವಕಾಶ ಒದಗಿಸಿವೆ.

ನನ್ನ ಪ್ರಕಾರ, ಚೌಕಾಕಾರದಲ್ಲಿ ಕಟ್ಟಿದ ಮನೆಗಳು, ಮಧ್ಯದಲ್ಲಿ ಚತುರ್ಭುಜೀಯ ಪ್ರಾಂಗಣವಿರುವ ಸರ್ವ ಬಳಕೆಗೆ ಬರುವ ಮನೆಗಳು ಸಾಮಾಜಿಕ ಬದುಕಿಗೆ ಯೋಗ್ಯ. ಇದರಿಂದ ನೆರೆಯವರು ನಿಮಗೆ ಯಾರೋ ಆಗಿರದೆ ನಿಮ್ಮ ಸಹೋದರ ಎಂದೆನಿಸಬಹುದು.

ಪ್ರಶ್ನೆ : ಆದರೆ, ನಮಗೆ ಒಂದು ರಾಷ್ಟ್ರೀಯ ಪಾನೀಯವೂ ಇಲ್ಲ?

ಉತ್ತರ : ಯಾಕಿಲ್ಲ. ಬಿಸಿ ಹಾಲು ಅತ್ಯುತ್ತಮವಾಗಿರುತ್ತದೆ. ಬಿಸಿ ಅಥವಾ ತಣ್ಣಗಿನ ನಿಂಬೆಯ ಪಾನೀಯ ಚೆನ್ನಾಗಿರುತ್ತದೆ. ಬಾದಾಮಿ ಹಾಲು, ಸಿಹಿ ಮೊಸರು (ಲಸ್ಸಿ) ಮಸಾಲೆ ಮಜ್ಜಿಗೆ ಇತ್ಯಾದಿಗಳು ಆರೋಗ್ಯಕರ ಮತ್ತು ಆಹ್ಲಾದಕರ ಪಾನೀಯಗಳು. ಇವು ಅನಿಲಗೂಡಿಸಿದ ಪಾನೀಯಗಳಿಗಿಂತ ಬಹುಪಾಲು ಉತ್ತಮ.

ಪ್ರಶ್ನೆ : ಆಂಗ್ಲೋ–ಸ್ಯಾಕ್ಸನ್ ಕಾನೂನು ಎಲ್ಲರನ್ನು ಸಮಾನವಾಗಿ ಕಾಣುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಉನ್ನತ ಎಂದು ಪರಿಗಣಿಸಲಾಗಿದೆ.

ಉತ್ತರ : ಅದು ಸರಿಯೆ. ಆದರೆ ಬೇರೆ ಕಾನೂನು ವ್ಯವಸ್ಥೆ ಮನುಷ್ಯರನ್ನು ಸಮಾನವಾಗಿ ಪರಿಗಣಿಸಿಲ್ಲವೆಂದಲ್ಲ. ಬ್ರಾಹ್ಮಣರ ಶಿರಚ್ಛೇದನ ಮಾಡುವಂತಿಲ್ಲ ಎಂಬುದೊಂದೇ ಹಿಂದೂ ಕಾನೂನಿನ ಅಸಮಾನತೆಯ ಅಂಶ. ಆದರೆ, ಹತ್ತೊಂಬತ್ತನೆಯ ಶತಮಾನದವರೆಗೆ ಶಿರಚ್ಛೇದನ ಪದ್ಧತಿಯು ಇಂಗ್ಲೆಂಡಿನಲ್ಲಿದ್ದ ಹಾಗೆ ಪ್ರಾಚೀನ ಭಾರತದಲ್ಲಿ ಪರಿಚಿತವಾಗಿರಲಿಲ್ಲ. (ಅಂದ ಹಾಗೆ, ನೇಪಾಳಿ ಕಾನೂನು ನೇಪಾಳದ ಮಾಜಿ ಪ್ರಧಾನಿ ತಂಕಾ ಪ್ರಸಾದ್ ಆಚಾರ್ಯರ ಬ್ರಾಹ್ಮಣತ್ವವನ್ನು ಗುರುತಿಸಿಯೇ ಗಲ್ಲುಶಿಕ್ಷೆಯಿಂದ ಉಳಿಸಿದ್ದು!)

ಸರಿಯಾಗಿ ನೋಡಿದರೆ, ಆಂಗ್ಲೋ–ಸ್ಯಾಕ್ಸನ್ ಕಾನೂನು ಎಲ್ಲರನ್ನು ಸಮಾನವಾಗಿ ಕಾಣುತ್ತದೆ ಎಂಬುದು ವಾಸ್ತವವಲ್ಲ. ಒಬ್ಬ ಶ್ರೀಮಂತ ವ್ಯಕ್ತಿ ಉತ್ತಮವಾದ ನ್ಯಾಯವಾದಿಯನ್ನು ತೊಡಗಿಸಿಕೊಂಡಿರುತ್ತಾನೆ ಮತ್ತು ದೀರ್ಘವಾದ ಸಮಾಲೋಚನೆಗಳಿಗೆ ಹಣ ಭರಿಸಿ ಅವನ ಎಲ್ಲಾ ಮಾರ್ಗಗಳನ್ನು ಸುಗಮಗೊಳಿಸಿಕೊಳ್ಳುವ ಅವಕಾಶವನ್ನು ಹೊಂದಿರುತ್ತಾನೆಂಬುದು ಎಲ್ಲರಿಗೂ ತಿಳಿದಿದೆ.

ಹಾಗೆಯೇ ಹಿಂದೂ ಕಾನೂನು ಪಾಶ್ಚಾತ್ಯ ಕಾನೂನಿನ ಅರಿವಿಗೆ ಬಾರದ ಲಕ್ಷಣಗಳನ್ನು ಒಳಗೊಂಡಿದೆ. ಹಿಂದೂ ಕಾನೂನಿನಲ್ಲಿ ಶಾಂತಿಸಂಧಾನವು ಮಾನ್ಯತಾ ಸ್ಥಾನವನ್ನು ಹೊಂದಿದೆ, ಹಾಗೆಯೇ ಪ್ರಾಯಶ್ಚಿತ್ತ ಕೂಡ. ಇದರಿಂದ ವಿಶ್ವಾಸ

ಹೆಚ್ಚಿತು ಮತ್ತು ಮನಃ ಪರಿವರ್ತನೆಯಾಯಿತು. ಪಾಶ್ಚಾತ್ಯ ಕಾನೂನು ಪದ್ಧತಿ ಇಂತಹ ಗುಣಗಳನ್ನು ಹೊಂದಿಲ್ಲ.

ಪ್ರಶ್ನೆ : ನನಗೆ ಪಾಶ್ಚಾತ್ಯವಾದ ಬಹಳ ಪ್ರಬಲವಾದದ್ದು ಎಂಬ ಭಯವಿದೆ.

ಉತ್ತರ : ಹೌದು, ನಿಜವಾಗಿಯೂ. ಆದರೆ ಸ್ವದೇಶಿ ಮನೋವೃತ್ತಿ ಅದನ್ನು ಪ್ರತಿರೋಧಿಸಬಹುದು. ಒಂದು ರೀತಿಯಲ್ಲಿ ನಾನು ವಿದೇಶಿ ವಸ್ತುಗಳನ್ನು ಮತ್ತು ಕಾರ್ಯ ವಿಧಾನಗಳನ್ನ ಸ್ವಾಗತಿಸುತ್ತೇನೆ.

ನಮಗೆ ಸರಳತೆಯ ಅಗತ್ಯವಿದೆ. ಎಂದು ಡಾ. ವಿ.ಕೆ.ಆರ್.ವಿ.ರಾವ್‌ರವರು ಸರಿಯಾಗಿಯೇ ಹೇಳಿದ್ದಾರೆ. ಯು.ಎಸ್.ಎ.ಯಂತಹ ದೇಶಕ್ಕೆ ಸರಳತೆಯು ವಿಪತ್ಕಾರಕವಾಗಬಹುದು; ಇದು ಕೈಗಾರಿಕಾ ಗಾಲಿಗಳನ್ನು ನಿಧಾನಗೊಳಿಸಿ, ನಿರುದ್ಯೋಗ, ನಿರುತ್ಸಾಹಕ್ಕೆ ಕಾರಣವಾಗಬಹುದು. ಆದರೆ, ಭಾರತದಂತ ನಮ್ಮ ದೇಶಕ್ಕೆ ಜಟಿಲತೆ ವಿಪತ್ಕಾರಕವಾಗಬಹುದು. ನಾವು ನಮ್ಮ ಹಣವನ್ನು ಆಡಂಬರಕ್ಕಾಗಿ ಪೋಲು ಮಾಡುವಷ್ಟು ಸಮರ್ಥರಲ್ಲ.

ಪ್ರಶ್ನೆ : ವೈಯಕ್ತಿಕ ಪ್ರೇರಣೆಯು ರಾಷ್ಟ್ರೀಯ ಅಭಿವೃದ್ಧಿಯ ಚಾಲಕಶಕ್ತಿ ಯಾಕಾಗಬಾರದು? ಅಲ್ಲದೆ, ಮಹತ್ವಾಕಾಂಕ್ಷೆಯಳ್ಳ ಜನರು ಇಡೀ ಸಮಾಜಕ್ಕೆ ಲಾಭ ತರುವಂತ ಸಾಧನೆಗಳನ್ನು ಮಾಡುತ್ತಾರೆ.

ಉತ್ತರ : ನನಗನಿಸಿದ ಹಾಗೆ ವೈಯಕ್ತಿಕ ಮಹತ್ವಾಕಾಂಕ್ಷೆಗಿಂತ ದೇಶಭಕ್ತಿಯೇ ಪ್ರಗತಿಗೆ ಪೂರಕವಾದ ಒಂದು ಉತ್ತಮ ಚಲನಶಕ್ತಿಯಾಗಬಹುದು. ವೈಯಕ್ತಿಕ ಮಹತ್ವಾಕಾಂಕ್ಷೆಯು ಎಲ್ಲಾ ಕೊರತೆಗಳಿಗೆ, ಹೆಚ್ಚು ಉದ್ವಿಗ್ನರಾಗಲು ಕಾರಣವಾಗಬಹುದು. ಭಾರತಕ್ಕೆ ಭಾರತೀಯತೆಯೇ ಮಾದರಿಯ ತತ್ವಶಾಸ್ತ್ರವಾಗುತ್ತದೆ.

ಪ್ರಶ್ನೆ : ಪಾಶ್ಚಾತ್ಯವಾದದ ಅಲೆಯೆಡೆಗೆ ಮರಳಿದರೆ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಇದು ಸೆಳೆದೊಯ್ಯುವುದನ್ನು ನಾವು ಗಮನಿಸಬಹುದು.

ಉತ್ತರ : ಬೇರೆಲ್ಲ ಅಂಶಗಳೊಂದಿಗೆ, ಅವಿಭಕ್ತ ಕುಟುಂಬ ಕೂಡ ನರಳುತ್ತಿದೆ. ಕಾರಣ ಇಲ್ಲಿ ಉತ್ಪಾದನೆ ಕೆಳ ಮಟ್ಟದಲ್ಲಿದೆ. ಸಾಮಾನ್ಯವಾಗಿ ದುಡಿಯುವವ ಒಬ್ಬನೇ ಇದ್ದಾನೆ. ಅವಿಭಕ್ತ ಕುಟುಂಬಗಳಲ್ಲಿ ಉತ್ಪಾದನೆ ಹೆಚ್ಚಿಸಿಕೊಂಡರೆ, ಅವು ತಂತಾನೆ ಪುನಶ್ಚೇತನ್ಯಗೊಳ್ಳುತ್ತವೆ. ಸರ್ಕಾರ ಸಹಕಾರಿ ಸಂಸ್ಥೆಗಳಿಗೆ ಅನುದಾನ ನೀಡುತ್ತಿದ್ದು ನಮ್ಮ ಸ್ವಭಾವಿಕ ಸಹಕಾರಿ ಸಂಸ್ಥೆಗಳಾದ ಅವಿಭಕ್ತ ಕುಟುಂಬಗಳ ನೆರವಿಗೆ ಬರದಿರುವುದು ಆಶ್ಚರ್ಯಕರ ಸಂಗತಿ. ಮುಖ್ಯವಾಗಿ ಕುಟುಂಬಗಳ ಬಗ್ಗೆ ಆಸಕ್ತಿ ವಹಿಸಿದೆಡೆಯೆಲ್ಲ ಸಹಕಾರಿ ಸಂಸ್ಥೆಗಳು ಯಶಸ್ಸನ್ನು ಕಂಡಿವೆ ಎಂಬುದು ಗಮನಾರ್ಹ ವಿಷಯವಾಗಿದೆ. ಅವಿಭಕ್ತ ಕುಟುಂಬ ವೈಯಕ್ತಿಕ ಹಾಗೂ ಸಾಮಾಜಿಕ ಹಂಬಲಗಳೆರಡನ್ನೂ ತೃಪ್ತಿಪಡಿಸುವ ಸಿದ್ಧ ಸ್ಥಿತಿಯಲ್ಲಿರುವ ಸಹಕಾರಿ ಸಂಸ್ಥೆಯಾಗಿದೆ.

ಮತ್ತೊಂದೆಡೆ, ಸಂಪ್ರದಾಯಬದ್ಧ ಸಹಕಾರಿ ಸಂಸ್ಥೆಗಳು ಸರಳವಾಗಿ ಒಟ್ಟಾಗಿ

ವ್ಯಕ್ತಿಯು ಅದರೊಳಗೆ ಕಳೆದು ಹೋಗಬಹುದು.

ಸ್ವಭಾವತಃ ಮನುಷ್ಯ ಒಬ್ಬ ಸಮಾಜ ಜೀವಿ. ನಾವು ಕುಟುಂಬ ಮತ್ತು ಜಾತಿಗಳ ವಿಭಜನೆಗೆ ಅವಕಾಶ ಮಾಡಿಕೊಟ್ಟಲ್ಲಿ ವ್ಯಕ್ತಿಗಳನ್ನು ಮಾತ್ರ ಕಾಣಬಹುದು. ಅಷ್ಟು ತೃಣೀಕರಿಸಿದ ವ್ಯಕ್ತಿಗಳು ಯಾವುದೇ ರೀತಿಯಿಂದಲೂ ಸಾಮಾಜಿಕ ಜೀವನವನ್ನು ಸಾಗಿಸದೆ ಸಮತವಾದದ ಜೀವನವನ್ನು ಸಾಗಿಸುತ್ತಾರೆ. ಆದುದರಿಂದ ನಮ್ಮ ಅವಿಭಕ್ತ ಕುಟುಂಬ ಮತ್ತು ಜಾತಿ ಪದ್ಧತಿಗಳು ಸರ್ವಾಧಿಕಾರಿ ಪ್ರಭುತ್ವದ ವಿರುದ್ಧ ನಮ್ಮಲ್ಲಿರುವ ಉತ್ತಮ ರಕ್ಷಣಾ ಕವಚಗಳು.

ಪ್ರಶ್ನೆ : ನಮ್ಮ ದೇಶ ತಟಸ್ಥ ದೇಶವೆ? ಇಂಗ್ಲಿಷ್ ಭಾಷೆ, ಕಾಮನ್–ವೆಲ್ತ್, ಬ್ರಿಟಿಷ್ ನಾಣ್ಯ ವ್ಯವಸ್ಥೆ ಸೇನೆಯ ಕಸರತ್ತುಗಳು, ಸುದ್ದಿ ಸಮಾಚಾರಗಳು, ಸೇವೆಗಳು ಇತ್ಯಾದಿ ವೈವಿಧ್ಯಮಯ ಪಾಶ್ಚಾತ್ಯ ನಡೆಗಳೊಂದಿಗೆ ಹೆಣೆದುಕೊಂಡಿರುವ ವಾಸ್ತವಗಳನ್ನು ಗಣನೆಗೆ ತೆಗೆದುಕೊಂಡರೆ ನಾವು ಒಂದಾಗಲು ಸಾಧ್ಯವೆ?

ಉತ್ತರ : ನನ್ನ ಪ್ರಕಾರ ನಾವು ತುಂಬಾ ತಟಸ್ಥರೆ. ನಾವು ಹಲವಾರು ನಡೆಗಳಲ್ಲಿ ಪಾಶ್ಚಾತ್ಯರ ಸನಿಹದಲ್ಲಿರುವದು ನಿಜ. ಆದರೆ ನಮ್ಮ ದೃಷ್ಟಿಯಲ್ಲಿ ಪಾಶ್ಚಾತ್ಯವು ವಸಾಹತು ನೀತಿಗಳೊಂದಿಗೆ ಶಾಶ್ವತವಾಗಿ ಸಂಬಂಧ ಹೊಂದಿದೆ ಎಂಬುದು ಕೂಡ ವಾಸ್ತವ. ಆದುದರಿಂದ ಪಾಶ್ಚಾತ್ಯವು ನಮ್ಮೊಂದಿಗೆ ಪ್ರಯೋಜನಕಾರಿಯಾಗಿ ಮಾತ್ರ ಉಳಿದಿಲ್ಲ. ಹಾಗೆಯೇ ಕಾಲವು ಇದರ ಕೆಲವು ಪ್ರಯೋಜನಗಳನ್ನು ಬದಿಗೊತ್ತಲಿದೆ.

ನನ್ನ ಪ್ರಕಾರ ಭಾರತದಲ್ಲಿ ಸಮತಾವಾದಿಗಳು ಮಾತ್ರ ಬದ್ಧತೆಯುಳ್ಳ ವ್ಯಕ್ತಿಗಳು. ಉಳಿದ ಎಲ್ಲಾ ಪಕ್ಷಗಳು ಒಂದು ತಟಸ್ಥ ವಿದೇಶಿ ನೀತಿಯನ್ನು ಹೊಂದಿವೆ.

ಪ್ರಶ್ನೆ : ಹಣದ ಬಲ ಪ್ರಧಾನವಾದದ್ದು. ಇದು ರಾಜಕೀಯ ಜೀವನದ ಆಳವನ್ನು ತಲುಪುತ್ತದೆ. ನಮ್ಮ ಆರ್ಥಿಕ ಅಭಿವೃದ್ಧಿ ವರ್ಧಿಸಿದ ಹಾಗೆ ಹಣದ ಬಲವೂ ವರ್ಧಿಸುತ್ತದೆ. ಇದನ್ನು ಹೇಗೆ ಹತೋಟಿಯಲ್ಲಿಡಬಹುದು?

ಉಪಾಧ್ಯಾಯ : ನನ್ನ ಪ್ರಕಾರ ಈ ಸಮಸ್ಯೆಯನ್ನು ಎರಡು ಕಡೆಗಳಿಂದ ನಿಭಾಯಿಸಬಹುದು. ಮೊದಲನೆಯದಾಗಿ, ಸಂಪತ್ತಿನ ಕೇಂದ್ರೀಕರಣವನ್ನು ತಡೆಯಲು ಅರ್ಥವ್ಯವಸ್ಥೆಯನ್ನು ವಿಕೇಂದ್ರೀಕರಿಸಬೇಕು. ಎರಡನೆಯದಾಗಿ, ಹಣಕಾಸಿನ ಮೌಲ್ಯಗಳನ್ನು ಹೊರತುಪಡಿಸಿದವುಗಳನ್ನು ಸರಿಯಾಗಿ ಅಂಗೀಕರಿಸಬೇಕು. ಭಾರತದಲ್ಲಿ ಕ್ಷತ್ರಿಯರ ಶೌರ್ಯ ಮತ್ತು ಬ್ರಾಹ್ಮಣರ ಕಲಿಕೆಗೆ ಪುರಾತನ ಪ್ರಪಂಚದ ಮಾನ್ಯತೆ ಇಂದು ಇಲ್ಲ. ವೈಶ್ಯ ಮೌಲ್ಯಗಳನ್ನು ಜಾಗತೀಕರಣಗೊಳಿಸಲಾಗಿದೆ.

ಪತ್ರಕರ್ತರೂ ಕೂಡ ತಮ್ಮ ಸಮ್ಮೇಳನಗಳನ್ನು ಉದ್ಘಾಟಿಸಲು ಒಬ್ಬ ಹಿರಿಯ ಪತ್ರಕರ್ತನನ್ನು ಆಹ್ವಾನಿಸದೆ ಪ್ರಧಾನ ಮಂತ್ರಿ ಅಥವಾ ಇತರೆ ರಾಜಕೀಯ ನಾಯಕನನ್ನು ಕರೆಯುವುದು ಆಶ್ಚರ್ಯವನ್ನುಂಟು ಮಾಡಿದೆ. ಉದ್ಘಾಟನೆಗಳಿಗೆ ಶ್ರೀಮಂತ ವ್ಯಕ್ತಿ

ಹೆಚ್ಚು ಪ್ರಿಯವಾದವರಾಗುತ್ತಾರೆ. ಏಕೆಂದರೆ ಉದಾರವಾಗಿ ದಾನ ನೀಡಬಹುದು ಅಥವಾ ನೀಡುವರೆಂಬ ಭರವಸೆಯಿಂದ ಅವರನ್ನು ಆಹ್ವಾನಿಸಿರುತ್ತಾರೆ. ಸಾರ್ವಜನಿಕ ಕಾರ್ಯಕ್ರಮಗಳನ್ನು ಅಂದಗೊಳಿಸಲು ಒಬ್ಬ ಕಲಾವಿದನನ್ನಾಗಲಿ, ವಿಜ್ಞಾನಿಯನ್ನಾಗಲಿ ಅಥವಾ ಕವಿಯನ್ನಾಗಲಿ ಆಹ್ವಾನಿಸುವ ಬಗ್ಗೆ ಯಾರೂ ಕೂಡ ಯೋಚಿಸುವುದಿಲ್ಲ. ಇದುವರೆಗೂ ಯಾವುದೇ ಒಂದು ವಿಶ್ವವಿದ್ಯಾಲಯವೂ ಕೂಡ ಘಟಿಕೋತ್ಸವ ಭಾಷಣ ಮಾಡಲು ಒಬ್ಬ ಶಂಕರಾಚಾರ್ಯರನ್ನು ಆಹ್ವಾನಿಸುವ ಬಗ್ಗೆ ಚಿಂತಿಸಿಲ್ಲ.

ಇದೆಲ್ಲವೂ ಬದಲಾಗಬೇಕಿದೆ. ಇದನ್ನು ಮಾಡಲು ಪ್ರಾತಿನಿಧ್ಯದ ವೈಖರಿಯನ್ನು ಬದಲಾಯಿಸುವುದು ಒಂದು ಮಾರ್ಗವಾಗಿದೆ. ಇಂದು ನಮ್ಮ ಎಲ್ಲಾ ಶಾಸನ ಸಭೆಗಳು ಪ್ರಾದೇಶಿಕ ತತ್ವದ ಆಧಾರದ ಮೇಲೆ ಆಯ್ಕೆಯಾಗುತ್ತಿವೆ. ನನ್ನ ಪ್ರಕಾರ ನಮಗೆ ಕಾರ್ಯಾತ್ಮಕ ಪ್ರಾತಿನಿಧ್ಯವೂ ಇರಬೇಕು. ಇದು ಹಣ ಬಲ ಮತ್ತು ಅದರ ಮೇಲಿನ ಪ್ರಾಶಸ್ತ್ಯವನ್ನು ಕಡಿಮೆಗೊಳಿಸಬಹುದು.

ಹಾಗೆಯೇ ಅಧಿಕ ಲಾಭಕ್ಕೆ ಅಧಿಕ ತೆರಿಗೆ ಮತ್ತು ಈ ರೀತಿಯ ತೆರಿಗೆಯ ಸಂಗ್ರಹ ಹೆಚ್ಚು ಪರಿಣಾಮಕಾರಿಯಾಗಬೇಕು. ಖಾಸಗಿ ವಲಯ ಇಂದು ಅತಿಯಾಗಿ ಲಾಭ ಗಳಿಸಿಕೊಂಡಿದೆ ಮತ್ತು ಸಾರ್ವಜನಿಕ ವಲಯವು ಅಧಿಕಾರವನ್ನು ಒಟ್ಟುಗೂಡಿಸುತ್ತಿದೆ. ಎರಡೂ ಸಮಾಜಕ್ಕೆ ಕೆಟ್ಟವು. ವಿಕೇಂದ್ರೀಕರಣ ಮತ್ತು ಸಹಕಾರ ನಮ್ಮ ಸಾಮಾಜಿಕ ಅರ್ಥವ್ಯವಸ್ಥೆಯ ಎರಡು ನಿರ್ದೇಶಕ ತತ್ವಗಳಾಗಿರಬೇಕು.

ಪ್ರಶ್ನೆ : ಆದರೆ ಸರ್ಕಾರವು ಸಣ್ಣ ಮತ್ತು ಸಹಕಾರಿ ಘಟಕಗಳಿಗೆ ನಿಜವಾಗಿಯು ಏನೋ ಮಾಡುತ್ತಿದೆ?

ಉಪಾಧ್ಯಾಯ : ಅದು ಇನ್ನೂ ಹೆಚ್ಚಿನದ್ದನ್ನು ಮಾಡಬೇಕಿತ್ತು ಎಂಬುದು ನನ್ನ ಬಯಕೆ. ದೊಡ್ಡ ವ್ಯಾಪಾರಕ್ಕೆ ಹೋಲಿಸಿದರೆ, ಒಂದು ಸಣ್ಣ ಘಟಕಕ್ಕೆ ಸಿಮೆಂಟು ಕೊಳ್ಳುವುದಕ್ಕಾಗಲಿ, ವಿದ್ಯುತ್ ಸಂಪರ್ಕ ಪಡೆಯುವುದಕ್ಕಾಗಲಿ ಹೆಚ್ಚು ಕಷ್ಟವಾಗಬಹುದು. ಸಾಲವು ಸಣ್ಣ ಉದ್ಯಮಗಳಿಗೆ ಹೋಲಿಸಿದರೆ ದೊಡ್ಡ ಉದ್ಯಮಗಳಿಗೆ ಸುಲಭವಾಗಿ ಮತ್ತು ಕಡಿಮೆ ಬಡ್ಡಿ ದರದಲ್ಲಿ ದೊರೆಯುತ್ತದೆ. ಹಾಗಾಗಿ ಅನೇಕ ಬಾರಿ ಸಣ್ಣ ಉದ್ಯಮದವರು ಅಧಿಕ ಬಡ್ಡಿ ದರವನ್ನು ಕೊಡಬೇಕಾಗುತ್ತದೆ. ಬ್ಯಾಂಕುಗಳು ಸಣ್ಣ ಪಾಲುದಾರರೊಂದಿಗೆ ವ್ಯವಹರಿಸಲು ಇಷ್ಟಪಡುವುದಿಲ್ಲ. ಇದು ಅವರಿಗೆ ದೊಡ್ಡ ತೊಂದರೆ.

ನಾವುಗಳು ಶ್ರೀಮಂತರ ಅಥವಾ ಅವರ ಆಸ್ತಿಯ ವಿರೋಧಿಗಳಲ್ಲ. ಎಲ್ಲಾ ನಾಗರಿಕ ಸಮಾಜಗಳು ಆಸ್ತಿಯ ಹಕ್ಕನ್ನು ಮಾನ್ಯ ಮಾಡುತ್ತವೆ. ಆದರೆ ಒಂದು ವ್ಯತ್ಯಾಸವಿದೆ. ಸ್ವತಂತ್ರ ಪಕ್ಷವು ಆಸ್ತಿಯನ್ನು ಒಂದು ಪರಮ ಹಕ್ಕೆಂದು, ಅದನ್ಯಾರೂ ಪ್ರಸ್ತಾಪಿಸುವಂತಿಲ್ಲ ಎಂದು ಪರಿಗಣಿಸುತ್ತದೆ. ನಾವಾರೂ ಆಸ್ತಿಯ ಶತ್ರುಗಳಲ್ಲ ಆದರೆ, ನಾವಾರೂ ಅದರ ತೆವಲಿಗೆ ಬಿದ್ದವರೂ ಅಲ್ಲ.

ನನ್ನ ಪ್ರಕಾರ ಆಸ್ತಿಗೆ ಒಂದು ಸಾಮಾಜಿಕ ಉದ್ದೇಶವನ್ನು ನೀಡಬೇಕಾಗಿದೆ. ಖಾಸಗಿ ಆಸ್ತಿಗಳು ಹೆಚ್ಚು-ಹೆಚ್ಚು ಸಾರ್ವಜನಿಕರಿಗೆ ಮತ್ತು ದಾನ ಧರ್ಮಗಳಿಗೆ ಬಳಕೆಯಾಗಬೇಕು ಎಂಬುದು ನನ್ನ ಬಯಕೆ. ಹೆಚ್ಚು-ಹೆಚ್ಚು ಸಾರ್ವಜನಿಕ ಸಂಸ್ಥೆಗಳಿರಬೇಕು. ಈ ಎಲ್ಲಾ ಹೆಜ್ಜೆಗಳು ಸಮೃದ್ಧಿಯನ್ನು ಹೆಚ್ಚು ಲಾಭದಾಯಕವಾಗಿ ಮಾಡುತ್ತವೆ.

* * * * *